# ವೇದಾಂತ ಸಂದೇಶಗಳು

## ಸಂಪುಟ 4

## ಅಧ್ಯಾತ್ಮ ಔನ್ನತ್ಯದೆಡೆಗೆ



ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳು

ಅಧ್ಯಾತ್ಮಪ್ರಕಾಶ ಕಾರ್ಯಾಲಯ
ಹೊಳೆನರಸೀಪುರ – 573211
ದೂರವಾಣಿ : 08175 273820
www.adhyatmaprakasha.org

# ಶ್ರೀ ಶ್ರೀಗಳವರ ಕೃತಿಗಳು

## (ಅ.ಪ್ರ.ಪತ್ರಿಕೆಯ ಆಯ್ದ ಲೇಖನಗಳ ಸಂಗ್ರಹ)

## ಪ್ರಕಾಶನಗೊಂಡಿರುವ ಕೃತಿಗಳ ಕಿರುಪರಿಚಯ

**1. ಋಗ್ವೇದೀಯ ಪುರುಷಸೂಕ್ತ : (ಮಂತ್ರಾರ್ಥ ವಿವೇಚನ)** ಅ.ಪ್ರ. ಮಾಸ ಪತ್ರಿಕೆಯ 24ನೆಯ ಸಂಪುಟದ (ಸೆಪ್ಟೆಂಬರ್ 1954ರಿಂದ ಆಗಸ್ಟ್ 1955) 12 ಲೇಖನಗಳ ಸಂಕಲನ. ನಿಜವಾದ ಅರ್ಥವು ತಾತ್ತ್ವಿಕವಾಗಿ ಹೇಗೆ ವಿಸ್ತೃತವಾಗಿದೆ ಮತ್ತು ಕೇವಲ ಕರ್ಮಪರವಾಗಿರದೆ, ಭಕ್ತಿ, ಉಪಾಸನೆ, ಜ್ಞಾನಪರಂಪರೆಯಾಗಿದೆ ಎಬುದನ್ನು ಹೃದಯಕ್ಕೆ ತಾಗುವ ಹಾಗೆ ಶ್ರೀಶ್ರೀಗಳವರು ಪ್ರತಿಪಾದಿಸಿದ್ದಾರೆ. ಎಲ್ಲಾ ವೇದದವರಿಗೂ ಮತ್ತು ಆಸ್ತಿಕ ಮಹಾಶಯರೆಲ್ಲರಿಗೂ ಉಪಯುಕ್ತವಾದ ಗ್ರಂಥ

**(1ನೆಯ ಮುದ್ರಣ 2009, ಪು. ಡೆಮ್ಮಿ 112 , ಬೆಲೆ 20 ರೂ. )**

**2. ವೇದಾಂತ ಸಂದೇಶಗಳು : ಸಂಪುಟ 1 (ಪರಮಾರ್ಥ ಚಿಂತನೆ ) :** 1946 ಸೆಪ್ಟೆಂಬರ್‌ನಿಂದ 1949 ಆಗಸ್ಟ್‌ರವರೆಗೆ ''ಈ ತಿಂಗಳ ಸಂದೇಶ'' ಎಂಬ ಶೀರ್ಷಿಕೆಯಲ್ಲಿ ಪ್ರಕಟಿಸಿದ್ದ 36 ಲೇಖನಗಳ ಸಂಗ್ರಹ. ''ಭಗವಂತನಿಗೆ ಯಾವ ಹೆಸರು, ಪರಮಾತ್ಮನನ್ನು ಎಲ್ಲಿ ಕಾಣಬೇಕು, ಸ್ತೋತ್ರ ಮತ್ತು ಪ್ರಾರ್ಥನೆಗಳನ್ನು ಹೇಗೆ ಮಾಡಬೇಕು, ದುಃಖ, ಕಷ್ಟ ಪರಿಹಾರಕ್ಕೆ ಭಗವಂತನನ್ನೇ ಶರಣು ಹೊಂದಬೇಕು'' ಎಂಬಿವೇ ಮುಂತಾದ ಭಕ್ತಿ ಜ್ಞಾನ, ವೈರಾಗ್ಯಗಳು ಮುಂತಾದ ವಿಚಾರಗಳಂದ ತುಂಬಿದೆ. ಸಂಸ್ಕೃತ ಬಾರದವರಿಗೂ ಸರಿಯಾದ ಗುರುಗಳು ದೊರಕದವರಿಗೂ ಮಾರ್ಗ ದರ್ಶನವಾಗಿದೆ.

**(1ನೆಯ ಮು. 2009, ಪು. ಡೆಮ್ಮಿ 222 , ಬೆಲೆ 50 ರೂ. )**

**3. ವೇದಾಂತ ಸಂದೇಶಗಳು : ಸಂಪುಟ 2 (ಉಪನಿಷತ್ತು) :** 8, 9, 21, 26, 27 ಸಂಪುಟಗಳಲ್ಲಿ ಪ್ರಕಟಸಿದ್ದ 52 ಲೇಖನಗಳ ಸಂಗ್ರಹ. ಮೊದಲು ದಶ ಶಾಂತಿಮಂತ್ರದ ಅರ್ಥ ಮತ್ತು ವಿವರಣೆ, ಅನಂತರ (1) ಇಂದಿನ ಅರಿವು (2) ಆನಂದಸ್ವರೂಪವಾದ ಆತ್ಮವಿಚಾರ (3) ಅಧ್ಯಾತ್ಮ ಸಾಧನೆ (4) ಜ್ಞಾನ ಸಾಧನಗಳು (5) ಸಾಧನ ಕ್ರಮ ಎಂಬ ಐದು ಅಧ್ಯಾಯಗಳಲ್ಲಿ ಲೇಖನಗಳನ್ನು ಅಳವಡಿಸಿದೆ. ಮುಮುಕ್ಷುಗಳಿಗೆ ಕೈಪಿಡಿಯಾಗಿರುವಂಥ ಗ್ರಂಥ.

**(3ನೆಯ ಮು. 2010, ಪು. ಡೆಮ್ಮಿ 247 , ಬೆಲೆ 50 ರೂ. )**

ರಕ್ಷಾಕವಚದ ಮರುಹಾಳೆಯಲ್ಲಿ ಮುಂದುವರಿದಿದೆ

ಅಧ್ಯಾತ್ಮ ಗ್ರಂಥಾವಳಿ :

# ವೇದಾಂತ ಸಂದೇಶಗಳು–ಸಂಪುಟ 4

## ಅಧ್ಯಾತ್ಮ ಔನ್ನತ್ಯದೆಡೆಗೆ


ಲೇಖಕರು

ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳು

ಪೂರ್ವಾಶ್ರಮದ ಯಲ್ಲಂಬಳಸೆ ಸುಬ್ರಹ್ಮಣ್ಯ ಶರ್ಮ,

(ವೈ. ಸುಬ್ಬರಾವ್)



ಕ್ರಮಾಂಕ: 247

ಪ್ರಕಾಶಕರು :

ಅಧ್ಯಾತ್ಮ ಪ್ರಕಾಶ ಕಾರ್ಯಾಲಯ

ಹೊಳೆನರಸೀಪುರ–573211

ದೂರವಾಣಿ : 08175 273820

www.adhyatmaprakasha.org

2011

Vedanta Sandeshagalu Part IV - Collection of Articles Published in Adhyatma Prakasha Magazines, written by Sri Sri Satchidanandendra Saraswathi Swamiji ; Now Published by Adhyatma Prakasha Karyalaya, Holenarasipura 573211, Karnataka.
Ph. : 08175-273820

**www.adhyatmaprakasha.org**

ಪ್ರಥಮ ಮುದ್ರಣ : 2011

First Edition : 2011

ಪ್ರತಿಗಳು : 1000

ಪುಟಗಳು : 8 + 326 = 334

ಬೆಲೆ : **60.00 ರೂ.**

© : ಕಾರ್ಯಾಲಯದವು

ಅಕ್ಷರ ಜೋಡಣೆ ಮತ್ತು ವಿನ್ಯಾಸ :

arka
creations

98807 25199

ಮುದ್ರಕರು :
ಸ್ಟಾಂಡರ್ಡ್‌ ಪ್ರಿಂಟರ್ಸ್
ಶಂಕರಮಠದ ರಸ್ತೆ, ಬೆಂಗಳೂರು-560004
ದೂ. : 080 2242 1527

# ಪ್ರಕಾಶಕರ ವಿಜ್ಞಾಪನೆ

ಸಂತ ಶ್ರೇಷ್ಠ ವಾಗ್ಗೇಯಕಾರ ಶ್ರೀ ತ್ಯಾಗರಾಜರ ಪ್ರತಿ ಉಚ್ಛ್ವಾಸ–ನಿಶ್ವಾಸಗಳಲ್ಲೂ, ಪ್ರತಿ ನರನಾಡಿಗಳಲ್ಲೂ ಶ್ರೀರಾಮನಾಮ ತುಂಬಿ ಹರಿಯುತ್ತಿತ್ತು ಎಂದು ವರ್ಣಿಸುತ್ತಾರೆ. ಅದರಂತೆ ಶ್ರೀ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀಸ್ವಾಮಿಗಳವರ ಪ್ರತಿ ಉಸಿರಿನಲ್ಲೂ, ಮಾತಿನಲ್ಲೂ ಅಧ್ಯಾತ್ಮವೇ ತಾಂಡವವಾಡುತ್ತಿತ್ತು ಎಂಬುದು ಉತ್ಪ್ರೇಕ್ಷೆಯಲ್ಲ. ಎಲ್ಲ ಚಟುವಟಿಕೆಗಳಲ್ಲೂ ಅಧ್ಯಾತ್ಮ ವಿಚಾರವೇ, ಸುಪ್ತಚೇತನದಲ್ಲೂ ಅಧ್ಯಾತ್ಮ ಚಿಂತನೆಯೇ ನಡೆಯುತ್ತಿತ್ತು. ನಿರಂತರವಾಗಿ ಅಧ್ಯಯನ, ಅಧ್ಯಾಪನ, ಉಪನ್ಯಾಸಗಳು, ಬರವಣಿಗೆ, ಭೇಟಿಯಾಗಲು ಬಂದವರೊಡನೆಯೂ ಅವರ ಸಂಶಯಪರಿಹಾರ ಮಾರ್ಗದರ್ಶನ, ಒಬ್ಬನೇ ವಿದ್ಯಾರ್ಥಿಯಾದರೂ ಅವನ ಕಲಿಕೆಯ ವಿಷಯದಲ್ಲಿ ಆದರಾಸಕ್ತಿ– ಹೀಗೆ ಜೀವನವನ್ನು ಅಧ್ಯಾತ್ಮಕ್ಕೇ ಮೀಸಲಿಟ್ಟವರು. ಅವರಲ್ಲಿದ್ದ ವಿಸ್ತಾರ ಗ್ರಂಥಭಂಡಾರದ ಪುಸ್ತಕಗಳಲ್ಲೆಲ್ಲಾ ಮುಖ್ಯಾಂಶಗಳ ಗುರುತು, ಟಿಪ್ಪಣಿಗಳು ಅವರ ವಿಶಾಲ ಆಸಕ್ತಿ, ತಿಳಿವಿನ ಪ್ರತೀಕ. ಮೈಗೆ ಮುಪ್ಪಡರಿದರೂ ಮನಸ್ಸು ಸದಾ ಜಾಗ್ರತ. ದೇಹ ಜಡವಾದರೂ ಅಂತರಂಗ ಸದಾ ಚಟುವಟಿಕೆಯ ಜೇನುಗೂಡು.

ಮಹಾತಪಸ್ವಿ, ಅವತಾರ ಪುರುಷರೆನಿಸಿದ ಶೃಂಗೇರಿ ಶ್ರೀ ಶ್ರೀ ನೃಸಿಂಹಭಾರತೀ ಸ್ವಾಮಿಗಳವರಿಂದ ಆಶೀರ್ವಾದಪೂರ್ವಕವಾಗಿ ಶಂಕರರ ಜನ್ಮಸ್ಥಳ ಕಾಲಡಿಯಲ್ಲಿ ಭಾಷ್ಯ ಶಾಂತಿ, ಅತಿಶಯ ರಾಮಭಕ್ತ ಶಿರೋಮಣಿ ಶ್ರೀ ಗೋಂದಾವಲೇಕರ್ ಮಹಾರಾಜರಿಂದ ಅನುಗ್ರಹೀತವಾದ ಶ್ರೀರಾಮತಾರಕ ಮಂತ್ರೋಪದೇಶಗಳು ಅತ್ಯುನ್ನತ ವರಗಳಾಗಿ, ಸ್ವಭಾವದಿಂದ ಅಚಲ ಧ್ಯೇಯ ನಿರತರೂ, ನಿರಂತರ ಕಾರ್ಯಮಗ್ನರೂ ಆದ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳಿಂದ ಅಸಾಧಾರಣ ಅಧ್ಯಾತ್ಮ ಸಾಹಿತ್ಯದ ಕೆಲಸವನ್ನು ನಡೆಸಿದುವು. ಅವರ ಜೀವನ ಚರಿತ್ರೆ ಸಾಧನೆಯನ್ನು ಓದಿದವರಿಗೆ ಶ್ರೀಗಳು ಮಹಾಮಹಿಮರ ಸಾಲಿಗೆ ಸೇರಿದವರು, ಪಾಮರರಲ್ಲಿ ಅಧ್ಯಾತ್ಮದ ಬೆಳಕನ್ನು ಹರಿಸಲೆಂದೇ ಭಗವಂತನಿಂದ ಕಳಿಸಲ್ಪಟ್ಟ ದೇವದೂತರು ಎನಿಸುವುದು ಸಹಜ. ತಾವು ಕಂಡುಕೊಂಡ ಬೆಳಕನ್ನು ತಿಳಿಯದವರ, ಜಿಜ್ಞಾಸುಗಳ, ಪಾರಮಾರ್ಥ ಆಕಾಂಕ್ಷಿಗಳ ಶ್ರೇಯಸ್ಸಿಗೆ ಬಳಸುವ ಪರೋಪಕಾರದ ಹೃದಯವಂತರು. ಅವರ ಎಲ್ಲ ಸ್ತರದ ಬರಹಗಳಿಗೆ ಕಾರ್ಯವೈಖರಿಗೆ ಇದೇ ಮೂಲ ಚೇತನ. ಪಂಡಿತರಿಗಾಗಿ ಶಾಂಕರ ಭಾಷ್ಯಗಳು, ಮಧ್ಯಮರಿಗಾಗಿ ವಿವಿಧ ಗ್ರಂಥಗಳು, ಪಾಮರರಿಗಾಗಿ ತಿಳಿಯಾದ ಲೇಖನಗಳು ಇವೆಲ್ಲವನ್ನೂ ಹೊರತಂದರು.

ಶಂಕರರ ಪ್ರಸ್ಥಾನತ್ರಯ ಭಾಷ್ಯಗಳ ಕನ್ನಡ ಅನುವಾದವಷ್ಟೇ ಅಲ್ಲ, ಅಲ್ಲಲ್ಲಿ ಸೂಕ್ತ ಟಿಪ್ಪಣಿಗಳನ್ನೂ ಕೊಟ್ಟು, ಆ ವಿಷಯಗಳು ಓದುವ ಸಾಮಾನ್ಯರಿಗೂ

ಎಟುಕುವಂತೆ ಮಾಡಿರುವುದು ಅವರ ವೈಶಿಷ್ಟ್ಯ. ಯಾವುದೇ ಕ್ಲಿಷ್ಟಗ್ರಂಥವಾದರೂ, ವಿಷಯವಾದರೂ ಅದರ ಸರಳ–ಆದರೆ ಜಾಡು ಬಿಟ್ಟೋಡದ, ಸುಂದರ ವಿವರಣೆ, ಸ್ಪಷ್ಟ ವಿಶ್ಲೇಷಣೆ, ಹಿರಿಮೆಯ ಹೇರಳ ಟಿಪ್ಪಣಿಗಳನ್ನೊಳಗೊಂಡು ಅದರ ರಸಾಸ್ವಾದವನ್ನು ಹೆಚ್ಚಿಸಿ ಕಠಿಣವಾದದ್ದನ್ನು ತಿಳಿಯಾಗಿ ಮಾಡುವಂತಹ ಬರವಣಿಗೆ ಅವರಿಗೆ ದೇವರ ವರವಾಗಿ ಬಂದಿತು. ವಿಷಯಗಳ ವೈವಿಧ್ಯತೆ, ಗ್ರಂಥ ಬರಹಗಳ ಬಾಹುಳ್ಯ ಅತಿ ಹೆಚ್ಚಿನದು. ಒಂದು ಸಂಸ್ಥೆ ಮಾಡುವಂತಹ ಕಾರ್ಯವನ್ನು ಒಬ್ಬರೇ, ಇದು ತಮ್ಮ ಜೀವಿತದ ಉದ್ದೇಶವೇ–ಅಥವಾ ಅಷ್ಟೇ ಅಲ್ಲ ಅದಕ್ಕಿಂತ ಹೆಚ್ಚಾಗಿ ಜೀವನವೇ ಎಂಬಂತೆ–ಅವರು ಸಾಧಿಸಿದರು ಎಂಬುದು ಆಶ್ಚರ್ಯ ತರುವ ಸತ್ಯ. ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರು ಶ್ರೀ ನಿತ್ಯಸ್ಥಾನಂದರ ಮಾತುಗಳಲ್ಲಿ "ಕನ್ನಡದಲ್ಲಿ ತತ್ತ್ವಸಾಹಿತ್ಯಕ್ಕೆ ಇಷ್ಟೊಂದು ಕೊಡುಗೆಯನ್ನು ನೀಡಿದವರು ಇನ್ನೊಬ್ಬರು ಇರಲಾರರು".

ವೇದಾಂತ ಗೊಡ್ಡು, ಬೇಗ ಅರ್ಥವಾಗುವುದಿಲ್ಲ, ಅದಕ್ಕೇ ಪ್ರತ್ಯೇಕ ಅಭಿರುಚಿ ಬೇಕು ಎನ್ನುವುದು ಸಾಮಾನ್ಯ ಅಭಿಪ್ರಾಯ. ಒಂದು, ಸಂಸಾರ ಕೂಪದಲ್ಲಿ ಮುಳುಗಿ ತೇಲುತ್ತಾ ಅದನ್ನೇ ಭದ್ರವಾಗಿ ಆಶ್ರಯಿಸಿರುವವರಿಗೆ, ಪ್ರಯತ್ನ ಮಾಡಲು ಒಲ್ಲದ ಸೋಮಾರಿ ಮನೋಭಾವದವರಿಗೆ, ಹಠದಿಂದ ಸಾಧನೆಮಾಡಲು ಒಗ್ಗದಿರುವವರಿಗೆ ಹೀಗನಿಸುವುದು ಸಹಜ; ಎರಡು, ಇಲ್ಲಿ ಹೇಳಿರುವ ತತ್ತ್ವಗಳು ಸಂಸ್ಕೃತದಲ್ಲೇ ಇರುವುದರಿಂದ ಸಂಸ್ಕೃತ ಬಾರದ ಸಾಮಾನ್ಯರೇ ಬಹಳ ವಾಗಿರುವಾಗ, ಹಾಗೂ ತತ್ತ್ವದ ಅರ್ಥ ವಿಸ್ತಾರ, ವ್ಯಾಖ್ಯೆಗಳನ್ನು ಓದಲು ಸಾಹಸ ಮಾಡದಿರುವವರಿಗೆ, ಓದಿದರೂ ಚಿಂತನೆಯಲ್ಲಿ ತೊಡಗಲು ಇಲ್ಲದ ತೊಡಕುಗಳನ್ನು ಕಲ್ಪಿಸಿಕೊಳ್ಳುವವರಿಗೆ ತಾನಾಗಿಯೇ ಈ ಭಾವನೆ ಬರುವುದು.

ಇದಕ್ಕೆ ಪರಿಹಾರವೆನಿಸುವಂತೆ ದೇಶಭಾಷೆಯಾದ ಸುಂದರ ಸರಳ ಕನ್ನಡದಲ್ಲಿ, ಸೊಗಸಾದ ನಿರೂಪಣೆಯ ಶೈಲಿಯಲ್ಲಿ, ಅನುಷ್ಠಾನ ಯೋಗ್ಯವೆನಿಸುವಂತೆ, ಆಸಕ್ತಿಯನ್ನು ಹುಟ್ಟಿಸುವ ರೀತಿಯಲ್ಲಿ ಸ್ವಾಮಿಗಳು ವೇದಾಂತವಿಚಾರಗಳನ್ನು, ತತ್ತ್ವವನ್ನು ಮುಂದಿಡುತ್ತಾರೆ. ಅಂತಹ ಪ್ರಬಂಧರೂಪಿ ಲೇಖನಗಳೇ 'ಅಧ್ಯಾತ್ಮ ಪ್ರಕಾಶ' ಪತ್ರಿಕೆಯಲ್ಲಿ ಕ್ರಮವಾಗಿ ಬರುತ್ತಿದ್ದ 'ಈ ತಿಂಗಳ ಸಂದೇಶಗಳು'. ಇವುಗಳಲ್ಲಿ ಸಾಧಕರಿಗೆ ಕಾಣಬರುವ ತೊಂದರೆಗಳನ್ನು ಮುಂದಾಗಿ ತಿಳಿದು, ಪರಿಹಾರ ರೂಪದ ಅನುಷ್ಠಾನವನ್ನು ಹೇಳುತ್ತಾರೆ. "ಇಂದ್ರಿಯ ಪ್ರಪಂಚ ಮಾಯೆ. ಅದನ್ನು ದಾಟಲು ಭಗವಂತನಲ್ಲಿ ಶರಣಾಗತಿಯೇ ಉಪಾಯ..." ಕಾಲ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗುವವರೇ ಬಹಳ, ಎದೆಗೆಡದೆ ಮುನ್ನುಗ್ಗುವ ಧೈರ್ಯವನ್ನು ಕೊಡುವ ಗುಪ್ತ ಶಕ್ತಿಯಾದ ಭಗವಂತನ ಬಲವನ್ನು ನಮ್ಮದಾಗಿಸಿಕೊಳ್ಳಬೇಕು. (ಲೇಖನ–7) ನಿನ್ನೆಯ ದಿನವು ಹೊರಟುಹೋಯಿತು.

ಅದು ನಮಗೆ ಸಿಕ್ಕುವಂತಿಲ್ಲ, ನಾಳೆಯು ಇನ್ನೂ ಹುಟ್ಟಿಲ್ಲ. ಇಂದಿನ ದಿನವು ಈಗ ನಮ್ಮ ವಶದಲ್ಲಿದೆ. ಜೀವಂತವಾಗಿರುತ್ತದೆ. ಇಂದು ಬಂದಿರುವ ಕಷ್ಟಗಳನ್ನು ಪರಿಹರಿಸಿಕೊಳ್ಳುವುದಕ್ಕೆ ನಮಗೆ ದೊರಕಿರುವ ಅವಕಾಶಗಳನ್ನು ಸದುಪಯೋಗ ಪಡಿಸಿಕೊಳ್ಳಬೇಕು, ಇದೇ ಜಾಣತನವು (ಲೇಖನ-9)ಯಾವ ಯಾವದು 'ನಾನು' ಎಂಬ ಅಭಿಮಾನವನ್ನು ಕಿತ್ತು ಹಾಕುವದೋ, ಯಾವ ಯಾವದು ಭಗವಂತನ ಸನ್ನಿಧಿಯ ಭಾವನೆಯನ್ನು ಬಲಪಡಿಸುವುದೋ ಅದೆಲ್ಲ ಭಗವತ್ಪ್ರಾಪ್ತಿಯ ಸಾಧನವು.(ಲೇಖನ-6)- ಪುಟ ಪುಟಕ್ಕೂ ಇಂತಹ ವಾಕ್ಯಗಳು ಹರಿದುಬಂದಿವೆ. ಓದಿದಂತೆಲ್ಲಾ ವೇದಾಂತ ವಿಚಾರವು ನಾವು ತಿಳಿದಂತೆ ಕಬ್ಬಿಣದ ಕಡಲೆಯಲ್ಲ. ಅರಿಯುವ ಪ್ರಯತ್ನವನ್ನು ಹಿಮ್ಮೆಟ್ಟಿಸುವ ನಿಗೂಢವಲ್ಲ, ಬದಲಿಗೆ 'ಓ' ಎಷ್ಟು ತಿಳಿಯಾಗಿದೆ, ಸುರಸವಾಗಿದೆ ಎಂಬುದು ಅರಿವಾಗುತ್ತೆ. ಮನನದಿಂದ ಅದು ಸ್ಪಷ್ಟವಾದಾಗ ಆಚರಣೆಗೆ ತರುವ ಆಸಕ್ತ ಮನಸ್ಸು ಉದಯಿಸುತ್ತದೆ. ಅದೇ ಕನ್ನಡದ ಜನತೆಗೆ ಸ್ವಾಮಿಗಳ ಮಹತ್ತರ ಕೊಡುಗೆ.

"ಶಂಕರರ ಆತ್ಮತತ್ತ್ವ ಭಾವನೆಯು ನಮ್ಮ ಹೃದಯದಲ್ಲಿ ಹುಟ್ಟಿದರೆ ಶಂಕರ ಜಯಂತಿ, ಅನುಭವೈಕ್ಯ ವೇದವಾಕ್ಯದ ಮೂಲಕ ಜ್ಞಾನ, ತತ್ತ್ವನಿಷ್ಠೆಗಳನ್ನು ನಿರ್ಮಾಯದಿಂದ ತಿಳಿಸುವುದೇ ಅವರ ಅಪಾರ ಕರುಣೆ (ಲೇಖನ-1). ತಾವು ಮನಗಂಡಿದ್ದ ತತ್ತ್ವವು ಅನುಭವಕ್ಕೆ ಹೊಂದಿರುವುದು, ಅದರ ತಿಳಿವಳಿಕೆಯಿಲ್ಲದೆ ಎಲ್ಲರೂ ವ್ಯಥೆಪಡುತ್ತಾರೆಂಬ ತಿಳಿವಳಿಕೆ, ಅದನ್ನು ಜನರಿಗೆಲ್ಲ ಆದಷ್ಟು ಸುಲಭವಾದ ರೀತಿಯಿಂದ ತಿಳಿಯಿಸಬೇಕೆಂಬ ಕರುಣಾಪ್ರೇರಿತವಾದ ಹೃದಯವೂ ಅವರಲ್ಲಿತ್ತು." ಈ ಮಾತನ್ನು ಶ್ರೀಗಳಿಗೇ ಅನ್ವಯಿಸುವುದು ಅಷ್ಟೇ ಯೋಗ್ಯವಾದುದು. ಸ್ವಾಮಿಗಳ ಬರಹಗಳೆಲ್ಲ ಅಧ್ಯಾತ್ಮ ಚಿಂತನೆಗಳ ಸರಳ ಸಾಗರ, ಒಂದೇ ಗುರಿಯನ್ನು ಮುಟ್ಟಲು ಇರುವ ಹಲವು ಹತ್ತು ಶ್ರೇಯೋಮಾರ್ಗಗಳ ಆಗರ.

ಇಲ್ಲಿರುವ ಲೇಖನಗಳೆಲ್ಲವೂ ಸಂಪುಟ 19(ಸೆಪ್ಟೆಂಬರ್ 49-ಆಗಸ್ಟ್ 50), 20(ಸೆಪ್ಟೆಂಬರ್ 50-ಆಗಸ್ಟ್ 51), 22(ಸೆಪ್ಟೆಂಬರ್ 52-ಆಗಸ್ಟ್ 53), 23(ಸೆಪ್ಟೆಂಬರ್ 53-ಆಗಸ್ಟ್ 54) ರ ತಿಂಗಳ ಸಂದೇಶಗಳು; ಕ್ರಮಕ್ರಮವಾಗಿ ಹಂತದಿಂದ ಹಂತಕ್ಕೇರಿರುವ ಸಾಧನೆಯ ಮಾರ್ಗಗಳು. ಅದುವೇ ಕಾರಣದಿಂದ ಈ ಲೇಖನ ಸಮುಚ್ಚಯಗಳು **'ಅಧ್ಯಾತ್ಮ ಔನ್ನತ್ಯದೆಡೆಗೆ'** ಏರಿಸುವ ಸೋಪಾನಗಳು.

ಈ ಪುಸ್ತಕದ ಕರಡನ್ನು ತಿದ್ದಿ, ಲೇಖನಗಳ - ಪುಸ್ತಕದ ಶೀರ್ಷಿಕೆಗಳನ್ನು ಪರಾಮರ್ಶಿಸಿ ಉತ್ತಮ ಸಲಹೆ ಸಹಕಾರವನ್ನು ಎಂದಿನಂತೆ ಕೊಟ್ಟಿರುವ ಪ್ರೊಫೆಸರ್ ಶ್ರೀ ಎಸ್. ರಾಮಚಂದ್ರ ಶಾಸ್ತ್ರಿಗಳಿಗೂ, ಹಾಗೆಯೇ ಸ್ವಾಮಿಗಳ

ಲೇಖನಗಳಿಗೆ ಅನುಮತಿ ಅನುಮೋದನೆಯನ್ನು ನೀಡಿರುವ ಮತ್ತು ಸಕಾಲದಲ್ಲಿ ಪುಸ್ತಕವನ್ನು ಅಚ್ಚಿಗೆ ತಯಾರು ಮಾಡಿಕೊಟ್ಟಿರುವ ಪುಸ್ತಕ ಪ್ರಕಾಶನ ಸಮಿತಿಯವರಿಗೂ, ಅಧ್ಯಕ್ಷರಿಗೂ ಕಾರ್ಯಾಲಯದ ಕೃತಜ್ಞತೆಗಳು.

ಈ ಗ್ರಂಥದ ಮುದ್ರಣಕ್ಕೆ ಪ್ರೀತಿಪೂರ್ವಕವಾಗಿ ಶ್ರೀಯುತರುಗಳಾದ ಡಾ॥ಎಸ್.ಆರ್. ಹೆಗ್ಡೆ, ದಾವಣಗೆರೆ.; ವೇ॥ ರಾಮಾದೀಕ್ಷಿತ್, ಮತ್ತೂರು ಶಿವಮೊಗ್ಗ; ಪುರುಷೋತ್ತಮಚೌಧ್ರಿ, ಕೊಟ್ಟಾಲಪಲ್ಲಿ (ಆಂಧ್ರಪ್ರದೇಶ); ಎ.ಎಸ್. ಪ್ರಸನ್ನ, ಬೆಂ.; ಪದ್ಮ-ರಂಗನಾಥನ್, ಬೆಂ.; ಪೂಜ್ಯ ಭಗವತ್ಪಾದರು, ಕುರುಡಿ; ಪೂಜ್ಯ ಸಜ್ಜನಗಡ ರಾಮಸ್ವಾಮಿಗಳು, ದೇವನಹಳ್ಳಿ. ; ಎಸ್.ಆರ್.ಎಸ್. ಟ್ರಾವಲ್ಸ್, ಬೆಂ.; ದಿ॥ನಾರಾಯಣರಾವ್ ಸ್ಮರಣಾರ್ಥ, ಅವರ ಮಕ್ಕಳು, ಬೆಂ.; ಡಾ॥ಕೆ.ಎಲ್. ರಾಮಸ್ವಾಮಿ,ಬೆಂ.; ಡಿ.ಎನ್. ಕೃಷ್ಣವೇಣಿ ವೆಂಕಟೇಶ್, ಬೆಂ.; ಎಮ್.ವಿ. ರಾಮ ಚಂದ್ರ, ಬೆಂ.; ಪ್ರದೀಪ ಆಚಾರ್ಯ ಮೆಮೋರಿಯಲ್ ಟ್ರಸ್ಟ್, ಬೆಂ.; ಎಸ್. ರಾಜೀವ್, ದಾವಣಗೆರೆ.; ಜೀವನ್‌ಪ್ರಕಾಶ್ ಹೌಸಿಂಗ್ ಸೊಸೈಟಿ, ಜಯನಗರ, ಬೆಂ.;ಮತ್ತು ಎ. ಕೃಷ್ಣಸ್ವಾಮಿ, ಬೆಂ.; ಈ ಭಕ್ತಮಹಾಶಯರು ಸಹಾಯ ಮಾಡಿರುತ್ತಾರೆ. ಕಾರ್ಯಾಲಯದ ಪರವಾಗಿ ಕೃತಜ್ಞತಾಪೂರ್ವಕವಾದ ವಂದನೆಗಳು.

ಶ್ರದ್ಧೆಯಿಂದ ಸುಂದರ ಅಕ್ಷರಜೋಡಣೆ, ರಕ್ಷಾಪುಟವಿನ್ಯಾಸವನ್ನು ಮಾಡಿ ಕೊಟ್ಟಿರುವ ಅರ್ಕ ಕ್ರಿಯೇಷನ್ಸ್‌ನ ಸುರೇಶ್-ಭಾರ್ಗವಿ ದಂಪತಿಗಳು ಮತ್ತು ಮುದ್ರಣದ ಅಂದದಿಂದ ಪುಸ್ತಕದ ಆಕರ್ಷಣೆಯನ್ನು ಹೆಚ್ಚಿಸಿರುವ ಸ್ಟಾಂಡರ್ಡ್ ಪ್ರೆಸ್‌ನ ಶ್ರೀ ನಾಗರಾಜ್‌ರಿಗೆ ವಂದನೆಗಳು.

ಈಗ ಪ್ರಕಟಿತವಾಗುತ್ತಿರುವದು ನಾಲ್ಕನೆಯ ಸಂಪುಟ. ಶ್ರೀ ಶ್ರೀಗಳವರು ಜಿಜ್ಞಾಸುಗಳ ಪ್ರಶ್ನೆಗಳಿಗೆ ಉತ್ತರರೂಪದಲ್ಲಿ, "ಶಂಕರನ ಪತ್ರಗಳು" ಎಂಬ ಶೀರ್ಷಿಕೆಯಲ್ಲಿ 1943 ಜನವರಿಯಿಂದ 1975 ಫೆಬ್ರವರಿಯವರೆಗೆ ಮಾಸಪತ್ರಿಕೆಯಲ್ಲಿ ಪ್ರಕಟಿಸಿದ್ದ 337 ಲೇಖನಗಳ ಸಂಗ್ರಹ "ಐದನೆಯ ಸಂಪುಟ". ಶೀಘ್ರದಲ್ಲಿಯೇ ಪ್ರಕಾಶನಗೊಳ್ಳಲಿದೆ. (ಸುಮಾರು 600ಪು. 2 ಭಾಗಗಳಲ್ಲಿ) ಬಹಳ ಉತ್ತಮವಾದ ಲೇಖನಗಳಿವೆ. ಶ್ರೀ ಶ್ರೀಗಳವರ ಎಲ್ಲಾ ಬರಹಗಳೂ ಗ್ರಂಥರೂಪದಲ್ಲಿ ಹೊರಬಂದು ಭಕ್ತಾದಿಗಳು ಓದಿ ಕೃತಾರ್ಥರಾಗಲಿ ಎಂದು ಪ್ರಾರ್ಥಿಸೋಣ.

ಖರ ಸಂವತ್ಸರ
ವೈಶಾಖ ಬಹುಳ ಪಂಚಮಿ — ಪ್ರಕಾಶಕರು
ಭಾನುವಾರ
ತಾ॥ 22-5-2011

# ವಿಷಯಾನುಕ್ರಮಣಿಕೆ

## 1. ಮಾಯೆಯಿಂದ ಮಾಯಾತೀತನೆಡೆಗೆ

### (ಸಂಪುಟ 19, ಸೆಪ್ಟೆಂಬರ್ 1949–ಆಗಸ್ಟ್ 50)

### ತಿಂಗಳ ಸಂದೇಶಗಳು


| | |
|---|---|
| 1. ಪೀಠಿಕೆ ಶಂಕರ ಜಯಂತಿ ಶ್ರೀ ಶಂಕರರ ಆತ್ಮತತ್ತ್ವದ ಭಾವನೆಯೇ | 1 |
| 2. ಜಗತ್ತಿನಮಾಯೆ | 8 |
| 3. ಧರ್ಮ | 14 |
| 4. ಎರಡುಬಗೆಯ ಜೀವನ | 21 |
| 5. ಕಾಲದ ಸದುಪಯೋಗ–ಭಗವಂತನಿಗೆ ಶರಣು | 26 |
| 6. ಜೀವನದಕೇಂದ್ರ ಪರಮೇಶ್ವರನು | 33 |
| 7. ಭಗವತ್ಪ್ರಾಪ್ತಿಯಮಾರ್ಗ | 40 |
| 8. ಭಗವಂತನಲ್ಲಿ ಆಶ್ರಯ | 46 |
| 9. ಆನಂದಸ್ವರೂಪನು | 54 |
| 10. ಸರ್ವತ್ಯಾಗದಿಂದ ಆನಂದಪ್ರಾಪ್ತಿ | 61 |
| 11. ಅಧ್ಯಾತ್ಮವಿದ್ಯೆಯಿಂದ ಜೀವನ ಸಾರ್ಥಕತೆ | 69 |
| 12. ಪರಸ್ಪರೋಪಕಾರದಿಂದ ಶ್ರೇಯಸ್ಸು | 76 |


## 2. ಸತ್ಯಜ್ಞಾನಾನಂತನ ದರ್ಶನದ ದಾರಿ

### (ಸಂಪುಟ 20, ಸೆಪ್ಟೆಂಬರ್ 1950–ಆಗಸ್ಟ್ 51)


| | |
|---|---|
| 13. ಗುರುಪೂರ್ಣಿಮೆ–ಧರ್ಮವೇ ಆಧಾರ | 81 |
| 14. ಅನಂತಸಾಗರ | 88 |
| 15. ಪರಮಾರ್ಥ | 94 |
| 16. ಅಹಿಂಸಾತತ್ತ್ವ | 102 |
| 17. ಪರಮಾತ್ಮನನ್ನು ಕಂಡುಕೊಳ್ಳುವದೇ ಉತ್ತಮಧರ್ಮ | 108 |
| 18. ಸದ್ವಿದ್ಯೆಯಿಂದ ಅಶುಭನಾಶ | 114 |
| 19. ಭಗವಂತನ ತೇಜಸ್ಸಿನ ಧ್ಯಾನ | 121 |
| 20. ಪರಿಪೂರ್ಣನಾದ ಪರಮಾತ್ಮ | 127 |
| 21. ಅಧ್ಯಾತ್ಮಯೋಗ | 133 |
| 22. ಆಹಾರಶುದ್ಧಿಯಿಂದ ನಿತ್ಯಾನಂದ ಪ್ರಾಪ್ತಿ | 140 |
| 23. ಭಗವಂತನ ಹಂಬಲಿಕೆ | 146 |
| 24. ನಾಮಸಂಕೀರ್ತನೆ | 152 |

## 3. ಅಧ್ಯಾತ್ಮ ಪ್ರಗತಿಯ ಮಾರ್ಗಗಳು

### (ಸಂಪುಟ 22, ಸೆಪ್ಟೆಂಬರ್ 1952–ಆಗಸ್ಟ್ 53)


25. ಅಧ್ಯಾತ್ಮಗ್ರಂಥಗಳ ಚಿಂತನೆ 159

26. ಭಾವದ ಸಾಕ್ಷಾತ್ಕಾರ 166

27. ಗ್ರಂಥಗಳ ಸದುಪಯೋಗ 172

28. ಅಧ್ಯಾತ್ಮಗ್ರಂಥಗಳಲ್ಲಿ ಅಭಿರುಚಿ 178

29. ಸತ್ಪುರುಷರಸಂಗ 185

30. ಕಪಿಲಭಗವಂತನ ಬೋಧನೆ 193

31. ಅಧ್ಯಾತ್ಮಸಾಧನೆಯ ಮಾರ್ಗ 199

32. ವೇದೋಕ್ತ ಕರ್ಮ 206

33. ವಿದ್ವತ್ಸಂನ್ಯಾಸ 213

34. ಪರಮಹಂಸನಗುರುತು 219

35. ಓಂಕಾರ–ಪರಮಸಾರ 226

36. ಜ್ಞಾನಾರ್ಜನೆ–ಸದ್ಯೋಮುಕ್ತಿ 232


## 4. ಸಾಧನೆಗಳಿಂದ ಪರಮಾತ್ಮನ ಆನಂದ

### (ಸಂಪುಟ 23, ಸೆಪ್ಟೆಂಬರ್ 1953–ಆಗಸ್ಟ್ 54)


37. ಅನುಭವಿ ಆಚಾರ್ಯರಿಂದ ಶ್ರವಣ 240

38. ಅನುಭವಪ್ರಧಾನ ವೇದಾಂತವಾಕ್ಯಗಳು 246

39. ಪ್ರಧಾನವಾದ ಸಾಧನಗಳು 253

40. ಮಹಾತ್ಮರ ಆಹಾರವಿಹಾರಗಳು 259

41. ತಿತಿಕ್ಷೆ–ದ್ವಂದ್ವತ್ಯಾಗ 266

42. ಇಂದ್ರಿಯಗಳ ಸರ್ವಥಾಹಿಡಿತ 274

43. ಏಕಾಂತವಾಸ 279

44. ಒಳಗಿನ ಏಕಾಂತ–ಮನಸ್ಸಿನ ಸುಸ್ಥಿತಿ 284

45. ಆತ್ಮನಲ್ಲಿ ಏಕಾಗ್ರಮನಸ್ಸು 290

46. ಪೂರ್ಣಾತ್ಮಾನುಭವ 296

47. ಪೂರ್ಣಾತ್ಮನೇ ಪರಮಾತ್ಮನು 301

48. ಅಧ್ಯಾತ್ಮ ಸಾಧನೆಯಿಂದ ಅಂತಃಕರಣ ಶುದ್ಧಿ 309

ಪರಿಶಿಷ್ಟ–1 ಒಂದು ಟೀಕೆ–ಶ್ರೀಗಳವರ ಸಮಾಧಾನ 315

ಪರಿಶಿಷ್ಟ–2 ಅಧ್ಯಾತ್ಮ ಸಾಧನ ಸೋಪಾನಗಳು 318


****

# 1. ಮಾಯೆಯಿಂದ ಮಾಯಾತೀತನೆಡೆಗೆ

## ಪೀಠಿಕೆ: 1. ಶ್ರೀ ಶಂಕರರ ಆತ್ಮತತ್ತ್ವದ ಭಾವನೆಯೇ ಶಂಕರಜಯಂತಿ

ಲೋಕದಲ್ಲಿ ಕೆಲವು ವಿಷಯಗಳನ್ನು ಜನರಿಗೆ ತಿಳಿಯಪಡಿಸುವದಕ್ಕಾಗಿ ಹಲವು ವಿಧವಾದ ಏರ್ಪಾಡುಗಳನ್ನು ಮಾಡುತ್ತಾರೆ. ಅಲ್ಲಲ್ಲಿ ಭಾಷಣಗಳನ್ನು ಮಾಡುವದು, ಪತ್ರಿಕೆಗಳಲ್ಲಿ ದಪ್ಪಕ್ಷರದ ಜಾಹಿರಾತುಗಳನ್ನು ಪ್ರಸಿದ್ಧಪಡಿಸುವದು, ಪ್ರಮುಖನಗರಗಳಲ್ಲಿ ನಾಲ್ಕುಬೀದಿಗಳು ಕೂಡವ ಸ್ಥಲಗಳಲ್ಲಿ ಪೋಸ್ಟರುಗಳೆಂಬ ದಪ್ಪಕ್ಷರದ ಪ್ರಕಟನ ಪತ್ರಗಳನ್ನು ಗೋಡೆಗಳಿಗೆ, ಕಂಬಕ್ಕೆ-ಮುಂತಾಗಿ ಎಲ್ಲರಿಗೂ ಕಾಣಿಸುವಂತೆ ಅಂಟಿಸುವದು, ಓಲಗ, ಬ್ಯಾಂಡು, ದೋಲು-ಮುಂತಾದ ವಾದ್ಯಗಳನ್ನು ನುಡಿಸಿ ಕೊಳ್ಳುತ್ತಾ ಹುಡುಗರ ಮೂಲಕ ಧ್ವಜಗಳನ್ನು ಹಿಡಿಸಿಕೊಂಡು ಜಯಘೋಷಗಳನ್ನು ಮಾಡಿಸುವದು; ಸಿನಿಮ, ರೇಡಿಯೊ ಮುಂತಾದ ಸಾಧನಗಳನ್ನು ಉಪಯೋಗಿಸು ವದು; ಗ್ರಂಥಗಳನ್ನು ಬರೆಯಿಸುವದು-ಇವೇ ಮುಂತಾದ ಪ್ರಕಟನಮಾರ್ಗಗಳು ಈಗಿನ ಕಾಲದಲ್ಲಿ ಆಚರಣೆಗೆ ಬಂದಿವೆ. ಆದರೂ ಇಷ್ಟೆಲ್ಲ ಸಾಧನಗಳನ್ನು ಉಪಯೋಗಿಸಿದರೂ ಕೆಲವು ದಿನಗಳಲ್ಲಿಯೇ ಈ ಪ್ರಕಟನೆಗಳು ಜನರ ಲಕ್ಷ್ಯವನ್ನು ಎಳೆಯಲು ಅಸಮರ್ಥವಾಗುವವು. ಆದರೆ ಮತ್ತೆಕೆಲವು ವಿಷಯಗಳನ್ನು ಯಾರೊಬ್ಬರೂ ಜನರಲ್ಲಿ ಹರಡದಿದ್ದರೂ ಅವುಗಳಲ್ಲಿರುವ ಸಹಜವಾದ ಬೆಲೆಯಿಂದ ಜನರು ಅವುಗಳನ್ನು ಹುಡುಕಿಕೊಂಡು ಬಂದು ಅವನ್ನು ನೋಡು ತ್ತಾರೆ. ಹೀಗೆ ಎರಡು ವಿಧವಾದ ಜನರೂ ವಸ್ತುಗಳೂ ನಮ್ಮ ಅನುಭವದಲ್ಲಿವೆ. ಶ್ರೀಶಂಕರಭಗವತ್ಪಾದರವರೂ ಅವರ ಸಂದೇಶವೂ ಎರಡನೆಯ ವರ್ಗಕ್ಕೆ ಸೇರಿದವು ಗಳಾಗಿವೆ. ಯಾವದೊಂದು ಪ್ರಚಾರದ ಯೋಜನೆಯೂ ಇಲ್ಲದಿದ್ದರೂ ಆ ಪೂಜ್ಯ ಪಾದರ ಮತ್ತು ಅವರ ಸಂದೇಶದ ಸ್ಮರಣೆಯನ್ನು ಜನರು ಇಂದಿಗೂ ಮಾಡುತ್ತಿ ದ್ದಾರೆ. ಭರತಖಂಡದಲ್ಲಿ ಸಾವಿರಾರು ಸ್ಥಲಗಳಲ್ಲಿ ಈ ದಿನ ಶ್ರೀಶಂಕರಭಗವತ್ಪಾದ ರವರ ಜಯಂತಿಯ ಉತ್ಸವವನ್ನು ಜನರು ಆಚರಿಸುತ್ತಾರೆ; ಅವರ ಕೀರ್ತಿಯು ನಾಗರಿಕ ಪ್ರಪಂಚದಲ್ಲೆಲ್ಲ ಇಂದು ಹರಡಿರುತ್ತದೆ.

ಇದರ ಗುಟ್ಟೇನು? ಕೆಲವು ವರ್ಷಗಳ ಹಿಂದೆ "ಉದ್ಯೋಗದಲ್ಲಿ ಜಯಶೀಲ ನಾಗುವ ಬಗೆ" (Success in Business) ಎಂಬ ಇಂಗ್ಲಿಷುಗ್ರಂಥವನ್ನು ನಾನು ಓದಿದ್ದೆನು. ಅದರಲ್ಲಿ ಅನೇಕ ಸುಪ್ರಸಿದ್ಧ ಲೇಖಕರು ತಮ್ಮ ಅಭಿಪ್ರಾಯವನ್ನು ಕೊಟ್ಟಿರುತ್ತಾರೆ. ಒಬ್ಬಾತನು ಅಲ್ಲಿ ಬರೆದಿರುವದೇನೆಂದರೆ-"ಯುಕ್ತವಾದ ಜಾಹಿರಾತು ಯಾವದು ಎಂದರೆ ಕೆಲವೇ ಮಾತುಗಳಲ್ಲಿ ಹೇಳಿಬಿಡಬಹುದು. ನಿಮ್ಮಲ್ಲಿ

ಮಾರುವದಕ್ಕೆ ಇರುವ ಪದಾರ್ಥವು ಯಾವದೆಂಬುದನ್ನು ಮಹಾಜನರಿಗೆ ತಿಳಿಸುವದೇ ಪ್ರಕಟನೆಯ ವಿದ್ಯೆ." ಶ್ರೀಶಂಕರ ಭಗವತ್ಪಾದರವರು ಜನರಿಗೆ ಮಾರತಕ್ಕದ್ದು ಯಾವದೂ ಇರಲಿಲ್ಲ. ಆದರೆ ಸಕಲರಿಗೂ ಅತ್ಯವಶ್ಯವೆಂದು ತಾವು ಮನಗಂಡಿದ್ದ ಸಂದೇಶವೊಂದು ಅವರಲ್ಲಿತ್ತು. ಆ ತತ್ತ್ವವು ಅನುಭವಕ್ಕೆ ಹೊಂದಿರುವದೆಂಬ ದೃಢವಾದ ನಂಬಿಕೆಯು ಅವರಲ್ಲಿತ್ತು; ಅದರ ತಿಳಿವಳಿಕೆಯಿಲ್ಲದೆ ಎಲ್ಲರೂ ವ್ಯಥೆ ಪಡುತ್ತಾರೆಂಬ ತಿಳಿವಳಿಕೆಯೂ ಅದನ್ನು ಜನರಿಗೆಲ್ಲ ಆದಷ್ಟು ಸುಲಭವಾದ ರೀತಿಯಿಂದ ತಿಳಿಯಪಡಿಸಬೇಕೆಂಬ ಕರುಣಾಪ್ರೇರಿತವಾದ ಹೃದಯವೂ ಅವರಲ್ಲಿದ್ದವು. ಪ್ರಕಟಿಸುವದಕ್ಕೆ ನಿಮ್ಮಲ್ಲಿ ಏನೂ ಇಲ್ಲದಿದ್ದರೆ ಏನನ್ನು ಪ್ರಕಟಿಸುವಿರಿ? ಸುಳ್ಳನ್ನು ಪ್ರಚಾರಮಾಡಿ ನಾಲ್ಕು ಸಲ ಪುನರುಕ್ತಿಯಿಂದ ಪ್ರಕಟಿಸಿದರೆ ಅದು ನಿಜವಾಗುವದೆಂದು ಹಿಟ್ಲರನು ತನ್ನ ಗ್ರಂಥವೊಂದರಲ್ಲಿ ಬರೆದಿದ್ದನಂತೆ. ಅದು ಯುದ್ಧಕಾಲದಲ್ಲಿ ಭೇದೋಪಾಯಕ್ಕಾಗಿ ಉಪದೇಶಿಸಿದ ತತ್ತ್ವ. ಆದರೆ ಸಾಮಾನ್ಯ ಕಾಲದಲ್ಲಿ ಸುಳ್ಳಿಗೆ ಎಂದಿಗೂ ಜಯವಾಗುವದಿಲ್ಲ. "ಸತ್ಯಮೇವ ಜಯತೇ" ಎಂಬ ಉಪನಿಷದ್ವಾಕ್ಯವು ಲೌಕಿಕವ್ಯವಹಾರದಲ್ಲಿಯೂ ಯಥಾರ್ಥವಾಗುತ್ತದೆ; ಪರಮಾರ್ಥವಿಚಾರಕ್ಕಂತೂ ಅದೇ ಜೀವಾಳವಾಗಿದೆ. ಶ್ರೀಶಂಕರ ಭಗವತ್ಪಾದರವರು ಹುಟ್ಟಿದ್ದು ಕಾಲಡಿ ಎಂದು ಶಂಕರವಿಜಯದಲ್ಲಿದೆ; ಆದರೆ ಆಗಿನ ಕಾಲದಲ್ಲಿಯೇ ಅಲ್ಲದೆ, ಈಗಲೂ ಅನೇಕ ಕೋಟಿ ಶಿಷ್ಯರುಗಳ ತಲೆಗಳು ಅವರ ಕಾಲಡಿಯಲ್ಲಿ ನಮಸ್ಕರಿಸಿ ಬಾಗುತ್ತಲಿವೆ. ಇದಕ್ಕೆ ಆ ಮಹನೀಯರು ಜಗತ್ತಿಗೆ ಸಾರಿದ ಪರಮಾರ್ಥಸತ್ಯದ ಸಂದೇಶವೇ ಕಾರಣವಾಗಿದೆ.

ಶ್ರೀಭಗವತ್ಪಾದಾಚಾರ್ಯರ ಜೀವನಚರಿತ್ರೆಯನ್ನು ತಿಳಿಸುವದಕ್ಕೆ ಬರೆದಿರುವ ಶಂಕರವಿಜಯಗ್ರಂಥಗಳು ಹತ್ತು ಹನ್ನೆರಡು ಇರುತ್ತವೆ. ನಮ್ಮ ದೇಶದಲ್ಲಿ ಸುಪ್ರಸಿದ್ಧವಾಗಿರುವ ಶಂಕರವಿಜಯವೇ ಅಲ್ಲದೆ, ಆನಂದಗಿರಿಕೃತ ಶಂಕರವಿಜಯ, ಸದಾನಂದ ಶಂಕರವಿಜಯ, ಶಂಕರಾಭ್ಯುದಯ, ಶಂಕರ ಮಂದಾರಸೌರಭ, ಶಂಕರ ಕಥಾದರ್ಶ, ಶಂಕರಕಥಾಸುಧಾನಿಧಿ, ಭಗವತ್ಪಾದಾಭ್ಯುದಯ, ಚಿದ್ವಿಲಾಸಶಂಕರ ವಿಜಯ, ವ್ಯಾಸಾಚಲಕೃತ ಶಂಕರವಿಜಯ, ಪ್ರಾಚೀನಶಂಕರವಿಜಯ-ಮುಂತಾದ ಗ್ರಂಥಗಳ ಹೆಸರು ಕೇಳಿಬರುತ್ತಲಿದೆ. ಈ ಗ್ರಂಥಗಳಲ್ಲಿರುವ ಶಂಕರಚರಿತ್ರೆಯು ಒಂದೇ ಬಗೆಯಾಗಿರುವದಿಲ್ಲ. ಆಚಾರ್ಯರ ಜನ್ಮಸ್ಥಳ, ತಂದೆ ತಾಯಿಗಳ ಹೆಸರು -ಮುಂತಾದ ವಿಷಯಗಳಲ್ಲಿ ಕೂಡ ಭಿನ್ನಾಭಿಪ್ರಾಯಗಳಿವೆ. ಆದರೆ ಆಚಾರ್ಯರು ತಂದಿರುವ ವೇದಾಂತ ಸಂದೇಶವು ಮಾತ್ರ ಅತ್ಯಂತ ಅಮೂಲ್ಯವಾಗಿದ್ದು, ಸರ್ವ ದೇಶಕಾಲಗಳಿಗೆ ಸಮಾನವಾಗಿಯೇ ಮಾನ್ಯವಾಗಿರುತ್ತದೆ. ಅದು ಈಗಿನ ಕಾಲಕ್ಕೂ ಅತ್ಯಂತ ಪ್ರಯೋಜನಕರವಾದದ್ದೆಂದು ಭಾವಿಸುವಂಥದ್ದಾಗಿದೆ.

ಜನರ ನಾಗರಿಕತೆಯು ಹೆಚ್ಚಿದಂತೆಲ್ಲ ಭೂಲೋಕದಲ್ಲಿ ಭಿನ್ನಭಿನ್ನವಾಗಿದ್ದ ಜನಾಂಗಗಳು ಈಗ ಒಂದಾಗುತ್ತಲಿವೆ. ಭೌತಿಕವಿಜ್ಞಾನದ ಸಹಾಯದಿಂದ ಕಂಡುಹಿಡಿದಿರುವ ರೈಲು, ಹಡಗು, ಜಹಜು, ತಂತಿಯಿಲ್ಲದ ಸುದ್ದಿ, ರೇಡಿಯೊ-ಮುಂತಾದ ಸಾಧನಗಳಿಂದ ಒಂದಕ್ಕೊಂದು ಬಹುದೂರವಾಗಿದ್ದ ದೇಶಗಳು ಈಗ ಬಹಳ ಹತ್ತಿರವಾದಂತೆ ಆಗಿದೆ. ಹೀಗೆ ದೇಶಕಾಲಗಳ ಅಂತರವನ್ನು ಕಡಿಮೆಮಾಡಿಕೊಂಡು ಎಲ್ಲರೂ ಒಂದೇ ಮನೆತನಕ್ಕೆ ಸೇರಿದವರಂತೆ ಅನ್ಯೋನ್ಯ ಪ್ರೇಮದಿಂದ ವರ್ತಿಸುವದಕ್ಕೆ ಅನುಕೂಲವಾಗಿರುವ ಇದೇ ಕಾಲದಲ್ಲಿ ಜನರಿಗೆ ಕಾಮಕ್ರೋಧಗಳು ಹೆಚ್ಚಿ ಒಬ್ಬರನ್ನೊಬ್ಬರು ಸಂಶಯಚಿತ್ತದಿಂದ ನೋಡುವದು ಬಲವಾಗುತ್ತಿದೆ. ವಿವೇಕಿಗಳ ಮನಸ್ಸಿಗೆ ಇದು ಬಹಳ ಆಶ್ಚರ್ಯವನ್ನೂ ಖೇದವನ್ನೂ ಉಂಟುಮಾಡತಕ್ಕ ಘಟನೆಯಾಗಿರುತ್ತದೆ. ಇಂಥ ಸಮಯದಲ್ಲಿ ವೇದಾಂತದ ಆಧಾರದಿಂದ ಆಚಾರ್ಯರು ತಂದಿರುವ ಶಂಕರ ಸಂದೇಶವು ಉತ್ತಮಪ್ರಯೋಜನವನ್ನುಂಟುಮಾಡುವದಾಗಿದೆ. ಏಕೆಂದರೆ ಅವರ ಸಂದೇಶಕ್ಕೆ ಆಧಾರವಾಗಿರುವ ವೇದಾಂತೋಪದೇಶವು ಯಾವದೆಂದರೆ :

**ಏಕೋ ದೇವಃ ಸರ್ವಭೂತೇಷು ಗೂಢಃ ಸರ್ವವ್ಯಾಪೀ ಸರ್ವಭೂತಾನ್ತರಾತ್ಮಾ ।**
**ಕರ್ಮಾಧ್ಯಕ್ಷಃ ಸರ್ವಭೂತಾಧಿವಾಸಃ ಸಾಕ್ಷೀ ಚೇತಾ ಕೇವಲೋ ನಿರ್ಗುಣಶ್ಚ ॥**

ಎಲ್ಲರಿಗೂ ಒಬ್ಬ ದೇವನೇ ಆತ್ಮನು; ಎಲ್ಲಾ ಪ್ರಾಣಿಗಳಿಗೂ ಒಬ್ಬನೇ ಆತ್ಮನು, ಎಲ್ಲರಿಗೂ ಒಬ್ಬನೇ ಕರ್ಮಫಲವನ್ನು ಕೊಡುವಾತನು-ಎಂಬ ಈ ಸಂದೇಶವನ್ನು ವಿಚಾರಮಾಡದೆ ಸುಮ್ಮನೆ ನಂಬಿದರೂ ಸಾಕು, ನಮ್ಮ ಮನಸ್ಸಿಗೆ ಎಷ್ಟೋ ಶಾಂತಿಸಮಾಧಾನಗಳು ವಶವಾಗುತ್ತವೆ, ಅದರಲ್ಲಿಯೂ ಇಂಥ ಭೀಕರಸ್ಥಿತಿಯ ಕಾಲಕ್ಕೆ ಇದು ಎಂಥ ಕಲ್ಯಾಣಕರವಾದದ್ದು !

ಶ್ರೀಶಂಕರಾಚಾರ್ಯರವರು ತಂದಿರುವದು ವೃತ್ತಾಂತಪತ್ರಿಕೆಗಳ ಸುದ್ದಿಯಂತೆ ನಮ್ಮ ಭಾವಗಳ ಪ್ರಚೋದನೆಮಾಡಿ ಸುಮ್ಮನಾಗುವ ಮಾತಲ್ಲ. ಈ ದಿನ ನಾವು ಇದ್ದಲ್ಲಿಯೇ ಯಾವ ಖರ್ಚುವೆಚ್ಚಗಳೂ ಇಲ್ಲದೆ ನಮ್ಮಲ್ಲಿ ಪ್ರತಿಯೊಬ್ಬನೂ ಈ ತತ್ತ್ವವನ್ನು ಮನಗಾಣಬಹುದು ಎಂದು ಆಚಾರ್ಯರು ಹೇಳಿರುತ್ತಾರೆ. ಅವರದು ಸ್ವಕಪೋಲಕಲ್ಪಿತವಾದ ವಾಕ್ಕಲ್ಲ, ನಿರರ್ಥಕವಾದ ಆಶೋತ್ತರಗಳನ್ನು ಹುಟ್ಟಿಸುವ ಒಂದು ಸುದ್ದಿಯಲ್ಲ; ವೇದಾಂತಗಳಲ್ಲಿ ಹೇಳಿರುವದನ್ನೇ ಅವರು ಈ ಧ್ವನಿವರ್ಧನ ಯಂತ್ರದಂತೆ (Loud-Speaker) ಮತ್ತಷ್ಟು ಸ್ಪಷ್ಟಪಡಿಸಿರುತ್ತಾರೆ. ಅವರು ತಂದಿರುವ ಸಂದೇಶವು ಯಥಾರ್ಥವಾಗಿರುವದಲ್ಲದೆ ಯಾರೊಬ್ಬರಿಗೂ ದ್ವೇಷವನ್ನುಂಟುಮಾಡುವದಲ್ಲ. ಏಕೆಂದರೆ ನಾವೆಲ್ಲರೂ ಪರಬ್ರಹ್ಮಸ್ವರೂಪರೇ ಎಂಬುದು ಅವರ

ದಿವ್ಯಸಂದೇಶವು. ಅದನ್ನು ಯಾರು ಕೇಳಿದರೂ ಉತ್ತಮಫಲವುಂಟು, ಅದನ್ನು ಅರಿತುಕೊಂಡರೆ ಪರಮಾರ್ಥ ಸತ್ಯವೇ ಕೈವಶವಾಗುವದು, ಇಲ್ಲದಿದ್ದರೆ ದೊಡ್ಡ ನಷ್ಟವಾಗುವದು. "ಇಹ ಚೇದವೇದೀದಥ ಸತ್ಯಮಸ್ತಿ ನ ಚೇದಿಹಾ-ವೇದೀನ್ಮಹತೀ ವಿನಷ್ಟಿಃ" ಎಂಬ ಉಪನಿಷತ್ತಿನ ಉಪದೇಶವಿದು. "ಯೈರಿಮೇ ಗುರುಭಿಃ ಪೂರ್ವಂ ಪದವಾಕ್ಯ ಪ್ರಮಾಣತಃ । ವ್ಯಾಖ್ಯಾತಾಸ್ಸರ್ವ-ವೇದಾನ್ತಾ-ಸ್ತಾನ್ನಿತ್ಯಂ ಪ್ರಣತೋಸ್ಮ್ಯಹಮ್"- ಹಿಂದೆ ಯಾವ ಗುರುಗಳು ಪದವಾಕ್ಯ ಪ್ರಮಾಣಗಳ ಆಧಾರದಿಂದ ಸರ್ವ ವೇದಾಂತಗಳನ್ನೂ ವಿವರಿಸಿರುತ್ತಾರೋ ಅವರನ್ನು ನಿತ್ಯವೂ ನಮಸ್ಕರಿಸುತ್ತೇನೆ; ಅವರ ಸತ್ಸಂಪ್ರದಾಯದ ಉಪದೇಶವನ್ನೇ ನಾನು ನಿಮಗೆಲ್ಲ ತಿಳಿಸುತ್ತಿದ್ದೇನೆ-ಎಂದು ನಿರಭಿಮಾನದಿಂದ ಹೇಳಿಕೊಂಡಿರುತ್ತಾರೆ.

ಆಚಾರ್ಯರ ಸಂದೇಶಕ್ಕೆ ದೇಶ, ಕಾಲ, ಭಾಷೆ-ಮುಂತಾದವು ಯಾವವೂ ಪರಿಚ್ಛೇದಕವಲ್ಲ. ಅದು ಎಲ್ಲಾ ದೇಶಕ್ಕೂ ಎಲ್ಲಾ ಕಾಲಕ್ಕೂ ಅನ್ವಯಿಸತಕ್ಕದ್ದು; ಯಾವ ಭಾಷೆಯಿಂದ ನುಡಿದರೂ ಅದರ ವಿಷಯವು ಎಲ್ಲರಿಗೂ ಮಾನ್ಯವಾಗಿರುವದು, ಘನವಾಗಿರುವದು, ಮಂಗಲಕರವಾಗಿರುವದು, ಅಮೃತ ವರ್ಷದಂತೆ ಆನಂದವರ್ಧಕವಾದದ್ದು.

ಶ್ರೀಶಂಕರಾಚಾರ್ಯರನ್ನು ಹೊಗಳಿ ನಾವು ಅವರಿಗೆ ಯಾವದೊಂದು ಪ್ರಯೋಜನವನ್ನೂ ಮಾಡಿಕೊಡಬೇಕಾಗಿಲ್ಲ; ಅವರು ಬಹುಸಂಖ್ಯಾಕರ ಮತದಾನ (ವೋಟು)ಗಳನ್ನು ಭಿಕ್ಷೆಬೇಡುವದಿಲ್ಲ. ಅವರನ್ನು ಹೊಗಳುವದು ಅವರು ತಂದಿರುವ ದಿವ್ಯಸಂದೇಶಕ್ಕಾಗಿ; ಅವರನ್ನು ಸ್ಮರಣೆಮಾಡಿ ನಾವು ಕೃತಾರ್ಥರಾಗುವದಕ್ಕಾಗಿ, ನಿತ್ಯಾನಂದವನ್ನು ಸೂರೆಗೊಡುವ ಈ ಸಂದೇಶವನ್ನು ನಮ್ಮ ಕೈಯಲ್ಲಾದಷ್ಟು ಜನರಿಗೆ ತಿಳಿಸಿ ಅವರನ್ನು ಸಂತೋಷಗೊಳಿಸಿ ನಾವೂ ಸಂತೋಷಪಡಬೇಕಾಗಿದೆ. ಇದಕ್ಕಾಗಿಯೇ ನಾವು ಶಂಕರಜಯಂತಿಯನ್ನು ಮಾಡುವದು.

ಆಚಾರ್ಯರನ್ನು ಹೊಗಳಿದರೆ ನಾವು ನಮ್ಮನ್ನೇ ಹೊಗಳಿಕೊಂಡಂತೆ. ಏಕೆಂದರೆ ನಮ್ಮೆಲ್ಲರಿಗೂ ಒಬ್ಬ ಪರಮಾತ್ಮನೇ ಆತ್ಮನು ಎಂದು ಅವರು ಸಾರಿರುತ್ತಾರೆ. ಪರಮಾತ್ಮನಲ್ಲಿ ನಾವು ನಿಷ್ಠೆಯನ್ನು ಪಡೆದರೆ ಅಷ್ಟುಮಾತ್ರದಿಂದ ಲೋಕಕ್ಕೆಲ್ಲ ಕಲ್ಯಾಣವಾಗುವದು. "ಏತಜ್ಜ್ಞೇಯಂ ನಿತ್ಯಮೇವಾತ್ಮಸಂಸ್ಥಂ ನಾತಃಪರಂ ವೇದಿತವ್ಯಂ ಹಿ ಕಿಂಚಿತ್" ಎಂಬ ಉಪನಿಷದ್ವಾಕ್ಯದಂತೆ ಪರಮಾತ್ಮತತ್ತ್ವವೊಂದೇ ಅರಿತುಕೊಳ್ಳಬೇಕಾದದ್ದು; ಮನುಷ್ಯನು ಅರಿತುಕೊಳ್ಳುವದಕ್ಕೆ ತಕ್ಕದ್ದು ಅದಕ್ಕಿಂತ ಹೆಚ್ಚಿನದು ಮತ್ತೆ ಯಾವದೊಂದೂ ಇರುವದೇ ಇಲ್ಲ. ಪರಮಾತ್ಮಜ್ಞಾನವೆಂಬ ಅಮೃತವು ಒಬ್ಬನ ಹೃದಯದೊಳಗೆ ಪ್ರವೇಶಿಸಿದರೂ ಸಾಕು, ಶ್ರೀಕೃಷ್ಣಭಗವಂತನ

ತೃಪ್ತಿಯಿಂದ ದೂರ್ವಾಸಶಿಷ್ಯರಿಗೆಲ್ಲ ತೃಪ್ತಿಯಾದಂತೆ ಜ್ಞಾನಿಯ ತೃಪ್ತಿಯು ಲೋಕಕ್ಕೇ ತೃಪ್ತಿಯನ್ನುಂಟುಮಾಡುವದು. ಯಾವ ಮಹನೀಯನ ಮನಸ್ಸು ಆ ಪರಮಾತ್ಮನಲ್ಲಿ ಸ್ವಲ್ಪಹೊತ್ತಾದರೂ ಲಯವಾಗುವದೋ ಆತನ ಕುಲವು ಪವಿತ್ರವಾದಂತೆ, ಆತನ ತಾಯಿಯು ಕೃತಾರ್ಥಳಾದಳು; ಭೂಮಿಯು ವಿಶ್ವಂಭರೆ ಎಂಬ ನಾಮವನ್ನು ಹೊತ್ತದ್ದು ಸಾರ್ಥಕವಾಯಿತು ಎಂದು ತಿಳಿಯಬೇಕು– ಎಂದು ಬಲ್ಲವರು ಆತ್ಮಜ್ಞಾನಿಯನ್ನು ಬಾಯಿತುಂಬ ಹೊಗಳಿರುತ್ತಾರೆ. ರಾಜಕೀಯ ರಂಗದಲ್ಲಿ ಶಾಂತಿಮಾರ್ಗವನ್ನು ಹುಡುಕಿ ತಿಳಿಸಿದನೆಂಬ ಕಾರಣದಿಂದ ಮಹಾತ್ಮ ಗಾಂಧಿಯನ್ನು ಲೋಕವೆಲ್ಲ ಹೊಗಳಿತು; ಜನರೆಲ್ಲರೂ ಅವನನ್ನು ಅನುಸರಿಸುವದಕ್ಕೆ ಹವಣಿಸಿದರು; ಅವನ ಹೆಸರನ್ನು ಹೇಳಿದರೆ ಕೀರ್ತಿ ಬರುತ್ತದೆ ಎಂದು ಭಾವಿಸಿದರು, ಎಲ್ಲರೂ ಕೊಂಡಾಡಿದರು. ಇನ್ನು ಸಾರ್ವತ್ರಿಕಶಾಂತಿಸುಖದ ಸುಖಸಂದೇಶವನ್ನು ತಂದಿರುವ ಶ್ರೀಶಂಕರಭಗವತ್ಪಾದವರನ್ನು ನಾವು ಇನ್ನೆಷ್ಟು ಕೃತಜ್ಞತೆಯಿಂದ ಸ್ಮರಿಸಬೇಕಾಯಿತು !

'ಶಂಕರ' ಎಂಬ ಮಾತೇ ಲೋಕಕ್ಕೆ ಕಲ್ಯಾಣವನ್ನು ಕೊಡತಕ್ಕದ್ದು. ಜಯಂತಿ ಎಂದರೆ ಹುಟ್ಟಿದ ದಿನದ ಉತ್ಸವ. ಶ್ರೀಶಂಕರಾಚಾರ್ಯರ ಸಂದೇಶವಾದ ಆತ್ಮತತ್ತ್ವದ ಭಾವನೆಯು ನಮ್ಮ ಹೃದಯದಲ್ಲಿ ಹುಟ್ಟಿದರೆ ಶಂಕರಜಯಂತಿಯಾಯಿತು. ರಾಗದ್ವೇಷಗಳ ಸಂದೇಶವನ್ನು ತಂದು ಜನಾಂಗಗಳಲ್ಲಿ ಒಡಕನ್ನು ಹುಟ್ಟಿಸಿ, ಅವರ ನೆಮ್ಮದಿಗೆ ಕ್ಷೋಭೆಯನ್ನುಂಟುಮಾಡುವ ಸಂದೇಶವನ್ನು ತಂದವರು ಬೇಕಾದಷ್ಟು ಜನರಿರಬಹುದು. ಎಂದೆಂದಿಗೂ ಕಲ್ಯಾಣವನ್ನೇ ಉಂಟುಮಾಡುವ ಇಂಥ ಶಾಂತಿಸಂದೇಶವನ್ನು ತಂದವರು ವಿರಳ. ಮನುಷ್ಯನು ಎಂದೆಂದಿಗೂ ಮನುಷ್ಯನೇ; ಅವನ ಮನುಷ್ಯತ್ವವು ಹೋಗುವವರೆಗೂ ರಾಗದ್ವೇಷಗಳು ಹೋಗುವ ಹಾಗಿಲ್ಲ. ಆದರೂ ಈ ರಾಗದ್ವೇಷಗಳಿಂದ ಮುಕ್ತರಾಗುವದಕ್ಕೆ ಬೇರೊಂದು ಮಾರ್ಗವಿರುತ್ತದೆ. ಉಪನಿಷತ್ಕಾಲದ ಒಬ್ಬ ಋಷಿಯ ಬಾಯಿಂದ ಬಂದಿರುವ ಈ ಘೋಷಣೆಯನ್ನು ಕೇಳಿರಿ; "ವೇದಾಹಮೇತಂ ಪುರುಷಂ ಮಹಾನ್ತಮಾದಿತ್ಯವರ್ಣಂ ತಮಸಃ ಪರಸ್ತಾತ್ । ತಮೇವ ವಿದಿತ್ವಾತಿಮೃತ್ಯುಮೇತಿ ನಾನ್ಯಃ ಪನ್ಥಾ ವಿದ್ಯತೇಽಯನಾಯ"–ಅಜ್ಞಾನಾಂಧಕಾರವನ್ನು ಮೀರಿರುವ ಆದಿತ್ಯವರ್ಣನಾದ ಚೈತನ್ಯ ಪ್ರಕಾಶರೂಪನಾದ ಆ ಮಹಾಪುರುಷನನ್ನು ನಾನು ಅರಿತುಕೊಂಡಿರುವೆನು; ಆತನನ್ನೇ ಅರಿತುಕೊಂಡರೆ ಅತಿಮೃತ್ಯುವನ್ನು ಹೊಂದುತ್ತಾನೆ, ಇದನ್ನು ಪಡೆಯುವದಕ್ಕೆ ಮತ್ತೊಂದು ಹಾದಿಯಿಲ್ಲ– ಎಂದು ಎದೆತಟ್ಟಿಕೊಂಡು ಋಷಿಯು ಸಾರಿರುತ್ತಾನೆ; ನಿಜವನ್ನು ತಾನು ಅನುಭವಕ್ಕೆ ತಂದುಕೊಳ್ಳದೆ ಇರುವವನ

ಬಾಯಿಂದ ಇಂಥ ಧೀರವಾಕ್ಯವು ಬಂದೀತೆ? ಪಾಪಿಷ್ಠವಾದ ಈ ಘೋರಕಲಿ ಯುಗದಲ್ಲಿ ಕೂಡ ಇದೇ ಸಂದೇಶವು ಎಲ್ಲರಿಗೂ ಮನಗಾಣತಕ್ಕದ್ದಾಗಿರುವದೆಂದು ಸಾರಿದ ಶ್ರೀಶಂಕರಾಚಾರ್ಯರ ಧೈರ್ಯವನ್ನು ಈಗ ಮನಸ್ಸಿಗೆ ತಂದುಕೊಳ್ಳಿರಿ; ಕಾಶಿಯವರೆಗೂ ಕಾಲುನಡಗೆಯಲ್ಲಿಯೇ ನಡೆದು ಹೋದಬಳಿಯಲ್ಲಿ ಎಲ್ಲರಿಗೂ ಈ ತತ್ತ್ವವನ್ನು ಸಾರಿದ ಹದಿನಾರು ವರ್ಷದ ತರುಣನೊಬ್ಬನನ್ನು ನಿಮ್ಮ ಮನಸ್ಸಿನಲ್ಲಿ ಕಲ್ಪಿಸಿಕೊಳ್ಳಿರಿ; ಅಹಂ ಬ್ರಹ್ಮಾಸ್ಮಿ (ನಾನು ಬ್ರಹ್ಮವು)-ತತ್ತ್ವಮಸಿ (ನೀನು ಬ್ರಹ್ಮವು), ಸರ್ವಂ ಖಲ್ವಿದಂ ಬ್ರಹ್ಮ (ಇದೆಲ್ಲವೂ ಬ್ರಹ್ಮವು) ಎಂಬ ವೇದವಾಕ್ಯವು ಈಗಲೂ ಅನುಭವಕ್ಕೆ ಬರುವ ವಿಷಯವನ್ನೇ ಹೇಳುತ್ತಿರುವದೆಂದು ನಿರ್ಮಾಯದಿಂದ ನಿರೂಪಿಸಿ ತಿಳಿಸಿರುವ ಜ್ಞಾನವನ್ನೂ ತತ್ತ್ವನಿಷ್ಠೆಯನ್ನೂ ಜನರ ಮೇಲಿನ ಅಪಾರಕರುಣೆಯನ್ನೂ ಆಗ ನೀವು ಒಂದಿಷ್ಟು ತಿಳಿಯುವದಕ್ಕೆ ಅವಕಾಶವು ದೊರಕುತ್ತದೆ.

ಬರಿಯ ಸುಳ್ಳನ್ನು ಜನರಲ್ಲೆಲ್ಲ ಹಲವು ವಿಧಗಳಿಂದ ಪ್ರಚಾರಮಾಡಲು ಸೊಂಟ ಕಟ್ಟಿಕೊಳ್ಳುವ ಮೂರ್ಖರು ಅನೇಕರು ಈ ಲೋಕದಲ್ಲಿ ಸಿಕ್ಕುತ್ತಾರೆ. ಆದರೆ ಈ ಪರಮಾರ್ಥಸತ್ಯವನ್ನು ತಾವೂ ಮನಗಂಡು ಮಿಕ್ಕವರಿಗೂ ತಿಳಿಸಿಕೊಡ ಬೇಕೆಂಬ ಜನರು ಕಡಿಮೆ. ಜಗತ್ತಿನ ಜನರನ್ನೆಲ್ಲ ಪ್ರೇಮದಿಂದ ಒಂದಾಗಿ ಮಾಡುವ ಈ ತತ್ತ್ವವನ್ನು ಹರಡುವದಕ್ಕೆ ತತ್ತ್ವನಿಷ್ಠರಾದ ನಾಯಕರು ಬೇಕು; ಅದಕ್ಕಾಗಿ ತಮ್ಮ ತನುಮನೋಧನಗಳನ್ನು ತ್ಯಾಗಮಾಡುವದಕ್ಕೆ ಸಿದ್ಧರಾಗುವ ಸ್ವಯಂಸೇವಕರು ಬೇಕು. ಈ ತತ್ತ್ವವು ತ್ರಿಕಾಲಾಬಾಧಿತವಾಗಿದೆ; ನಾವು ಇದನ್ನು ಹೊಗಳಿದರೂ ತೆಗಳಿದರೂ ಇದನ್ನು ಬದಲಾಯಿಸುವದು ನಮ್ಮಿಂದ ಆಗಲಾರದು. ಆದರೆ ಇದನ್ನು ಎಲ್ಲೆಲ್ಲಿಯೂ ಪ್ರಕಟಿಸಿದರೆ ನಾವೇ ಕೃತಾರ್ಥರಾಗುತ್ತೇವೆ. ಆದ್ದರಿಂದ ಅದಕ್ಕಾಗಿ ಅವಶ್ಯವಾಗಿ ದುಡಿಯಬೇಕು. ಜನರಿಗೆಲ್ಲ, ಪ್ರಾಣಿಗಳಿಗೆಲ್ಲ, ಒಂದೇ ತತ್ತ್ವವು ಆತ್ಮನಾಗಿರುವದೆಂಬುವದನ್ನು ಪ್ರಚಾರಮಾಡಿದರೆ ಅಪಾಯವೇನೂ ಇಲ್ಲ, ಯಾವನೊಬ್ಬನೂ ಈ ಜ್ಞಾನವನ್ನು ದುರುಪಯೋಗಮಾಡಿಕೊಂಡು ಮಿಕ್ಕವರಿಗೆ ಹಿಂಸೆಯನ್ನು ಮಾಡುವದಕ್ಕೆ ಬರುವದಿಲ್ಲ. ಎಲ್ಲರಿಗೂ ಶಾಂತಿ ಸುಖಗಳು ಸಮವಾಗಿಯೇ ದೊರಕುವವು.

ಆದರೆ ಈ ಸಂದೇಶವನ್ನು ಅರಿತುಕೊಳ್ಳುವದಕ್ಕೆ ತಕ್ಕ ಬುದ್ಧಿಯ ಮಟ್ಟವನ್ನು ನಾವು ಮುಟ್ಟಬೇಕು. ದೊಡ್ಡವರು ಕಂಡುಹಿಡಿದಿರುವ ಘನತತ್ತ್ವಗಳು ಬಹುಸರಳ ವಾಗಿರುತ್ತವೆ; ಆದರೂ ಅವರ ದೃಷ್ಟಿಯಿಂದ ನೋಡಲಾರದವರು ಆ ತತ್ತ್ವಗಳ ವಿಷಯಕ್ಕೆ ಬಗೆಬಗೆಯ ಶಂಕೆಗಳನ್ನು ಎತ್ತುತ್ತಾರೆ. ಶ್ರೀಶಂಕರಭಗವತ್ಪಾದರು ಉಪ

ದೇಶಿಸಿರುವ ತತ್ತ್ವವು ಇಂಥದ್ದು. ಅವರು ಹೇಳುವದೆಲ್ಲ ಇಷ್ಟೆ, ನಮಗೆಲ್ಲರಿಗೂ, ಬ್ರಹ್ಮನಿಂದ ಹಿಡಿದು ಸ್ಥಾವರಪ್ರಾಣಿಯವರೆಗಿನ ಎಲ್ಲಾ ಜೀವರುಗಳಿಗೂ, ಒಬ್ಬನೇ ಪರಮಾತ್ಮನು ಆತ್ಮನಾಗಿರುತ್ತಾನೆ. ಶ್ರುತಿಯಲ್ಲಿ "ಅತ್ರ ಬ್ರಹ್ಮ ಸಮಶ್ನುತೇ" ಇಲ್ಲಿಯೇ ಬ್ರಹ್ಮಪ್ರಾಪ್ತಿಯಾಗುತ್ತದೆ ಎಂಬ ವಾಗ್ದಾನವಿದೆ. ಇದನ್ನು ನಾವು ಪ್ರಯತ್ನಮಾಡಿ ಅನುಭವಕ್ಕೆ ತಂದುಕೊಳ್ಳಬಹುದೆ, ಸಾಧ್ಯವೆ? ಹಾಗಾದರೆ ಚಿನ್ನಕ್ಕೆ ಪರಿಮಳವು ಬಂದಂತೆ ಆಗುತ್ತದೆ. ಇದು ಸಾರ್ವತ್ರಿಕತತ್ತ್ವವಾದರೆ ಎಲ್ಲರಿಗೂ ಅರಿತುಕೊಳ್ಳು ವದಕ್ಕೆ ಸಾಧ್ಯವಾಗಿರಬೇಕು, ಎಲ್ಲಾ ಕಾಲಕ್ಕೂ ಈ ವಾಕ್ಯವು ಅನ್ವಯಿಸಬೇಕು– ಎಂಬುದು ಸ್ಪಷ್ಟವಾಗಿರುತ್ತದೆ. ಶ್ರೀಶಂಕರಾಚಾರ್ಯರವರು ಈ ತತ್ತ್ವವನ್ನು ಹೇಗೆ ಸಾರ್ವತ್ರಿಕಾನುಭವಕ್ಕೆ ಹೊಂದಿಸಿ ತಿಳಿಸಿರುತ್ತಾರೆಂಬುದನ್ನು ಮುಂದೆ ವಿಚಾರಕ್ಕೆ ತೆಗೆದುಕೊಳ್ಳುವೆನು, ಇಂದಿಗೆ ಶಂಕರರು ಈ ಸಂದೇಶವನ್ನು ತಂದದ್ದಕ್ಕೆ ಕೃತಜ್ಞತೆ ಯನ್ನು ಸೂಚಿಸಿ ಅವರ ಉಪಕಾರವನ್ನು ನಾವು ಸ್ಮರಿಸಿಕೊಳ್ಳೋಣ. ಈ ರಾತ್ರೆ ನಮಗೆಲ್ಲರಿಗೂ ಒಂದು ಕಲ್ಯಾಣಕಾರಕವಾದ ಸ್ವಪ್ನವು ಬೀಳಲಿ! ಭಗವತ್ಪಾದರು ತತ್ತ್ವವನ್ನು ಮನಗಾಣಿಸಿರುವ ಪ್ರಕ್ರಿಯೆ ಯಾವದೆಂಬುದು ನಮ್ಮಲ್ಲಿ ಯಾರೊಬ್ಬರಿ ಗಾದರೂ ಹೊಳೆಯಲಿ ! ನನಗೆ ಹೊಳೆಯುವದನ್ನು ನಾನು ಯಾವ ಮುಚ್ಚು ಮರೆಯೂ ಇಲ್ಲದೆ ನಾಳೆಯ ದಿನ ತಮ್ಮಗಳ ಮುಂದೆ ಇಡುವೆನು. ನಾರಾಯಣ!

* ಬೆಂಗಳೂರಿನ ನ್ಯಾಷನಲ್ ಕಾಲೇಜಿನಲ್ಲಿ ಶ್ರೀ ಸ್ವಾಮಿಗಳವರು 22–4–50ರಲ್ಲಿ ಶಂಕರ ಜಯಂತಿಯ ಪ್ರಯುಕ್ತವಾಗಿ ಮಾಡಿದ ಉಪದೇಶಸಾರವಿದು.(ಜೂನ್ 1950ನೆಯ ಸಂಚಿಕೆ)

# 2. ಜಗತ್ತಿನಮಾಯೆ

ಮನುಷ್ಯರಿಗೆ ಪರಮಾನಂದವೇ ಬೇಕು; ಆದರೆ ಆ ಆನಂದಕ್ಕಾಗಿ ಸಾಧನ ಮಾಡುವದು ಬೇಡ. ದುಃಖವು ಎಂದಿಗೂ ಬೇಡ; ಆದರೆ ದುಃಖವನ್ನು ತರುವ ಸನ್ನಿವೇಶಗಳನ್ನು ತಂದೊಡ್ಡುವ ವ್ಯಾಪಾರವನ್ನು ಬಿಡುವದೇ ಇಲ್ಲ. ಇದು ಈ ಪ್ರಪಂಚದಲ್ಲಿ ಕಾಣುವ ಆಶ್ಚರ್ಯಗಳಲ್ಲಿ ಒಂದು. ಬಹುಮಟ್ಟಿಗೆ ಜನರು ಜೀವನದಲ್ಲಿ ತಮಗೆ ಕಾಣುವ ಕಷ್ಟಪರಂಪರೆಗಳನ್ನು ಪರಿಹರಿಸಿಕೊಳ್ಳುವದರಲ್ಲಿಯೇ ಕಾಲವನ್ನು ಕಳೆಯುತ್ತಿರುವರು. ಅವರಿಗೆ ಕಷ್ಟಗಳ ಮೇಲೆ ಕಷ್ಟಗಳು ಬಂದು ಒದಗುತ್ತಿರುವಂತೆ ಕಾಣುವದು; ದುಃಖಮಯವಾಗಿರುವದೇ ಜೀವನದ ಸ್ವಭಾವ ವೆನ್ನುವಂತೆ ಮನಸ್ಸಿಗೆ ತೋರುತ್ತಿರುವದು. ಆದರೂ ಈ ದುಃಖಗಳನ್ನು ಪರಿಹರಿಸಿ ಕೊಳ್ಳುವದಕ್ಕೆ ಇರುವ ಒಂದೇ ಒಂದು ಉಪಾಯವನ್ನು ಅವರು ಕೈಕೊಳ್ಳುವದಿಲ್ಲ. ಭಗವಂತನನ್ನು ಶರಣುಹೊಂದುವದೇ ದುಃಖಗಳು ಅತ್ಯಂತವಾಗಿ ಹೋಗುವದಕ್ಕೆ ಪರಮೋಪಾಯವು. ಭಗವಂತನನ್ನು ಶರಣುಹೊಕ್ಕರೆ ದುಃಖಗಳು ಹಾರಿಹೋಗುವ ವೆಂಬುದಿಷ್ಟೇ ಅಲ್ಲ. ಆನಂದದ ಬುಗ್ಗೆಯೇ ಸಾಧಕನ ಹೃದಯದೊಳಗೆ ಮೇಲಕ್ಕೆ ಚಿಮ್ಮುವದಕ್ಕೆ ಮೊದಲಾಗುವದು. ಆದರೂ ಮಾನವರನೇಕರಿಗೆ ಅದೇಕೊ, ಭಗ ವಂತನ ಕಡೆಗೆ ತಿರುಗುವದೂ ಬೇಡ! ಭಗವಂತನ ನೆನಪೇ ಅವರಿಗೆ ಬರುವದಿಲ್ಲ!

"ಅದೇನು ಮಾಯೆ ಇರಬಹುದು? ನನಗೆ ಆ ಕಷ್ಟಪರಂಪರೆಯಲ್ಲಿದ್ದಾಗ ಭಗವಂತನನ್ನು ಸ್ಮರಿಸಿಕೊಳ್ಳಬೇಕೆಂಬ ಯೋಚನೆಯೇ ಹೊಳೆಯಲಿಲ್ಲವಲ್ಲ !" ಎಂದು ಒಬ್ಬ ಗೃಹಸ್ಥನು ನನ್ನೊಡನೆ ಮಾತಾಡುವಾಗ ನುಡಿದರು. ನಾನು "ನಿಜ, ಅದು ಭಗವಂತನ ಮಾಯೆಯೇ. ಆ ಮಾಯೆಯಿಂದ ಮೋಹಿತರಾಗಿರು ವದರಿಂದ ನಮ್ಮಲ್ಲನೇಕರು, ಆತನ ಅನುಗ್ರಹದ ಛತ್ರಚ್ಛಾಯೆಯನ್ನು ಆಶ್ರಯಿಸದೆ ಇರುತ್ತೇವೆ" ಎಂದೆನು. ಅವರು "ಹಾಗೆಯೆ?" ಎಂದು ನಿರಾಶೆಯ ನಿಟ್ಟುಸಿರು ಬಿಟ್ಟರು. ಅವರ ಮನೋಗತವೇನೆಂಬುದು ನನಗೆ ಆಗ ಹೊಳೆಯಲಿಲ್ಲ. "ಭಗವಂತನ ಮಾಯೆಯೇ ಭಗವಂತನನ್ನು ಅರಿಯುವದಕ್ಕೂ ಭಗವಂತನನ್ನು ಶರಣುಹೊಂದು ವದಕ್ಕೂ ಅಡ್ಡಿಯಾಗಿದೆಯೆ? ಇನ್ನು ನಮಗೇನು ಗತಿ !" ಎಂದು ಯೋಚಿಸುತ್ತಿರುವರೋ ಎಂಬಂತೆ ಆಶಾಭಂಗದ ಭಾವವು ಅವರ ಮುಖದಮೇಲೆ ಸುಳಿದಾಡುತ್ತಿತ್ತು.

ಮೂರು ಬಾರಿಗೂ ನಿಜ, ಭಗವಂತನ ಮಾಯೆಯಿಂದ ಮೋಹಿತರಾಗಿಯೇ ಜನರು ಭಗವಂತನನ್ನು ಗುರುತಿಸಲಾರದೆ ಇರುತ್ತಾರೆ. ಆದರೆ ಹಿಂದೆ ಒಂದು ಸಂದೇಶದಲ್ಲಿ ನಾನು ಆಗಲೆ ತಿಳಿಸಿರುವಂತೆ ಭಗವಂತನು ಒಂದು ವಾಗ್ದಾನವನ್ನು ಇತ್ತಿರುತ್ತಾನೆ. "ಯಾರು ನನ್ನನ್ನೇ ಶರಣುಹೋಗುವರೋ ಅವರು ಈ ಮಾಯೆ

ಯನ್ನು ದಾಟುವರು"-ಎಂಬುದೇ ಆ ವಾಗ್ದಾನ. ಇದರ ಅರ್ಥವನ್ನು ಮನದಟ್ಟು ಮಾಡಿಕೊಳ್ಳುವದು ಕೆಲವರಿಗೆ ಕಷ್ಟವಾಗಿರಬಹುದು. ಮಾಯೆಯೇ ಭಗವಂತನ ಕಡೆಗೆ ತಿರುಗುವದಕ್ಕೆ ಅಡ್ಡಿಯಾಗಿದೆ; ಆದರೆ ಭಗವಂತನ ಕಡೆಗೆ ತಿರುಗಿದರೆ ಮಾಯೆಯನ್ನು ದಾಟಬಹುದು ! ಇದು "ಹುಚ್ಚು ಬಿಟ್ಟರೆ ಹೆಣ್ಣು ಕೊಡುತ್ತಾರೆ; ಹೆಣ್ಣು ಕೊಟ್ಟರೆ ಹುಚ್ಚು ಬಿಡುತ್ತದೆ" ಎಂಬಂತೆ ಅನ್ಯೋನ್ಯಾಶ್ರಯವಲ್ಲವೆ?-ಎಂದು ಕೆಲವರಿಗೆ ತೋರಬಹುದು. ಆದ್ದರಿಂದ ನನ್ನ ಅಭಿಪ್ರಾಯವನ್ನು ಸ್ವಲ್ಪವಿವರಿಸುವೆನು.

ಅನ್ಯೋನ್ಯಾಶ್ರಯ (ಸಿದ್ಧಿಯಾಗುವದಕ್ಕೆ ಒಂದನ್ನೊಂದು ಅವಲಂಬಿಸಿರುವದು) ಆತ್ಮಾಶ್ರಯ (ತನ್ನನ್ನು ತಾನೇ ಅವಲಂಬಿಸಿಕೊಂಡಿರುವದು)-ಎಂಬಿವು ತರ್ಕದಲ್ಲಿ ದೋಷಗಳೆನಿಸಿಕೊಂಡಿರುತ್ತವೆ. ಆದರೆ ಅನುಭವಾನುಸಾರವಾಗಿ ಮನನ ಮಾಡುವ ವರಿಗೆ ಇಂಥ ತರ್ಕದೋಷಗಳಿಂದ ಯಾವ ಅಡಚಣೆಯೂ ಆಗುವದಿಲ್ಲ. ಆದ್ದರಿಂದ ಭಗವಂತನ ವಾಕ್ಯವನ್ನು ಸ್ವಲ್ಪಬಿಡಿಸಿ ಅರ್ಥವನ್ನು ತಂದುಕೊಳ್ಳುವದಕ್ಕೆ ಯತ್ನಿಸೋಣ.

**"ದೈವೀ ಹ್ಯೇಷಾ ಗುಣಮಯೀ ಮಮ ಮಾಯಾ ದುರತ್ಯಯಾ"**

ಇದು ಗುಣಮಯವಾದ ಮಾಯೆಯು, ಇದನ್ನು ದಾಟುವದು ಕಷ್ಟ-ಎಂದು ಭಗವಂತನು ಹೇಳಿರುತ್ತಾನೆ. ಇದರ ಜೊತೆಗೆ "ಇದು ನನ್ನ ಮಾಯೆ; ನನ್ನನ್ನೇ ಯಾರು ಶರಣುಹೊಂದುವರೋ ಅವರು ಈ ಮಾಯೆಯನ್ನು ದಾಟುವರು" ಎಂದೂ ಮಾತುಕೊಟ್ಟಿರುತ್ತಾನೆ. ಈ ವಾಕ್ಯದ ಅರ್ಥವನ್ನು ಮನಸ್ಸುಕೊಟ್ಟು ವಿಚಾರಮಾಡತಕ್ಕದ್ದಿದೆ. ಏಕೆಂದರೆ ಕೇವಲ ಗುಣಮಯವಾಗಿರುವವರೆಗೆ ಇದು ಮಾಯೆಯಾಗಿ ನಮ್ಮನ್ನು ಭಗವಂತನ ಕಡೆಗೆ ಶರಣುಹೋಗದಂತೆ ತಡೆಯಾಗಿ ನಿಂತಿರುತ್ತದೆ. ಆದರೆ ಇದು "ಭಗವಂತನ ಮಾಯೆ" ಎಂಬುದನ್ನು ಯಾರು ಅರಿತು ಭಗವಂತನನ್ನೇ ಶರಣುಹೊಂದುವರೋ ಆ ಕೂಡಲೆ ಈ ಮಾಯೆಯೇ ಮಾಯವಾಗುವದು ಎಂದು ಇಲ್ಲಿ ಸ್ಪಷ್ಟವಾಗಿ ತಿಳಿಸುತ್ತದೆ.

ಮಾಯೆಗೆ ಎರಡು ಆಕಾರಗಳುಂಟು. ಮಾಯೆಯು ಮೋಹಗೊಳಿಸತಕ್ಕದ್ದು, ಜನರನ್ನು ಭಗವಂತನಿಂದ ಬಿಟ್ಟಗಲಿಸತಕ್ಕದ್ದು, ನಿತ್ಯಾನಂದವು ಜನರಿಗೆ ದಕ್ಕದಂತೆ ವಂಚಿಸತಕ್ಕದ್ದು ಎಂದು ಅನೇಕರು ತಿಳಿದುಕೊಂಡಿರುತ್ತಾರೆ. ಆದರೆ ಇದು ಭಗವಂತನ ಮಾಯೆಯು, ಭಗವಂತನೇ ಈ ರೂಪದಲ್ಲಿ ತೋರುತ್ತಿರುತ್ತಾನೆ, ಇದರ ಮೂಲಕವಾಗಿಯೇ ಭಗವಂತನನ್ನು ಸೇರಬಹುದು-ಎಂಬುದನ್ನು ಮನಸ್ಸಿಗೆ ತಂದುಕೊಂಡಿರುವವರು ಅಪೂರ್ವ. ಒಂದೇ ಮಾಯೆಯು ಎರಡು ಆಕಾರಗಳಿಂದ ಕೂಡಿರುವದು ಹೇಗೆ?-ಎಂದು ಯಾರಾದರೂ ಶಂಕಿಸಬಹುದು.

ಇದಕ್ಕೆ "ದೃಷ್ಟಿಭೇದದಿಂದ ಎರಡು ಆಕಾರಗಳೂ ಆಗಬಹುದು" ಎಂಬುದೇ ಉತ್ತರವು. ಯಾರು ಸತ್ತ್ವ, ರಜಸ್ಸು, ತಮಸ್ಸು-ಎಂಬ ಮೂರು ಗುಣಗಳ ವಶಕ್ಕೆ ಸಿಕ್ಕಿ ಗುಣಮಯವಾದ ಅಂತಃಕರಣದೃಷ್ಟಿಯಿಂದ ಜಗತ್ತನ್ನು ನೋಡುತ್ತಿರುವರೋ ಅವರಿಗೆ ಜಗತ್ತೆಲ್ಲವೂ ಗುಣಮಯವಾಗಿರುವ ಮಾಯೆಯಾಗಿರುವದು. ಅದನ್ನು ದಾಟುವದು ಅವರಿಗೆ ಬಹಳ ಕಷ್ಟವಾಗಿರುವದು. ಅಂಥವರು ಮಾಯೆಯಿಂದ ಮೋಹಿತರಾಗಿ "ಅದು ಬೇಕು, ಇದು ಬೇಡ; ಇದು ಅದಕ್ಕೆ ಸಾಧನ, ಅದು ಮತ್ತೊಂದಕ್ಕೆ ಸಾಧನ" ಎಂದು ಸಾಧ್ಯಸಾಧನಭಾವವನ್ನು ಕಲ್ಪಿಸಿಕೊಂಡು ವೃಥಾಯಾಸದ ಕರ್ಮಗಳಿಂದ ಸಂಸಾರದಲ್ಲಿ ತೊಳಲುತ್ತಿರುವರು. ಅವರಿಗೆ ಈ ಜಗತ್ತು ಎಂದೆಂದಿಗೂ ದುಃಖಮಯವಾಗಿಯೇ ತೋರುತ್ತಿರುವದು. ಆದರೆ ಯಾರು ಸತ್ಪುರುಷರು ತೋರಿಸಿಕೊಡುವ ಮಾರ್ಗವನ್ನವಲಂಬಿಸಿ, ಆ ಸತ್ಪುರುಷರ ದೃಷ್ಟಿಯಿಂದ ಜಗತ್ತನ್ನು ನೋಡಲು ಯತ್ನಿಸುವರೋ ಅವರಿಗೆ ಈ ಜಗತ್ತು ಚಿತ್ತವನ್ನು ಮೋಹಗೊಳಿಸುವ ಗುಣಮಯವಾದ ಮಾಯೆಯಾಗಿರುವದಿಲ್ಲ; ಇದು ಭಗವಂತನ ವಿಭೂತಿಗಳನ್ನು ಹರಡಿಕೊಂಡಿರುವ ಪ್ರದರ್ಶನಶಾಲೆಯಾಗಿರುವದು.

ಈಗ "ಯಾರು ನನ್ನನ್ನೇ ಶರಣುಹೋಗುವರೋ ಅವರು ಈ ಮಾಯೆಯನ್ನು ದಾಟುವರು" ಎಂಬ ವಾಗ್ದಾನವಾಕ್ಯದ ಅರ್ಥವನ್ನು ತಿಳಿದುಕೊಳ್ಳುವದಕ್ಕೆ ಸಮಯವಾಗಿರುತ್ತದೆ. ಭಗವಂತನ ಕಡೆಗೆ ತಿರುಗುವದಕ್ಕೆ ಈ ಮಾಯೆಯೇ ಅಡ್ಡಿಯಾಗಿರುವದಲ್ಲ ! ಹೀಗಿರುವಲ್ಲಿ ನಾವು ಭಗವಂತನ ಕಡೆಗೆ ತಿರುಗುವ ದಾದರೂ ಹೇಗೆ? ಆಮೇಲಲ್ಲವೆ, ಮಾಯೆಯನ್ನು ದಾಟುವ ಮಾತು?-ಎಂದು ಕೆಲವರು ಕೇಳುತ್ತಾರೆ. ಆದರೆ ಅಡ್ಡಿಯಾಗಿರುವ ಮಾಯೆ ಯಾವದು? "ನಾವು ದುಷ್ಕೃತದ ಫಲವಾಗಿ ಆಸುರಭಾವದ ಕಣ್ಣಿನಿಂದ ಕಾಣುವ ಜಗತ್ತು ದುಷ್ಕೃತಿ ಗಳಾದ ಮೂಢರು, ನರಾಧಮರು, ಮಾಯೆಯಿಂದ ಜ್ಞಾನವನ್ನು ಕಳೆದುಕೊಂಡು, ಆಸುರಭಾವವನ್ನು ಅವಲಂಬಿಸಿಕೊಂಡಿರುವದರಿಂದ ನನ್ನನ್ನು ಶರಣುಹೊಂದದೆ ಇರುತ್ತಾರೆ" ಎಂದು ಭಗವಂತನು ಅಪ್ಪಣೆಕೊಡಿಸಿರುತ್ತಾನೆ. ಆದ್ದರಿಂದ ನಮಗೆ ಅಡ್ಡಿಯಾಗಿರುವ ಮಾಯೆಯೆಂದರೆ ನಾವೇ; ನಮ್ಮ ದುಷ್ಕೃತವೇ, ನಮ್ಮ ಆಸುರಭಾವವೇ ಈ ಮಾಯೆಯನ್ನು ತೋರಿಸುತ್ತಿರುವದು. ಆದ್ದರಿಂದ ಆಸುರಭಾವವನ್ನು ಬಿಟ್ಟು ಈ ಜಗತ್ತನ್ನು ನೋಡುವದಕ್ಕೆ ಹೊರಟರೆ, ಭಗವಂತನನ್ನು ಶರಣುಹೊಂದುವದಕ್ಕೆ ಯಾವ ಅಡ್ಡಿಯೂ ಇರುವದೇ ಇಲ್ಲ!

ಆಸುರಭಾವವೆಂದರೇನು? ಸ್ವಾರ್ಥಬುದ್ಧಿಯು, ನಮ್ಮೊಳಗಿನ "ನಾನು" ಎಂಬ ಮಿಥ್ಯಾಕೇಂದ್ರವನ್ನು ಉಬ್ಬಿಸಿಕೊಂಡು ಮೆರೆಯುವದು; ಅದಕ್ಕೆ ಹೊರಗಿನ

ಜಗತ್ತೆಲ್ಲವನ್ನೂ ಹೊಂದಿಸಿಕೊಳ್ಳುವದಕ್ಕೆ ಪ್ರಯತ್ನಿಸುತ್ತಿರುವದು–ಇದೇ ಆಸುರ ಭಾವವು. ಇದೇ ದುಷ್ಕೃತವು. ಭಗವಂತನನ್ನು ಶರಣುಹೊಂದುವದಕ್ಕೆ, ಭಗವಂತನ ಅನುಗ್ರಹವನ್ನು ಪಡೆದುಕೊಂಡು ಆನಂದದಿಂದ ಬಾಳುವದಕ್ಕೆ, ಮೊಟ್ಟಮೊದಲು ನಮ್ಮೊಳಗೆ ಬದಲಾವಣೆಯಾಗಬೇಕು. ಭಗವಂತನು ದೇವದೇವನಾದ್ದರಿಂದ ನಮ್ಮೊಳಗೆ ದೈವಸಂಪತ್ತು ಕಾಣಿಸಿಕೊಂಡಮೇಲೆಯೇ ಭಗವಂತನು ನಮ್ಮ ಒಳಗೂ ಹೊರಗೂ ನಮಗೆ ಕಾಣಿಸಹತ್ತುವನು. ಆದರೆ ನಾವು ಭಗವಂತನ ದರ್ಶನವಾದ ಬಳಿಕ ನಾವು ಅವನ ಶರಣುಹೊಂದಬಹುದೆಂದೂ ಆ ಬಳಿಕವೇ ದೈವಸಂಪತ್ತು ಸಾಧ್ಯವಾಗುವದೆಂದೂ ಭಾವಿಸಿಕೊಂಡಿರುತ್ತೇವೆ. ನಮಗೆ ನಮ್ಮ ಆಸುರಭಾವವನ್ನು ಬಿಡುವದಕ್ಕೆ ಇಷ್ಟವಿಲ್ಲ. "ಹೊರಗಿನ ಲೋಕದಲ್ಲಿ ಎಲ್ಲೆಲ್ಲಿಯೂ ಸ್ವಾರ್ಥವೂ ನಿರ್ದಯೆಯೂ ತುಂಬಿರುವಲ್ಲಿ ನಾವು ನಮ್ಮ ಸ್ವಾರ್ಥವನ್ನು ನೋಡಿಕೊಳ್ಳದೆ ಇದ್ದರೆ ಆದೀತೆ? ಹೊರಗಿನ ಸಂನಿವೇಶಗಳು ಮೊದಲು ಮಾರ್ಪಡಬೇಕು; ಹೊರಗಿನ ಜನರ ನೀತಿಯ ಮಟ್ಟವು ಹೆಚ್ಚಬೇಕು; ಹೊರಗಿನವರು ಯಾರೂ ಸ್ವಾರ್ಥತೆಯಿಂದ ನಮ್ಮನ್ನು ಮೋಸಪಡಿಸಲಾರರೆಂದು ನಿಶ್ಚಿತವಾಗಬೇಕು. ಆಮೇಲೆ ಸರಳತನವನ್ನು ಇಟ್ಟುಕೊಳ್ಳಬಹುದು; ಆಮೇಲೆ ಅಹಿಂಸೆ, ಸತ್ಯ, ಪ್ರೇಮ, ಮಾರ್ದವ–ಮುಂತಾದವುಗಳನ್ನು ಅಭ್ಯಾಸಮಾಡುವದಕ್ಕಾದೀತು. ಲೋಕದ ಸದ್ಯಃಸ್ಥಿತಿಯಲ್ಲಿ ಯಾರನ್ನಾದರೂ ನೆಚ್ಚುವದಕ್ಕುಂಟೆ? ಸಾತ್ತ್ವಿಕತನವು ಈಗ ಲೋಕದಲ್ಲಿ ಗೆದ್ದೀತೆ?" ಎಂಬುದೇ ನಮ್ಮಗಳ ಭಾವನೆ. ಈ ಆಸುರಭಾವನೆಯೂ ವರ್ತನೆಯೂ ನಮಗೆ ಅಡ್ಡಿಯಾಗಿರುವ ಮಾಯೆಯನ್ನು ಹೊರಗೆ ನಮಗೆ ತೋರಿಸುತ್ತಿರುವವು.

ಆದರೆ ನಿಜವಾಗಿ ದೈವಸಂಪತ್ತನ್ನು ಅಭ್ಯಾಸಮಾಡುವದೂ ಅದನ್ನು ಅವಲಂಬಿಸಿ ನಡೆಯುವದೂ ಅಷ್ಟು ಕಷ್ಟವಾಗಿರುವದೆ? ಅಹಿಂಸೆ, ಸತ್ಯ, ಪ್ರೇಮ–ಮುಂತಾದವುಗಳನ್ನು ತೋರಿಸಿದರೆ, ಋಜುಭಾವದಿಂದಲೇ ಎಲ್ಲರಲ್ಲಿಯೂ ನಡೆದುಕೊಂಡರೆ, ನಿಜವಾಗಿಯೂ ನಮಗೆ ಈ ಲೋಕದಲ್ಲಿ ತೊಂದರೆಯಾಗುವದೆ? ದೈವಭಾವವನ್ನು ಆಚರಣೆಗೆ ತಂದವರು ಇದಕ್ಕೆ ಉತ್ತರವನ್ನು ಹೇಳಬೇಕಾಗಿದೆ. ಅದಂತಿರಲಿ. ಸದ್ಯಕ್ಕೆ ಸಂತೋಷಚಿತ್ತರಾಗಿ ಓಡಾಡುವ ಮಹಾತ್ಮರನ್ನೂ ಮುಗುಳು ನಗೆಯು ಸೂಸುತ್ತಿರುವ ನಲ್ಮೊಗದ ಮಕ್ಕಳನ್ನೂ ಹೂ ಹಣ್ಣುಗಳು ಬಿಟ್ಟಿರುವ ಮರಗಿಡಗಳನ್ನೂ ನೋಡಿದಾಗ ನಿಮ್ಮ ಮನೋಭಾವವು ಹೇಗಿರುತ್ತದೆ?– ಅದನ್ನು ಸ್ಮರಿಸಿಕೊಳ್ಳಿರಿ. ಆ ಮಹಾತ್ಮರು ಯಾರೆಂಬ ವ್ಯಕ್ತಿಪರಿಚಯವು ನಮಗೆ ಇಲ್ಲದಿದ್ದರೂ, ಆ ಮಕ್ಕಳು ಯಾರವೆಂಬ ಅರಿವು ನಮಗೆ ಇಲ್ಲದಿದ್ದರೂ, ಆ ಹೂಹಣ್ಣಿನ ಮರವು ಯಾರದ್ದು ಅಥವಾ ಯಾವ ಜಾತಿಯದು–ಎಂಬ ತಿಳಿವಳಿಕೆಯು ನಮಗೆ ಇಲ್ಲದಿದ್ದರೂ, ಅವುಗಳನ್ನು ನೋಡಿದ ಮಾತ್ರದಿಂದ ನಮಗೆ ಒಂದು

ವಿಲಕ್ಷಣವಾದ ಹರ್ಷವುಂಟಾಗುವದು; ಹೃದಯದಲ್ಲಿ ಅವಿತುಕೊಂಡಿದ್ದ ಪ್ರೇಮವು ಅಲೆಯೇಳುವದು. ಅಲ್ಲವೆ? ಅವುಗಳಲ್ಲಿ ಪ್ರತಿಯೊಂದಕ್ಕೂ "ಹೊರಗಿನ ಮನುಷ್ಯರನ್ನೂ ಸ್ಥಿತಿಗತಿಗಳನ್ನೂ ನೇರ್ಪಡಿಸುವದಕ್ಕೆ ಹೆಣಗಬೇಕಾಗದದ್ದಿಲ್ಲ; ಹೊರಗಿನವರು ನಮಗೇನು ಮೋಸವನ್ನು ಮಾಡುವರೋ ಎಂದು ಅಂಜಬೇಕಾದದ್ದೂ ಇಲ್ಲ. ನೀವು ಸರಳಹೃದಯರಾಗಿ, ಯಾವದೊಂದು ಕಲಂಕವೂ ಅಂತಃಕರಣದಲ್ಲಿಲ್ಲದಂತೆ ಶುದ್ಧದೃಷ್ಟಿಯಿಂದ ನೋಡಿರಿ. ಆಗ ಪ್ರಪಂಚವು ಎಂಥ ಸುಂದರವಾಗಿ, ಎಲ್ಲೆಲ್ಲಿಯೂ ಸುಖಮಯವಾಗಿ ಕಾಣುವದೋ ನಿಮಗೇ ಮನವರಿಕೆಯಾಗುತ್ತದೆ!" ಎಂದು ಬರೆದ ಹಲಗೆಯ ಬೋರ್ಡು ತಗಲಿಹಾಕಿರುವದೆಂದು ಭಾಸವಾಗುವದು.

ಭಗವಂತನನ್ನು ಶರಣುಹೊಂದುವದಕ್ಕೆ ಸಜ್ಜಾಗುವದಕ್ಕೆ ಎಲ್ಲಕ್ಕೂ ಮೊದಲು ನಮ್ಮಲ್ಲಿರುವ ದುಷ್ಕೃತವಾಸನೆಯನ್ನು ಕಿತ್ತುಹಾಕಬೇಕು. ನಮ್ಮಲ್ಲಿರುವ ಅಸತ್ಯ, ಸಂಶಯಚಿತ್ತತೆ, ಅಂಜಿಕೆ, ದಂಭ, ದರ್ಪ, ಅಭಿಮಾನ, ಹಿಂಸೆ-ಮುಂತಾದ ಪ್ರವೃತ್ತಿಗಳನ್ನು ಬೇರುಮಟ್ಟ ಕಿತ್ತುಹಾಕಬೇಕು. ಇವುಗಳನ್ನು ಹೋರಾಟದಿಂದ ಹೊಡೆದೋಡಿಸುವದಕ್ಕೆ ಪ್ರಯತ್ನಮಾಡಬಾರದು; ಹಾಗಾದರೆ ಅವು ಮತ್ತಷ್ಟು ಬಲವಾಗುವವು. ಆದರೆ ಸತ್ಯ, ವಿಶ್ವಾಸ, ಧೈರ್ಯ, ವಿನಯ, ನಮ್ರತೆ, ಪರೋಪಕಾರ-ಮುಂತಾದ ಪ್ರವೃತ್ತಿಗಳ ವಾಸನೆಗಳನ್ನು ಬಲಪಡಿಸಿಕೊಳ್ಳಬೇಕು. ಹೀಗೆ ಮಾಡುವದರಿಂದಲೇ ನಮ್ಮ ಸುತ್ತುವಳೆಯವು ಸೌಮ್ಯವಾಗುವದು, ಸುಪಥವಾಗುವದು, ಚಿತ್ತಾಕರ್ಷಕವಾಗುವದು. ಪ್ರಪಂಚವು ದುಃಖಮಯವೆಂಬ ತಪ್ಪುತಿಳಿವಳಿಕೆಯು ಹಾರಿಹೋಗುವದು.

ಹೊರಗಿನ ದೃಶ್ಯಗಳನ್ನು ಕಂಡು ಸಂಶಯಪಡುವದು, ಅಂಜುವದು, ಎದುರಿಸುವದು, ಒಂದಿರಿಂದೊಂದನ್ನು ಸಂಪಾದಿಸಿಕೊಳ್ಳುವದಕ್ಕೆ ಅಥವಾ ಒಂದನ್ನೊಂದು ಪರಿಹರಿಸಿಕೊಳ್ಳುವದಕ್ಕೆ ಹವಣಿಸುವದು-ಇಂಥ ಆಯಾಸದ ಮಾರ್ಗವನ್ನು ಬಿಟ್ಟು ನಂಬಿಕೆಯಿಡುವದು, ಧೈರ್ಯದಿಂದ ವರ್ತಿಸುವದು, ಬಂದ ಘಟನೆಗಳನ್ನು ಸುಖವಾಗಲಿ, ದುಃಖವಾಗಲಿ ಸಮತೆಯಿಂದ ಸ್ವಾಗತಿಸುವದು-ಇಂಥ ಪ್ರತಿಪಕ್ಷಭಾವನೆಯಿಂದ ವರ್ತಿಸುವದು, ಸಂತೋಷಚಿತ್ತದ ಜೀವನಕ್ಕೆ ಮೊದಲನೆಯ ಹೆಜ್ಜೆ. ಈ ಭಾವನೆಯಿಂದಲೇ ನಮ್ಮ ಹೊರಗಿನ ಪ್ರತಿಕೂಲ ದೃಶ್ಯಗಳು ಬಲುಮಟ್ಟಿಗೆ ಮರೆಯಾಗುವವು; ನಮಗೆ ಅನುಕೂಲವಾದ ದೃಶ್ಯಗಳೂ ರೂಪುಗೊಳ್ಳುವವು. ಆದರೆ ಇದಕ್ಕಿಂತ ಇನ್ನೂ ಒಂದು ಹೆಜ್ಜೆ ಮುಂದಿಡುವದಕ್ಕೆ ಬರುತ್ತದೆ. ಅದೇನೆಂದರೆ ಭಗವದ್ಭಕ್ತರ ಕಣ್ಣಿನಿಂದ ನಮ್ಮ ಸುತ್ತಲೂ ಕಾಣುವ ಪ್ರಪಂಚವನ್ನು ನೋಡುವದಕ್ಕೆ ಪ್ರಯತ್ನಿಸುವದು. ಆ ದೃಷ್ಟಿಯಿಂದ ನಾವು

ಲೋಕವ್ಯವಹಾರವನ್ನು ನೋಡುವದಕ್ಕೆ ಮೊದಲುಮಾಡಿದರೆ, ನಮಗೆ ಈ ಮುಂಚೆ ಮೋಹವನ್ನುಂಟುಮಾಡುತ್ತಿದ್ದ ಭಗವನ್ಮಾಯೆಯು ತನ್ನ ರೂಪವನ್ನೇ ಬದಲಾಯಿಸಿ ಕೊಳ್ಳುವದು. ಇನ್ನು ಮುಂದೆ ಅದು ಮೋಹಕಮಾಯೆಯಾಗಿರುವದರ ಬದಲು ಭಗವಂತನ ಬಳಿಗೆ ಹೋಗುವದಕ್ಕೆ ಮಾರ್ಗದರ್ಶಕವಾದ ಮಾಯೆಯಾಗುವದು!

ಭಗವದ್ಭಕ್ತರು ಪ್ರಪಂಚವನ್ನು ಹೇಗೆ ನೋಡುತ್ತಾರೆ? ಅವರಿಗೆ ಹೊರಗಿನ ಘಟನೆಗಳ ವಿಷಯದಲ್ಲಾಗಲಿ ಜನರ ವಿಷಯದಲ್ಲಾಗಲಿ, ಯಾವ ಸಂಶಯವೂ ಇರುವದಿಲ್ಲ. ಇದರ ಬದಲು ಅವರಿಗೆ ಹೊರಗಿನ ದೃಶ್ಯಗಳಲ್ಲಿ ಪೂರ್ಣವಾದ ವಿಶ್ವಾಸವಿರುವದು. ಹೊರಗಿನ ಲೋಕದಲ್ಲಿ ದುರ್ಜನರಿರುವರೆಂಬ ಹೆದರಿಕೆ ಯಾಗಲಿ ಅವರಿಗೆ ತಕ್ಕ ಪ್ರತೀಕಾರವನ್ನು ಮಾಡಬೇಕೆಂಬ ದ್ವೇಷಬುದ್ಧಿಯಾಗಲಿ ಇರುವದಿಲ್ಲ; ಅದರ ಬದಲು ಅವರು ಎಲ್ಲರನ್ನೂ ಪ್ರೇಮದಿಂದ ಸ್ವಾಗತಿಸುತ್ತಿರು ವರು. ಅವರಿಗೆ ಸುತ್ತುವಳೆಯದಲ್ಲಿ ಮೆಚ್ಚುಗೆಯೂ ಮೈತ್ರಿಯೂ ಕರುಣೆಯೂ ಪ್ರೇಮವೂ ಹೆಚ್ಚುತ್ತಿರುವವು. ಅವರು ಯಾವಾಗಲೂ ಆನಂದಭರಿತವಾದ ಹೃದಯದಿಂದ ಪ್ರಸನ್ನಚಿತ್ತರಾಗಿ ವರ್ತಿಸುತ್ತಿರುವರು. ಇದಕ್ಕೆ ಮುಖ್ಯವಾದ ಕಾರಣವೇನೆಂದರೆ, ಅವರಿಗೆ ಹೊರಗಿನ ಯಾವ ದೃಶ್ಯವೂ ತಮಗಿಂತ ಬೇರೆಯಾಗಿರುವ, ತಮಗೆ ಪ್ರತಿಕೂಲವಾದ, ಒಂದಾನೊಂದು ಪ್ರಬಲಶಕ್ತಿಯಾಗಿ ಕಾಣಿಸುವದಿಲ್ಲ. ಎಲ್ಲೆಲ್ಲಿಯೂ ಅವರಿಗೆ ಭಗವಂತನ ಮಹಾವಿಭೂತಿಯೇ ಕಾಣಿಸುತ್ತಿರುವದು. ಎಲ್ಲಾ ಪ್ರಾಣಿಗಳೂ ಎಲ್ಲಾ ಮನುಷ್ಯರೂ ಭಗವಂತನೆಂಬ ಸೂರ್ಯನಿಂದ ಹೊರಟುಬಂದಿರುವ ಕಿರಣಗಳೆಂಬ ಭಾವನೆಯು ಅವರ ಹೃದಯದಲ್ಲಿ ತುಂಬಿಕೊಂಡಿರುವದು. ಇದರಿಂದಲೇ ಅವರಿಗೆ ಎಲ್ಲರಲ್ಲಿಯೂ ಮೈತ್ರಿಯೂ ಕರುಣೆಯೂ ಪ್ರೇಮವೂ ಉಂಟಾಗಿರುತ್ತವೆ.

ನಿಮ್ಮ ಸುತ್ತಲೂ ಇರುವ ದೃಶ್ಯಗಳಲ್ಲಿ ಭಗವಂತನ ವಿಭೂತಿಗಳನ್ನು ಕಾಣುವದಕ್ಕೆ ಪ್ರಯತ್ನಿಸಿರಿ. ಆಗ ಭಗವಂತನ ಮಾಯೆಯು ನಿಮ್ಮನ್ನು ಆತನ ಪ್ರೇಮದ ಅರಮನೆಗೆ ಕರೆದೊಯ್ಯುವ ಒಲವಿನ ದೂತಿಯಾಗುವಳು. ಮಾಯೆಯೇ ಭಗವಂತನನ್ನು ಸೇರುವದಕ್ಕೆ ಅಡ್ಡಿಯೆಂಬ ತಪ್ಪುತಿಳಿವಳಿಕೆಯು ಹಾರಿಹೋಗುವದು. ಜೀವರುಗಳೆಲ್ಲರನ್ನೂ ತನ್ನ ಕಡೆಗೆ ಸೆಳೆದುಕೊಂಡು ತನ್ನ ನಿತ್ಯಾನಂದವನ್ನು ಸೂರೆಗೊಡುವದಕ್ಕೆಂದು ಹರಡಿರುವ ಯೋಗಮಾಯೆಯೇ ಈ ಜಗತ್ತೆಂಬ ಸದ್ಬುದ್ಧಿಯು ಅಂಕುರಿಸುವದು.

ಆಸುರಭಾವವನ್ನು ಹೊಂದಿರುವ ದುಷ್ಕೃತಿಗಳಿಗೆ ಈ ಜಗತ್ತು ಒಂದು ದೊಡ್ಡ ಪ್ರತಿಬಂಧಕವಾಗಿ ಕಾಣುತ್ತದೆ. ಅವರಿಗೆ ಈ ಜಗದ್ರೂಪವಾದ ಮಾಯೆಯು

ಅವರನ್ನು ನೂರಾರು ಆಶಾಪಾಶಗಳಿಂದ ಬಿಗಿದು ನಿಂತಲ್ಲಿ ನಿಲ್ಲದಂತೆ 'ಅದು ಬೇಕು,' 'ಇದು ಬೇಡ,' 'ಅದು ಹೋಯಿತಲ್ಲ !' 'ಇದನ್ನು ಇವರು ಕಸಿದು ಕೊಂಡರಲ್ಲ !' ಎಂದು ರಾಗದ್ವೇಷಗಳಿಂದ ಹರಿದಾಡುತ್ತಿರುವಂತೆ ಮಾಡುತ್ತದೆ. ಆದರೆ ಯಾರು ಸುಕೃತಿಗಳಾದ ದೈವಸಂಪತ್ತಿನವರೋ ಅವರು 'ನಾನು' 'ನನ್ನದು' ಎಂಬ ಭಾವನೆಯಿಂದ ಜಗತ್ತನ್ನು ನೋಡುವದಿಲ್ಲ; ಅದನ್ನು ಸಹಜವಾದ ಕಣ್ಣಿನಿಂದ ನೋಡುತ್ತಾರೆ. ಆಗ ಅವರಿಗೆ ಜಗತ್ತೆಲ್ಲವೂ ಭಗವಂತನ ವಿಭೂತಿಗಳಿಂದ ತುಂಬಿರುವಂತೆ ಕಾಣುತ್ತಿರುವದು. ಭೂಮಿಯ ಮೇಲಿರುವ ಮನುಷ್ಯರು, ಜಂಗಮ ಪ್ರಾಣಿಗಳು, ಸ್ಥಾವರಪ್ರಾಣಿಗಳು-ಎಲ್ಲವೂ ಪರಮೇಶ್ವರನ ಕಲೆಯಿಂದ ತುಂಬಿ ತುಳುಕುವಂತೆ ಕಾಣುತ್ತಿರುವದು. ನದೀಸಮುದ್ರಗಳ ನೀರು, ಅತ್ತಿತ್ತ ಸುಳಿದಾಡುವ ಗಾಳಿ, ಎಲ್ಲೆಲ್ಲಿಯೂ ವ್ಯಾಪಿಸಿರುವ ಚಂದ್ರ ಸೂರ್ಯನಕ್ಷತ್ರಗಳ ಬೆಳಕುಗಳು, ಎಲ್ಲವನ್ನೂ ತನ್ನೊಳಗಿಟ್ಟುಕೊಂಡಿರುವ ಆಕಾಶ-ಇವೆಲ್ಲ ಪರಮಾತ್ಮನ ಮಹಿಮೆಯನ್ನೇ ಹಾಡಿ ಹೊಗಳುತ್ತಿರುವಂತೆ ಅವರಿಗೆ ಭಾಸವಾಗುತ್ತದೆ. ಅವರಿಗೂ ಜಗತ್ತು ಮಾಯೆಯೇ ಸರಿ. ಆದರೆ ದುಷ್ಕೃತಿಗಳಿಗೆ ತೋರುವ ಮೋಹಕಮಾಯೆಯಾಗಿರುವದಿಲ್ಲ, ಅದು ಅಂಜಿಕೆಯನ್ನೂ ಶೋಕಮೋಹಗಳನ್ನೂ ತೊಲಗಿಸುವ, ಪ್ರೇಮವನ್ನೂ ಧೈರ್ಯವನ್ನೂ ಉತ್ಸಾಹವನ್ನೂ ಹೆಚ್ಚಿಸುವ ಸಾತ್ತ್ವಿಕ ಮಾಯೆಯಾಗಿರುವದು.

## 3. ಧರ್ಮ

ಪರಮಾತ್ಮ, ಭಗವಂತ, ಪರಮೇಶ್ವರ, ದೇವರು-ಎಂಬ ಬಗೆಬಗೆಯ ಹೆಸರುಗಳಿಂದ ಒಂದಾನೊಂದು ತತ್ತ್ವವನ್ನು ಜನರ ಲಕ್ಷ್ಯಕ್ಕೆ ತರುವದು ಈ ಅಧ್ಯಾತ್ಮಪತ್ರಿಕೆಯ ಒಂದು ಉದ್ದೇಶವು. ಕೆಲವು ಜನರಿಗೆ ಇದು ರುಚಿಸುವದಿಲ್ಲ. ಅವರ ಮನಃಸ್ಥಿತಿಯು ಇನ್ನೂ ಆ ಕಡೆಗೆ ತಿರುಗುವದಕ್ಕೆ ಸಿದ್ಧವಾಗಿರುವದಿಲ್ಲ. ಆದ್ದರಿಂದ ಅವರು ಪರಮಾತ್ಮನಿದಾನೆಂಬುದಕ್ಕೆ ಪ್ರಮಾಣವೇನು? 'ಭಗವಂತ, ಭಗವಂತನ' ಎಂದು ಹೇಳಿ, ಕೇಳಿ ಸಾಕಾಗಿದೆ; ಆದರೆ ಭಗವಂತನನ್ನು ಕಂಡವರು ಯಾರು? ಪರಮೇಶ್ವರನ ಆಳ್ವಿಕೆಯಲ್ಲಿ ಜಗತ್ತಿದ್ದರೆ ಇಷ್ಟು ಸ್ವೇಚ್ಛಾಚಾರವೇಕೆ ಲೋಕದಲ್ಲಿ ಕಂಡುಬರುತ್ತದೆ? 'ದೇವರು', 'ದೇವರು' ಎಂದು ಗುಡಿಗಳನ್ನು ಕಟ್ಟಿಸಿಗಂಟೆಯನ್ನು ಬಾರಿಸಿದರೆ ದೇವರನ್ನು ಕಂಡಂತೆ ಆಯಿತೆ?-ಎಂದು ಅವರು ಆಕ್ಷೇಪಿಸುತ್ತಿರುತ್ತಾರೆ.

ಅಧ್ಯಾತ್ಮದೃಷ್ಟಿಯು ಪೂರ್ಣಪುಣ್ಯದಿಂದ ಯಾರಿಗೆ ದೊರಕಿರುವದೋ ಅವರಿಗೆ ಈ ಪ್ರಶ್ನೆಗಳಿಂದ ಯಾವ ಹಾನಿಯೂ ಇರುವದಿಲ್ಲ. ಏಕೆಂದರೆ 'ಪರಮಾತ್ಮ' ಎಂದರೆ ನಮೆಲ್ಲರಿಗೂ ನಿಜವಾಗಿ ಸ್ವರೂಪವಾಗಿರುವ ತತ್ತ್ವವು. ಪರಮಾತ್ಮನಿಲ್ಲವೆನ್ನುವವರು ನನ್ನ ಆತ್ಮನು ಇಲ್ಲ, ನನ್ನ ಸ್ವರೂಪವು ಇಲ್ಲ-ಎಂದವರಾಗುತ್ತಾರೆ.

ಅದು ಯಾರಿಗೆ ತಾನೆ ಇಷ್ಟ? 'ಭಗವಂತನ' ಎಂದರೆ ಸಮಗ್ರವಾದ ಐಶ್ವರ್ಯವೂ ಧರ್ಮವೂ ಯಶಸ್ಸೂ ಶ್ರೀಯೂ ಜ್ಞಾನವೂ ವೈರಾಗ್ಯವೂ ಇರುವಾತನು. ಭಗವಂತನೆಂಬ ಸೂರ್ಯನ ಕಿರಣಗಳಾದ ಐಶ್ವರ್ಯ ಧರ್ಮಾದಿಗಳು ನಮ್ಮ ಕಣ್ಣೆದುರಿಗೇ ಸುಳಿದಾಡುತ್ತಿರುವಾಗ ಭಗವಂತನನ್ನು ಕಾಣಲಿಲ್ಲವೆಂಬವನು ಎಂಥ ಕುರುಡನು? ಪರಮೇಶ್ವರನೆಂದರೆ ಈಶ್ವರರಾದ ವಾಯು, ಅಗ್ನಿ, ಸೂರ್ಯ, ಪರ್ಜನ್ಯ, ಮೃತ್ಯು–ಮೊದಲಾದವರನ್ನು ಕೂಡ ಕಟ್ಟಲೆಯಲ್ಲಿರುವಾತನು. ವಾಯ್ವಾದಿಗಳು ಬಿಡದೆ ನಿಯಮದಿಂದ ಎಷ್ಟರಮಟ್ಟಿಗೆ ಕೆಲಸಮಾಡುತ್ತಿರುವ ರೆಂಬುದನ್ನು ವಿಜ್ಞಾನಶಾಸ್ತ್ರದವರೆಲ್ಲರೂ ಬಲ್ಲರು. ಹೀಗಿರುವಲ್ಲಿ ಪರಮೇಶ್ವರ ನೊಬ್ಬನು ಇದಾನೆಂಬುದು ಸೂರ್ಯಪ್ರಕಾಶದಷ್ಟೇ ಸ್ಫುಟವಲ್ಲವೆ? 'ದೇವರು' ಎಂದರೆ ಸ್ವಯಂಪ್ರಕಾಶನು ಎಂದರ್ಥ. ನಮ್ಮಲ್ಲೆಲ್ಲ ತಾನೇ ಬೆಳಗುವ ಚೈತನ್ಯದ ಬೆಳಕು ಇಲ್ಲದೆ ಇದ್ದರೆ ನಮಗೆ ಈ ಜಗತ್ತಿನ ದೃಶ್ಯಗಳು ಕತ್ತಲೆಯಲ್ಲಾಗುವ ನಾಟ್ಯವಾಗಿಬಿಡುತ್ತಿದ್ದವಲ್ಲವೆ? ಹೀಗಿರುವಲ್ಲಿ ದೇವರು ಇಲ್ಲ ಎಂಬ ಮಾತು 'ನನಗೆ ನಾಲಗೆಯಿಲ್ಲ!' ಎಂದು ಕೂಗಿಕೊಳ್ಳುವವನ ಮಾತಿನಂತೆ ನಗೆಗೇಡಲ್ಲವೆ? ಹೀಗೆಂದೇ ಅಧ್ಯಾತ್ಮದೃಷ್ಟಿಯ ಮಹಾತ್ಮರು ಗಟ್ಟಿಯಾಗಿ ನಂಬಿರುತ್ತಾರೆ. ಆದ್ದರಿಂದ ಅವರಿಗೆ ನಾಸ್ತಿಕ್ಯದ ಹಾವಳಿಯಿಂದ ಯಾವ ಪೆಟ್ಟೂ ತಗಲುವಂತಿರುವದಿಲ್ಲ. ಆದರೆ ಹೊಸದಾಗಿ ಹುಟ್ಟಿರುವ ಸೊಸಿಗಳಿಗೆ ರಕ್ಷಕವಾದ ಬೇಲಿಯು ಅವಶ್ಯ ವಾಗಿರುವಂತೆ ಈಗೀಗ ಧರ್ಮದ ಕಡೆಗೆ ತಿರುಗುತ್ತಿರುವ ಜಿಜ್ಞಾಸುಗಳಿಗೆ ಅಧ್ಯಾತ್ಮ ಧರ್ಮದ ಆವಶ್ಯಕತೆಯನ್ನು ಮನಗಾಣಿಸುವ ವಾಕ್ಯಗಳು ಪ್ರೋತ್ಸಾಹಕವಾಗಿರುತ್ತವೆ. ಆದ್ದರಿಂದ ಅಂಥವರಿಗಾಗಿ ಎರಡು ಮಾತುಗಳನ್ನು ಈ ಸಂದೇಶದಲ್ಲಿ ಬರೆಯುವೆನು.

ಮನುಷ್ಯನಿಗೆ ಸುಖವು ಬೇಕು, ದುಃಖವು ಬೇಡ, ಆದ್ದರಿಂದ ಯಾವ ಯಾವದು ಸುಖದ ಪ್ರಾಪ್ತಿಗೂ ದುಃಖದ ನಿವೃತ್ತಿಗೂ ಸಾಧಕವೆಂದು ಅವನು ಭಾವಿಸುವನೋ ಅದೆಲ್ಲವನ್ನೂ ತನಗೆ ಅವಶ್ಯವೆಂದು ಬಗೆಯುವದು ಸಹಜ ವಾಗಿರುತ್ತದೆ. ಅನ್ನ, ಬಟ್ಟೆ, ಹೊಲ, ಮನೆ, ಹಣ–ಇವುಗಳ ಆವಶ್ಯಕತೆ ಏನು? ಎಂದು ಯಾವನೂ ಕೇಳುವದಿಲ್ಲ. ಏಕೆಂದರೆ ಸುಖಕ್ಕೆ ಇವು ಬೇಕೇ ಬೇಕೆಂಬುದು ಮನುಷ್ಯಸಾಮಾನ್ಯದ ಭಾವನೆ. ಸ್ವಲ್ಪ ಮೇಲುಮಟ್ಟದವರು ಈ ಭೋಗಸಾಮಗ್ರಿ ಗಳನ್ನು ಸಂಪಾದಿಸಿ ಸರಿಯಾಗಿಟ್ಟುಕೊಂಡು ಭೋಗಿಸುವ ತಿಳಿವಳಿಕೆಯನ್ನೂ ಅವಶ್ಯವೆಂದು ಭಾವಿಸಿರುತ್ತಾರೆ. ನೆಂಟರಿಷ್ಟರು, ನೆರೆಯವರು, ದೇಶದವರು, ಸರಕಾರ, ಲೌಕಿಕವಿದ್ಯಾಭ್ಯಾಸ, ವ್ಯವಸಾಯ, ವ್ಯಾಪಾರ, ಕೈಕೆಲಸಗಳು–ಇವುಗಳ ತಿಳಿವಳಿಕೆಯು ಮನುಷ್ಯಜೀವನಕ್ಕೆ ಅತ್ಯವಶ್ಯವೆಂಬ ಭಾವನೆಗೆ ಅವೆಲ್ಲ ಸುಖಸಾಮಗ್ರಿ ಗಳನ್ನು ಒದಗಿಸಿಕೊಡುವವೆಂಬ ನಂಬಿಕೆಯೇ ತಳಹದಿಯಾಗಿರುತ್ತದೆ.

ಆದರೆ ಲೋಕದಲ್ಲಿ ಎಲ್ಲಾ ಸಾಮಗ್ರಿಗಳೂ ಸಿಕ್ಕಿದರೂ ಅವುಗಳನ್ನು ಉಪಯೋಗಿಸುವ ತಿಳಿವಳಿಕೆಯೂ ಉಂಟಾದರೂ ಜೀವನವು ಸುಖಮಯ ವಾಗುವದಕ್ಕೆ ಮತ್ತೊಂದು ಅತ್ಯವಶ್ಯವಾದ ಸಾಧನವು ಬೇಕಾಗಿರುತ್ತದೆ. ಅದು ಯಾವದೆಂದರೆ **ಮನಃಶಾಂತಿಯು**. ಉತ್ತಮವಾದ ಭೋಜನವು ಕೂಡ ಸವಿಯಾಗಿ ತೋರುವದಕ್ಕೆ ಮನಃಶಾಂತಿಯು ಇದ್ದೇಇರಬೇಕು. ಮನಃಶಾಂತಿ ಯಿಲ್ಲದವನು ಎಂಥ ವೇಶಭೂಷಣಗಳನ್ನು ತೊಟ್ಟಿದ್ದರೂ ಅವುಗಳಿಂದ ಅವನಿಗೆ ಸುಖವು ತೋರುವದರ ಬದಲು ಕಿರಿಕಿರಿಯೇ ಹೆಚ್ಚಾಗುವದು. ಎಷ್ಟು ದವಸ ಧಾನ್ಯಗಳು ತುಂಬಿದ್ದರೂ ಎಂಥ ವಿಶಾಲವಾದ ಭವ್ಯಭವನದಲ್ಲಿ ವಾಸವಾಗಿದ್ದರೂ ಪೆಟ್ಟಿಗೆಯಲ್ಲಿ ಎಷ್ಟೇ ಹಣದ ಥೈಲಿಗಳು ಇರುತ್ತಿದ್ದರೂ ಮನಸ್ಸಿನಲ್ಲಿ ಶಾಂತಿಯಿಲ್ಲದಾಗ ಅವು ಯಾವವೂ ಸುಖವನ್ನು ಕೊಡಲಾರದೆ ಇರುವವು. ಭೋಗಸಾಮಗ್ರಿಗಳನ್ನು ಸಂಪಾದಿಸುವದರಲ್ಲಿ ಎಷ್ಟೇ ಚತುರನಾಗಿದ್ದರೂ ಆ ಸಾಮಗ್ರಿಗಳಿಂದ ಅಥವಾ ಅವುಗಳನ್ನು ಸಂಪಾದಿಸುವ ನೈಪುಣ್ಯದಿಂದ ಸುಖವನ್ನು ಹಿಂಡಿಕೊಳ್ಳುವದು ಆಗಲಾರದು. ಮನಸ್ಸಿನಲ್ಲಿರಬೇಕಾದ ಶಾಂತಿಯನ್ನೂ ಸುಖವನ್ನೂ ಹೊರಗಿನ ಯಾವ ಸಾಮಗ್ರಿಯಿಂದಲೂ ಯಾವ ಹಣದ ರಾಶಿಯಿಂದಲೂ ಕೊಂಡು ಕೊಳ್ಳುವದು ಆಗಲಾರದು. ಐಶ್ವರ್ಯವಂತರನೇಕರು ಈ ಅಭಿಪ್ರಾಯವನ್ನು ಅನುಭವದಿಂದ ಕಂಡುಕೊಂಡಿರುತ್ತಾರೆ. ಈಗ ಕಂಡುಕೊಳ್ಳದೆ ಇರುವವರು ಇನ್ನು ಮುಂದೆಯಾದರೂ ಒಂದಾನೊಂದು ಕಾಲಕ್ಕೆ ಅವಶ್ಯವಾಗಿ ಕಂಡುಕೊಳ್ಳುವರು.

'ದುಡ್ಡಿದ್ದವನು ದೊಡ್ಡಪ್ಪ' ಎಂದು ಕೆಲವರು ಹೇಳಿಕೊಳ್ಳುವದುಂಟು. ಚಿನ್ನವಿದ್ದವನಲ್ಲಿಗೆ ತನ್ನವರಾಗಿ ಹಲವರು ಬಂದು ಸೇರಿಕೊಳ್ಳುತ್ತಾರೆ ಎಂಬುದು ಅವರ ಅಭಿಪ್ರಾಯ. ಆದರೆ ಮುಟ್ಟಿದ್ದೆಲ್ಲ ಬಂಗಾರವಾಗಲಿ ಎಂಬ ವರವನ್ನು ಪಡೆದುಕೊಂಡ 'ಮೈದಾಸ'ನೆಂಬವನ ಕಥೆಯನ್ನು ಗ್ರೀಕರು ಬಣ್ಣಿಸಿರುತ್ತಾರಷ್ಟೆ; ಅದನ್ನು ನೆನಪಿಸಿಕೊಂಡವರಿಗೆ ಬರಿಯ ಚಿನ್ನದ ಅನರ್ಥಗಳು ವ್ಯಕ್ತವಾಗುವವು. ಮೈದಾಸನ ವರವು ಸಫಲವಾಗುವ ಹೊತ್ತಿಗೆ ಅವನು ಕುಡಿಯುವ ಬಿಸಿಯ ಪಾನಕವು ಚಿನ್ನದ ಪಾಕವಾಯಿತು; ಊಟಮಾಡುವ ಅನ್ನವು ಬಿಸಿಚಿನ್ನದ ಮುದ್ದೆಯಾಯಿತು; ತಾನು ಆಲಂಗಿಸಿಕೊಂಡ ಮುದ್ದು ಕುವರಿಯು ಚಿನ್ನದ ಪುತ್ಥಳಿಯಾದಳು. ವಸ್ತುಗಳಲ್ಲಿರುವ ಸೌಂದರ್ಯವು, ಹೂಗಳ ಘಮಘಮಿಸುವ ಪರಿಮಳವು, ಇಂಪಿನ ನಾದವನ್ನು ಎಬ್ಬಿಸಬಲ್ಲ ವೀಣೆಮದ್ದಳೆಗಳು, ಮಲಗುವ ಸುಪ್ಪತ್ತಿಗೆ, ಉಣ್ಣುವ ಸವಿಯಾದ ಮಿಷ್ಟಾನ್ನ–ಎಲ್ಲವೂ ಚಿನ್ನದ ರಾಶಿಯಾದರೆ ಅದು ಯಾರಿಗೆ ತಾನೆ ಬೇಕು? ಹೀಗೆಯೇ ಶಾಂತಿಸುಖಗಳಿಲ್ಲದ ಹೊರಗಿನ ಭೋಗಸಾಮಗ್ರಿಗಳೆಲ್ಲವೂ ಭಯಂಕರವಾದ ಹೊರೆಯಾಗಿ ಕಾಣಿಸುವವು.

ಹೊರಗಿನ ಸಾಮಗ್ರಿಗಳು ಯಾವವೂ ಇಲ್ಲದಿದ್ದರೂ ಚಿಂತೆಯಿಲ್ಲ; ನಮಗೆ ಶಾಂತಿಸುಖಗಳೇ ಬೇಕು ಎನ್ನುವೆವು. ಅಲ್ಲವೆ?

ಮನುಷ್ಯನು ಸಮಾಜಜೀವಿ. ಸಾಮಾನ್ಯವಾಗಿ ಯಾವನೊಬ್ಬನೂ ತನ್ನ ಹೊರಗಿನ ಮಾನವಸಮಾಜವನ್ನು ಬಿಟ್ಟು ಏಕಾಂತವಾಗಿ ಕಾಡುಗಳಲ್ಲಿಯೂ ಬೆಟ್ಟದ ಗವಿಗಳಲ್ಲಿಯೂ ಒಂಟಿಯಾಗಿದ್ದು ಹುಲಿಕರಡಿಗಳ ಸಹವಾಸದಲ್ಲಿರಬೇಕೆಂದು ಬಯಸುವದಿಲ್ಲ; ಅಥವ ತಾನೊಬ್ಬನೇ ಭೂತಪಿಶಾಚಿಗಳಂತೆ ಅಲೆದಾಡುತ್ತಿರಬೇಕೆಂದೂ ಇಚ್ಛಿಸುವುದಿಲ್ಲ. ಮನುಷ್ಯನಿಗೆ ಯಾವ ಭೋಗಸಾಮಗ್ರಿಗಳಾಗಲಿ, ಅವುಗಳನ್ನು ಸಂಪಾದಿಸಿಕೊಳ್ಳುವ ತಿಳಿವಳಿಕೆಯಾಗಲಿ ತನ್ನ ಸುತ್ತಲೂ ಇರುವ ಸಮಾಜದಿಂದಲೇ ಬರಬೇಕಾಗಿರುತ್ತದೆ. ಆದ್ದರಿಂದ ಪ್ರತಿಯೊಬ್ಬನೂ ತನ್ನ ಸುಖಶಾಂತಿಗಳನ್ನು ಸಮಾಜದ ಸುಖಶಾಂತಿಗಳೊಡನೆಯೇ ಇಟ್ಟುಕೊಳ್ಳಬೇಕಾಗುತ್ತದೆ. ಯಾವ ಜನಾಂಗದಲ್ಲಿ ಬಹುಜನರಿಗೆ ಸುಖಶಾಂತಿಗಳಿರುವದಿಲ್ಲವೋ ಅಲ್ಲಿ ವ್ಯಕ್ತಿಗಳಿಗೂ ಸುಖಶಾಂತಿಗಳು ದೊರಕುವದು ಕಡುಕಷ್ಟವಾಗಿರುತ್ತದೆ. ಆದ್ದರಿಂದ ನನ್ನ ಮತ್ತು ನನ್ನ ಸುತ್ತಲಿರುವ ಸಮಾಜದ ಶಾಂತಿಸುಖಗಳು ಹೇಗೆ ದೊರಕಿಯಾವು?–ಎಂಬುದನ್ನು ಪ್ರತಿಯೊಬ್ಬ ವಿವೇಕಿಯೂ ವಿಚಾರಿಸುವದು ಅಗತ್ಯ

ಶಾಂತಿಯಲ್ಲಿ ನೆಲಸಿ ಅದರಿಂದ ಕೆಳಕ್ಕೆ ಜಾರಿಬೀಳದಂತೆ ಎಲ್ಲರನ್ನೂ ಎತ್ತಿ ಹಿಡಿಯುವದು ಯಾವದು? ಇದನ್ನು 'ಧರ್ಮ' ಎಂಬ ಹೆಸರಿನಿಂದ ನಮ್ಮ ಉಪನಿಷತ್ತುಗಳು ಕರೆಯುತ್ತವೆ.

**"ಧರ್ಮವು ಇಡಿಯ ಜಗತ್ತಿಗೇ ಪ್ರತಿಷ್ಠೆಯು. ಲೋಕದಲ್ಲಿ ಯಾವನು ಧರ್ಮಿಷ್ಠ ನಾಗಿರುವನೋ ಅವನನ್ನು ಪ್ರಜೆಗಳೆಲ್ಲರೂ ಬಳಿಸಾರುವರು. ಧರ್ಮದಿಂದ ಪಾಪವನ್ನು ತೊಲಗಿಸಿಕೊಳ್ಳಬಹುದು. ಧರ್ಮದಲ್ಲಿ ಎಲ್ಲವೂ ನಿಂತಿರುತ್ತದೆ. ಆದ್ದರಿಂದ ಧರ್ಮವೇ ಹೆಚ್ಚಿನದೆಂದು ಬಲ್ಲವರು ಹೇಳುತ್ತಾರೆ"**

–ಮಹಾನಾರಾಯಣೋಪನಿಷತ್ತು

ಚೇತನಾಚೇತನರೂಪವಾದ ಪ್ರಪಂಚಕ್ಕೆಲ್ಲ ಶಾಂತಿಯನ್ನು ಕೊಟ್ಟು ಸುವ್ಯವಸ್ಥೆಯಲ್ಲಿರಿಸಬಲ್ಲ ಒಂದಾನೊಂದು ಮಹಾತತ್ತ್ವವಿದೆ ಎಂಬ ನಂಬಿಕೆಯಿಂದ ಆ ತತ್ತ್ವದ ಜ್ಞಾನಕ್ಕಾಗಿ ಪ್ರಯತ್ನಿಸುತ್ತಿರುವದು, ಅದರಲ್ಲಿ ಪರಮ ಪ್ರೇಮರೂಪವಾದ ಭಕ್ತಿಯನ್ನಿಡುವದು, ಅದಕ್ಕಾಗಿ ಮಿಕ್ಕದ್ದೆಲ್ಲವನ್ನೂ ಬಿಡುವದಕ್ಕೆ ಸಿದ್ಧವಾಗುವ ವೈರಾಗ್ಯ–ಇವೇ ಧರ್ಮದ ಹೆಗ್ಗುರುತುಗಳು. ಈ ಧರ್ಮದ ಗುರುತುಗಳಾದ ಜ್ಞಾನೇಚ್ಛೆ, ಭಕ್ತಿ, ವೈರಾಗ್ಯ–ಮುಂತಾದವುಗಳು ನಮ್ಮ ಅಂತಃಕರಣದಲ್ಲಿ ಅವಶ್ಯವಾಗಿ ಇರಬೇಕಾದವುಗಳು. ಇವುಗಳನ್ನು ನಮ್ಮ ಹಣದ ಐಶ್ವರ್ಯವಾಗಲಿ, ಅಧಿಕಾರವಾಗಲಿ, ರೂಪವಾಗಲಿ, ಕುಲವಾಗಲಿ, ವಿದ್ಯೆಯಾಗಲಿ ಕೊಳ್ಳಲಾರವು. ಇವನ್ನೇ ಬಯಸುತ್ತಾ ಒಳಮುಖರಾಗುವವರಿಗೆ ಮಾತ್ರವೇ ಇವುಗಳು ಪ್ರಸನ್ನವಾಗುವವು.

ಸಮಾಜವನ್ನೇ ಒಂದುಗೂಡಿಸಿ ಅದನ್ನು ಕೆಳಕ್ಕೆ ಬೀಳದಂತೆ ಹಿಡಿದೆತ್ತಿ ನಿಲ್ಲಿಸುವದಕ್ಕೆ ಧರ್ಮವು ಅತ್ಯವಶ್ಯವೆಂಬುದನ್ನು ಮಾನವನು ಮರೆಯುವದುಂಟು. ಆಗ ರಾಗದ್ವೇಷಾದಿಗಳು ಹೆಚ್ಚಿ ಅನರ್ಥಗಳು ಉಂಟಾಗುತ್ತವೆ. ಇಂದಿನ ಮಾನವ ಸಮಾಜದಲ್ಲಿ ಹಲವು ಜನಾಂಗಗಳು ಏರ್ಪಟ್ಟು ಒಬ್ಬರೊಬ್ಬರಿಗೆ ಯುದ್ಧಗಳೂ ಒಂದೊಂದು ದೇಶದಲ್ಲಿಯೂ ಗಲಭೆಗಳೂ ಕುಟುಂಬದಲ್ಲಿ ಕಲಹಗಳೂ ಎದ್ದುಕೊಂಡು ಎಲ್ಲೆಲ್ಲಿಯೂ ಅಶಾಂತಿಸುಖಗಳು ಹಾರಾಡುತ್ತಿರುವದಕ್ಕೆ ಅಧರ್ಮದ ಏಳಿಗೆಯೇ ಕಾರಣವು. ಧರ್ಮಕ್ಕೆ ಅತ್ಯಂತ ವಿಮುಖವಾಗಿದ್ದ ವ್ಯಕ್ತಿಯೂ ಜನಾಂಗವೂ ಆಪತ್ಕಾಲದಲ್ಲಿ ಧರ್ಮದ ಆವಶ್ಯಕತೆಯನ್ನು ಕಂಡುಕೊಳ್ಳುತ್ತಾರೆ. ಕಳೆದ ಮಹಾಯುದ್ಧದ ಸಮಯದಲ್ಲಿ ಜರ್ಮನರು ರಷ್ಯದಮೇಲೆ ಧಾಳಿಯಿಡುತ್ತಿದ್ದಾಗ ಮಾಸ್ಕೊವಿನಲ್ಲಿ ಸಾವಿರಗಟ್ಟಲೆ ಜನರು ದೇವರ ಪ್ರಾರ್ಥನೆಗೆ ಒಟ್ಟುಗೂಡಿದ್ದು, ಲಂಡನ್ ನಗರದಲ್ಲಿ ಚರ್ಚುಗಳಲ್ಲಿ ಘಂಟಾನಾದವು ಪ್ರಬಲವಾದದ್ದು-ಮುಂತಾದವು ಇದಕ್ಕೆ ಉದಾಹರಣೆಗಳು. ಆದರೆ ಇಂಥ ಔತ್ಸುಕ್ಯವೂ ಶ್ರದ್ಧಾವೇಗವೂ ಬಲುಬೇಗನೆ ಮಾಯವಾಗಿ ನಾಸ್ತಿಕ್ಯವು ಜನರನ್ನು ಆಕ್ರಮಿಸಿಕೊಂಡುಬಿಡುತ್ತದೆ. ಮನೆಗೆ ಬೆಂಕಿಬಿದ್ದಿರುವಾಗ ಬಾವಿಯನ್ನು ತೋಡುವ ಪ್ರಯತ್ನವು ಹೇಗೆ ಅವಿವೇಕದ್ದೋ ಹಾಗೆ ಯಾವದಾದರೂ ತೊಂದರೆಯು ಸಂಭವಿಸಿದಾಗ ಧರ್ಮವಿಚಾರಕ್ಕೆ ಕೈಹಾಕುವದೂ ಹಾಸ್ಯಾಸ್ಪದವಾದದ್ದು. ಆದರೂ ಕಷ್ಟಗಳು ಬಂದೊದಗಿದಾಗಲಾದರೂ, ಮಾಡಿದ ಕೆಲಸಕ್ಕೆ ಎಡರುಗಳು ಕಾಣಿಸಿಕೊಂಡಾಗಲಾದರೂ, ಧರ್ಮದಕಡೆಗೆ ತಿರುಗುವ ಬುದ್ಧಿಯು ಯಾವದೋ ಪುಣ್ಯದ ಫಲವಾಗಿ ಬಂದದ್ದೆಂದು ತಿಳಿಯಬೇಕು. ಆ ಸಂದರ್ಭದಲ್ಲಿ ಕಾಣಿಸಿಕೊಂಡ ಬುದ್ಧಿಯನ್ನು ಬೆಳೆಯಿಸಿ ಸದುಪಯೋಗಮಾಡಿಕೊಂಡವನು ವಿವೇಕಿಯಾಗಿರುತ್ತಾನೆ.

ಧರ್ಮಕ್ಕೆ ಆಚಾರವು ಹೊರಮೈ ಮಾತ್ರವಾಗಿದೆ. ಸ್ನಾನವನ್ನು ಮಾಡುವದು ಹೀಗೆ, ನಾಮವನ್ನು ಧರಿಸುವದು ಹಾಗೆ, ಮಡಿಮೈಲಿಗೆಗಳ ಆಚರಣೆಯು ಇಂಥದ್ದು, ಗುಡಿಗೋಪುರಗಳನ್ನು ಕಟ್ಟುವದೂ ಅವುಗಳಲ್ಲಿ ಈಶ್ವರನನ್ನು ಪ್ರಾರ್ಥಿಸುವದೂ ಈ ಪ್ರಕಾರ, ಗುರುಗಳಲ್ಲಿ ಹೀಗೆ ಉಪದೇಶವನ್ನು ತೆಗೆದುಕೊಳ್ಳಬೇಕು, ಮಂತ್ರವನ್ನು ಜಪಿಸುವ ರೀತಿಯು ಇದು, ಧ್ಯಾನಕ್ಕೆ ತಕ್ಕ ಆಸನವು ಅದು-ಎಂದು ಬೇರೆಬೇರೆಯ ಆಚಾರ್ಯರುಗಳು ಜನರಿಗೆ ಬೇರೆಬೇರೆಯ ಕಾಲಗಳಲ್ಲಿ ಬೇರೆಬೇರೆಯ ದೇಶಗಳಲ್ಲಿ ಬೋಧಿಸಿರುತ್ತಾರೆ. ಅಧಿಕಾರಿಗಳು ತಮ್ಮ ತಮ್ಮ ಸ್ಥಿತಿಗೆ ತಕ್ಕಂತೆ ಅವುಗಳನ್ನು ಅನುಸರಿಸಿ ಅನುಷ್ಠಾನವನ್ನು ಮಾಡಿರುತ್ತಾರೆ. ಆದರೆ ಈ ಎಲ್ಲಾ ಆಚಾರಗಳೂ ಎಲ್ಲಾ ಸಾಧಕರಿಗೂ ಒಂದೇ ಆಗಿರುವದು

ಸಾಧ್ಯವಿಲ್ಲ. ಒಳಗೆ ಕೋಮಲವಾಗಿ ಬೆಳೆಯುತ್ತಿರುವ ನಿಜವಾದ ಧರ್ಮವನ್ನು ಕಾಪಾಡುವದಕ್ಕೆಂದು ಹಾಕಿರುವ ಹೊರಚಿಪ್ಪುಗಳು ಅವು. ಆಗಾಗ್ಗೆ ಬೇರೆಬೇರೆಯ ಮತದ ಅನುಯಾಯಿಗಳಿಗೆ ಜಗಳಗಳಾಗಿರುವದುಂಟು. ಇದಕ್ಕೆ ಒಳಗಿನ ಧರ್ಮದ ತಿರುಳನ್ನು ಲೆಕ್ಕಿಸದೆ ಹೊರಗಿನ ಆಚಾರಕ್ಕೇ ಹೆಚ್ಚಿನ ಬೆಲೆಯನ್ನು ಕೊಟ್ಟದ್ದೇ ಕಾರಣವಾಗಿರುತ್ತದೆ. ಧರ್ಮದ ಒಳಮ್ಮೆಯಾದ ದಾನ, ದಮ, ದಯೆ–ಇವುಗಳೂ ಭಕ್ತಿ ವೈರಾಗ್ಯಗಳೂ ಎಲ್ಲಾ ಧರ್ಮಕ್ಕೂ ಸಮಾನವಾಗಿರುವವು. ಆ ಒಳಮ್ಮೆಯನ್ನು ಅರಿತವರಲ್ಲಿ ಯಾವ ವೈಮತ್ಯವೂ ಇರುವದೇ ಇಲ್ಲ.

ಉಪನಿಷತ್ತಿನಲ್ಲಿ ಒಂದು ಕಥೆಯಿದೆ. ಪ್ರಜಾಪತಿಯ ವಂಶದವರು ಮೂರು ಬಗೆಯವರಿದ್ದರು. ದೇವತೆಗಳು, ಮನುಷ್ಯರು, ಅಸುರರು–ಎಂಬ ಆ ಮೂರು ಪಂಗಡದವರು ಆ ಪ್ರಜಾಪತಿಬ್ರಹ್ಮನ ಬಳಿಯಲ್ಲಿ ಬಹುಕಾಲ ಬ್ರಹ್ಮಚರ್ಯವನ್ನು ಮಾಡಿಕೊಂಡಿದ್ದರು. ಕೊನೆಗೆ ಒಂದು ದಿನ ದೇವತೆಗಳು "ಗುರುವೇ, ನಮಗೆ ಉತ್ತಮಸಾಧನವೊಂದನ್ನು ಉಪದೇಶಿಸಬೇಕು" ಎಂದು ಬೇಡಿಕೊಂಡರು. ಆಗ ಪ್ರಜಾಪತಿಯು 'ದ' ಎಂಬ ವರ್ಣವನ್ನು ಉಚ್ಚರಿಸಿ 'ತಿಳಿಯಿತೆ?' ಎಂದನು. ದೇವತೆಗಳು 'ತಿಳಿಯಿತು' ಎಂದರು. "ಹಾಗಾದರೆ ನಾನು ಹೇಳಿದ್ದೇನು, ತಿಳಿಸಿರಿ" ಎಂದು ಪ್ರಜಾಪತಿಯು ಕೇಳಲು "ದಾಂತರಾಗಿರಿ ಎಂದು ಹೇಳಿದ್ದೀಯೆ; ನಾವು ಇಂದ್ರಿಯಲೋಲುಪರು–ಎಂಬುದನ್ನು ತಿಳಿದು ನಮಗೆ ದಮವನ್ನು ಉಪ ದೇಶಿಸಿದ್ದೀಯೆ" ಎಂದರು. ಇದರಂತೆ ಮನುಷ್ಯರಿಗೂ ಇದೇ ವರ್ಣವನ್ನು ಉಪದೇಶಿಸಿ ಪ್ರಜಾಪತಿಯು "ತಿಳಿಯಿತೆ?" ಎಂದು ಕೇಳಿದನು. ಮನುಷ್ಯರು "ತಿಳಿಯಿತು. ಸ್ವಭಾವದಿಂದ ಲೋಭಿಗಳಾಗಿರುವವರು ನೀವು; ದಾನಮಾಡಿರಿ– ಎಂದು ನಮಗೆ ಉಪದೇಶಮಾಡಿದ್ದೀಯೆ" ಎಂದರು. ಆಗ ಅಸುರರ ಕಡೆಗೆ ತಿರುಗಿ "ದ" ಎಂಬ ವರ್ಣವನ್ನೇ ಉಪದೇಶಿಸಿ "ತಿಳಿಯಿತೊ?" ಎದು ಪ್ರಜಾ ಪತಿಯು ಕೇಳಿದನು. ಅವರು "ಆಹಾ ! ತಿಳಿಯಿತು. ಕ್ರೂರಿಗಳಾಗಿರಬೇಡಿರಿ; ದಯೆಯುಳ್ಳವರಾಗಿರಿ ಎಂದು ಉಪದೇಶಿಸಿದ್ದೀಯೆ" ಎಂದರು !

ಈ ಕಥೆಯನ್ನು ಭೋಗಪರವಶತೆ, ಲುಬ್ಧತ್ವ, ಕ್ರೂರತ್ವ–ಎಂಬ ಸ್ವಭಾವವನ್ನು ಮಾರ್ಪಡಿಸುವದಕ್ಕೆಂದು ದಮ, ದಾನ, ದಯೆ–ಎಂಬ ಸಾಧನಗಳನ್ನು ಉಪದೇಶಿಸಿದೆ ಎಂದು ತೋರಿದರೂ ಮನುಷ್ಯನಲ್ಲಿರುವ ಪ್ರತಿಯೊಂದು ದುಃಸ್ವಭಾವದ ವಾಸನೆಯನ್ನೂ–ಹಗೆತನ, ಕಠಿನಚಿತ್ತತೆ, ಅಶುದ್ಧಪ್ರೇಮ, ಅನೃತ, ಮೋಸ ಮುಂತಾದವುಗಳ ವಾಸನೆಯನ್ನೆಲ್ಲ–ಆಯಾ ಪ್ರತಿಪಕ್ಷದ ಅಭ್ಯಾಸದಿಂದ ಹೊಡೆದಟ್ಟಿಸಬೇಕೆಂಬ ಉಪದೇಶಕ್ಕೆ ಇದನ್ನು ಉಪಲಕ್ಷಣವಾಗಿಯೇ ತೆಗೆದು

ಕೊಳ್ಳಬೇಕು. ಇದೇ ಧರ್ಮಪ್ರವಣತೆಯ ಮೊದಲನೆಯ ಹೆಜ್ಜೆ. ಧರ್ಮದ ಒಳಮೈಯನ್ನು ಕಂಡುಕೊಳ್ಳುವದಕ್ಕೆ ಯತ್ನಿಸುವವರು ಅವಶ್ಯವಾಗಿ ಈ ಪ್ರತಿಪಕ್ಷ ಭಾವನೆಯನ್ನು ಮೊದಲು ಆಚರಣೆಗೆ ತಂದುಕೊಳ್ಳಬೇಕು.

ಆದರೆ ಧರ್ಮದ ಮರ್ಮವು ಇಷ್ಟರಲ್ಲಿ ಕೊನೆಗಾಣುವದಿಲ್ಲ. ನಮ್ಮ ಶಾಂತಿ ಸುಖಗಳ ಉಗಮವು ನಮ್ಮನಮ್ಮ ಹೃದಯದ ಒಳಗಡೆಯಲ್ಲಿರುವ ಒಂದಾನೊಂದು ಪರಮಾರ್ಥತತ್ತ್ವದಲ್ಲಿದೆಯೆಂಬುದನ್ನೂ ಆ ಪರಮಾರ್ಥ ತತ್ತ್ವವು ನಮ್ಮಲ್ಲಿ ಪ್ರತಿಯೊಬ್ಬನಲ್ಲಿಯೂ ಇರುವದೆಂಬುದನ್ನೂ ಅದನ್ನು ಈಗಲೇ ಇಲ್ಲಿಯೇ ಕಂಡುಕೊಳ್ಳುವದು ನಮಗೆಲ್ಲರಿಗೂ ಸಾಧ್ಯವೆಂಬುದನ್ನೂ ಅರಿತುಕೊಂಡಬಳಿಕವೇ, ಮನಗಂಡ ಬಳಿಕವೇ, ಧರ್ಮದ ಆವಶ್ಯಕತೆಯೂ ಪ್ರಯೋಜನವೂ ನಮಗೆ ಮನವರಿಕೆಯಾಗುವವು. ಜೀವನದಲ್ಲಿ ನಮಗೆ ಅವಶ್ಯವಾಗಿ ಬೇಕಾದ ಭೋಗ ಸಾಮಗ್ರಿ, ಅನುಭವಿಸುವ ಶಕ್ತಿ, ಆರೋಗ್ಯ, ತಿಳಿವಳಿಕೆ ಎಲ್ಲಕ್ಕೂ ಮೂಲ ಸ್ಥಾನವು ಅದೇ ಪರಮಾರ್ಥತತ್ತ್ವವು; ನಾವು ನಿತ್ಯಾನಂದದಲ್ಲಿದ್ದುಕೊಂಡು ನಮ್ಮ ಸುತ್ತಮುತ್ತಲಿನವರನ್ನು ಆನಂದದಲ್ಲಿ ಅದ್ದುವ ಮನಃಸ್ಥಿತಿಗೆ ಒಯ್ಯುವದು ಆ ಪರಮಾರ್ಥತತ್ತ್ವದಲ್ಲಿರುವ ಭಕ್ತಿಯೇ.

ಧರ್ಮವು ಲೋಕದಲ್ಲಿ ಎಲ್ಲೆಲ್ಲಿಯೂ ಹರಡಿಕೊಂಡು ನೆಲೆನಿಲ್ಲಬೇಕಾದರೆ ಧಾರ್ಮಿಕ ಪುರುಷರು ಹೆಚ್ಚಬೇಕು. ಧಾರ್ಮಿಕಪುರುಷರೆಂದರೆ ದೇವಸ್ಥಾನಗಳನ್ನು ಹೊಕ್ಕು ನಿಯತವಾದ ಕಾಣಿಕೆಗಳನ್ನು ಅರ್ಪಿಸುವದು, ಜಪೋಪವಾಸಾದಿಗಳನ್ನು ತಪ್ಪದೆ ಮಾಡುವದು, ಪುಸ್ತಕಗಳನ್ನು ಓದುತ್ತಿರುವದು-ಈ ಬಗೆಯ ಅಭ್ಯಾಸವನ್ನಿಟ್ಟು ಕೊಂಡಿರುವವರೆಂದು ಅಭಿಪ್ರಾಯವಲ್ಲ. ದುಃಖಮಯವಾಗಿ ಕಾಣುತ್ತಿರುವ ಈ ಪ್ರಪಂಚವನ್ನು ಸುಖಮಯವಾಗಿ ಮಾಡಿಕೊಳ್ಳುವ ನಮ್ಮ ಸುಖಶಾಂತಿಗಳ ಮೂಲ ವಾಗಿರುವ, ಸುಖಜೀವನದ ಕೇಂದ್ರವಾಗಿರುವ, ಪರಮಾತ್ಮನನ್ನು ಕಂಡುಕೊಂಡು ಅವನಲ್ಲಿಯೇ ನೆಲೆನಿಂತಿರುವ ಮಹಾತ್ಮರವರು. ಅವರಲ್ಲಿ ಜಾತಿ ಕುಲಧನರೂಪ ವಿದ್ಯಾದಿಕೃತವಾದ ಭೇದವಿರುವದಿಲ್ಲ. ಅವರೆಲ್ಲರೂ ಆ ಭಗವಂತನಿಗೆ ಪರಮಪ್ರಿಯ ರಾಗಿರುತ್ತಾರೆ. ಅಂಥವರಿಂದ ಧರ್ಮದ ತಿಳಿವಳಿಕೆಯನ್ನು ಜನರಿಗೆ ಕೊಡಿಸಿದರೆ, ಜನರು ನೆಮ್ಮದಿಯಿಂದ ಬಾಳುವರು; ಈ ಲೋಕವು ವೈಕುಂಠವಾಗುವದು.

****

# 4. ಎರಡುಬಗೆಯ ಜೀವನ

ನಮಗೆಲ್ಲರಿಗೂ ಎರಡು ಬಗೆಯ ಜೀವನವಿದೆ. ಇಂದ್ರಿಯಗಳ ವ್ಯವಹಾರದ ಜೀವನವು ಒಂದು; ನಮ್ಮೊಳಗೇ ಅಂತಃಕರಣದ ಭಾವನೆಗಳ ಜೀವನವು ಮತ್ತೊಂದು. ಈ ಎರಡು ಬಗೆಯ ಜೀವನವು ಎಲ್ಲರಿಗೂ ಸಮಾನವಾಗಿದ್ದರೂ ಒಬ್ಬೊಬ್ಬರಲ್ಲಿ ಒಂದೊಂದು ಬಗೆಯ ಜೀವನಕ್ಕೆ ಪ್ರಾಧಾನ್ಯವಿರುತ್ತದೆ. ಇಂದ್ರಿಯಗಳ ವ್ಯವಹಾರದ ಜೀವನವೊಂದೇ ನಿಜವಾದ ಜೀವನ ಎಂದು ಬಗೆಯುವವರೇ ಈ ಲೋಕದಲ್ಲಿ ಹೆಚ್ಚು ಮಂದಿ. ಅವರಿಗೆ ತಮ್ಮೊಳಗಿನ ಜೀವನವೂ ಒಂದಿದೆ ಎಂದು ನಂಬುವದು ಕಷ್ಟಸಾಧ್ಯವಾಗಿರುತ್ತದೆ. ಅಂತಃಕರಣಗಳ ಭಾವಗಳು ತತ್ತತ್ಕಾಲಕ್ಕೆ ತೋರಿಹಾರುತ್ತಿರುವದರಿಂದ ಅವಕ್ಕೇನೂ ಅಷ್ಟು ಬೆಲೆಯಿಲ್ಲವೆಂದೇ ಅವರ ಅಭಿಪ್ರಾಯ. ಹೊರಗೆ ತೋರುವ ವಸ್ತುಗಳು ಒಂದರ ಜೊತೆಗೆ ಇನ್ನೊಂದು ಇರುತ್ತವೆ; ಆದರೆ ಭಾವಗಳು ಒಂದೊಂದೇ ಇರುತ್ತವೆ. ಆದ್ದರಿಂದ ಹೊರಗಿನ ಇಂದ್ರಿಯಾರ್ಥಗಳ ವ್ಯವಹಾರವೇ ನಿಜವಾದ ಜೀವನ ಎಂದು ಅನೇಕರು ತಿಳಿದಿರುತ್ತಾರೆ. ಆದ್ದರಿಂದ ಅವರು ಇಷ್ಟವಾದ ಇಂದ್ರಿಯಾರ್ಥಗಳನ್ನು ಸಂಪಾದಿಸಿ ಕೊಳ್ಳುವದಕ್ಕೂ ಅನಿಷ್ಟವಾದ ಇಂದ್ರಿಯಾರ್ಥಗಳನ್ನು ಪರಿಹರಿಸಿಕೊಳ್ಳುವದಕ್ಕೂ ತಮ್ಮ ಪ್ರಯತ್ನವನ್ನೆಲ್ಲ ವಿನಿಯೋಗಿಸುತ್ತಾರೆ.

ಇಂದ್ರಿಯಾರ್ಥವ್ಯವಹಾರದ ಜೀವನದಲ್ಲಿಯೇ ಮುಳುಗಿರುವವರಿಗೆ ಇನ್ನೊಂದು ಜೀವನವಿದೆ ಎಂಬುದರ ಅರಿವೇ ಇರುವದಿಲ್ಲ. "ಈ ನಿಮ್ಮ ವ್ಯವಹಾರದ ಜೀವನದ ಜೊತೆಗೆ ನಿಮಗೆ ನಿಮ್ಮನಿಮ್ಮ ಒಳಗೇ ಮತ್ತೊಂದು ಜೀವನವೂ ಇದೆ. ಆ ಜೀವನವು ನಿಮ್ಮ ಹೊರಗಿನ ಜೀವನಕ್ಕಿಂತ ಮುಖ್ಯವಾದದ್ದು; ಅದಕ್ಕೆ ಹೆಚ್ಚು ಲಕ್ಷ್ಯವನ್ನು ಕೊಡಿರಿ" ಎಂದು ಯಾರಾದರೂ ಉಪದೇಶಿಸಿದರೆ ಅವರಿಗೆ ಯಾವದೋ ತಿಳಿಯಲಶಕ್ಯವಾದ ಅದ್ಭುತವಿಷಯವನ್ನು ಕೇಳಿದಂತೆ ಆಶ್ಚರ್ಯ ವಾಗುವದು. ಅಥವಾ ಆ ಉಪದೇಶಮಾಡಿದವನು ವ್ಯವಹಾರವನ್ನು ಕೆಡಿಸುವ ಯಾವದೋ ಅಪ್ರಸಿದ್ಧವಾದ ಅನನುಷ್ಠೇಯ ವಿಚಾರಗಳನ್ನು ಕುರಿತು ಮಾತನಾಡುವವನೆಂದು ಆತನನ್ನು ಅಸಡ್ಡೆಯಿಂದ ಕಾಣುವರು. ಕೆಲವು ವೇಳೆ ಅವರಿಗೆ ಈ ಉಪದೇಶದಿಂದ ಸಿಟ್ಟುಬಂದರೂ ಬರಬಹುದು. ಆದ್ದರಿಂದಲೇ ನಮ್ಮ ಶಾಸ್ತ್ರಗಳಲ್ಲಿ ಅಧಿಕಾರಕ್ಕೆ ತಕ್ಕಂತೆ ತತ್ತ್ವದ ಅಂತಸ್ತನ್ನೂ ಏರಿಸಿ ತಿಳಿಸ ಬೇಕೆಂದು ಹೇಳಿದೆ. ಗೂಢವಾದ ತತ್ತ್ವಗಳನ್ನು ಅನಧಿಕಾರಿಗಳಿಗೆ ಹೇಳಬಾರದು ಎಂಬ ಅಭಿಪ್ರಾಯಕ್ಕೆ ಇದೇ ಆಧಾರ. ಇದಂತಿರಲಿ. ಜನರು ತಾವು ಬಾಹ್ಯದ ಇಂದ್ರಿಯವ್ಯವಹಾರದ ಜೀವನದಲ್ಲಿಯೇ ಇರತಕ್ಕವರೆಂದು ಎಷ್ಟೇ ದೃಢವಿಶ್ವಾಸ

ವುಳ್ಳವರಾಗಿರಲಿ, ಅವರೂ ಯಾವಾಗಲೂ ಈ ಬಾಹ್ಯ ಜೀವನದ ಜೊತೆಗೆ ಮತ್ತೊಂದು ಜೀವನದಲ್ಲಿಯೂ ವ್ಯಾಪೃತರಾಗಿಯೇ ಇರುತ್ತಾರೆ. ಇದೇ ಅವರವ ರೊಳಗಿನ ಅಂತಃಕರಣದ ಜೀವನವು. ಇದಕ್ಕೆ ಅಧ್ಯಾತ್ಮ ಜೀವನ ಎಂದು ಹೆಸರು.

ಮನುಷ್ಯರ ಇಂದ್ರಿಯಜೀವನವು ಸ್ವತಂತ್ರಜೀವನವಲ್ಲ; ಇದಕ್ಕೂ ಅಧ್ಯಾತ್ಮ ಜೀವನದ ಸಂಬಂಧವಿದ್ದೇ ಇದೆ. ಹೊರಗಿನ ವಸ್ತುಗಳ ಸಂಬಂಧದಿಂದ ನಮ್ಮ ಅಂತಃಕರಣದಲ್ಲಿ ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯ, ಆಶ್ಚರ್ಯ, ಭಯ, ಔದಾಸೀನ್ಯ, ಸಂತೋಷ, ವಿಷಾದ, ಸುಖ-ದುಃಖ-ಮುಂತಾದವು ಆಗಾಗ್ಗೆ ಎದ್ದುಕೊಳ್ಳುತ್ತವೆ ಎಂಬುದು ನಮಗೆ ಎಲ್ಲರಿಗೂ ಗೊತ್ತು. ಆದರೆ ಆಧ್ಯಾತ್ಮಿಕವಾದ ಅಂತಃಕರಣದ ಭಾವಗಳು ನಮ್ಮ ಹೊರಗಿನ ಜೀವನದಲ್ಲಿ ಮಾರ್ಪಾಡುಗಳನ್ನು ಮಾಡುತ್ತವೆ ಎಂಬುದು ನಮ್ಮಲ್ಲಿ ಅನೇಕರಿಗೆ ತಿಳಿದಿರು ವದಿಲ್ಲ. ಹೊರಗಿನ ಇಂದ್ರಿಯಾರ್ಥಗಳ ಸಂಪಾದನೆಯಿಂದಲೂ ಪರಿಹಾರ ದಿಂದಲೂ ನಮ್ಮ ಜೀವನವನ್ನು ಉತ್ತಮಗೊಳಿಸಬಹುದೆಂಬ ನಂಬಿಕೆ ನಮ್ಮಲ್ಲಿ ಅನೇಕರಿಗೆ ಇರುತ್ತದೆ. ಆದರೆ ನಮ್ಮ ಆಧ್ಯಾತ್ಮಿಕ ಭಾವನೆಗಳಲ್ಲಿ ಕೆಲವನ್ನು ಸಂಪಾದಿಸಿಕೊಂಡು ಅಭ್ಯಾಸದಿಂದ ವಶಪಡಿಸಿಕೊಳ್ಳುವದರಿಂದ ನಮ್ಮ ಹೊರಗಿನ ಸಂನಿವೇಶಗಳೂ ಮಾರ್ಪಡಬಹುದೆಂಬ ನಂಬಿಕೆಯು ನಮ್ಮಲ್ಲಿ ಅನೇಕರಿಗೆ ಉಂಟಾಗಿರುವದಿಲ್ಲ. ಮನುಷ್ಯನ ಬಡತನ, ಬೇನೆ, ಆಹಾರಾಭಾವ, ಜನಸಹಾಯ ವಿಲ್ಲದಿರುವದು, ಕ್ಷಾಮಡಾಮರಗಳು-ಮುಂತಾದ ಹೊರಗಿನ ಜೀವನದ ಕೊರತೆ ಗಳಿಂದ ಅವನ ಅಂತಃಕರಣದ ಭಾವಗಳು ಕುಗ್ಗುವವೆಂದೂ ಅವುಗಳ ಬೆಳವಣಿಗೆಗೆ ಅಡಚಣೆಯಾಗುವವೆಂದೂ ಅವನಿಗೆ ಸುಖವು ದೊರಕದೆ ದುಃಖವು ಬೆನ್ನುಹತ್ತಿರುವದೆಂದೂ ನಮ್ಮಲ್ಲಿ ಹಲವರಿಗೆ ಗೊತ್ತಾಗಿರುತ್ತದೆ. ಆದರೆ ಮನುಷ್ಯನ ಅಂಜಿಕೆ, ಅಸೂಯೆ, ದುರಾಶೆ, ರಾಗದ್ವೇಷಗಳು, ಅವ್ಯವಸ್ಥೆಯ ಭಾವನೆ, ಕುಕಲ್ಪನೆ-ಮುಂತಾದವುಗಳಿಂದ ಅವನ ಬಾಹ್ಯಜೀವನವೂ ಕೆಡುತ್ತಾಬರುವದೆಂಬುದು ಮಾತ್ರ ಎಲ್ಲಿಯೋ ಕೆಲವರಿಗೆ ಮಾತ್ರ ತಿಳಿದಿರುತ್ತದೆ. ಅಧ್ಯಾತ್ಮಜೀವನವೇ ಬಾಹ್ಯ ಜೀವನಕ್ಕೆ ಮೂಲವೆಂಬುದನ್ನೂ ಬಾಹ್ಯಜೀವನದಲ್ಲಿ ಆಗಿರುವ ಕುಂದುಕೊರತೆಗಳು ಹೇಗಿ ದ್ದರೂ ಅಧ್ಯಾತ್ಮಜೀವನವು ಸರಿಯಾದರೆ ಈ ನಮ್ಮ ಲೋಕವೇ ಸ್ವರ್ಗವಾಗುವ ದೆಂಬುದನ್ನೂ ಸಾವಿರಗಟ್ಟಲೆಯ ಜನರಲ್ಲಿ ಒಬ್ಬಿಬ್ಬರು ಮಾತ್ರ ಅರಿತಿರುವರು.

ಯಾರಿಗೆ ಇಂದ್ರಿಯಗಳ ವ್ಯವಹಾರದ ಹೊರಗಿನ ಜೀವನವೇ ಮುಖ್ಯ ವಾಗಿರುವದೋ ಅವರಿಗೆ ಹೊರಗಿನ ವಸ್ತುಗಳಲ್ಲಿಯೇ ಒಂದಕ್ಕೊಂದಕ್ಕೆ ಕಾರ್ಯ ಕಾರಣಭಾವವು ತೋರುತ್ತಿರುವದು. ಇಂಥ ವಸ್ತುಗಳನ್ನು ರಾಶಿಹಾಕಿಕೊಳ್ಳಬೇಕು,

ಇಂಥ ವಸ್ತುಗಳನ್ನು ಕಾಪಾಡಿಕೊಳ್ಳಬೇಕು, ಇಂಥ ವಸ್ತುಗಳನ್ನು ಪರಿಹರಿಸಿಕೊಳ್ಳಬೇಕು, ಇಂಥವುಗಳನ್ನು ಯಾರಿಗೂ ಸಿಕ್ಕದಂತೆ ಮಾಡಿಕೊಂಡು ನಮ್ಮ ಉಪಯೋಗಕ್ಕೇ ಇಟ್ಟುಕೊಳ್ಳಬೇಕು, ಇಂಥ ಸುಖಸಾಧನಗಳನ್ನು ನಮಗೆ ಒದಗಿಸಿಕೊಡದೆ ಇರುವವರನ್ನು ಅಥವಾ ನಾವು ಒದಗಿಸಿಕೊಳ್ಳುವದಕ್ಕೆ ಅಡ್ಡಿ ಮಾಡುವವರನ್ನು ಸದೆಬಡಿಯಬೇಕು, ಇಂಥ ಶತ್ರುಗಳನ್ನು ಸಂಹರಿಸಬೇಕು, ಇಂಥ ಮಿತ್ರರನ್ನು ಸಂಗ್ರಹಿಸಬೇಕು, ಇಂಥವರ ವಿಷಯದಲ್ಲಿ ಉದಾಸೀನರಾಗಬೇಕು– ಎಂಬ ಕಲ್ಪನೆಯ ತರಂಗಗಳ ಇಂದ್ರಿಯಜೀವನದ ಸಮುದ್ರದಲ್ಲಿ ಎಡೆಬಿಡದೆ ಏಳುತ್ತಿರುವವು. ಈ ಸಮುದ್ರದಲ್ಲಿ ಒಳ್ಳೆಯದು, ಕೆಟ್ಟದ್ದು, ಬೇಕಾದದ್ದು, ಬೇಡವಾದದ್ದು, ಪ್ರಿಯವಾದದ್ದು, ಅಪ್ರಿಯವಾದದ್ದು, ಸುಖಕರವಾಗಿರುವವು. ಇವುಗಳಲ್ಲಿ ಒಂದನ್ನು ಪರಿಹರಿಸಿಕೊಂಡು ಮತ್ತೊಂದನ್ನು ಸಂಪಾದಿಸಿಕೊಳ್ಳುವ ಸಾಧನಸಾಮಗ್ರಿಯ ಚಿಂತೆಯೇ ಅನವರತವಾಗಿರುತ್ತದೆ. ಇಂಥ ಕಾರಣ ಸಾಮಗ್ರಿಯನ್ನು ಸಂಪಾದಿಸಿಕೊಂಡು ಇಂಥ ಕಾರ್ಯವನ್ನು ಒದಗಿಸಿಕೊಳ್ಳಬೇಕು, ಇಂಥ ಕಾರ್ಯವಸ್ತುವನ್ನು ಉಪಭೋಗಿಸಿ ಸುಖಜೀವನವನ್ನು ಅನುಭವಿಸಬೇಕು– ಎಂಬುದೇ ಇಂದ್ರಿಯ ವ್ಯವಹಾರದ ಜೀವನಸೂತ್ರವು.

ಇಂದ್ರಿಯಾರ್ಥವ್ಯವಹಾರವೇ ನಿಜವಾದ ಜೀವನವೆಂದು ನಂಬಿರುವವದರ ಫಲವಾಗಿ ಜನರಿಗೆ ಅಪಾರವಾದ ಕಷ್ಟನಷ್ಟಗಳು ಉಂಟಾಗಿವೆ. ಹೊರಗಿನ ಸಾಧ್ಯಸಾಧನಗಳನ್ನೂ ನಂಬಿಕೊಂಡು ಜೀವನಸಾಮಗ್ರಿಗಳನ್ನು ಒದಗಿಸುವದೇ ತಮ್ಮ ಪ್ರಥಮಕರ್ತವ್ಯವೆಂದು ನಂಬಿರುವದರಿಂದ ಅವರಿಗೆ ಯಾವ ಲಾಭವೂ ಆಗಿರುವದಿಲ್ಲ; ಹೊಟ್ಟೆಗೆ ಬಟ್ಟೆಗೆ ಸಾಕಾದಷ್ಟು ಪದಾರ್ಥಗಳು ಸಿಕ್ಕುವದೇ ಕಷ್ಟವಾಗಿ ಪರಿಣಮಿಸಿರುತ್ತದೆ. ಅನಾರೋಗ್ಯ, ಬಡತನ, ಅಂಟುರೋಗಗಳು, ಅಕಾಲಮರಣ– ಇವುಗಳನ್ನು ತಮ್ಮ ಇಂದ್ರಿಯಪ್ರಧಾನವಾದ ಯಾವ ಶಾಸ್ತ್ರದ ಸಹಾಯದಿಂದಲೂ ಪರಿಹರಿಸಿಕೊಳ್ಳುವದು ಆಗಿರುವದಿಲ್ಲ. ಯಂತ್ರಗಳ ಸಹಾಯದಿಂದ ದೇಶಕಾಲಗಳನ್ನು ಧ್ವಂಸಮಾಡಿ ಇಡಿಯ ಭೂಲೋಕದ ಜನಾಂಗಗಳನ್ನೇ ಒಂದುಗೂಡಿಸಿರುವೆವೆಂದು ಆಗಾಗ್ಗೆ ಈಗಿನ ಜನತೆಯು ಬಡಾಯಿಕೊಚ್ಚಿಕೊಳ್ಳುವದುಂಟು. ಆದರೆ ಭೂಲೋಕದ ಬೇರೆಬೇರೆಯ ರಾಷ್ಟ್ರದವರನ್ನು ಒಬ್ಬರಿಗೊಬ್ಬರು ಮೊದಲಿಗಿಂತಲೂ ತೀರ ಹತ್ತಿರವಿರುವಂತೆ ಮಾಡಿದ್ದರೂ ಎಲ್ಲರ ಕಷ್ಟಗಳೂ ಮೊದಲಿಗಿಂತ ಹತ್ತರಷ್ಟು ಇಪ್ಪತ್ತರಷ್ಟು ಹೆಚ್ಚಿರುತ್ತವೆ. ಪರಸ್ಪರಸಹಾಯದಿಂದ ಜನರು ಅಭ್ಯುದಯವನ್ನು ಪಡೆಯುವದರ ಬದಲಾಗಿ ಒಬ್ಬರನ್ನೊಬ್ಬರು ಸಂಶಯದಿಂದ ವರ್ತಿಸುತ್ತಾ ಒಬ್ಬರನ್ನೊಬ್ಬರು ಹೊಸಹೊಸ ಅಡಚಣೆಗಳಿಂದ ಮುಂದುವರಿಯದಂತೆ ಮಾಡಿಕೊಳ್ಳುತ್ತಿದ್ದಾರೆ. ಆಟಂಬಾಂಬಿನಂಥ ಮಾರಕ ಸಾಮಗ್ರಿಗಳನ್ನು ಪೈಪೋಟಿಯಿಂದ

ತಯಾರುಮಾಡುತ್ತಾ ಯಾವಾಗ ಮತ್ತೊಂದು ಭೀಕರವಾದ ಅಖಿಲ ಭೂಮಂಡಲ ಯುದ್ಧವು ಎದ್ದುಕೊಳ್ಳುವದೋ ಯಾವಾಗ ಮಾನವ ವರ್ಗವೇ ಹೆಸರಿಲ್ಲದಂತೆ ಅಳಿದುಹೋಗುವದೋ ಎಂಬ ಅಂಜಿಕೆಯನ್ನು ಎಲ್ಲರಿಗೂ ತಂದಿಟ್ಟುಕೊಳ್ಳುತ್ತಿದಾರೆ !

ಕೇವಲ ಇಂದ್ರಿಯಗಳು ನಮಗೆ ತೋರಿಸುವ ಪ್ರಪಂಚವನ್ನು ಶಾಸ್ತ್ರದಲ್ಲಿ **'ಮಾಯೆ'** ಎಂದು ಕರೆದಿರುತ್ತದೆ. ಮಾಯೆಯಿಂದ ಮೋಹಿತರಾದ ಜನರು ತತ್ತ್ವವನ್ನೇ ಅರಿಯಲಾರದೆ ಇರುವವರು-ಎಂದು ಶಾಸ್ತ್ರವು ಸಾರುತ್ತಿದೆ. ಈ ಮಾಯೆಯನ್ನು ದಾಟುವದಕ್ಕೆ ಭಗವಂತನನ್ನು ಶರಣುಹೋಗುವದೇ ಉಪಾಯವೆಂದೂ ಆ ಶಾಸ್ತ್ರದಲ್ಲಿ ಉಪದೇಶಿಸಿರುತ್ತದೆ. ಇಂದ್ರಿಯಪ್ರಧಾನರಾದರೂ ಮಾಯಾಪ್ರಪಂಚದ ಹಾವಳಿಯನ್ನು ತಡೆಗಟ್ಟಬೇಕೆಂಬ ಆಶೆಯುಳ್ಳವರಿಗೆ **ಮುಮುಕ್ಷುಗಳು** ಎಂದು ಹೆಸರು. ಮುಮುಕ್ಷುಗಳು ಎಂದರೆ ಮಾಯೆಯ ಕಟ್ಟಿನ ಬಿಗಿತದಿಂದ ಬಿಡುಗಡೆಯನ್ನು ಹೊಂದಬೇಕೆನ್ನುವ ಹಂಬಲಿಕೆಯಿರುವವರು. ಮುಮುಕ್ಷುಗಳಾದವರು ಈ ಮಾಯೆಯಿಂದ ಬಿಡುಗಡೆಯನ್ನು ಹೊಂದುವದಕ್ಕೆ ಆ ಭಗವಂತನನ್ನೇ ಶರಣುಹೊಂದಬೇಕು. ತಮ್ಮ ಎದುರಿಗೆ ಕಾಣುವ ಪ್ರಪಂಚವೆಲ್ಲವೂ ಪರಮಾರ್ಥವಾಗಿ ಭಗವಂತನ ವಿಭೂತಿಯೇ ಎಂದು ಉಪದೇಶಿಸುವ ಶಾಸ್ತ್ರದಲ್ಲಿ ಶ್ರದ್ಧೆಯುಳ್ಳವರಾಗಬೇಕು. ಇಲ್ಲಿ ಕಾಣುವ ಜನರೂ ಪ್ರಾಣಿಗಳೂ ಭಗವಂತನ ಮಕ್ಕಳು-ಎಂಬ ಭಾವನೆಯಿಂದ ಅವರಿಗೆ ತನ್ನ ಕೈಯಲ್ಲಾದ ಉಪಕಾರವನ್ನು ಮಾಡಬೇಕು; ಅಪಕಾರವನ್ನಂತೂ ಎಂದಿಗೂ ಮಾಡಬಾರದು-ಎಂಬುದು ಅಧ್ಯಾತ್ಮಜೀವನಕ್ಕೆ ಮೊದಲನೆಯ ಮೆಟ್ಟಲು. ಆದರೆ ಆ ಭಗವದ್ಭಾವನೆಯಾದರೂ ಪೂರ್ಣವಾಗಿ ದಕ್ಕಬೇಕಾದರೆ ಭಾವನೆಗಳೇ ಪ್ರಧಾನವಾಗಿರುವ ಆಧ್ಯಾತ್ಮಿಕಪ್ರಪಂಚದ ಕಡೆಗೆ ತಿರುಗುವದೇ ಅತ್ಯವಶ್ಯವು.

**"ಅರ್ಜುನನೆ, ಈಶ್ವರನು ಸರ್ವಭೂತಗಳ ಹೃದ್ದೇಶದಲ್ಲಿಯೂ ಇದ್ದುಕೊಂಡಿರುವನು. ಯಂತ್ರಾರೂಢವಾದ ಬೊಂಬೆಗಳಂತೆ ಶರೀರಾಭಿಮಾನದಿಂದ ತೊಳಲುತ್ತಿರುವ ಈ ಪ್ರಾಣಿಗಳನ್ನು ಮಾಯೆಯಿಂದ ಭ್ರಾಂತಿಗೊಳ್ಳುವಂತೆ ಮಾಡಿರುತ್ತಾನೆ. ಆದ್ದರಿಂದ ಅವನನ್ನೇ ಸರ್ವಭಾವದಿಂದಲೂ ಶರಣು ಹೊಂದು. ಅವನ ಪ್ರಸಾದದಿಂದ ಪರಮಶಾಂತಿಯನ್ನು ಹೊಂದುವೆ." -ಭಗವದ್ಗೀತೆ**

ಈ ಉಪದೇಶವನ್ನು ನಾವು ಸರಿಯಾಗಿ ಮನದಟ್ಟುಮಾಡಿಕೊಳ್ಳಬೇಕು. ಹೊರಗೆ ಕಾಣುವ ಸಾಧ್ಯಸಾಧನಗಳ ಪ್ರಪಂಚವು ಮಾಯೆಯ ಭ್ರಾಂತಿಯು. ಅದನ್ನು ನಿಜವೆಂದು ನಂಬಿ ವ್ಯವಹಾರಮಾಡಿ ಯಾರು ಬೇಸತ್ತಿರುವರೋ ಯಾರಿಗೆ ಈ ಇಂದ್ರಿಯಜೀವನದಲ್ಲಿ ವೈರಾಗ್ಯವುಂಟಾಗಿರುವದೋ, ಯಾರಿಗೆ ಇದಕ್ಕಿಂತಲೂ ಉತ್ತಮಜೀವನವೊಂದಿರಬೇಕೆಂದು ವಿಶ್ವಾಸವುಂಟಾಗಿರುವದೋ,

ಅಂಥವರಿಗೆ ಮಾತ್ರ ಈ ಮೇಲಿನ ಉಪದೇಶವು ಒಗ್ಗುವದು. ಬಾಹ್ಯ ಜೀವನವು ತಾನೇ ಸ್ವತಂತ್ರವಾಗಿರುವದಿಲ್ಲ. ಅಲ್ಲಿ ತೋರುವ ವಸ್ತುಗಳ ಪರಸ್ಪರಸಾಧ್ಯ ಸಾಧನ ಭಾವವು ಹುಸಿತೋರಿಕೆಯ ಮಾಯೆಯು. ನಿಜವಾಗಿ ಈ ಮಾಯಾ ಪ್ರಪಂಚವನ್ನು ತನ್ನ ಸ್ವಾಧೀನದಲ್ಲಿಟ್ಟುಕೊಂಡಿರುವ ಭಗವಂತನು ನಮ್ಮೆಲ್ಲರ ಹೃದಯದಲ್ಲಿಯೂ ಇರುತ್ತಾನೆ. ಆ ಭಗವಂತನ ನೆನಪು ಬಂದಮಾತ್ರದಿಂದಲೇ, "ಈ ಪ್ರಪಂಚವು ಭಗವಂತನ ವಿಭೂತಿಯು; ಇದರಲ್ಲಿ ಭಗವಂತನ ಮಹಿಮೆಯು ಪ್ರಕಟವಾಗುತ್ತಿದೆ" ಎಂಬ ಭಾವನೆಯು ಅಂಕುರಿಸಿದ ಮಾತ್ರದಿಂದಲೇ, ಇದರ ಮಾಯಾತ್ವವು ಸಡಿಲವಾಗುತ್ತದೆ. ಆದರೆ ಆಧ್ಯಾತ್ಮಿಕವಾದ ಭಾವನಾಮಯವಾದ ಪ್ರಪಂಚದ ನಿಯಮಗಳನ್ನು ಅರಿತು ಆಧ್ಯಾತ್ಮಿಕ ಜೀವನದಲ್ಲಿ ನಾವು ನಿಲ್ಲುವದಾದರೆ ಇದೇ ಪ್ರಪಂಚವು ನಮಗೆ ಸುಖಪ್ರದವಾಗುವ ರೀತಿಯಲ್ಲಿ ಪರಿಣಮಿಸುವದಕ್ಕೆ ಮೊದಲಾಗುವದು. ಅಧ್ಯಾತ್ಮಜೀವನವು ಎಂದರೆ ಆಧ್ಯಾತ್ಮಿಕವಾದ ನಮ್ಮ ಅಂತಃ ಕರಣಭಾವನೆಗಳ ನಿಯಮಗಳು ಹೇಗೆ ಭಗವಂತನನ್ನು ಶರಣುಹೋಗುವದಕ್ಕೆ ಅನುಕೂಲವಾಗಿರುತ್ತವೆ ಎಂಬುದನ್ನು ಅನುಭವದಿಂದ ಕಂಡುಕೊಳ್ಳುವ ಜೀವನವು.

ಅಧ್ಯಾತ್ಮವಿದ್ಯೆಯ ರಹಸ್ಯವೆಲ್ಲ ಇಷ್ಟರಲ್ಲಿ ಅಡಗಿರುತ್ತದೆ: ಮಾಯಾ ಪ್ರಪಂಚದಲ್ಲಿ ಸುತ್ತಿಸುತ್ತಿ ಬಳಲುತ್ತಿರುವವರೆಲ್ಲರೂ ಮೂಢರು. ಅವರು ಗಂಗಾನದಿಯ ದಡ ದಲ್ಲಿಯೇ ಇದ್ದುಕೊಂಡಿದ್ದರೂ ಉಪ್ಪುನೀರಿನ ಭಾವಿಯ ನೀರನ್ನು ಕುಡಿಯುವ ಅವಿವೇಕಿಗಳಂತೆ ವರ್ತಿಸುತ್ತಿರುವರು. ಏಕೆಂದರೆ ಅವರು ತಮ್ಮತಮ್ಮ ಹೃದಯ ದಲ್ಲಿಯೇ ಇರುವ ಭಗವಂತನನ್ನು ಶರಣುಹೊಂದಿದ ಮಾತ್ರದಿಂದ ಮಾಯೆಯ ಉಪಟಳವನ್ನೆಲ್ಲ ತಪ್ಪಿಸಿಕೊಂಡು ಪರಮಶಾಂತಿಯನ್ನು ಪಡೆಯಬಹುದು. ಆದರೂ ಅವರು ಹೊರಗಿನ ಈ ಮಾಯೆಗೆ ಸಿಕ್ಕಿ ರಾಟೆಯ ಕುದುರೆಗಳ ಮೇಲೆ ಸವಾರಿಮಾಡುವೆವೆಂದು ಹಿಗ್ಗುವವರಂತೆ ಮಾಯೆಯ ತೋರಿಕೆಯ ವಸ್ತುಗಳಿಗಾಗಿ ಯೇ ಹೊಡೆದಾಡುತ್ತಾ ಇಲ್ಲದ ವಿಕ್ಷೇಪವನ್ನು ಮನಸ್ಸಿಗೆ ತಂದುಕೊಳ್ಳುತ್ತಿರುವರು.

ನಿಜವಾಗಿ ನಿಮಗೆ ಶಾಂತಿಯು ಬೇಕೆ? ಹೊರಗಿನ ಇಂದ್ರಿಯಗಳ ಮಾಯಾ ಪ್ರಪಂಚದಲ್ಲಿ ಹರಿದಾಡುವ ಮನಸ್ಸನ್ನು ನಿಮ್ಮ ಒಳಗಡೆಗೆ ತಿರುಗಿಸಿಕೊಳ್ಳಿರಿ. ನಿಮ್ಮ ನಿಮ್ಮ ಹೃದಯದಲ್ಲಿಯೇ ಇರುವ ಭಗವಂತನಿಗೆ ಶರಣುಹೋಗಿರಿ. ನಿಮ್ಮೊಳಗೇ ನೋಡಿಕೊಳ್ಳಿರಿ, ನಿಮಗೆ ಬೇಕಾದದ್ದೆಲ್ಲವೂ ಸಿಕ್ಕುವದು. "ಸತ್ಯವೂ ಜ್ಞಾನವೂ ಅನಂತವೂ ಆದ ಪರಬ್ರಹ್ಮವು ನಿಮ್ಮ ಹೃದಯ ಗುಹೆಯಲ್ಲಿಯೇ ಇರುತ್ತಿರುವದು; ಅದನ್ನು ಅರಿತುಕೊಂಡರೆ ಸಕಲಕಾಮಗಳೂ ಒಮ್ಮೆಗೇ ಸಿಕ್ಕಿಬಿಡುವವು" ಎಂದು ಉಪನಿಷತ್ತಿನಲ್ಲಿದೆ. ಹೀಗೆ ಒಳಕ್ಕೆ ತಿರುಗಿ ಈ ಶಾಂತಿಯ ಮೂಲವನ್ನು ಹುಡುಕು

ವವನ ಜೀವನವೇ ಅಧ್ಯಾತ್ಮಜೀವನವು. ಅಲ್ಲಿ ಪರಮಾರ್ಥವನ್ನು ಕಂಡುಕೊಳ್ಳುವ ಜ್ಞಾನವೇ ಅಧ್ಯಾತ್ಮವಿದ್ಯೆಯು.

ಈಗ ನಮ್ಮ ಹೃದಯದಲ್ಲಿರುವ ಭಾವನೆಗಳು ವ್ಯವಸ್ಥೆಯಲ್ಲಿರುವದಿಲ್ಲ. ನಮ್ಮ ಅಧ್ಯಾತ್ಮಜೀವನವು ಯಾವದೊಂದು ನಿಯಮಕ್ಕೂ ಒಳಪಟ್ಟಿಲ್ಲ. ಬಹುಕಾಲದಿಂದ ಕೃಷಿಮಾಡದೆ ಇದ್ದ ಹೊಲದಲ್ಲಿ ಕಂಡಕಂಡ ಗಿಡಗಳು ಬೆಳೆದುಕೊಂಡಿರುವಂತೆ ಬೇಕಾದ ಭಾವನೆಗಳಿಗಿಂತಲೂ ಬೇಡದ ಭಾವನೆಗಳು ಹೇರಳವಾಗಿ ಅಲ್ಲಿ ಬೆಳೆದು ಕೊಂಡಿರುವವು. ಒಂದು ಹಳ್ಳಿಯಲ್ಲಿ ಊರಮುಂದೆಯೇ ಒಂದು ಹೊಲವಿತ್ತು. ಅದರ ಯಜಮಾನನು ಕಾಲವಾಗಿದ್ದು ಮಕ್ಕಳು ಏನೂ ತಿಳಿಯದವರಾಗಿದ್ದರು. ಆದ್ದರಿಂದ ಜಮೀನು ಬೀಳುಬಿದ್ದಿತ್ತು. ಅದರಲ್ಲಿ ತುಂಬೆಗಿಡ, ದತ್ತೂರಿಗಿಡ-ಮುಂತಾದವು ಬೆಳೆದುಕೊಂಡಿದ್ದವು. ಜನರು ಅದನ್ನು ತುಂಬೆಹೊಲವೆಂದು ಕೆಲವರೂ, ದತ್ತೂರಿಹೊಲವೆಂದು ಕೆಲವರೂ ಕರೆಯುತ್ತಿದ್ದರು. ಪಾಪ ! ಹಿಂದೆ ಅದೇ ಹೊಲದಲ್ಲಿ ವಿಧವಿಧವಾದ ಧಾನ್ಯಗಳು ಬೆಳೆಯುತ್ತಿದ್ದವೆಂಬುದನ್ನೂ ದನಕರುಗಳಿಗೆ ಹುಲುಸಾದ ಮೇವೂ ಸಿಕ್ಕುತ್ತಿತ್ತೆಂದೂ ಅವರೇನು ಬಲ್ಲರು? ಮುಂದೆ ಈ ಮಕ್ಕಳು ಪ್ರಬುದ್ಧರಾದ ಬಳಿಕ ಅದೇ ಹೊಲವನ್ನು ಸರಿಯಾಗಿ ಉತ್ತು ಬೀಜವನ್ನು ಬಿತ್ತಿದರೆ ಉತ್ಕೃಷ್ಟವಾದ ಪೈರು ಮತ್ತೂ ಬೆಳೆಯುವದೆಂಬುದನ್ನು ಅವರೇನು ಬಲ್ಲರು? ಇದರಂತೆ ಈ ನಮ್ಮ ಅಂತಃಕರಣದ ಕ್ಷೇತ್ರಗಳಲ್ಲಿ ಬೆಳೆಯಬಾರದ ಭಾವನೆಗಳು ಬೆಳೆದುಕೊಂಡು ಅದರ ಸದುಪಯೋಗವನ್ನು ತಪ್ಪಿಸಿರುತ್ತವೆ. ಇದನ್ನು ಕ್ರಮವರಿತು ಕೃಷಿಮಾಡಿದರೆ, ಭಗವಂತನ ಸಂಕಲ್ಪಕ್ಕೆ ಅನುಗುಣವಾದ ಸದ್ಭಾವನೆಗಳನ್ನು ಮೊಳೆಯುವಂತೆ ಮಾಡಿಕೊಂಡರೆ, ಇದೇ ಅಂತಃಕರಣವು ನಂದನವನವಾಗುವದು, ಶಾಂತಿಯ ತವರುಮನೆಯಾಗುವದು, ನಮ್ಮ ಹೊರಗಿನ ಜೀವನವೂ ನಮಗೆ ಸುಖದಾಯಕವಾಗುವಂತೆ ಮಾಡಬಲ್ಲ ಸಂಜೀವಿನಿಯ ಬೇರು ಇದೆಂಬುದೂ ಗೊತ್ತಾಗುವದು.

## 5. ಕಾಲದ ಸದುಪಯೋಗ-ಭಗವಂತನಿಗೆ ಶರಣು

ಕಾಲಪ್ರವಾಹದಲ್ಲಿ ಈಗಿನ ಕ್ಷಣವೇ ಉತ್ತಮಕಾಲವು, ದೇಶದ ಹರಡಿಕೆಯಲ್ಲಿ ಈಗ ನಾವು ನಿಂತಿರುವ ದೇಶವೇ ಪವಿತ್ರತಮವಾದದ್ದು. ಈ ಭಾವನೆಯನ್ನು ನಾವು ಚೆನ್ನಾಗಿ ಬಲಪಡಿಸಿಕೊಳ್ಳಬೇಕು. ನಮ್ಮ ಅಧ್ಯಾತ್ಮಸಾಧನೆಯು ಬಲಿಷ್ಠವಾಗಿ ಫಲವನ್ನು ಕೊಡುವದಕ್ಕೂ ನಮ್ಮ ಜೀವನದ ಕಷ್ಟಪರಂಪರೆಗಳ ಗಂಟು ಸಡಿಲವಾಗಿ ಸುಖದ ಬಾಗಿಲು ತೆರೆಯುವದಕ್ಕೂ ಈ ಭಾವನೆಯೇ ಮುಖ್ಯೋಪಾಯವಾಗಿರುತ್ತದೆ.

ಇಂದ್ರಿಯವೇದ್ಯವಾಗಿರುವ ಹೊರಗಿನ ಪ್ರಪಂಚವು ದೇಶಕಾಲಗಳ ಬಲೆಯಲ್ಲಿ ಸಿಕ್ಕಿಕೊಂಡು ನರಳುತ್ತಿರುವದೆಂಬುದನ್ನು ನಾವು ಮೊಟ್ಟಮೊದಲು ಮನದಂದು ಕೊಳ್ಳಬೇಕು. ಆ ಪ್ರಪಂಚದಲ್ಲಿರುವ ಯಾವ ವಸ್ತುವೂ ದೇಶಕಾಲಗಳನ್ನು ಬಿಟ್ಟು ಇರುವ ಹಾಗಿಲ್ಲ. ಅದು ಯಾವದಾದರೂ ಒಂದು ಕಾಲದಲ್ಲಿರಬೇಕು, ಯಾವದಾದರೊಂದು ದೇಶದಲ್ಲಿರಬೇಕು. ಅದನ್ನು ನಾವು ಪಡೆದುಕೊಳ್ಳಬೇಕಾದರೆ ಆ ದೇಶಕ್ಕೆ ನಾವು ಹೋಗಬೇಕು, ಅದರ ಕಾಲದವರೆಗೂ ಕಾಯಬೇಕು.

ಈ ಕಾರಣದಿಂದ ನಮ್ಮ ಅಂತಃಕರಣದಲ್ಲಿ ದೇಶಕಾಲಗಳ ಭಾವನೆಯು ಬಲವಾಗಿದ್ದುಕೊಂಡುಬಿಟ್ಟಿರುವದು. ಆದರೆ ಅದೇನು ಮಾಯೆಯೊ, ನಾವು ಈಗಿನ ಕಾಲದ, ಮತ್ತು ಈ ದೇಶದ, ಭಾವನೆಯನ್ನು ಅಷ್ಟಾಗಿ ಬಲಪಡಿಸಿ ಕೊಂಡಿರುವದಿಲ್ಲ. ಇದರಿಂದ ನಮಗೆ ಜೀವನದಲ್ಲಿ ಆನಂದವು ದಕ್ಕುವದಕ್ಕೆ ಒಂದು ಹೆಚ್ಚಿನ ಅಡಚಣೆಯಾಗಿರುತ್ತದೆ. ಈ ತಿಂಗಳು ನಾನು ಕಾಲದ ವಿಷಯದಲ್ಲಿಯೇ ಮುಖ್ಯವಾಗಿ ಮಾತನಾಡುವೆನು, ದೇಶದ ವಿಷಯಕ್ಕೆ ವಾಚಕರು ತಾವೇ ವಿಚಾರಣೆಯನ್ನು ಊಹಿಸಿಕೊಳ್ಳಬೇಕು. ಅಥವಾ ಅವಕಾಶವು ದೊರೆತರೆ ಮುಂದೆ ಒಂದು ಸಂದೇಶದಲ್ಲಿ ಆ ವಿಷಯವನ್ನು ನಾನೇ ಚರ್ಚಿಸುವೆನು.

ಹಿಂದಿನ ಕಾಲವು ಕಳೆದುಹೋಗಿರುತ್ತದೆ, ಸತ್ತುಹೋಗಿರುತ್ತದೆ; ಆದರೂ ನಾವು ಅದನ್ನು ಬಿಡಲೊಲ್ಲೆವು. ಹಿಂದೆ ತಾವು ಮಾಡಿರುವ ಕಾರ್ಯಗಳನ್ನು ನೆನಸಿಕೊಳ್ಳು ವದರಲ್ಲಿಯೇ ಕೆಲವರು ಕಾಲವನ್ನು ಕಳೆಯುತ್ತಿರುವರು. 'ಆಗ ಹಾಗೆ ಮಾಡಿದೆನು, ಹೀಗೆ ಮಾಡಿದೆನು'-ಎಂದು ಕೊಚ್ಚಿಕೊಳ್ಳುವವರ ಮಾತು ಹಾಗಿರಲಿ, 'ಅಯ್ಯೋ, ನಾನು ಹೀಗೆ ಮಾಡಲಿಲ್ಲವಲ್ಲ ! ಹಾಗೆ ಮಾಡಿಬಿಟ್ಟೆನಲ್ಲ !' ಎಂದು ಪಶ್ಚಾತ್ತಾಪ ಪಡುವವರು ಕೂಡ ವ್ಯರ್ಥವಾಗಿ ಕಾಲವನ್ನು ಕಳೆದಂತೆಯೇ ಸರಿ. ಹಿಂದೆ ಮಾಡಿದ್ದನ್ನು ಸರಿಪಡಿಸುವದೇ ಆಗಲಿ ಅಥವಾ ಮಾಡದೆ ಇರುವದನ್ನು ಈಗ ಮಾಡಿ ಹಿಂದಕ್ಕೆ ತಳ್ಳುವದಕ್ಕಾಗಲಿ ಆದೀತೆ? ಹಿಂದಿನ ಕಾಲದ ಒಂದೇ ಕ್ಷಣವು ಕೂಡ ಈಗ ಮತ್ತೆ ನಮಗೆ ಸಿಕ್ಕಲಾರದು. ಕಳೆದದ್ದು ಕಳೆದೇಹೋಯಿತು. ಆದರೂ ನಾವು ಮೃತಕಾಲದ ಮಾತನ್ನು ಆಡುತ್ತಾ ಕುಳಿತಿರುವದು ಎಂಥಾ ಮೂರ್ಖತನವು!

ಇದರಂತೆ ಮುಂದಿನ ಕಾಲವೆಂಬುದು ಇನ್ನೂ ಹುಟ್ಟಿಯೇ ಇರುವದಿಲ್ಲ. ಆದರೂ 'ಮುಂದೆ ನಾನು ಹಾಗೆ ಮಾಡುವೆನು, ಹೀಗೆ ಮಾಡುವೆನು'-ಎಂದು ಗಾಳಿಯ ಗೋಪುರವನ್ನು ಕಟ್ಟುತ್ತಿರುವದು ನಮ್ಮಲ್ಲಿ ಬಹುಮಂದಿಯಲ್ಲಿ ವಾಡಿಕೆ ಯಾಗಿರುತ್ತದೆ. ಇಷ್ಟೇ ಅಲ್ಲ. 'ಮುಂದೆ ಹಾಗಾದರೇನು ಗತಿ! ಹೀಗಾಗದೆ ಇದ್ದರೇನು ಗತಿ !' ಎಂಬ ಅಂಜಿಕೆಯನ್ನು ಮೈಮೇಲೆ ಹಾಕಿಕೊಂಡು ನರಳುವವರೂ

ಕಡಿಮೆಯಿಲ್ಲ. ಆದರೆ ಹಿಂದಿನ ಕಾಲದಲ್ಲಿ ನಡೆದದ್ದು ಸ್ವಲ್ಪ ಮಟ್ಟಿಗೆ ನೆನಪಿನಲ್ಲಿ ಯಾದರೂ ಉಳಿದುಕೊಂಡಿರುತ್ತದೆ; ಮುಂದಿನ ಕಾಲದಲ್ಲಿ ಆಗುವದು ಮಾತ್ರ ಏನೆಂಬುದು ದೇವತೆಗಳಿಗೆ ಮಾತ್ರವೇ ಗೊತ್ತು !

ಮನುಷ್ಯನ ಸಾಧಾರಣಜೀವನವು ಹಿಂದಿನ ಕಾಲದಲ್ಲಿ ತಾನು ಮಾಡಿದ್ದರ ಫಲವನ್ನು ಮನಸ್ಸಿಗೆ ತಂದುಕೊಳ್ಳುವದು; ಅದರ ಆಧಾರದಿಂದ ಮುಂದೆ ಹೀಗೆ ಆಗುವದೆಂದು ಕಲ್ಪಿಸಿಕೊಂಡು ಕೆಲಸಕ್ಕೆ ಹೊರಡುವದು–ಈ ಎರಡರ ಸಾಲಾಗಿರು ತ್ತದೆ. ಅಥವಾ ಹಿಂದಿನ ಕಾಲದಲ್ಲಿ ತಾನು ಮಾಡಿದ್ದರ ದುಷ್ಪರಿಣಾಮವನ್ನು ನೆನಪಿಸಿಕೊಂಡು ಪಶ್ಚಾತ್ತಾಪಪಡುವದು; ಇನ್ನುಮುಂದೆ ಹೀಗೆ ಎಂದಿಗೂ ಮಾಡುವದಿಲ್ಲ ಎಂದು ಸಂಕಲ್ಪಿಸುತ್ತಿರುವದು–ಈ ಎರಡರ ಸಾಲಾಗಿರುತ್ತದೆ. ಆದರೆ ಹಿಂದಿನ ಕಾಲದ ಜೀವನವು ನಮಗೆ ಕೊಟ್ಟಿರುವ ಸಂಸ್ಕಾರವೊಂದು ಹೊರತು ಅದರ ಯಾವದೊಂದಂಶವೂ ನಮಗೆ ಮತ್ತೆ ದೊರೆಯುವಂತಿರುವದಿಲ್ಲ. ಈ ಜೀವನನದಿಯು ಭೂಲೋಕದ ಇತರ ನದಿಗಳ ಹಾಗೆ ಒಂದು ಗೊತ್ತಾದ ಪಾತ್ರವನ್ನು ಮಾಡಿಕೊಂಡು ಹರಿಯುತ್ತಿರುವದಿಲ್ಲ. ಇಲ್ಲಿ ನನ್ನ ಬಟ್ಟೆಯು ನದಿಯಲ್ಲಿ ಬಿದ್ದರೆ ಅಲ್ಲಿ ತೇಲಿಕೊಂಡು ಹೋಗುತ್ತಿರಬಹುದು–ಎಂದು ನಾವು ಲೆಕ್ಕಹಾಕಿದಂತೆ ಹಿಂದೆ ನಾವು ಮಾಡಿದ್ದರ ಫಲವು ಮುಂದೆ ಇಂಥ ಕಾಲದಲ್ಲಿ ಇಂಥ ಸ್ಥಲದಲ್ಲಿ ಹೀಗೆ ಕಾಣಿಸಬಹುದೆಂದು ಲೆಕ್ಕಹಾಕಿ ತಿಳಿದುಕೊಳ್ಳುವದಕ್ಕೆ ಬರುವದೇ ಇಲ್ಲ. ಆದರೂ ನಾವು ಸತ್ತಿರುವ ಹಿಂದಿನ ಕಾಲಕ್ಕೂ ಹುಟ್ಟದೆ ಇರುವ ಮುಂದಿನ ಕಾಲಕ್ಕೂ ಗಂಟುಹಾಕದೆ ಇರುವದೇ ಇಲ್ಲ !

ಕರ್ಮಕ್ಕೆ ಫಲವುಂಟೆಂಬ ನಿಯಮವೇನೂ ಸುಳ್ಳಲ್ಲ. ಹಿಂದಿನ ಕರ್ಮಗಳ ಫಲವನ್ನು ನಾವು ಈಗ ಅಥವಾ ಇದಕ್ಕೆ ಮೊದಲು ಎಷ್ಟೋ ಕಾಲ ಅನುಭವಿಸಿರುತ್ತೇವೆ. ನಾವು ಮತ್ತೊಬ್ಬರಿಗೆ ಮಾಡಿರುವ ಒಳ್ಳೆಯದು ಅಥವಾ ಕೆಟ್ಟದ್ದು ಅವರಿಗೂ ಒಂದಾನೊಂದು ವಿಶೇಷರೂಪವಾದ ಅನುಭವವನ್ನು ಕೊಟ್ಟಿರುತ್ತದೆ; ನಮಗೂ ಒಂದಾನೊಂದು ಅನುಭವವಿಶೇಷವನ್ನು ಉಂಟು ಮಾಡಿರುತ್ತದೆ. ಸಚೇತನರಾಗಿರುವ ಜೀವರುಗಳು ಒಬ್ಬರಿಗೊಬ್ಬರು ಮಾಡುವ ಕ್ರಿಯೆಯೂ ಪ್ರತಿಕ್ರಿಯೆಯೂ ಅವರಿಗೆ ಎಷ್ಟೋ ಅನುಭವವಿಶೇಷಗಳನ್ನು ತಂದುಕೊಟ್ಟಿರುವದು ನಿಜ; ಆದರೆ ಹೀಗೆ ಆಗುವ ಕರ್ಮಫಲಗಳು ಎಷ್ಟೋ ವೇಳೆಗಳಲ್ಲಿ ನಮಗೆ ಯಾವ ಕರ್ಮದ ಫಲವೆಂಬುದು ಗೊತ್ತೇ ಆಗುವದಿಲ್ಲ. ಆದ್ದರಿಂದಲೇ "ಹಿಂದೆ ನಾನು ಯಾರಿಗೆ ಏನು ಮಾಡಿದ್ದೆನೊ, ಈಗ ನನಗೆ ಈ ಫಲವಾಗುತ್ತಿದೆ" ಎಂದು ಜನರು ಆಡಿಕೊಳ್ಳುತ್ತಿರುವದು ಕೇಳಬರುತ್ತದೆ.

ಈ ರೀತಿಯಲ್ಲಿ ನೋಡಿದರೆ ಹಿಂದಿನ ಕರ್ಮಗಳನ್ನು ಈಗ ನಾವು ಮಾರ್ಪಡಿಸುವದಕ್ಕೆ ಆಗದೆ ಇರುತ್ತದೆ; ಮುಂದೆ ಅನಿರ್ದಿಷ್ಟಕಾಲದಲ್ಲಿ ಆಗ ಬಹುದಾದ ಕರ್ಮಫಲಗಳನ್ನೂ ನಾವು ತಪ್ಪಿಸಿಕೊಳ್ಳುವದಕ್ಕೆ ಆಗದೆ ಇರುತ್ತದೆ. ಆದ್ದರಿಂದ ಕರ್ಮದಿಂದ ಪಾರಾಗುವದು ಹೇಗೆ? ಕರ್ಮದ ಗತಿಯು ಅತ್ಯಂತ ಗಹನವಾಗಿದೆಯಲ್ಲ !- ಎಂದು ನಮಗೆ ನಿರಾಶೆಯಾಗಬಹುದು. ಆದರೆ ಇನ್ನೊಂದು ದೃಷ್ಟಿಯಿಂದ ನೋಡಿದರೆ ಕರ್ಮದ ನಿಯಮವನ್ನೇ ಮಾರ್ಪಡಿಸುವ ಶಕ್ತಿಯು ಮಾನವನಿಗೆ ಇದೆ ಎನ್ನುವದು ಗೊತ್ತಾಗುತ್ತದೆ. ಹಿಂದಿನ ಮುಂದಿನ ಕಾಲಗಳನ್ನು ಸ್ವಾಧೀನಕ್ಕೆ ತಂದುಕೊಳ್ಳುವದು ನಮ್ಮಿಂದ ಆಗದೆ ಇರಬಹುದು. ಆದರೆ ಇಂದಿನ ಕಾಲವನ್ನು ಉಪಯೋಗಿಸುವ ಅವಕಾಶವನ್ನು ಭಗವಂತನು ನಮಗೆ ಕೊಟ್ಟಿರುತ್ತಾನೆ. ನಿನ್ನೆಯ ದಿನವು ಹೊರಟುಹೋಯಿತು, ಅದು ನಮಗೆ ಮತ್ತೆ ಸಿಕ್ಕುವಂತಿಲ್ಲ; ನಾಳೆಯು ಇನ್ನೂ ಹುಟ್ಟಿಲ್ಲ, ಈಗ ನಾವು ಅದನ್ನು ಏನು ಮಾಡುವದಕ್ಕೂ ಬರುವದಿಲ್ಲ, ಆದರೇನು? ಇಂದಿನ ದಿನವು ಈಗ ನಮ್ಮ ವಶದಲ್ಲಿದೆ, ಜೀವಂತವಾಗಿರುತ್ತದೆ. ಇದನ್ನು ನಾವು ಉಪಯೋಗಿಸಿಕೊಳ್ಳಬಹುದು. ಅದನ್ನು ಸರಿಯಾಗಿ ಉಪಯೋಗಿಸಿಕೊಂಡರೆ ನಮ್ಮ ಜೀವನದ ರೀತಿಯೇ ಸಂಪೂರ್ಣವಾಗಿ ಸುಖದಾಯಕವಾಗುವಂತೆ ನಾವು ಮಾರ್ಪಡಿಸಿಕೊಳ್ಳಬಹುದು. ಇಂದಿನ ದಿನವನ್ನು ಸರಿಯಾಗಿ ಉಪಯೋಗಿಸಿಕೊಳ್ಳುವದು ಹೇಗೆ? ಹಿಂದಿನ ಕಾಲದಲ್ಲಿ ನಾವು ಮಾಡಿರುವ ಒಳ್ಳೆಯದನ್ನು ಮನಸ್ಸಿನಲ್ಲಿ ಹೊರಳಿಸಿಕೊಂಡು ಹಿಗ್ಗುವ, ಅಥವಾ ಕೆಟ್ಟದ್ದನ್ನು ನೆನಸಿಕೊಳ್ಳುತ್ತಾ ಪಶ್ಚಾತ್ತಾಪಪಡುತ್ತಿರುವ ವ್ಯರ್ಥಕಾಲ ಕ್ಷೇಪವನ್ನು ಮಾಡಬಾರದು. ಮುಂದಿನ ಕಾಲದಲ್ಲಿ ಮಾಡಬಹುದಾದ ಕಾರ್ಯಗಳ ಮನಸ್ಸಿನ ಮಂಡಿಗೆಯನ್ನು ಮನಸ್ಸಿನಲ್ಲಿಯೇ ಹೊರಳಾಡಿಸುತ್ತಲೂ ಕಾಲವನ್ನು ಕಳೆಯಬಾರದು. ಹೀಗೆ ಹಿಂದುಮುಂದಿನ ಕಾಲಗಳನ್ನು ಮನದಂದುಕೊಳ್ಳುತ್ತಿರುವದರಿಂದ ನಮ್ಮ ಮಾನಸಿಕಶಕ್ತಿಯು ಕಡಿಮೆಯಾಗುವದು, ಭಾವನಾಶಕ್ತಿಯು ಕುಂದುವದು. ಅದರ ಫಲವಾಗಿ ನಮ್ಮ ಸಂಕಲ್ಪಶಕ್ತಿಯೂ ಕುಗ್ಗಿ ಶರೀರದ ಆರೋಗ್ಯದ ಮೇಲೂ ಕೆಟ್ಟ ಪರಿಣಾಮವನ್ನು ಮಾಡುವ ಸಂಭವವಿದೆ. ಜೀವಂತವಾದ ಈಗಿನ ಕಾಲವನ್ನು ಸರಿಯಾಗಿ ಉಪಯೋಗಿಸುವೆನೆಂದು ಸೊಂಟಕಟ್ಟಿಕೊಂಡು ಹೊರಡಬೇಕು. ಇಂದು ನಮಗೆ ಬಂದಿರುವ ಕಷ್ಟಗಳನ್ನು ಪರಿಹರಿಸಿಕೊಳ್ಳುವದಕ್ಕೆ ಪ್ರಯತ್ನಮಾಡಬೇಕು; ಇಂದು ನಮಗೆ ದೊರಕಿರುವ ಅವಕಾಶಗಳನ್ನು ಸದುಪಯೋಗಮಾಡಿಕೊಳ್ಳಬೇಕು. ಇದೇ ಜಾಣತನವು.

ಇದುವರೆಗೆ ವ್ಯವಹಾರದೃಷ್ಟಿಯಿಂದ ವಿಚಾರಮಾಡಿ ವರ್ತಮಾನಕಾಲದ ಸದುಪಯೋಗವೇ ಮನುಷ್ಯನಿಗೆ ಅತ್ಯಂತಶ್ರೇಯಸ್ಕರ ಎಂಬುದನ್ನು ಕಂಡು

ಕೊಂಡದ್ದಾಯಿತು. ಇನ್ನು ಅಧ್ಯಾತ್ಮವಿದ್ಯೆಯ ದೃಷ್ಟಿಯಿಂದ ನೋಡಿದರೆ ವರ್ತಮಾನ ಕಾಲವನ್ನು ಹೇಗೆ ಸದುಪಯೋಗಿಮಾಡಿಕೊಳ್ಳಬಹುದೆಂಬುದನ್ನು ಅಧ್ಯಾತ್ಮ ದೃಷ್ಟಿಯಿಲ್ಲದಿರುವದರಿಂದಲೇ ಮಾನವನು ಭೂತಕಾಲದ ಪರಾಮರ್ಶದಲ್ಲಿಯೂ ಭವಿಷ್ಯತ್ಕಾಲದ ನಿರೀಕ್ಷಣೆಯಲ್ಲಿಯೂ ವ್ಯರ್ಥಕಾಲಕ್ಷೇಪವನ್ನು ಮಾಡಿ ಆಯುಸ್ಸನ್ನು ಕಳೆದುಕೊಳ್ಳುತ್ತಿದ್ದಾನೆ.

ಅಧ್ಯಾತ್ಮದೃಷ್ಟಿಯು ವರ್ತಮಾನಕಾಲಕ್ಕೆ ಬಹಳ ಹೆಚ್ಚಿನ ಬೆಲೆಯನ್ನು ಕೊಟ್ಟಿರುತ್ತದೆ. ಆ ದೃಷ್ಟಿಯ ಜನರು ಹೇಳುತ್ತಿರುವದೇನೆಂದರೆ ಕಾಲವು ಎಲ್ಲವನ್ನೂ ತನ್ನ ಬಲೆಯಲ್ಲಿ ಸಿಕ್ಕಿಸಿಕೊಂಡಿರುವಂತೆ ತೋರಿದರೂ ಅದು ಭಗವಂತನಿಗೆ ಎಲ್ಲಾ ಬಗೆಯಿಂದಲೂ ವಶವಾಗಿರುತ್ತದೆ. ನಮ್ಮಂಥ ಜೀವರುಗಳಿಗೆ ಹಿಂದಿನ ಮುಂದಿನ ಕಾಲಗಳು ಸ್ವಾಧೀನಕ್ಕೆ ಬರುವದಿಲ್ಲವೆಂದು ಲೌಕಿಕ ದೃಷ್ಟಿಗೆ ತೋರುತ್ತಿದ್ದರೂ ಭಗವಂತನಿಗೆ ಮೂರುಕಾಲಗಳೂ ಸಂಪೂರ್ಣವಾಗಿ ಅಡಿಯಾಳಾಗಿರುತ್ತವೆ. ಆದ್ದರಿಂದಲೇ ಭಗವಂತನಿಗೆ "ಭೂತಭವ್ಯಭವನ್ನಾಥಃ"-ಹಿಂದಿನ ಮುಂದಿನ ಕಾಲದ ಒಡೆಯನು-ಎಂದು ಹೆಸರು ಬಂದಿರುತ್ತದೆ. ನಾವು ಕಾಲದೊಳಗೆ ಇರುವದರಿಂದ ಹಿಂದಿನ ಕಾಲವು ಎಲ್ಲಿಂದ ಪ್ರಾರಂಭವಾಗಿರುವದೆಂಬುದು ನಮಗೆ ಕಾಣುವದಿಲ್ಲ; ಮುಂದಿನ ಕಾಲವು ಎಲ್ಲಿಯವರೆಗೆ ಹರಡಿಕೊಂಡಿರುವದೆಂಬುದೂ ನಮಗೆ ತಿಳಿಯುವಂತಿಲ್ಲ. ಆದರೆ ಈ ಅನಾದ್ಯನಂತವಾದ ಕಾಲವು ಸರ್ವವ್ಯಾಪಕನಾದ ಭಗವಂತನ ದೃಷ್ಟಿಯಲ್ಲಿ ಪರಿಚ್ಛಿನ್ನವಾಗಿರುತ್ತದೆ; ಆತನಿಗೆ ಭೂತಭವಿಷ್ಯದ್ವರ್ತಮಾನಗಳೆಲ್ಲವೂ ವರ್ತಮಾನವೇ ಆಗಿರುತ್ತದೆ. ಕಾಲವು ಆತನ ಅಪ್ಪಣೆಯಿಂದಲೇ ಹರಿಯುವ ನದಿಯಾಗಿರುತ್ತದೆ. ಈ ದೃಷ್ಟಿಯಿಂದ ನೋಡಿದಾಗ ವರ್ತಮಾನಕಾಲವು, ಈ ಕ್ಷಣವು, ಕಾಲವೆಂಬ ಸರಪಳಿಯಲ್ಲಿ ಒಂದು ಕೊಂಡಿಯಾಗಿರುತ್ತದೆ. ಈಗಿನ ಕ್ಷಣವೆಂಬ ಕೊಂಡಿಯನ್ನು ಹಿಡಿದುಕೊಳ್ಳಿರಿ; ಭಗವಂತನಲ್ಲಿ ನಿಂತುಕೊಂಡರೆ ಈ ಕೊಂಡಿಯು ನಿಮಗೆ ಸಂಪೂರ್ಣವಾಗಿ ವಶವಾಗಿಬಿಡುತ್ತದೆ. ಇದನ್ನು ಹಿಡಿದು ಎಳೆದರೆ ಹಿಂದಿನ ಕಾಲದ ಕೊಂಡಿಗಳೂ ಮುಂದಿನ ಕಾಲದ ಕೊಂಡಿಗಳೂ ತಮಗೆ ತಾವೇ ನಿಮ್ಮ ಕೈಗೆ ಸಿಕ್ಕಿದಂತಾಗುವವು.

ಆದ್ದರಿಂದ ಹಿಂದಿನ ಕಾಲವು ಹಿಂದಿನದಾಯಿತು; ಅದರ ಫಲವು ಸಂಸ್ಕಾರರೂಪದಿಂದ ನಮ್ಮ ಚಿತ್ತದಲ್ಲಿ ನಿಂತುಬಿಟ್ಟಿದೆ. ಈಗ ನಾವು ಹಿಂದಿನ ಕಾಲವನ್ನು ಮತ್ತೇನೂ ಮಾಡುವದಕ್ಕೆ ಬರುವದಿಲ್ಲ. ಒಬ್ಬರಿಗೆ ಒಳ್ಳೆಯದನ್ನು ಮಾಡಿದ್ದರೆ ನಮಗೆ ಅದರ ಸುಸಂಸ್ಕಾರವು ಆಗಿಬಿಟ್ಟಿದೆ; ಒಬ್ಬರಿಗೆ ಕೆಟ್ಟದ್ದನ್ನು

ಮಾಡಿದ್ದರೆ ನಮಗೆ ಅದರ ಕುಸಂಸ್ಕಾರವೂ ಆಗಿಬಿಟ್ಟಿದೆ; ಕರ್ಮದ ಫಲವು ನಮಗೆ ಬಹುಮಾನವೆಂದಾಗಲಿ ದಂಡನೆಯೆಂದಾಗಲಿ ಎಣಿಸುವಹಾಗಿಲ್ಲ; ಅಧ್ಯಾತ್ಮ ದೃಷ್ಟಿಯಿಂದ ಶ್ರೇಯಸ್ಸಿಗೆ ಅನುಕೂಲವಾದ ಅಥವಾ ಪ್ರತಿಕೂಲವಾದ ಸಂಸ್ಕಾರ ವನ್ನುಂಟುಮಾಡುವದೇ ಅದರ ಉದ್ದೇಶವೆನ್ನಬಹುದಾಗಿದೆ. ಆದರೆ ಯಾವನು ಯಾವ ಕ್ಷಣದಲ್ಲಿ ಭಗವಂತನನ್ನು ಶರಣುಹೊಂದುವನೋ ಅವನಿಗೆ ಇನ್ನು ಕರ್ಮದಿಂದಾಗಬೇಕಾದ ಸಂಸ್ಕಾರದ ಕೃತ್ಯವೇನೂ ಇರುವದಿಲ್ಲ. ಭಗವಂತನ ಅನುಗ್ರಹದಿಂದ ಇನ್ನು ಅವನು ಕರ್ಮಪ್ರವಾಹಕ್ಕೆ ಸಿಕ್ಕುವಂತೆಯೇ ಇರುವದಿಲ್ಲ.

ಹಿಂದೆ ಮಾಡಿರುವ ಪಾಪಫಲಗಳಿಗೆ ಯಮಲೋಕದಲ್ಲಿ ನಮಗೆ ಸಹಿಸಲಸದಳ ವಾದ ನರಕಯಾತನೆಗಳು ಆಗುವವೆಂದು ಪುರಾಣಾದಿಗಳಲ್ಲಿ ವರ್ಣಿಸಿದೆಯಷ್ಟೆ. ಅವೆಲ್ಲವೂ ಮೇಲೆ ಹೇಳಿದಂತೆ ಜೀವನಿಗೆ ಸಂಸ್ಕಾರಕ್ಕಾಗಿ ಆಗುವ ಅನುಭವ ವಿಶೇಷಗಳೆಂದು ಭಾವಿಸಬಹುದು. ಆದರೆ ಯಾವನು ಭಗವಂತನ ಬಳಿಗೆ ಶರಣುಬಂದಿರುವನೋ ಅವನಿಗೆ ಯಾವ ನರಕಯಾತನೆಯೂ ಇಲ್ಲವೆಂಬುದನ್ನು ಒಬ್ಬ ಭಕ್ತನು ಹೀಗೆ ವರ್ಣಿಸಿರುತ್ತಾನೆ:

**ಮಾ ಭೀರ್ಮನ್ದಮನೋ ವಿಚಿನ್ತ್ಯ ಬಹುಧಾ ಯಾಮೀಶ್ಚಿರಂ ಯಾತನಾ**
**ನೈವಾಮೀ ಪ್ರಭವನ್ತಿ ಪಾಪರಿಪವಃ ಸ್ವಾಮೀ ನನು ಶ್ರೀಧರಃ।**
**ಆಲಸ್ಯಂ ವ್ಯಪನೀಯ ಭಕ್ತಿಸುಲಭಂ ಧ್ಯಾಯಸ್ವ ನಾರಾಯಣಂ**
**ಲೋಕಸ್ಯ ವ್ಯಸನಾಪನೋದನಕರೋ ದಾಸಸ್ಯ ಕಿಂ ನ ಕ್ಷಮಃ॥**

"ಎಲೆ ಮೂಢಮನಸ್ಸೆ, ಯಮಲೋಕದಲ್ಲಿ ಬಹುಕಾಲದವರೆಗೆ ಆಗುವ ಯಾತನೆಗಳನ್ನು ಕುರಿತು ಚಿಂತಿಸಿಚಿಂತಿಸಿ ಅಂಜಿಕೆಪಡಬೇಡ. ಏಕೆಂದರೆ ಪಾಪಿಗಳಿಗೆ ಶತ್ರುಗಳಾದ ಆ ಯಾತನೆಗಳು ನಿನ್ನ ಮೇಲೆ ಕೈಮಾಡಲಾರವು. ಶ್ರೀಧರನು ಎಲ್ಲಕ್ಕೂ ಸ್ವಾಮಿಯಲ್ಲವೆ? ಆಲಸ್ಯವನ್ನು ಬಿಟ್ಟು ಕೂಡಲೆ ಭಕ್ತಿಸುಲಭನಾಗಿರುವ ನಾರಾಯಣನನ್ನು ಧ್ಯಾನಮಾಡು. ಲೋಕದ ದುಃಖವನ್ನೆಲ್ಲ ಹೋಗಲಾಡಿಸಬಲ್ಲ ಭಗವಂತನು ಅವನ ದಾಸನ ದುಃಖವನ್ನು ಕಳೆಯಲಾರನೇನು?" ಎಂಬುದು ಶ್ಲೋಕದ ಅರ್ಥ.

ಹಿಂದಿನ ಕಾಲದಲ್ಲಿ ನಾವು ಮಾಡಿದ ಕುಕರ್ಮಗಳಿಗೆ ಅಂಜಬೇಕಾದದ್ದಿಲ್ಲ; ಈಗಲೇ ಭಗವಂತನನ್ನು ಶರಣುಹೊಕ್ಕರೆ ಸಾಕು, ಅಷ್ಟುಮಾತ್ರದಿಂದ ಆ ಭಕ್ತಿ ಸುಲಭನಾದ ಪರಮಾತ್ಮನು ನಮ್ಮ ಪಾಪಗಳನ್ನೆಲ್ಲ ಮನ್ನಿಸಿ, ಅದರ ಸಂಸ್ಕಾರವನ್ನು ನಮಗೆ ಈ ಪಶ್ಚಾತ್ತಾಪರೂಪವಾಗಿ ತಿರುಗಿಸಿ ಚಿತ್ತಶುದ್ಧಿಯನ್ನುಂಟುಮಾಡಿ, ಪಾಪಪುಣ್ಯಗಳನ್ನು ಮೀರಿರುವ ತನ್ನಲ್ಲಿ ನಿಷ್ಠೆಯನ್ನೂ ಅನುಗ್ರಹಿಸಿಬಿಡುತ್ತಾನೆ.

ಇಲ್ಲಿ ಒಂದು ಶಂಕೆಯು ಏಳಬಹುದು; ಭಗವಂತನು ಕರುಣಾನಿಧಿಯಾದ್ದರಿಂದ ಆತನು ನಮ್ಮನ್ನು ಉದ್ಧಾರಮಾಡುವದಕ್ಕೆ ಯಾವಾಗಲೂ ಸಿದ್ಧನಾಗಿರಬಹುದು. ಆದರೆ ನಮಗೆ ಅನೇಕರು ಹಿಂದೆ ಮಾಡಿರುವ ಅಪಕಾರವನ್ನು ಮರೆಯದಿರುವಂತೆ ಸೇಡುತೀರಿಸಿಕೊಳ್ಳುವ ಬುದ್ಧಿಯೊಂದು ಉಂಟಾಗಿ ನಮ್ಮನ್ನು ಗೋಳುಗುಟ್ಟಿಸುತ್ತಿರುತ್ತದೆ. ಇನ್ನೂ ಕೆಲವು ಸಂದರ್ಭಗಳಲ್ಲಿ ನಾವು ಮತ್ತೊಬ್ಬರಿಗೆ ಮಾಡಿರುವ ಅಪಕಾರವು ಅವರಿಗೆ ನಾವು ಏನು ಪ್ರತ್ಯುಪಕಾರವನ್ನು ಮಾಡಿದರೂ ನೇರ್ಪಡಿಸಲಾರದಂಥ ನಷ್ಟವನ್ನುಂಟುಮಾಡಿಬಿಟ್ಟಿರುತ್ತದೆ. ನಾವು ಅಪಕಾರ ಮಾಡಿರುವವರಲ್ಲಿ ಕೆಲವರು ಈಗ ಇರುವದೇ ಇಲ್ಲ; ಅವರು ಕಾಲವಶರಾಗಿ ಹೋಗಿಬಿಟ್ಟಿರುತ್ತಾರೆ. ಇಂಥ ಸಂದರ್ಭಗಳಲ್ಲಿ ನಮಗೆ ಉಂಟಾಗಿರುವ ಪಶ್ಚಾತ್ತಾಪವನ್ನು ಹೇಗೆ ಕಳೆದುಕೊಳ್ಳುವದು?

ಈ ಶಂಕೆಗೆ ಉತ್ತರವೇನೆಂದರೆ, ಇಂದಿನ ಕಾಲವು ನಮ್ಮದು; ನಮ್ಮ ಎಲ್ಲಾ ಪಾಪಪುಣ್ಯಗಳನ್ನೂ ಉತ್ತಮವಾದ ದಿಕ್ಕಿಗೆ ಪ್ರವಹಿಸುವಂತೆ ಮಾಡಿ ನಮ್ಮನ್ನು ಈ ಕರ್ಮಪ್ರವಾಹದಿಂದ ಮೇಲಕ್ಕೆತ್ತುವ ಭಗವಂತನು ಈಗಲೇ ಇಲ್ಲಿಯೇ ನಮಗೆ ಸಿಕ್ಕುವಂತಿದ್ದಾನೆ. ಇಷ್ಟು ನಮಗೆ ಸಾಕಾಗಿದೆ. ನಮಗೆ ಮಿಕ್ಕ ಹೊಣೆಗಾರಿಕೆ ಏತಕ್ಕೆ? ಹಿಂದೆ ಮಾಡಿದ್ದನ್ನು ನೇರ್ಪಡಿಸುವ ಸ್ವಾತಂತ್ರ್ಯವಿಲ್ಲದೆ ಕಾಲಪ್ರವಾಹಕ್ಕೆ ಸಿಕ್ಕಿ ಕೊಚ್ಚಿಕೊಂಡು ಹೋಗುತ್ತಿರುವ ನಾವು ಹಿಂದೆ ಗತಿಸಿದ್ದಕ್ಕೆ ಈಗ ಏನುತಾನೆ ಮಾಡಬಲ್ಲೆವು? ಹೀಗಿದ್ದರೂ "ಆದದ್ದು ಆಗಿಹೋಯಿತು, ನನಗೇನು?'–ಎಂದು ಔದಾಸೀನ್ಯವನ್ನು ವಹಿಸಬೇಕೆಂದು ನನ್ನ ಅಭಿಪ್ರಾಯವಲ್ಲ. ನಮಗೆ ಒಬ್ಬರು ಹಿಂದೆ ಅಪಕಾರವನ್ನು ಮಾಡಿದ್ದರೆ ಅವರನ್ನು ಕ್ಷಾಂತಿಯಿಂದ ಮನ್ನಿಸಿಬಿಡುವದು, ಭಗವಂತನು ಎಲ್ಲರ ಹೃದಯದಲ್ಲಿಯೂ ಇದಾನೆಂಬ ಶಾಸ್ತ್ರೋಕ್ತಿಯನ್ನು ನಂಬಿ ಅವರನ್ನು ಪ್ರೇಮದಿಂದ ಕಾಣುವದು–ಇವು ಸೇಡಿನ ಬುದ್ಧಿಯನ್ನು ಸಡಿಲ ಮಾಡುವವು. ನಾವು ಹಿಂದೆ ಒಬ್ಬರಿಗೆ ಅಪಕಾರವನ್ನು ಮಾಡಿದ್ದರೆ ಈಗ ಅವರ ಕ್ಷಮೆಯನ್ನು ಬೇಡಿ ನಮ್ಮ ಅಪರಾಧವನ್ನು ಒಪ್ಪಿಕೊಳ್ಳಬಹುದು; ಅವರನ್ನು ಪ್ರೇಮದಿಂದ ಕಾಣುವದಕ್ಕೆ ಪ್ರಾರಂಭಿಸಬಹುದು. ಅವರಿಗೆ ಆಗಿದ್ದ ಅಪಾಯವನ್ನು ನಾವು ಈಗ ನೇರ್ಪಡಿಸುವದಕ್ಕೆ ಆಗದೆ ಇದ್ದರೆ, ಈಗಿನ ಸ್ಥಿತಿಯಲ್ಲಿ ನಾವು ನಮ್ಮ ಸುತ್ತುಮುತ್ತಲೂ ಇರುವವರಿಗೆ ನಮ್ಮಿಂದ ಆಗುವ ಪರಮೋಪಕಾರವನ್ನು ಮಾಡುವದಕ್ಕೆ ಪ್ರಯತ್ನಿಸಬಹುದು. ನಮ್ಮ ಸುತ್ತುಮುತ್ತಲೂ ಇರುವ ಪ್ರಾಣಿಗಳಲ್ಲಿ ಕ್ಷಮಾಗುಣನಿಧಿಯಾದ ಭಗವಂತನನ್ನು ಕಾಣುತ್ತಾ, "ಭಗವಂತ, ನಾನು ನಿನಗೆ ಅರಿಯದೆ ಮಾಡಿದ ಅಪರಾಧವನ್ನು ಮನ್ನಿಸು; ನನ್ನನ್ನು ನಿನ್ನ ಸೇವಕನನ್ನಾಗಿ ಪರಿಗಣಿಸು" ಎಂದು ಮನಸ್ಸಿನಲ್ಲಿಯೇ ಪ್ರತಿದಿನವೂ ಪ್ರಾರ್ಥಿಸಿಕೊಳ್ಳಬಹುದು.

ಈ ಸಂದೇಶದ ಸಾರವೆಲ್ಲ ಇಷ್ಟೇ: ಹಿಂದಿನ ಕಾಲದಲ್ಲಿ ನೀವು ಮಾಡಿರುವ ಉತ್ತಮ ಕಾರ್ಯಗಳನ್ನಾಗಲಿ ಕೆಟ್ಟ ಕರ್ಮಗಳನ್ನಾಗಲಿ ಮನಸ್ಸಿಗೆ ಹತ್ತಿಸಿಕೊಳ್ಳಬೇಡಿರಿ; ಮತ್ತೊಬ್ಬರು ನಿಮಗೆ ಮಾಡಿರಬಹುದಾದ ಅಪಕಾರಗಳನ್ನು ನೆನೆನೆನೆದು ಮುಯ್ಯಿ ತೀರಿಸಿಕೊಳ್ಳುವ ಹವಣಿಕೆಯನ್ನು ಬಿಟ್ಟುಬಿಡಿರಿ. ಮುಂದಿನ ಕಾಲದಲ್ಲಿ ಹೀಗಾಗ ಬಹುದು ಎಂದು ಗುಣಿಸಿಕೊಳ್ಳುತ್ತಾ ಅದರ ನಿರೀಕ್ಷಣೆಯಿಂದ ಸಂತೋಷದಲ್ಲಿ ಮುಳುಗದಿರಿ, ದುಃಖದಿಂದ ವಿಷಾದಪಡದಿರಿ. ಇಂದಿನ ದಿನವೇ ಶುಭದಿನವು, ಈಗಲೇ ಭಗವಂತನನ್ನು ಶರಣುಹೋಗುವೆನು–ಎಂಬ ಸತ್ಸಂಕಲ್ಪವನ್ನು ಮಾಡಿರಿ. ಮೂರು ಕಾಲಗಳಿಗೂ ಒಡೆಯನಾದ ಭಗವಂತನು ಎಲ್ಲವನ್ನೂ ನೇರ್ಪಡಿಸುವನು.

## 6. ಜೀವನದಕೇಂದ್ರ ಪರಮೇಶ್ವರನು

**"ಪರಮೇಶ್ವರನು ಸರ್ವಭೂತಗಳ ಹೃದಯದಲ್ಲಿಯೂ ಇರುವನು. ಅವನನ್ನು ಕಾಣದೆ ಎಲ್ಲರೂ ಮಾಯಾಸಂಸಾರದಲ್ಲಿ ತೊಳಲುತ್ತಿರುವರು. ಅವನನ್ನೇ ಸರ್ವಭಾವದಿಂದ ಶರಣುಹೊಂದಿ ಅವನನ್ನು ನಮ್ಮನಮ್ಮ ಹೃದಯದಲ್ಲಿಯೇ ಕಂಡುಕೊಳ್ಳಬೇಕು. ಆಗ ಆತನ ಪ್ರಸಾದದಿಂದ ನಮಗೆ ಪರಮಶಾಂತಿಯು ದೊರಕುವದು, ಶಾಶ್ವತಸ್ಥಾನವು ದೊರಕುವದು."**

–ಗೀತೆ 18–61, 62ರ ಭಾವಾರ್ಥ.

ಭಗವಂತನು ಅರ್ಜುನನ ಮೂಲಕವಾಗಿ ನಮಗೆಲ್ಲರಿಗೂ ಕಳುಹಿಸಿಕೊಟ್ಟಿರುವ ಈ ಸಂದೇಶಕ್ಕೆ ನಾವು ಕಿವಿಗೊಡಬೇಕು; ಅದರಂತೆ ಅನುಷ್ಠಿಸಬೇಕು. ಅದರಿಂದಲೇ ನಮಗೆ ನಿಃಶ್ರೇಯಸಪ್ರಾಪ್ತಿಯಾಗುವದು. ಪ್ರಪಂಚದ ಎಲ್ಲಾ ಧರ್ಮಗಳೂ ಈ ಗುರಿಯನ್ನೇ ಇಟ್ಟುಕೊಂಡಿರುತ್ತವೆ. ಅಧ್ಯಾತ್ಮ ವಿಚಾರದ ಸಾರವೇ ಇದು, ಅಧ್ಯಾತ್ಮ ಯೋಗಕ್ಕೆ ಲಕ್ಷ್ಯವೇ ಇದು. ಪ್ರತಿಯೊಬ್ಬನ ಜೀವನದಲ್ಲಿಯೂ ಪರಮೇಶ್ವರನೇ ಕೇಂದ್ರವಾಗಿರುತ್ತಾನೆ. ಆ ಕೇಂದ್ರವನ್ನು ಮುಟ್ಟುವವರೆಗೆ ಯಾವ ಜೀವರುಗಳಿಗೂ ಪರಮಶಾಂತಿಯು ದೊರಕುವದಿಲ್ಲ; ಅದನ್ನು ಸೇರುವವರೆಗೆ ಯಾರೊಬ್ಬರಿಗೂ ಶಾಶ್ವತವಾದ ಸ್ಥಾನವು ಸಿಕ್ಕಿರುವದಿಲ್ಲ. ಆ ಕೇಂದ್ರದ ಕಡೆಗೆ ನಮ್ಮ ಒಳಗಣ್ಣನ್ನು ತಿರುಗಿಸಿಕೊಳ್ಳಬೇಕು. ಅದನ್ನು ಮುಟ್ಟುವದಕ್ಕೆ ಹಂಬಲಿಸಬೇಕು. ಈ ಹಂಬಲಿಕೆಯೂ ಅದು ನೆರವೇರುವದೂ ಆ ಕೇಂದ್ರಭೂತನಾದ ಪರಮೇಶ್ವರನ ಪ್ರಸಾದದಿಂದಲೇ ದೊರಕತಕ್ಕವಾಗಿವೆ.

ಸಾಮಾನ್ಯರ ಜೀವನದಲ್ಲಿ ಶಾಂತಿಯ ಸುಳಿವೇ ಇರುವದಿಲ್ಲ. ಅವರ ಚಿತ್ತವು ಅತ್ತಿತ್ತ ಹರಿದಾಡುತ್ತಲೇ ಇರುತ್ತದೆ. ಅದಕ್ಕೆ ನೆಲೆಯಾಗಿ ನಿಲ್ಲುವದಕ್ಕೆ ಒಂದು ಶಾಶ್ವತವಾದ ಸ್ಥಾನವೇ ಇರುವದಿಲ್ಲ. ಅದು ಹೂವಿನಿಂದ ಹೂವಿಗೆ ಹಾರಾಡುವ

ಚಿಟ್ಟೆಯಂತೆ ಒಂದು ವಿಷಯದಿಂದ ಒಂದು ವಿಷಯಕ್ಕೆ ಹಾರಾಡುತ್ತಲೇ ಇರುತ್ತದೆ. ಅದಕ್ಕೆ ಯಾವದೊಂದು ವಸ್ತುವೂ ತೃಪ್ತಿಯನ್ನುಂಟುಮಾಡುತ್ತಿಲ್ಲ. ಅದಕ್ಕೆ ಎಲ್ಲೆಲ್ಲಿಯೂ ಏನೋ ಒಂದು ಅತೃಪ್ತಿ ಕಾರಣವು ಹುದುಗಿಸಿಕೊಂಡಿರುವಂತೆ ಕಾಣುತ್ತಿರುತ್ತದೆ. ಪ್ರತಿಯೊಂದು ವಸ್ತುವಿನಲ್ಲಿಯೂ ಏನೋ ಕೊರತೆಯಿರುವಂತೆ ಭಾಸವಾಗುತ್ತಿರುತ್ತದೆ. "ಹಾ ! ಸರಿ ! ಇದೀಗ ನಾನು ಹುಡುಕುತ್ತಿದ್ದದ್ದು. ಇನ್ನು ಇದರಿಂದ ಸುಖವನ್ನು ಸೂರೆಗೊಳ್ಳುವೆನು; ಇನ್ನು ಇಲ್ಲಿಂದ ಕದಲುವದಿಲ್ಲ, ನಾನು ಮತ್ತೆಲ್ಲಿಗೂ ಹೋಗುವದಿಲ್ಲ" ಎಂದು ಆ ಚಿತ್ತವು ಒಂದೊಂದು ವೇಳೆ ತೃಪ್ತಿಯನ್ನೂ ಸಮಾಧಾನವನ್ನೂ ಪಟ್ಟುಕೊಳ್ಳುವದುಂಟು. ಆದರೆ ಇಲ್ಲ; ತಾನು ಮಾಡಿಕೊಂಡಿದ್ದ ಭಾವನೆಯು ಭ್ರಾಂತಿಯೆಂದು ಬೇಗನೆ ಅದಕ್ಕೆ ಗೊತ್ತಾಗಿ ಬಿಡುತ್ತದೆ. ಒಂದೇ ವಸ್ತುವು ಈಗ ಬೇಕಾಗಿರುತ್ತದೆ, ಇನ್ನೊಂದು ಘಳಿಗೆಗೆ ಬೇಡವಾಗುತ್ತದೆ. ಈಗ ಅದರಿಂದಾಗುವ ಶೀತೋಷ್ಣಾದಿವೇದನೆಗಳು ಸುಖ ದಾಯಕವಾಗಿ ಕಾಣುತ್ತವೆ; ಆದರೆ ಇನ್ನು ಸ್ವಲ್ಪಹೊತ್ತು ಆಗುವದರೊಳಗಾಗಿ ಅದೇ ವೇದನೆಗಳು ದುಃಖದಾಯಕವಾಗಿಬಿಡುತ್ತವೆ. ಇಂಪಾದ ಶಬ್ದ, ಮೃದುವಾದ ಸ್ಪರ್ಶ, ಸುಂದರವಾದ ರೂಪ, ಮಧುರವಾದ ರಸ, ಮೂಗಿಗೆ ಒಪ್ಪಾದ ಪರಿಮಳಗಂಧ-ಎಂದು ಆರಿಸಿಕೊಂಡ ವಿಷಯಗಳಿಂದಾಗುವ ವೇದನೆಗಳು ಕೂಡ ಕಾಲಾಂತರದಲ್ಲಿ ನೀರಸವಾಗುತ್ತವೆ, ಅವುಗಳನ್ನು ದೂರಕ್ಕೆ ಸಾಗಿಸಿಕೊಳ್ಳಬೇಕೆಂದು ಕೂಡ ಭಾವನೆಯುಂಟಾಗಬಹುದು. ಇಂದ್ರಿಯಗಳಿಂದ ವಿಷಯಗಳನ್ನು ಮುಟ್ಟಿ ಮುಟ್ಟಿ, ಬೇರೆಬೇರೆಯ ವೇದನೆಗಳಿಂದ ಸುಖದುಃಖಗಳನ್ನು ಹೊಂದಿಹೊಂದಿ ಹರ್ಷವಿಷಾದಗಳಿಂದ ಏರಿಳಿತಗಳನ್ನು ಅನುಭವಿಸಿಅನುಭವಿಸಿ ಚಿತ್ತಕ್ಕೆ ಎಲ್ಲಿಯೂ ನಂಬಿಕೆಯಿಲ್ಲದಂತಾಗಿಬಿಟ್ಟಿರುವದು.

ಹೀಗೆ ವಿಷಯದಿಂದ ವಿಷಯಕ್ಕೆ ಹಾರಾಡುತ್ತಲೂ, ಒಂದೇ ವಿಷಯದಲ್ಲಿ ನಿಂತಾಗಲೂ ಅದಿರಾಡುತ್ತಲೂ ಇರುವ ಚಿತ್ತಕ್ಕೆ ಎಂದಿಗೆ ವಿಶ್ರಾಂತಿಯು ! ಎಂದಿಗೆ ಅದಕ್ಕೆ ಶಾಶ್ವತವಾದ ವಾಸಸ್ಥಾನವು ಎಲ್ಲಿ ಹೇಗೆ ದೊರೆಯುವದು?- ಎಂಬುದನ್ನು ತಿಳಿಯದೆ ಕಳವಳಿಸುತ್ತಿರುವ ಜೀವರು ಕೆಲವರುಂಟು. ಅವರೇ ಮುಮುಕ್ಷುಗಳು. ಪರಮಶಾಂತಿಯ, ನಿತ್ಯಸುಖದ, ಶಾಶ್ವತಸ್ಥಾನವು ಯಾವದೆಂಬು ದನ್ನು ಅರಿತುಕೊಳ್ಳುವ ಹಂಬಲಿಕೆಯಿಂದ ಕೂಡಿರುವ ಅವರನ್ನು

**ಚೇತೋಭೃಙ್ಗ ಭ್ರಮಸಿ ವೃಥಾ ಭವಮರುಭೂಮೌ ವಿರಸಾಯಾಮ್ ।**
**ಭಜ ಭಜ ಲಕ್ಷ್ಮೀನರಸಿಂಹಾನಘಪದಸರಸಿಜಮಕರನ್ದಮ್ ॥**

"ಎಲೈ ಚಿತ್ತವೆಂಬ ಭ್ರಮರವೆ, ಸಂಸಾರದ ಮರುಭೂಮಿಯಲ್ಲಿ ಸುಮ್ಮನೆ ಹಾರಾಡುತ್ತಿರುವೆಯಲ್ಲ! ಇದರಲ್ಲಿ ಯಾವ ರಸವಿದೆ? ಭಗವಂತನ ಅಡಿದಾವರೆಯ ಮಕರಂದವನ್ನು ಸೇವಿಸಿ ಸುಖಿಸು." ಈ ಉಪದೇಶವನ್ನು ನಾವು ನಮ್ಮ ಮನಸ್ಸಿಗೆ ಆಗಿಂದಾಗ್ಗೆ ಮಾಡಿಕೊಳ್ಳುತ್ತಲೇ ಇರಬೇಕು. ಇಂದ್ರಿಯಗಳಿಂದ ವಿಷಯಗಳನ್ನು ಭೋಗಿಸಿ ಸುಖವನ್ನೂ ಶಾಂತಿಯನ್ನೂ ಪಡೆದುಕೊಳ್ಳಬೇಕೆಂದು ಹಂಬಲಿಸುತ್ತಿರುವದು ಸಾಮಾನ್ಯರ ಚಿತ್ತದ ಸ್ವಭಾವವು. ಆದರೆ ವಿಷಯಪ್ರಪಂಚದಲ್ಲಿ ಸುಖಶಾಂತಿಗಳನ್ನು ಹುಡುಕುವದು ವ್ಯರ್ಥಪ್ರಯಾಸದ ಕೆಲಸವು. ಮರಳನ್ನು ಹಿಂಡಿದರೆ ಎಣ್ಣೆಯು ಬಂದೀತೆ? ಇಲ್ಲ. ಹೀಗೆಯೇ ಇಂದ್ರಿಯಗಳಿಂದ ವಿಷಯಭೋಗಗಳನ್ನು ಅನುಭವಿಸಿದರೆ ಸುಖಶಾಂತಿಗಳು ದೊರಕುವವೆಂಬ ಆಶೆಯೂ ಬಯಲಾಸೆಯಾಗಿರುತ್ತದೆ. ಇದೇ ಮಾಯಾ ಪ್ರಪಂಚದಲ್ಲಿ ತೊಳಲುವ ಸಂಸಾರವು.

ಆದರೆ ಈ ತೊಳಲು ಎಲ್ಲಿಯವರೆಗೆ? ಎಲ್ಲಿಯವರೆಗೆ ಪರಮೇಶ್ವರನೊಬ್ಬನು ಇದಾನೆಂಬ ಭಾವನೆಯು ನಮ್ಮ ಮನಸ್ಸಿಗೆ ಹತ್ತುವದಿಲ್ಲವೋ ಅಲ್ಲಿಯವರೆಗೆ. ಯಾವಾಗ ಈಶ್ವರನ ಅಸ್ತಿತ್ವದ ಭಾವನೆಯು ಮೊಳಕೆಯಾಗುವದೋ, ಯಾವಾಗ ಆತನಿಂದಲೇ ಸುಖಶಾಂತಿಗಳು ನಮಗೆ ದೊರಕಬೇಕೆಂಬ ಶಾಸ್ತ್ರೋಪದೇಶವು ಕಿವಿಗೆ ಬೀಳುವದೋ, ಆಗಲೇ ನಾವು ವಿಷಯದ ಬೇಟೆಯನ್ನು ನಿಲ್ಲಿಸಿಬಿಡುವೆವು. "ಇದನ್ನು ಸಂಪಾದನೆಮಾಡಿಕೊಂಡೆನು, ಇನ್ನು ಇದನ್ನು ಸಂಪಾದಿಸಿಕೊಳ್ಳಬೇಕು. ಹಣಕಾಸು, ಹೊಲಮನೆ, ಆರೋಗ್ಯ, ಬಲ, ವಿದ್ಯೆ, ಕೀರ್ತಿ–ಇವುಗಳನ್ನು ಸಂಪಾದಿಸಿಕೊಂಡು ಮುಪ್ಪಿನ ಕಾಲಕ್ಕೆ ನನ್ನನ್ನು ನೋಡಿಕೊಳ್ಳುವ ಮಕ್ಕಳುಮರಿಗಳನ್ನೂ ನೆಂಟರಿಷ್ಟರನ್ನೂ ಕೂಡಿ ಹಾಕಿಕೊಂಡರೆ ನನ್ನ ಜೀವನದ ಉದ್ದೇಶವು ನೆರವೇರಿದಂತೆ" ಎಂಬ ಹವಣಿಕೆಯಿಂದ ಮುಂದೋಡಿ ಓಡಿ ಆಯಾಸವನ್ನು ಮಾಡಿಕೊಳ್ಳುವ ಹುಚ್ಚಾಟವು ನಮಗೆ ಆಗ ಬೇಡವಾಗುವದು. ಇವುಗಳನ್ನು ಸಂಪಾದಿಸಿಕೊಳ್ಳುವದಕ್ಕೆ ನಾವು ಮಾಡಿರುವ ಹಲವು ಪ್ರಯತ್ನಗಳು ನಿಷ್ಫಲವಾಗಿರುವದನ್ನೂ ಅವು ಸಫಲವಾಗಿದ್ದರೂ ಇನ್ನೂ ಅತೃಪ್ತರಾಗಿಯೇ ಇರುವದನ್ನೂ ಕಂಡುಕೊಂಡು ನಾವು ನಿಜವಾದ ಸುಖಶಾಂತಿಗಳ ಮೂಲವಾದ ಪರಮೇಶ್ವರನನ್ನೇ ಹುಡುಕುವದಕ್ಕೆ ಹೊರಡುವೆವು. ಆಗಲೇ ನಮಗೆ ಪ್ರಾರಂಭದಲ್ಲಿ ಉದಾಹರಿಸಿರುವ ಭಗವದ್ಗೀತೆಯ ಸಂದೇಶದ ಸವಿಯು ತೋರುವದಕ್ಕೆ ಮೊದಲಾಗುವದು.

ಭಗವಂತನ ಈ ಸಂದೇಶದಲ್ಲಿ ಇರುವ ಉಪದೇಶಗಳನ್ನು ಒಂದೊಂದಾಗಿ ಧ್ಯಾನಕ್ಕೆ ಇಟ್ಟುಕೊಳ್ಳುವದು ಲಾಭದಾಯಕವಾಗಿರುತ್ತದೆ. ಆದ್ದರಿಂದ ಇದರಲ್ಲಿ ಅಡಕವಾಗಿರುವ ಭಾವನೆಗಳನ್ನು ಒಂದೊಂದಾಗಿ ಈ ಕೆಳಗೆ ಬರೆಯುವೆನು. ಸಾಧಕರು ಇವನ್ನು ಕ್ರಮಕ್ರಮವಾಗಿ ಮನದಂದುಕೊಂಡು ಅಳವಡಿಸಿಕೊಳ್ಳಬೇಕು.

ಒಂದಕ್ಕಿಂತ ಒಂದು ಹೆಚ್ಚು ಅರ್ಥಪೂರ್ಣವಾಗಿರುವ ಈ ಭಾವನೆಗಳನ್ನು ಮನದಲ್ಲಿ ಮೂಡಿಸಿಕೊಳ್ಳುವ ಪ್ರಯತ್ನವನ್ನು ಮಾಡಬೇಕು.

**"ಈಶ್ವರನೊಬ್ಬನು ಇದಾನೆ. ಅವನು ಈಗ ಇಲ್ಲಿಯೇ ಇದಾನೆ. ಅವನು ನನ್ನ ಹೃದಯದಲ್ಲಿಯೇ ಇದಾನೆ. ಭಗವಂತನೇ, ನಾನು ನಿನಗೆ ಶರಣುಬಂದಿರುವೆನು. ಆಹಾ! ಭಗವಂತನೆ, ನೀನು ಎಲ್ಲರ ಹೃದಯದಲ್ಲಿಯೂ ಇರುವೆ. ಭಗವಂತನೆ, ನೀನು ಸರ್ವಭೂತಗಳ ಹೃದಯದಲ್ಲಿಯೂ ಇರುವೆ ಭಗವಂತನ ಪ್ರಸಾದದಿಂದಲೇ ನನಗೆ ಸುಖಶಾಂತಿಗಳು ದೊರಕುವವು. ಭಗವಂತನಲ್ಲಿ ನೆಲೆನಿಂತರೇ ನನಗೆ ಶಾಶ್ವತಸ್ಥಾನವು ದೊರಕುವದು."**

ಮೇಲಿನ ವಾಕ್ಯಗಳನ್ನು ಸುಮ್ಮನೆ ಓದಿದರೆ ಸಾಲದು. ಈ ವಾಕ್ಯಗಳ ಅಭಿಪ್ರಾಯವು ಮನಸ್ಸಿನ ಒಳಕ್ಕೆ ಪ್ರವೇಶಿಸಬೇಕು. ಅದರಲ್ಲಿಯೇ ನಿಲ್ಲಬೇಕು. ಅದರಲ್ಲಿ ಎಲ್ಲೆಲ್ಲಿಯೂ ವ್ಯಾಪಿಸಿಕೊಳ್ಳಬೇಕು. ಹೀಗಾದರೆ ನಮ್ಮ ಮನಸ್ಸಿನ ದೃಷ್ಟಿಯು ಬದಲಾಯಿಸುವದು. ದಿವ್ಯವಾದ ಅಧ್ಯಾತ್ಮದೃಷ್ಟಿಯು ನಮಗೆ ದೊರಕುವದು. ಆ ದೃಷ್ಟಿಯಿಂದ ನೋಡಿದಾಗ ಈ ಜಗತ್ತೇ ಬೇರೆಯಾಗಿ ತೋರುವದು. ಅಲ್ಲಿಂದ ಮುಂದಕ್ಕೆ ಈ ಜಗತ್ತು ನಮ್ಮನ್ನು ಇಂದ್ರಿಯಭೋಗಕ್ಕೆ ಸೆಳೆಯುವ ಮಾಯಾಪ್ರಪಂಚ ವಾಗಿರುವದಿಲ್ಲ; ಜಗತ್ತೆಲ್ಲವೂ ಭಗವನ್ಮಯವಾಗಿ ತೋರುವದು. ಎಲ್ಲಾ ದಿಕ್ಕುಗಳೂ ಸುಖಮಯವಾಗಿ ಕಾಣುವವು. ಮನಸ್ಸಿಗೆ ನೆಮ್ಮದಿ ದೊರಕುವದು; ಅದರ ಹರಿದಾಟವು ನಿಲ್ಲುವದು.

ಭಗವದ್ಭಾವನೆಯು ನಮ್ಮೆಲ್ಲರಿಗೂ ಸುಲಭವಾಗಿ ದೊರಕುವ ಸ್ವತ್ತಲ್ಲ. "ಭಗವಂತನು ಇದಾನೆ" ಎಂಬ ಮಾತು ನಮಗೆ ಯಾವದೋ ಒಂದು ಪರೋಕ್ಷದ ವಸ್ತುವಿನ ಸುದ್ದಿಯಾಗಿ ಕಾಣುವದು. "ಪ್ಲಕ್ಷದ್ವೀಪದಲ್ಲಿ ಒಂದು ವಿಜಾತೀಯವಾದ ಪಕ್ಷಿಯಿದೆ. ಅದರ ಮೂತಿಯು ಮಾಣಿಕ್ಯದ್ದು; ಅದರ ಮೈರೆಕ್ಕೆಗಳು ಮರಕತಮಯವಾಗಿವೆ; ಅದರ ಕಾಲುಗಳು ವಜ್ರದಿಂದಾಗಿರುತ್ತದೆ" ಎಂದು ಮುಂತಾಗಿ ಯಾರಾದರೂ ವರ್ಣಿಸಿ ಹೇಳಿದರೆ ನಮಗೆ ಔದಾಸೀನ್ಯವೋ ವರ್ಣನಾಚಾತುರಿಯಲ್ಲಿ ಮೆಚ್ಚಿಗೆಯೋ ಉಂಟಾಗುವಂತೆಯೇ ಭಗವಂತನ ಅಸ್ತಿತ್ವದ ವಾಕ್ಯವನ್ನು ಕೇಳಿದರೂ ನಮಗೆ ಔದಾಸೀನ್ಯವೋ ಅಥವಾ ಭಗವಂತ ನನ್ನು ವರ್ಣಿಸುವವರ ಮಾತಿನ ಬೆಡಗಿನ ಮೆಚ್ಚಿಗೆಯೋ ಉಂಟಾಗುವವು. ಆದರೆ "ಭಗವಂತನು ಈಗ ಇಲ್ಲಿಯೇ ಇದಾನೆ". ಎಂದರೆ ಒಂದೋ ಈ ಮಾತನ್ನಾಡಿದವನು ಹಾಸ್ಯಗಾರ, ಅಥವಾ ಮೋಸಗಾರ ಎಂದು ಭಾವಿಸುವೆವು; ಅವನ ಮಾತನ್ನು ಅಸಡ್ಡೆಮಾಡಿ ನಮ್ಮನಮ್ಮ ವ್ಯವಹಾರದಲ್ಲಿ ನಾವು ತೊಡಗು ವೆವು. ಇಲ್ಲದಿದ್ದರೆ ಇದು "ಸಾಂಪ್ರದಾಯಿಕವಚನ"ವೆಂದು ಭಾವಿಸಿಕೊಂಡು

ಏನೂ ಅರಿಯದ ಹಿರಿಯರ ವಾಕ್ಯವಿದೆಂದು ಅವರನ್ನು ಅನುಕಂಪೆಯಿಂದ ಕಾಣುವೆವು. ಇದು ಪ್ರಾಕೃತರಾದ ಬಹುಜನರ ವರ್ಣನೆ.

ಆದರೆ "ಭಗವಂತನು ನಿನ್ನ ಹೃದಯದಲ್ಲಿಯೇ ಇರುತ್ತಾನೆ; ಈಗಲೂ ಅಲ್ಲಿರುತ್ತಾನೆ" ಎಂದರೊ? ಆಗ ಬಹಳ ಜನರು ಆ ವಾಕ್ಯವನ್ನು ಕಿವಿಗೇ ಹಾಕಿಕೊಳ್ಳುವದಿಲ್ಲ; ಅಥವಾ ಹಾಕಿಕೊಂಡರೂ ಅದು ಅರ್ಥವಿಲ್ಲದ ಮಾತೆಂದು ಭಾವಿಸಿ ಅಷ್ಟಕ್ಕೇ ಕೈಬಿಡುತ್ತಾರೆ. ಹಿಂದೆ ಪ್ರಜಾಪತಿಬ್ರಹ್ಮನು ಇಂದ್ರ, ವಿರೋಚನ– ಎಂಬ ಇಬ್ಬರಿಗೆ ಈ ಉಪದೇಶವನ್ನು ಮಾಡಿದನೆಂದು ಉಪನಿಷತ್ತಿನಲ್ಲಿರುತ್ತದೆ. "ಪರಮಾತ್ಮನು ನಮ್ಮೆಲ್ಲರ ಆತ್ಮನು, ಅವನಲ್ಲಿ ಯಾವ ದೋಷವೂ ಇಲ್ಲ; ಅವನಿಗೆ ಮುಪ್ಪಿಲ್ಲ, ಸಾವಿಲ್ಲ, ಯಾವ ಶೋಕವೂ ಇಲ್ಲ, ಹಸಿವುಬಾಯಾರಿಕೆಗಳಿಲ್ಲ; ಅವನು ಸತ್ಯಕಾಮನು, ಸತ್ಯಸಂಕಲ್ಪನು. ಅವನನ್ನು ಹುಡುಕಬೇಕು, ಅವನನ್ನೇ ಅರಿತು ಕೊಳ್ಳಬೇಕು. ಅವನನ್ನು ಚೆನ್ನಾಗಿ ಅರಿತುಕೊಂಡವನಿಗೆ ಸರ್ವಲೋಕಗಳೂ ಸರ್ವಕಾಮಗಳೂ ದೊರಕುವವು" ಎಂದು ಪ್ರಜಾಪತಿಯು ಉಪದೇಶಿಸಿದನು. ಇಂದ್ರನೂ ವಿರೋಚನನೂ ಆ ಆತ್ಮಜ್ಞಾನಕ್ಕಾಗಿ ಐದು ವರ್ಷಗಳವರೆಗೂ ಪ್ರಜಾ ಪತಿಯ ಬಳಿಯಲ್ಲಿ ಬ್ರಹ್ಮಚರ್ಯದಿಂದ ಶುಶ್ರೂಷೆಮಾಡಿಕೊಂಡು ಇದ್ದರು. ಪ್ರಜಾ ಪತಿಯು ಒಂದು ನೀರಿನ ಪಾತ್ರೆಯಲ್ಲಿ ನೋಡುವಂತೆ ಅವರಿಬ್ಬರನ್ನೂ ಕಟ್ಟು ಮಾಡಿದನು. "ಅಲ್ಲೇನು ಕಾಣುತ್ತದೆ. ಹೇಳಿರಿ" ಎಂದನು. ಅವರು "ನಾವು ಇರುವಂತೆಯೇ ನೀರಿನಲ್ಲಿ ಕಾಣಿಸುತ್ತಿದೆ" ಎಂದರು. ಪ್ರಜಾಪತಿಯು "ಚೆನ್ನಾಗಿ ವಸ್ತ್ರಾಭರಣಗಳಿಂದ ಅಲಂಕಾರವನ್ನು ಮಾಡಿಕೊಂಡು ಮತ್ತೊಮ್ಮೆ ನೋಡಿರಿ" ಎಂದನು. ಆಗಲೂ ಅವರಿಗೆ ಅವರ ಪ್ರತಿಬಿಂಬವೇ ಕಾಣಿಸಿತು. ಪ್ರಜಾಪತಿಯು ಮಾಡಿದ ಉಪದೇಶದ ಅಭಿಪ್ರಾಯವನ್ನು ತಿಳಿಯಲಾರದೆ ವಿರೋಚನನು ದೇಹವೇ ಆತ್ಮನು ಎಂದು ತಿಳಿದುಕೊಂಡುಬಿಟ್ಟನು. ತನ್ನ ನಗರಿಗೆ ಹೋಗಿ ತನ್ನ ಕಡೆಯವರಿಗೆಲ್ಲ "ಶರೀರವೇ ಆತ್ಮನು; ಇದನ್ನು ಚೆನ್ನಾಗಿ ಅಲಂಕರಿಸಿಕೊಳ್ಳಿರಿ. ಇದಕ್ಕೆ ಒಳ್ಳೆಯ ಆಹಾರವಿಹಾರಗಳನ್ನು ಏರ್ಪಡಿಸಿಕೊಳ್ಳಿರಿ. ಅದರಿಂದಲೇ ಸಕಲ ಪುರುಷಾರ್ಥಗಳೂ ದೊರೆಯುವವು" ಎಂದು ಬೋಧಿಸಿದನು. ಅದೇ ಅಸುರರ ಉಪನಿಷತ್ತು; ಆ ಉಪನಿಷತ್ತನ್ನು ಈಗಲೂ ಅನೇಕರು ಆದರಿಸುತ್ತಿದ್ದಾರೆ.

ಪ್ರಜಾಪತಿಬ್ರಹ್ಮನ ಉಪದೇಶದಲ್ಲಿ ಅಡಗಿದ್ದ ಉತ್ತಮವಾದ ಅಭಿಪ್ರಾಯ ವೊಂದಿದೆ. ಈ ಶರೀರವು ಮಾರ್ಪಡುತ್ತಲೇ ಇರುತ್ತದೆ ಎಂಬುದನ್ನು ಇದರ ಪ್ರತಿಬಿಂಬದಿಂದ ನಾವು ತಿಳಿದುಕೊಳ್ಳಬಹುದು. ಅನ್ನಾದಿಗಳಿಂದ ಬೆಳೆಯುವ, ಬಡವಾಗುವ, ಕೊನೆಗೆ ಸತ್ತುಹೋಗುವ ಈ ಶರೀರವು ಹಾಗಿರಲಿ. ಇದರೊಳಗೆ

ಇದ್ದುಕೊಂಡಿರುವ ಪರಮಾತ್ಮನನ್ನು ಅರಿತುಕೊಳ್ಳಿರಿ. ಅವನೇ ನಿಮಗೂ ಎಲ್ಲರಿಗೂ ನಿಜವಾಗಿ ಆತ್ಮನು. ಆ ಪರಮಾತ್ಮನು ಸರ್ವಭೂತಗಳ ಹೃದಯದಲ್ಲಿಯೂ ಇರುತ್ತಾನೆ. ನಾವುಗಳೆಲ್ಲರೂ ಅದರಿಂದಲೇ ಬಂದು, ಆತನಲ್ಲಿಯೇ ಜೀವಿಸಿದ್ದು, ಆತನನ್ನೇ ಕೊನೆಗೆ ಸೇರುವೆವು. ನಮ್ಮ ಸಕಲ ವ್ಯವಹಾರವೂ ಆತನ ಅನುಗ್ರಹ ದಿಂದಲೇ ಸಾಗುತ್ತಿರುವದು. ನಮ್ಮ ಕರ್ಮಗಳ ಫಲವೆಲ್ಲ ಆತನ ಅನುಗ್ರಹದಿಂದಲೇ ದೊರಕಬೇಕಾಗಿರುವದು. ಮುಖ್ಯವಾಗಿ ನಾವೆಲ್ಲರೂ ಬಯಸುತ್ತಿರುವ ಸುಖಶಾಂತಿ ಗಳಿಗೆ ಮೂಲವು ಆತನೇ; ಆತನೇ ನಮಗೆ ಶಾಶ್ವತವಾದ ಸ್ಥಾನವು. ಇದೇ ಪ್ರಜಾಪತಿಯ ಉಪದೇಶವು; ಇದೇ ಭಗವದ್ಗೀತೆಯಲ್ಲಿ ಭಗವಂತನು ಅರ್ಜುನ ನಿಗೆ ಮಾಡಿರುವ ಉಪದೇಶವು.

ನಮ್ಮೆಲ್ಲರ ಜೀವನಕ್ಕೂ ಪರಮೇಶ್ವರನೇ ಕೇಂದ್ರವು. ಇದನ್ನು ಕಂಡು ಕೊಳ್ಳುವದೇ ನಮ್ಮ ಜೀವನದ ಮುಖ್ಯಗುರಿಯು. ಆ ಗುರಿಯನ್ನು ಮುಟ್ಟುವವರೆಗೆ ನಮ್ಮಗಳಿಗೆ ಶಾಂತಿಯಿಲ್ಲ, ಆ ಗುರಿಯನ್ನು ಮುಟ್ಟುವವರೆಗೆ ನಮ್ಮಗಳ ಚಾಂಚಲ್ಯವು ನಿಲ್ಲುವದಿಲ್ಲ, ನಮಗೆ ಶಾಶ್ವತವಾದ ಸ್ಥಾನವು ದೊರಕುವದಿಲ್ಲ. "ಇಂದಿಗೇನು ಗತಿ, ನಾಳೆಗೇನು ಗತಿ?" ಎಂಬ ಕರೆಕರೆಯ ಜೀವನವು ನಮ್ಮಲ್ಲಿ ಯಾರೊಬ್ಬರಿಗೂ ಬೇಡ. ಆದರೆ ಜೀವನದ ಕರೆಕರೆಯು ತಪ್ಪುವದಕ್ಕೆ ಬೇಕಾದ ಉಪಾಯವನ್ನು ಮಾತ್ರ ನಾವು ಕೈಕೊಳ್ಳದೆ ಇರುವೆವು. ಎಲ್ಲಾ ಕರೆಕರೆಯೂ ತಪ್ಪಬೇಕೆ? ನಿಮಗೆ ಪರಮಶಾಂತಿಯು ದೊರಕಬೇಕೆ? ಶಾಶ್ವತವಾದ ವಿಶ್ರಾಂತಿ ಸ್ಥಾನವು ಸಿಕ್ಕಬೇಕೆ? ಹಾಗಾದರೆ ನಿಮ್ಮನಿಮ್ಮ ಹೃದಯದಲ್ಲಿಯೇ ಇರುವ ಭಗವಂತನಿಗೆ ಶರಣುಬನ್ನಿರಿ.

ಭಗವಂತನನ್ನು ಕಾಣದೆ ಆತನಿಗೆ ಶರಣುಹೋಗುವದು ಹೇಗೆ? ಎಂದು ಕೆಲವರು ಶಂಕಿಸುವರು. ಅದಕ್ಕಾಗಿ ಬಹಳ ಕಷ್ಟವೇನೂ ಪಡಬೇಕಾಗಿಲ್ಲ. ಮೊಟ್ಟಮೊದಲು 'ಪರಮೇಶ್ವರನು ಇದಾನೆ' ಎಂಬುದನ್ನು ಶಾಸ್ತ್ರಾಚಾರ್ಯರ ವಾಕ್ಯದಲ್ಲಿ ಶ್ರದ್ಧೆಯಿಟ್ಟು ನಂಬಿರಿ. ಪರಮೇಶ್ವರನು ಎಲ್ಲೆಲ್ಲಿಯೂ ಇರುವನು, ಅವನು ಸರ್ವಜ್ಞನು, ಸರ್ವಶಕ್ತನು–ಎಂದು ಶಾಸ್ತ್ರಗಳು ಹೇಳುತ್ತಿರುವವು. ಆತನಿಗೆ ಪ್ರೀತಿಯಾಗಲೆಂದು ನಿಮ್ಮ ಕರ್ಮಗಳನ್ನು ಫಲಾಪೇಕ್ಷೆಯಿಲ್ಲದೆ ಮಾಡುವದಕ್ಕೆ ತೊಡಗಿರಿ. ಕೆಲವೇ ದಿನಗಳಲ್ಲಿ ನಿಮಗೆ ಭಗವಂತನನ್ನು ನಿಮ್ಮ ನಿಮ್ಮ ಹೃದಯದಲ್ಲಿಯೇ ಕಂಡುಕೊಳ್ಳಬೇಕೆಂಬ ರಹಸ್ಯವು ಮನಸ್ಸಿಗೆ ಬರುವದು.

ಭಗವಂತನು ಎಲ್ಲರ ಹೃದಯದಲ್ಲಿಯೂ ಇರುತ್ತಾನೆ. ಆದ್ದರಿಂದ ಎಲ್ಲರಿಗೂ ಸಂತೋಷವನ್ನುಂಟುಮಾಡುವ ಕೆಲಸಗಳನ್ನು ಮಾಡುವದಕ್ಕೆ ಯತ್ನಿಸಬೇಕು.

ಅದೇ ಆ ಪರಮೇಶ್ವರನಿಗೆ ಪೂಜೆಯಾಗುವದು. ನಮ್ಮ ಪೂಜೆಯಿಂದ ತುಷ್ಟನಾದ ಭಗವಂತನು ಮೆಲ್ಲಮೆಲ್ಲಗೆ ನಮ್ಮ ಹೃದಯದಲ್ಲಿರುವ ತನ್ನ ಸನ್ನಿಧಿಯ ಅರಿಕೆಯನ್ನು ನಮಗೆ ಮಾಡಿಕೊಡುವನು. ಕಾಡಿನಲ್ಲಿ ದಾರಿಗಾಣದೆ ಅಲೆದಾಡುತ್ತಿರುವ ಹಾದಿ ಹೋಕನಿಗೆ ದೂರದಲ್ಲಿ ಮಿನುಗುಟ್ಟುವ ದೀಪದಂತೆ ಆತನ ಚಿತ್ಪ್ರಕಾಶದ ಬೆಳಕು ನಮ್ಮನ್ನಮ್ಮ ಹೃದಯದ ಒಳಗಿನಿಂದ ಹೊರಚಿಮ್ಮುವದಕ್ಕೆ ಮೊದಲಾಗುವದು. ನಿರಾಶೆಯಿಂದ ತುಂಬಿದ್ದ ನಮ್ಮ ಜೀವನದಲ್ಲಿ ಆಶೆಯ ಕಿರಣವು ಮೂಡುವದು. ಆ ಬಳಿಕ ನಾವು ಧೈರ್ಯದಿಂದ ನಮ್ಮನಮ್ಮ ಹೃದಯಗುಹೆಯನ್ನು ಹೊಕ್ಕು ಒಳಗಣ್ಣಿನಿಂದ ನೋಡುವೆವು. ಅಲ್ಲಿ ಆನಂದಕಂದನಾದ ಆ ಭಗವಂತನು ನಗೆಮೊಗದ ಕಾಂತಿಯನ್ನು ಬೀರುತ್ತಾ ಕುಳಿತಿರುವನೆಂಬುದನ್ನು ಕಂಡುಕೊಳ್ಳುವೆವು.

ನಮ್ಮ ಹೃದಯದಲ್ಲಿರುವ ಜೀವನದ ಕೇಂದ್ರರೂಪನಾದ ಭಗವಂತನನ್ನು ಕಂಡುಕೊಂಡರೆ ಇಡಿಯ ವಿಶ್ವಕ್ಕೇ ಕೇಂದ್ರನಾದ ಭಗವಂತನನ್ನು ಕಂಡುಕೊಂಡಂತೆ. ನಾವು ಹೊರಮುಖದಿಂದ ಪ್ರಪಂಚವನ್ನು ನೋಡುತ್ತಿರುವಾಗ ಎಲ್ಲಾ ಪ್ರಾಣಿಗಳೂ ಎಲ್ಲಾ ವಸ್ತುಗಳೂ ಬಿಡಿಬಿಡಿಯಾಗಿ ಕಾಣುತ್ತಿರುವವು. ಪ್ರಾಣಿಗಳಿಗಾಗಲಿ ವಸ್ತುಗಳಿಗಾಗಲಿ ಯಾವ ಸಂಬಂಧವೂ ಇರುವಂತೆ ಕಾಣಿಸುವದಿಲ್ಲ. ನಮ್ಮ ಸುತ್ತಮುತ್ತ ಇರುವ ಪ್ರಾಣಿಗಳೂ ವಸ್ತುಗಳೂ ಗುಣದೋಷಗಳ ರಾಶಿಗಳಾಗಿ ಕಾಣುತ್ತಿರುವವು. ದೋಷಗಳನ್ನು ಬಿಟ್ಟು ಗುಣಗಳನ್ನೇ ಸ್ವೀಕರಿಸಬೇಕೆಂಬ ನಮ್ಮ ಹಂಬಲಿಕೆಯು ದಿನದಿನಕ್ಕೂ ದೂರವಾಗುತ್ತಿರುವದು. ಹೊರಗಿನ ಪ್ರಪಂಚವು ನಮಗೆ ಎದುರಾಳಿಯಾಗಿ ನಮಗೆ ನಿರಾಶೆಯನ್ನೂ ಅಂಜಿಕೆಯನ್ನೂ ದುಃಖವನ್ನೂ ಕಿರಿಕಿರಿಯನ್ನೂ ಉಂಟುಮಾಡುವದಕ್ಕೇ ಸಂಕಲ್ಪಮಾಡಿಕೊಂಡಿರುವಂತೆ ಕಾಣುತ್ತಿರುವದು. ಹೊರಗಿರುವ ಪ್ರಾಣಿಗಳೂ ಒಂದಕ್ಕೊಂದು ಹೊಂದಿಕೆಯಿಲ್ಲದೆ ಕಾದಾಡುತ್ತಿರುವಂತೆ ಕಾಣುತ್ತಿರುವವು. ಆದರೆ ನಾವು ಹೊಂದಿಕೆಯಿಲ್ಲದ ಪ್ರಪಂಚ ವ್ಯಕ್ತಿಗಳನ್ನು ಒಂದಕ್ಕೊಂದು ಹೊಂದಿಸುವ ಹೊರನೋಟದ ವ್ಯರ್ಥಪ್ರಯಾಸದ ಪ್ರಯತ್ನವನ್ನು ಬಿಟ್ಟು ಒಳಕ್ಕೆ ಸರಿದುಕೊಂಡು ನಮ್ಮನಮ್ಮ ಹೃದಯದಲ್ಲಿರುವ ಭಗವಂತನನ್ನು ಕಂಡುಕೊಂಡು ಅವನಲ್ಲಿಯೇ ನೆಲೆನಿಂತರೆ, ಎಲ್ಲಾ ವಿರೋಧಗಳೂ ಭಿನ್ನಭಾವಗಳೂ ಕಣ್ಮರೆಯಾಗುವವು, ಪ್ರತಿಯೊಂದು ವಸ್ತುವೂ ಪ್ರತಿಯೊಂದು ಪ್ರಾಣಿಯೂ ತನ್ನತನ್ನ ಸ್ಥಾನದಲ್ಲಿದ್ದುಕೊಂಡು ಇಡಿಯ ವಿಶ್ವದ ಹೊಂದಿಕೆಗೆ ಅಣಿಯಾಗುತ್ತಿರುವಂತೆ ಭಾಸವಾಗುವದು. ನಮಗೆ ಯಾರೊಬ್ಬರೂ ಪ್ರತಿಪಕ್ಷದವರಲ್ಲವೆಂದು ತೋರುವದಕ್ಕೆ ಮೊದಲಾಗುವದು. ಅದಕ್ಕೆ ಬದಲಾಗಿ ಎಲ್ಲರೂ ನಮಗೆ ಸುಖಶಾಂತಿಗಳನ್ನು ತಂದುಕೊಡುವದಕ್ಕೇ ಪ್ರಯತ್ನಮಾಡುತ್ತಿರು

ವಂತೆ ತೋರುವದು. ಬೇರೆಬೇರೆಯ ವಾದ್ಯಗಳನ್ನು ಹೊಂದಿಕೆಯಾಗಿ ಬಾರಿಸುತ್ತಾ ಶ್ರೋತೃಗಳ ಕಿವಿಗೂ ಮನಸ್ಸಿಗೂ ಆನಂದವನ್ನು ಬೀರುತ್ತಿರುವ ಸಂಗೀತಶಾಲೆಯಂತೆ ಈ ಜಗತ್ತೆಲ್ಲವೂ ಸರ್ವಕ್ಕೂ ಕೇಂದ್ರಭೂತನಾಗಿರುವ ಪರಮಾತ್ಮನಲ್ಲಿ ಒಂದಾಗಿ ಪರಸ್ಪರಭಾವನೆಯಲ್ಲಿ ಉದ್ಯುಕ್ತವಾಗಿರುವದೆಂಬುದು ಮನದಟ್ಟಾಗುವದು.

## 7. ಭಗವತ್ಪ್ರಾಪ್ತಿಯಮಾರ್ಗ

ಮಾನವನ ಸುಖಶಾಂತಿಗಳಿಗೆ ಭಗವತ್ಪ್ರಾಪ್ತಿಯೇ ದ್ವಾರವೆಂಬುದನ್ನು ಶಾಸ್ತ್ರವಚನ ದಿಂದಲೂ ಬಲ್ಲವರ ಉಪದೇಶದಿಂದಲೂ ಕೇಳಿರುವ ಶ್ರದ್ಧಾವಂತರಾದ ಹಲವು ಸಾಧಕರು ಈಗಲೂ ಇರುತ್ತಾರೆ. ಅಂಥವರಿಗೆ "ಭಗವತ್ಪ್ರಾಪ್ತಿಗೆ ಉಪಾಯವೇನು?" ಎಂಬ ಪ್ರಶ್ನೆಯು ಮತ್ತೆಮತ್ತೆ ಮನದಲ್ಲಿ ಎದ್ದುಕೊಳ್ಳುತ್ತಿರುತ್ತದೆ. ಭಗವಂತನನ್ನು ಶರಣುಹೊಂದುವದೇ ಆತನ ಪ್ರಾಪ್ತಿಗೆ ಮುಖ್ಯ ಸಾಧನವೆಂಬುದನ್ನು ಕೇಳಿದ ಮೇಲೂ "ಭಗವಂತನನ್ನು ಶರಣುಹೊಂದುವ ಮಾರ್ಗವು ಯಾವದು?" ಎಂದು ಅವರು ಮತ್ತೆಮತ್ತೆ ಕೇಳುತ್ತಿರುವರು. ಮನಃಪೂರ್ವಕವಾಗಿ ಈ ಪ್ರಶ್ನೆಯನ್ನು ಕೇಳುವವರ ಉಪಯೋಗಕ್ಕಾಗಿ ಕೆಲವು ಸೂಚನೆಗಳನ್ನು ಇಲ್ಲಿ ಕೊಟ್ಟಿದೆ.

ಭಗವತ್ಪ್ರಾಪ್ತಿ ಎಂಬ ಮಾತಿನಲ್ಲಿ ಭಗವಂತನು ನಮಗೆ ಅತ್ಯಂತವಾಗಿ ದೂರ ವಾಗಿರುವನೆಂತಲೂ ಆದ್ದರಿಂದ ನಮಗೆ ದುಃಖವೂ ವಿಕ್ಷೇಪವೂ ಉಂಟಾಗಿರುವ ವೆಂತಲೂ ಆ ಭಗವಂತನನ್ನು ನಾವು ಹೇಗಾದರೂ ಮಾಡಿ ಪಡೆದುಕೊಳ್ಳ ಬೇಕೆಂತಲೂ ಹಾಗೆ ಪಡೆದುಕೊಂಡರೇ ನಮಗೆ ಸುಖಶಾಂತಿಗಳು ದೊರಕುವ ವೆಂತಲೂ ಸೂಚಿಸುವ ಶಕ್ತಿಯಿದೆ. ಸಾಧಕರ ದೃಷ್ಟಿಯಿಂದ ಇದು ಸರಿಯಾದರೂ ಇದು ಪರಮಾರ್ಥವಲ್ಲ. ಏಕೆಂದರೆ ಭಗವಂತನು ಎಲ್ಲೆಲ್ಲಿಯೂ ನಮ್ಮೆಲ್ಲರ ಆತ್ಮನಾಗಿಯೇ ಇರುತ್ತಾನೆಂಬುದೇ ಪರಮಾರ್ಥವು. ಆ ಜ್ಞಾನವಿಲ್ಲದ್ದರಿಂದಲೇ ನಮಗೆ ಭಗವಂತನು ದೂರವಾಗಿರುತ್ತಾನೆ, ಆದ್ದರಿಂದಲೇ ನಮ್ಮ ಸಂಕಟಗಳೆಲ್ಲ ಅಷ್ಟು ಪ್ರಬಲವಾಗಿರುವಂತೆ ಕಾಣುತ್ತಿವೆ. ಈ ತತ್ತ್ವವನ್ನು ಸಾಧಕನು ಮೊಟ್ಟ ಮೊದಲು ಮನಸ್ಸಿಗೆ ತಂದುಕೊಳ್ಳಬೇಕು. ಭಗವಂತನು ನಮಗೆ ನಿತ್ಯಪ್ರಾಪ್ತನಾಗಿದ್ದರೂ ನಾವು ಅಜ್ಞಾನದಿಂದ ಆತನಿಗೆ ಅತ್ಯಂತದೂರವಾಗಿರುತ್ತೇವೆಂತಲೂ ಆದ್ದರಿಂದಲೇ ಪಡಬಾರದ ಕಷ್ಟಗಳನ್ನು ಅನುಭವಿಸುತ್ತಿದ್ದೇವೆಂತಲೂ ಆತನ ಸನ್ನಿಧಿಯನ್ನು ಕಂಡುಕೊಂಡ ಮಾತ್ರದಿಂದ ನಮ್ಮ ಕಷ್ಟಗಳೆಲ್ಲವೂ ಪರಿಹಾರವಾಗಿ ಸುಖ ಶಾಂತಿಗಳು ಕರಗತವಾಗುವವೆಂತಲೂ ನಾವು ಗಟ್ಟಿಯಾಗಿ ನಂಬಬೇಕು. ಇದೇ ಭಗವತ್ಪ್ರಾಪ್ತಿಗೆ ಮೊದಲನೆಯ ಸಾಧನವು.

ಭಗವಂತನು ನಮಗೆ ಏಕೆ ಇಷ್ಟೊಂದು ದೂರವಾಗಿರುತ್ತಾನೆ? ಅಥವಾ ಸರ್ವಗತನಾಗಿರುವ ಭಗವಂತನಿಗೆ ನಾವು ಏಕೆ ಇಷ್ಟೊಂದು ದೂರವಾಗಿರುತ್ತೇವೆ?– ಎಂಬುದನ್ನು ಅರಿತುಕೊಳ್ಳುವದು ಅವಶ್ಯವು. ಏಕೆಂದರೆ ಭಗವಂತನು ಕರುಣಾಮಯನು; ಆತನು ಯಾರೊಬ್ಬರನ್ನೂ ತನ್ನಿಂದ ದೂರವಾಗಿರಿಸುವ ಸಂಭವವಿಲ್ಲ. ನಾವೇ ನಮ್ಮ ಅಪರಾಧದಿಂದಲೇ ಆತನಿಂದ ದೂರವಾಗಿರುತ್ತೇವೆ. ಆತನ ಅಹೇತುಕಪ್ರೇಮಕ್ಕೆ ನಾವು ಹೊರಚ್ಚಾಗಿರುವದಕ್ಕೆ ನಮ್ಮ ಮನಸ್ಸಿನ ಸ್ಥಿತಿಯೇ ಕಾರಣ. ಭಗವದ್ಭಾವವಿಲ್ಲದೆ, ಭಗವತ್ಪ್ರೇಮವಿಲ್ಲದೆ, ನಾವು ಮನಸ್ಸಿನಲ್ಲಿ "ನಾನು" ಎಂಬ ಒಂದು ಹುಸಿಯಾದ ತತ್ತ್ವವನ್ನು ಹುಟ್ಟಿ ಹಾಕಿಕೊಂಡಿರುತ್ತೇವೆ. ಭಗವಂತನಲ್ಲಿಡಬೇಕಾದ ಪ್ರೇಮವನ್ನು ಈ 'ನಾನು' ಎಂಬದರಲ್ಲಿಟ್ಟು ಅದರ ಆರಾಧನೆಯನ್ನೇ ಮಾಡುತ್ತಾ ಇರುತ್ತೇವೆ. ನಾನು ಎಂಬ ದೃಷ್ಟಿಯಿಂದ ಕಾಣುತ್ತಿರುವ ಈ ಜಗತ್ತು ನಮಗೆ ಭಗವಂತನದಾಗಿ ಕಾಣುವದಿಲ್ಲ. 'ಇದೆಲ್ಲವೂ ನನ್ನದು, ಅಥವಾ ನನಗೆ ಬೇಕಾದದ್ದು' ಎಂಬ ಭಾವನೆಯೇ ನಮ್ಮಲ್ಲಿ ಬೇರುಬಿಟ್ಟುಕೊಂಡುಬಿಟ್ಟಿದೆ. ಆದ್ದರಿಂದ ಈ 'ನಾನು' ಎಂಬದರ ಅಭಿಮಾನವನ್ನು ಕಿತ್ತುಹಾಕಿ, ನಮ್ಮ ಹೃದಯದಲ್ಲಿ ಭಗವಂತನ ಭಕ್ತಿಯನ್ನು ತುಂಬಿಕೊಳ್ಳಬೇಕು. ಇದೇ ಅಧ್ಯಾತ್ಮಸಾಧನಕ್ಕೆಲ್ಲ ಗುರಿ.

ಭಗವತ್ಪ್ರಾಪ್ತಿಗೆ ಸಾಧನವು ಯಾವದು?– ಎಂಬ ಪ್ರಶ್ನೆಗೆ ಈಗ ಉತ್ತರವು ದೊರೆಯುತ್ತದೆ. ಯಾವಯಾವದು 'ನಾನು' ಎಂಬ ಅಭಿಮಾನವನ್ನು ಕಿತ್ತುಹಾಕುವದೋ, ಯಾವಯಾವದು ಭಗವಂತನ ಸನ್ನಿಧಿಯ ಭಾವವನ್ನು ಬಲಪಡಿಸುವದೋ, ಅದೆಲ್ಲವೂ ಸಾಧನವು. ಭಗವದ್ಭಕ್ತಿಗೆ ಮೊದಲು ಭಗವಂತನ ಸನ್ನಿಧಿಯ ಭಾವವು ಮೂಡುವದು ಅವಶ್ಯ. ಇದಕ್ಕಾಗಿಯೇ ಶಾಸ್ತ್ರಗಳೂ ಗುರುಗಳೂ ಅಧ್ಯಾತ್ಮಸಾಧನಗಳನ್ನು ಉಪದೇಶಿಸಿರುವದು. ಯಾರುಯಾರು ಯಾವಯಾವ ಸಾಧನಗಳನ್ನು ಮಾಡಬೇಕೆಂದು ಬೆಟ್ಟಿಟ್ಟು ತೋರಿಸುವದು ಕಷ್ಟಸಾಧ್ಯ. ಆದರೆ ತ್ರಿಕರಣಗಳಲ್ಲಿಯೂ 'ನಾನು', 'ನನ್ನದು'–ಎಂಬ ದುರಭಿಮಾನಕ್ಕೆ ಅಡ್ಡಿಯಾಗಿರುವದನ್ನೆಲ್ಲ ಬಿಡಿಸುವ ಮತ್ತು ಭಗವದ್ಭಾವವನ್ನು ಬಲಗೊಳಿಸುವ ಸಾಧನಗಳನ್ನು ತಮ್ಮತಮ್ಮ ಮನಸ್ಸಿನ ಒಲವಿನಂತೆ ಆರಿಸಿಕೊಂಡು ಕೃತಾರ್ಥರಾಗಬೇಕು. ಇಂಥ ಸಾಧನಗಳಲ್ಲಿ ಕೆಲವನ್ನು ಇಲ್ಲಿ ಸೂಚಿಸುವೆನು.

ಯಾವ ಸಾಧನವನ್ನೇ ಆಗಲಿ, ಭಗವಂತನಿಗೆ ಸಂಬಂಧಿಸಿಯೇ ಮಾಡಬೇಕೆಂದು ಸ್ಪಷ್ಟವಾಗಿರುವದರಿಂದ ಅದನ್ನು ಮರೆಯದೆ ಇರಬೇಕು. ನಮ್ಮ ಒಳಗೆ ಇರುವ ಇಂದ್ರಿಯ, ಪ್ರಾಣ, ಮನಸ್ಸು, ಬುದ್ಧಿ–ಇವುಗಳಾಗಲಿ ನಮ್ಮ ಹೊರಗೆ ಇರುವ ಪ್ರಪಂಚದ ವಿವಿಧದೃಶ್ಯಗಳಾಗಿ ತಾವೇ ನಮಗೆ ಯಾವ ಪ್ರತಿಬಂಧಕವನ್ನೂ

ಉಂಟುಮಾಡುತ್ತಿಲ್ಲ. ಅವುಗಳನ್ನು ಭಗವಂತನಿಂದ ನಮ್ಮ ಭಾವನೆಯಲ್ಲಿ ಬೇರ್ಪಡಿಸಿಕೊಂಡು ಅವುಗಳನ್ನು 'ನನಗೆ ಸಂಬಂಧಿಸಿದವು', 'ನಾನು ಅವುಗಳ ಒಡೆಯನು' ಎಂದು ಅಭಿಮಾನಪಡುತ್ತಿರುವದೇ ನಮ್ಮ ಶಾಂತಿಸುಖಗಳಿಗೆ ಅಡ್ಡಿಯಾಗಿರುವದು. ನಾವು ಕಲ್ಪಿಸಿಕೊಂಡಿರುವ 'ನಾನು' ಎಂಬ ಹುಸಿಕೇಂದ್ರವು ಕೂಡ ಅಭಿಮಾನದಿಂದ ಕೂಡಿರುವವರೆಗೇ ನಮಗೆ ಅಡ್ಡಿಯಾಗಿರುವದು. ನಿಜವಾಗಿ ನೋಡಿದರೆ ಇವುಗಳೆಲ್ಲ ಭಗವಂತನಿಂದಲೇ ಬಂದಿರುತ್ತವೆ; ಈ 'ನಾನು' ಕೂಡ ತನ್ನ ಶುದ್ಧರೂಪದಲ್ಲಿ ಆ ಭಗವಂತನ ಅಂಶವೇ ಆಗಿರುತ್ತದೆ. ಇದನ್ನು ಸಾಧಕನು ಆಗಾಗ್ಗೆ ಮನದಂದುಕೊಳ್ಳುತ್ತಲೇ ಇರಬೇಕು.

ಮನಸ್ಸಿನಲ್ಲಿ ಆಗುತ್ತಿರುವ ವಿಕ್ಷೇಪವೇ, ಹರಿದಾಟವೇ, ಅದರಲ್ಲಿ ಸುಖಾನುಭವ ವುಂಟಾಗದಂತೆ ಅಡ್ಡಿಯನ್ನು ಮಾಡಿರುವದು. ಆದ್ದರಿಂದ ಮನಸ್ಸಿಗೆ ಶಾಂತಿಯನ್ನು ತಂದುಕೊಡುವ ಸಂನಿವೇಶಗಳನ್ನು ನಾವು ಉಪಯೋಗಿಸಿಕೊಳ್ಳಬೇಕು; ಅಥವಾ ಕೃತಕವಾಗಿಯಾದರೂ ಕಲ್ಪಿಸಿಕೊಳ್ಳಬೇಕು. ಮನಸ್ಸಿನ ವಿಕ್ಷೇಪವು ಹೋದರೆ ಅದೇ ಶಾಂತಿ ಎನ್ನಿಸುವದು; ಆ ಶಾಂತಿಯಿಂದಲೇ ನಿಜವಾದ ಸುಖಾನುಭವವುಂಟಾಗು ವದು. ಪರಮಶಾಂತಿಯೂ ಪರಮಾನಂದವೂ ಭಗವತ್ಪ್ರಾಪ್ತಿಯಿಂದಲೇ ದೊರೆ ಯುವವೆಂದು ದೊಡ್ಡವರು ಹೇಳುವದಕ್ಕೆ ಇದೇ ಕಾರಣ.

ನಮ್ಮ ಶರೀರವನ್ನು ಸ್ನಾನ, ಬ್ರಹ್ಮಚರ್ಯ-ಮುಂತಾದ ನಿಯಮಗಳಿಗೆ ಒಳಪಡಿಸಿಕೊಳ್ಳಬೇಕು. ಶರೀರದ ಆಹಾರ, ನಿದ್ರೆ, ವಿಹಾರ, ವ್ಯಾಯಾಮ, ವ್ಯವಹಾರದ ಕೆಲಸಗಳು ಎಲ್ಲವನ್ನೂ ಭಗವಂತನಿಗೆ ಸಂಬಂಧಿಸಿಕೊಳ್ಳಬೇಕು. ನಿಷ್ಕಾಮವಾಗಿ ಜನರ ಮತ್ತು ಪ್ರಾಣಿಗಳ ಸೇವೆಯನ್ನು ಭಗವಂತನ ಆರಾಧನೆ ಯೆಂಬ ಭಾವನೆಯಿಂದ ಮಾಡುತ್ತಿರಬೇಕು. ಈ ಭಾವನೆಯು ಬರುವದಕ್ಕಾಗಿ ಕ್ಲಿಪ್ತಕಾಲಗಳಲ್ಲಿ ದೇವತಾರ್ಚನೆ, ಸೂರ್ಯನಮಸ್ಕಾರ-ಮುಂತಾದ ವಿಶೇಷ ಸಾಧನಗಳನ್ನು ಕೈಕೊಳ್ಳುತ್ತಿರಬೇಕು.

ನಮ್ಮ ವಾಕ್ಕನ್ನೂ ಹೀಗೆಯೇ ಹಿಡಿತಕ್ಕೆ ತಂದುಕೊಳ್ಳಬೇಕು. ಜನರಿಗೆ ಮನ ನೋಯದಂತೆ ಮಾತುಗಳನ್ನಾಡುವದು, ಸತ್ಯವೂ ಪ್ರಿಯವೂ ಹಿತವೂ ಆದ ನುಡಿಗಳನ್ನೇ ಬಳಸುತ್ತಿರುವದು-ಇಂಥ ವ್ಯವಹಾರವನ್ನು ಭಗವಂತನ ಸೇವೆ ಎಂಬ ದೃಷ್ಟಿಯಿಂದ ಇಟ್ಟುಕೊಳ್ಳಬೇಕು. ಈ ಭಾವನೆಯು ಮೂಡುವದಕ್ಕೆ ಗೀತೆ, ರಾಮಾಯಣ, ವಿಷ್ಣುಸಹಸ್ರನಾಮ-ಈ ಬಗೆಯ ಪ್ರಾಸಾದಿಕಗ್ರಂಥಗಳನ್ನು ಪಾರಾಯಣಮಾಡುತ್ತಿರಬೇಕು; ಭಗವನ್ನಾಮವನ್ನು ಜಪಮಾಡುತ್ತಿರಬೇಕು. ದೊಡ್ಡವರ ಸೂಕ್ತಿಗಳನ್ನೂ ಭಕ್ತಿಗ್ರಂಥಗಳ ತತ್ತ್ವೋಪದೇಶಗಳನ್ನೂ ಫಲ

ವಚನಗಳನ್ನೂ ಆರಿಸಿಕೊಂಡು ಉಚ್ಚರಿಸುತ್ತಾ ಮನನಮಾಡುತ್ತಿರಬೇಕು; ಆಸ್ತಿಕರೂ ಶ್ರದ್ಧಾವಂತರೂ ಆದ ಸಾಧಕರನ್ನು ಜೊತೆಗೆ ಇಟ್ಟುಕೊಂಡು ನಾಮಸಂಕೀರ್ತನೆಯನ್ನು ಮಾಡುತ್ತಿರಬೇಕು. ಭಕ್ತಿಗೀತೆಗಳನ್ನು ಗಾನಮಾಡುತ್ತಿರಬೇಕು. ಇಂಥ ಸದುಪಯೋಗಕ್ಕೆ ಹೊರತು ನಾಲಗೆಯನ್ನು ಬೀಳುಮಾತುಗಳಿಗೆ ಹರಿಯಬಿಡುವ ಅಭ್ಯಾಸವನ್ನು ಬಿಟ್ಟು ಆದಷ್ಟುಮಟ್ಟಿಗೆ ಮೌನವನ್ನೇ ಅವಲಂಬಿಸಬೇಕು.

ನಮ್ಮ ಸುತ್ತಲೂ ಇರುವ ಹೊರಗಿನ ಪ್ರಪಂಚದಲ್ಲಿ ಮನಸ್ಸಿಗೆ ಶಾಂತಿಯನ್ನು ಕೊಡುವ ಎಷ್ಟೋ ಅವಕಾಶಗಳಿರುತ್ತವೆ. ಅವನ್ನು ಅವಶ್ಯವಾಗಿ ಉಪಯೋಗಿಸಿಕೊಳ್ಳಬೇಕು. ನಗರದ ಅಥವಾ ಪಟ್ಟಣದ ಗದ್ದಲವನ್ನು ಬಿಟ್ಟು ದೂರವಾಗಿರುವ ಬಯಲುಪ್ರದೇಶಕ್ಕೆ ಹೋಗಿ ಅಲ್ಲಿ ಕಾಣುವ ನೈಸರ್ಗಿಕ ಪ್ರಪಂಚವನ್ನು ನೋಡಿ ನಲಿಯುವ ಅಭ್ಯಾಸವನ್ನು ಇಟ್ಟುಕೊಳ್ಳಬೇಕು. ನಾವು ಎಷ್ಟುದೂರ ನೋಡಿದರೂ ಕಾಣುವ ಭೂಮಿಯ ವಿಸ್ತಾರ, ದೂರದಲ್ಲಿ ಭಗವಂತನ ಕೀರ್ತಿಧ್ವಜಗಳಂತೆ ಎದ್ದುಕಾಣುವ ಬೆಟ್ಟಗಳು, ಪರ್ವತಗಳು, ಜುಳುಜುಳನೆ ಹರಿಯುತ್ತಿರುವ ನದಿ, ಸ್ಫಟಿಕದಂತೆ ಸ್ವಚ್ಛವಾಗಿ ಹರಡಿಕೊಂಡಿರುವ ಸರೋವರ, ಹಚ್ಚಗೆ ಕಣ್ಮನಗಳನ್ನು ಸೆಳೆಯುತ್ತಿರುವ ಹಸಲೆ–ಇಂಥ ನೋಟಗಳು ಮನಸ್ಸಿಗೆ ಶಾಂತಿಯನ್ನು ಬಲುಬೇಗನೆ ಕೊಡುವವು. ಅಲ್ಲಲ್ಲಿ ಮರಗಳ ಮೇಲೆ ಕುಳಿತು ಹಾಡುತ್ತಿರುವ ಪಕ್ಷಿಗಳ ಇಂಪಾದ ಗಾನವನ್ನು ಕೇಳಿ ನಲಿಯುವದೊಂದು ಮನಶ್ಶಾಂತಿಗೆ ಮಾರ್ಗವು. ರಾತ್ರೆಯ ಹೊತ್ತಿನಲ್ಲಿ ಕತ್ತೆತ್ತಿ ನೋಡಿದರೆ ಆಕಾಶದಲ್ಲಿ ಅಲ್ಲಲ್ಲಿ ಮಿನುಗುತ್ತಿರುವ ನಕ್ಷತ್ರಗಳೂ ಗ್ರಹಗಳೂ ಮನಶ್ಶಾಂತಿಗೆ ಮತ್ತೊಂದು ಸಾಧನವು. ಗದ್ದಲವಿಲ್ಲದೆ ಇರುವ ರಾತ್ರೆಯಾದರೆ ಮೋಡಗಳು ಮುಸಕದೆ ಇರುವ ಆಕಾಶವು ನಮಗೆ ಸರ್ವಗತನೂ ನಿತ್ಯನೂ ಆಗಿರುವ ಭಗವಂತನ ಪ್ರತೀಕವಾಗಿ ಕಂಗೊಳಿಸುವದರಲ್ಲಿ ಸಂದೇಹವಿಲ್ಲ. ಇನ್ನು ಈ ಗ್ರಹನಕ್ಷತ್ರಗಳ ಜೊತೆಗೆ ಪ್ರಹ್ಲಾದಕರನಾದ ಚಂದ್ರನೂ ತನ್ನ ತಂಗದಿರನ್ನು ಎಲ್ಲಾ ಕಡೆಯಲ್ಲಿಯೂ ಪಸರಿಸುತ್ತಿದ್ದರೆ ನಾವು ಅಮೃತದ ಸಾಗರದಲ್ಲಿಯೇ ಮೈಯದ್ದಿದಂತೆ ಸಂತಸದಿಂದ ಕಾಲವನ್ನು ಹಾಕಬಹುದು. ಅದರಿಂದ ಅವಶ್ಯವಾಗಿ ಮನಸ್ಸಿಗೆ ಶಾಂತಿಯು ದೊರಕುತ್ತದೆ. ಇಂಥ ಸಂದರ್ಭದಲ್ಲಿ ಕಾಣುವ ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕಪ್ರಪಂಚವು ತಪ್ಪದೆ ಸಾಧಕನ ಹೃದಯದಲ್ಲಿ ಭಗವಂತನ ಮಹಿಮೆಯ ಗಾನವು ಕೇಳಬರುವಂತೆ ಮಾಡುವದು.

ನಿಶ್ಶಬ್ದವಾಗಿರುವ ಕಾಲದಲ್ಲಿ ಭೂಮಿಯಲ್ಲಿಯೂ ಜಲದಲ್ಲಿಯೂ ಅಂತರಿಕ್ಷದಲ್ಲಿಯೂ ಅತ್ತಿತ್ತ ಚಲಿಸುತ್ತಿರುವ ಪ್ರಾಣಿಗಳನ್ನು ಲಕ್ಷ್ಯವಿಟ್ಟು ನೋಡುವದೂ ಅವುಗಳ ಧ್ವನಿಗಳನ್ನು ಆಲೈಸುವದೂ–ಮನಸ್ಸಿಗೆ ಶಾಂತಿಯನ್ನು ತಂದುಕೊಡುವ

ಒಂದು ಉತ್ತಮಸಾಧನವಾಗಿರುತ್ತದೆ. ಊರ ಹತ್ತಿರವಾದರೆ ಗುಂಪುಗುಂಪಾಗಿ ಮೇಯುತ್ತಾ ಮನಬಂದಂತೆ ಗುಂಪುಗುಂಪಾಗಿ ತಿರುಗಾಡುತ್ತಿರುವ ದನಗಳು, ಆಡುಮರಿಗಳು-ಇವುಗಳನ್ನು ನೋಡುವದೂ ಸ್ವಲ್ಪದೂರವಾಗಿ ಹೋಗಿದ್ದರೆ ನದಿಯಲ್ಲಿ ತಣಕ್ ಪುಣಕ್ ಎಂದು ಹಾರುತ್ತಾ ನಿಂತಲ್ಲಿ ನಿಲ್ಲದೆ ಹರಿದಾಡುತ್ತಿರುವ ಮೀನು ಮುಂತಾದ ಪ್ರಾಣಿಗಳ ಚಲನವನ್ನು ಲಕ್ಷಿಸುವದೂ ಹುಲ್ಲೆ, ಕರು, ಮೊಲ-ಮುಂತಾದ ಸಾತ್ತ್ವಿಕಪ್ರಾಣಿಗಳ ಓಟವನ್ನು ನೋಡುವದೂ ಮರದಿಂದ ಮರಕ್ಕೆ ಗಿಡದಿಂದ ಗಿಡಕ್ಕೆ ಹೂವಿನಿಂದ ಹೂವಿಗೆ ಹಾರಾಡುತ್ತಿರುವ ಹಕ್ಕಿಗಳ, ಜೀರುದುಂಬಿಗಳ ಮತ್ತು ಚಿಟ್ಟೆಗಳ ಚಿತ್ರವಿಚಿತ್ರವಾದ ರೂಪಗಳನ್ನು ನೋಡುವದೂ ಅವುಗಳ ಬಗೆಬಗೆಯ ಧ್ವನಿಯನ್ನು ಕೇಳುವದೂ ಒಂದು ದೊಡ್ಡ ಸೌಭಾಗ್ಯವೇ ಸರಿ. ಇಂಥ ಸಂದರ್ಭಗಳಲ್ಲಿ ಮನಸ್ಸಿಗೆ ಶಾಂತಿಯುಂಟಾಗುವದಕ್ಕೆ ಉತ್ತಮವಾದ ಅವಕಾಶವಿರುತ್ತದೆ. ಭಗವಂತನ ಸನ್ನಿಧಿಯನ್ನು ಕಾಣುವದಕ್ಕೆ ಅದೊಂದು ಸುಸಂದರ್ಭವಾಗಿರುತ್ತದೆ.

ಇದುವರೆಗೆ ಪಟ್ಟಿಹಾಕಿದಂತೆ ನಾನು ಹೇಳಿರುವ ಸಾಧನಗಳು ಎಲ್ಲವನ್ನೂ ಎಲ್ಲರೂ ಅನುಷ್ಠಾನಮಾಡುವದಕ್ಕೆ ಆಗುವದಿಲ್ಲ; ಹಾಗೆ ಮಾಡುವ ಅವಶ್ಯವೂ ಇಲ್ಲ. ಶ್ರದ್ಧಾಭಕ್ತಿಗಳಿಂದ ಇವುಗಳಲ್ಲಿ ಒಂದು, ಎರಡು, ಅಥವಾ ಹೆಚ್ಚು ಸಾಧನಗಳನ್ನು ಮಾಡಿದರೂ ಸಾಕು. ಭೂಮಂಡಲದಲ್ಲಿರುವ ಸಾಧಕರು ಭಗವತ್ಪ್ರಾಪ್ತಿಗೆಂದು ಉಪಯೋಗಿಸಿರುವ ಸಾಧನಗಳು ಇಂತಿಷ್ಟೇ ಎಂದು ಪರಿಗಣಿಸಿ ಹೇಳಲು ಯಾರಿಗೂ ಸಾಧ್ಯವಿಲ್ಲ. ಆದರೆ ಎಲ್ಲಾ ಸಾಧನಗಳ ತತ್ತ್ವವೂ ಒಂದೇ. ಅವೆಲ್ಲ ಸಾಧಕನ ಹೃದಯದಲ್ಲಿ ಒಂದೇ ಭಾವವನ್ನು ಎಬ್ಬಿಸುತ್ತವೆ. ಅಧ್ಯಾತ್ಮವಾಗಿ ಅಥವಾ ಆಧಿ ಭೌತಿಕವಾಗಿ ಅಥವಾ ಆಧಿದೈವತವಾಗಿ ನಮಗೆ ಯಾವದೇ ಪ್ರಮಾಣದಿಂದ ಏನೇ ಕಂಡರೂ ಅದರಲ್ಲೆಲ್ಲ ಭಗವನ್ಮೂಲವನ್ನು ಕಂಡು ನಲಿಯುವದಕ್ಕೆ ಅನುಕೂಲಿಸುವಂತೆ ಅದೆಲ್ಲವನ್ನೂ ಪ್ರೇಮದಿಂದ ನೋಡುವದೇ ನಮ್ಮ ಹೆಗ್ಗುರಿಯಾಗಬೇಕು.

ಈ ಜಗತ್ತಿನಲ್ಲಿರುವದೆಲ್ಲ ಭಗವಂತನ ಸನ್ನಿಧಿಯಿಂದ ಜೀವಂತವಾಗಿರುತ್ತದೆ. ಇಲ್ಲಿ ಕಾಣುವ ಅಚೇತನವಸ್ತುಗಳೂ ಚೇತನವಸ್ತುಗಳೂ ಎಲ್ಲವೂ ಆ ಭಗವಂತ ನೆಂಬ ಮೂಲದಿಂದಲೇ ಬಂದಿರುತ್ತವೆ. ಇವುಗಳಲ್ಲಿ ಕೆಲವು ವಸ್ತುಗಳಲ್ಲಿ ಕಾಣುವ ಸೌಂದರ್ಯವೂ, ಸದ್ವರ್ತನೆಯೂ ಆ ಭಗವಂತನಿಂದಲೇ ಅವಕ್ಕೆ ದೊರಕಿರುತ್ತವೆ. ಕೆಲವು ಪ್ರಾಣಿಗಳಲ್ಲಿ ಕಾಣುವ ಇಂಪಾದ ಧ್ವನಿಗಳೂ ಕೆಲವು ಜನ ಮಾನವರಿಂದ ಬರುವ ಆಧ್ಯಾತ್ಮಿಕ ಉಪದೇಶಗಳೂ ಸೌಜನ್ಯವೂ ಆ ಭಗವಂತನಿಂದಲೇ ಅವರವರಿಗೆ ಬಂದವುಗಳಾಗಿವೆ. ಕೆಲವರಲ್ಲಿ ಕಾಣಬರುವ ಜ್ಞಾನಶಕ್ತಿ ವೀರ್ಯಾದಿ

ಗಳು ಭಗವಂತನಿಂದಲೇ ಅವರಿಗೆ ಬಂದಿರುತ್ತವೆ. ಮತ್ತೆ ಕೆಲವು ವಸ್ತುಗಳಲ್ಲಿ ಕುರೂಪವೂ ಕೆಲವು ಪ್ರಾಣಿಗಳಲ್ಲಿ ಕರ್ಕಶಧ್ವನಿಯೂ ಕೆಲವು ಜನ ಮಾನವರಲ್ಲಿ ಬಿರುನುಡಿಗಳೂ ಹಿಂಸಕವರ್ತನೆಯೂ ಕಾಣಬಹುದು; ಆದರೆ ಒಳಹೊಕ್ಕು ನೋಡಿದರೆ ಅದೆಲ್ಲ ಆಭಾಸಮಾತ್ರವಾಗಿರುತ್ತದೆ. ನಿಜವಾಗಿ ಅವುಗಳಲ್ಲಿಯೂ ಭಗವಂತನ ಮಹಿಮೆಯು ಒಂದಲ್ಲ ಒಂದು ರೂಪದಿಂದ ಹುದುಗಿ ಕೊಂಡಿರುತ್ತದೆ, ಒಂದಲ್ಲ ಒಂದು ರೂಪದಿಂದ ಪ್ರಕಾಶವಾಗುತ್ತಲೂ ಇರುತ್ತದೆ. ಈ ಎಲ್ಲಾ ಚೇತನಾಚೇತನವಸ್ತುಗಳೂ ಆ ಸತ್ಯಜ್ಞಾನಾನಂದಘನನಾದ ಭಗವಂತನಿಂದಲೇ ಬಂದಿರುತ್ತವೆ, ಅವನಲ್ಲಿಯೇ ಇರುತ್ತವೆ, ಕೊನೆಗೆ ಅವನಲ್ಲಿಯೇ ಲಯವಾಗುತ್ತವೆ, ಆದ್ದರಿಂದ ನಮ್ಮ ಅಲ್ಪದೃಷ್ಟಿಗೆ ಕಾಣುವ ಕುಂದುಕೊರತೆಗಳನ್ನು ಮರೆತು ಇಡಿಯ ಜಗತ್ತೇ ಆ ಪರಮಾತ್ಮನಿಂದ ಬಂದಿರುವದರಿಂದ ಇದೆಲ್ಲವೂ ಪರಮಾರ್ಥವಾಗಿ ಆ ಪರಮಾತ್ಮನೇ ಎಂಬ ಭಾವನೆಯನ್ನು ನಾವು ಮೇಲೆ ವಿವರಿಸಿರುವ ಸಾಧನಗಳಿಂದ ಸಂಪಾದಿಸಿಕೊಳ್ಳಬೇಕು.

ಸಾಧನಕಾಲದಲ್ಲಿ ನಮ್ಮ ಮನಸ್ಸಿನ ಪರೀಕ್ಷೆಯು ನಡೆಯುತ್ತಲೇ ಇರುವದು. ನಮಗೆ ಜಗತ್ತೆಲ್ಲವೂ ಪ್ರೇಮಸಾಗರನಾದ ಭಗವಂತನಿಂದಲೇ ಬಂದಿರುವದಕ್ಕೆ ಬದಲು ನಮಗೆ ಬಗೆಬಗೆಯ ಕಷ್ಟಗಳನ್ನು ತಂದೊಡ್ಡುವ ಶಕ್ತಿವಿಶೇಷಗಳಿಂದ ತುಂಬಿರುವಂತೆ ಕಾಣುತ್ತಿರುವದು. ಅದರ ಅವಲೋಕನದಿಂದ ಭಯ, ಶೋಕ, ಆಶ್ಚರ್ಯ, ಮೋಹ, ಕೋಪ, ಅನಾದರ, ಔದಾಸೀನ್ಯ–ಮುಂತಾದ ಭಾವಗಳು ನಮ್ಮ ಅಂತಃಕರಣದಲ್ಲಿ ಎದ್ದುಕೊಳ್ಳುತ್ತಿರುವವು. ಆದರೆ ಇದಕ್ಕೆ ಮುಖ್ಯಕಾರಣ ವೇನೆಂದರೆ, ನಾವು ಈ ಜಗತ್ತು ಪ್ರೇಮದ ಮೂಲವಾದ ಭಗವಂತನಿಂದ ಬಂದಿದೆ ಎಂಬುದನ್ನು ಆಗಿಂದಾಗ್ಗೆ ಮರೆಯುತ್ತಿರುವದೇ. "ಈ ಜಗತ್ತು ದಿನ ದಿನಕ್ಕೂ ಹೆಚ್ಚುಹೆಚ್ಚು ಸಂಕಷ್ಟಮಯವಾಗುತ್ತಿದೆ; ಮಾನವ ಜೀವನವು ದಿನದಿನಕ್ಕೂ ಹೆಚ್ಚುಹೆಚ್ಚು ದುಃಖಮಯವಾಗುತ್ತಿದೆ. ನಾಳೆಗೇನಾಗುವದೋ ಯಾರು ಬಲ್ಲರು?"– ಎಂದು ದುಃಖಮಯವಾದ ನಿರಾಶೆಯ ಹಾಡನ್ನು ಅನೇಕರು ಹಾಡುತ್ತಿರುವರು. ಆದರೂ ಸಾಧಕನು ಇದನ್ನೆಲ್ಲ ಕಂಡು ಎದೆಗುಂದಬಾರದು. ಬೆಳಗಿನ ಜಾವದಲ್ಲಿ ಎಷ್ಟು ದಟ್ಟವಾದ ಕತ್ತಲೆಯು ಕಾಣುತ್ತಿದ್ದರೂ ಸ್ವಲ್ಪ ಹೊತ್ತಿನೊಳಗಾಗಿ ಅರುಣೋದಯವಾಗಿ ಬೆಳಕು ಹರಿದುಬಿಡುವದು. ಕನಸಿನಲ್ಲಿ ಎಂಥ ಭೀಕರವಾದ ದೃಶ್ಯಗಳು ಕಾಣ ಬಂದರೂ ಎಚ್ಚರವಾದಕೂಡಲೆ ಅವು ಹೇಳಹೆಸರಿಲ್ಲದೆ ನಿಲ್ಲುವದಕ್ಕೆ ನೆಳಲಿಲ್ಲದಂತೆ ಮಾಯವಾಗಿಬಿಡುವವು. ಇದರಂತೆಯೇ ಸಾಧನಕಾಲದಲ್ಲಿ ಕಾಣುವ ಸಂಕಷ್ಟಗಳೆಲ್ಲ ಮಾಯಿಕವಾದ ತೋರಿಕೆಗಳೆಂಬುದನ್ನು ನಾವು ದೃಢವಾಗಿ ನಂಬಬೇಕು. ಪರಮಾತ್ಮನ

ಪ್ರೇಮಪ್ರವಾಹವು ಈಗಲೂ ಹರಿಯುತ್ತಿದೆ ಎಂದೇ ವಿಶ್ವಾಸವಿಡಬೇಕು. ಹಾಗಾದರೆ ದಟ್ಟವಾಗಿ ಕವಿದಿದ್ದ ಕಾವಳವು ಸೂರ್ಯೋದಯವಾಗುತ್ತಲೂ ಕಣ್ಮರೆಯಾಗಿ ಬಿಡುವಂತೆ ನಮ್ಮ ಜೀವನದ ಅನರ್ಥಗಳೆಲ್ಲವೂ ಮೈಗರೆದುಬಿಡುವವು.

ಕಾಯಿಕವಾಚಿಕಸಾಧನಗಳಿಗೆಲ್ಲ ತಳಹದಿಯು ಮಾನಸಿಕಸಾಧನವು. ಜಗತ್ತಿನಲ್ಲಿ ನಮಗೆ ಆಗದ ಪ್ರಾಣಿವಿಶೇಷಗಳೂ ಮನುಷ್ಯರೂ ಇರುವರೆಂದೂ ಅವರಿಂದ ನಮ್ಮ ಅಭ್ಯುದಯಕ್ಕೂ ಪರಮಪುರುಷಾರ್ಥಕ್ಕೂ ಅಡ್ಡಿಯಾಗಿರುವದೆಂದೂ ತಿಳಿಯುವದರಿಂದಲೇ ನಮಗೆ ಭಗವತ್ಸನ್ನಿಧಿಯ ಅನುಭವವು ಆಗುವದಕ್ಕೆ ತಡ ವಾಗಿರುತ್ತದೆ. ನಮಗೆ ಆಗುತ್ತಿರುವ ಕಷ್ಟಗಳೆಲ್ಲವೂ ಅವಿಶ್ವಾಸದ ಫಲಗಳೆಂದು ನಂಬಬೇಕು. ಈ ಅನುಭವಗಳಲ್ಲಿಯೇ ನಿಜವಾಗಿ ಭಗವಂತನ ಅನುಗ್ರಹದ ಅಮೃತ ಝರಿಯು ಹರಿಯುತ್ತಿರುವದೆಂಬುದನ್ನು ನಾವು ಬಲವಾಗಿ ಮನದಂದು ಕೊಳ್ಳಬೇಕು. ನಮ್ಮ ಅಂತಃಕರಣದಲ್ಲಿ ಆಗುತ್ತಿರುವ ಪ್ರತಿಯೊಂದು ದುರ್ಭಾವನೆಗೂ ಭಗವತ್ಸನ್ನಿಧಿಯ ಭಾವನೆಯೇ ಸರಿಯಾದ ಚಿಕಿತ್ಸೆಯು. ಭಗವತ್ಸನ್ನಿಧಿಯ ಭಾವನೆಯು ಬಲವಾದಂತೆ ನಮ್ಮಲ್ಲಿರುವ ಅಶುಭವಾಸನೆಗಳೆಲ್ಲವೂ ಪ್ರತಿಪಕ್ಷವಾದ ಶುಭವಾಸನೆಗಳಿಂದ ಬಾಧಿತವಾಗುವವು. ಕಾಲಕ್ರಮದಲ್ಲಿ ಆ ಶುಭವಾಸನೆಗಳೆಲ್ಲ ಸಂಗಮವಾಗಿ ಭಗವದ್ಭಕ್ತಿಯೆಂಬ ಪ್ರೇಮಾಮೃತದ ಪ್ರವಾಹವಾಗಿ ಹರಿಯುವದು.

ಸಾಧನಗಳಲ್ಲೆಲ್ಲ ಸತ್ಸಂಗವೆಂಬುದು ಸರ್ವಶ್ರೇಷ್ಠವಾಗಿರುತ್ತದೆ. ಏಕೆಂದರೆ ಸಾಧನಗಳ ಸ್ವರೂಪವನ್ನು ಗ್ರಂಥಪಾಠದಿಂದ ಕಲಿಯುವದಕ್ಕೆ ಆಗುವದಿಲ್ಲ. ಸಾಧನ ಗಳನ್ನು ವಿವರಿಸುವ ಸಾವಿರ ಲೇಖನಗಳಿಗಿಂತ ಒಬ್ಬ ಸತ್ಪುರುಷನ ಸಹವಾಸವು ಮೇಲು. ಸಾಧುಜನರೆಂದರೆ ಅಧ್ಯಾತ್ಮಸಾಧನಗಳನ್ನು ಮಾಡುವ ಕುತೂಹಲ ವುಳ್ಳವರಿಗೆ ಮೇಲುಪಙ್ಕ್ತಿಯಾದ ನಡೆಯುಳ್ಳ ಮಹನೀಯರು. ಅವರ ಸೇವೆ ಯಿಂದಲೂ ಅವರೊಡನೆ ಮಾಡುವ ಸಂಭಾಷಣೆಯಿಂದಲೂ ಸಿಕ್ಕುವ ಮಾರ್ಗವು ಭಗವತ್ಪ್ರಾಪ್ತಿಗೆ ತೀರ ಹತ್ತಿರದ ಮಾರ್ಗವಾಗಿರುತ್ತದೆ.

## 8. ಭಗವಂತನಲ್ಲಿ ಆಶ್ರಯ

ಕಾಲಪ್ರವಾಹಕ್ಕೆ ಸಿಕ್ಕಿಬಿದ್ದಿರುವ ಈ ಪ್ರಪಂಚದಲ್ಲಿ ಮುಂದಿನ ಕಾಲದಲ್ಲಿ ಹೇಗೆ ನಡೆದುಕೊಳ್ಳಬೇಕು? ಮುಂದಿನ ಕಾಲಕ್ಕಾಗಿ ಈಗಿನ ನಡತೆಯನ್ನು ಹೇಗೆ ಸರಿಪಡಿಸಿಕೊಳ್ಳಬೇಕು?-ಎಂಬ ತೊಡಕಿನ ಪ್ರಶ್ನೆಯು ಆಗಿಂದಾಗ್ಗೆ ಜನರನ್ನು ಎದುರಿಸುತ್ತಿರುವದು. ಯಾವ ಯೋಚನೆಯೂ ಇಲ್ಲದೆ ನದಿಯ ನೀರಿನಲ್ಲಿ ಕೊಚ್ಚಿಕೊಂಡು ಹೋಗುವ ಹುಲ್ಲುಕಡ್ಡಿಯ ಜೀವನವನ್ನು ಸಾಗಿಸುತ್ತಿರುವ

ಅವಿವೇಕಿಗಳ ಹೊರತು ಮಿಕ್ಕವರೆಲ್ಲರೂ ನಾಳಿಗೇನು ಗತಿ? ನಾಡಿದ್ದಿಗೇನು? ನಮ್ಮ ಮುಂದಿನ ಜೀವನವು ಹೇಗೆ ನಡೆಯಬೇಕು? ನಮ್ಮ ಮಕ್ಕಳ ಪಾಡೇನಾಗುವದೊ?–ಎಂದು ಮನಸ್ಸಿನಲ್ಲಿ ತಲ್ಲಣಿಸುತ್ತಲೇ ಇರುವರು.

ಸ್ವಲ್ಪ ತಿಳಿವಳಿಕೆಯುಳ್ಳವರೆನಿಸಿಕೊಂಡಿರುವವರು ಈ 'ಮುಂದಿನ ಕಾಲದ ಪ್ರಶ್ನೆ'ಯನ್ನು ಬಿಡಿಸಿಕೊಂಡಿರುವದು ಹೇಗೆಂದರೆ, ಹಿಂದಿನ ವರ್ಷಗಳಲ್ಲಿ ತಮಗೆ ಆಗಿರುವ ಕಷ್ಟಸುಖಗಳನ್ನೂ ಅವುಗಳ ನಿಮಿತ್ತಗಳನ್ನೂ ಮನಸ್ಸಿನ್ನಲಿ ಚೆನ್ನಾಗಿ ಹೊರಳಾಡಿಸುವದು; ಈಗಿನ ಸ್ಥಿತಿಯನ್ನು ನೋಡಿದರೆ ಮುಂದೆ ಹಾಗೆಹೀಗೆ ಆಗಬಹುದು ಎಂದು ಅನುಮಾನಪ್ರಮಾಣದಿಂದಲೂ ಊಹೆಯಿಂದಲೂ ಕಲ್ಪಿಸಿಕೊಳ್ಳುವದು; ಆಮೇಲೆ ಮುಂದೆ ಬರಲಿರುವ ಕಷ್ಟಗಳಿಗೆ ಪರಿಹಾರೋಪಾಯ ಗಳನ್ನೂ ಬರಬಹುದಾಗಿರುವ ಸುಖಗಳಿಗೆ ಸಾಧನಗಳನ್ನೂ ತಮ್ಮ ಕೈಯಲ್ಲಾದ ಮಟ್ಟಿಗೂ ಸಂಭಾವನಾಯುಕ್ತಿಯಿಂದ ನಿಶ್ಚಯಿಸಿಕೊಂಡು ಅವುಗಳನ್ನು ಕೈ ಕೊಳ್ಳುವದು–ಈ ಕ್ರಮವನ್ನೇ ವ್ಯವಹಾರದಲ್ಲಿ ನಾವುಗಳೆಲ್ಲರೂ ಸಾಮಾನ್ಯವಾಗಿ ಅನುಸರಿಸುತ್ತಿರುವೆವು. ವ್ಯಕ್ತಿಗಳು ಮಾತ್ರವಲ್ಲ; ಕುಟುಂಬದವರು ಸಮಾಜದವರು, ಜನಾಂಗಗಳು–ಎಲ್ಲರೂ ಈ ದೃಷ್ಟಿಯನ್ನೇ ಅವಲಂಬಿಸಿರುವರು. ಹೋದವರ್ಷ ಇಂತಿಷ್ಟು ಖರ್ಚಾಯಿತು, ಮುಂದಿನ ವರ್ಷಕ್ಕೆ ಇಂತಿಷ್ಟು ಬೇಕಾಗಬಹುದು; ಕಳೆದ ಐದು ವರ್ಷದ ಸರಾಸರಿ ಮಳೆ ಇಷ್ಟು ಅಂಗುಲ, ಈ ವರ್ಷಕ್ಕೆ ಇಷ್ಟು ಕಡಿಮೆಯಿಲ್ಲದೆ ಆಗಬಹುದು; ಇದೇ ಸರಾಸರಿಯ ಆಧಾರದ ಮೇಲೆ ಇಷ್ಟು ಪೈರು ಆಗಬಹುದು; ನಮಗೆ ಖರ್ಚಿಗೆ ಇಷ್ಟು ಬೇಕಾಗುವಂತಿದೆ; ಆದ್ದರಿಂದ ಇಷ್ಟನ್ನು ಹೆಚ್ಚಾಗಿ ಸಂಪಾದಿಸಿಕೊಳ್ಳಬೇಕಾಗುವದು, ಅಥವಾ ಇಷ್ಟು ಉಳಿತಾಯ ವಾಗಬಹುದು. ಹೋದ ಸಲ ಇಂಥ ರೋಗಕ್ಕೆ ಈ ಔಷಧವನ್ನು ಕೊಟ್ಟಿದ್ದೆನು, ಅದರಿಂದ ಇಂಥ ಗುಣವು ಕಂಡುಬಂದಿತ್ತು; ಆದ್ದರಿಂದ ಈ ರೋಗಿಗೂ ಅದನ್ನು ಪ್ರಯೋಗಿಸಿ ನೋಡೋಣ– ಎಂದು ಮುಂತಾಗಿ ಆಲೋಚಿಸುವ ಕ್ರಮವು ನಮ್ಮ ಗಳಿಗೆ ಹೊಸದಲ್ಲ. ಮುಂದಿನ ವರ್ಷಕ್ಕೆ ಯೋಜನೆಗಳನ್ನೂ ಆಯವ್ಯಯಗಳ ಅಂದಾಜನ್ನೂ ಮಂಡಿಸುವ ಸಂಸ್ಥೆಗಳೂ ಸರಕಾರಗಳೂ ಈ ಕ್ರಮವನ್ನೇ ಅನುಸರಿಸುತ್ತವೆ ಎಂಬುದು ಸುಪ್ರಸಿದ್ಧವಾಗಿದೆ. ಲೌಕಿಕದೃಷ್ಟಿಯಿಂದ ನೋಡಿದರೆ ಇದಕ್ಕಿಂತ ಉತ್ತಮವಾದ ಮತ್ತೊಂದು ಕ್ರಮವು ಯಾವದೂ ಕಾಣಿಸುವದೂ ಇಲ್ಲ. ಆದ್ದರಿಂದಲೇ ನಾವು ಈ ಕ್ರಮವನ್ನು ಅನುಸರಿಸುವವರನ್ನು ವ್ಯವಹಾರ ಚತುರರು ಎಂದು ಬಗೆಯುವೆವು.

ಆದರೆ ಈ ದೃಷ್ಟಿಯಲ್ಲಿ ಒಂದು ಕೊರತೆ ಇದೆ. ಅದು ನಮ್ಮೆಲ್ಲರಿಗೂ ತಿಳಿದದ್ದೇ ಆಗಿದೆ. ಅದೇನೆಂದರೆ ಹಿಂದೆ ನಡೆದದ್ದು ಆಗಿಹೋಯಿತು; ಹಿಂದಿನ

ಕಾಲವೆಂಬುದು ಸತ್ತುಹೋಗಿದೆ. ನಾವು ಇಷ್ಟಪಟ್ಟರೆ ಅದರ ನೆನಪನ್ನು ಮತ್ತೆ ತಂದುಕೊಳ್ಳಬಹುದು; ಅದು ಈಗಲೆ ನಡೆಯುತ್ತಿರುವಂತೆ ಬೇಕಾದರೆ ಮನಸ್ಸಿನಲ್ಲಿ ಚಿತ್ರಿಸಿಕೊಂಡು ಹರ್ಷ, ಶೋಕ, ಪಶ್ಚಾತ್ತಾಪ-ಮುಂತಾದ ಭಾವಗಳನ್ನು ಮನಸ್ಸಿನಲ್ಲಿ ಎಬ್ಬಿಸಿಕೊಳ್ಳಲೂಬಹುದು. ಆದರೇನು? ಹಿಂದಿನ ಕಾಲವು ಎಂದೆಂದಿಗೂ ಹಿಂದಿನದೇ, ಅದನ್ನು ಇಲ್ಲಿಗೆ ಎಳೆತರುವದಕ್ಕೆ ನಮ್ಮ ಯಾರಿಂದಲೂ ಆಗಲಾರದು; ಹಿಂದಿನ ಕ್ಷಣದ ಜೀವನವನ್ನು ಕೂಡ ಈಗ ನಾವು ಅನುಭವಿಸಲಾರೆವು. ಇಂಥ ಸತ್ತ ಕಾಲದ ಆಧಾರವನ್ನು ಮುಂದಿನ ಕಾಲದಲ್ಲಿ ಬರಲಿರುವ ಜೀವನದ ಕಟ್ಟಡಕ್ಕೆ ತಳಗಟ್ಟೆಂದು ಭಾವಿಸಿದರೆ ಎಷ್ಟರಮಟ್ಟಿಗೆ ಸರಿಯಾದೀತು? ನಿಮ್ಮ ಊರಿನಲ್ಲಿರುವ ನಿಮ್ಮ ನಿವೇಶನದಲ್ಲಿ ನಮ್ಮ ಊರಿನವರು ತಮ್ಮ ಕಟ್ಟಡಕ್ಕೆಂದು ತಳಹದಿಮಾಡಿಸುವ ಜಾಣತನವಲ್ಲವೆ ಇದು?

ಇನ್ನೊಂದು ಮುಖ್ಯ ಮನನೀಯ ವಿಷಯವಿದೆ; ಮುಂದಿನ ಕಾಲವು ಇನ್ನೂ ಹುಟ್ಟಿರುವದಿಲ್ಲ. ಅದು ಯಾವಾಗ ಯಾವ ಆಕಾರವನ್ನು ತಳೆಯುವದೋ ನಾವು ಯಾರೂ ಅರಿಯೆವು. ಅದರ ವಿಷಯಕ್ಕೆ ನಾವು ಕಲ್ಪನೆಗಳನ್ನು ಮಾಡಿಕೊಳ್ಳ ಬಹುದು. ನಿಜ. ಆದರೆ ಈ ನಮ್ಮ ಕಲ್ಪನೆಗಳು ಈಗಿನ ಕಾಲದವು, ಅವಕ್ಕೆ ಭವಿಷ್ಯತ್ಕಾಲದ ಸಂಬಂಧವೇನೂ ಇಲ್ಲವೇ ಇಲ್ಲ. ಇಷ್ಟೇ ಅಲ್ಲ. ಈ ನಮ್ಮ ಕಲ್ಪನೆಗಳು ಹಿಂದಿನ ಕಾಲದ ಅನುಭವಗಳ ಆಧಾರಗಳಿಂದ ಮಾಡಿಕೊಂಡವುಗಳು; ಹಿಂದಿನ ಕಾಲವು ಸ್ಥಿರವಾಗಿರುವ ಬಂಡೆಯಂತೆ ಇದೆ. ಮುಂದಿನ ಕಾಲವು ಮುಂದುಮುಂದಕ್ಕೆ ಹರಿದಂತೆಲ್ಲ ಪಾತ್ರವನ್ನು ಬದಲಾಯಿಸುವ ನದಿಯಂತೆ ಇರುತ್ತದೆ. ಹಿಂದಿನ ಕಾಲದ ಗಟ್ಟಿಬಂಡೆಯನ್ನು ಮುಂದಿನ ಕಾಲದ ನದಿಯ ಮೇಲೆ ಮಾಡುವ ಪಯಣಕ್ಕೆ ದೋಣಿಯಾಗಿ ಉಪಯೋಗಿಸಿಕೊಳ್ಳುವದು ಯಾವನಿಂದತಾನೆ ಆದೀತು? ಆದರೆ ನಮ್ಮಲ್ಲಿ ಬಹುಜನರು ಈ ಕೆಲಸದಲ್ಲಿಯೇ ಪ್ರಯತ್ನವನ್ನು ವಿನಿಯೋಗಿಸುತ್ತಿರುವರು !

ಇಲ್ಲಿ ಯಾರಾದರೂ ಹೀಗೆಂದು ಶಂಕಿಸಬಹುದು; ಜೀವನ ವ್ಯವಹಾರವೇ ಹೀಗೆ ಮುಂದಿನ ಕಾಲವನ್ನು ಲಕ್ಷ್ಯದಲ್ಲಿಟ್ಟು ನಡೆಯುವದಾಗಿರುತ್ತದೆ. ಇದನ್ನು ಯಾರು ಹೇಗೆತಾನೆ ತಪ್ಪಿಸಿಕೊಳ್ಳಲಾದೀತು? ಅಧ್ಯಾತ್ಮಸಾಧನಗಳಾದರೂ ಹಿಂದಿನ ಅನುಭವಗಳ ಆಧಾರದ ಮೇಲೆ ವಿಚಾರಮಾಡಿ ಮುಂದೆ ನಮಗೆ ಆಗಲಿರುವ ಅನಿಷ್ಟರೂಪವಾದ ಅಶ್ರೇಯಸ್ಸನ್ನು ಪರಿಹರಿಸಿಕೊಳ್ಳುವದಕ್ಕೂ ಶ್ರೇಯಸ್ಸನ್ನು ಸಂಪಾದಿಸಿಕೊಳ್ಳುವದಕ್ಕೂ ಮಾಡುವ ಪ್ರಯತ್ನಗಳೇ ಅಷ್ಟೆ? ಪ್ರಪಂಚಕ್ಕೂ ಪರಮಾರ್ಥಕ್ಕೂ ಸಹಾಯಕವಾಗಿರುವ ಈ ಒಂದೇ ದಾರಿಯನ್ನು ಯುಕ್ತಿಯಿಂದ ವಿಕಲ್ಪಿಸಿ ದೂಷಿಸಿದ ಮಾತ್ರದಿಂದ ಆಗುವ ಪ್ರಯೋಜನವೇನು?

ಕಾಲಪ್ರವಾಹದಲ್ಲಿ ಬಿದ್ದು, ಹಿಂದಿನ ಕಾಲವನ್ನು ಕುರಿತು ಯೋಚಿಸಿಕೊಳ್ಳುತ್ತಾ ಹಿಗ್ಗುತ್ತಲೂ ಕುಗ್ಗುತ್ತಲೂ ಕಾಲವನ್ನು ಕಳೆಯಬೇಡಿರಿ; ಮುಂದಿನ ಕಾಲದಲ್ಲಿ ಆಗಬಹುದಾದ ಮನಸಿನಮಂಡಿಗೆಯನ್ನು ಸವಿನೋಡುತ್ತಾ ವ್ಯರ್ಥಕಾಲ ಕ್ಷೇಪವನ್ನೂ ಮಾಡಬೇಡಿರಿ. ಇಂದಿನ ಕಾಲವು, ಈ ಜೀವಂತ ಕ್ಷಣವು, ನಿಮಗೆ ಭಗವಂತನ ದಯೆಯಿಂದ ವಶವಾಗುವದಕ್ಕೆ ಅವಕಾಶವಿದೆ. ಕೂಡಲೆ ಆತನನ್ನು ಆಶ್ರಯಿಸಿ ಈ ಕೆಲಸಕ್ಕೆ ಸೊಂಟವನ್ನು ಕಟ್ಟಿಕೊಂಡು ನಿಲ್ಲಿರಿ. ಇದರಿಂದ ನೀವು ಕಾಲಕ್ಕೆ ವಶರಾಗುವದರ ಬದಲು ಕಾಲವೇ ನಿಮ್ಮ ವಶವಾಗುವದು.

ಇದುವರೆಗೆ ಆಗಿಹೋಗಿರುವ ಕಾಲದ ವೇಗವು ಬೇರೆಬೇರೆಯ ಪ್ರಮಾಣದ್ದಾಗಿರುತ್ತದೆ. ಕೆಲವು ವರ್ಷಗಳು ಮೆಲ್ಲಮೆಲ್ಲನೆ ದಟ್ಟಡಿಯಿಟ್ಟುಕೊಂಡು ನಡೆದವು, ಇನ್ನು ಕೆಲವು ವರ್ಷಗಳು ಬೇಗಬೇಗನೆ ಉರುಳಿದವು. ಆದರೆ ಇತ್ತೀಚೆಗೆ ಕಾಲವು ಬಂದುಹೋಗುವ ವೇಗವು ಮಿಂಚಿನ ವೇಗಕ್ಕಿಂತ ಹೆಚ್ಚಿನದಾಗಿದೆ. ನಮ್ಮ ಪೂರ್ವಜರು ಒಂದು ಬುದ್ಧಿವಾದವನ್ನು ಹೇಳಿಕೊಟ್ಟಿದ್ದರು:

**ಆಯುರ್ನಶ್ಯತಿ ಪಶ್ಯತಾಂ ಪ್ರತಿದಿನಂ ಯಾತಿ ಕ್ಷಯಂ ಯೌವನಂ**
**ಪ್ರತ್ಯಾಯಾನ್ತಿ ಗತಾಃ ಪುನರ್ನ ದಿವಸಾಃ ಕಾಲೋ ಜಗದ್ಭಕ್ಷಕಃ ।**
**ಲಕ್ಷ್ಮೀಸ್ತೋಯತರಙ್ಗಭಙ್ಗಚಪಲಾ ವಿದ್ಯುಚ್ಚಲಂ ಜೀವಿತಂ**
**ತಸ್ಮಾನ್ಮಾಂ ಶರಣಾಗತಂ ಶರಣದ ತ್ವಂ ರಕ್ಷ ರಕ್ಷಾಧುನಾ ॥**

ಆಯುಸ್ಸು ದಿನದಿನಕ್ಕೂ ನಾವು ನೋಡುತ್ತಿರುವ ಹಾಗೆಯೇ ನಾಶವಾಗುತ್ತಿರುವದು. ಹರೆಯವು ಬೇಗಬೇಗನೆ ಕ್ಷಯವಾಗುತ್ತಿರುವದು. ಕಳೆದ ದಿನಗಳು ಮತ್ತೆ ಬರುವದೇ ಇಲ್ಲ. ಕಾಲವು ಜಗತ್ತನ್ನೇ ಭಕ್ಷಿಸುತ್ತಿರುವದು. ಸಿರಿಸಂಪತ್ತು ನೀರಿನ ತೆರೆಗಳಂತೆ ಚಂಚಲವಾಗಿರುವದು. ಜೀವಿತವು ಮಿಂಚಿನಂತೆ ಚಲಿಸುವದು. ಆದ್ದರಿಂದ "ಶರಣದಾತೃವಾದ ದೇವನೆ, ಶರಣಾಗತನಾದ ನನ್ನನ್ನು ಈಗಲೇ ಕಾಪಾಡು! ಕಾಪಾಡು!" ಎಂದು ಶರಣುಹೋಗಬೇಕು. ಇದೇ ಜೀವನದ ಗುಟ್ಟು.

ಪಾಠಕಮಹಾಶಯ, ನಮ್ಮ ಕಣ್ಣ ಮುಂದೆಯೇ ಈ ಭೂಗೋಳದ ಮೇಲಿರುವ ಜನಾಂಗಗಳ ಇತಿಹಾಸವು ದಿನದಿನಕ್ಕೂ ಬದಲಾಯಿಸುತ್ತಿದೆ. ಒಂದಾನೊಂದು ಕಾಲದಲ್ಲಿ ಧರ್ಮದ ಹೆಸರಿನಲ್ಲಿ ಕೆಲವರು ಮಿಕ್ಕ ಜನರನ್ನು ಹೆದರಿಸಿ ಬೆದರಿಸಿ ತಮ್ಮ ವಶದಲ್ಲಿಟ್ಟುಕೊಂಡಿದ್ದರು. ಅದಾದಬಳಿಕ ಬಾಹುಬಲದ ಜನರು ಮುಂದಕ್ಕೆ ಬಂದರು. ಅವರು ರಾಜ್ಯವಿಸ್ತರಣದಾಹದಿಂದ ಕೂಡಿ ಒಬ್ಬರೊಡನೊಬ್ಬರು ಕಾದಾಡಿ ಈ ಭೂಮಂಡಲದ ಬೇರೆಬೇರೆಯ ಭಾಗಗಳಲ್ಲಿ ತಮ್ಮ ಕೀರ್ತಿಧ್ವಜವನ್ನು ಹಾರಿಸಿದರು. ಕೆಲವು ಕಾಲದ ಮೇಲೆ ವರ್ತಕರ ಅಧಿಕಾರವು ಬಂದಿತು. ಅವರು ವ್ಯಾಪಾರದ ನೆಪದಿಂದ ಬೇರೆಬೇರೆಯ ಗಣಗಳಾಗಿ ಏರ್ಪಟ್ಟು ಜನರನ್ನು

ತಮ್ಮ ಪ್ರಭಾವಕ್ಕೆ ಒಳಗುಮಾಡಿಕೊಂಡರು. ಇತ್ತೀಚೆಗೆ ಕೆಲಸಗಾರರು ಎದ್ದು ಕೊಂಡಿರುತ್ತಾರೆ. ತಮ್ಮ ಪ್ರಭಾವದಿಂದ ಕಂಪೆನಿಗಳ ಯಜಮಾನರುಗಳ ಸೃಷ್ಟಿಸ್ಥಿತಿ ಲಯಗಳನ್ನು ಮಾಡುತ್ತಿದ್ದಾರೆ. ಧರ್ಮೋಪದೇಶಕರನ್ನು ತಮ್ಮ ರಾಗಕ್ಕೆ ತಾಳವನ್ನು ಹಾಕುವಂತೆ ಮಾಡಿಕೊಳ್ಳುತ್ತಿದ್ದಾರೆ. ಯುದ್ಧದ ಶಸ್ತ್ರಾಸ್ತ್ರಗಳನ್ನು ಭೌತಿಕವಿಜ್ಞಾನಿ ಗಳಿಂದ ಏರ್ಪಡಿಸಿಕೊಳ್ಳುತ್ತಿದ್ದಾರೆ. ಈಗ ಬಹುಜನಮತವೇ ಮತವಾಗಿರುತ್ತದೆ. ರಾಜರುಗಳು ಪದಚ್ಯುತರಾಗುತ್ತಿರುವರು, ರಾಜ್ಯಶಾಸನಪದ್ಧತಿಗಳು ಹೊಸ ಹೊಸದಾಗಿ ಏರ್ಪಾಡಾಗುತ್ತಿವೆ. ವಿದ್ಯೆ, ವ್ಯಾಪಾರ, ಮತ, ಉದ್ಯೋಗ, ಪ್ರಯಾಣ ಪದ್ಧತಿ, ವಿನೋದಗಳು, ಆಹಾರವಿಹಾರಗಳು, ಆಚಾರವಿಚಾರಗಳು-ಎಲ್ಲವೂ ಸುಂಟರಗಾಳಿಗೆ ಸಿಕ್ಕ ಧೂಳಿಯಂತೆಯೂ ಕಸಕಡ್ಡಿಗಳಂತೆಯೂ ಅತ್ತಿತ್ತ ತೂರಾಡು ತ್ತಿರುತ್ತವೆ. ಈಗಿನ ಸಂದರ್ಭಗಳಲ್ಲಿ ಹಿಂದಿನ ಕಾಲದವನ್ನು ಮನದಂದುಕೊಂಡು ಮುಂದಿನ ಕಾಲಕ್ಕೆ ತಕ್ಕಂತೆ ವ್ಯವಹಾರವನ್ನು ನೇರ್ಪಡಿಸಿಕೊಳ್ಳುವೆನೆಂಬ ಲೆಕ್ಕಾ ಚಾರದ ಬುದ್ಧಿಯು ಯಾವ ಕೆಲಸಕ್ಕೆ ಬಂದೀತು?

ಈ ಸಂದರ್ಭದಲ್ಲಿ ಜನರು ಉಪಯೋಗಿಸಿಕೊಳ್ಳಬಹುದಾದ ಒಂದೇ ಒಂದು ಉಪಾಯವು ಇರುತ್ತದೆ. ಭೂತಭವ್ಯಭವನ್ನಾಥನಾದ-ಹಿಂದಿನ, ಮುಂದಿನ, ಈಗಿನ ಕಾಲಗಳಿಗೆ ಒಡೆಯನಾಗಿರುವ-ಭಗವಂತನಿಗೆ ಶರಣುಹೋಗುವದೇ ಆ ಉಪಾಯವು. ಕಾಲವು ಎಷ್ಟೇ ಬದಲಾಯಿಸುತ್ತಿರಲಿ, ವ್ಯವಹಾರದಲ್ಲಿ ಅದರ ಹಿಡಿತವು ಎಷ್ಟೇ ಬಿಗಿಯಾಗಿ ಕಾಣುತ್ತಿರಲಿ, ನಾವು ಯಾವಾಗಲೂ ಈ ಉಪಾಯವನ್ನು ಅನು ಸರಿಸುವದಕ್ಕೆ ಅವಕಾಶವಿರುತ್ತದೆ. ನಿಮ್ಮ ಮುಂದೆ ಕಷ್ಟದ ಪರಂಪರೆಗಳು ಕಾಣಿಸು ತ್ತಿರುವವೇನು? ಬೇಗಬೇಗನೆ ಸಂಭವಿಸುತ್ತಿರುವ ಘಟನೆಗಳು ನಿಮ್ಮ ಮನೋದಾರ್ಢ್ಯ ವನ್ನು ಕಲಕಿ ದಿಕ್ಕುತೋಚದಂತೆ ಮಾಡಿವೆಯೇನು? ನಿಮಗೆ ಈವರೆಗೆ ತಿಳಿದಿರುವ ಕಷ್ಟನಿವಾರಣೋಪಾಯಗಳೂ ಇಷ್ಟಪ್ರಾಪ್ತ್ಯುಪಾಯಗಳೂ ಯಾವವೂ ಈಗ ಕೆಲಸಕ್ಕೆ ಬರುವಂತೆ ಕಾಣುವದಿಲ್ಲವೆಂಬ ಅಂಜಿಕೆಯುಂಟಾಗಿದೆಯೇನು? ಹೆದರದಿರಿ. ವಿಚಾರಮಾಡದೆ ಮುನ್ನುಗ್ಗಿದ ಸೇನೆಯನ್ನು ಕುಶಲನಾದ ಸೇನಾಪತಿಯು ಮೆಲ್ಲಗೆ ಹಿಂದಕ್ಕೆ ಸರಿಯಿಸುವಂತೆ, ನಿಮ್ಮ ಇಂದ್ರಿಯಗಳನ್ನೂ ಮನೋಬುದ್ಧಿಗಳನ್ನೂ ಹಿಂದಕ್ಕೆ ಎಳೆದುಕೊಳ್ಳಿರಿ. ನಿಮ್ಮ ಹೃದಯದಲ್ಲಿ ನಿಮಗೆ ಬೇಕಾದ ಗುಪ್ತಬಲವು ಇದ್ದು ಕೊಂಡಿರುವದು. "ಆತ್ಮನಿಂದ ವೀರ್ಯವನ್ನು ಪಡೆಯುತ್ತಾನೆ, ವಿದ್ಯೆಯಿಂದ ಬಲವನ್ನು ಪಡೆಯುತ್ತಾನೆ" ಎಂಬ ಉಪನಿಷದ್ವಾಕ್ಯವನ್ನು ಮನದಂದುಕೊಳ್ಳಿರಿ. ಆತ್ಮನ ವೀರ್ಯ ವನ್ನು ಸಂಪಾದಿಸಿಕೊಳ್ಳಿರಿ; ಅಧ್ಯಾತ್ಮವಿದ್ಯೆಯ ಬಲವನ್ನು ಸಂಪಾದಿಸಿಕೊಳ್ಳಿರಿ.

ಹೊರಗಿನ ಸಾಧ್ಯಸಾಧನಗಳೆಲ್ಲವೂ ಕಾಲಕ್ಕೆ ಕಟ್ಟುಬಿದ್ದಿರುತ್ತವೆ. ಆದರೆ ನಮ್ಮಲ್ಲಿ ಒಳಗೆ ಇರುವ ಪರಮಾತ್ಮತತ್ತ್ವವು ಮಾತ್ರ ಕಾಲಾತೀತವಾಗಿರುತ್ತದೆ. "ಕಾಲದಲ್ಲಿ

ಇಂದಿನ ಕಾಲವೇ ಉತ್ತಮ" ಎಂಬ ವಿಷಯದಲ್ಲಿ ಒಂದು ಸಂದೇಶವನ್ನು ಹಿಂದಿನ ಸಂಚಿಕೆಯೊಂದರಲ್ಲಿ ನಾನು ಬರೆದಿದ್ದೆನು. ಆದರೆ ಇಂದಿನ ಕಾಲವೆಂದರೆ ಯಾವದು? ಅಂದು, ಇಂದು, ಮುಂದು–ಎಲ್ಲವೂ ಕಾಲವೇ. 'ಇಂದು' ಎಂದು ನಾವು ಉಚ್ಚರಿಸುವದರೊಳಗಾಗಿ ಈ ಕಾಲವು ಹಿಂದಿನ ಕಾಲವಾಗಿ ಬಿಡುವದು. ಹಿಂದಿನ ಕಾಲದ್ದೆಲ್ಲ ಉತ್ತಮವಾದದ್ದು ಎಂದು ಕೊಚ್ಚಿಕೊಳ್ಳುತ್ತಿದ್ದ ಜನರಿಗೆ ಮಹಾಕವಿಯೊಬ್ಬನು "ಪುರಾಣಮಿತ್ಯೇವ ನ ಸಾಧು ಸರ್ವಮ್" ಹಿಂದಿನದೆಂಬುದೊಂದೇ ಕಾರಣದಿಂದ ಹಿಂದಿನದೆಲ್ಲವೂ ಸರಿಯಲ್ಲ–ಎಂದು ಎಚ್ಚರಿಕೆಕೊಟ್ಟನು. ಈಚೆಗೆ 'ಇದು ಈಗಿನ ಪದ್ಧತಿ', 'ಇದು ಹೊಸ ಪದ್ಧತಿ' ಎಂಬ ಕೂಗು ಎದ್ದಿರುವದಲ್ಲದೆ 'ಇಷ್ಟರಲ್ಲಿಯೇ ಇದು ಬದಲಾಯಿಸುವದು', 'ಮುಂದೆ ಈ ಹೊಸ ಏರ್ಪಾಡು ಆಗುವದು' ಎಂಬ ಕುತೂಹಲದ ಕೂಗುಗಳೂ ಏಳುತ್ತಿವೆ! ಈಗ ಜನರ ಈ ಮರುಳಾಟವನ್ನು ನಿಲ್ಲಿಸುವದಕ್ಕೆ "ಹಿಂದಿನದು ಸತ್ತುಹೋಗಿದೆ, ಮುಂದಿನದು ಹುಟ್ಟಿಲ್ಲ, ಆದ್ದರಿಂದ ಇಂದಿನ ಕಾಲವನ್ನೇ ಉಪಯೋಗಿಸಿಕೊಳ್ಳಿರಿ!" ಎಂಬ ಎಚ್ಚರಿಕೆಯನ್ನು ಕೊಡುವದು ಅತ್ಯವಶ್ಯ. ಇಷ್ಟೇ ಅಲ್ಲ. "ಇಂದು ಎಂದರೆ ಇರುವದು. ವರ್ತಮಾನವೆಂದರೆ ಕಾಲದಲ್ಲಿ ಈಗ ಇರುವದೆಂದು ಭಾಸವಾಗುವದಲ್ಲ, ನಿತ್ಯ ವರ್ತಮಾನನಾಗಿರುವ ಪರಮಾತ್ಮನೇ 'ಇಂದು' ಎಂಬ ಹೆಸರಿಗೆ ತಕ್ಕವನು" ಎಂಬ ತಿಳಿವಳಿಕೆಯನ್ನು ಹೇಳಿ ಕೊಡಬೇಕಾಗಿದೆ.

ಭಗವಂತನು ನಿತ್ಯವರ್ತಮಾನಸ್ವಭಾವನು. ಅವನು ಹಿಂದಿನ, ಇಂದಿನ, ಮುಂದಿನ–ಎಲ್ಲಾ ಕಾಲಗಳಲ್ಲಿಯೂ ಹಾದುಹೋಗಿರುತ್ತಾನೆ. ಸೂತ್ರದಲ್ಲಿ ಮಣಿಗಳನ್ನು ಪೋಣಿಸಿರುವಂತೆ ಅಂದು, ಇಂದು, ಮುಂದು–ಎಲ್ಲವೂ ಆತನ ಇರವಿನಲ್ಲಿ ಪೋಣಿಸಿಕೊಂಡಿರುತ್ತದೆ. ಯಾವಾಗ ಯಾವ ಅನಿರೀಕ್ಷಿತವಾದ ಘಟನೆಯು ಬರಲಿ, ಯಾವ ಸಂಕಷ್ಟವು ಎಂಥ ಪರಿಮಾಣದಲ್ಲಿ ನಮ್ಮ ಮುಂದೆ ಕಾಣಿಸಿಕೊಳ್ಳಲಿ, ಯಾವ ಭೋಗಸಾಮಗ್ರಿಯು ಎಷ್ಟು ಅತ್ಯಲ್ಪಕಾಲದಲ್ಲಿ ಹೇಳದೆ ಕೇಳದೆ ಮಾಯವಾಗಲಿ, ಎಲ್ಲಾ ಸಂದರ್ಭಗಳೂ ಆತನ ದೃಷ್ಟಿಯಲ್ಲಿ ನಮ್ಮ ವಶದಲ್ಲಿರುವದಕ್ಕೆ ತಕ್ಕವೇ ಆಗಿರುತ್ತವೆ. ಯುಗಕಲ್ಪಗಳ ಲೆಕ್ಕದಿಂದ ಹಿಂದಕ್ಕೆ ಆಗಿರುವದೂ ಯುಗಕಲ್ಪಗಳ ಲೆಕ್ಕದಿಂದ ಮುಂದೆ ಆಗಲಿರುವದೂ ಆತನಿಗೆ ನಿತ್ಯಪ್ರತ್ಯಕ್ಷವಾಗಿರುತ್ತದೆ. ಪ್ರತಿಯೊಂದು ಸಂಕಷ್ಟವೂ ಬೆಟ್ಟದಂತೆ ಬಂದದ್ದು ಮಂಜಿನಂತೆ ಹಾರಿಹೋಗುವ ಕ್ರಮವು ಆತನ ಅನುಗ್ರಹದಿಂದ ನಮಗೆ ಸಿಕ್ಕಬಹುದು. ನಾವು ಮಾಡಬೇಕಾದದ್ದೆಲ್ಲ ಇಷ್ಟೇ. ಆತನಲ್ಲಿಯೇ ನಮ್ಮ ಮನಸ್ಸು ನೆಲೆನಿಲ್ಲುವಂತೆ ಮಾಡಿಕೊಳ್ಳಬೇಕು.

ಸಾಮಾನ್ಯಮನುಷ್ಯರಿಗೆ ಹಿಂದೆ ಕಳೆದುಹೋದದ್ದು ಬಹಳ ಸುಭಿಕ್ಷಕಾಲವೆಂದು ತೋರುವದು; ಈಗೀಗ ಬಹಳ ಕಷ್ಟಕಾಲವು ಬರುತ್ತಿರುವದೆಂದು ಭಾಸವಾಗುವದು; ಮುಂದೆ ಎಂಥೆಂಥ ಕಷ್ಟಗಳು ನಮಗಾಗಿ ಕಾದಿರುವದೋ ಎಂಬ ಚಿಂತೆಯು ಅವರನ್ನು ಗೋಳುಗುಟ್ಟಿಸುತ್ತಿರುವದು. ಆದರೆ ವಿವೇಕಿಯಾದವನು ಈ ಕಾಲದ ಪರಿವರ್ತನೆಗಳಿಗೆ ಸ್ವಲ್ಪವೂ ಮನಸ್ಸನ್ನು ಹಾಕುವದಿಲ್ಲ; ಅದರ ಪ್ರಲೋಭನಗಳಿಗೆ ಒಂದಿಷ್ಟೂ ಬಾಯಿನೀರುಕರೆಯಿಸುವದಿಲ್ಲ; ಅದರ ಗೊಡ್ಡುಬೆದರಿಕೆಗಳಿಗೆ ಸ್ವಲ್ಪವೂ ಸೊಪ್ಪುಹಾಕುವದಿಲ್ಲ. ತ್ರಿಕಾಲಕ್ಕೂ ಒಡೆಯನಾದ, ತ್ರಿಕಾಲಕ್ಕೂ ಅತೀತನಾದ, ಭಗವಂತನು ತನ್ನ ಹೃದಯದಲ್ಲಿಯೇ ಇರುವನು ಎಂಬುದನ್ನು ಅವನು ಬಲ್ಲನು. ಅವನು "ಲಕ್ಷ್ಮೀಪತಿಯೆ, ಯಾವಾಗ ನಿನ್ನ ಅಂಘ್ರಿಯುಗವನ್ನು ಸ್ಮರಿಸುವೆನೋ ಅದೇ ಲಗ್ನವು, ಅದೇ ಸುದಿನವು; ಚಂದ್ರತಾರಾಬಲಗಳು ಅಂದೇ ಸರಿಯಾಗಿರುವವು. ಆದಿತ್ಯಾದಿ ಗ್ರಹಗಳೆಲ್ಲವೂ ನಕ್ಷತ್ರಗಳೂ ರಾಶಿಗಳೂ ಎಲ್ಲವೂ ಆಗಲೇ ನನಗೆ ಶುಭಫಲಪ್ರದವಾಗಿರುವವು" ಎನ್ನುತ್ತಿರುವನು.

ಹೊರಗಿನ ಪ್ರಯತ್ನವನ್ನು ಬಿಟ್ಟು ಒಳಕ್ಕೆ ಸರಿಯುವದೆಂಬುದು ಹೇಡಿತನದ ಗುರುತೆಂದು ಕೆಲವರು ಭಾವಿಸಬಹುದು. ಹಿಂದಿನ ತಪ್ಪನ್ನು ತಿದ್ದಿಕೊಂಡು ಮುಂದಿನ ಇಷ್ಟಾರ್ಥಸಿದ್ಧಿಗೆ ತಕ್ಕ ಪ್ರಯತ್ನವನ್ನು ಕೈಕೊಳ್ಳುವವನು, ಅವನ ಪ್ರಯತ್ನವು ಸಫಲವಾಗಲಿ ಆಗದಿರಲಿ, ಧೀರನು; ಒಂದೆರಡು ಸಲ ತನ್ನ ಕಾರ್ಯವು ಸಫಲವಾಗಲಿಲ್ಲವೆಂದಮಾತ್ರದಿಂದ ಮೋರೆಯಮೇಲೆ ಮುಸುಕು ಎಳೆದುಕೊಂಡು ಒಂದು ಮೂಲೆಯಲ್ಲಿ ಕುಳಿತುಕೊಳ್ಳುವದು ಎಂಥ ಹೇಡಿತನವು!" -ಎಂದು ಅಂಥವರು ಹೇಳಬಹುದು. ಆದರೆ ನಾನು ಇಲ್ಲಿ ಸೂಚಿಸಿರುವ ಸಾಧನವು ಯಾವ ಕೆಲಸವನ್ನೂ ಮಾಡದೆ ಕೈಮುದುರಿಕೊಂಡು ಕುಳಿತುಕೊಳ್ಳುವ ಸೋಮಾರಿಗಳಿಗೆ ದಕ್ಕುವದಿಲ್ಲ. ಕಾಲಕರ್ಮಗಳ ಪಾಶಕ್ಕೆ ಕಟ್ಟುಬೀಳದೆ ಅವುಗಳನ್ನು ತಮ್ಮ ವಶದಲ್ಲಿಟ್ಟುಕೊಳ್ಳಬೇಕೆಂಬ ಧೀರವೀರರಿಗೆ ಹೇಳಿರುವ ಸಾಧನವಿದು. ಸಾಮಾನ್ಯದೃಷ್ಟಿಯಿಂದ ನೋಡಿದರೆ ಕಾಲಪ್ರವಾಹವು ಮಳೆಗಾಲದಲ್ಲಿ ತುಂಬಿ ಹರಿಯುತ್ತಿರುವ ಮಹಾನದಿಯಂತೆ ಕಾಣುತ್ತಿರುವದು. ಅದರಲ್ಲಿ ಕೊಚ್ಚಿಕೊಂಡು ಹೋಗುವವರೇ ಬಹಳ. ತಮ್ಮ ಧನವೂ ಸಹಾಯ ಸಂಪತ್ತಿಯೂ ಕಾರ್ಯದಕ್ಷತೆಯೂ ವ್ಯವಹಾರನೈಪುಣ್ಯವೂ ತಿಳಿವಳಿಕೆಯೂ ಶರೀರದ ಬಲವೂ ಅಧಿಕಾರವೂ ಎಷ್ಟೇ ಹೆಚ್ಚಿನದೆಂದು ನಂಬಿಕೊಂಡಿರುವವರಿಗೆ ಕೂಡ ಒಂದೊಂದು ವೇಳೆ ಅವುಗಳಲ್ಲಿ ಯಾವದೊಂದೂ ಯಾವ ಪ್ರಯೋಜನಕ್ಕೂ ಬಾರದೆ, "ಈಗ ನನ್ನ ಪ್ರಯತ್ನವು ಯಾವದೂ ಹಾಯುವಂತಿಲ್ಲ; ಈಗ ಏನು ಮಾಡಲಿ!" ಎಂಬ ಚಿಂತೆಯು ಹತ್ತಿಕೊಳ್ಳುವದು. ಇಂಥ ದಿಕ್ಕು ತೋಚದ ಸ್ಥಿತಿಯು ನಮ್ಮ

ಗಳಲ್ಲಿ ಅನೇಕರಿಗೆ ಆಗಾಗ್ಗೆ ಕಾಣಿಸಿಕೊಂಡದ್ದು ಅನುಭವದಲ್ಲಿರುತ್ತದೆ. ಇಂಥ ವಿಷಮಸ್ಥಿತಿಗಳಲ್ಲಿ ಕೂಡ ಎದೆಗೆಡದೆ ಕೂಡಲೆ ಮುನ್ನುಗ್ಗುವ ಧೈರ್ಯವನ್ನು ಕೊಡುವ ಒಂದಾನೊಂದು ಗುಪ್ತಶಕ್ತಿಯು ನಮ್ಮಲ್ಲಿರುತ್ತದೆ. ಇದೇ ನಮ್ಮಗಳ ಹೃದಯದಲ್ಲಿರುವ ಭಗವಂತನ ಬಲವು. ಆ ಬಲವನ್ನು ನಮ್ಮದನ್ನಾಗಿ ಮಾಡಿ ಕೊಳ್ಳಬೇಕು. ಆಗ ನಮಗೆ ಜೀವನದಲ್ಲಿ ಯಾವದೊಂದರ ತಡೆಯೂ ಇಲ್ಲದೆ ಜಯವಾಗುವದು. ಲೌಕಿಕಪ್ರಯತ್ನಗಳಲ್ಲಿ ಯಾವದೊಂದರ ಆಟವೂ ಸಾಗದೆ ಇರುವ ವಿಷಮಸ್ಥಿತಿಯಲ್ಲಿ ತಪ್ಪದೆ ಸಹಾಯಕ್ಕೆ ಬರುವ ಪಾಶುಪತಾಸ್ತ್ರವಿದು. ಮಹಾತಪಸ್ವಿಗಳಿಗೆ ಮಾತ್ರವೇ ಅದು ದೊರಕತಕ್ಕದ್ದು.

ನಮ್ಮನಮ್ಮೊಳಗೇ ಈ ಗುಪ್ತಾಸ್ತ್ರವು ಇರುತ್ತಿದ್ದರೂ ಅದು ಸುಮ್ಮನೆ ಹಂಬಲಿಸಿದ ಮಾತ್ರದಿಂದ ದೊರಕತಕ್ಕದ್ದಲ್ಲ. ಅದಕ್ಕಾಗಿ ಸ್ವತಂತ್ರವಾಗಿ ನಾವು ಪ್ರಯತ್ನವನ್ನು ಮಾಡಬೇಕಾಗುವದು. ಒಂದಾನೊಂದು ರಾಷ್ಟ್ರದ ಸಂಪತ್ತನ್ನು ಸರ್ವತೋಮುಖ ವಾಗಿ ಬೆಳೆಯಿಸಿ ಅದನ್ನು ಮಿಕ್ಕರಾಷ್ಟ್ರಗಳೆಲ್ಲಕ್ಕೂ ಆದರ್ಶವಾಗಿ ಮಾಡುವದಕ್ಕೆಂದು ಜನನಾಯಕನೊಬ್ಬನು ಹವಣಿಸಿದರೆ, ಮಾಡಬೇಕಾದ ಸ್ಥಿರಪ್ರಯತ್ನಕ್ಕಿಂತಲೂ ಇದು ಹೆಚ್ಚಿನ ಪ್ರಯತ್ನವಾಗಿರುವದೆಂದು ಹೇಳಬೇಕು. ಹೊರಗಿನ ಸಣ್ಣಪುಟ್ಟ ಆಶೆಗಳಿಗೆ ಮನಗೊಡದೆ, ಹೊರಗಿನ ಅಂಜಿಕೆಗಳನ್ನು ಲೆಕ್ಕಕ್ಕೆ ತಾರದೆ, ಸುಖದುಃಖ, ಲಾಭಾಲಾಭ, ಜಯಾಜಯ–ಮುಂತಾದ ದ್ವಂದ್ವಗಳಿಂದ ಚಿತ್ತದಲ್ಲಿ ಏರುಪೇರನ್ನು ಹೊಂದದೆ, ನಮ್ಮನಮ್ಮೊಳಗೆ ಇರುವ ಭಗವಂತನ ಬಳಿಗೆ ಧಾವಿಸುವ ಈ ಸಾಧನವನ್ನು ಪ್ರತಿದಿನವೂ ತಪ್ಪದೆ ಮಾಡುತ್ತಿರಬೇಕು. ಮನಸ್ಸು ಹರಿದಾಡದಂತೆ ಅದನ್ನು ನಮ್ಮನಮ್ಮ ಹೃದಯಗುಹೆಯಲ್ಲಿ ನಮ್ಮ ಜ್ಞಾನೇಂದ್ರಿಯಗಳ ವ್ಯಾಪಾರ ಗಳಿಗೂ ಕರ್ಮೇಂದ್ರಿಯಗಳ ವ್ಯಾಪಾರಗಳಿಗೂ ಸಾಕ್ಷಿಯಾಗಿ ಯಾವಾಗಲೂ ಇದ್ದು ಕೊಂಡಿರುವ ಈ ದೇವದೇವನಲ್ಲಿಯೇ ನೆಲೆನಿಲ್ಲಿಸುವದಕ್ಕೆ ಪ್ರಯತ್ನಿಸುತ್ತಿರಬೇಕು. ಮನಸ್ಸು ಈ ಮಹಾಮಹಿಮನಲ್ಲಿ ನಿಂತರೆ ಆಗುವ ಫಲವನ್ನು ಹೊರಗೆ ನಾವು ಹಲವು ವರ್ಷಗಳವರೆಗೆ ಮಾಡುವ ಪ್ರಯತ್ನದ ಫಲಕ್ಕೆ ಹೋಲಿಸಿದಾಗ ಕಾಮಧೇನುವನ್ನು ಬರಡೆಮ್ಮೆಗೆ ಹೋಲಿಸಿದಂತೆ ಕಾಣುವದು. ಅಲ್ಲಿಂದ ಮುಂದಕ್ಕೆ ನಮಗೆ ಕಾಲತ್ರಯದ ಕಟ್ಟು ಕಳಚಿಕೊಳ್ಳುವದು; ಆಗ ಕಾಲಾತೀತನಾದ ಪರಮೇಶ್ವರನು ನಮಗೆ ಎಂದೆಂದಿಗೂ ಜಯವು ದೊರೆಯುವಂತೆ ಅನುಗ್ರಹಿಸಿರುವನು! ನಮ್ಮ ಜೀವನದ ಸಮಸ್ಯೆಗಳೆಲ್ಲವೂ ತಮಗೆ ತಾವೇ ಬಿಡಿಸಿಕೊಳ್ಳುವವು; ನಮ್ಮ ಚಿಂತೆಗಳು ಮತ್ತೆ ಎಂದೆಂದಿಗೂ ಮುಖವನ್ನು ತೋರದಂತೆ ಮಾಯವಾಗುವವು; ಸರ್ವದಿಕ್ಕುಗಳೂ ಸುಖಮಯವಾಗುವವು.

## 9. ಆನಂದಸ್ವರೂಪನು

ಪರಮೇಶ್ವರನಿಂದ ಸೃಷ್ಟವಾಗಿರುವ ಈ ಪ್ರಪಂಚದಲ್ಲಿ ಸುಖದುಃಖಗಳ ಮಿಶ್ರಣವೇಕಿರಬೇಕು? ಪರಮೇಶ್ವರನು ಆನಂದಸ್ವರೂಪನು ಎಂದು ಶ್ರುತಿಗಳು ಮೊಳಗುತ್ತಿವೆ. ಈ ಲೋಕದಲ್ಲಿರುವ ಮನುಷ್ಯರೆಲ್ಲರೂ, ಅಷ್ಟೇ ಅಲ್ಲ, ಪ್ರಾಣಿಗಳೆಲ್ಲವೂ, ಆ ಪರಮೇಶ್ವರನ ಅಂಶಭೂತರಾದವರು ಎಂದು ಶ್ರುತಿಸ್ಮೃತಿಗಳಲ್ಲಿ ಹೇಳಿರುತ್ತದೆ; ಆಚಾರ್ಯರುಗಳೂ ಹೇಳಿರುತ್ತಾರೆ. ಹೀಗಿರುವಲ್ಲಿ ಆನಂದಸ್ವರೂಪನಾದ ಪರಮಾತ್ಮನ ಅಂಶಗಳಾಗಿರುವ ಜೀವರುಗಳ ವ್ಯವಹಾರವು ಸುಖದುಃಖಗಳ ಮಿಶ್ರಣವಾಗಿರಲು ಕಾರಣವೇನು? ಪರಮೇಶ್ವರನು ತನ್ನ ಸೃಷ್ಟಿಯಲ್ಲಿ ದುಃಖವನ್ನೇಕೆ ಸೃಷ್ಟಿಸಿರುತ್ತಾನೆ? ಅಥವಾ ದುಃಖಕ್ಕೆ ಏತಕ್ಕೆ ಎಡೆಗೊಟ್ಟಿರುತ್ತಾನೆ?–ಎಂದು ಕೇಳುವವರು ಹಲವರು ಇರುತ್ತಾರೆ. ಈ ಪ್ರಶ್ನೆಗೆ ಬುದ್ಧಿಯ ಮಟ್ಟದಿಂದ ವಿಚಾರಿಸಿ ಉತ್ತರವನ್ನು ಕಂಡುಕೊಳ್ಳುವದು ಆಗುವದಿಲ್ಲ. ಏಕೆಂದರೆ ಬುದ್ಧಿಯು ತರ್ಕವನ್ನು ಮಾಡಿ ತತ್ತ್ವವನ್ನು ನಿರ್ಣಯಿಸುತ್ತದೆ; ಆ ತರ್ಕದ ನಿರ್ಣಯವು ಯಾವಾಗಲೂ ಪರೋಕ್ಷವಾಗಿಯೇ ಇರುತ್ತದೆ. ಬೆಟ್ಟದಲ್ಲಿ ಬೆಂಕಿಯಿರಬೇಕು; ಏಕೆಂದರೆ ಅದರ ಕೋಡುಗಲ್ಲಿನ ಮೇಲುಗಡೆಯಲ್ಲಿ ಹೊಗೆಯೇಳುತ್ತಿದೆ–ಎಂಬ ರೀತಿಯ ತರ್ಕವು ಹಸಿವಿನಿಂದ ಅನ್ನವನ್ನು ಹುಡುಕುತ್ತಿರುವವನಿಗೆ ಯಾವ ಸಮಾಧಾನವನ್ನೂ ಕೊಡದು. ಹಸಿವು ಬಹಳ ಪ್ರಬಲವಾಗಿರುವವರಿಗೆ ಸಿದ್ಧಾನ್ನವೇ ಬೇಕು; ಸ್ವಲ್ಪ ಕಡಿಮೆಯಾಗಿ ಹಸಿವಿನ ಕಾಟವಿರುವವರಿಗೆ ಅಡಿಗೆಯ ಸಾಮಗ್ರಿಯೂ ಪ್ರತ್ಯಕ್ಷವಾಗಿ ಬೆಂಕಿಯೂ ಬೇಕು. ಅಲ್ಲವೆ? ಅದರಂತೆ ಈ ಸೃಷ್ಟಿಯಲ್ಲಿ ದುಃಖವಿರುವದಕ್ಕೆ ಕಾರಣವನ್ನು ತರ್ಕದಿಂದ ಸಿದ್ಧಪಡಿಸಿಕೊಡುವದರಿಂದ ಯಾವ ಪ್ರಯೋಜನವೂ ಆಗುವದಿಲ್ಲ. ತರ್ಕದಿಂದ ತಲೆಯನ್ನು ಕೆಡಿಸಿಕೊಳ್ಳುವದಷ್ಟೇ ಫಲವಾಗುವದೇ ಹೊರತು ದುಃಖಪರಿಹಾರವೇನೂ ಆಗುವದಿಲ್ಲ. ಶಾಸ್ತ್ರದಲ್ಲಿ ಹೇಳಿರುವ ನಿತ್ಯಾನಂದವಂತೂ ತಾರ್ಕಿಕನಿಗೆ ಬಲುದೂರವಾಗಿರುತ್ತದೆ.

ಆದ್ದರಿಂದಲೇ ಶ್ರುತಿಯು "ಈ ಪರಮಾತ್ಮಮತಿಯು ತರ್ಕದಿಂದ ಎಂದಿಗೂ ನಿಲುಕುವದಿಲ್ಲ; ತಾರ್ಕಿಕನಿಗಿಂತ ಅನ್ಯನಾಗಿರುವ ತತ್ತ್ವೋಪದೇಶವನ್ನು ಪಡೆದಿರುವ ಆಚಾರ್ಯನು ಹೇಳಿಕೊಟ್ಟರೇ ಇದರ ತಿಳಿವು ಸರಿಯಾಗಿ ಆಗುತ್ತದೆ", "ಸಾಮಾನ್ಯಜನರು ಬಲುಬಗೆಯಿಂದ ಚಿಂತಿಸಿದರೆ ಈ ಆನಂದರೂಪನಾದ ಆತ್ಮನನ್ನು ಅರಿತುಕೊಳ್ಳುವದು ಆಗುವದಿಲ್ಲ; ಅನನ್ಯಪ್ರೋಕ್ತವಾದರೆ ಯಾವ ಸಂಶಯವೂ ಇಲ್ಲದ ಜ್ಞಾನವು ಅವಶ್ಯವಾಗಿ ಆಗುವದು" ಎಂದು ಸಾರುತ್ತಿರುವದು. ತರ್ಕದ ಅಂತಸ್ತನ್ನು ಬಿಟ್ಟು ಅಧ್ಯಾತ್ಮವಿಚಾರದ ಅಂತಸ್ತಿಗೆ ಏರಿದವರಿಗೆ ಮಾತ್ರ

ಈ ಪ್ರಶ್ನೆಗೆ ತೃಪ್ತಿಕರವಾದ ಸಮಾಧಾನವು ದೊರೆಯುವದು. ಅಧ್ಯಾತ್ಮಕ್ರಮದಿಂದ ಸಮಾಧಾನವು ದೊರೆಯುವದಕ್ಕೆ ಕಾರಣವೇನೆಂದರೆ, ಆ ಕ್ರಮದಲ್ಲಿ ಆಗುವ ನಿರ್ಣಯವು ತತ್ತ್ವವನ್ನು ಹಾಗಿರಬೇಕು, ಹೀಗಿರಬೇಕು-ಎಂದು ಕಲ್ಪಿಸಿದ್ದರಿಂದ ಏರ್ಪಟ್ಟಿರುವದಿಲ್ಲ. ಇಗೊ, ಇದೇ ಆನಂದವು. ಪರಮಾತ್ಮನು ಆನಂದಮಯ ನೆಂಬುದು ಇಗೊ, ಸಾಕ್ಷಾದನುಭವದಲ್ಲಿದೆ; ನಾವುಗಳೆಲ್ಲರೂ ಆ ಆನಂದಸ್ವರೂಪನ ಅಂಶಭೂತರೇ, ಆನಂದಸ್ವರೂಪರೇ ಎಂಬುದು ಅನುಭವಕ್ಕೇ ಗೋಚರ ವಾಗಿರುತ್ತದೆ" ಎಂದು ಕಂಡುಕೊಂಡುಬಿಡುವದೇ ಅಧ್ಯಾತ್ಮಕ್ರಮವು.

ಶಾಸ್ತ್ರವೂ ಆಚಾರ್ಯರೂ ನಮಗೆ ಉಪದೇಶಮಾಡುತ್ತಿರುವದು ಈ ಅಧ್ಯಾತ್ಮದ ದೃಷ್ಟಿಯಿಂದ. ಪರಮಾತ್ಮನ ದೃಷ್ಟಿಯು ಅಧ್ಯಾತ್ಮದೃಷ್ಟಿಯು; ಆ ದೃಷ್ಟಿಯಿಂದ ನೋಡಿದರೆ ದುಃಖವು ಎಲ್ಲಿಯೂ ಇಲ್ಲವೇ ಇಲ್ಲ. ಶಾಸ್ತ್ರಾಚಾರ್ಯರ ಉಪ ದೇಶಗಳು ಆ ದೃಷ್ಟಿಯಿಂದಲೇ ಆಗಿರುತ್ತವೆಯಾದ್ದರಿಂದ ಅವರು "ಆನಂದವೇ ಪರಮಾತ್ಮನು; ಆನಂದದಿಂದಲೇ ಅಲ್ಲವೆ, ಈ ಪ್ರಜೆಗಳು ಹುಟ್ಟುವವು ! ಆನಂದ ದಲ್ಲಿಯೇ ಅಲ್ಲವೆ, ಹುಟ್ಟಿದವರು ಜೀವಿಸುತ್ತಿರುವದು? ಆನಂದದ ಕಡೆಗೇ ಅಲ್ಲವೆ, ಎಲ್ಲರೂ ಹೋಗುತ್ತಿರುವದು? ಆನಂದವನ್ನೇ ಅಲ್ಲವೆ, ಎಲ್ಲರೂ ಕೊನೆಗೆ ಸೇರಿ ಕೊಳ್ಳುವದು?" ಎಂದು ಸಾರುತ್ತಿರುತ್ತಾರೆ.

ಆದರೆ ಸಾಮಾನ್ಯರ ದೃಷ್ಟಿಯು ಈ ಶಾಸ್ತ್ರದೃಷ್ಟಿಯಲ್ಲ. ಅವರ ಲೌಕಿಕ ದೃಷ್ಟಿಯು ಸುಖದುಃಖಗಳ ಬೆರಕೆಯನ್ನೇ ಎಲ್ಲೆಲ್ಲಿಯೂ ಕಾಣುತ್ತಿರುವದು. ಕೆಲವು ಜನರಿ ಗಂತೂ ಸುಖಕ್ಕಿಂತಲೂ ದುಃಖಗಳೇ ಹೆಚ್ಚಾಗಿ ಕಾಣುತ್ತಿರುವವು. "ಸುಖವು ಸ್ವಪ್ನದಲ್ಲಿಯೂ ಸಿಕ್ಕುವಂತಿಲ್ಲ!" ಎಂಬ ಗೋಳುಕರೆಯ ಮುಖದವರು ಹಲವರು ಇರುತ್ತಾರೆ. ಆದರೆ ದುಃಖ, ದುಗುಡ, ಹಗೆತನ, ಸೇಡು ತೀರಿಸಿಕೊಳ್ಳುವದು, ಕರುಬುವದು, ಕೊರಗುವದು-ಮುಂತಾದವುಗಳನ್ನು ಮನದಲ್ಲಿ ಹೊರಳಾಡಿಸಿದಷ್ಟೂ ಮನುಷ್ಯನು ಮನುಷ್ಯತ್ವವನ್ನು ಕಳೆದುಕೊಳ್ಳುವನು, ಅಧೋಗತಿಗೆ ಇಳಿಯುವನು. ನರಳುವದೇ ನರಕಕ್ಕೆ ಹಾದಿ ಎಂಬುದನ್ನು ಮನಗಂಡವರು ಎಂದಿಗೂ ಈ ಮಾರ್ಗವನ್ನು ಹಿಡಿಯರು. ತಿಳಿದ ಗುರುಗಳೂ ಹಿರಿಯರೂ ಹೇಗೆತಾನೆ ಈ ಕೊರಕಲಿಗೆ ಬಿದ್ದಾರು?

ಪರಮಾರ್ಥದಿಂದ ಜಾರಿಬೀಳುವದೇ, ನಿಜದ ಹಾದಿಯನ್ನು ಬಿಟ್ಟು ಅತ್ತಿತ್ತ ಸರಿಯುವದೇ, ದುಃಖ, ದುಗುಡ, ದುಮ್ಮಾನ-ಮುಂತಾದವುಗಳ ಕಾರಣವು. ಮನುಷ್ಯರು ನಿಜವಾಗಿ ಆನಂದರೂಪನಾದ ಪರಮಾತ್ಮನೆಂಬ ಅಗ್ನಿಯ ಕಿಡಿಗಳು. ನಮ್ಮಲ್ಲಿ ಪ್ರತಿಯೊಬ್ಬನ ಒಳಗೂ ಆ ಆನಂದರೂಪನಾದ ಪರಮಾತ್ಮನೆಂಬ ಅಗ್ನಿಯು ಧಗಧಗಿಸುತ್ತಿರುವದು. ಎಷ್ಟು ದಟ್ಟದರಿದ್ರನಾಗಿರಲಿ, ಹೊರಗಿನ ದುಃಖ

ಗಳನ್ನೆಲ್ಲ ಮರೆತು, ದುಃಖಗಳ ಹಂಗನ್ನು ಮೀರಿ, ಪ್ರತಿದಿನವೂ ಈ ಆನಂದ ರೂಪನಾದ ಪರಮಾತ್ಮನಲ್ಲಿ ಮುಳುಗದವನು ನಮ್ಮಲ್ಲಿ ಯಾವನೊಬ್ಬನೂ ಇರುವದಿಲ್ಲ. ಆ ಸ್ಥಿತಿಯನ್ನು ನಾವು 'ತನಿನಿದ್ರೆ' ಎಂದು ಕರೆಯುತ್ತೇವೆ. ದುಃಖದ ಗೋಜೇ ಇಲ್ಲದ ಆ ಸ್ಥಿತಿಯಲ್ಲಿ ಪರಮಾತ್ಮನು ತನ್ನ ಆನಂದದ ಸವಿಯನ್ನು ನಮ್ಮೆಲ್ಲರಿಗೂ ತೋರಿಸುವನು. ಆಟದ ವಿನೋದದಲ್ಲಿ ಹೊರಗನ್ನು ಮರೆತಿರುವ ಏನೂ ಅರಿಯದ ಹಸುಳೆಯಂತೆಯೂ ಪ್ರಜೆಗಳನ್ನೆಲ್ಲ ತನ್ನ ವಶದಲ್ಲಿಟ್ಟು ಕೊಂಡಿರುವದರಿಂದ ಸುಖದ ಕಡಲಿನಲ್ಲಿ ತೇಲಾಡುತ್ತಿರುವ ಮಹಾರಾಜನಂತೆಯೂ, ಶಾಸ್ತ್ರೋಕ್ತವಾದ ಕರ್ಮಗಳನ್ನು ಆಚರಿಸಿ ಸಾತ್ತ್ವಿಕಸುಖವನ್ನು ಅನುಭವಿಸುತ್ತಿರುವ ಮಹಾಪುರುಷನಂತೆಯೂ ನಾವು ಸ್ವಾಭಾವಿಕವಾದ ಆ ಸ್ಥಿತಿಯಲ್ಲಿ ಯಾವ ಹೆಚ್ಚುಕಡಿಮೆಯೂ ಇಲ್ಲದ ಆನಂದವೆಂಬ ಪರಮಾತ್ಮನ ಅನುಗ್ರಹವನ್ನು ಅನುಭವಿಸುತ್ತಿರುವೆವು. ಆ ಆನಂದಸ್ಥಿತಿಯಿಂದಲೇ ಈಗಲೂ ನಾವು ಇಳಿದು ಇಲ್ಲಿಗೆ ಬಂದಿರುವೆವು. ಆ ವೈಶ್ವಾನರಾಗ್ನಿಯ ಕಿಡಿಗಳೇ ಆಗಿರುವದರಿಂದ ನಾವುಗಳೆಲ್ಲರೂ ಈ ಜೀವನದ ವ್ಯವಹಾರದಲ್ಲಿ ಸುಖದ ಸವಿಯನ್ನು ಅಲ್ಲಲ್ಲಿ ಕಾಣುತ್ತಿರುವೆವು.

ಈ ಆನಂದದ ಕಿಡಿಯೇ ನಮ್ಮ ನಿಜವಾದ ರೂಪವು. ಆದರೆ ವ್ಯವಹಾರದಲ್ಲಿ ನಮ್ಮ ನಿಜವಾದ ಆತ್ಮನಲ್ಲದ ಅಹಂಕಾರ-ನಾನು-ಎಂಬ ಹುಸಿತೋರಿಕೆಯ ಆತ್ಮನೊಂದು ನಮ್ಮ ಮನಸ್ಸನ್ನು ಎಳೆದಿರುವದು. ಈ ತೋರಿಕೆಯ ನಾನೆಂಬ ಆತ್ಮನನ್ನು ಹಿಡಿದಿರುವದೇ ನಮ್ಮ ದುಃಖಗಳಿಗೆಲ್ಲ ಮೂಲವು. ನಮ್ಮದಲ್ಲದ ಸ್ವರೂಪವನ್ನು ನಾವೆಂದುಕೊಂಡು ಅದರಲ್ಲಿಯೇ ನಮ್ಮ ಚಿತ್ತವನ್ನು ನಿಲ್ಲಿಸಿ ಕೊಂಡಿರುವದರಿಂದ ನಮಗೆ ಬಗೆಬಗೆಯ ದುಃಖಗಳು ಕಾಣುತ್ತಿರುವವು. ಭೂತ ಗನ್ನಡಿಯಲ್ಲಿ ನೋಡಿಕೊಂಡಾಗ ನಮ್ಮ ಮುಖವು ವಿಕಾರವಾಗಿ ತೋರುವಂತೆ ಈ ನಾನೆಂಬ ಕನ್ನಡಿಯಲ್ಲಿ ನೋಡಿಕೊಂಡಾಗ ನಮ್ಮ ಜೀವನವು ಸುಖದುಃಖಗಳ ಮಿಶ್ರಣವಾಗಿ ಕಾಣುತ್ತಿರುವದು; ಈ ಜಗತ್ತು ಬೇವುಬೆಲ್ಲಗಳ ಬೆರಕೆ ಎಂದು ಕಾಣುತ್ತಿರುವದು. ನಮ್ಮ ಹುಸಿ ಆತ್ಮನನ್ನು ನಾವೆಂದು ಎಣಿಸದೆ, ಆ ಹುಸಿ ಆತ್ಮನ ಹಿಡಿತದಿಂದ ತಪ್ಪಿಸಿಕೊಂಡು, ಪರಮಾರ್ಥವಾಗಿರುವ ನಮ್ಮ ಆನಂದ ರೂಪವನ್ನು ಕಂಡುಕೊಳ್ಳುವಂತೆ ಸಹಾಯಮಾಡುವದೇ ಅಧ್ಯಾತ್ಮಶಾಸ್ತ್ರದ ಮತ್ತು ಆಚಾರ್ಯರುಗಳ ಗುರಿಯು. ಆದ್ದರಿಂದಲೇ ಶಾಸ್ತ್ರಗಳಲ್ಲಿ ಜೀವನದಲ್ಲಿ ಕಾಣುವ ದುಃಖವನ್ನು ಕಡೆಗಣಿಸಿ ನಮ್ಮ ಆನಂದಸ್ವರೂಪವನ್ನು ಕುರಿತ ಸಂದೇಶಗಳು ಹೇರಳವಾಗಿ ದೊರಕುತ್ತವೆ. ಆದ್ದರಿಂದಲೇ ಸದ್ಗುರುಗಳು ನಮ್ಮೆಲ್ಲರ ಆತ್ಮನು ಆನಂದಸ್ವರೂಪನಾದ ಪರಮೇಶ್ವರನೇ ಎಂಬುದನ್ನು ನಮಗೆ ನೆನಪುಕೊಡುತ್ತಾರೆ.

ಜ್ಞಾನಿಗಳಿಗೆ ಜನರ ಕಷ್ಟನಿಷ್ಠುರಗಳು ಕಣ್ಣಿಗೆ ಬೀಳುವದಿಲ್ಲವೆಂದು ತಿಳಿಯ ಬಾರದು. ಸಾಮಾನ್ಯಜನರ ಸಂಕಟಗಳಲ್ಲಿ ಅವರಿಗೆ ಅನುತಾಪವಿಲ್ಲವೆಂದೂ ತಿಳಿಯಬಾರದು. ಸಂಕಟಪಡುತ್ತಿರುವವರನ್ನು ಕಂಡರೆ ಅವರ ಹೃದಯವು ಕರಗುತ್ತದೆ; ಸುಖಿಗಳನ್ನು ಕಂಡರೆ ಅವರ ಚಿತ್ತವು ಉಲ್ಲಾಸದಿಂದ ಕುಣಿಯುತ್ತದೆ. ಜನರು ಸಂಕಟದಿಂದ ನರಳುತ್ತಿರುವದನ್ನು ಕಂಡುಕಂಡೂ ಅವರು ಉದಾಸೀನ ರಾಗಿರುವದಿಲ್ಲ. ಅವರು ಕರುಣಾಮಯರಾಗಿರುವದರಿಂದ ಜನರು ಸಂಕಟದಿಂದ ಪಾರಾಗುವದಕ್ಕೆ ಇರುವ ಒಂದೇ ಒಂದು ಉಪಾಯವನ್ನು ಎಲ್ಲರಿಗೂ ಉಪ ದೇಶಿಸುತ್ತಾರೆ. "ಅಂಜದಿರಿ, ನೀವೆಲ್ಲರೂ ಆನಂದದ ಉಕ್ಕಂದವಾಗಿರುವ ಪರಮಾತ್ಮನಿಂದಲೇ ಹರಿದುಬರುತ್ತಿರುವ ಝರಿಗಳಾಗಿರುತ್ತೀರಿ; ಈ ಆನಂದಮೂಲ ದಲ್ಲಿ ನಿಮ್ಮ ಚಿತ್ತವನ್ನು ಇಡಿರಿ. ಕೂಡಲೆ ನಿಮ್ಮ ದುಃಖಗಳು ಮಾಯವಾಗುವವು!" ಎಂದು ಅವರೆಲ್ಲರೂ ಒಕ್ಕೊರಲಿನಿಂದ ಸಾರುತ್ತಿದ್ದಾರೆ.

"ಈ ಸರ್ವವ್ಯಾಪಕವಾದ ಆನಂದವು ಇಲ್ಲದಿದ್ದರೆ ಯಾರುತಾನೆ ಬದುಕಿದ್ದಾರು? ಯಾರುತಾನೆ ನಿತ್ಯವ್ಯಾಪಾರಗಳನ್ನು ಮಾಡಿಯಾರು?" ನಮ್ಮ ನಿತ್ಯವ್ಯವಹಾರ ದಲ್ಲಿಯೇ ಆನಂದದ ಚಿಹ್ನೆಗಳು ಹೇರಳವಾಗಿರುತ್ತವೆ. ನಮಗೆ ಇಂದಲ್ಲ ನಾಳೆ ಆನಂದವು ಸಿಕ್ಕುತ್ತದೆ, ನಮ್ಮ ಜೀವನದಲ್ಲಿ ಒಳಗಡೆ ಆನಂದವಿದೆ–ಎಂಬ ನಂಬಿಕೆಯಿಲ್ಲದಿದ್ದರೆ ಯಾರುತಾನೆ ಈ ಜೀವನವನ್ನು ಪ್ರೀತಿಸುತ್ತಿದ್ದರು? ಯಾರು ತಾನೆ ಹೀಗೆ ಎಡೆಬಿಡದೆ ಸುಖಪ್ರಾಪ್ತಿಗಾಗಿ ಪ್ರಯತ್ನಮಾಡುತ್ತಿದ್ದರು? ಭೂಮಿ ಯೊಳಗೆ ಜಲವು ಹರಿಯುತ್ತಿದೆ ಎಂಬ ನಂಬಿಕೆಯಿಂದಲ್ಲವೆ, ಜನರು ಆಳವಾಗಿ ಯಾದರೂ ಭಾವಿತೋಡುವದು? ಆದ್ದರಿಂದ ಜೀವನದಲ್ಲಿ ಆನಂದವಿದೆ ಎಂದು ಶಾಸ್ತ್ರವು ನಮಗೆ ಭರವಸೆಕೊಡುತ್ತಿದೆ.

ಪರಮಾತ್ಮನು ಆನಂದಮಯನಾಗಿರುತ್ತಾನೆ; ಬೆಂಕಿಯಿಂದ ತೇಜೋಮಯ ವಾದ ಕಿಡಿಗಳು ಹಾರಿಬಂದಿರುವಂತೆ ಜೀವರೆಲ್ಲರೂ ಆನಂದಾತ್ಮನಿಂದ ಹಾರಿ ಬಂದಿರುವ ಆನಂದದ ಹನಿಗಳಾಗಿರುತ್ತಾರೆ–ಎಂದು ಶಾಸ್ತ್ರಗಳು ಹೇಳುತ್ತಿವೆ. ದೊಡ್ಡವರೂ ಅಭಿವಚನವನ್ನು ಕೊಡುತ್ತಿದ್ದಾರೆ. ನಮ್ಮ ಆನಂದದ ಸ್ವರೂಪದಕಡೆಗೆ ಲಕ್ಷ್ಯವಿಟ್ಟಂತೆಲ್ಲ, ನಮ್ಮ ಜೀವನದ ದುಃಖಗಳು ಮರೆಯಾಗುವವು, ಸುತ್ತಮುತ್ತಲೂ ಸುಖವು ತೋರಿಕೊಳ್ಳುವದಕ್ಕೆ ಮೊದಲಾಗುವದು. ನಾವು ನೋಡುವದಕ್ಕೆ ಎಷ್ಟೇ ಕಷ್ಟಮಯವಾದ ಜೀವನವನ್ನು ಮಾಡುತ್ತಿರಲಿ, ಎಷ್ಟೇ ಜುಗುಪ್ಸಿತಪಾಪಕರ್ಮಗಳನ್ನು ಮಾಡುತ್ತಿರಲಿ, ನಮ್ಮಲ್ಲಿಯೂ ಪರಮಾತ್ಮನ ಅಂಶವಿದೆ. ಸೂರ್ಯನಿಂದ ಬಂದಿರುವ ಒಂದೊಂದು ಕಿರಣದಲ್ಲಿಯೂ ಪ್ರಕಾಶಸ್ವರೂಪನಾಗಿರುವ ಸೂರ್ಯನಲ್ಲಿರುವ ಎಲ್ಲಾ ಸ್ವಭಾವವೂ ಇರುವಂತೆ, ಪರಮಾತ್ಮನ ಸಚ್ಚಿದಾನಂದಸ್ವರೂಪದಿಂದ

ಬಂದಿರುವ ಜೀವರುಗಳಲ್ಲಿ ಒಬ್ಬಬ್ಬರಲ್ಲಿಯೂ ಆತನ ಸ್ವಭಾವವು ಗುಪ್ತವಾಗಿ ಇದ್ದೇ ಇರುತ್ತದೆ. ಇದನ್ನು ಆಗಿಂದಾಗ್ಗೆ ನಮಗೆ ನಾವು ನೆನಪುಕೊಟ್ಟುಕೊಳ್ಳುತ್ತಲೇ ಇರಬೇಕು. ಇದೇ ಅಧ್ಯಾತ್ಮಸಾಧನವು.

ಪರಮಾತ್ಮನು ಪರಿಪೂರ್ಣಾನಂದಸ್ವರೂಪನಾಗಿರುತ್ತಾನೆ. ಅವನಿಗೆ ಆನಂದವು ಮತ್ತೊಂದು ವಸ್ತುವಿನಿಂದ ಬರಬೇಕಾಗಿಲ್ಲ; ಅದು ಸಹಜವಾಗಿಯೇ ಅವನ ಸ್ವರೂಪವಾಗಿಯೇ ಇದ್ದುಬಿಟ್ಟಿರುತ್ತದೆ. ಈ ಆನಂದವು ಆಗುಹೋಗುಗಳಿಲ್ಲದ್ದು; ಅದು ಹೊಸದಾಗಿ ಆಗುವದಲ್ಲ, ಸ್ವಲ್ಪಕಾಲವಿದ್ದು ಹೋಗುವದೂ ಅಲ್ಲ. ಈ ಆನಂದಕ್ಕೆ ದೇಶದ ಎಲ್ಲೆಕಟ್ಟಿಲ್ಲ; ಅದು ಎಲ್ಲೆಲ್ಲಿಯೂ ತುಂಬಿತುಳುಕಾಡುತ್ತಿರುತ್ತದೆ. ಅದನ್ನು ಯಾರುಬೇಕಾದರೂ ಎಷ್ಟುಬೇಕಾದರೂ ತೋಡಿಕೊಳ್ಳಬಹುದು. ಅದು ಕಡಿಮೆಯಾಗುವದಿಲ್ಲ, ಬತ್ತಿಹೋಗುವದಿಲ್ಲ. ಅದಕ್ಕೆ ಮತ್ತೇತರ ಕಲಂಕವೂ ಹತ್ತುವದಿಲ್ಲ; ಆ ಆನಂದದಲ್ಲಿ ದುಃಖದ ಸಂಪರ್ಕವು ಒಂದಿಷ್ಟೂ ಇರುವದಿಲ್ಲ. ಪರಮಾತ್ಮನ ದೃಷ್ಟಿಯಲ್ಲಿ ಈ ಆನಂದವೇ ನಮ್ಮೆಲ್ಲರ ಹೃದಯದಲ್ಲಿಯೂ ತುಂಬಿರುತ್ತದೆ. ಅದನ್ನು ನಾವು ನೆನಸಿಕೊಂಡಮಾತ್ರದಿಂದ ನಮ್ಮದಾಗುವದು; ಪರಮಾತ್ಮನು ಅದನ್ನು ತನ್ನ ಮಕ್ಕಳಾದ ನಮಗೆಲ್ಲ ಹಂಚಿಬಿಟ್ಟಿರುತ್ತಾನೆ. ನಾವೆಲ್ಲರೂ ಆನಂದಾಮೃತಸ್ವರೂಪನಾದ ಆತನ ಮಕ್ಕಳು, ಆನಂದಸ್ವರೂಪರೇ.

ಆದರೂ ಈ ತತ್ತ್ವವು ಬಹುಜನರಿಗೆ ಗೊತ್ತಿರುವದಿಲ್ಲ. ಪರಮಾತ್ಮನ ಆನಂದವು ತಮ್ಮ ಸ್ವಭಾವಸಿದ್ಧವಾದ ಹಕ್ಕು ಎಂಬುದನ್ನು ಅವರು ಅರಿಯದೆ ಪೇಚಾಡುತ್ತಿದ್ದಾರೆ. ತಾವು ಕಷ್ಟಪಟ್ಟು ವಿಷಯಗಳನ್ನು ಸಂಪಾದಿಸಿಕೊಂಡು ಅವುಗಳಿಂದ ಸುಖವನ್ನು ಹಿಂಡಿಕೊಳ್ಳಬೇಕಾಗಿದೆ ಎಂದು ಅವರು ಭಾವಿಸಿ ಕೊಂಡಿರುತ್ತಾರೆ. ಅವರವರ ಯೋಗ್ಯತೆಗೆ ತಕ್ಕಂತೆ ಅಷ್ಟಷ್ಟು ಆನಂದವು ಆಯಾ ಭೋಗಸಾಮಗ್ರಿಯಿಂದ ಬರಬೇಕೆಂದು ತಿಳಿದುಕೊಂಡಿರುತ್ತಾರೆ. ಮನುಷ್ಯರಲ್ಲಿ ಬೇರೆಬೇರೆಯ ಅಂತಸ್ತಿನ ಜನರು ಬೇರೆಬೇರೆಯ ಪರಿಣಾಮದ ಭೋಗ ರಾಶಿಯನ್ನು ಕೂಡಿಹಾಕಿಕೊಂಡಿರುತ್ತಾರಷ್ಟೆ. ಆ ಭೋಗವಸ್ತುಗಳ ಗುಣಪರಿಮಾಣಕ್ಕೆ ತಕ್ಕಂತೆ ತಮಗೆ ಸುಖವು ದೊರಕುತ್ತದೆಯೆಂದು ಅವರ ಭಾವನೆಯಿರುತ್ತದೆ. ಸುಖವೆಂಬದು ಬಹುಕಷ್ಟದಿಂದ ದೊರೆತ ಹೆಂಡಿರು, ಮಕ್ಕಳು, ಹೊಲ, ಮನೆ, ಹಣ, ರೂಪ, ಆರೋಗ್ಯ, ಬಲ, ತಾರುಣ್ಯ, ವಿದ್ಯೆ, ಧರ್ಮ-ಮುಂತಾದವುಗಳಿಂದ ತಮಗೆ ತೊಟ್ಟುತೊಟ್ಟಾಗಿ ಹನಿಯಬೇಕಾಗಿರುವದೆಂದೂ ದುಃಖವು ಜೀವರುಗಳಿಗೆ ಸ್ವಾಭಾವಿಕವೆಂದೂ ಬಹುಜನರ ನಂಬಿಗೆಯಿರುತ್ತದೆ. ಆದರೆ ನಿಜವು ಹೀಗಲ್ಲ. ದುಃಖವೇ ನಮ್ಮಗಳಿಗೆ ಹೊರಗಿನಿಂದ ಬರುತ್ತಿದೆ; ಸುಖವು ಸ್ವಾಭಾವಿಕವಾಗಿದೆ. ನಮ್ಮಲ್ಲಿ ದುಃಖವು ಸಹಜವಾಗಿ ನೆಲಸಿದೆ ಎಂಬ ತಪ್ಪುಕಲ್ಪನೆಯಿಂದ ಜನರು

ಅದನ್ನು ತಪ್ಪಿಸಿಕೊಳ್ಳುವದಕ್ಕೂ ಸುಖಸಾಧನಗಳನ್ನು ಸಂಪಾದಿಸಿಕೊಳ್ಳುವದಕ್ಕೂ ಪಾಪಾಚರಣೆಯನ್ನಾದರೂ ಮಾಡುವದಕ್ಕೆ ಸಿದ್ಧರಾಗುವರು. ನಿಜವಾಗಿ ನೋಡಿದರೆ ಕೆಟ್ಟ ಆಲೋಚನೆಯಿಂದಲೂ ದುಃಖದ ಚಿಂತನೆಯಿಂದಲೂ ನಮ್ಮ ಹೊರಗೆ ಕೆಟ್ಟ ಜನರೂ ದುಃಖಹೇತುಗಳೂ ನಮಗೆ ಕಾಣುತ್ತಿರುವವು; ಉತ್ತಮವಾದ ಆಲೋಚನೆಯಿಂದಲೂ ಸುಖದ ಚಿಂತನೆಯಿಂದಲೂ ನಮ್ಮ ಹೊರಗೆ ಒಳ್ಳೆಯ ಜನರೂ ಸುಖಹೇತುಗಳೂ ಕಾಣಿಸುವವು. ಭಾವನೆಯಂತೆ ಭವಿಷ್ಯತ್ತು ಎಂಬ ರಹಸ್ಯವು ನಮಗೆ ತಿಳಿದರೆ ಎಷ್ಟು ಉತ್ತಮವಾದೀತು!

ನಮಗೆ ಆಗಾಗ್ಗೆ ಸುಖವು ಸಿಕ್ಕುವದರ ಗುಟ್ಟು ಏನು? ಸುಖದ ಮೂಲವು ನಿಜವಾಗಿ ಎಲ್ಲಿದೆ?– ಎಂಬುದನ್ನಿಷ್ಟು ನಾವು ಚಿಂತಿಸುವದು ಒಳ್ಳೆಯದು. ಹೊರಗೆ ನಮಗೆ ಇಷ್ಟವಸ್ತುಗಳು ದೊರಕುವದು, ಅಥವಾ ಹೊರಗಿನ ವಸ್ತುಗಳು ನಮಗೆ ಇಷ್ಟವಾಗಿ ಕಾಣಿಸುವದು, ಮಹಾಪುಣ್ಯದ ಫಲವು. ನಮ್ಮ ಚಿತ್ತವು ಶುಭವಾದ ಆಲೋಚನೆಯಿಂದ ನಿರ್ಮಲವಾದಂತೆಲ್ಲ ಇಷ್ಟವಸ್ತುಗಳ ದರ್ಶನವಾಗುವದು, ಮನಸ್ಸು ಪ್ರಸನ್ನವಾಗುವದು. ಆಗ ನಮ್ಮಲ್ಲಿಯೇ ಪರಮಾತ್ಮನು ಇಟ್ಟಿರುವ ಆನಂದದ ಕಣವೊಂದು ನಮ್ಮ ಚಿತ್ತಕ್ಕೆ ಗೋಚರವಾಗುವದು. ಅದನ್ನೇ ನಾವು ಸುಖ ಎನ್ನುವೆವು; ಆ ಸುಖವು ಹೊರಗಿನ ಇಷ್ಟವಸ್ತುವಿನಿಂದ–ಮಕ್ಕಳು, ಹಣ, ಹೊಲ, ವಿದ್ಯೆ ಮುಂತಾದ ಬಾಹ್ಯವಸ್ತುನಿಮಿತ್ತದಿಂದ–ನಮಗೆ ದೊರೆಯಿತೆಂದು ಭ್ರಾಂತರಾಗುವೆವು. ಆದರೆ ನಿಜವೇನು? ಸುಖವು ನಮ್ಮಲ್ಲಿಯೇ ಇದೆ; ಅದು ಆನಂದದ ಸ್ವರೂಪನಾದ ಪರಮಾತ್ಮನ ಅಂಶವೇ ಆಗಿದೆ. ಅದನ್ನೇ ನಾವು– ನಮ್ಮ ಮುಖವೇ ಹೊರಗಿನ ಕನ್ನಡಿಯಲ್ಲಿ ಮಾರುಹೊಳೆದದ್ದನ್ನು ನೋಡಿ ಹಿಗ್ಗುವಂತೆ–ಹೊರಗಿನ ವಿಷಯಗಳ ನೆಪದಿಂದ ಕಂಡುಕೊಂಡು ವಿಷಯ ಸುಖವೆಂದುಕೊಳ್ಳುತ್ತಿರುವೆವು. ಯಾವನು ಎಷ್ಟೇ ಉಚ್ಚಸ್ಥಿತಿಯ ಆನಂದವನ್ನೇ ಕಂಡುಕೊಳ್ಳಲಿ, ಅದೆಲ್ಲವೂ ಆ ಪರಮಾತ್ಮನ ಆನಂದದಲ್ಲಿ ಒಂದು ತೊಟ್ಟು. ಒಬ್ಬ ಬ್ರಹ್ಮಜ್ಞಾನಿಗಳು ತಂದಿರುವ ಈ ಒಸಗೆಯನ್ನು ನೋಡಿ

**ಯತ್ಸೌಖ್ಯಾಮ್ಬುಧಿಲೇಶಲೇಶತ ಇಮೇ ಶಕ್ರಾದಯೋ ನಿರ್ವೃತಾಃ**
**ಯಚ್ಚಿತ್ತೇ ನಿತರಾಂ ಪ್ರಶಾನ್ತಕಲನೇ ಲಬ್ಧ್ವಾ ಮುನಿರ್ನಿರ್ವೃತಃ ।**
**ಯಸ್ಮಿನ್ನಿತ್ಯಸುಖಾಮ್ಬುಧೌ ಗಲಿತಧೀರ್ಬ್ರಹ್ಮೈವ ನ ಬ್ರಹ್ಮವಿದ್**
**ಯಃ ಕಶ್ಚಿತ್ ಸ ಸುರೇನ್ದ್ರವನ್ದಿತಪದೋ ನೂನಂ ಮನೀಷಾ ಮಮ ॥**

"ಯಾವ ಆನಂದಸಾಗರದ ಲೇಶದ ಲೇಶವನ್ನು ಪಡೆದುಕೊಂಡು ಈ ಇಂದ್ರಾದಿಗಳು ಸುಖಿಗಳೆನಿಸಿರುವರೋ, ಯಾವದನ್ನು ವಿಕ್ಷೇಪರಹಿತವಾದ ಚಿತ್ತದಲ್ಲಿ ಪಡೆದುಕೊಂಡ ಮುನಿಯು ಸುಖಿಯೆನಿಸುವನೋ, ಯಾವ ನಿತ್ಯಾನಂದದ

ಸಾಗರದಲ್ಲಿ ಅಂತಃಕರಣವನ್ನು ಕರಗಿಸಿಕೊಂಡರೆ ಬರಿಯ ಬ್ರಹ್ಮಜ್ಞಾನಿಯಲ್ಲ, ಬ್ರಹ್ಮವೇ ಆಗಿರುವನೋ, ಅಂಥವನು ಯಾರೇ ಆಗಲಿ, ನಿಜವಾಗಿ ದೇವೇಂದ್ರನೂ ಅವನ ಕಾಲ್ಗೆರಗುವನೆಂದು ನನ್ನ ಮತವು."

"ದೇವತೆಗಳೂ ಋಷಿಗಳೂ ಎಲ್ಲಿಯೋ ಕೆಲವರು ಮಹಾತ್ಮರಾದ ಮಾನವರೂ ಭಗವಂತನ ಆನಂದವನ್ನು ಕಂಡುಕೊಳ್ಳಬಹುದು. ಆದರೆ ಪಾಪಿಷ್ಠರಾದ ನಮ್ಮಂಥ ವರ ಪಾಡೇನು? ಪರಮಾತ್ಮನು ಮಹಾವೀರ್ಯರಾದ, ಮಹಾತಪಸ್ವಿಗಳಾದ, ಮಹಾಬುದ್ಧಿವಂತರಾದ ಜನರಿಗೆ ತನ್ನ ಆನಂದವನ್ನು ಕೊಡಬಹುದು. ಆದರೆ ನಮ್ಮಂಥ ಪಾಮರರಿಗೆ ಆತನ ಆನಂದವು ಸಿಕ್ಕೀತೆ? ನಾವು ದುಃಖದಲ್ಲಿ ಹುಟ್ಟಿ, ದುಃಖದಲ್ಲಿ ಬೆಳೆದು, ದುಃಖದಲ್ಲಿಯೇ ಕೊನೆಗಾಣುವದಕ್ಕಾಗಿ ಜೀವನಯಾತ್ರೆಯನ್ನು ಸಾಗಿಸುವಂತಿದೆಯಲ್ಲ!" ಎಂದು ಕೆಲವರು ಶಂಕಿಸುವರು. ಆದರೆ ಈ ನಿರಾಶಾ ವಾದಕ್ಕೆ ಸ್ವಲ್ಪವೂ ಎಡೆಯಿಲ್ಲ. ಏಕೆಂದರೆ ಈ ವಿಶ್ವವೆಲ್ಲವೂ ಬ್ರಹ್ಮವೇ, ಇಲ್ಲಿ ಎಲ್ಲೆಲ್ಲಿಯೂ ಆನಂದವೇ ತುಂಬಿ ತುಳುಕಾಡುತ್ತಿರುವದು. ಇಲ್ಲಿ ಎಲ್ಲಿಯೂ ದುಃಖಲೇಶಕ್ಕೂ ಅವಕಾಶವಿರುವದಿಲ್ಲ. ಅಥರ್ವವೇದದಲ್ಲಿ ಬ್ರಹ್ಮಸೂಕ್ತದಲ್ಲಿ ಹೇಳಿರು ವದೇನೆಂದರೆ "ಬೆಸ್ತರೂ ಬ್ರಹ್ಮವೇ, ದಾಸರೂ ಬ್ರಹ್ಮವೇ, ಜೂಜುಗಾರರೂ ಬ್ರಹ್ಮವೇ." ಮತ್ತೊಂದು ಶ್ರುತಿಯಲ್ಲಿ ಹೀಗೆಂದು ಹೇಳಿದೆ: "ನೀನೇ ಹೆಂಗಸು, ನೀನೇ ಗಂಡಸು; ನೀನೇ ಕುಮಾರನು, ನೀನೇ ಕುಮಾರಿಯು; ನೀನೇ ಕೋಲನ್ನು ಹಿಡಿದುಕೊಂಡು ಅತ್ತಿತ್ತ ತಿರುಗಾಡುತ್ತಿರುವವನು, ನೀನೇ ಹುಟ್ಟಿ ವಿಶ್ವತೋಮುಖ ನಾಗಿರುವೆ." ಅತ್ಯಂತ ಜುಗುಪ್ಸಿತಕರ್ಮವನ್ನು ಮಾಡುತ್ತಿರುವವರು, ನಿತ್ಯಪರ ತಂತ್ರರಾಗಿ ಮತ್ತೊಬ್ಬರ ಸೇವೆಯಲ್ಲಿಯೇ ಕಾಲಯಾಪನೆಯನ್ನು ಮಾಡುತ್ತಿರುವವರು, ಜೂಜು ಮುಂತಾದ ವಂಚನೆಯ ಕೆಲಸಗಳಲ್ಲಿಯೇ ನಿರತರಾಗಿರುವವರು–ಎಲ್ಲರೂ ನಿಜವಾಗಿ ಆ ಆನಂದರೂಪನಾದ ಪರಮಾತ್ಮನೇ. ಯಾವ ಕುಲ, ಯಾವ ಜಾತಿ, ಯಾವ ಮತವನ್ನೇ ಅವಲಂಬಿಸಿರಲಿ, ಅವರೆಲ್ಲರಲ್ಲಿಯೂ ಭಗವಂತನ ಪರಮಾನಂದವು ಸಮಾನವಾಗಿಯೇ ಇರುತ್ತದೆ. ಗಂಡಸರಾಗಲಿ, ಹೆಂಗಸರಾಗಲಿ, ದೊಡ್ಡವರಾಗಲಿ, ಚಿಕ್ಕವರಾಗಲಿ–ಎಲ್ಲರಿಗೂ ಈ ಆನಂದವು ಸಮಾನವಾಗಿರುತ್ತದೆ. ಯಾರೊಬ್ಬರಲ್ಲಿಯೂ ಇದು ಕಡಿಮೆಯಾಗಿರುವದಿಲ್ಲ.

ಆನಂದವೊಂದೇ ಪರಮಾರ್ಥವು. ಅದು ಎಲ್ಲೆಲ್ಲಿಯೂ ಇರುತ್ತದೆ. ಅದರೊಳಕ್ಕೆ ಹೊಕ್ಕು ಎಂದೆಂದಿಗೂ ಆನಂದದಿಂದಿರಬಹುದು. ಆನಂದವು ನಮ್ಮನಮ್ಮೊಳಗೇ ಇರುತ್ತದೆ. ಈ ಆನಂದವನ್ನು ಬಿಟ್ಟು ಜಾರಿರುವವರಿಗೆ ಈ ಜಗತ್ತು ಸುಖದುಃಖಗಳ ಮಿಶ್ರವಾಗಿ ಕಾಣಿಸುತ್ತಿರುವದು. ಭಗವಂತನನ್ನೇ ಯಾರು ಶರಣುಹೊಂದುವರೋ ಅವರಿಗೆ ದುಃಖವು ಎಂದೆಂದಿಗೂ ಇರುವದೇ ಇಲ್ಲ.

## 10. ಸರ್ವತ್ಯಾಗದಿಂದ ಆನಂದಪ್ರಾಪ್ತಿ

ಮಾನವನು ಪರಮಪುರುಷಾರ್ಥವೊಂದನ್ನು ಬಯಸುತ್ತಿರುತ್ತಾನೆ. ಅವನಿಗೆ ದುಃಖದ ಸಂಮಿಶ್ರಣವಿಲ್ಲದ, ನಿತ್ಯವಾದ, ಅಪ್ಪಟ ಸುಖವೇ ಬೇಕಾಗಿರುತ್ತದೆ. ಹೀಗೆಂದು ಜನರೆಲ್ಲರೂ ಘೋಷಣೆಮಾಡಿರುವದಿಲ್ಲವಾದರೂ ಅವರ ವರ್ತನೆಯಿಂದ ಇದೇ ಅವರ ಹೆಗ್ಗುರಿ ಎಂಬುದು ಹೊರಪಡುತ್ತದೆ. ನಮ್ಮಲ್ಲಿ ಪ್ರತಿಯೊಬ್ಬನೂ ಎಡೆಬಿಡದೆ ಕೆಲಸಮಾಡುತ್ತಿರುತ್ತಾರೆ. ಮಕರಂದದ ಆಶೆಯಿಂದ ಹೂವಿನಿಂದ ಹೂವಿಗೆ ಹಾರಾಡುತ್ತಿರುವ ಭ್ರಮರದಂತೆ ನಾವೆಲ್ಲರೂ ಪ್ರತಿಯೊಂದು ವಸ್ತುವಿನಲ್ಲಿಯೂ ಸುಖವನ್ನು ಅರಸುತ್ತಿರುವೆವು. ದುಃಖವು ಎಲ್ಲಿ ತೋರುವದೋ ಅಲ್ಲಿಂದ ಅತ್ತ ಸರಿಯುವೆವು; ಸುಖವು ಸ್ವಲ್ಪವಾಗಿ ಸಿಕ್ಕರೂ ಅದರತ್ತ ಸಾರುವೆವು. ಆದರೆ ಮತ್ತೊಂದು ಕಡೆಯಲ್ಲಿ ದುಃಖವು ಕಡಿಮೆಯಾಗಿರುವ ಸುಖವು ಹೆಚ್ಚಿನ ಪ್ರಮಾಣದಲ್ಲಿ ಅಥವಾ ಹೆಚ್ಚು ಕಾಲ ನಿಲ್ಲುವಂತೆ ಸಿಕ್ಕುವ ಸಂಭವವು ತೋರಿದರೆ ಈಗ ಸಿಕ್ಕಿರುವ ದುಃಖಮಿಶ್ರಿತ ಅನಿತ್ಯಸುಖವನ್ನು ಆಗ ಕೈಬಿಟ್ಟು ಆ ಹೆಚ್ಚು ಶುದ್ಧವಾದ ಹೆಚ್ಚು ಕಾಲವಿರುವ ಸುಖದ ಪ್ರಾಪ್ತಿಗಾಗಿ ಹವಣಿಸುವೆವು. ನಿತ್ಯ ನಿರತಿಶಯಸುಖವೇ ನಮ್ಮೆಲ್ಲರ ಗುರಿ ಎಂಬುದು ಇದರಿಂದ ಸುವ್ಯಕ್ತವಾಗುತ್ತದೆ. ಜನರೆಲ್ಲರ ಚಟುವಟಿಕೆಯೂ ಇಂಥ ಸುಖಕ್ಕಾಗಿಯೇ ಎಂಬುದನ್ನು ಶ್ರುತಿಯಲ್ಲಿ ಈ ವಾಕ್ಯದಿಂದ ತಿಳಿಸಿರುತ್ತದೆ: "ಈ ಆಕಾಶದಲ್ಲಿ ಆನಂದವು ಇಲ್ಲದಿದ್ದರೆ ಯಾರು ತಾನೆ ಪ್ರವರ್ತಿಸುತ್ತಿದ್ದರು, ಯಾರು ತಾನೆ ಉಸಿರಾಡಿಕೊಂಡು ಬದುಕಿರುತ್ತಿದ್ದರು?"

ಸುಖವನ್ನು ಬಯಸುವದು, ದುಃಖಮಿಶ್ರಿತವಲ್ಲದ ಸುಖವನ್ನು ಪಡೆಯುವದಕ್ಕಾಗಿ ಹಾತುವರಿಯುವದು, ಅದಕ್ಕಾಗಿ ಹವಣಿಸುವದು, ಪ್ರಯತ್ನಿಸುವದು, ತನ್ನಿಂದಾಗುವ ಸಾಹಸಕಾರ್ಯಗಳನ್ನೆಲ್ಲ ಮಾಡುವದು–ಇದೇ ಮಾನವನ ಬಾಳು. ಈ ಪ್ರಯತ್ನವಿಲ್ಲದೆ ಒಂದು ಕ್ಷಣವೂ ಅವನು ಸುಮ್ಮನಿರುವಂತಿಲ್ಲ, ಆದರೆ ಅವನಿಗೆ ಅವನ ಇಚ್ಛೆಯು ಎಲ್ಲಿಯೂ ಪೂರೈಸುವದಿಲ್ಲ; ಎಲ್ಲಿಯೂ ಅವನಿಗೆ ಇನ್ನಿಲ್ಲವೆಂಬ ನಿತ್ಯಸುಖವು ಕಾಣಿಸುವದೇ ಇಲ್ಲ. ಆದ್ದರಿಂದ ಅವನು ಬಿಡುವಿಲ್ಲದೆ ಗಾಣದ ಎತ್ತಿನಂತೆ ತಿರುಗುತ್ತಲೇ ಇರುತ್ತಾನೆ, ಮಾಡಿದ ಕೆಲಸವನ್ನೇ ಮಾಡುತ್ತಾನೆ, ಅದೇ ಕರ್ಮಫಲವನ್ನೇ ಮತ್ತೆ ಮತ್ತೆ ಅನುಭವಿಸುತ್ತಿರುತ್ತಾನೆ. ಇದಕ್ಕೇ ಸಂಸಾರವೆಂದು ಹೆಸರು. ಯಾರು ಈ ಸಂಸಾರಕ್ಕೆ ಬೇಸತ್ತಿರುವರೋ ಯಾರು ಈ ಕಾಮಕರ್ಮಗಳ ಕಟ್ಟಿನಿಂದ ಬಿಡುಗಡೆಯನ್ನು ಹೊಂದಬೇಕೆಂದು ಬಯಸುತ್ತಾರೋ ಅವರನ್ನು ಮುಮುಕ್ಷುಗಳು ಎಂದು ಕರೆಯುತ್ತಾರೆ.

ಯಾವ ಕಾಲದಲ್ಲಿಯೇ ಆಗಲಿ, ಯಾವ ದೇಶದಲ್ಲಿಯೇ ಆಗಲಿ, ಮುಮುಕ್ಷುಗಳು ಬಹಳ ಜನರಿರುವದಿಲ್ಲ. ಯಾರಿಗೆ ನಿತ್ಯವಾದ ಅಪ್ಪಟವಾದ ಆನಂದವೊಂದೇ ಬೇಕಾಗಿರುವದೋ ಅವರೇ ನಿಜವಾದ ಮುಮುಕ್ಷುಗಳು. ಅವರಿಗಾಗಿಯೇ ಶಾಸ್ತ್ರವು ಪ್ರಧಾನವಾಗಿ ತತ್ತ್ವವನ್ನು ಉಪದೇಶಮಾಡುತ್ತದೆ; ಸಾಧನಗಳನ್ನು ಅವರಿಗಾಗಿಯೇ ಉಪದೇಶಮಾಡಿರುತ್ತದೆ. ಯಾರು ಸಾಮಾನ್ಯಜನರ ಪದ್ಧತಿಯನ್ನು ಅನುಸರಿಸಿ ಮಾಡಿದ್ದನ್ನೇ ಮತ್ತೆಮತ್ತೆ ಮಾಡಿ, ಉಂಡ ಫಲವನ್ನೇ ಮತ್ತೆ ಉಣ್ಣುತ್ತಾ, ದುಃಖ ಮಿಶ್ರಿತವಾಗಿದ್ದರೂ ಚಿಂತೆಯಿಲ್ಲ, ಅನಿತ್ಯವಾದರೂ ಚಿಂತೆಯಿಲ್ಲ-ಎಂದು ಆಗಾಗ್ಗೆ ತಮಗೆ ಸಿಕ್ಕುವ ತುಂತುರು ಹನಿಯಂಥ ಸುಖಗಳನ್ನು ಭೋಗಿಸುವದರಿಂದಲೇ ತೃಪ್ತರಾಗಿರುತ್ತಾರೋ, ಅಂಥವರಿಗೆ ಶಾಸ್ತ್ರವು ಯಾವ ಪ್ರಯೋಜನವನ್ನೂ ಮಾಡ ಲಾರದು. ಏಕೆಂದರೆ ಆಯಾ ಊರಿಗೆ ಹೋಗುವ ದಾರಿಯನ್ನು ತಿಳಿಸಿ ತೋರಿಸ ಬಲ್ಲವೇ ಹೊರತು ಜನರನ್ನು ಇಂಥ ಊರಿಗೇ ಹೋಗಬೇಕೆಂದು ದೂಡಲಾರವು. ಇದರಂತೆ ಶಾಸ್ತ್ರವೂ ಪರಮಪುರುಷಾರ್ಥಕ್ಕೆ ಉಪಾಯವನ್ನು ತಿಳಿಸಬಲ್ಲದೇ ಹೊರತು ಅಧಿಕಾರಿಗಳಲ್ಲದ ಜನರನ್ನು ಆ ಪುರುಷಾರ್ಥದ ಕಡೆಗೆ ದೂಡಲಾರದು.

ಇದಿರಲಿ. ಪರಮಪುರುಷಾರ್ಥವಾದ ಶುದ್ಧವಾದ, ನಿತ್ಯನಿರತಿಶಯಾನಂದದ ವಿಷಯಕ್ಕೆ ಶಾಸ್ತ್ರದ ಮತ್ತು ಬಲ್ಲವರ ಉಪದೇಶಗಳು ಮುಖ್ಯವಾಗಿ ಎರಡೇ ಎರಡಾಗಿರುತ್ತವೆಯೆಂದು ಹೇಳಬಹುದು.

**1. ಪರಮಾರ್ಥವಾದ ಆನಂದವು ನಿಮ್ಮ ಒಳಗೇ ಇರುತ್ತದೆ.**

**2. ಇದನ್ನು ಪಡೆಯುವದಕ್ಕೆ ಮಿಕ್ಕದ್ದೆಲ್ಲವನ್ನೂ ಸಂಪೂರ್ಣವಾಗಿ ಕೈಬಿಟ್ಟು, ನಿಮ್ಮ ನಿಮ್ಮ ಆತ್ಮನ ಕಡೆಗೇ ತಿರುಗಬೇಕು.**

ಶುದ್ಧ ನಿತ್ಯನಿರತಿಶಯವೂ ಆದ ಆನಂದವೊಂದಿರಬೇಕೆಂದು ಜನರಿಗೆ ಅದು ಹೇಗೋ ಮನಸ್ಸಿಗೆ ತಾಕಿರುತ್ತದೆ. ಆದ್ದರಿಂದ ಎಲ್ಲರೂ ತಿಳಿದೋ ತಿಳಿಯದೆಯೋ ಸುಖಕ್ಕಾಗಿಯೇ ಧಾವಿಸುತ್ತಿರುತ್ತಾರೆ. ಆದರೆ ಆ ಆನಂದವು ಎಲ್ಲಿದೆ? ಅದು ಹೇಗೆ ದೊರೆಯುತ್ತದೆ?-ಎಂಬ ವಿಷಯಕ್ಕೆ ಅವರಿಗೆ ಸರಿಯಾಗಿ ತಿಳಿವಳಿಕೆಯಿರುವದಿಲ್ಲ. ಆದ್ದರಿಂದ ಅವರೆಲ್ಲರೂ ಕತ್ತಲೆಯ ಮನೆಯಲ್ಲಿದ್ದು ಬಾಗಿಲು ಯಾವದೆಂದು ಅರಿಯದೆ ತಡಕಾಡುತ್ತಿರುವವರಂತೆ ಸುಖವನ್ನು ಅರಸುತ್ತಿರುವರು. ಕೆಲವರಂತೂ ಸುಖದ ಸ್ವರೂಪವನ್ನಾಗಲಿ ಅದು ದೊರಕುವದಕ್ಕೆ ಮಾಡಬೇಕಾದ ಉಪಾಯ ವನ್ನಾಗಲಿ ತಾವು ಅರಿಯದೆ ಇದ್ದರೂ ಮಿಕ್ಕವರೆಲ್ಲರಿಗೂ "ಎಲಾ, ಇತ್ತ ಬನ್ನಿರೋ, ಇದೇ ಸುಖಕ್ಕೆ ಹಾದಿ!" ಎಂದು ಕೂಗಿ ಉಪದೇಶಿಸುತ್ತಿರುವರು. ಕುರುಡರನ್ನು ಮುಂದಾಳುಗಳಾಗಿ ಮಾಡಿಕೊಂಡು ಹಾದಿಯಲ್ಲಿ ನಡೆಯುವ ಹುಟ್ಟುಕುರುಡರಂತೆ

ಸುತ್ತಮುತ್ತಲಿನ ಪ್ರಕೃತಿದೇವತೆಯು ಅವರಿಗೊಂದು ಅಕ್ಷಯಪಾತ್ರೆಯನ್ನು ಅನುಗ್ರಹಿಸುವಳು; ಅವರಲ್ಲಿದ್ದ ಅಲ್ಪಸ್ವಲ್ಪ ಸಾಮಗ್ರಿಗಳೇ ಬೆಳೆದುಕೊಳ್ಳುವವು.

ದ್ರೌಪದಿಯು ಅಕ್ಷಯಪಾತ್ರೆಯಲ್ಲಿ ಅಡಿಗೆಮಾಡಿ ಬಡಿಸಿದ್ದು ಎಷ್ಟು ಜನರಿಗಾದರೂ ಸಾಲುತ್ತಿತ್ತಂತೆ. ಪಾಂಡವರಿಗೆ ಅನ್ನಾಹಾರದ ಕೊರತೆ ಇರಲಿಲ್ಲವೆಂಬುದೇನೂ ಹೆಚ್ಚಲ್ಲ; ಏಕೆಂದರೆ ಅವರು ತಮ್ಮ ಜೊತೆಯಲ್ಲಿದ್ದವರಿಗಾಗಿಯೇ ಆ ಪಾತ್ರೆಯನ್ನು ಸಂಪಾದಿಸಿಕೊಂಡಿದ್ದರು. ದೂರ್ವಾಸಾತಿಥ್ಯದ ಕಥೆಯನ್ನೂ ಈ ಸಂದರ್ಭದಲ್ಲಿ ನಾವು ನೆನಪಿಗೆ ತಂದುಕೊಳ್ಳಬೇಕು. ಪಾತ್ರೆಯನ್ನು ತೊಳೆದು ದಬ್ಬಹಾಕಿದ ಬಳಿಕ ಅದು ಆ ದಿನ ಮತ್ತೆ ಆಹಾರವನ್ನು ಕೊಡುತ್ತಿರಲಿಲ್ಲ. ಅಂಥ ಒಂದು ದಿನ ದೂರ್ವಾಸರು ತಮ್ಮ ಅನೇಕಮಂದಿ ಶಿಷ್ಯರೊಡನೆ ಧರ್ಮರಾಯನ ಅತಿಥಿಗಳಾಗಿ ಬಂದರು. ದ್ರೌಪದಿಯು ಚಿಂತಾಕ್ರಾಂತಳಾಗಿ ಶ್ರೀಕೃಷ್ಣ ಭಗವಂತನನ್ನು ಧ್ಯಾನಮಾಡಿದಳು. ಶ್ರೀಕೃಷ್ಣನು ಅವಳಿಗೆ ಮಾಡಿದ ಸಹಾಯವೇನು? ಆ ಪಾತ್ರೆಯಲ್ಲಿ ಹತ್ತಿಕೊಂಡಿದ್ದ ಒಂದು ಸೊಪ್ಪಿನ ಎಲೆಯನ್ನು ತನಗೆ ಕೊಡುವಂತೆ ಹೇಳಿದನು; ಇದ್ದಷ್ಟು ಆ ಅಲ್ಪವಸ್ತುವಿನ ಉಪಯೋಗದಿಂದ, ಆ ಅಲ್ಪವಸ್ತುವನ್ನು ಶ್ರೀಕೃಷ್ಣನಿಗೆ ಅರ್ಪಿಸಿದ್ದರಿಂದ, ದೂರ್ವಾಸರಿಗೂ ಅವರ ಶಿಷ್ಯರಿಗೂ ಪೂರ್ಣತೃಪ್ತಿಯಾಯಿತು !

ಈ ವಿಷಯವನ್ನು ನಾವು ಪುರಾಣದಿಂದ ಎಷ್ಟೋ ಸಲ ಕೇಳಿರುತ್ತೇವೆ. ಈ ತತ್ತ್ವವು ನಮ್ಮ ಬುದ್ಧಿಗೆ ತಿಳಿದೇ ಇರುತ್ತದೆ. ಆದರೆ ನಾವು ಇದನ್ನು ಆಚರಣೆಗೆ ತರುವದಿಲ್ಲ. ನಮ್ಮಲ್ಲಿರುವ ಅಲ್ಪವನ್ನು ಆದರದಿಂದ, ಪ್ರೇಮದಿಂದ ಉಪಯೋಗಿಸಿದರೆ ಅದು ಅನಂತವಾಗಿ ಬೆಳೆಯುವದೆಂಬುದನ್ನು ಬುದ್ಧಿಯಿಂದ ತಿಳಿದುಕೊಂಡರೆ ಸಾಲದು. ಅದು ಕ್ರಿಯೆಯಲ್ಲಿ ಮನದಟ್ಟಾಗಬೇಕು. ಬಿತ್ತಿದ ಹೊರತು ಬೆಳೆಯಲಾರದು-ಎಂಬುದು ಎಲ್ಲರಿಗೂ ತಿಳಿದ ವಿಷಯ. ಆದರೆ ಆ ತಿಳಿವಳಿಕೆ ಏತಕ್ಕೆ ಬಂದೀತು? ನಮಗೆ ಬೆಳೆ ಬೇಕಾದರೆ ಬೀಜವನ್ನು ನಿಜವಾಗಿ ಬಿತ್ತಿ ನೋಡಬೇಕು, ಪುಷ್ಟಿಯಾಗಬೇಕಾದರೆ ಸರಿಯಾದ ಆಹಾರವನ್ನು ಉಪಯೋಗಿಸಬೇಕು, ಅಂಗಸಾಧನೆಯನ್ನು ಮಾಡಬೇಕು. ನಮ್ಮಲ್ಲಿರುವ ಅಲ್ಪಸ್ವಲ್ಪವನ್ನೇ ಪರಮೇಶ್ವರನಿಗೆ ಅರ್ಪಣೆಮಾಡುವದನ್ನು ಮೊದಲು ಆಚರಣೆಗೆ ತರಬೇಕು. ಈಶ್ವರನಿಗೆ ಅರ್ಪಣೆಮಾಡುವದೆಂದರೆ ಯಾವದಾದರೊಂದು ಸ್ಥಲಕ್ಕೆ ಹೋಗಿ ಅಲ್ಲಿ ಒಬ್ಬ ವ್ಯಕ್ತಿಗೆ ಕೊಡುವದಲ್ಲ. ಈಶ್ವರನು ಎಲ್ಲರ ಹೃದಯದಲ್ಲಿಯೂ ಇರುತ್ತಾನೆ. ನಾವು ಯಾರುಯಾರಿಗೆ ಏನೇನು ಕೊಡಬೇಕಾಗಿರುವದೋ ಸಂಬಳ, ಕೂಲಿ, ಬಾಡಿಗೆ, ಕೊಂಡ ಪದಾರ್ಥಗಳಿಗೆ ಬೆಲೆ-ಅದನ್ನೆಲ್ಲ ಅಂಜಿಕೆಯಿಲ್ಲದೆ ಧಾರಾಳವಾಗಿ ಕೊಡುವದನ್ನು ಕಲಿಯಬೇಕು. ಇದರಿಂದ ನಮ್ಮ ಹೃದಯದಲ್ಲಿ ಒಂದು ಬಗೆಯ ಪರಿವರ್ತನೆಯುಂಟಾಗುವದು. ನಮ್ಮ ಸಂನಿವೇಶದಲ್ಲಿಯೂ

ಅದಕ್ಕೆ ಅನುಗುಣವಾಗಿ ಮಾರ್ಪಾಡಾಗುವದು. ಇನ್ನು ಮುಂದೆ ನಮಗೆ ಯಾವ ಕೊರತೆಯೂ ಇರುವದಿಲ್ಲ. ಇದಕ್ಕೆ ಬದಲು ಈ ಕಾರ್ಯಗಳನ್ನು ಅರೆಮನಸ್ಸಿನಿಂದ ಮಾಡಿದರೆ, ಅಥವಾ 'ನಾವು ಕೊಡಬೇಕಾದದ್ದನ್ನು ಕೊಟ್ಟರೆ ನಮಗೇನು ಗತಿ!'- ಎಂಬ ಅಂಜಿಕೆಯನ್ನು ಮೈಮೇಲೆ ಹಾಕಿಕೊಂಡರೆ, ಇನ್ನಷ್ಟು ಸಾಮಗ್ರಿಗಳ ಸಂಕೋಚವಾಗುವದು. ಪತ್ರವಾಗಲಿ, ಪುಷ್ಪವಾಗಲಿ, ಫಲವಾಗಲಿ, ನೀರಾಗಲಿ- ಭಕ್ತಿಯಿಂದ ಕೊಟ್ಟರೆ ಪ್ರೀತಿಯಿಂದ ನಾನು ಸ್ವೀಕರಿಸುವೆನೆಂದು ಭಗವಂತನು ಹೇಳಿರುತ್ತಾನೆ. ನಾವು ಕೊಟ್ಟದ್ದು ಭಗವಂತನಿಗೆ ಅರ್ಪಣೆಯಾಯಿತೆಂದರೆ ಅದು ಒಂದಕ್ಕೆ ನೂರ್ಮಡಿಯಾಗಿ ಹೆಚ್ಚುವದು. ಈಗಿನ ಕಾಲಕ್ಕೆ ಮನುಷ್ಯನಿಗೆ ಬೇಕಾದಷ್ಟು ತಿಳಿವಳಿಕೆಯಿದೆ. ಆ ತಿಳಿವಳಿಕೆಯಿಂದ ಅನ್ನಬಟ್ಟೆಗಳನ್ನೂ ಸುಖಸಾಮಗ್ರಿಗಳನ್ನೂ ಬೇಕಾದಂತೆ ಹೆಚ್ಚಿಸಿಕೊಳ್ಳುವದಕ್ಕೆ ಅವಕಾಶವಿದೆ. ಭೌತಿಕವಿಜ್ಞಾನದಿಂದ ಮನುಷ್ಯನು ರೈಲು, ಜಹಜು, ವಾಯುವಿಮಾನ, ರೇಡಿಯೊ, ದೂರಧ್ವನಿವಾಹಕಯಂತ್ರ, ಅಚ್ಚಿನ ಯಂತ್ರ, ಬಿತ್ತುವ ಯಂತ್ರ, ಬೆಳೆಯುವ ಯಂತ್ರ, ಒಕ್ಕುವ ಯಂತ್ರ, ಕುಟ್ಟುವ ಯಂತ್ರ, ಬೀಸುವ ಯಂತ್ರ-ಹೀಗೆ ಲೆಕ್ಕವಿಲ್ಲದಷ್ಟು ಯಂತ್ರಗಳನ್ನು ಕಂಡುಹಿಡಿದು ಕೊಂಡಿರುತ್ತಾನೆ. ಆದ್ದರಿಂದ ಈಗ ಅವನ ವಶದಲ್ಲಿರುವದೇನೂ ಅಲ್ಪವಲ್ಲ. ಆದರೆ ಅವನಿಗೆ **ಕಾಮ, ಕ್ರೋಧ, ಲೋಭ-ಇವುಗಳು ಬರುಬರುತ್ತಾ ಹೆಚ್ಚಾಗುತ್ತಿವೆ.** ಆದ್ದರಿಂದ ಅವನು ತನ್ನ ತಿಳಿವಳಿಕೆಯನ್ನು ಮತ್ತೊಬ್ಬರಿಗೆ ಕೊಡಲೊಲ್ಲನು; ತನ್ನ ಶಕ್ತಿಯನ್ನು ಮತ್ತೊಬ್ಬರ ಸಹಾಯಕ್ಕೆ ಉಪಯೋಗಿಸಲೊಲ್ಲನು; ತನ್ನ ಸಾಮಗ್ರಿಗಳನ್ನು ಮತ್ತೊಬ್ಬರು ಮುಟ್ಟಲೀಸನು. ಅಷ್ಟೇ ಅಲ್ಲ. ಮತ್ತೊಬ್ಬರು ಸ್ವತಂತ್ರವಾಗಿ ತಮ್ಮ ಜೀವನಕ್ಕೆ ಸೌಕರ್ಯಗಳನ್ನು ಕಲ್ಪಿಸಿಕೊಂಡರೂ ಸಹಿಸಲಾರನು. **ಇದರ ಫಲವಾಗಿ ಮನುಷ್ಯಜಾತಿಗೆ ಹೆಚ್ಚಿನ ಬಡತನವು ಅಡಸಿದೆ; ಕ್ಷಾಮವು ಕಾಡುತ್ತಿದೆ; ಅಲ್ಪಾಯುಸ್ಸು ಮಾತ್ರ ದಕ್ಕುತ್ತಿದೆ.**

ಈಗಿನ ಕಷ್ಟಗಳಿಗೆಲ್ಲ ಪರಿಹಾರವು ಒಂದೇ. ಅದನ್ನು ಭಗವಂತನು ಅರ್ಜುನನ ನಿಮಿತ್ತದಿಂದ ಉಪದೇಶಿಸಿರುತ್ತಾನೆ. **"ಒಬ್ಬರಿಗೊಬ್ಬರು ಉಪಕಾರಮಾಡುತ್ತಾ ಪರಮಶ್ರೇಯಸ್ಸನ್ನು ಪಡೆಯಿರಿ !"** ಇದ್ದಷ್ಟು ತಿಳಿವಳಿಕೆಯನ್ನೂ ಶಕ್ತಿಯನ್ನೂ ಸಾಮಗ್ರಿಗಳನ್ನೂ ಈಶ್ವರನಿಗೆ ಅರ್ಪಿಸಿದರೆ, ಅದೆಲ್ಲವೂ ಅನಂತವಾಗುವದು.

****

# 2. ಸತ್ಯಜ್ಞಾನಾನಂತನ ದರ್ಶನದ ದಾರಿ

## 13. ಗುರುಪೂರ್ಣಿಮೆ – ಧರ್ಮವೇ ಆಧಾರ

ವ್ಯಾಸಪೂರ್ಣಿಮೆಯನ್ನು ಗುರುಪೂರ್ಣಿಮೆಯೆಂದೂ ಕರೆಯುತ್ತಾರೆ. ಆ ದಿನ ನಮ್ಮ ದೇಶದಲ್ಲಿ ಪ್ರತಿಯೊಬ್ಬರೂ ತಮ್ಮ ತಮ್ಮ ಗುರುಗಳ ಆರಾಧನೆ ಮಾಡುತ್ತಾರೆ. ಗುರುಮೂಲಕವಾಗಿ ಬಂದ ವಿದ್ಯೆಯೇ ವೀರ್ಯವತ್ತಾಗಿರುತ್ತದೆ. ವಿದ್ಯೆಯಿಂದ ಜೀವನಮಾಡುವವರೆಲ್ಲ ಅವರವರ ಗುರುಗಳ ಅನುಗ್ರಹದಿಂದಲೇ ಜೀವನ ಮಾಡುತ್ತಿರುತ್ತಾರೆನ್ನಬಹುದು. ಆದ್ದರಿಂದ ವಂಶದ ದೃಷ್ಟಿಯಿಂದ ತಂದೆಮಕ್ಕಳಿಗೆ ಇರುವ ಸಂಬಂಧವೇ ವಿದ್ಯಾದೃಷ್ಟಿಯಿಂದ ಗುರುಶಿಷ್ಯರಿಗೆ ಇರುತ್ತದೆ. ಆದ್ದರಿಂದ ತಂದೆತಾಯಿಗಳನ್ನು ಕೃತಜ್ಞತೆಯಿಂದ ಸ್ಮರಿಸುವದಕ್ಕಿಂತಲೂ ಹೆಚ್ಚಾಗಿಯೇ ವಿದ್ಯಾ ಗುರುಗಳನ್ನು ಶಿಷ್ಯರು ಸ್ಮರಿಸುತ್ತಾರೆ; ಗುರುಪೂರ್ಣಿಮೆಯ ದಿನ ಗುರುಗಳ ಆರಾಧನೆಮಾಡುತ್ತಾರೆ. ವಿದ್ಯೆಯೆಂದರೆ ಅಕ್ಷರವಿದ್ಯೆ ಮಾತ್ರವೇ ಅಲ್ಲ; ಕೈಗಾರಿಕೆ, ಕೃಷಿ, ಸಂಗೀತ, ಚಿತ್ರ, ಶಿಲ್ಪ–ಮುಂತಾದವುಗಳ ತಿಳಿವಳಿಕೆಯೂ ಇದರಲ್ಲಿ ಅಡಕ ವಾಗುತ್ತದೆ. ಆದ್ದರಿಂದ ಗುರುಪೂರ್ಣಿಮೆಯನ್ನು ಸನಾತನಾರ್ಯರ, ಅಷ್ಟೇಕೆ, ಭಾರತನಿವಾಸಿಗಳೆಲ್ಲರ, ಗುರುಪೂಜಾದಿನವೆಂದು ಭಾವಿಸಿ ಜನಾಂಗಕ್ಕೆಲ್ಲ ಒಂದು ವಿಶೇಷ ಉತ್ಸವದಿನವಾಗಿ ಮಾರ್ಪಡಿಸಿಕೊಂಡರೆ ನಮ್ಮ ದೇಶಕ್ಕೇ ಕಲ್ಯಾಣವಾದೀತು.

ಆದರೆ ಈ ಪೂರ್ಣಿಮೆಯನ್ನು ಅಧ್ಯಾತ್ಮವಿದ್ಯೆಗೇ ವಿಶೇಷವಾಗಿ ಅನ್ವಯಿಸಿ ಕೊಂಡು ಬಂದಿರುತ್ತಾರೆ. ಒಂದು ದೃಷ್ಟಿಯಿಂದ ಇದು ಯುಕ್ತವೂ ಆಗಿರುತ್ತದೆ. ಏಕೆಂದರೆ ಅಧ್ಯಾತ್ಮವಿದ್ಯೆಯು ಎಲ್ಲಕ್ಕೂ ಹೆಚ್ಚಿನದಾಗಿರುವ, ಇಡಿಯ ಜಗತ್ತಿನ ಸಾರವೇ ಆಗಿರುವ, ಬ್ರಹ್ಮವನ್ನು ತಿಳಿಸುವ ವಿದ್ಯೆಯಾಗಿರುತ್ತದೆ. ಬ್ರಹ್ಮವಿದ್ಯೆಯು ಸಕಲವಿದ್ಯೆಗಳ ಪ್ರತಿಷ್ಠೆಯು, ಎಲ್ಲಾ ವಿದ್ಯೆಗಳೂ ಕೊನೆಯಲ್ಲಿ ಈ ವಿದ್ಯೆಯಲ್ಲಿ ಸೇರಿ ಮುಗಿಯುವವು ಎಂದು ಉಪನಿಷತ್ತುಗಳಲ್ಲಿ ಹೇಳಿರುತ್ತದೆ. ಆದ್ದರಿಂದ ಗುರುಪೂರ್ಣಿಮೆಯನ್ನು ಬ್ರಹ್ಮವಿದ್ಯಾ ಗುರುಗಳನ್ನು ಸ್ಮರಿಸುವ ಮತ್ತು ಆರಾಧಿಸುವ ದಿನವೆಂದು ಭಾವಿಸಿಯೇ ನಮ್ಮ ದೇಶದಲ್ಲಿ ಗುರ್ವಾರಾಧನೆಯನ್ನು ನಡೆಯಿಸುತ್ತಾ ಬಂದಿರುತ್ತಾರೆ. ಆದ್ದರಿಂದಲೇ ಈ ದಿವಸವನ್ನು "ವ್ಯಾಸಪೂರ್ಣಿಮೆ" ಎಂದು ಕರೆಯುವದು; ಏಕೆಂದರೆ ವ್ಯಾಸರ ಮೂಲಕವೇ ನಮಗೆ ಪ್ರವೃತ್ತಿನಿವೃತ್ತಿ ಧರ್ಮಗಳ ಭಂಡಾರವಾಗಿರುವ ವೇದವೂ ಇತಿಹಾಸವೂ ಪುರಾಣಗಳೂ ದೊರಕಿರುತ್ತವೆ. ಆದ್ದರಿಂದಲೇ ಈ ದಿನ ಸಂನ್ಯಾಸಿಗಳು ಬ್ರಹ್ಮವಿದ್ಯೆಗೆ ಆದಿಗುರು ವಾದ ಶ್ರೀಮನ್ನಾರಾಯಣನನ್ನೂ ದ್ವಾಪರಯುಗದಲ್ಲಿ ಅವತರಿಸಿ ಅಧ್ಯಾತ್ಮವಿದ್ಯೆಯ ಸಾರವಾದ ಭಗವದ್ಗೀತೆಯನ್ನು ಉಪದೇಶಿಸಿದ ಶ್ರೀಕೃಷ್ಣಭಗವಂತನನ್ನೂ

ವ್ಯಾಸರನ್ನೂ ಈಚೆಗೆ ಕಲಿಯುಗದಲ್ಲಿ ಅಧ್ಯಾತ್ಮಧರ್ಮವನ್ನು ಪ್ರಚಾರಕ್ಕೆ ತಂದ ಶ್ರೀಶಂಕರಭಗವತ್ಪಾದಾಚಾರ್ಯರೇ ಮುಂತಾದ ಮಹನೀಯರನ್ನೂ ಕೃತಜ್ಞತಾ ಪೂರ್ವಕವಾಗಿ ಪೂಜೆಮಾಡುತ್ತಾರೆ.

ವೇದೋಕ್ತವಾದ ನಿವೃತ್ತಿಧರ್ಮವು ಪ್ರವೃತ್ತಿಧರ್ಮರೂಪವಾದ ವರ್ಣಾಶ್ರಮಧರ್ಮದಿಂದ ಚಿತ್ತಶುದ್ಧಿಯನ್ನು ಹೊಂದಿದವರಿಗಾಗಿಯೇ ಮುಖ್ಯವಾಗಿ ಉಪದಿಷ್ಟವಾಗಿರುವದರಿಂದ, ಈ ಪೂರ್ಣಿಮೆಯ ದಿನ ವರ್ಷಾಕಾಲದ ನಿಮಿತ್ತವಾಗಿ ಸಂಚಾರವನ್ನು ನಿಲ್ಲಿಸಿ ಒಂದು ಕಡೆಯಲ್ಲಿ ನಿಲ್ಲುವ ಪರಿವ್ರಾಜಕರನ್ನು ಅಧ್ಯಾತ್ಮವಿದ್ಯಾಗುರುಗಳ ಪ್ರತಿನಿಧಿಗಳೆಂದು ಭಾವಿಸಿ ಗೃಹಸ್ಥರು ಪೂಜಿಸಿ ಆದರಿಸುವ ಪದ್ಧತಿಯು ನಮ್ಮ ದೇಶದಲ್ಲಿ ಈಗಲೂ ಉಳಿದುಕೊಂಡಿದೆ. ವರ್ಣಾಶ್ರಮಧರ್ಮವೆಂಬುದು ನಮ್ಮ ಭರತಖಂಡದಲ್ಲಿ ಮಾತ್ರ ಪ್ರಚಾರದಲ್ಲಿದ್ದು ಇದನ್ನು ದೇಶಾಂತರಕ್ಕೆ ಒಯ್ಯುವ ಪ್ರಯತ್ನವನ್ನು ನಮ್ಮವರು ಎಂದಿಗೂ ಮಾಡಿಯೇ ಇರುವದಿಲ್ಲ. ಈಗ ಭರತಖಂಡದಲ್ಲಿಯೂ ಆ ಧರ್ಮವು ಅನೇಕ ಕಾರಣಗಳಿಂದ–ಮುಖ್ಯವಾಗಿ ಜನರಿಗೆ ಅಜ್ಞಾನವು ಹೆಚ್ಚಿ ಕಾಮವು ಬೆಳೆಯುತ್ತಾ ಬಂದದ್ದರಿಂದ–ಅಲ್ಲಲ್ಲಿ ಬಿರುಕುಬಿಟ್ಟು ಬೀಳುತ್ತಿರುವ ಹಳೆಯ ಕೋಟೆಯಂತೆ ಕಡಿಮೆಯಾಗುತ್ತಲೇ ಬಂದಿರುತ್ತದೆ. ಒಂದಾನೊಂದು ಕಾಲದಲ್ಲಿ ಆರ್ಯಧರ್ಮವು ಈಗಿನ ಭರತ ಖಂಡಕ್ಕಿಂತಲೂ ಆಚೆ ಇರುವ ಅನೇಕ ದೇಶಗಳಲ್ಲಿ ಇರುತ್ತಿತ್ತು. ಕೃಷ್ಣಸಾರಮೃಗವು (Black Antelope) ಸಂಚರಿಸುತ್ತಿರುವ ದೇಶವೆಲ್ಲ ಇದರ ವ್ಯಾಪ್ತಿಗೆ ಒಳಪಟ್ಟಿರುವದೆಂದು ಸ್ಮೃತಿಕಾರರು ಬರೆದಿರುತ್ತಾರೆ. ನಮ್ಮ ದುರ್ದೈವದಿಂದ ನಮ್ಮ ದೇಶದವರೂ ಧರ್ಮದಿಂದ ಚ್ಯುತರಾದದ್ದಲ್ಲದೆ ಇಲ್ಲಿಗೆ ವಿಧರ್ಮದ ಜನರೂ ಬಂದು ನೆಲಸಲು ಅವರ ಸಂಪರ್ಕದಿಂದ ನಮ್ಮ ಆಚಾರವಿಚಾರಗಳು ಬಗೆಬಗೆಯಲ್ಲಿ ಸಂಕರವಾಗಿರುವದರಿಂದ ಈಗ ಸರ್ಕಾರದವರು ಕೂಡ ಯಾವದೊಂದು ಮತದವರಿಗೂ ಬೆಂಬಲವನ್ನೂ ಕೊಡಲಾರದಂಥ ಸ್ಥಿತಿಗೆ ನಾವು ಇಳಿದಿರುತ್ತೇವೆ. ಈಗ್ಗೆ ನಮಗೆ ಶಾಸ್ತ್ರೋಕ್ತವಾದ ಕರ್ಮಗಳ ಆಚರಣೆಯು ತಪ್ಪಿರುವದು ಹಾಗಿರಲಿ, ಐಹಿಕಜೀವನಕ್ಕೆ ಬೇಕಾದ ಕರ್ಮದಕ್ಷತೆಯೂ ಕೈಬಿಟ್ಟುಹೋಗಿರುತ್ತದೆ. ಹೀಗೆ ಇಹಪರಸುಖಗಳನ್ನು ಕಳೆದುಕೊಂಡು ನಾವು ವ್ಯಥೆಪಡುತ್ತಿದ್ದೇವೆ.

ಜಾತಿಪ್ರಯುಕ್ತವಾದ ವರ್ಣಾಶ್ರಮಧರ್ಮವು ಎಲ್ಲಾ ದೇಶಕ್ಕೂ ಎಲ್ಲಾ ಕಾಲಕ್ಕೂ ಹೊಂದುವಹಾಗಿಲ್ಲವೆಂಬುದು ನಿಜವಾದರೂ ಮನುಷ್ಯ ಲೋಕದಲ್ಲಿ ಗುಣಪ್ರಯುಕ್ತವಾದ ವರ್ಣಭೇದಗಳು ಯಾವಾಗಲೂ ಇದ್ದೇ ಇರುವವು. ಕೆಲವರು ಬುದ್ಧಿಜೀವಿಗಳು, ಕೆಲವರು ಬಲಜೀವಿಗಳು, ಕೆಲವರು ಕೃಷಿವಾಣಿಜ್ಯಾದಿ ವ್ಯಾಪಾರದಿಂದ

ಜೀವಿಸುವವರು, ಮತ್ತೆ ಕೆಲವರು ಶ್ರಮಜೀವಿಗಳು–ಹೀಗೆ ಬ್ರಾಹ್ಮಣಾದಿವರ್ಣಗಳ ನೆರಳಾಗಿರುವ ಗುಂಪುಗಳು ಎಲ್ಲಾ ದೇಶದವರಲ್ಲಿಯೂ ಎಲ್ಲಾ ಕಾಲದವರಲ್ಲಿಯೂ ಇದ್ದೇ ಇರುವವು. ಆದರೆ ನಮ್ಮ ದೇಶದಲ್ಲಿ ಏರ್ಪಟ್ಟಿದ್ದ ವರ್ಣಾಶ್ರಮಭೇದವು ಮುಖ್ಯವಾಗಿ ಧರ್ಮದ ಆಧಾರದಿಂದ ಏರ್ಪಟ್ಟಿತ್ತು. ಈಗ್ಗೆ ಧರ್ಮದಲ್ಲಿ ಜನರಿಗೆ ಆದರವು ಕಡಿಮೆಯಾಗುತ್ತಾಬಂದಿರುತ್ತದೆ; ಮುಕ್ಕಾಲು ಭಾಗದವರಲ್ಲಿ ಧರ್ಮ ಬುದ್ಧಿಯೇ ಲೋಪವಾಗುತ್ತಿದೆ ಎಂದರೂ ಸಲ್ಲುವಂತಿದೆ. ಇಲ್ಲಿ ಧರ್ಮವೆಂಬ ಮಾತಿನಲ್ಲಿ ನಾನು ಶಾಸ್ತ್ರೋಕ್ತವಾದ ಕರ್ಮಗಳನ್ನೂ ಆಚಾರಗಳನ್ನೂ ಲೆಕ್ಕಕ್ಕೆ ಹಿಡಿದಿಲ್ಲ; ಅವುಗಳಿಗೆ ನಿಯಮಗಳೆಂಬ ಹೆಸರನ್ನು ಹಿಂದಿನವರು ಕೊಟ್ಟಿರುತ್ತಾರೆ. ಅವುಗಳು ಎಲ್ಲರಿಗೂ ಒಂದೇ ಆಗಿರುವದು ಸಾಧ್ಯವಲ್ಲ. ಆದರೆ **ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಭೂತಪ್ರೇಮ, ಈಶ್ವರಭಕ್ತಿ–ಈ ಬಗೆಯ ಮಾನಸ ವ್ರತಗಳಿಂದ ಕೂಡಿರುವ ಧರ್ಮವು ಎಲ್ಲರಿಗೂ ಒಂದೇ ಆಗಿರುವದು ಶಕ್ಯವಿದೆ;** ಹಾಗೆ ಇರಬೇಕಾದದ್ದು ಅಪೇಕ್ಷಣಿಯವೂ ಆಗಿರುತ್ತದೆ. ಈ ಧರ್ಮವನ್ನು ಕೂಡ ನಾವು, ಅದೇಕೊ, ಹೆಚ್ಚುಹೆಚ್ಚಾಗಿ ಕಡೆಗಣಿಸುತ್ತಿರುವೆವು. ಇದರ ಫಲವಾಗಿ ಲೋಕದ ಸ್ಥಿತಿಯು ಹಿಡಿತಕ್ಕೆ ಸಿಕ್ಕದೆ ಇದೆ; ಜನರೆಲ್ಲರೂ ದುಃಖಕ್ಕೆ ಒಳಗಾಗಿರುತ್ತಾರೆ.

ಈಗಿನ ಲೋಕವು ಧರ್ಮವನ್ನು ಬಿಟ್ಟು ಹಕ್ಕನ್ನು ಪ್ರಧಾನವಾಗಿ ಎಣಿಸುತ್ತಾ ಬಂದಿದೆ. ಧರ್ಮವು ಎಲ್ಲಿಗಾದರೂ ಹೋಗಲಿ, ಪ್ರತಿಯೊಬ್ಬನೂ ತನ್ನ ತನ್ನ ಸ್ವಾತಂತ್ರ್ಯವನ್ನು ಸಂಪಾದಿಸಿಕೊಳ್ಳಬೇಕು. ಜನ್ಮಸಿದ್ಧವಾದ ಹಕ್ಕುಗಳನ್ನು ದೊರಕಿಸಿ ಕೊಂಡು ನಮ್ಮನಮ್ಮ ಯೋಗಕ್ಷೇಮವನ್ನು ನಾವುನಾವು ನೋಡಿಕೊಳ್ಳಬೇಕು–ಎಂಬುದು ಈಗಿನ ಜನತೆಯ ಕೂಗು ! ಇದರಿಂದ ಜನರು ಒಂದೊಂದು ಬಗೆಯ ಆಶೋತ್ತರಗಳನ್ನಿಟ್ಟುಕೊಂಡಿರುವ ಜನರುಗಳು ಒಂದೊಂದು ಗುಂಪಾಗಿ ಸೇರಿಕೊಂಡು ತಮ್ಮ ಸ್ಥಾನಮಾನಗಳಿಗೆ ಧಕ್ಕೆಬಾರದಂತೆ ನೋಡಿಕೊಳ್ಳುವದಕ್ಕೂ ತಮ್ಮ ಹಕ್ಕನ್ನು ಸಂಪಾದಿಸುವದಕ್ಕೆ ಅಡ್ಡಿಯಾಗಿರುವರೆಂದು ತಾವು ಭಾವಿಸಿ ಕೊಂಡಿರುವ ವರ್ಗದವರನ್ನು ಎದುರಿಸಿ ತಮ್ಮ ವಶಕ್ಕೆ ತೆಗೆದುಕೊಳ್ಳುವದಕ್ಕೂ ಹವಣಿಸುತ್ತಿರುತ್ತಾರೆ. **'ಧರ್ಮವು ಇಡಿಯ ಜಗತ್ತಿಗೇ ಪ್ರತಿಷ್ಠಾಕಾರಣವು'** ಎಂದು ವೇದವು ಸಾರುತ್ತಿದೆ. ಆದರೆ ನಮ್ಮ ನಮ್ಮ ಪಂಗಡಗಳ ಯೋಗಕ್ಷೇಮವನ್ನು ನೋಡಿಕೊಳ್ಳುವದಕ್ಕೆ ಮಿಕ್ಕವರೊಡನೆ ಹೊಡೆದಾಡುವದೊಂದೇ ಉಪಾಯವು; ಲೋಕದಲ್ಲಿ ಯಾವ ಪಂಗಡದವರು ಒಗ್ಗಟ್ಟಿನಿಂದ ತಮ್ಮ ಹಕ್ಕುಗಳಿಗಾಗಿ ಹೊಡೆದಾಡಿ ಗೆಲ್ಲುವರೋ ಅವರೇ ಮುಂದಕ್ಕೆ ಬರುವವರು–ಎಂಬುದು ಈಗ ನಮ್ಮಲ್ಲಿ ಅನೇಕರ ಜೀವನಸೂತ್ರವಾಗಿ ಬಿಟ್ಟಿದೆ.

ಇದರಿಂದ ಬ್ರಾಹ್ಮಣಾದಿವರ್ಣಗಳಲ್ಲಿದ್ದ ಪರಸ್ಪರಸೌಹಾರ್ದವು ತಪ್ಪಿಹೋಗಿರುತ್ತದೆ, ಒಬ್ಬರಿಗೊಬ್ಬರಿಗೆ ದ್ವೇಷಾಸೂಯಾಪೂರಿತವಾದ ಕಲಹಗಳು ಏರ್ಪಟ್ಟಿರುತ್ತವೆ. ಬ್ರಾಹ್ಮಣಾದಿವರ್ಣಗಳು ಎಂಬ ಮಾತಿಗೆ ನಾವು ಈಗ ಸಂಕುಚಿತವಾದ ಅರ್ಥವನ್ನು ಕೊಡುತ್ತಿದ್ದೇವೆ, ಬುದ್ಧಿಜೀವಿಗಳೇ ಆಗಲಿ, ಬಲಜೀವಿಗಳೇ ಆಗಲಿ, ವಾಣಿಜ್ಯಾದಿಜೀವಿಗಳೇ ಆಗಲಿ, ಶ್ರಮಜೀವಿಗಳೇ ಆಗಲಿ, ಧರ್ಮವನ್ನು ಲೆಕ್ಕಕ್ಕೆ ತಂದುಕೊಳ್ಳದೆ ಹೇಗಾದರೂ ಮಾಡಿ ತಮ್ಮ ತಮ್ಮ ಪಂಗಡದವರು ಮುಂದಕ್ಕೆ ಬರಬೇಕೆಂದು ಬಯಸುತ್ತಿದ್ದಾರೆ; ಮಿಕ್ಕ ಪಂಗಡದವರನ್ನು ತಮ್ಮ ಏಳಿಗೆಗೆ-ಎಂದರೆ ತಮಗೆ ಬೇಕಾಗಿರುವ ಲೌಕಿಕಭೋಗವಸ್ತುಗಳನ್ನು ಸ್ವಾಧೀನಪಡಿಸಿಕೊಳ್ಳುವದಕ್ಕೆ-ಸಾಧನವಾಗಿ ಮಾಡಿಕೊಳ್ಳಬೇಕೆಂದು ಹವಣಿಸುತ್ತಿದ್ದಾರೆ.

ಸ್ವಾಮಿ ವಿವೇಕಾನಂದರವರು ತಮ್ಮ ಭಾಷಣಗಳಲ್ಲೊಂದರಲ್ಲಿ ಒಂದಾನೊಂದು ಭಾವಗರ್ಭಿತವಾದ ಭವಿಷ್ಯವನ್ನು ನುಡಿದಿರುತ್ತಾರೆ. ಒಂದಾನೊಂದು ಕಾಲದಲ್ಲಿ ಬ್ರಾಹ್ಮಣನು ಮಾನವಸಮಾಜಕ್ಕೆಲ್ಲ ಅಧಿಪತಿಯಾಗಿದ್ದನು; ಅವನು ಅಧರ್ಮಕ್ಕೆ ಬೀಳಲು ಕ್ಷತ್ರಿಯನು ಪ್ರಬಲನಾದನು; ಅವನ ಆಳ್ವಿಕೆಯೂ ಮುಗಿದ ಬಳಿಕ ವೈಶ್ಯನ ರಾಜ್ಯವು ಬಂದಿರುತ್ತದೆ; ಮುಂದೆ ಶೂದ್ರನ ಆಳ್ವಿಕೆಯು ಬರುವದರಲ್ಲಿದೆ-ಎಂದು ಅವರು ನುಡಿದಿರುತ್ತಾರೆ. ಭೂಲೋಕದ ಇತಿಹಾಸದಲ್ಲಿ ಇದಕ್ಕೆ ಎಲ್ಲೆಲ್ಲಿಯೂ ಉದಾಹರಣೆಗಳು ದೊರೆಯುತ್ತವೆ. ಒಂದಾನೊಂದು ಕಾಲದಲ್ಲಿ ಬ್ರಾಹ್ಮಣರು ಎಂದರೆ ಧರ್ಮಪ್ರಧಾನರಾದ ಜನರು ಎಲ್ಲರ ಹಿತವನ್ನೂ ಬಯಸುತ್ತಿದ್ದ ಕಾಲವಿತ್ತು. ನಮ್ಮ ದೇಶದಲ್ಲಿ ಬಲು ಹಿಂದಿನಕಾಲದ ಋಷಿಗಳೂ, ಧರ್ಮಸೂತ್ರಗಳು ಸ್ಮೃತಿಗಳು-ಮುಂತಾದವನ್ನು ರಚಿಸಿದ ಮಹನೀಯರೂ ಸರ್ವರಿಗೂ ಮಾನ್ಯರಾಗಿದ್ದಂತೆ ಇಸ್ಲಾಂ, ಯಹೋದಿ, ಕ್ರಿಸ್ತೀಯ-ಮುಂತಾದ ಧರ್ಮಗಳು ಹುಟ್ಟಿದ ಅನ್ಯದೇಶಗಳಲ್ಲಿಯೂ ಧರ್ಮೋಪದೇಶಕರಾದವರು ಮೊದಮೊದಲು ಸರ್ವಮಾನ್ಯರಾಗಿಯೇ ಇದ್ದರು. ಆದರೆ ಆ ಜನರು ಕಾಮೋಪಹತರಾಗಿ ತಮಗೆ ದೊರೆತ ಅಧಿಕಾರವನ್ನು ದುರುಪಯೋಗಪಡಿಸಿಕೊಂಡದ್ದರಿಂದ ಕ್ಷತ್ರಿಯರು ಎಂದರೆ ಬಲಪ್ರಧಾನರಾಗಿರುವ ಜನರು ಎಲ್ಲರ ಗೌರವಕ್ಕೂ ಪಾತ್ರರಾದರು. ಆ ಜನರು ಧರ್ಮಪ್ರೇಮಿಗಳಾಗಿರುವವರೆಗೂ ಉನ್ನತಸ್ಥಾನದಲ್ಲಿದ್ದರು. ಯಾವಾಗ ಅವರು ಉದ್ವೃತ್ತರಾಗಿ ನಡೆದುಕೊಂಡರೋ ಆಗಿನಿಂದ ಅವರ ಬೀಳು ಮೊದಲಾಯಿತು. ಹೀಗೆ ಕ್ಷತ್ರಿಯತೇಜಸ್ಸು ಧರ್ಮಬಾಹ್ಯವಾಗಿ ಕೆಳಕ್ಕೆ ಉರುಳಿದ್ದನ್ನು ಪುರಾಣಗಳಲ್ಲಿಯೂ ಈಚಿನ ಇತಿಹಾಸದಲ್ಲಿಯೂ ಕಾಣಬಹುದು. ಯೂರೋಪಿನಲ್ಲಿ ಮಧ್ಯಯುಗದ "ಷಿವಲ್ರಿ" ಎಂಬ ಸರದಾರರ ಇತಿಹಾಸವನ್ನೂ ಮಹಮ್ಮದೀಯರ ಖಲೀಫರ ಇತಿಹಾಸವನ್ನೂ ನೆನಪಿಗೆ ತಂದುಕೊಂಡರೆ ಈ ಅಭಿಪ್ರಾಯಕ್ಕೆ

ಪುಷ್ಟಿಬರುವದು. ಬಹಳ ಈಚಿನ ಕಾಲದಲ್ಲಿ ಪ್ರಬಲವಾದ ರಾಷ್ಟ್ರಗಳು ಎಲ್ಲಾ ಕಡೆಗೂ ನುಗ್ಗಿ ದೇಶಗಳನ್ನು ವಿವಿಧೋಪಾಯಗಳಿಂದ ಗೆದ್ದು ಚಕ್ರಾಧಿಪತ್ಯವನ್ನು ಮಾಡಿಕೊಂಡದ್ದರಲ್ಲಿ ವೈಶ್ಯರ ಎಂದರೆ ವಾಣಿಜ್ಯಪ್ರಧಾನರಾದವರ ಏಳಿಗೆಯು ಕಂಡುಬರುತ್ತದೆ. ಶಿಪಾಯಿಗಳು ಧನಪ್ರಧಾನರಾದವರ ಆಳಾದದ್ದು, ಭೌತಿಕ ವಿಜ್ಞಾನವುಕೂಡ ಈ ವ್ಯಾಪಾರದ ಜನರಿಗೆ ಅನುಕೂಲವಾಗುವ ಯಂತ್ರೋಪಕರಣಗಳನ್ನೂ ಶತ್ರುಮಾರಕವಾದ ಟ್ಯಾಂಕುಗಳು, ಬಾಂಬುಗಳು ಮುಂತಾದವನ್ನೂ ಸಿದ್ಧಗೊಳಿಸಿಕೊಟ್ಟದ್ದು-ಇವೆಲ್ಲ ನಮ್ಮ ಕಣ್ಣಮುಂದೆಯೇ ಇದೆ. ಎಲ್ಲಿಯವರೆಗೆ ಧನವಂತರು ಧರ್ಮಬುದ್ಧಿಯಿಂದ ಮಿಕ್ಕವರನ್ನು ಕಾಣುತ್ತಿದ್ದರೋ ಅಲ್ಲಿಯವರೆಗೂ ಸ್ವಲ್ಪವಾದರೂ ಜನತಾಭಿವೃದ್ಧಿಯು ಕಾಣುತ್ತಿತ್ತು. ಆದರೆ ಧನದ ಆಶೆಯೂ ಲೋಭವೂ ಬೆಳೆದಂತೆ ಕರುಬುತನ, ಹೊಟ್ಟೆಕಿಚ್ಚು, ಹಗೆತನ-ಇವುಗಳೂ ಬೆಳೆಯುತ್ತಾ ಬಂದಿರುತ್ತವೆ. ಈಗ ಬಡವರಿಗೆ ನೇರವಾಗಿ ಅನ್ನಬಟ್ಟೆ ಕೂಡ ದೊರಕುವದು ಕಷ್ಟವಾಗಿರುತ್ತದೆ; ಕೂಲಿನಾಲಿಗಳನ್ನು ಮಾಡಿಕೊಂಡು ಜೀವಿಸುವದು ಕೂಡ ಆಗುವಂತಿಲ್ಲ. ಇಂಥ ಸಮಯದಲ್ಲಿ ಶೂದ್ರರ ಎಂದರೆ ಶ್ರಮಜೀವಿಗಳ ಅಧಿಕಾರವು ಮುಂದಕ್ಕೆ ಬರುವದು ಸಹಜವಾಗಿರುತ್ತದೆ. ಸಮಾಜವಾದಿಗಳು (Socialists), ಸಮತಾವಾದಿಗಳು (Communists)-ಮುಂತಾದ ಹೆಸರುಗಳಿಂದ ಧನವಂತರ ಹಣವನ್ನೆಲ್ಲ ಸುಲಿಗೆ ಮಾಡಿಕೊಂಡು ಹಂಚಿಕೊಳ್ಳುವ ಕೆಲಸಗಾರರ ರಾಜ್ಯವು ಅಲ್ಲಲ್ಲಿ ತಲೆ ಎತ್ತುತ್ತಿದೆ ಎಂಬುದರಲ್ಲಿ ಆಶ್ಚರ್ಯವೇನಿದೆ?

ಇದುವರೆಗೆ ವರ್ಣಿಸಿರುವ ಮಾನವಸಮಾಜದ ಇತಿಹಾಸಕ್ಕೂ ಗುರುಪೂರ್ಣಿಮೆಗೂ ಸಂಬಂಧವೇನೆಂದು ನೀವು ಮನಸ್ಸಿನಲ್ಲಿಯೇ ಯೋಚಿಸುತ್ತಿರಬಹುದು. ಆದರೆ ಇದಕ್ಕೆ ಉತ್ತರವನ್ನು ಆಗಲೇ ಸಂಕ್ಷೇಪವಾಗಿ ಹೇಳಿಬಿಟ್ಟಿರುತ್ತೇನೆ. **ಮನುಷ್ಯರು ಧರ್ಮಪ್ರಧಾನರಾಗಿರುವವರೆಗೆ ಸಮಾಜವೂ ಧರ್ಮದ ಆಧಾರದ ಮೇಲೆಯೇ ರಚಿತವಾಗಿರುತ್ತದೆ. ಇಹಲೋಕದ ಭೋಗವೂ ಧರ್ಮಕ್ಕೆ ಅವಿರುದ್ಧವಾಗಿಯೇ ಸಾಗುತ್ತಿರುತ್ತದೆ. ಜನರ ಆಚಾರವಿಚಾರಗಳೂ ಧರ್ಮಕ್ಕೆ ಅನುಗುಣವಾಗಿಯೇ ಇರುತ್ತವೆ. ಆದ್ದರಿಂದ ಅಂಥ ಸಮಾಜದಲ್ಲಿ ಸಹಜವಾಗಿ ಈಶ್ವರಭಕ್ತಿ, ಪಾಪಭೀತಿ, ಗುರುಹಿರಿಯರ ವಚನದಲ್ಲಿ ಶ್ರದ್ಧೆ-ಇವುಗಳೆಲ್ಲ ಜನರಲ್ಲಿ ನೆಲಸಿರುತ್ತವೆ.** ಆದರೆ ಯಾವಾಗ ಜನರ ಮನಸ್ಸಿನ ದೌರ್ಬಲ್ಯದಿಂದ ಕಾಮವು ಹೆಚ್ಚಿಕೊಳ್ಳುವದೋ ಆಗ ಅಧರ್ಮವು ಹೆಚ್ಚಿ ಧರ್ಮವು ಕಣ್ಮರೆಯಾಗುತ್ತದೆ; ಆಸ್ತಿಕ್ಯವು ಹೋಗುತ್ತದೆ, ಧರ್ಮದಲ್ಲಿ ಪ್ರೇಮವಿರುವದಕ್ಕೆ ಬದಲು ದ್ವೇಷವು ಕೂಡ ಉಂಟಾಗಬಹುದಾಗುತ್ತದೆ; ಜನರ ಆಚಾರವಿಚಾರಗಳು ಸ್ವೇಚ್ಛೆಯಿಂದ ನಡೆಯುವದಕ್ಕೆ ಪ್ರಾರಂಭವಾಗುತ್ತದೆ. ಎಲ್ಲರಿಗೂ ದುಃಖಪರಂಪರೆಗಳು ಬಂದೊದಗುತ್ತವೆ.

ಸಮಾಜದ ಪದ್ಧತಿಯನ್ನಾಗಲಿ ರಾಜ್ಯಭಾರಕ್ರಮವನ್ನಾಗಲಿ ಮಾರ್ಪಡಿಸಿದ ಮಾತ್ರದಿಂದ ಯಾವ ದೇಶಕ್ಕೂ ಸುಖವು ಬರುವದಿಲ್ಲ; ಧರ್ಮವನ್ನು ಧ್ಯೇಯವಾಗಿಟ್ಟುಕೊಂಡಿದ್ದರೆ ಯಾವ ಪದ್ಧತಿಯಾದರೂ ಯಾವ ರಾಜ್ಯಕ್ರಮವಾದರೂ ಸುಖದಾಯಕವಾಗುತ್ತದೆ; ಅದನ್ನು ಕೈಬಿಟ್ಟರೆ ಯಾವ ಬದಲಾವಣೆಯಿಂದಲೂ ನಮಗೆ ಯಾವ ಸುಖವೂ ದೊರೆಯಲಾರದು. ತುಲಸೀದಾಸರ ಒಂದು ವಾಕ್ಯವುಂಟು; **ಎಲ್ಲಿ ರಾಮನಿರುವನೋ ಅಲ್ಲಿ ಕಾಮಕ್ಕೆ ಸ್ಥಲವಿಲ್ಲ, ಎಲ್ಲಿ ಕಾಮವಿರುವದೋ** ಅಲ್ಲಿ ರಾಮನಿಗೆ ಸ್ಥಲವಿಲ್ಲ- ಎಂದು ಅವರು ಹೇಳಿರುತ್ತಾರೆ. ಕಾಮವು ಹೆಚ್ಚಿದಂತೆಲ್ಲ ಜನರು ಈಶ್ವರಭಕ್ತಿ, ಗುರುಭಕ್ತಿ-ಎಲ್ಲವನ್ನೂ ಕೈಬಿಡುತ್ತಾರೆ. ಧರ್ಮವನ್ನು ಅವಲಂಬಿಸಲಿ ಬಿಡಲಿ, ವರ್ಣಚತುಷ್ಟಯವಿಭಾಗವು ಎಲ್ಲಾ ದೇಶದಲ್ಲಿಯೂ ಇದ್ದೇ ತೀರುತ್ತದೆ. ಆದರೆ ಧರ್ಮವನ್ನು ಬಿಟ್ಟ ಬ್ರಾಹ್ಮಣ್ಯವು ನಿಜವಾದ ಬ್ರಾಹ್ಮಣ್ಯವಲ್ಲ, ಅದರ ಹೊರಚಿಪ್ಪು. ಹೀಗೆಯೇ ಧರ್ಮವನ್ನು ಬಿಟ್ಟ ಕ್ಷತ್ರಿಯತ್ವಾದಿಗಳನ್ನು ತಿಳಿಯಬೇಕು. ಧರ್ಮವನ್ನು ಬಿಟ್ಟುಬಿಟ್ಟಾಗಲೆಲ್ಲ ಆಯಾ ವರ್ಣದವರು ಮಿಕ್ಕವರನ್ನು ತುಳಿದು, ಅಥವಾ ಉಪಾಯದಿಂದ ಅವರನ್ನು ತಮ್ಮ ಲಾಭಕ್ಕೆ ಉಪಯೋಗಿಸಿಕೊಂಡು ಬಾಳುವದಕ್ಕೆ ಇಚ್ಛೆಸುತ್ತಾರೆ. ಇದರಿಂದ ತಾವೂ ಕೆಡುತ್ತಾರೆ, ಮಿಕ್ಕವರನ್ನೂ ಕೆಡಿಸುತ್ತಾರೆ. ಸದ್ಯದ ಕಾಲಕ್ಕೆ ಧರ್ಮದ ವಿಷಯಕ್ಕೆ ಅನಾದರ, ಧರ್ಮತ್ಯಾಗ, ಧರ್ಮದ ಅನುಯಾಯಿಗಳ ವಿಷಯದಲ್ಲಿ ಔದಾಸೀನ್ಯ-ಎಂಬ ಕೆಳಕೆಳಗಿನ ಮೆಟ್ಟಲುಗಳಿಗೆ ಇಳಿದು ಸಮಾಜವು ಧರ್ಮದ್ವೇಷಕ್ಕೇ ಅಗ್ರಸ್ಥಾನವನ್ನು ಕೊಟ್ಟ **'ಕಮ್ಯೂನಿಸಂ'** ಎಂಬ **ಸಮತಾವಾದವನ್ನು** ಅವಲಂಬಿಸಿದೆ. ಆ ಪಂಗಡದವರು ಧರ್ಮ ವಿಷಯದಲ್ಲಿ ಉದಾಸೀನರಲ್ಲ, ಧಾರ್ಮಿಕರು ರಾಜ್ಯದಲ್ಲಿ ಉಳಿದುಕೊಂಡಿರಲಿ ಎಂಬಷ್ಟೂ ಉದಾರಿಗಳಲ್ಲ; ಅವರು ಧರ್ಮದ್ವೇಷಿಗಳು; ಧರ್ಮವೆಂಬ ಹೆಸರೆತ್ತಿದರೂ ಅವರಿಗೆ ಆಗದು; ನೀತಿಯಾಗಲಿ ತತ್ತ್ವವಿಚಾರವಾಗಲಿ ಶ್ರಮಜೀವಿಗಳ ಹೋರಾಟಕ್ಕೆ ಸಹಾಯಮಾಡದೆ ಇದ್ದರೆ ಅದನ್ನೂ ಕಿತ್ತೊಗೆಯುವದಕ್ಕೆ ಅವರು ಸಿದ್ಧ !

ಆದರೆ ದೇಶಾಂತರಗಳಲ್ಲಿ ಆಗಿರುವ ಧರ್ಮದ ಇತಿಹಾಸವೇ ಬೇರೆ; ನಮ್ಮ ದೇಶದ ಇತಿಹಾಸವೇ ಬೇರೆ. ಮಿಕ್ಕ ಕಡೆಗಳಲ್ಲಿ ಧರ್ಮವನ್ನುಪದೇಶಿಸಿದವರು ಆಸ್ತಿಪಾಸ್ತಿಗಳನ್ನು ಹೆಚ್ಚಿಸಿಕೊಂಡು, ಅಧಿಕಾರವನ್ನು ಸಂಪಾದಿಸಿಕೊಂಡು, ರಾಜರುಗಳನ್ನೂ ಪ್ರಜೆಗಳನ್ನೂ ತಮ್ಮ ಅಡಿಯಾಳುಗಳಾಗಿ ಮಾಡಿಕೊಂಡು ತಾವು ಮಾಡುವ ಉಪದೇಶಕ್ಕೆ ಒಂದಿಷ್ಟು ಅಡ್ಡಿ ಮಾಡಿದರೂ ಜನರಿಗೆ ಬಗೆಬಗೆಯ ಹಿಂಸೆಗಳನ್ನು ಮಾಡಿದರು. ರಷ್ಯದೇಶದಲ್ಲಿ ಗ್ರೀಕ್‌ಚರ್ಚ್ ಎಂಬ ಒಂದಾನೊಂದು ಕ್ರಿಸ್ತಿಯನ್ ಮತದವರ ಕಾಟವನ್ನು ತಡೆಯಲಾರದೆ ಜನರು ಅವರಿಗೆ ತಿರುಗಿಬಿದ್ದರು;

ಅವರು ತಮ್ಮ ಪುರುಷಮತಿಯಿಂದ ಒಂದಾನೊಂದು ಸಮಾಜತತ್ತ್ವಶಾಸ್ತ್ರವನ್ನು ನಿರ್ಮಾಣಮಾಡಿಕೊಂಡು ಲೋಕಸ್ಥಿತಿಯನ್ನೇ ತಲೆಕೆಳಗುಮಾಡುವ ಒಂದಾನೊಂದು ವರ್ಗಯುದ್ಧ (Class-struggle) ವನ್ನು ಏರ್ಪಡಿಸಿರುತ್ತಾರೆ. ಆದರೆ ನಮ್ಮ ದೇಶದಲ್ಲಿ ಬ್ರಾಹ್ಮಣ್ಯವನ್ನು ಎತ್ತಿಹಿಡಿದ ಸನಾತನಧರ್ಮೀಯರು ಬ್ರಾಹ್ಮಣನಿಗೆ ಯಾವ ಆಸ್ತಿಯೂ ಇರಕೂಡದು, ಅವನು ಧರ್ಮವನ್ನೇ ಪ್ರಧಾನವಾಗಿ ಹಿಡಿದು ಆದರ್ಶಜೀವನವನ್ನು ಅವಲಂಬಿಸಿ ಮಿಕ್ಕವರಿಗೆ ಮೇಲುಪಙ್ಕ್ತಿಯಾಗಿರಬೇಕೆಂಬುದನ್ನು ಒತ್ತಿಹೇಳಿರುತ್ತಾರೆ. ಹೀಗಿರುವಲ್ಲಿ ನಮ್ಮ ದೇಶದ ತರುಣರು ಏತಕ್ಕೆ ನಮ್ಮ ದೇಶದ ಹವೆಗೆ ಒಂಟದ ಈ ವಿದೇಶೀಯಪದ್ಧತಿಯನ್ನು ಅವಲಂಬಿಸಬೇಕು?

ವರ್ಣಾಶ್ರಮಧರ್ಮವೆಂಬುದು ಒಬ್ಬರನ್ನೊಬ್ಬರು ತಮ್ಮ ಲಾಭಕ್ಕೆ ಉಪಯೋಗಿಸಿಕೊಳ್ಳಲೆಂದು ಏರ್ಪಡಿಸಿದ ಪದ್ಧತಿಯಲ್ಲ. ಎಲ್ಲಾ ಬಗೆಯಿಂದಲೂ ಪರಸ್ಪರ ಸಹಾಯಕರಾಗಿದ್ದುಕೊಂಡು ಧರ್ಮವನ್ನೇ ತಮ್ಮ ಗುರಿಯಾಗಿಟ್ಟುಕೊಂಡಿದ್ದು ಈ ಲೋಕದಲ್ಲಿ ಸುಖವನ್ನೂ ಪರಲೋಕದಲ್ಲಿ ಗತಿಯನ್ನೂ ಪಡೆಯಲೆಂದು ಏರ್ಪಡಿಸಿರುವ ಸಂಸ್ಥೆಯದು. ಈ ಪದ್ಧತಿಯಂತೆ ಬ್ರಾಹ್ಮಣನೆಂಬವನು ಪ್ರವೃತ್ತಿ ನಿವೃತ್ತಿರೂಪವಾದ ಧರ್ಮಗಳನ್ನು ಯಥಾಸಂಭವವಾಗಿ ಅವಲಂಬಿಸಿ ತಾನೂ ಮೇಲಕ್ಕೇರುತ್ತಾ ಮಿಕ್ಕವರನ್ನೂ ತನ್ನನ್ನು ಅನುಸರಿಸುವಂತೆ ಮಾಡುವವನು. ಅದರಲ್ಲಿಯೂ ಸಂನ್ಯಾಸಿಯಾದವನು ಪರಮಾತ್ಮಚಿಂತನೆಗೆಂದೇ ತನ್ನ ಜೀವನವನ್ನು ಮೀಸಲು ಮಾಡಿಕೊಂಡು, ತನ್ನ ಸರ್ವಸಮತಾದೃಷ್ಟಿಯಿಂದ ಎಲ್ಲರಿಗೂ ಶಾಂತಿ ಸುಖಗಳನ್ನು ಕೊಡುವ ಮಾರ್ಗವನ್ನು ತೋರಿಸಿಕೊಡುತ್ತಿರುವನು. ಆದ್ದರಿಂದ ನಮ್ಮ ದೇಶದವರು ಯಾವ ಪುರುಷಾರ್ಥವನ್ನೂ ಕೊಡದೆ, ಅನರ್ಥಕ್ಕೇ ಕಾರಣವಾಗಿರುವ, ವರ್ಣದ್ವೇಷಾದಿಗಳನ್ನು ಬಿಟ್ಟು ಗುಣಪ್ರಧಾನವಾದ ವರ್ಣಾಶ್ರಮ ಪದ್ಧತಿಗೆ ಉದಾರಬುದ್ಧಿಯಿಂದ ಸಹಾಯಮಾಡಬೇಕು. ಧರ್ಮಬುದ್ಧಿಯೂ ಜ್ಞಾನಭಕ್ತಿ ವೈರಾಗ್ಯಗಳೂ ಎಲ್ಲಿ ಕಂಡರೆ ಅಲ್ಲಿ ಗೌರವವನ್ನು ಕೊಡಬೇಕು; ಪೂರ್ವದಲ್ಲಿ ಈ ಕ್ಷೇತ್ರದಲ್ಲಿಯೇ ಲೋಕೋಪಕಾರಕ್ಕಾಗಿ ದುಡಿದಿರುವ ಭಗವಾನ್ ನಾರಾಯಣ, ವ್ಯಾಸ, ಶಂಕರಾದಿಗಳನ್ನು ಸ್ಮರಿಸಬೇಕು; ಈಗಲೂ ಜನರನ್ನು ಕಲ್ಯಾಣಮಾರ್ಗಕ್ಕೆ ಒಯ್ಯಬಲ್ಲ ಸಾಧುಸಂತರನ್ನು ಆದರದಿಂದ ಸೇವಿಸಬೇಕು. ಈ ಧ್ಯೇಯವನ್ನು ನೆನಪು ಕೊಡುವದೇ ಗುರುಪೂರ್ಣಿಮೆಯಂಥ ಉತ್ಸವಗಳ ಸಾಫಲ್ಯವು.

**ಈ ಲೇಖನದ ಬಗ್ಗೆ ಬಂದ ಟೀಕೆಗಳಿಗೆ ಶ್ರೀ ಶ್ರೀಗಳವರ ಸಮಾಧಾನದ ಉತ್ತರಕ್ಕೆ ಕೊನೆಯಲ್ಲಿರುವ ಪರಿಶಿಷ್ಟ ಒಂದನ್ನು ನೋಡಿ.**

# 14. ಅನಂತಸಾಗರ

ಉಪನಿಷತ್ತುಗಳಲ್ಲಿ ಪರಮಾತ್ಮನಿಗೆ ಕೊಟ್ಟಿರುವ ಅನೇಕ ನಾಮಗಳಲ್ಲಿ 'ಅನಂತ' ಎಂಬುದು ಬಹಳ ಅಭಿಪ್ರಾಯಗರ್ಭಿತವಾದದ್ದು. ಏಕೆಂದರೆ ಪರಮಾತ್ಮನನ್ನು ನಾವು ಯಾವ ಹೆಸರಿನಿಂದ ಕರೆದರೂ ಆಯಾ ಶಬ್ದದ ಶಕ್ತಿಯು ಎಷ್ಟಿದೆಯೋ ಅದಕ್ಕೇ ಆತನನ್ನು ಇಳಿಸಿಬಿಡುತ್ತದೆ. ಆದರೆ ನಿಜವಾಗಿ ಪರಮಾತ್ಮನ ಸ್ವರೂಪಕ್ಕೆ ಯಾವ ಎಲ್ಲೆಕಟ್ಟೂ ಇರುವದಿಲ್ಲ. ಅವನನ್ನು ಯಾವದೊಂದು ಶಬ್ದವೂ ಸರಿಯಾಗಿ ವರ್ಣಿಸಲಾರದು; ಯಾವದೊಂದು ಮನಸ್ಸಿನ ಪ್ರತ್ಯಯವೂ ಸರಿಯಾಗಿ ಗ್ರಹಿಸಲಾರದು.

ಪರಮಾತ್ಮನನ್ನು 'ಭಗವಂತನು'-ಸಮಗ್ರವಾದ **ಜ್ಞಾನ, ಐಶ್ವರ್ಯ, ಶಕ್ತಿ, ಬಲ, ವೀರ್ಯ, ತೇಜಸ್ಸು-ಎಂಬ ಆರು ಗುಣಗಳುಳ್ಳವನು**-ಎಂದು ಪುರಾಣಗಳಲ್ಲಿ ವರ್ಣಿಸಿರುತ್ತದೆ. ಆದರೆ ಆ ಭಗವಂತನಲ್ಲಿ ಆರೇ ಗುಣಗಳಿರುವವೆಂದು ಲೆಕ್ಕಮಾಡಿ ತಿಳಿಸುವದಕ್ಕಲ್ಲ, ಹಾಗೆ ಹೇಳಿರುವದು; ನಮಗೆ ಮೆಚ್ಚಿಗೆಯಾಗಿರುವ ಜ್ಞಾನಾದಿ ಗಳೆಂಬ ಈ ಗುಣಗಳಂಥ ಅನಂತಗುಣಗಳು ಆತನಲ್ಲಿರುವವು ಎಂಬುದು ಆ ಪುರಾಣವಚನದ ಅಭಿಪ್ರಾಯ. ಕೆಲವು ಕಡೆಗಳಲ್ಲಿ ಪರಮಾತ್ಮನನ್ನು ಅನಂತಕಲ್ಯಾಣ ಗುಣಾಕರನು-ಲೆಕ್ಕವಿಲ್ಲದಷ್ಟು ಒಳ್ಳೆಯ ಗುಣಗಳಿರುವವನು-ಎಂದು ಹೇಳಿರುತ್ತದೆ. ಭಗವಂತನ ಕಲ್ಯಾಣಗುಣಗಳನ್ನು ಲೆಕ್ಕಮಾಡುವದಕ್ಕೆ ಬರುವದಿಲ್ಲವೆಂಬುದು ನಿಜ. ಆದರೆ ಈ ಅನಂತಸಂಖ್ಯಾಕವಾದ ಕಲ್ಯಾಣ ಗುಣಗಳಲ್ಲಿ ಯಾವದೊಂದನ್ನು ತೆಗೆದುಕೊಂಡರೂ ಆ ಒಂದೊಂದೂ ಅನಂತವಾಗಿರುತ್ತದೆ; ಅದು ಇಲ್ಲಿಗೆ ಮುಗಿಯಿತೆಂದು ಅಳತೆಯೇನೂ ಸಿಕ್ಕುವದಿಲ್ಲ. ಇಷ್ಟೇ ಅಲ್ಲ. ಈ ಭಗವಂತನ ಕಡೆಗೆ ನಮ್ಮ ಮನಸ್ಸು ತಿರುಗಿದರೆ, ಲೋಕದಲ್ಲಿ ಕಾಣುವ ಅನಂತಗುಣಗಳಿಗೆಲ್ಲ ಮೂಲವು, ಅನಂತಜೀವರುಗಳಿಗೆಲ್ಲ ಮೂಲವು, ಅನಂತದೇವತೆಗಳಿಗೆಲ್ಲ ಮೂಲವು ಆತನೆಂದು ತಿಳಿಯುವದಕ್ಕೆ ಮನಸ್ಸುಮಾಡಿದರೆ, ಕಾರಣಗಳಿಗೆಲ್ಲ ಕಾರಣನಾಗಿರುವ ಕಾರಣರಹಿತನಾದ ಪರಮಕಾರಣನು ಆತನು, ಅನಾದ್ಯನಂತನು ಆತನು; ಇಡಿಯ ಜಗತ್ತಿನ ಚೇತನಾಚೇತನಗಳ ರಾಶಿಗೆಲ್ಲ ಹುಟ್ಟುವದಕ್ಕೂ ಇರುವದಕ್ಕೂ ಕೊನೆಗೆ ಹೋಗಿ ಸೇರುವದಕ್ಕೂ ಕಾರಣವು ಆತನು-ಎಂಬ ಅಭಿಪ್ರಾಯವು ನಮಗೆ ಕ್ರಮಕ್ರಮವಾಗಿ ಮನಸ್ಸಿನಲ್ಲಿ ಮಿಂಚುವದು. ಆ ಭಗವಂತನ ತತ್ತ್ವವೆಂಬುದು ನಾವು ಎಷ್ಟು ತರ್ಕಿಸಿದರೂ ಎಷ್ಟು ಕಲ್ಪಿಸಿದರೂ ಇನ್ನೂ ಮುಂದಕ್ಕೆ ಇರುವದು. ದೇವತೆಗಳೂ ಋಷಿಗಳೂ ಮಹಾಪ್ರತಿಭಾಶಾಲಿಗಳೆಂದು ಪ್ರಸಿದ್ಧಿ. ಆದರೆ ಅವರು ಯಾರೂ ಭಗವಂತನ ಸ್ವರೂಪವು ಇಂತಿಷ್ಟೆಂದು ನಿರ್ಣಯಿಸಲಾರರು. ಯಾರು ಎಷ್ಟೆಷ್ಟು ತಮ್ಮ ಬುದ್ಧಿಶಕ್ತಿಯನ್ನು ಮೀರಿ ತರ್ಕಿಸಿದರೂ

ಯಾರು ಎಷ್ಟೆಷ್ಟು ತಮ್ಮ ಕಲ್ಪನಾಶಕ್ತಿಯನ್ನು ಮೀರಿ ಕಲ್ಪಿಸಿದರೂ ಆತನು ಇನ್ನೂ ಅದರಿಂದಾಚೆಗೂ ಇರುತ್ತಿರುವನು. ಆತನು ಎಲ್ಲಾ ದೇಶದ ಕಟ್ಟನ್ನೂ ಮೀರಿದವನು, ಎಲ್ಲಾ ಕಾಲದ ಕಟ್ಟನ್ನೂ ಮೀರಿದವನು, ಎಲ್ಲಾ ವಸ್ತುಗಳ ಕಟ್ಟನ್ನೂ ಮೀರಿದವನು. ಆದ್ದರಿಂದಲೇ ಉಪನಿಷತ್ತಿನಲ್ಲಿ ಅವನನ್ನು '**ಅನಂತ**'ನೆಂದು ಕರೆದಿರುವದು.

ಭಗವಂತನು ಸರ್ವವಿಧದಿಂದಲೂ ಅನಂತನಾಗಿರುವದರಿಂದ ಆತನ ಅನುಗ್ರಹವೂ ಅಕ್ಷಯವಾಗಿರುತ್ತದೆ. ಆತನ ಪ್ರೇಮವು ಅನಂತವಾಗಿರುತ್ತದೆ; ಆದ್ದರಿಂದ ಎಂಥ ನೀಚನನ್ನೂ ಎಂಥ ಪಾಪಿಯನ್ನೂ ಆತನು ತನ್ನ ಪ್ರೇಮಾಮೃತದಲ್ಲಿ ಅದ್ದಬಲ್ಲನು. ಅನಂತವಾಗಿ ಎಂದೆಂದಿಗೂ ತನ್ನ ಪ್ರೇಮರಸಪಾನದಿಂದ ತೃಪ್ತಿಯನ್ನು ಕೊಡಬಲ್ಲನು. ಆತನ ಜ್ಞಾನವು ಅನಂತವಾಗಿರುವದು, ಶಕ್ತಿಯೂ ಬಲವೂ ಅನಂತವಾಗಿರುವದು, ದಯೆಯೂ ಔದಾರ್ಯವೂ ಅನಂತವಾಗಿರುವದು. ಇಂಥ ಭಗವಂತನು ತಾನೂ ಸ್ವರೂಪದಿಂದ ಅನಂತನಾಗಿರುವದರಿಂದ-ಅನಂತವೆಂದು ನಾವು ಭಾವಿಸಿಕೊಂಡಿರುವ ಕಾಲದಲ್ಲಿ ಎಂದೆಂದಿಗೂ ಇರುತ್ತಿರುವದರಿಂದ- ಆ ಭಗವಂತನ ಸ್ಮರಣೆಯ ಫಲವು ಇಂಥದ್ದೆಂಬುದನ್ನು ನಾವೆಲ್ಲರೂ ಮನಸ್ಸಿಗೆ ಹತ್ತಿಸಿಕೊಳ್ಳಬಹುದು. "ಆ ಭಗವಂತನು ಅನಂತನಾಗಿರುವದರಿಂದ ಈಗಲೂ ಇಲ್ಲಿಯೇ ಇರುತ್ತಾನೆ; ಅನಂತದಯಾಸಾಗರನಾಗಿರುವದರಿಂದ ಈಗಲೂ ನನ್ನ ಮೇಲೆಯೂ ಆತನ ದಯೆಯು ಹರಿದುಬರುತ್ತಿದೆ; ಅನಂತಬಲವೀರ್ಯತೇಜಸ್ಸುಗಳಿಂದ ಕೂಡಿರುವದರಿಂದ ಈಗಲೂ ನನ್ನನ್ನು ಕಾಪಾಡುತ್ತಿರುತ್ತಾನೆ; ಅನಂತವಾದ ಐಶ್ವರ್ಯವೂ ಸಂಪತ್ತೂ ಆತನದಾಗಿರುವದರಿಂದ ಸಕಲ ಇಷ್ಟಾರ್ಥಗಳನ್ನೂ ಆತನಿಂದ ಪಡೆದುಕೊಳ್ಳಲು ಈಗಲೂ ನನಗೂ ಅವಕಾಶವಿದೆ" ಎಂದು ನಾವು ಒಬ್ಬೊಬ್ಬರೂ ಮನಸ್ಸಿಗೆ ತಂದುಕೊಂಡು ನಲಿಯಬಹುದಾಗಿದೆ. ಆ ಅನಂತನ ಸರ್ವಜ್ಞತೆಗೆ ನಮ್ಮಲ್ಲಿ ಯಾರೊಬ್ಬರ ಸ್ಥಿತಿಯೂ ತಿಳಿಯದೆ ಇಲ್ಲ; ನಮ್ಮಲ್ಲಿ ಯಾರೊಬ್ಬರ ಬುದ್ಧಿಯೂ ಆತನ ಪ್ರೇರಣೆಗೆ ಹೊರತಾಗಿಲ್ಲ; ನಮ್ಮಲ್ಲಿ ಯಾರೊಬ್ಬನಿಗೂ ಆತನು ಮಾರ್ಗದರ್ಶಕನಾಗದೆ ಇಲ್ಲ; ನಮ್ಮಲ್ಲಿ ಯಾರೊಬ್ಬರ ಯೋಗಕ್ಷೇಮವನ್ನೂ ಆತನು ವಹಿಸದೆ ಇರುವದಿಲ್ಲ. ಇಂಥ ವಿಶ್ವಕುಟುಂಬಿಯು, ಆ ಅನಂತನು !

"ಭಗವಂತನು ಅನಂತನಾಗಿದ್ದರೆ, ಅನಂತದಯಾಕರನಾಗಿದ್ದರೆ, ನಮ್ಮೆಲ್ಲರಿಗೂ ಸಮನಾಗಿಯೇ ಬುದ್ಧಿಪ್ರೇರಕನಾಗಿ, ನಮ್ಮೆಲ್ಲರ ಯೋಗಕ್ಷೇಮವನ್ನೂ ನೋಡುವವನಾಗಿ, ತನ್ನ ಅನಂತಪ್ರೇಮಪ್ರವಾಹವನ್ನು ನಮ್ಮೆಲ್ಲರಮೇಲೂ ಹರಿಯಿಸುತ್ತಿದ್ದರೆ, ನನಗೇಕೆ ಆತನ ಅನುಗ್ರಹವು ದೊರೆತಿಲ್ಲ? ನನಗೇಕೆ ಈ ಕೊರತೆಗಳು, ಈ ದುಃಖಗಳು, ಈ ಅಜ್ಞಾನದ ಕತ್ತಲೆಯ ಸಂಚಾರಗಳು?" ಎಂದು ಅನೇಕರು

ಕೇಳುವರು. ಇದಕ್ಕೆ ಉತ್ತರವೇನೆಂದರೆ ನಾವು ಈ ಅನಂತನನ್ನು ಗುರುತಿಸಿ ಅರಿತುಕೊಂಡಿರುವದಿಲ್ಲ. ಆತನು ಅನಂತನೇ ಆಗಿದ್ದರೂ ನಮ್ಮಲ್ಲಿ ಪ್ರತಿಯೊಬ್ಬನ ಜೊತೆಯಲ್ಲಿಯೂ ಅನಂತಕಾಲದಿಂದ ಇರುತ್ತಿದ್ದರೂ ನಾವು ಆತನನ್ನು ಗುರುತಿಸುವದಕ್ಕಾಗಿರುವದಿಲ್ಲ. ಒಂದೂರಿನಲ್ಲಿ ಒಬ್ಬ ಅವಿವೇಕಿಯಿದ್ದನು. ಸಾಯಂಕಾಲ ಕೆಲವು ಮುಸಲ್ಮಾನಜನರು ಪ್ರತಿದಿನವೂ ಗುಂಪಾಗಿ ಊರ ಹೊರಕ್ಕೆ ಹೋಗಿ ಬರುತ್ತಿದ್ದದ್ದನ್ನು ಕಂಡು "ನೀವು ಇಷ್ಟು ಹೊತ್ತಿನಲ್ಲಿ ಎಲ್ಲಿಗೆ ಹೋಗಿಬರುತ್ತೀರಿ?" ಎಂದು ಕೇಳಿದನು. ಅವರು "ನಾವು ಹವಾತಿನ್ನುವದಕ್ಕೆ ಹೋಗಿಬರುತ್ತೇವೆ" ಎಂದರು. ಅವನಿಗೆ ಆ ಮಾತಿನ ಅರ್ಥವಾಗಲಿಲ್ಲ. 'ಇವರೆಲ್ಲ ಯಾವದೋ ಒಂದು ರುಚಿಯಾದ ಪದಾರ್ಥವನ್ನು ತಿನ್ನುವದಕ್ಕೆ ಹೋಗುತ್ತಾರೆ; ಆದರೆ ನನ್ನನ್ನು ಜೊತೆಯಲ್ಲಿ ಕರೆದುಕೊಂಡು ಹೋಗುವದಕ್ಕೆ ಒಪ್ಪುತ್ತಾರೋ ಇಲ್ಲವೋ; ಇರಲಿ, ಇವರು ಹೊರಟುಹೋದ ಬಳಿಕ ನಾನೂ ಓಡಿಹೋಗಿ ಇವರು ಏನು ತಿನ್ನುತ್ತಾರೋ ನೋಡಿಬರುವೆನು' ಎಂದುಕೊಂಡು ಆ ದಿನ ಸಾಯಂಕಾಲಕ್ಕೆ ಹಾಗೇ ಮಾಡಿದನು. ದಾರಿಯಲ್ಲಿ ಸಿಕ್ಕಿದ ಒಬ್ಬನನ್ನು "ಅಯ್ಯ, ಹವತಿನ್ನುವದು ಎಲ್ಲಿ?" ಎಂದು ಕೇಳಿದನು. ದಾರಿಹೋಕನು ಇವನ ಮಂಕುತನಕ್ಕೆ ನಕ್ಕು "ಅಯ್ಯೋ ಹುಚ್ಚ ! ಈಗ ನೀನು ತಿನ್ನುತ್ತಿರುವದೇ ಹವ; ಹವ ಎಂದರೆ ಗಾಳಿಯೇ. ಹೀಗೆ ಏದುತ್ತಾ ಓಡಿಬರುತ್ತೀಯಲ್ಲ, ಇನ್ನೂ ಹವ ತಿಂದಂತೆ ಆಗಲಿಲ್ಲವೆ?" ಎಂದು ಬುದ್ಧಿಹೇಳಿದನಂತೆ ! ಇಗೊ, ಆ ಮಂಕನ ಸ್ಥಿತಿಯಾಗಿದೆ, ನಮ್ಮಲ್ಲಿ ಅನೇಕರಿಗೆ. ನಮ್ಮ ಹಿಂದೆ, ಮುಂದೆ, ಎಡಕ್ಕೆ, ಬಲಕ್ಕೆ ಮೇಲೆ, ಕೆಳಗೆ-ಎಲ್ಲೆಲ್ಲಿಯೂ ಇರುವ ಆ ಅನಂತನನ್ನು ನಾವು ಕಾಣದೆ ಇರುತ್ತೇವೆ.

ನಾವು ಈ ಅನಂತನನ್ನು ಕಾಣದೆ ಇರುವದಕ್ಕೆ ನಮ್ಮ ಪ್ರಯತ್ನಹೀನತೆಯೇ ಕಾರಣ. ನಮಗೆ ಪರಿಚ್ಛಿನ್ನವಾದ ವಸ್ತುಗಳಲ್ಲಿಯೇ ಮನಸ್ಸು ನೆಟ್ಟುಕೊಂಡಿರುತ್ತದೆ. ನಾವು ಎಲ್ಲಾ ವ್ಯವಹಾರವನ್ನೂ ಗಾಳಿಬೆಳಕುಗಳ ನಡುವೆ ಇದ್ದುಕೊಂಡೇ ಮಾಡುತ್ತಿದ್ದರೂ ಗಾಳಿಬೆಳಕುಗಳ ಕಡೆಗೆ ಅಷ್ಟು ಮನಸ್ಸು ಹಾಕದೆ ನಮನಮಗೆ ಬೇಕಾಗಿರುವ ವಸ್ತುಗಳನ್ನೇ ನೋಡುತ್ತಿರುವಂತೆ ನಮ್ಮ ಸುತ್ತಲೂ ನಮ್ಮ ವ್ಯವಹಾರಕ್ಕೆಲ್ಲ ನೆರವಾಗಿರುವ ಈ ಅನಂತನನ್ನು ನಾವು ನೋಡದೆಯೇ ವ್ಯವಹರಿಸುತ್ತಿರುವೆವು. ಇದಕ್ಕೇ ಸಂಸಾರವೆಂದು ಹೆಸರು. ನಾವು ನಮ್ಮ ಮನಸ್ಸನ್ನು ಈ ಅನಂತನ ಯೋಚನೆಗೆ ಹರಿಯಬಿಡಬೇಕು. ಆತನ ಕಡೆಗೆ ತಿರುಗಿಸಬೇಕು, ಆತನನ್ನೇ ಧ್ಯಾನಿಸುವ, ಆತನಲ್ಲಿಯೇ ನೆಲೆನಿಂತಿರುವ ಸತ್ಪುರುಷರ ಸಂಗವನ್ನು ಮಾಡಬೇಕು. ಅಂಥ ಜನರ ನಡೆನುಡಿಗಳನ್ನು ನೋಡಬೇಕು, ನಾವೂ ಅವರಂತೆ

ಮಾಡುವದಕ್ಕೆ ಪ್ರಯತ್ನಿಸಬೇಕು. ಈ ಪ್ರಯತ್ನದಿಂದ ಭಗವಂತನು ನಿಜವಾಗಿಯೂ ಅನಂತನು ಎಂಬ ಅರಿವು ನಮ್ಮ ಮನದಲ್ಲಿ ಮೂಡುವದು.

ಹಿಂದಿನ ಕಾಲದಲ್ಲಿ ಜನರು ಇಂಥ ಅಭಿಪ್ರಾಯಗಳನ್ನು ತಮ್ಮ ನಿತ್ಯ ಜೀವನದಲ್ಲಿ ಹಾಸುಹೊಕ್ಕಾಗಿರುವಂತೆ ಮಾಡಿಕೊಂಡಿದ್ದರು. ಇದನ್ನೇ ಒಬ್ಬರಿಗೊಬ್ಬರು ಹೇಳುತ್ತಿದ್ದರು, ಕೇಳುತ್ತಿದ್ದರು. ಉಪನಿಷತ್ತುಗಳನ್ನೇ ನೇರಾಗಿ ಅಧ್ಯಯನಮಾಡಿ ತತ್ತ್ವವಿಚಾರವನ್ನು ಮಾಡುವದು ಎಲ್ಲರಿಗೂ ಸಾಧ್ಯವಿಲ್ಲದಿದ್ದರೂ ಇಂಥ ಅಭಿಪ್ರಾಯವೊಂದನ್ನು ಬಲ್ಲವರಿಂದ ತಿಳಿದುಕೊಂಡು ಈ ಭಾವನೆಯನ್ನೇ ಅಳವಡಿಸಿಕೊಳ್ಳುವದಕ್ಕೆ ಪ್ರಯತ್ನಿಸುವದೇನೂ ಕಷ್ಟವಲ್ಲ. ಆದರೆ ಮನಸ್ಸು ಮಾತ್ರ ಇದರ ಮೇಲೆಯೇ ನಿಲ್ಲಬೇಕು. ಅಷ್ಟೆ. ಪ್ರಕೃತವಾಗಿರುವ ಅನಂತೋಪಾಸನೆಯನ್ನು ಇಷ್ಟವಿದ್ದವರೆಲ್ಲರೂ ಮಾಡುವದಕ್ಕೆ ಬರುವಂತೆ ನಮ್ಮ ಹಿರಿಯರು 'ಅನಂತವ್ರತ' ಎಂಬುದೊಂದು ಅನುಷ್ಠಾನವನ್ನು ಏರ್ಪಡಿಸಿದ್ದರು. ಪ್ರತಿವರ್ಷದ ಭಾದ್ರಪದ ಚತುರ್ದಶಿಯ ದಿನ ಅನಂತನ ಉಪಾಸನೆಯನ್ನು ವಿಶೇಷವಾದ ಉತ್ಸಾಹದಿಂದ ಮಾಡಿ, ವರ್ಷದಲ್ಲೆಲ್ಲ ಅದರ ನೆನಪು ಇರುವದಕ್ಕೆಂದು ಅದರ ಸಂಕೇತವಾಗಿ ಕುಂಕುಮಕೇಸರಿಯಲ್ಲಿ ನೆನಸಿದ ಒಂದು ದಾರವನ್ನು ಕೈಗೆ ಕಟ್ಟಿಕೊಂಡಿರುತ್ತಿದ್ದರು. ಹೊಸ ವರ್ಷವು ಬರುತ್ತಲೂ ಮತ್ತೆ ಅನಂತನನ್ನು ಪೂಜೆಮಾಡಿ ಆ ದಾರವನ್ನು ತೆಗೆದುಹಾಕಿ ಮತ್ತೊಂದು ಹೊಸ ದಾರವನ್ನು ಕಟ್ಟಿಕೊಳ್ಳುತ್ತಿದ್ದರು. ಈ ಪದ್ಧತಿಯು ಈಗಲೂ ಕೆಲವರಲ್ಲಿ ಉಳಿದುಕೊಂಡಿದೆ. ಆದರೆ ಈ ವ್ರತದ ಒಳ ಅರ್ಥವನ್ನು ತಿಳಿಯದೆ ಜನರು ಸುಮ್ಮನೆ ಒಂದು ಕಲಶದ ಪೂಜೆಮಾಡುವದು, ಮಧುರ ಭೋಜನವನ್ನು ಮಾಡುವದು, ಒಂದು ಕೆಂಪು ರೇಶ್ಮೆಯ ದಾರವನ್ನು ಕೈಗೆ ಕಟ್ಟಿಕೊಳ್ಳುವದು–ಇಷ್ಟರಿಂದಲೇ ತೃಪ್ತರಾಗುತ್ತಿದ್ದಾರೆ !

ಅನಂತನ ವ್ರತದ ಕಥೆಯನ್ನು ನೀವೆಲ್ಲರೂ ಕೇಳಿರುತ್ತೀರಿ. ಕೌಂಡಿನ್ಯನ ಪತ್ನಿ ಶೀಲೆ ಎಂಬುವಳು ಯಮುನಾನದಿಯ ತೀರದಲ್ಲಿ ಕೆಲವರು ಸ್ತ್ರೀಯರು ಮಾಡುತ್ತಿದ್ದ ಈ ವ್ರತವನ್ನು ಆಚರಿಸಿದಳು. ಪರಮೇಶ್ವರನ ಅನುಗ್ರಹದಿಂದ ಆ ದಂಪತಿಗಳ ಮನೆಯಲ್ಲಿ ಧನಧಾನ್ಯವು ಸಮೃದ್ಧವಾಯಿತು; ಸಕಲ ಸಂಪತ್ತುಗಳೂ ಒದಗಿದವು. ಆದರೆ ಕೌಂಡಿನ್ಯನು ಇದೆಲ್ಲ ಆ ಅನಂತನ ಅನುಗ್ರಹವೆಂಬುದನ್ನರಿಯದೆ ಹೆಂಡತಿಯ ಕೈಯಲ್ಲಿದ್ದ ಅನಂತನ ದಾರವನ್ನು ಕಿತ್ತುಹಾಕಿದನು. ಪರಮೇಶ್ವರನ ತಿರಸ್ಕಾರದ ಫಲವಾಗಿ ಅವರ ಸಂಪತ್ತೆಲ್ಲವೂ ಮರೆಯಾಯಿತು; ಅವರಿಗೆ ಬಡತನವು ಗಂಟುಬಿತ್ತು. ಕೌಂಡಿನ್ಯನಿಗೆ ಶರೀರದಲ್ಲಿ ಸಹಿಸಲಾರದ ರೋಗವು ಕಾಣಿಸಿಕೊಂಡಿತು, ಮನಸ್ಸಿನಲ್ಲಿ ದುಃಖದಾಯಕವಾದ ಆಲೋಚನೆಗಳು ಹೆಚ್ಚಿದವು,

ನೆಂಟರಿಷ್ಟರೊಡನೆ ಜಗಳವು ಮೊದಲಾಯಿತು. ಕೌಂಡಿನ್ಯನು ಪಶ್ಚಾತ್ತಾಪದಿಂದ ಸರ್ವಾನರ್ಥಗಳಿಗೂ ಮೂಲವು ತನ್ನ ಮನಸ್ಸು ಭಗವಂತನಲ್ಲಿ ಅನಾದರ ಮಾಡಿದ್ದೇ ಎಂದು ನಿಶ್ಚಯಿಸಿ ಕೂಡಲೆ ಆ ಭಗವಂತನನ್ನು ಹೇಗಾದರೂ ಮಾಡಿ ಹುಡುಕಿ ಕಂಡುಕೊಳ್ಳಬೇಕೆಂದು ಹುಚ್ಚನಂತೆ ಕಾಡಿನಲ್ಲೆಲ್ಲ ಅಲೆದಾಡಿದನು. ಅವನ ಮನಸ್ಸಿನಲ್ಲಿ ಅಖಂಡವಾಗಿ ಅನಂತನ ಚಿಂತನೆಯು ಸಾಗಹತ್ತಿತು. "ಅನಂತನನ್ನು ಹೇಗೆ ಕಾಣುವೆನು, ಎಲ್ಲಿ ಕಾಣುವೆನು, ನನಗೆ ಆತನನ್ನು ತೋರಿಸುವವರು ಯಾರು?" ಎಂದು ಹಂಬಲಿಸುತ್ತಾ ಬಳಲಿ ಬೆಂಡಾಗಿ ಅಲ್ಲಲ್ಲಿ ಮೂರ್ಛೆಬಿದ್ದು ಏಳುತ್ತಲೂ 'ಅನಂತ! ಅನಂತ!' ಎಂದು ಆತನ ನಾಮವನ್ನೇ ಕೀರ್ತಿಸುತ್ತಲೂ ಕಂಡಕಂಡಕಡೆಗೆ ಹೋಗುತ್ತಿದ್ದನು, ಕಂಡ ಕಂಡವರನ್ನೆಲ್ಲ 'ಅನಂತನನ್ನು ಕಂಡಿರಾ? ಎಂದು ಕೇಳುತ್ತಿದ್ದನು. ದಾರಿಯಲ್ಲಿ ಮನುಷ್ಯರನ್ನು ಮಾತ್ರವಲ್ಲ, ಮರಗಿಡ, ದನಕರು, ಕೊಳಕಟ್ಟೆ-ಮುಂತಾದವುಗಳನ್ನೆಲ್ಲ ಹುಚ್ಚನಂತೆ 'ಅನಂತನೆಲ್ಲಿದ್ದಾನೆ? ಹೇಳಿ' ಎಂದು ಅಂಗಲಾಚಿ ಬೇಡಿಕೊಳ್ಳುತ್ತಿದ್ದನು. ಕೊನೆಗೆ ಆ ಅನಂತದೇವನು ಕೃಪೆಯಿಂದ ಒಬ್ಬ ಮುದುಕ ಬ್ರಾಹ್ಮಣನ ವೇಷದಿಂದ ಅವನಿಗೆ ಕಾಣಿಸಿಕೊಂಡನು; 'ಇಲ್ಲಿ ಬಾ' ಎಂದು ಕರೆದು ಕೈಹಿಡಿದುಕೊಂಡು ಒಂದು ಗುಹೆಯನ್ನು ಹೊಕ್ಕನು. ಕೌಂಡಿನ್ಯನು ಅಲ್ಲಿ ನೋಡುತ್ತಾನೆ, ಸಗುಣನೂ ಸಾಕಾರನೂ ಆದ ಭಗವಂತನು ಸಿಂಹಾಸನಾರೂಢನಾಗಿ ಕುಳಿತಿದ್ದಾನೆ! ಆ ಭಗವಂತನನ್ನು ಮನದಣಿಯ ಸ್ತೋತ್ರಮಾಡಿದನು. ಆ ಭಗವಂತನು ಅವನನ್ನು ಸಮಾಧಾನಗೊಳಿಸಿ ಮನೆಗೆ ಕಳುಹಿಸಿಕೊಟ್ಟು ಹಿಂದಿನ ಸಕಲ ಸಂಪತ್ತನ್ನೂ ಅನುಗ್ರಹಿಸಿದನು.

ಮೇಲೆ ಕೊಟ್ಟಿರುವ ಸಂಕ್ಷಿಪ್ತಕಥೆಯಿಂದ ತಿಳಿದುಕೊಳ್ಳಬೇಕಾದದ್ದು ಏನೆಂದರೆ, ಅನಂತನನ್ನು ನಾವು ಕಾಣುವದಕ್ಕೆ ಮೊಟ್ಟಮೊದಲು ಬೇಕಾದದ್ದು ಆತನನ್ನೇ ಕಾಣಬೇಕೆಂಬ ಹಂಬಲಿಕೆ, ಈ ಹಂಬಲಿಕೆಯು ಯಾರಲ್ಲಿ ಹಣ್ಣಾಗುವದೋ ಅವರಿಗೆ ಆ ಅನಂತನಾದ ಪರಮೇಶ್ವರನೇ ಯಾವನಾದರೊಬ್ಬ ಸತ್ಪುರುಷನ ಮೂಲಕವಾಗಿ ಉಪದೇಶವನ್ನು ಕೊಟ್ಟು ನಮಗೆ ತನ್ನನ್ನು ಕಾಣುವ ದಿವ್ಯ ದೃಷ್ಟಿಯನ್ನು ಅನುಗ್ರಹಿಸುವನು. ಆದರೆ ಆತನನ್ನು ನಾವು ಕಾಣಬೇಕಾದದ್ದು ಒಂದು ಗುಹೆಯಲ್ಲಿ. ಆ ಗುಹೆಯು ಬಹುದೂರವಿಲ್ಲ; ನಮ್ಮನಮ್ಮೊಳಗೇ ಇರುತ್ತದೆ. ಉಪನಿಷತ್ತಿನಲ್ಲಿ ಹೇಳಿರುವದೇನೆಂದರೆ "ಪರಮಾತ್ಮನು ಸತ್ಯಸ್ವರೂಪನೂ ಜ್ಞಾನ ಸ್ವರೂಪನೂ ಅನಂತನೂ ಆಗಿರುತ್ತಾನೆ; ಯಾವನು ಇಂಥ ಪರಮಾತ್ಮನನ್ನು ತನ್ನ ಹೃದಯಗುಹೆಯಲ್ಲಿಯೇ ಅತ್ಯಂತಪವಿತ್ರವಾದ ಆಕಾಶಸ್ವರೂಪನಾಗಿರುವನೆಂದು ಕಂಡುಕೊಳ್ಳುವನೋ ಅವನಿಗೆ ಸಕಲಕಾಮಗಳೂ ಕೈವಶವಾಗುವವು". ಈ

ಅಭಿಪ್ರಾಯವನ್ನೇ ಮೇಲೆ ವರ್ಣಿಸಿರುವ ಪುರಾಣದ ಕಥೆಯಲ್ಲಿ ಒಂದಾ ನೊಂದು ವೃತ್ತಾಂತದ ರೂಪವನ್ನು ವರ್ಣಿಸಿ ತಿಳಿಸಿರುತ್ತದೆ.

ನಾವು ಅರಿತಿರಲಿ, ಅರಿಯದಿರಲಿ, ನಮ್ಮೆಲ್ಲರ ಯೋಗಕ್ಷೇಮವನ್ನು ಅನಂತನಾದ ಪರಮೇಶ್ವರನೇ ನೋಡಿಕೊಳ್ಳುತ್ತಿದ್ದಾನೆ, ಆತನ ಕಟ್ಟಳೆಯಿಂದಲೇ ನಾವೆಲ್ಲರೂ ನಡೆಯುತ್ತಿರುತ್ತೇವೆ. ಇದನ್ನು ನಾವು ಅರಿತುಕೊಂಡಾಗ ನಿಜವಾಗಿ ಪ್ರಪಂಚದ ಸ್ಥಿತಿಯಲ್ಲಿ ಯಾವ ಹೊಸ ಬದಲಾವಣೆಯೂ ಆಗುವದಿಲ್ಲ. ಈಗ ಇರುವದು ಯಾವದೂ ಇಲ್ಲವಾಗುವದಿಲ್ಲ. ಈಗ ಇಲ್ಲದ್ದು ಯಾವದೂ ನಮಗೆ ಪ್ರಾಪ್ತ ವಾಗುವದಿಲ್ಲ; ಎಂದೆಂದಿಗೂ ಇದ್ದುಕೊಂಡೇ ಇರುವ ಪರಮಾತ್ಮನ ನಿತ್ಯ ಸಂಬಂಧದ ಅರಿವು ಆಗ ನಮಗೆ ಆಗುತ್ತದೆ. ಅಷ್ಟೆ. ಪರಮಾರ್ಥವೇನೆಂದರೆ ನಮ್ಮಲ್ಲಿ ಯಾವದೊಂದು ಬಡತನವೂ ನಿಜವಾಗಿರುವದಿಲ್ಲ; ಯಾವದೊಂದ ಕ್ಕಾಗಿಯೂ ನಾವು ದೇಹವನ್ನು ದಂಡಿಸಿ ಆಯಾಸಪಡಬೇಕಾದದ್ದು ಇಲ್ಲ. ಯಾವದೊಂದರ ನಾಶದ ನಿಮಿತ್ತದಿಂದ ಅಳಬೇಕಾದದ್ದೂ ಇಲ್ಲ, ಯಾವದೊಂದ ಕ್ಕಾಗಿ ಅಂಜಬೇಕಾದದ್ದೂ ಇರುವದಿಲ್ಲ. ಸುಖವೂ ಶಾಂತಿಯೂ ನಮಗೆ ನಿತ್ಯ ಸಿದ್ಧವಾಗಿಯೇ ಇರುತ್ತದೆ. ಆ ನಿತ್ಯಸುಖರೂಪನಾದ ನಿತ್ಯಶಾಂತಿರೂಪನಾದ ಅನಂತನನ್ನು ಕಂಡುಕೊಂಡೊಡನೆ ನಾವೆಲ್ಲರೂ ಇದನ್ನು ಮನಗಾಣುವೆವು.

ಅನಂತನಾಗಿರುವ ಪರಮೇಶ್ವರನಿಗೂ ನಮಗೂ ಇರುವ ನಿತ್ಯಸಂಬಂಧವನ್ನು ಅರಿತುಕೊಳ್ಳುವದು ನಮಗೆಲ್ಲರಿಗೂ ತಟ್ಟನೆ ಸಾಧ್ಯವಾಗುವಹಾಗಿಲ್ಲ. ಅದಕ್ಕಾಗಿ ನಾವು ಈಗಿನಿಂದ ಪ್ರಯತ್ನಮಾಡಬೇಕು. ಮೊಟ್ಟಮೊದಲು ಅನಂತನಾದ ಆ ಭಗವಂತನ ಕಡೆಗೆ ತಿರುಗುವೆನೆಂದು ಸಂಕಲ್ಪಮಾಡಿಕೊಳ್ಳಬೇಕು. ಆ ಪರಮೇಶ್ವರನ ಭಕ್ತರಾದವರ ಸಂಗವನ್ನು ಮಾಡಬೇಕು. ಆತನ ಅನಂತವಾದ ಕಲ್ಯಾಣಗುಣಗಳಲ್ಲಿ ಕೆಲವನ್ನಾದರೂ ಮನಮುಟ್ಟಿ ಕೇಳಿ ನಮ್ಮ ಕೈಯಲ್ಲಾದಮಟ್ಟಿಗೆ ಅವುಗಳ ತಿಳಿವಳಿಕೆ ಯನ್ನು ಸಂಪಾದಿಸಿಕೊಳ್ಳಬೇಕು. ನಡತೆಯಲ್ಲಿ ಪರಿಚ್ಛೇದಬುದ್ಧಿಯನ್ನು ಕೊಡುವ-ಒಬ್ಬೊಬ್ಬರೂ ಬೇರೆ ಬೇರೆಯೆಂದು ತಿಳಿದು ಒಬ್ಬರನ್ನೊಬ್ಬರು ಸಂಶಯ, ಹೊಟ್ಟೆ ಕಿಚ್ಚು, ಕರುಬುತನ, ಹಗೆತನ-ಮುಂತಾದ ಭಾವಗಳಿಂದ ಕಾಣುವ ದುರಭ್ಯಾಸ ಗಳನ್ನು ಬಿಡಬೇಕು. ಎಲ್ಲರಲ್ಲಿಯೂ ಒಬ್ಬನೇ ಅನಂತನಾದ ಭಗವಂತನು ಇರುವ ನೆಂಬುದನ್ನು ಮನಸ್ಸಿಗೆ ತಂದುಕೊಳ್ಳುತ್ತಾ ಸ್ವಾರ್ಥತ್ಯಾಗಪೂರ್ವಕವಾಗಿ ಪರಸ್ಪರ ಪ್ರೇಮದಿಂದ ಕಾಲವನ್ನು ಕಳೆಯುವ ಕ್ರಮವನ್ನು ಅಭ್ಯಾಸಮಾಡಿಕೊಳ್ಳಬೇಕು. ಈ ಅಭ್ಯಾಸವು ಅಳವಡುವದಕ್ಕೆ ಸಹಾಯಕವಾಗಿ ಆತನ ನಾಮವನ್ನು ಬಿಡದೆ ಉಚ್ಚರಿಸುತ್ತಲೂ ಗಾನಮಾಡುತ್ತಲೂ ಇರಬೇಕು.

ಅನಂತಾನಂದಸಾಗರನಾಗಿರುವ ಪರಮೇಶ್ವರನ ಸಂಬಂಧವನ್ನು ನೇರಾಗಿ ಮನಗಾಣಬೇಕೆಂದು ನಿಮಗೆ ಅಭಿಲಾಷೆಯಿದ್ದರೆ ಈಗಲೇ ಒಂದು ಶುಭ ಮುಹೂರ್ತದಲ್ಲಿ 'ಇನ್ನುಮೇಲೆ ನಾನು ಅನಂತನ ವ್ರತದಲ್ಲಿರುವೆನು' ಎಂದು ಸಂಕಲ್ಪಿಸಿಕೊಳ್ಳಿರಿ. ಭಾದ್ರಪದ ಚತುರ್ದಶಿಯ ದಿನ ಅನಂತನ ವ್ರತವನ್ನು ಮಾಡುವ ಪದ್ಧತಿಯಿರುವವರು ಆ ದಿನವನ್ನೇ ಸಂಕಲ್ಪಕ್ಕೆ ಉಪಯೋಗಿಸಿಕೊಳ್ಳ ಬಹುದು. ಆ ಪದ್ಧತಿಯಿಲ್ಲದಿದ್ದರೂ ನಿಮಗೆ ಎಂದು ಅನಂತನನ್ನು ಕಾಣಬೇಕೆಂಬ ಅಭಿಲಾಷೆಯು ಉಂಟಾಯಿತೋ ಅಂದೇ ಈ ಸಂಕಲ್ಪವನ್ನು ಮಾಡಿಕೊಳ್ಳ ಬಹುದು. ಆತನು ಅನಂತನು, ಯಾವದೊಂದು ಕಾಲದ ಕಟ್ಟಿಗೂ ಸಿಕ್ಕದವನು; ಅವನ ಸಂಬಂಧದಿಂದ ಎಲ್ಲಾ ಕಾಲವೂ ಮಂಗಲಕರವಾಗಿರುವದು. ಪರಿಚ್ಛೇದ ಬುದ್ಧಿಯನ್ನು-ನಾನೇ ಬೇರೆ, ನನ್ನ ಸ್ವಾರ್ಥವೇ ನಡೆಯಬೇಕು ಎಂಬ ಕೀಳು ಬುದ್ಧಿಯನ್ನು-ಬಿಟ್ಟು ಎಲ್ಲರಲ್ಲಿಯೂ ಇದ್ದುಕೊಂದು ತನ್ನ ಪ್ರೇಮಸೂತ್ರದಿಂದ ಒಂದುಗೂಡಿಸಬಲ್ಲ ಆ ಅನಂತನ ಸೇವೆಗಾಗಿ ಕಂಕಣವನ್ನು ಕಟ್ಟಿಕೊಳ್ಳಿರಿ. ಕೈಗೆ ಅನಂತನ ದಾರವನ್ನು ಕಟ್ಟಿಕೊಳ್ಳಿರಿ, ಅಥವಾ ಬಿಡಿರಿ, ಮನಸ್ಸಿನಲ್ಲಿ "ಎಲ್ಲರನ್ನೂ ಪ್ರೇಮದಿಂದ ಕಾಣವೆನು, ಯಾರೊಬ್ಬರನ್ನೂ ಅನಾದರದಿಂದ ಕಾಣುವದಿಲ್ಲ; ಕಷ್ಟದಲ್ಲಿರುವ, ಅಥವಾ ನನ್ನ ಸಹಾಯವು ಅವಶ್ಯವೆಂದು ತೋರುವ, ಎಲ್ಲರಿಗೂ ನನ್ನ ಕೈಯಲ್ಲಾದ ಸೇವೆಯನ್ನು ಸಲ್ಲಿಸುವೆನು. ಅನಂತದೇವನೆ, ನಿನ್ನ ಅನುಗ್ರಹವು ನನ್ನ ಮೇಲೆ ಇರಲಿ! ನನ್ನಿಂದ ನಿನ್ನ ಸೇವೆಯನ್ನು ಮಾಡಿಸಿಕೊ !" ಎಂದು ಮನಃಪೂರ್ವಕವಾಗಿ ಪ್ರಾರ್ಥಿಸಿಕೊಳ್ಳಿರಿ.

## 15. ಪರಮಾರ್ಥ

ವೇದದಲ್ಲಿ ಕಾಣುವ ಮಂತ್ರಗಳು ಪರಮಾರ್ಥವನ್ನು ಉತ್ತಮರೀತಿಯಲ್ಲಿ ಸಂಗ್ರಹವಾಗಿ ತಿಳಿಸಿರುತ್ತವೆ. ಮಂತ್ರಗಳನ್ನು ಕೆಲಕೆಲ ಋಷಿಗಳ ಹೆಸರಿನಲ್ಲಿ ಪ್ರಕಟಿಸಿದೆ. ಆ ಋಷಿಗಳು ಮಂತ್ರವನ್ನು ತಾವೇ ರಚಿಸಿಲ್ಲವೆಂತಲೂ ಸಮಾಹಿತ ಚಿತ್ತರಾಗಿದ್ದಾಗ ಅವನ್ನು ಅವರು ಕಂಡುಹಿಡಿದರೆಂದೂ ಸನಾತನಧರ್ಮದವರು ಹೇಳುತ್ತಾರೆ. ಈ ವಿಷಯವನ್ನು ವಾದದಿಂದ ನಿರ್ಣಯಿಸುವದಕ್ಕಾಗುವದಿಲ್ಲ. ಆದರೆ ಅಧ್ಯಾತ್ಮತತ್ತ್ವಗಳ ಅನ್ವೇಷಣೆಮಾಡುವ ಕ್ರಮವನ್ನು ಅನುಸರಿಸಿದರೆ ನಾವುಗಳೂ ಈಗಲೂ ನಿಜವನ್ನು ಮನಗಾಣಬಹುದು.

'**ಋಷಿ**' ಎಂಬ ಮಾತಿಗೇ 'ಕಂಡುಹಿಡಿದವನು' ಎಂದು ಅರ್ಥ. ವೇದ ಮಂತ್ರಕ್ಕೂ ಋಷಿ ಎಂಬ ಶಬ್ದವನ್ನು ಕೆಲವು ಕಡೆಗಳಲ್ಲಿ ಉಪಯೋಗಿಸಿರುತ್ತಾರೆ.

ಏಕೆಂದರೆ ವೇದದಲ್ಲಿರುವ ಮಂತ್ರವು ತತ್ತ್ವದರ್ಶನದ ಅನುಭವವನ್ನೇ ಹಾಡಿ ಹೊಗಳುತ್ತದೆ. ಆದ್ದರಿಂದ ಋಷಿ ಎಂಬುದು ಯಾವನೋ ಒಬ್ಬ ವ್ಯಕ್ತಿಯ ಹೆಸರೆಂದೂ ಮಂತ್ರವೆಂಬುದು ಆತನು ರಚಿಸಿದ ಒಂದಾನೊಂದು ಪುರಾತನ ಭಾಷೆಯ ಪದ್ಯವೆಂದೂ ಭಾವಿಸುವವರಿಗೆ ತತ್ತ್ವವು ಸಿಕ್ಕಲಾರದು. ಋಷಿ ಎಂದರೆ ತತ್ತ್ವವನ್ನು ಕಾಣುವ ಮಟ್ಟಕ್ಕೆ ಚಿತ್ತವನ್ನು ಏರಿಸಿಕೊಂಡವನು. ಈ ಅರ್ಥದಲ್ಲಿ ಋಷಿಗಳು ಇಲ್ಲದ ಕಾಲವೇ ಇಲ್ಲ. ಯಾರುಯಾರು ತತ್ತ್ವವನ್ನು ಕಾಣುವ ಒಳಗಣ್ಣನ್ನು ತೆರೆದುಕೊಂಡು ನೋಡಿ ಪರಮಾರ್ಥವನ್ನು ಇದ್ದದ್ದು ಇದ್ದಂತೆ ಕಂಡುಕೊಳ್ಳುವರೋ ಅವರೆಲ್ಲ ಋಷಿಗಳೇ. ಋಷಿಗಳು ಸಮಾಹಿತಚಿತ್ತರಾಗಿ ಕಂಡು ಹಿಡಿದ ಅಧ್ಯಾತ್ಮತತ್ತ್ವವು ಅವರ ಅಮೃತವಾಣಿಯಿಂದ ಮಂತ್ರರೂಪವಾಗಿ ಹೊರಟುಬಂದಿರುತ್ತದೆ. ಈ ಮಂತ್ರವು ಪರಮಾತ್ಮನ ಹೊರಮ್ಮೆಯಾಗಿದೆ ಎಂಬ ಕಾರಣದಿಂದ ಅದನ್ನು ಶಬ್ದಬ್ರಹ್ಮ ಎನ್ನುವರು.

ನಾನು ಮೇಲೆ ಹೊರಪಡಿಸಿರುವ ಅಭಿಪ್ರಾಯವನ್ನು ಓದುಗರಿಗೆ ಮನವರಿಕೆ ಮಾಡಿಕೊಳ್ಳುವದಕ್ಕೆ ಕೃಷ್ಣಯಜುರ್ವೇದಕ್ಕೆ ಸೇರಿದ ತೈತ್ತಿರೀಯೋಪನಿಷತ್ತಿನಲ್ಲಿ ಕೇಳಬರುವ ಒಂದು ಮಂತ್ರದ ಅಭಿಪ್ರಾಯವನ್ನು ಈ ಕೆಳಗೆ ಬರೆಯುವೆನು:

**ಸತ್ಯವೂ ಜ್ಞಾನವೂ ಅನಂತವೂ ಆದ ಬ್ರಹ್ಮವು ಗುಹೆಯಲ್ಲಿ ಪರಮಾಕಾಶದಲ್ಲಿ ನಿಹಿತವಾಗಿರುವದೆಂದು ಯಾವನು ಅರಿತುಕೊಳ್ಳುವನೋ ಅವನು ಸರ್ವಕಾಮಗಳನ್ನೂ ಒಟ್ಟಿಗೆಯಾಗಿ ಬ್ರಹ್ಮರೂಪದಿಂದ ಪಡೆದುಕೊಳ್ಳುವನು.**

ಈ ಮಂತ್ರವನ್ನು ಸಂಸ್ಕೃತಭಾಷೆಯಲ್ಲಿರುವಂತೆಯೇ ಕೆಲವರು ಈಗಲೂ ಪಠಿಸುತ್ತಿರುತ್ತಾರೆ. ಆದರೆ ಬರಿಯ ಬಾಯಿಪಾಠದಿಂದ ಈ ಮಂತ್ರದ ಪ್ರಯೋಜನವು ನಮಗೆ ದೊರೆಯಲಾರದು. ಯಾವದಾದರೊಂದು ಪದ್ಯವನ್ನು ಓದಿ ಪದಚ್ಛೇದ, ಪದಾರ್ಥಕಥನ, ಅನ್ವಯಜ್ಞಾನ, ತಾತ್ಪರ್ಯವನ್ನು ತಿಳಿದುಕೊಳ್ಳುವದು–ಮುಂತಾದ ರೀತಿಯಲ್ಲಿ ತಿಳಿದುಕೊಳ್ಳುವಂತೆ ಈ ಮಂತ್ರವನ್ನು ಬಿಡಿಬಿಡಿಸಿ ನೋಡಿದರೂ ಅದರ ಅರ್ಥವು ನಮಗೆ ಅಷ್ಟಾಗಿ ತಿಳಿಯಬರಲಾರದು. **'ಮಂತ್ರವು ಮನನ ಮಾಡಿದವರನ್ನು ಕಾಪಾಡುತ್ತದೆ'** ಎಂದು ಕೆಲವರು ಹೇಳುತ್ತಾರೆ. ಅದು ನಿಜ. ಆದರೆ ಇಲ್ಲಿ ಮನನವೆಂದರೆ ಅಭಿಪ್ರಾಯವನ್ನು **ತರ್ಕಕ್ಕೆ ಹೊಂದಿಸುವದಲ್ಲ, ಅನುಭವಕ್ಕೆ ತಂದುಕೊಳ್ಳುವದು** ಎಂಬುದನ್ನು ನೆನಪಿನಲ್ಲಿಡಬೇಕು.

ಪರಮಾತ್ಮನಲ್ಲಿಯೇ ನೆಟ್ಟಮನಸ್ಸಿನಿಂದ ಋಷಿಗಳು ತಮ್ಮೊಳಗೇ ಆಳವಾಗಿ ಹೊಕ್ಕು ಪರಮಾರ್ಥವನ್ನು ಕಂಡುಕೊಂಡರು. ಈಗಲೂ ನಾವುಗಳೂ ಹಾಗೆಯೇ ಅವರ ಮಾರ್ಗವನ್ನೇ ಅನುಸರಿಸಿ ನಮ್ಮನಮ್ಮೊಳಗೇ ಅದನ್ನು ಕಂಡುಕೊಳ್ಳಬೇಕು.

ಆ ಮಾರ್ಗವು ಒಂದು ದೃಷ್ಟಿಯಿಂದ ಬಹುಕಷ್ಟದಿಂದ ಸಿಕ್ಕತಕ್ಕದ್ದಾಗಿರುತ್ತದೆ; ಇನ್ನೊಂದು ದೃಷ್ಟಿಯಿಂದ ಬಹಳ ಸುಲಭವಾಗಿ ದೊರೆಯುತ್ತದೆ. **ಶಬ್ದಶಬ್ದಾರ್ಥ ಗಳನ್ನು ಕೋಶ, ವ್ಯಾಕರಣ, ನಿರುಕ್ತ-ಮುಂತಾದವುಗಳ ಸಹಾಯದಿಂದ ತಡಕಾಡಿದರೆ ಅದು ದೊರೆಯುವದಿಲ್ಲ. ಶಬ್ದ ಜಾಲವು ಒಂದು ದೊಡ್ಡ ಕಾಡು, ಅದು ಚಿತ್ತದ ಭ್ರಮಣಕ್ಕೆ ಕಾರಣವಾಗುತ್ತದೆ**-ಎಂದು ದೊಡ್ಡವರು ಎಚ್ಚರಿಕೆ ಕೊಟ್ಟಿರುತ್ತಾರೆ. ಒಳ್ಳೆಯ ಭಾಷಣಕಾರರು, ಒಳ್ಳೆಯ ಗ್ರಂಥಕರ್ತರು-ಎನ್ನಿಸಿ ಕೊಳ್ಳಬೇಕೆಂದು ಹಾತುವರಿಯುವವರು ಶಬ್ದ, ಅರ್ಥ, ಗುಣ, ಅಲಂಕಾರ-ಮುಂತಾದವುಗಳನ್ನು ಹುಡುಕುವದು ಯುಕ್ತವೇ ಸರಿ. ಆದರೆ ಪರಮಾರ್ಥವಾದ ನಿಜವು ಬೇಕೆನ್ನುವವರು ಆ ಕಾಡಿನೊಳಗೆ ಹೊಗತಕ್ಕದ್ದಲ್ಲ. ಇದರಂತೆ ಶಬ್ದಗಳನ್ನು ಉಪಯೋಗಿಸುವದಕ್ಕೆ ಮೂಲಕಾರಣವಾಗಿರುವ ಪ್ರತ್ಯಯಗಳ ಸ್ವರೂಪ, ಬೆಳವಣಿಗೆ ಮುಂತಾದವುಗಳನ್ನು ನಿಟ್ಟಿಸಿನೋಡಿ ವಿಚಾರದ ನಿಯಮಗಳನ್ನು ಅರಿತುಕೊಳ್ಳುವದರಿಂದಲೂ ಈ ಋಷಿಗಳ ಮಾರ್ಗವು ದೊರೆಯುವದಿಲ್ಲ. ವ್ಯವಹಾರದಲ್ಲಿ ವಸ್ತುಗಳ ತಿಳಿವಳಿಕೆಯನ್ನು ಸಂಪಾದಿಸಿಕೊಂಡು ಬಳಸಿಕೊಳ್ಳು ವದಕ್ಕೆ ಈ ಪ್ರತ್ಯಯಗಳ ಜ್ಞಾನವು ಬಹಳ ಸಹಾಯಕವಾಗಿರುವದೆಂಬುದರಲ್ಲಿ ಸಂಶಯವಿಲ್ಲ. ಹೊರಗಿನ ಪ್ರಪಂಚದಲ್ಲಿರುವ ದೃಶ್ಯಗಳ ಸ್ವಭಾವವು ಕೆಲವು ಸಾಮಾನ್ಯನಿಯಮಗಳಿಗೆ ಒಳಪಟ್ಟಿರುವದರಿಂದ ಅದನ್ನು ಕೆಲವು ಸಾಮಾನ್ಯ ಪ್ರತ್ಯಯಗಳಿಂದಲೇ ನಾವು ನೆನಪಿನಲ್ಲಿಟ್ಟುಕೊಳ್ಳುವದು ಸುಲಭೋಪಾಯವು. ವಸ್ತುಶಾಸ್ತ್ರ, ಶಕ್ತಿಶಾಸ್ತ್ರ, ವನಸ್ಪತಿಶಾಸ್ತ್ರ, ಖನಿಜಶಾಸ್ತ್ರ-ಮುಂತಾದವುಗಳೆಲ್ಲ ಹೀಗೆ ಸಾಮಾನ್ಯನಿಯಮಗಳನ್ನು ಸಾಮಾನ್ಯಪ್ರತ್ಯಯಗಳ ಮೂಲಕ ಗ್ರಹಿಸಿಕೊಳ್ಳುವದ ರಿಂದಲೇ ಏರ್ಪಟ್ಟಿವೆ. ಇದರಂತೆ ನಮ್ಮ ಮನಸ್ಸಿನ ಸ್ವಭಾವವನ್ನೂ ಮನಸ್ಸಿನಲ್ಲಿ ಆಗುವ ವಿಚಾರಗಳ ಸ್ವಭಾವವನ್ನೂ ಕೆಲವು ಸಾಮಾನ್ಯನಿಯಮಗಳ ಜ್ಞಾನ ದಿಂದಲೇ ಅರಿತು ಉಪಯೋಗಿಸಿಕೊಳ್ಳಬೇಕಾಗಿದೆ. ಮನಃಶಾಸ್ತ್ರ, ನೀತಿಶಾಸ್ತ್ರ, ತರ್ಕಶಾಸ್ತ್ರ-ಇವೆಲ್ಲ ಮನಸ್ಸಿನ ಸ್ವಭಾವವನ್ನು ಕೆಲವು ಪ್ರತ್ಯಯಗಳ ಮೂಲಕ ಗ್ರಹಿಸಿಟ್ಟುಕೊಂಡಿರುವದರಿಂದಲೇ ಏರ್ಪಟ್ಟಿವೆ. ಆದರೆ ತತ್ತ್ವದರ್ಶನಕ್ಕೆ ಈ ಕ್ರಮವನ್ನುಪಯೋಗಿಸಿದರೆ ಇಲ್ಲಿಯೂ ಒಂದು ದೊಡ್ಡಕಾಡಿನಲ್ಲಿ ಹೊಕ್ಕಂತೆಯೇ ಆಗುವದು. ಶಾಸ್ತ್ರಜ್ಞರು, ವಿದ್ವಾಂಸರು, ವಿಷಯ ಶೋಧಕರು, ವಿಮರ್ಶಕರು-ಎನ್ನಿಸಿಕೊಳ್ಳಬೇಕೆಂದು ಹಾತುವರಿಯುವವರು ಪ್ರತ್ಯಯ, ಅಭಿಪ್ರಾಯ, ಹೇತು, ಸಾಧ್ಯ, ಪಕ್ಷ, ನ್ಯಾಯ-ಮುಂತಾದವುಗಳನ್ನು ಹುಡುಕಿನೋಡುವದು ಯುಕ್ತವೇ ಸರಿ; ಆದರೆ ಪರಮಾರ್ಥದ ಅನುಭವವು ಬೇಕೆನ್ನುವವರು ಈ ಕಗ್ಗತ್ತಲೆಯ ಕಾಡಿನೊಳಗೆ ಹೊಗತಕ್ಕದ್ದಲ್ಲ.

ಶಬ್ದಗಳ ಕಾಡನ್ನಾಗಲಿ ಪ್ರತ್ಯಯಗಳ ಕಾಡನ್ನಾಗಲಿ ಹೊಗದೆ ಯಾವ ವ್ಯವಹಾರವು ತಾನೆ ಸಾಗೀತು? ಪ್ರಕೃತವಾಗಿರುವ ಪರಮಾರ್ಥತತ್ತ್ವವನ್ನು ಕಂಡುಕೊಂಡ ಋಷಿಗಳಾದರೂ ಕೆಲವು ಪ್ರತ್ಯಯಗಳನ್ನು ಸೇರಿಸಿಕೊಳ್ಳದೆ ತಮ್ಮ ಅಭಿಪ್ರಾಯವನ್ನು ಮಾಡಿಕೊಂಡರೆ? ಕೆಲವು ಶಬ್ದಗಳನ್ನು ಉಪಯೋಗಿಸಿಕೊಳ್ಳದೆ ಆ ಅಭಿಪ್ರಾಯವನ್ನು ತಿಳಿಸಿದರೆ?–ಎಂದು ಯಾರಾದರೂ ಕೇಳಬಹುದು. ಇದಕ್ಕೆ ಉತ್ತರವೇನೆಂದರೆ, ಶಬ್ದಪ್ರತ್ಯಯಗಳನ್ನು ವ್ಯವಹಾರದಲ್ಲಿ ಉಪಯೋಗಿಸುವದರಲ್ಲಿ ಯಾವ ದೋಷವೂ ಇಲ್ಲ; ಆದರೆ ಪರಮಾರ್ಥತತ್ತ್ವವನ್ನು ಕಂಡುಕೊಳ್ಳುವದಕ್ಕೆ, ಅದನ್ನು ಮುಟ್ಟಿ ಅನುಭವಕ್ಕೆ ತಂದುಕೊಳ್ಳುವದಕ್ಕೆ ಶಬ್ದಪ್ರತ್ಯಯಗಳ ವಿಚಾರವು ಉಪಯೋಗಕರವಲ್ಲ, ಅದು ಅಡ್ಡಿಯೂ ಆಗುತ್ತದೆ. **ಅದಕ್ಕೆ ಭಾವನೆ ಎಂಬ ಮತ್ತೊಂದು ಸಾಧನವು ಬೇಕಾಗುತ್ತದೆ.** ಆ ಸಾಧನವನ್ನು ಉಪಯೋಗಿಸಿಕೊಂಡರೆ ಋಷಿಗಳ ಮಾರ್ಗವು ಬಹಳ ಸುಲಭವಾಗಿ ನಮಗೆ ದೊರಕುತ್ತದೆ. ಇದನ್ನು ತಿಳಿಸುವ ಒಂದು ವಾಕ್ಯವನ್ನು ಅಧ್ಯಾತ್ಮರಾಮಾಯಣದಿಂದ ಉದಾಹರಿಸುವೆನು. ಅಲ್ಲಿ ಶ್ರೀರಾಮನು ಹೇಳಿರುತ್ತಾನೇನೆಂದರೆ

**ಮದ್ಭಕ್ತಿವಿಮುಖಾನಾಂ ಹಿ ಶಾಸ್ತ್ರಗರ್ತೇಷು ಮುಹ್ಯತಾಮ್ ।**
**ನ ಜ್ಞಾನಂ ನ ಚ ಮೋಕ್ಷಃ ಸ್ಯಾತ್ ತೇಷಾಂ ಜನ್ಮಶತೈರಪಿ ॥** –ಶ್ರೀರಾಮಹೃದಯ

**"ನನ್ನ ಭಕ್ತಿಯಿಂದ ಹಿಮ್ಮೆಟ್ಟಿರುವವರಿಗೆ, ಶಾಸ್ತ್ರದ ಗುಂಡಿಗಳಲ್ಲಿ ಬಿದ್ದು ತಡಕಾಡುತ್ತಿರುವವರಲ್ಲ ಅಂಥವರಿಗೆ, ನೂರು ಜನ್ಮಗಳಾದರೂ ಜ್ಞಾನವೂ ಆಗುವದಿಲ್ಲ, ಮೋಕ್ಷವೂ ಆಗುವದಿಲ್ಲ"**

ಋಷಿಗಳಿಗೆ ಪರಮಾತ್ಮನ ಇರುವಿಕೆಯಲ್ಲಿ ಅಲುಗಾಡದ ಭದ್ರವಾದ ವಿಶ್ವಾಸ ವಿತ್ತು; ಅವರಿಗೆ ಆತನಲ್ಲಿ ಮಿಗಿಲಿಲ್ಲದ ಪ್ರೇಮವಿತ್ತು. ಆದ್ದರಿಂದ ಅವರು ಶಾಸ್ತ್ರದ ಗುಂಡಿಗಳಲ್ಲಿ ಬೀಳಲಿಲ್ಲ; ಶಬ್ದಗಳ ಕಾಡಿನೊಳಗಾಗಲಿ ಪ್ರತ್ಯಯಗಳ ಕಾಡಿನೊಳ ಗಾಗಲಿ ಪ್ರವೇಶಿಸಲಿಲ್ಲ. ಪರಮಾತ್ಮನಲ್ಲಿಯೇ ಇರುವ ಅನನ್ಯಪ್ರೇಮದಿಂದ ಅವರು ಆತನೇ ತಮಗೆ ಬೇಕೆಂದು ಕಾತರರಾಗಿ ಹುಡುಕುತ್ತಿದ್ದರು. ಅವರಿಗೆ ಪರಮಾತ್ಮನು ತನ್ನ ನಿಜವನ್ನು ಬಹಳ ಸುಲಭವಾಗಿ ಅವರು ಇದ್ದಲ್ಲಿಯೇ ತಿಳಿಸಿಕೊಟ್ಟನು. ಈಗಲೂ ನಾವುಗಳು ಈ ಭಕ್ತಿಭಾವದ ಮಾರ್ಗವನ್ನು ಹಿಡಿಯಬೇಕು. ಇದನ್ನು ಅನುಸರಿಸುವದೇನೂ ಕಷ್ಟವಲ್ಲ; ಶಾಸ್ತ್ರಗಳ ತಿಳಿವಳಿಕೆಯನ್ನು ಸಂಪಾದಿಸುವಷ್ಟು ಕಷ್ಟವು ಅವುಗಳಲ್ಲಿ ಯಾವದೂ ಇಲ್ಲ. ಸ್ವಭಾವದಿಂದಲೇ ಮಾನವಸಾಮಾನ್ಯಕ್ಕೆ ಈಶ್ವರನ ವರವಾಗಿ ಬಂದಿರುವ ಪ್ರೇಮವೆಂಬ ಭಾವವನ್ನು ಉಪಯೋಗಿಸಿ ಕೊಂಡು ಪರಮಾತ್ಮನಲ್ಲಿಯೇ ಆ ಪ್ರೇಮವನ್ನು ಇಡಬೇಕು. ಹೊರಗಿನ ವಿಷಯ ಗಳಲ್ಲಿ ಎಡೆಬಿಡದೆ ನಾವು ಮಾಡುತ್ತಿರುವ ಪ್ರೇಮವನ್ನು ಪರಮಾತ್ಮನ ಪ್ರಾಪ್ತಿಗಾಗಿ

ಆತನ ಕಡೆಗೆ ತಿರುಗಿಸುವದಕ್ಕೆ ಪ್ರಯತ್ನಿಸಬೇಕು. ಅಷ್ಟುಮಾತ್ರದಿಂದ, ಕಿಟಕಿಯಿಂದ ಹೊರಕ್ಕೆ ನೋಡಿದ ಮಾತ್ರದಿಂದ ವಸ್ತುಗಳು ಕಾಣಿಸುವಂತೆ, ಕಣ್ಣುಬಿಟ್ಟಮಾತ್ರದಿಂದ ವಸ್ತುಗಳ ಆಕಾರವೂ ಬಣ್ಣವೂ ನಮಗೆ ತಿಳಿದುಬಿಡುವಂತೆ, ಪರಮಾರ್ಥವಾದ ಪರಮಾತ್ಮನ ತತ್ತ್ವವು ನಮಗೆ ತಿಳಿದುಬಿಡುತ್ತದೆ. ಋಷಿಗಳು, ಪರಮಾರ್ಥವನ್ನು ಕಂಡುಹಿಡಿದ ಮಹನೀಯರು, ತಮ್ಮ ಅಂತಃಕರಣದಲ್ಲಿ ಒಂದಾನೊಂದು ಸಂಸ್ಕಾರವನ್ನು ಮಾಡಿಕೊಂಡು, ಈ ಭಕ್ತಿಯ ಮಾರ್ಗದಿಂದ ನೋಡಿ ತತ್ತ್ವವನ್ನು ಕಂಡುಕೊಂಡರು; ಅದರಿಂದಾದ ಆನಂದದಿಂದ ನಲಿದಾಡಿದರು; ತಮ್ಮ ಆನಂದ ವನ್ನು ಮಿಕ್ಕ ಮಾನವರಿಗೂ ತಮ್ಮ ಅಮೃತವಾಣಿಯಿಂದ ಸಾರಿದರು. ಅಂಥ ವಾಕ್ಯದಲ್ಲಿ ಒಂದನ್ನೇ ನಾನು ಮೇಲೆ ಉಪನಿಷದ್ವಾಕ್ಯವೆಂದು ಉದಾಹರಿಸಿರುವದು. ಅದರ ಅಭಿಪ್ರಾಯವನ್ನು ಕಾಣುವದಕ್ಕೆ ನಾವುಗಳೂ ಈ ಮಾರ್ಗವನ್ನೇ ಉಪ ಯೋಗಿಸಬೇಕು. ನಮ್ಮ ಅಂತಃಕರಣದಲ್ಲಿಯೂ ಪರಮಾತ್ಮನನ್ನು ಕಂಡುಕೊಳ್ಳು ವದಕ್ಕೆ ತಕ್ಕ ಯೋಗ್ಯತೆಯನ್ನು ಕೊಡುವ ಸಂಸ್ಕಾರವನ್ನು ಮಾಡಿಕೊಳ್ಳಬೇಕು; ಪರಮಾತ್ಮನ ಭಕ್ತಿ ಎಂಬ ಭಾವನೆಯನ್ನು ಬಲಿಸಿಕೊಳ್ಳಬೇಕು. ಆಗ ನಮಗೂ ತತ್ತ್ವವು ಕಾಣುವದು, ಅದರ ಆನಂದವು ದೊರೆಯುವದು, ನಾವೂ ಆಗ ಋಷಿಗಳಂತೆಯೇ ನಲಿದಾಡಬಹುದಾಗುವದು.

ಉಪನಿಷದ್ವಾಕ್ಯವನ್ನು ಅರ್ಥಮಾಡಿಕೊಂಡು ಹೀಗೆ ನಲಿಯುವದಕ್ಕೆ ತಕ್ಕ ಅಧಿಕಾರವು ಬಂದಿರುವವರಿಗೆ ವಾಕ್ಯದ ಅಭಿಪ್ರಾಯವು ಹೇಗಾಗುವದೆಂಬುದನ್ನು ತಿಳಿಸುವದಕ್ಕೆ ಪ್ರಕೃತದಲ್ಲಿ ನಾನು ಉದಾಹರಿಸಿರುವ ವಾಕ್ಯದ ಕಡೆಗೆ ಈಗ ಮನಸ್ಸಿನ ನೋಟವನ್ನು ಹೊರಳಿಸೋಣ. ಬ್ರಹ್ಮವು ಎಂದರೆ ಪರಮಾತ್ಮನು ಅನಂತನಾಗಿರು ತ್ತಾನೆ. ಅನಂತವೆಂದರೇನೆಂಬುದನ್ನು ಹಿಂದಿನ ಸಂದೇಶದಲ್ಲಿ ಸ್ವಲ್ಪಮಟ್ಟಿಗೆ ವಿವರಿಸಿ ದ್ದೇನೆ. ಅನಂತವೆಂದರೆ ಕೊನೆಯಿಲ್ಲದ್ದು ಎಂದಿಷ್ಟೇ ಅರ್ಥವಾದರೂ ಗಣಿತ ಶಾಸ್ತ್ರದಲ್ಲಿ ಬರುವ 'ಅನಂತರಾಶಿ'ಗಳಂತೆ ಎಂಬ ಅರ್ಥವನ್ನು ಇಲ್ಲಿ ಮಾಡ ಬಾರದು. ಗಣಿತವು ದೇಶದಲ್ಲಿ ಅಥವಾ ಕಾಲದಲ್ಲಿ ತೋರುವ ಅಳತೆಯನ್ನು ಮಾತ್ರ ಹೇಳುತ್ತದೆ. ಹೀಗೆಯೇ ದೇಶ, ಅಥವಾ ಕಾಲವು-ಇಂಥಲ್ಲಿಗೆ ಮುಗಿಯಿತೆಂಬ ಕಲ್ಪನೆಯು ಯಾರಿಗೂ ಬರುವಂತಿಲ್ಲವಾದ್ದರಿಂದ ಅದನ್ನೂ ಒಂದು ದೃಷ್ಟಿಯಿಂದ ಅನಂತವೆಂದು ಕರೆಯಬಹುದು. ಆದರೆ ಪರಮಾತ್ಮನು ಅನಂತನೆಂದರೆ ಹಾಗೂ ಅಲ್ಲ. ಆತನು ದೇಶಕಾಲಗಳೆಲ್ಲವನ್ನೂ ವ್ಯಾಪಿಸಿಕೊಂಡಿರು ತ್ತಾನೆ; ದೇಶಕಾಲಗಳ ಕಟ್ಟು ಇಲ್ಲದವನೂ ಆಗಿರುತ್ತಾನೆ. ಈ ವಿವರಣೆಯನ್ನು ಗ್ರಹಿಸುವದು ಕೆಲವರಿಗೆ ಕಷ್ಟವಾಗಬಹುದು. ಆದರೆ ಹಿಂದಿನ ಸಂದೇಶವನ್ನು ಓದಿರುವವರಿಗೆ ಈ ಕಷ್ಟವು ಸ್ವಲ್ಪವಾದರೂ ಸಡಿಲವಾಗುವದೆಂದು ನನ್ನ ನಂಬಿಕೆ.

ಏಕೆಂದರೆ ಭಕ್ತಿಮಾರ್ಗದಿಂದಲೇ ಪರಮಾತ್ಮನ ಈ ಅನಂತತತ್ತ್ವವನ್ನು ಮನಗಾಣುವ ರೀತಿಯನ್ನು ಅಲ್ಲಿ ಸ್ವಲ್ಪ ವರ್ಣಿಸಿರುತ್ತದೆ.

ಈಗ ಪರಮಾತ್ಮನನ್ನು ಸತ್ಯ, ಜ್ಞಾನ–ಎಂಬ ಹೆಸರುಗಳಿಂದ ಕರೆದಿರುವ ಸ್ವಾರಸ್ಯವನ್ನು ಅರಿತುಕೊಳ್ಳುವದಕ್ಕೆ ನಾವು ಪ್ರಯತ್ನಮಾಡಬಹುದು. ಪರಮೇಶ್ವರನು ಸತ್ಯವಾಗಿರುತ್ತಾನೆಂದರೇನು? ಇರುವದೆಲ್ಲ ಸತ್ಯವಾಗಿಯೇ ಇರುತ್ತದೆಯಷ್ಟೆ?–ಎಂದು ತಟ್ಟನೆ ಒಂದು ಶಂಕೆ ಎದ್ದುಕೊಳ್ಳಬಹುದು. ಉದಾಹರಣೆಗೆ ಈಗ ಸಂದೇಶವನ್ನು ಬರೆಯುವದಕ್ಕೆ ಉಪಯೋಗಿಸುತ್ತಿರುವ ಕಾಗದವೂ ಲೇಖಣಿಯೂ ನಿಜವಾಗಿವೆ; ನಾನು ಕುಳಿತುಕೊಂಡಿರುವ ಆಸನ, ಆಸನವನ್ನಿಟ್ಟಿರುವ ಸ್ಥಳ, ಮನೆ, ಸುತ್ತಲೂ ಇರುವ ಬಯಲು–ಇವೆಲ್ಲ ನಿಜವಾಗಿಯೇ ಇವೆ. ಅಲ್ಲವೆ? ಆದರೆ ಪರಮಾತ್ಮನು ಸತ್ಯನೆಂದರೆ ಹೀಗಲ್ಲ. ಈ ಕಾಗದವಾಗಲಿ, ಲೇಖಣಿಯಾಗಲಿ, ಸ್ಥಲವಾಗಲಿ, ಮನೆಯಾಗಲಿ, ಈಗ ಇವೆ ಎಂಬುದು ನಿಜ. ಆದರೆ ಇವು ಹಿಂದೆ ಯಾವಾಗಲೂ ಹೀಗೆಯೇ ಇದ್ದವೆ? ಮುಂದೆಯೂ ಯಾವಾಗಲೂ ಹೀಗೆಯೇ ಇರುತ್ತವೆಯೇ? ದೇಶದಲ್ಲಿಯೂ ಕಾಲದಲ್ಲಿಯೂ ನಮಗೆ ಎಲ್ಲಿಯಾದರೂ ಯಾವಾಗಲೂ ತೋರುವ ವಸ್ತುಗಳನ್ನು ನಾವು ಇದೆ, ನಿಜವಾಗಿದೆ–ಎಂದು ವ್ಯವಹರಿಸುವದುಂಟು. ಆದರೆ ಆ ವ್ಯವಹಾರಕ್ಕೆ ಅಭಿಪ್ರಾಯವೇನೆಂದರೆ, ಈ ವ್ಯವಹಾರದ ಕಾಲಕ್ಕೆ ಅದು ಇದೆ, ಎಂದರೆ ನಮಗೆ ತೋರುತ್ತದೆ, ನಮ್ಮ ಕೆಲಸಕ್ಕೆ ಬಳಕೆಗೆ ಬರುತ್ತದೆ ಅಷ್ಟೆ. ಇತಿಹಾಸದಲ್ಲಿ ಹಿಂದೆ ಇದ್ದದ್ದು ಈಗ ಇರುವದಿಲ್ಲ; ಈಗ ಇರುವದು ಮುಂದೆಯೂ ಇರಬೇಕಾದದ್ದಿಲ್ಲ. ಹಿಂದಿನ ಸರಕಾರದವರು ರಾಜದ್ರೋಹಿಗಳೆಂದು ಎಣಿಸಿದ್ದವರು ಈಗ ದೇಶಭಕ್ತರೆಂದು ಗೌರವಕ್ಕೆ ಪಾತ್ರರಾಗಿರುತ್ತಾರೆ; ಈಗಿನ ಅಲ್ಪಸಂಖ್ಯಾಕರೂ ಕೆಳಗಿನ ವರ್ಗದವರೂ ಮುಂದೆ ಬಹುಮತದವರೂ ಮೇಲಿನ ವರ್ಗದವರೂ ಆಗಬಹುದು. ಈ ಅರ್ಥದಲ್ಲಿ ಹೊಲ, ಮನೆ, ಹಣ, ಕಾಸು, ಕಟ್ಟಡ, ಊರು, ಕೇರಿ, ಬೆಟ್ಟ, ನದಿ, ಕಡಲು, ದೇಶ–ಮುಂತಾದದ್ದು ಯಾವದೊಂದೂ ಎಲ್ಲಾ ಕಾಲಕ್ಕೂ ಮಾರ್ಪಡದೆ ತಾನು ಇದ್ದಂತೆ ಇರುವದೇ ಇಲ್ಲ. ಹೀಗೆಯೇ ದೇಶಕ್ಕೂ ತಿಳಿಯಬೇಕು. ಇಲ್ಲಿರುವ ಸ್ಥಿತಿಯು ಅಲ್ಲಿಲ್ಲ; ಇಲ್ಲಿರುವ ಜನರ ಆಚಾರವಿಚಾರಗಳೂ ರಾಜ್ಯಭಾರದ ಪದ್ಧತಿಯೂ ಅಲ್ಲಿಲ್ಲ. ಇತ್ಯಾದಿ. ಈ ದೃಷ್ಟಿಯಿಂದ ನೋಡಿದಾಗ ಪರಮಾತ್ಮನು ಎಲ್ಲಾ ದೇಶದಲ್ಲಿಯೂ ಎಲ್ಲಾ ಕಾಲದಲ್ಲಿಯೂ ಇರುತ್ತಾನೆ; ಅಲ್ಲದೆ ತಾನಿದ್ದಂತೆಯೇ ಈಗಲೂ ಮುಂದೆಯೂ ಇರುತ್ತಾನೆ. ದಯೆ, ಪ್ರೇಮ–ಮುಂತಾದ ಕಲ್ಯಾಣಗುಣಗಳೂ ಈಗಲೂ ಮುಂದೆಯೂ ಯಾವಾಗಲೂ ಹೀಗೆಯೇ ಇರುತ್ತವೆ. ಅವನು ಇಲ್ಲಿಯೂ ಅಲ್ಲಿಯೂ ಎಲ್ಲೆಲ್ಲಿಯೂ ಹೀಗೆಯೇ ಇರುತ್ತಾನೆ. ಈ ಭಾವನೆಯು

ನಮ್ಮ ಮನದಲ್ಲಿ ಮೂಡಿದರೆ ಎಂಥ ಆನಂದವಾಗುವದು! ಪರಮೇಶ್ವರನು ಯಾವದೋ ಒಂದು ಕಾಲದಲ್ಲಿ ಯಾವದೋ ಒಂದು ಕಡೆಯಲ್ಲಿ ಇದ್ದುಕೊಂಡು ಈ ಜಗತ್ತನ್ನು ಕುಂಬಾರನು ಮಡಕೆಯನ್ನು ಮಾಡುವಂತೆ ಸೃಷ್ಟಿಸಿ ಅಲ್ಲಿಗೇ ಕೈಬಿಟ್ಟಿರುವದಿಲ್ಲ. ಆತನು ಈ ಜಗತ್ತನ್ನೆಲ್ಲ ವ್ಯಾಪಿಸಿಕೊಂಡು ಇರುತ್ತಾನೆ. ಆತನು ಈಗಲೂ ಇಲ್ಲಿಯೂ ತಾನಿರುವ ಕಡೆಯಲ್ಲಿಯೇ ಇದ್ದುಕೊಂಡಿರುತ್ತಾನೆ! ಇದು ಪರಮಾತ್ಮನು ಸತ್ಯನು, ನಿಜವಾಗಿಯೂ ಇರುವವನು, ಎಂಬುದರ ಅಭಿಪ್ರಾಯ.

ಇನ್ನು ಪರಮಾತ್ಮನು 'ಜ್ಞಾನ' ಎಂದರೇನು? ಎಂಬುದನ್ನು ಸ್ವಲ್ಪ ಬಿಡಿಸಿ ನೋಡೋಣ. ಜ್ಞಾನವೆಂದರೆ ಅಂತಃಕರಣದಲ್ಲಿ ಆಗುತ್ತಿರುವ ಒಂದಾನೊಂದು ಮಾರ್ಪಾಡು ಎಂದೇ ಜನರಲ್ಲಿ ಭಾವನೆಯಿರುತ್ತದೆ. ಆದರೆ ನಿಜವಾಗಿಯೂ ಸತ್ಯವಾದದ್ದು ಹೇಗೆ ದೇಶಕಾಲಗಳ ಕಟ್ಟಿಲ್ಲದೆ ಯಾವಾಗಲೂ ಎಲ್ಲೆಲ್ಲಿಯೂ ಇದ್ದದ್ದನ್ನು ಇದ್ದಂತೆ ತಿಳಿಸಬಲ್ಲದ್ದಾಗಿರಬೇಕೆಂಬುದು ಯುಕ್ತವಾಗಿದೆ. ಒಂದಾನೊಂದು ಕಾಲದಲ್ಲಿ ಭೂಮಿಯು ನಿಂತಲ್ಲಿ ನಿಂತಿರುತ್ತದೆ ಎಂಬ ತಿಳಿವಳಿಕೆಯು ಸರಿಯಾದ ಜ್ಞಾನವೆನಿಸಿತ್ತು. ಆದರೆ ವಿಮರ್ಶಕರು ಅನೇಕ ಬಗೆಯಲ್ಲಿ ಪರೀಕ್ಷೆ ಮಾಡಿ ಭೂಮಿಯೂ ತಿರುಗುತ್ತದೆ ಎಂದು ಗೊತ್ತುಪಡಿಸಿದರು; ಎಲ್ಲಾ ಗ್ರಹಗಳೂ ಸೂರ್ಯನ ಸುತ್ತಲೂ ಸುತ್ತುತ್ತಿವೆ ಎಂಬುದನ್ನು ನಿಶ್ಚಯಿಸಿದರು. ಖಗೋಳದ ದೃಶ್ಯಗಳನ್ನೆಲ್ಲ ಇದಕ್ಕೆ ಹೊಂದಿಸಿ ತೋರಿಸಿದರು. ಆಮೇಲೆ ಈ ತಿಳಿವಳಿಕೆಯ ಆಧಾರದಿಂದ ಇನ್ನೂ ಗ್ರಹಗಳಿರಬೇಕು ಎಂದು ಕಲ್ಪಿಸಿ ಹೊಸ ಗ್ರಹಗಳನ್ನೂ ಕಂಡುಹಿಡಿದರು. ಈಗ ಹಳೆಯ ಜ್ಞಾನವು, ಭೂಮಿಯು ತಿರುಗುವದಿಲ್ಲ ಎಂಬ ತಿಳಿವಳಿಕೆಯು, ಅಜ್ಞಾನವಾಯಿತು. ಹೀಗೆ ಇತಿಹಾಸದಲ್ಲಿ ಎಷ್ಟೋ ತಿಳಿವಳಿಕೆಗಳು ಸರಿಯಾದವುಗಳೆಂದು ಹಿಂದೆ ಆಗಿದ್ದವುಗಳೇ ಈಗ ತಪ್ಪೆಂದು ನಿಶ್ಚಯವಾಗಿರುತ್ತವೆ; ಈಗಿನ ಕೆಲವು ತಿಳಿವಳಿಕೆಗಳೂ ಹೀಗೆಯೇ ತಪ್ಪೆಂದು ಮುಂದೆ ನಿರ್ಣಯವಾಗಲೂ ಬಹುದು. ಹೀಗೆ ದೇಶದ ಬದಲಾವಣೆಯಿಂದ ಅಥವಾ ಕಾಲದ ಬದಲಾವಣೆ ಯಿಂದ ಮಾರ್ಪಡುವ ತಿಳಿವಳಿಕೆಯನ್ನು ಸಮ್ಯಗ್ಜ್ಞಾನ-ಸರಿಯಾದ ತಿಳಿವಳಿಕೆ-ಎಂದು ಹೇಗೆ ತಾನೆ ಕರೆಯಬಹುದು ?

ಪರಮಾತ್ಮನು ಜ್ಞಾನವಾಗಿರುತ್ತಾನೆ; ಆದರೆ ಅವನು ಅನಂತನೂ ಆಗಿರುತ್ತಾನೆ. ಆದ್ದರಿಂದ ಆತನ ಜ್ಞಾನಸ್ವರೂಪವು ದೇಶಕಾಲಗಳನ್ನು ಮೀರಿಯೇ ಇರಬೇಕು. ಅದು ಯಾವಾಗಲೂ ಎಲ್ಲೆಲ್ಲಿಗೂ ಹೊಂದುವ ಜ್ಞಾನವಾಗಿರಬೇಕು; ಆದ್ದರಿಂದ ಅದು ಸತ್ಯವೂ ಆಗಿರಬೇಕು ಎಂದಾಯಿತು. ಲೋಕದಲ್ಲಿ ವಸ್ತುವು ಸತ್ಯವಾಗಿದೆ, ಅದರ ತಿಳಿವಳಿಕೆಯು ಸರಿಯಾದದ್ದು, ಸಮ್ಯಗ್ಜ್ಞಾನವು-ಎಂದು ವಿಂಗಡಿಸುತ್ತೇವಷ್ಟೆ. ಪರಮಾತ್ಮನು ಸತ್ಯವೂ ಜ್ಞಾನವೂ ಆಗಿರುವದರಿಂದ ಇಲ್ಲಿ ಸತ್ಯವನ್ನು ಜ್ಞಾನವು ಅರಿಯುತ್ತದೆ ಎನ್ನುವುದಕ್ಕಿಲ್ಲ. ಸತ್ಯವೆಂದರೇ ಜ್ಞಾನವು; ಜ್ಞಾನವೆಂದರೇ

ಸತ್ಯವು. ಇದನ್ನು ನಾವು ಈವರೆಗೆ ತರ್ಕದಿಂದ ತಿಳಿಯುವದಕ್ಕೆ ಪ್ರಯತ್ನಿಸುತ್ತಿದ್ದೇವೆ. ಆದರೆ ಈ ಕ್ರಮವು ನಮ್ಮನ್ನು ಒಂದು ದಾರಿಸಿಕ್ಕದ ಕಾಡಿನೊಳಕ್ಕೆ ಒಯ್ಯುತ್ತದೆ ಎಂದು ಆಗಲೇ ನಾವು ತಿಳಿದುಕೊಂಡದ್ದಾಗಿದೆ. ಆದ್ದರಿಂದ ಈ ಕ್ರಮವನ್ನು ಬಿಟ್ಟರೆ ಪರಮಾತ್ಮನು ಸತ್ಯವೂ ಜ್ಞಾನವೂ ಅನಂತವೂ ಆಗಿರುತ್ತಾನೆಂಬುದನ್ನು ಕಂಡುಕೊಳ್ಳುವದಕ್ಕೆ ಬೇರೆ ಯಾವ ಕ್ರಮವಿದೆ ಎಂಬುದನ್ನು ನಾವು ಹುಡುಕುವದು ಸ್ವಾಭಾವಿಕವಾಗಿದೆ.

ಇದಕ್ಕೆ ಮೇಲೆ ಉದಾಹರಿಸಿರುವ ಮಂತ್ರದಲ್ಲಿಯೇ ಉತ್ತರವು ಸಿಕ್ಕುತ್ತದೆ. ಅದರಲ್ಲಿ ಹೇಳಿರುವದನ್ನು ಕೇಳಿರಿ. "ಸತ್ಯವೂ ಜ್ಞಾನವೂ ಅನಂತವೂ ಆಗಿರುವ ಪರಮಾತ್ಮನು ನಮ್ಮ ಹೃದಯದಲ್ಲಿಯೇ ಇರುತ್ತಾನೆ. ನಮ್ಮ ಹೃದಯಗುಹೆಯಲ್ಲಿ ಅವನು ನಿಧಿಯಂತೆ ರಹಸ್ಯವಾಗಿದ್ದುಕೊಂಡಿರುತ್ತಾನೆ. ಅವನನ್ನು ಯಾರು ಕಂಡುಕೊಂಡು ಅರಿತುಕೊಳ್ಳುವರೋ ಅವರಿಗೆ ಸಕಲಕಾಮಗಳೂ ದೊರೆಯುವವು ಎಂದಿದೆ. ಪರಮಾತ್ಮನು ಎಲ್ಲೆಲ್ಲಿಯೂ ಯಾವಾಗಲೂ ಇರುತ್ತಾನೆಂಬುದು ಮಾತ್ರವಲ್ಲ; ಅವನು ನಮ್ಮ ಹೃದಯದೊಳಗೇ ಇರುತ್ತಾನೆ. ಪರಮಾತ್ಮನ ಜ್ಞಾನದ ಬೆಳಕು ಎಲ್ಲೆಲ್ಲಿಯೂ ಯಾವಾಗಲೂ ಬೆಳಗುತ್ತಿದೆ ಎಂಬುದು ಮಾತ್ರವೇ ಅಲ್ಲ; ಅದು ನಮ್ಮ ನಮ್ಮ ಹೃದಯದೊಳಗೇ ಬೆಳಗುತ್ತಿದೆ ! ಪರಮಾತ್ಮನ ಸ್ವರೂಪವು ಅನಂತವಾಗಿರುವದು ನಿಜ; ಆದರೆ ಅವನು ನಮ್ಮ ಹೃದಯದಲ್ಲಿಯೇ ಇರುತ್ತಿರುವದರಿಂದ ನಮಗೆ ಅತ್ಯಂತ ಸಮೀಪವಾಗಿರುತ್ತಾನೆ, ನಮ್ಮ ಇರವಿಗೂ ಇರವಾಗಿರುತ್ತಾನೆ; ನಮ್ಮ ಅರಿವಿಗೂ ಅವನು ಅರಿವಾಗಿರುವದರಿಂದ ಅವನನ್ನು ಯಾವ ಅಜ್ಞಾನದ ಕತ್ತಲೆಯೂ ಮುಸುಕುವಂತಿಲ್ಲ.

ಪರಮಾತ್ಮನನ್ನು ಇದ್ದದ್ದು ಇರುವಂತೆ, ಅವನ ಜ್ಞಾನದ ದಿವ್ಯತೇಜಸ್ಸಿನ ರೂಪದಲ್ಲಿ, ಕಂಡುಕೊಂಡು ನಲಿಯಬೇಕೆ? ಹೊರಗಿನ ಶಬ್ದಜಾಲವನ್ನೂ ಪ್ರತ್ಯಯಗಳ ಬಲೆಯನ್ನೂ ತಪ್ಪಿಸಿಕೊಂಡು ನಿಮ್ಮೊಳಕ್ಕೆ ನೀವೇ ಪ್ರವೇಶಿಸಿರಿ. ನಿಮ್ಮ ಕೇಂದ್ರವಾಗಿರುವ, ನಿಮ್ಮ ತಿರುಳಾಗಿರುವ ಆತನನ್ನು ನೀವು ಕಂಡುಕೊಳ್ಳುವಿರೆಂದು ಹೇಳಬಾರದು, ಆತನಲ್ಲಿಯೇ ಯಾವ ವ್ಯವಧಾನವೂ ಇಲ್ಲದೆ ನಿಷ್ಠೆಯನ್ನು ಪಡೆದುಕೊಂಡುಬಿಡುವಿರಿ !

# 16. ಅಹಿಂಸಾತತ್ತ್ವ

ಪ್ರಪಂಚದಲ್ಲಿರುವ ಪ್ರತಿಯೊಂದು ಪ್ರಾಣಿಗೂ ಆನಂದದಿಂದ ಜೀವಿಸುವದಕ್ಕೆ ಅವಕಾಶವನ್ನು ಪರಮೇಶ್ವರನು ಕಲ್ಪಿಸಿರುತ್ತಾನೆ. "ಎಲ್ಲಾ ಜೀವರುಗಳಿಗೂ ಸುಖದಿಂದಿರುವದಕ್ಕೆ ಅವಕಾಶವು ದೊರೆಯಲಿ ! ಯಾರೊಬ್ಬರಿಗೂ ನನ್ನ ವರ್ತನೆಯಿಂದ ಈ ಅವಕಾಶಕ್ಕೆ ಧಕ್ಕೆ ತಗಲಬಾರದು !" ಎಂಬುದನ್ನು ಲಕ್ಷ್ಯದಲ್ಲಿಟ್ಟು ನಡೆಯುವದೇ ಮನುಷ್ಯನು ಆನಂದದಿಂದ ಜೀವನವನ್ನು ಸಾಗಿಸುವದಕ್ಕೆ ಪರಮೋಪಾಯವು. ಇದನ್ನೇ '**ಅಹಿಂಸಾತತ್ತ್ವ**'ವೆಂಬ ಹೆಸರಿನಿಂದ ಹಿಂದಿನ ಮತಾಚಾರ್ಯರುಗಳೆಲ್ಲರೂ ತಮ್ಮ ತಮ್ಮ ಅನುಯಾಯಿಗಳಿಗೆ ಉಪದೇಶ ಮಾಡಿರುತ್ತಾರೆ.

'ನನಗೆ ಯಾವಾಗಲೂ ಸುಖವಾಗಬೇಕು, ಎಂದಿಗೂ ದುಃಖವಾಗಬಾರದು' ಎಂಬುದು ಮನುಷ್ಯನಲ್ಲಿ ನೈಸರ್ಗಿಕವಾಗಿರುವ ಅಭಿಲಾಷೆಯು. ಈ ಅಭಿಲಾಷೆಯು ಪ್ರಾಣಿಮಾತ್ರದಲ್ಲಿ ಸಹಜವಾಗಿ ಇದ್ದುಕೊಂಡಿರುತ್ತದೆ. ಮನುಷ್ಯನೂ ಒಂದು ಬಗೆಯ ಪ್ರಾಣಿಯೇ ಆಗಿರುವದರಿಂದ ಅವನಲ್ಲಿಯೂ ಅದು ಇರುವದು ನಿರೀಕ್ಷಿಸ ತಕ್ಕದ್ದೇ ಆಗಿದೆ. ಆದರೆ 'ನನ್ನಂತೆ ಎಲ್ಲರಿಗೂ ಸುಖವೇ ಆಗಬೇಕು, ನನ್ನಂತೆಯೇ ಯಾರೊಬ್ಬರಿಗೂ ಎಂದಿಗೂ ದುಃಖವಾಗಬಾರದು' ಎಂಬುದು ಮನುಷ್ಯನಿಗಿಂತ ಕೀಳಂತಸ್ತಿನ ಪ್ರಾಣಿಗಳಲ್ಲಿ ಹೊಳೆಯುವ ಭಾವನೆಯಲ್ಲ. ಮನುಷ್ಯನಲ್ಲಿ ಪಶ್ವಾದಿ ಗಳಂತೆ ತಾನು ಸುಖವಾಗಿರಬೇಕೆಂಬ ಭಾವನೆಯೂ ಸಹಜವಾಗಿರುತ್ತದೆ. ಶಾಸ್ತ್ರಾ ಚಾರ್ಯರುಗಳ ಉಪದೇಶದಿಂದಲೂ ಅಧ್ಯಾತ್ಮಸಾಧನೆಗಳ ಸಹಾಯದಿಂದಲೂ ಅವನಲ್ಲಿ 'ಎಲ್ಲರೂ ಸುಖದಿಂದ ವರ್ತಿಸಬೇಕು, ಯಾರಿಗೂ ದುಃಖವು ಬರ ಬಾರದು' ಎಂಬ ಭಾವನೆಯೂ ಅಂಕುರಿಸುತ್ತದೆ. ಯಾವ ಮಹನೀಯರುಗಳಲ್ಲಿ ತಮ್ಮಂತೆ ಪರರನ್ನು ಕಾಣುವ ಈ ಭಾವನೆಯು ಬಲವಾಗಿ ಬೇರೂರಿಕೊಂಡು ಅದೇ ಜೀವನಸೂತ್ರವಾಗಿರುವದೋ ಅವರು ಪಶುತ್ವವನ್ನು ಮೀರಿರುತ್ತಾರೆ, ದೇವತ್ವಕ್ಕೆ ಏರುವವರಾಗಿರುತ್ತಾರೆ. ಯಾರಲ್ಲಿ ಈ ಭಾವನೆಯು ಸ್ವಭಾವದಿಂದಲೇ ಇದ್ದುಕೊಂಡಿರುವದೋ, ಯಾರಲ್ಲಿ ಸರ್ವಭೂತಪ್ರೇಮವು ನೆರವೇರಿಸುವದೋ, ಅವರು ದೇವಾಧಿದೇವನಾದ ಪರಮೇಶ್ವರನ ಭಕ್ತರು, ಆತನ ಪ್ರೇಮಕ್ಕೆ ಪಾತ್ರರಾಗಿ ಆತನ ಸಂದೇಶವನ್ನು ಲೋಕಕ್ಕೆ ತಮ್ಮ ನಡೆನುಡಿಗಳಿಂದ ಸಾರುತ್ತಿರುವ ಆಚಾರ್ಯರುಗಳು, ಋಷಿಗಳು, ದೇವತೆಗಳು.

ಮನುಷ್ಯನಲ್ಲಿ ಪುಣ್ಯಪಾಪಗಳು ಸಮವಾಗಿ ಕಲೆಬೆರಕೆಯಾಗಿರುವವೆಂದು ಸ್ಮೃತಿಗಳು ಹೇಳುತ್ತವೆ. ಆದ್ದರಿಂದಲೋ ಏನೊ, ಅವನಲ್ಲಿ ಪಶುಗಳ ಸ್ವಭಾವವೂ ದೇವತೆಗಳ ಸ್ವಭಾವವೂ ಕಲೆಬೆರಕೆಯಾಗಿರುತ್ತವೆ. ಅವನು ಪಶುಗಳಂತೆ ತನ್ನ

ಸುಖಸಾಧನೆಗೂ ದುಃಖಪರಿಹಾರಕ್ಕೂ ಸ್ವಭಾವದಿಂದಲೇ ಪ್ರಯತ್ನಿಸುತ್ತಿರುತ್ತಾನೆ; ಆ ಸುಖಸಾಧನೆಗೆ ಅಥವಾ ದುಃಖಪರಿಹಾರಕ್ಕೆ ಯಾರಾದರೂ ಅಡ್ಡಿಯಾಗಿ ನಿಂತರೆ ಅವರನ್ನು ತನ್ನ ಶತ್ರುಗಳೆಂದು ಭಾವಿಸಿ ಅವರನ್ನು ದೂರವಾಗಿರಿಸುವದಕ್ಕೆ ಅಥವಾ ಅಂಜಿಸುವದಕ್ಕೆ, ಕೊನೆಯ ಸಂದರ್ಭದಲ್ಲಿ ಅವರಿಗೆ ಏನಾದರೂ ತೊಂದರೆಯನ್ನುಂಟುಮಾಡುವದಕ್ಕೆ ಕೂಡ, ಹಿಂಜರಿಯುವದಿಲ್ಲ. ಇನ್ನೊಂದು ವಿಷಯ. ಪಶುಗಳಲ್ಲಿ ಅಭಿವ್ಯಕ್ತವಾಗದಿರುವ 'ಬುದ್ಧಿ' ಎಂಬುದೊಂದು ಸಾಧನವು ಮನುಷ್ಯನಲ್ಲಿರುತ್ತದೆ. ಆದ್ದರಿಂದ ಅವನು ಪಶುಗಳಂತೆ ಇಂದಿನ ಸುಖಸಾಧನವನ್ನು ಅಥವಾ ದುಃಖಪರಿಹಾರವನ್ನು ಮಾಡಿಕೊಂಡ ಮಾತ್ರದಿಂದ ತೃಪ್ತನಾಗದೆ ನಾಳೆಗೆ, ನಾಡಿದ್ದಿಗೆ, ಮುಂದೆ ಬಹುಕಾಲಕ್ಕೆ ತನಗೂ ತನ್ನವರಿಗೂ ಬೇಕಾಗಬಹುದೆಂಬ ಕಲ್ಪನೆಯಿಂದ ಸುಖಸಾಮಗ್ರಿಗಳನ್ನು ಹೇರಳವಾಗಿ ರಾಶಿಹಾಕಿಕೊಳ್ಳುತ್ತಾನೆ. ಹೀಗೆ ರಾಶಿಹಾಕಿಕೊಳ್ಳುವಾಗ ತನ್ನಲ್ಲಿ ಸಹಜವಾಗಿರುವ ಪಶುಸ್ವಭಾವವನ್ನು ಉಪಯೋಗಿಸಿ ಕೊಂಡು, ಇನ್ನೊಬ್ಬರಿಗೆ ಪೀಡೆಯುಂಟಾದರೂ ಚಿಂತೆಯಿಲ್ಲ, ಹೇಗಾದರೂ ಮಾಡಿ ಸುಖಸಾಮಗ್ರಿಗಳನ್ನು ರಾಶಿಹಾಕಿಕೊಳ್ಳಬೇಕೆಂದೂ ದುಃಖಕಾರಣಗಳನ್ನು ಪರಿಹರಿಸಿ ಕೊಳ್ಳಬೇಕೆಂದೂ ಹವಣಿಸುತ್ತಾನೆ. ಇದೇ ಹಿಂಸಾಪ್ರವೃತ್ತಿಗೆ ಮೂಲಕಾರಣವು.

ಆದರೆ ಭಗವಂತನ ಪ್ರೇಮವು ಮನುಷ್ಯನಲ್ಲಿ ಅಪಾರವಾಗಿರುತ್ತದೆ. ಯಾವನೊಬ್ಬ ಮನುಷ್ಯನೂ ಪಶುಸ್ವಭಾವದಲ್ಲಿಯೇ ನಿಲ್ಲಬಾರದು ಎಂಬುದು ಭಗವಂತನ ಸಂಕಲ್ಪವು. ಆದ್ದರಿಂದ ಯಾವಯಾವಾಗ ಸ್ವಾರ್ಥಸುಖಕ್ಕಾಗಿ ಮನುಷ್ಯನು ಮತ್ತೊಬ್ಬರನ್ನು ಪೀಡಿಸುವನೋ ಆಗಾಗಲೆಲ್ಲ ಅವನಿಗೆ ದುಃಖವು ತಪ್ಪದೆ ಬಂದೊದಗಬೇಕೆಂಬ ನಿಯಮವನ್ನು ಕಲ್ಪಿಸಿರುತ್ತಾನೆ. ನಾವು ಎಷ್ಟೆಷ್ಟು ಮತ್ತೊಬ್ಬರಿಗೆ ಕೇಡನ್ನು ಬಗೆಯುವೆವೋ ಅಷ್ಟಷ್ಟು ನಮಗೆ ದುಃಖವುಂಟಾಗುವದು; ನಾವು ಎಷ್ಟೆಷ್ಟರಮಟ್ಟಿಗೆ ಮತ್ತೊಬ್ಬರಿಗೂ ಸುಖವನ್ನು ಕೋರುವೆವೋ ಅಷ್ಟಷ್ಟು ನಮ್ಮ ಆನಂದವು ಹೆಚ್ಚುತ್ತಿರುವದು. ಇದೊಂದು ಪ್ರಕೃತಿನಿಯಮವಾಗಿರುತ್ತದೆ. ಮನುಷ್ಯನು ಸರ್ವಜನರ ಹಿತವನ್ನು ಬಯಸುವದು ಭಗವಂತನ ಹಾದಿಯನ್ನು ಹಿಡಿದಂತೆ. ಸರ್ವಭೂತಗಳ ಪ್ರೇಮವನ್ನು ಹೆಚ್ಚಿಸಿಕೊಳ್ಳುವವರು ಅಷ್ಟುಮಟ್ಟಿಗೆ ಭಗವಂತನಿಗೆ ಹತ್ತಿರವಾಗುವರು. ಆಗ ಅವರಿಗೆ ಒಂದು ವಿಲಕ್ಷಣವಾದ ಆನಂದವು ವಶವಾಗುವದು. ಯಾವ ಜನರು ಮಿಕ್ಕವರನ್ನು ತಮ್ಮಂತೆ ಕಂಡು ಎಲ್ಲರಿಗೂ ಸುಖವಾಗಲಿ, ಯಾರಿಗೂ ದುಃಖವಾಗದಿರಲಿ, ಎಂಬ ತತ್ತ್ವಕ್ಕೆ ಅನುಗುಣವಾಗಿ ನಡೆದುಕೊಳ್ಳುವದಕ್ಕೆ ಹವಣಿಸುವರೋ ಅವರು ಈ ಆನಂದಪ್ರಾಪ್ತಿಗೆ ಅಧಿಕಾರಿಗಳು. ಅವರ ವರ್ತನೆಯೇ ಅಹಿಂಸಾಪ್ರವೃತ್ತಿಗೆ ಮೂಲವು.

ಈ ಲೇಖನದ ಆರಂಭದಲ್ಲಿಯೇ ಬರೆದಿರುವಂತೆ ಅಹಿಂಸಾತತ್ತ್ವವನ್ನು ಭೂಮಂಡಲದ ಎಲ್ಲಾ ಮತಗಳ ಆಚಾರ್ಯರುಗಳೂ ಬೋಧಿಸಿರುತ್ತಾರೆ. ಪ್ರತಿಯೊಂದು ಮತದಲ್ಲಿಯೂ ಅಹಿಂಸೆಯ ಮಹಿಮೆಯನ್ನು ನಡೆನುಡಿಗಳಿಂದ ಉಪದೇಶಿಸಿದ ಮಹಾಮಹಿಮರು ಆಗಿಹೋಗಿರುತ್ತಾರೆ. ಜೈನರ ತೀರ್ಥಂಕರನಾದ ಮಹಾವೀರ, ಬೌದ್ಧಮತಪ್ರವರ್ತಕನಾದ ಗೌತಮ, ಕ್ರಿಸ್ತೀಯಮತದಲ್ಲಿ ಸೇಂಟ್ ಫ್ರಾನ್ಸಿಸ್-ಇಂಥವರು ಅಹಿಂಸೆಯನ್ನು ಒತ್ತಿ ಉಪದೇಶಿಸಿರುತ್ತಾರೆ. ಅವರ ಅಭಿಪ್ರಾಯದಲ್ಲಿ ಅಹಿಂಸೆ ಎಂಬುದು ಹಿಂಸೆಯ ಅಭಾವಮಾತ್ರವಾಗಿರಲಿಲ್ಲ. ಸರ್ವಭೂತಪ್ರೇಮವು ಅದರ ವಿಧಿಮುಖವಾದ ಆಕಾರವಾಗಿತ್ತು. ಇಂಥ ಪ್ರೇಮವಿಗ್ರಹಗಳು ಅವತರಿಸಿದ ಮಾವನಕುಲವೇ ಧನ್ಯ; ಅವರ ಸಂದೇಶವನ್ನು ಆಚರಣೆಗೆ ತರುವ ಮಹನೀಯರು ಎಲ್ಲಿದ್ದರೂ ಎಂದೆಂದಿಗೂ ಎಲ್ಲರಿಗೂ ಪೂಜ್ಯರು.

ಆದರೆ ಮನುಷ್ಯನಲ್ಲಿ ಅಹಿಂಸಾತತ್ತ್ವದ ಬೌದ್ಧಿಕಜ್ಞಾನವು ಬೆಳೆದುಕೊಂಡಿರುವಷ್ಟು ಮಟ್ಟಿಗೆ ಹಾರ್ದಿಕವಾದ ಅನುಭವವು ಬೆಳೆದುಕೊಂಡಿರುವದಿಲ್ಲ. ಅಹಿಂಸಾತತ್ತ್ವದ ವಿಷಯದಲ್ಲಿ ಉಪನ್ಯಾಸಗಳನ್ನು ಕೊಡುವದಕ್ಕೂ ಲೇಖನಗಳನ್ನೂ ಗ್ರಂಥಗಳನ್ನೂ ಬರೆಯುವದಕ್ಕೂ ಶಕ್ತರಾಗಿರುವ ಅನೇಕ ಜನರು ನಮ್ಮ ಕಾಲದಲ್ಲಿಯೂ ಸಿಕ್ಕುವರು. ಆದರೆ ಆಚರಣೆಯಲ್ಲಿ ತರುವದಕ್ಕೆ ಸಿದ್ಧರಾಗಿರುವವರು ಯಾವ ಜನಾಂಗದಲ್ಲಿ ಹುಡುಕಿದರೂ ಕಣ್ಣಿಗೆ ಬೀಳುವದು ದುರ್ಲಭವಾಗಿರುತ್ತದೆ. ಅಕ್ಟೋಬರ್ ತಿಂಗಳಲ್ಲಿ ನಾಲ್ಕನೆಯ ದಿನಾಂಕದಲ್ಲಿ ಪಶುದಯಾದಿನವನ್ನು ಭೂಮಂಡಲದಲ್ಲೆಲ್ಲ ಆಚರಿಸಿ ಸೇಂಟ್ ಫ್ರಾನ್ಸಿಸ್ಸಿನ ಸ್ಮರಣೆಯಿಂದ ಆ ಮಹಾತ್ಮನನ್ನು ಗೌರವಿಸಬೇಕೆಂದು ಯೂರೋಪಿನಲ್ಲಿ ಅನೇಕರು ಸಂಕಲ್ಪಿಸಿರುತ್ತಾರೆ. ಇದು ಬಹಳ ಒಳ್ಳೆಯ ಸಂಕಲ್ಪವೇ ಸರಿ. ಏಕೆಂದರೆ ಆ ಮಹಾತ್ಮನು ತನ್ನ ವಿಶ್ವಪ್ರೇಮವನ್ನು ಎಷ್ಟುಮಟ್ಟಿಗೆ ಬೆಳೆಯಿಸಿಕೊಂಡಿದ್ದನೆಂದರೆ ಮನುಷ್ಯರನ್ನು ಹಾಗಿರಲಿ, ಪಶುಪಕ್ಷಿಮೃಗಾದಿಗಳನ್ನೂ ಪಂಚಭೂತಗಳನ್ನು ಕೂಡ ತನ್ನ ಅಣ್ಣತಮ್ಮಂದಿರು ಅಕ್ಕತಂಗಿಯರು ಎಂದು ಸಂಬೋಧಿಸುವಷ್ಟು ಮುಂದುವರಿದಿದ್ದನು. ಆತನು ತತ್ತ್ವೋಪದೇಶವನ್ನು ಮಾಡುವದಕ್ಕೆ ಹೊರಟಾಗ ಪಕ್ಷಿಗಳು ಕೂಡ ಗಜಬಜಿಸದೆ ಸುಮ್ಮನೆ ಮರಗಳ ಮೇಲೆ ಕುಳಿತು ಕೇಳುತ್ತಿದ್ದವೆಂದು ಹೇಳುತ್ತಾರೆ. ಆದರೆ ಇಂಥ ಮಹಾತ್ಮನ ಸ್ಮರಣೆಯನ್ನು ಮಾಡುವ ಇದೇ (1950) ಅಕ್ಟೋಬರು ತಿಂಗಳಿನ ಇಪ್ಪತ್ತನಾಲ್ಕನೆಯ ದಿನಾಂಕದಲ್ಲಿ ಭೂಮಂಡಲದ ಸಂಯುಕ್ತಜನಾಂಗಗಳ ವಿಶ್ವಸಂಸ್ಥೆಯ ಐದನೆಯ ವರ್ಷದ ವರ್ಧಂತಿಯನ್ನು ನಡೆಯಿಸಲಾಯಿತು. ಈ ಸಂಸ್ಥೆಯೂ ಶಾಂತಿಯನ್ನು ಸ್ಥಾಪಿಸುವದಕ್ಕೋಸ್ಕರವೇ ಸ್ಥಾಪಿತವಾಗಿರುತ್ತದೆ. ಆದರೂ ಈ ಸಂಸ್ಥೆಯ ಸದಸ್ಯರಾದ ಮುಖ್ಯ ಜನಾಂಗಗಳು ಯುದ್ಧದಿಂದಲೇ ಭೂಮಂಡಲಕ್ಕೆ ಶಾಂತಿಯು ದೊರಕಬೇಕಾಗಿದೆ

ಎಂದು ನಂಬಿರುತ್ತವೆ. ಯಾರಾದರೂ ಶಾಂತಿಭಂಗವನ್ನು ಮಾಡಿದರೆ ಅವರ ಬಲವನ್ನು ಹುಡಿಮಾಡಿ ರಕ್ತಪಾತವನ್ನು ಮಾಡುವದಕ್ಕೆ ಆ ಜನಾಂಗದವರು ಸ್ವಲ್ಪವೂ ಹೇಸುವದಿಲ್ಲ !

ಮನುಷ್ಯನಲ್ಲಿ ದೇವತ್ವಕ್ಕೇರುವದಕ್ಕೆ ಸಾಧಕವಾದ ಅಹಿಂಸಾಮಾರ್ಗದ ರಹಸ್ಯವು ಹುದುಗಿಕೊಂಡೇ ಇರುತ್ತದೆ. ಇದನ್ನು ಆಚರಣೆಯಲ್ಲಿ ತೋರಿಸಿದ, ಅನೇಕ ಮಹನೀಯರು ಭೂಮಿಯ ಮೇಲೆ ಅವತರಿಸಿಯೂ ಹೋಗಿರುತ್ತಾರೆ. ರಾಜಕೀಯ ಕ್ರಾಂತಿಗಳನ್ನು ಕೂಡ ಅಹಿಂಸೆಯಿಂದಲೇ ಸಾಧಿಸಬೇಕೆಂದು ಬೋಧಿಸಿದವರೂ ನಮ್ಮ ಕಣ್ಣೆದುರಿಗೆ ಬಂದು ಹೋಗಿರುತ್ತಾರೆ. ಆದರೂ ಮಾನವವರ್ಗವು ಪಶುತ್ವದ ಕಡೆಗೇ ಒಲಿಯುತ್ತಿದೆ. ಇಷ್ಟೇ ಅಲ್ಲ. ಮಾನವ ಜೀವರಾಶಿಯನ್ನೇ ಧ್ವಂಸಗೊಳಿಸುವ ಆಸುರವಾದ ಘಾತುಕಾಸ್ತ್ರಗಳನ್ನು ನಂಬಿ ಅವುಗಳಿಂದ ಸ್ವಾರ್ಥಸಾಧನೆಯನ್ನು ಮಾಡುಕೊಳ್ಳಬಹುದೆಂದೂ ನಂಬುತ್ತಿದೆ. ಅಖಿಲಭೂಮಂಡಲದ ಎರಡನೆಯ ಯುದ್ಧವೆಂಬ ಹೆಸರಿನಿಂದ ಮೊನ್ನೆಮೊನ್ನೆ ಒಂದು ಮಹಾನರಮೇಧವಾಯಿತು. ಆ ಅಣುಬಾಂಬುಗಳೆಂಬ ಸಹಸ್ರಘ್ನಿಗಳನ್ನುಪಯೋಗಿಸಿ ಕ್ಷಣಮಾತ್ರದಲ್ಲಿ ಲೆಕ್ಕವಿಲ್ಲ ದಷ್ಟು ಜನರನ್ನು ಕೊಂದುಬಿಟ್ಟರು. ಈಗ ಮತ್ತೆ ಶಾಂತಿಯ ಹೆಸರಿನಲ್ಲಿ ಹೊಸ ಯುದ್ಧಕ್ಕೆ ಗಣಪತಿಪೂಜೆಯಾಗುತ್ತಿದೆ. ಅಣುಬಾಂಬುಗಳು, ಜಲಜನಕಬಾಂಬು ಗಳು–ಎಂಬ ಅಸ್ತ್ರಗಳು ಕೂಡ ಹಳೆಯವಾಗುವ ಸಂಭವವು ಈಗ ಬರುತ್ತಿದೆ. ಇನ್ನುಮೇಲೆ ಸಾವಿರಾರು ಜನರನ್ನು ಕ್ಷಣಮಾತ್ರದಲ್ಲಿ ಧ್ವಂಸಮಾಡುವ ಕ್ರಿಮಿಗಳನ್ನು ಉತ್ಪಾದನೆಮಾಡುವ ಯುಕ್ತಿಯನ್ನು ಭೌತಿಕವಿಜ್ಞಾನಿಗಳು ಕಂಡುಹಿಡಿದಿರುತ್ತಾರೆಂದು ವೃತ್ತಾಂತ ಪತ್ರಿಕೆಗಳಲ್ಲಿ ಪ್ರಕಟವಾಗಿದೆ !

ಮನುಷ್ಯನಿಗೆ ತನ್ನ ಅಭಿಪ್ರಾಯವನ್ನು ಧಾರಾಳವಾಗಿ ತಿಳಿಸುವ ಸ್ವಾತಂತ್ರ್ಯ, ತನಗೆ ಸಮ್ಮತವಾದ ರಾಜ್ಯವನ್ನೇರ್ಪಡಿಸಿಕೊಳ್ಳುವ ಸ್ವಾತಂತ್ರ್ಯ, ತನಗೆ ಇಷ್ಟಬಂದ ರೀತಿಯಲ್ಲಿ ಈಶ್ವರನನ್ನು ಅರ್ಚನೆಮಾಡುವ ಸ್ವಾತಂತ್ರ್ಯ ಮುಂತಾದ ಸ್ವಾತಂತ್ರ್ಯಗಳು ದೊರೆಯಬೇಕೆಂದು ರಾಜಕೀಯವಲಯಗಳಲ್ಲಿ ಸಾರುತ್ತಿರುತ್ತಾರೆ. ಆದರೆ ಪರಮೇಶ್ವರನು ದಯಪಾಲಿಸಿರುವ ಸುಖಶಾಂತಿಗಳನ್ನು ಅನುಭವಿಸಿಕೊಂಡಿರುವ ಮೂಲಸ್ವಾತಂತ್ರ್ಯ ವನ್ನು ಜನರಿಂದ ಕಸಿದುಕೊಳ್ಳುವ ಯತ್ನವು ಎಲ್ಲೆಲ್ಲಿಯೂ ನಡೆಯುತ್ತಿದೆ. ಪರಮೇಶ್ವರನು ಅಹಿಂಸೆ, ಸತ್ಯ, ಧರ್ಮ, ಸರ್ವಪ್ರೇಮ–ಇವುಗಳಿಂದ ಮಾನವನ ಕಲ್ಯಾಣವಾಗುವ ನಿಯಮಗಳನ್ನು ಏರ್ಪಡಿಸಿರುವನು. ಆದರೆ ಹಿಂಸೆ, ಅಸತ್ಯ, ಅಧರ್ಮ, ದ್ವೇಷ–ಇವುಗಳಿಂದಲೇ ಸಕಲ ಪುರುಷಾರ್ಥಗಳನ್ನೂ ಸಾಧಿಸಿ ಕೊಳ್ಳಬಹುದೆಂಬ ತೀರ್ಮಾನಕ್ಕೆ ಬಹುಜನರು ಬರುತ್ತಿರುವರು. ಇದೇ ಇಂದಿನ ಅನರ್ಥಗಳಿಗೆ ಕಾರಣವು.

ಭೌತಿಕವಿಜ್ಞಾನಶಾಸ್ತ್ರವು ಮಾನವನ ಪಾಲಿಗೆ ಅಲ್ಲಾವುದ್ದೀನನ ಅದ್ಭುತ ದೀಪಸ್ತಂಬದ ರಕ್ಕಸನಂತೆ ಆಗಿಬಿಟ್ಟಿದೆ. ಅಲ್ಲಾವುದ್ದೀನನು ಒಳ್ಳೆಯದನ್ನಾಗಲಿ ಕೆಟ್ಟದ್ದನ್ನಾಗಲಿ ಏನನ್ನು ಸಂಕಲ್ಪಿಸಿದರೂ ಆ ರಕ್ಕಸನು ತಕ್ಷಣದಲ್ಲಿಯೇ ಒದಗಿಸಿಕೊಡುತ್ತಿದ್ದನು. ಈ ಶಾಸ್ತ್ರವೂ ಹಾಗೆಯೇ ಮಾನವನಿಗೆ ಹೊಸ ಹೊಸ ಶೋಧನೆಗಳನ್ನು ಮಾಡಿಕೊಟ್ಟಿದೆ. ಆದರೆ ಅವುಗಳನ್ನು ಶ್ರೇಯಸ್ಸಿಗಾಗಿ ಉಪಯೋಗಿಸಬೇಕೆಂಬುದನ್ನು ತಿಳಿಸಿಕೊಡುವದು ಆ ಶಾಸ್ತ್ರದಿಂದಾಗುವಹಾಗಿಲ್ಲ. ರೈಲು, ಹಡಗು, ಜಹಜು, ಮೋಟಾರು, ಟೆಲಿಫೋನ್, ಟೆಲಿಗ್ರಾಫ್, ಏರೋಪ್ಲೇನ್, ರೇಡಿಯೊ, ಸಿನೆಮ ಮುಂತಾದವುಗಳು ಒಂದರ ಹಿಂದೊಂದು ಬಂದು ಮಾನವನ ಶಕ್ತಿಯನ್ನು ಹೆಚ್ಚಿಸಿವೆ. ಮನುಷ್ಯನು ಈಗ ಬೇಕಾದಷ್ಟು ಆಹಾರವನ್ನು ಬೆಳೆಯಿಸಿಕೊಳ್ಳಬಹುದು; ಬೇಕಾದಷ್ಟು ವೇಗದಿಂದ ಸಾಕಾದಷ್ಟು ಬಟ್ಟೆಗಳನ್ನು ಏರ್ಪಡಿಸಿಕೊಳ್ಳಬಹುದು, ಯಾವ ರೋಗವನ್ನಾದರೂ ವಾಸಿಮಾಡಿಕೊಳ್ಳಬಹುದು, ತಿಳಿವಳಿಕೆಯನ್ನು ಹೆಚ್ಚಿಸಿಕೊಳ್ಳಬಹುದು, ಪ್ರಸಾರಮಾಡಲೂಬಹುದು. ಆದರೆ ಈ ತಿಳಿವಳಿಕೆಯನ್ನು ಹೇಗೆ ಉಪಯೋಗಿಸಿಕೊಂಡರೆ ಮಾನವನ ವರ್ಗಕ್ಕೆಲ್ಲ ಕಲ್ಯಾಣವಾದೀತೆಂಬುದುಮಾತ್ರ ಮನುಷ್ಯನಿಗೆ ತಿಳಿಯುವಂತಿಲ್ಲ. ಅವನ ತಿಳಿವಳಿಕೆಯು ಹೆಚ್ಚಿದಂತೆಲ್ಲ **ಕುತೂಹಲ, ಆಶ್ಚರ್ಯ, ಕಾಮ, ಪ್ರವೃತ್ತಿ, ಸಂಪಾದನೆ, ಮಮತ್ವಬುದ್ಧಿ, ಲೋಭ, ಕ್ರೋಧ, ಹಿಂಸಾಸಕ್ತಿ**-ಇವೂ ಬೆಳೆಯುತ್ತಿವೆ. ಈಗ ಅವನು ಹಿಂದಿನ ಕಾಲದ ಸ್ಥಿತಿಗೆ ಮರಳಲೂ ಆರ, ಈಗಿನ ಅನರ್ಥಗಳ ಚಕ್ರಭೀಮನ ಕೋಟೆಯಿಂದ ತಪ್ಪಿಸಿಕೊಳ್ಳಲೂ ಆರ !

ಈ ಸಂಕಟದಿಂದ ಪಾರಾಗುವದಕ್ಕೆ ಒಂದೇ ಒಂದು ಉಪಾಯವಿದೆ. ಭಗವಂತನು ಗೀತೆಯಲ್ಲಿ ಅದನ್ನು ತಿಳಿಸಿಕೊಟ್ಟಿರುತ್ತಾನೆ. "ಸಮಂ ಪಶ್ಯನ್ ಹಿ ಸರ್ವತ್ರ ಸಮವಸ್ಥಿತಮೀಶ್ವರಮ್ । ನ ಹಿನಸ್ತ್ಯಾತ್ಮನಾತ್ಮಾನಂ ತತೋ ಯಾತಿ ಪರಾಂ ಗತಿಮ್ ॥" ಈಶ್ವರನು ಎಲ್ಲರಲ್ಲಿಯೂ ಸಮವಾಗಿಯೇ ಇದ್ದುಕೊಂಡಿರುತ್ತಾನೆ. ಅವನು ನಮಗೆಲ್ಲರಿಗೂ ಆತ್ಮನೇ ಆಗಿರುತ್ತಾನೆ. ನಾವು ನಮ್ಮೆಲ್ಲರಲ್ಲಿಯೂ ಇರುವ ನಿಜವಾದ ಆ ನಮ್ಮ ಆತ್ಮನನ್ನು ಕಂಡುಕೊಂಡರೆ ನಾವೆಲ್ಲರೂ ಅವನಲ್ಲಿ ಒಂದಾಗಿರುವೆವೆಂಬುದು ತಿಳಿಯಬರುತ್ತದೆ. ಶರೀರವೆಲ್ಲ ಸೇರಿ ನಾನೊಬ್ಬನು ಎಂಬ ಅರಿವು ಇರುವವನು ತನ್ನ ಯಾವ ಅವಯವವನ್ನೂ ಹಿಂಸಿಸುವದಕ್ಕೆ ಒಪ್ಪುವದಿಲ್ಲ; ಯಾವದೊಂದು ಅವಯವದಲ್ಲಿಯೂ ಮತ್ತೊಂದಕ್ಕಿಂತ ಹೆಚ್ಚಿನ ಪ್ರೇಮವನ್ನು ಅಥವಾ ದ್ವೇಷವನ್ನು ಮಾಡುವದಿಲ್ಲ. ಇದರಂತೆ ಪರಮಾತ್ಮನಲ್ಲಿ ಒಂದಾಗಿರುವೆವೆಂಬ ಅರಿವು ಬಂದರೆ ನಾವು ಯಾರೊಬ್ಬರನ್ನೂ ಹಿಂಸಿಸುವದಕ್ಕೆ

ಒಪ್ಪುವದಾಗುವದಿಲ್ಲ; ಯಾರೊಬ್ಬರನ್ನೂ ಮತ್ತೊಬ್ಬರಿಗಿಂತ ಹೆಚ್ಚು ನಮ್ಮವರೆಂದು ತಿಳಿಯುವದೂ ಆಗುವದಿಲ್ಲ. ಎಲ್ಲರಲ್ಲಿಯೂ ಸಮಾನವಾದ ಪ್ರೇಮವನ್ನು ಸ್ವಭಾವ ದಿಂದಲೇ ತೋರಿಸುವೆವು. ಶರೀರವನ್ನೆಲ್ಲ ಸಮದೃಷ್ಟಿಯಿಂದ ನೋಡಿಕೊಳ್ಳುವದು ಹೇಗೆ ಆರೋಗ್ಯಸ್ಥಿತಿಗೆ ಕಾರಣವೋ ಹಾಗೆ ನಾವೆಲ್ಲರೂ ಒಬ್ಬರನ್ನೊಬ್ಬರು ಪ್ರೇಮದಿಂದ ಕಾಣುವದು ಒಟ್ಟುಜನತೆಯ ಕಲ್ಯಾಣಕ್ಕೆ ಕಾರಣವಾಗಿರುತ್ತದೆ. ಈ ತಿಳಿವಳಿಕೆಯು ಜನಸಾಮಾನ್ಯಕ್ಕೇ ಒಮ್ಮೆಗೇ ಬರುವ ಸಂಭವವಿಲ್ಲವೆಂಬುದು ನಿಶ್ಚಯ. ಆದರೆ ಭೌತಿಕಶಾಸ್ತ್ರದ ತಿಳಿವಳಿಕೆಯು ನೇರಾಗಿ ಎಲ್ಲರಿಗೂ ಉಂಟಾಗುವ ಹಾಗಿಲ್ಲವಾದರೂ ಎಲ್ಲರಿಗೂ ಅದನ್ನು ಬಳಸಿಕೊಳ್ಳುವ ತಿಳಿವಳಿಕೆಯನ್ನು ಕೊಡುವ ಪ್ರಯತ್ನವನ್ನು ಮಾಡುವಂತೆ ಈ ಪರಮಾತ್ಮಜ್ಞಾನದ ಆಧಾರದಮೇಲೆ ತಿಳಿವಳಿಕೆ ಯನ್ನು ಎಲ್ಲರಿಗೂ ಕೊಡುವ ಪ್ರಯತ್ನವನ್ನು ಅವಶ್ಯವಾಗಿ ಈಗಲಾದರೂ ಮಾಡ ಬೇಕು. ಅದರಿಂದ ಅನರ್ಥನಿವೃತ್ತಿಯೂ ಪುರುಷಾರ್ಥಪ್ರಾಪ್ತಿಯೂ ಆಗುವದು.

ಪರಮಾತ್ಮನೇ ನಮ್ಮಗಳೆಲ್ಲರ ಆತ್ಮನೆಂಬ ತಿಳಿವಳಿಕೆಯು ಲೌಕಿಕಬುದ್ಧಿಯ ಬೆಳವಣಿಗೆಯಿಂದ ಬರತಕ್ಕದ್ದಲ್ಲ. ತರ್ಕದ ಬುದ್ಧಿಯ ಗೋಜಿಗೆ ಹೋಗದಿದ್ದರೂ ಹೃದಯದೊಳಗೆ ನಮ್ಮನಮ್ಮೊಳಗೇ ಹೊಕ್ಕು ಆ ತಿಳಿವಳಿಕೆಯನ್ನು ಸಂಪಾದಿಸಿ ಕೊಳ್ಳಬಹುದು. ನಮ್ಮ ಹೃದಯವನ್ನು ಅರಳಿಸುವ ಅಹಿಂಸೆ, ಸತ್ಯ–ಮುಂತಾದ ಸಾಧನಗಳನ್ನು ಅವಲಂಬಿಸಿದಂತೆಲ್ಲ ನಮಗೆ ಪರಮಾತ್ಮನ ಜ್ಞಾನವು ಹತ್ತಿರವಾಗು ವದು; ಆ ಜ್ಞಾನವು ಹೆಚ್ಚಿದಂತೆಲ್ಲ ನಾವೆಲ್ಲರೂ ಒಬ್ಬ ಪರಮಾತ್ಮನ ಅಂಶಗಳು ಎಂಬ ಅರಿವು ಸ್ಫುಟವಾಗುತ್ತಾ ಬರುವದು. ಆಗ ನಮ್ಮ ಆತ್ಮನೇ ಪರರ ಆತ್ಮ ನೆಂದು ತಿಳಿದುಬರುವದರಿಂದ ಸಾರ್ವತ್ರಿಕಪ್ರೇಮವೇ ಮನುಷ್ಯನ ಅಭ್ಯುದಯಕ್ಕೆ ಕಾರಣವೆಂಬುದು ಸ್ಪಷ್ಟವಾಗುವದು. ಭೌತಿಕ ವಿಜ್ಞಾನವನ್ನು ಸಾರ್ವಜನಿಕಜೀವನಕ್ಕೆ ಸಾಧನವಾಗಿ ಮಾಡಿಕೊಳ್ಳುವ ಮಾರ್ಗಗಳು ಆಗ ಸುಲಭವಾಗುವವು. "ಹೃದಯ ದಲ್ಲಿ ಪರಮಾತ್ಮನನ್ನು ಕಂಡುಕೊಂಡವನು ಸಕಲಕಾಮಗಳನ್ನೂ ಪಡೆದುಕೊಳ್ಳು ತ್ತಾನೆ" ಎಂಬ ಉಪನಿಷದುಕ್ತಿಯ ಅಭಿಪ್ರಾಯವು ಆಗ ನಮಗೆ ಮನದಟ್ಟಾಗುವದು.

****

# 17. ಪರಮಾತ್ಮನನ್ನು ಕಂಡುಕೊಳ್ಳುವದೇ ಉತ್ತಮ ಧರ್ಮ

ಧರ್ಮವೆಂಬ ಮಾತನ್ನು ನಾವೆಲ್ಲರೂ ಬಳಸುತ್ತಿರುವೆವು; ಶಾಸ್ತ್ರಗ್ರಂಥಗಳಲ್ಲಿ ಆ ಮಾತನ್ನು ಆಗಿಂದಾಗ್ಗೆ ಓದಿಯೂ ಇರುವೆವು. ಆದರೆ ಧರ್ಮವೆಂದರೆ ಏನು? ಅದರ ನಿಜವಾದ ಅರ್ಥವು ಯಾವದು !- ಎಂಬುದನ್ನು ವಿಮರ್ಶಿಸಿ ತಿಳಿಯುವದರಲ್ಲಿ ಪ್ರಯೋಜನವುಂಟು. ಏಕೆಂದರೆ ಧರ್ಮಶಬ್ದವನ್ನು ಈಗ ಒಬ್ಬೊಬ್ಬರು ಒಂದೊಂದು ಅರ್ಥದಲ್ಲಿ ಉಪಯೋಗಿಸುತ್ತಿರುತ್ತಾರೆ. ಹಿಂದಿನ ಗ್ರಂಥಗಳಲ್ಲಿಯೂ ಈ ಶಬ್ದವನ್ನು ಒಂದೇ ಅರ್ಥದಲ್ಲಿ ಉಪಯೋಗಿಸಿರುವಂತೆ ತೋರುವದಿಲ್ಲ. ಉದಾಹರಣೆಗೆ "ಧರ್ಮೋ ವಿಶ್ವಸ್ಯ ಜಗತಃ ಪ್ರತಿಷ್ಠಾ" (ತೈ. ಆ. 4-69) ಎಂಬ ವಾಕ್ಯದಲ್ಲಿ ಇಡಿಯ ಜಗತ್ತಿಗೇ ನಿಲುಗಡೆಯನ್ನು ಕೊಟ್ಟಿರುವದೇ ಧರ್ಮವೆಂದು ಹೇಳಿರುತ್ತದೆ. ಕಣಾದರ ವೈಶೇಷಿಕಸೂತ್ರದಲ್ಲಿ "ಯತೋಽಭ್ಯು -ದಯ ನಿಃಶ್ರೇಯಸಸಿದ್ಧಿಃ ಸ ಧರ್ಮಃ" (ವೈ. ಸೂ. 1-1-2) ಯಾವದರಿಂದ ಏಳಿಗೆಯೂ ಪರಮಪುರುಷಾರ್ಥವೂ ಉಂಟಾಗುವವೋ ಅದು ಧರ್ಮವು ಎಂದಿದೆ. ಜೈಮಿನಿಗಳ ಮೀಮಾಂಸಾಸೂತ್ರದಲ್ಲಿ "ಚೋದನಾಲಕ್ಷಣೋಽರ್ಥೋ ಧರ್ಮಃ" (ಜೈ. ಸೂ. 1-1-2) ವೇದದಲ್ಲಿ ಮಾಡಬೇಕೆಂದು ವಿಧಿಸಿರುವದೇ ಧರ್ಮವು ಎಂದಿದೆ. ಮನುಧರ್ಮಶಾಸ್ತ್ರದಲ್ಲಿ ಬರೆದಿರುವದೇನೆಂದರೆ :

**ವಿದ್ವದ್ಭಿಃ ಸೇವಿತಃ ಸದ್ಭಿರ್ನಿತ್ಯಮದ್ವೇಷರಾಗಿಭಿಃ ।**
**ಹೃದಯೇನಾಭ್ಯನುಜ್ಞಾತೋ ಯೋ ಧರ್ಮಸ್ತಂ ನಿಬೋಧತ ॥**

ಯಾವಾಗಲೂ ರಾಗದ್ವೇಷಗಳಿಲ್ಲದ ಬಲ್ಲವರು ಅನುಸರಿಸುವದೇ, ಹೃದಯಕ್ಕೂ ಮೆಚ್ಚಾದದ್ದೇ, ಧರ್ಮವೆಂದು ತಿಳಿಯಬೇಕು. ಇಷ್ಟೇ ಅಲ್ಲ. ಸಂಪ್ರದಾಯ, ಪದ್ಧತಿ, ಕರ್ಮ, ಸರಿಯಾದ ನಡೆವಳಿಕೆ, ಅಧ್ಯಾತ್ಮಸಾಧನ, ಕರ್ಮಸಂನ್ಯಾಸ-ಇವುಗಳನ್ನೆಲ್ಲ ಧರ್ಮವೆಂದು ಕರೆದಿರುವದೂ ನಮಗೆ ತಿಳಿದುಬಂದಿರುತ್ತದೆ. ಈ ಬಗೆಬಗೆಯ ಅರ್ಥಗಳನ್ನೆಲ್ಲ ಒಳಕೊಳ್ಳುವ ವಿಶಾಲವಾದ ಯಾವದಾದರೊಂದು ವ್ಯಾಪಕಾರ್ಥವು ಈ ಶಬ್ದಕ್ಕೆ ಇರುವದೆ?-ಎಂಬುದೀಗ ಪ್ರಶ್ನೆ.

ನೋಡುವದಕ್ಕೆ ಒಂದೊಂದಕ್ಕೆ ಯಾವ ಸಂಬಂಧವೂ ಇಲ್ಲದಂತೆ ತೋರುವ ಇಷ್ಟು ಅರ್ಥಗಳನ್ನೂ ಹೊಂದುಗಡೆ ಮಾಡುವ ಒಂದು ವಾಕ್ಯವನ್ನು ಇಲ್ಲಿ ಉದಾಹರಿಸುವೆನು.

**"ದೇವೈರತ್ರಾಪಿ ವಿಚಿಕಿತ್ಸಿತಂ ಪುರಾ ನ ಹಿ ಸುವಿಜ್ಞೇಯಮಣುರೇಷ ಧರ್ಮಃ"**

ಕಠೋಪನಿಷತ್ತಿನಲ್ಲಿ (1-1-20) ಇರುವ ಈ ವಾಕ್ಯದಲ್ಲಿ ಯಮನು ಆತ್ಮನನ್ನು ಧರ್ಮವೆಂದು ಕರೆದಿರುತ್ತಾನೆ. ಹಿಂದಕ್ಕೆ ದೇವತೆಗಳು ಕೂಡ ಈ ವಿಷಯದಲ್ಲಿ

ಸಂಶಯದಿಂದ ವಿಚಾರಮಾಡಿರುತ್ತಾರೆ; ಈ ಧರ್ಮವು ಸೂಕ್ಷ್ಮವಾದದ್ದು, ಸುಲಭವಾಗಿ ತಿಳಿಯತಕ್ಕದ್ದಲ್ಲ–ಎಂದು ಅವನು ನಚಿಕೇತನಿಗೆ ಹೇಳಿರುತ್ತಾನೆ. ಪರಮಾತ್ಮನಿಗೆ ಧರ್ಮವೆಂಬ ಹೆಸರಿರುವದೆಂಬುದು ವಿಷ್ಣುಸಹಸ್ರನಾಮದಿಂದಲೂ ತಿಳಿಯಬರುತ್ತದೆ; ಅಲ್ಲಿ 'ಧರ್ಮೋ ಧರ್ಮವಿದುತ್ತಮಃ' ಎಂದು ಪರಮಾತ್ಮನನ್ನು ಧರ್ಮವು, ಧರ್ಮವನ್ನು ಬಲ್ಲವರಲ್ಲಿ ಉತ್ತಮನಾದವನು–ಎಂದು ಕರೆದಿರುತ್ತದೆ.

ಈ ಅರ್ಥವೇ ಮೂಲದಲ್ಲಿ ಧರ್ಮಶಬ್ದಕ್ಕೆ ಸೇರಿದ್ದೆಂದು ಇಟ್ಟುಕೊಂಡರೆ ಧರ್ಮವು 'ಇಡಿಯ ಜಗತ್ತಿಗೇ ಪ್ರತಿಷ್ಠೆಯು' ಎಂಬ ವೇದವಾಕ್ಯವು ಸಮಂಜಸವಾಗಿ ತೋರುತ್ತದೆ; ಏಕೆಂದರೆ ಪರಮಾತ್ಮನೇ ಜಗತ್ತಿಗೆ ಸೃಷ್ಟಿಸ್ಥಿತಿಲಯಗಳ ಕಾರಣವೆಂದು ಉಪನಿಷತ್ತುಗಳಲ್ಲಿ ಸಾರಿರುತ್ತದೆ. ಈ ಅರ್ಥವನ್ನೇ ಮುಖ್ಯಾರ್ಥವೆಂದು ಇಟ್ಟುಕೊಂಡರೆ ಯಾವ ದೃಷ್ಟಿವಿಶೇಷದಿಂದ ಈ ಧರ್ಮದಲ್ಲಿ ನಮಗೆ ನಿಷ್ಠೆಯು ದೊರಕುತ್ತದೆಯೋ ಅದೆಲ್ಲವೂ ಧರ್ಮವಾಗುತ್ತದೆ; ಯಾವ ದೃಷ್ಟಿಯ ಫಲವಾಗಿ ಮಾಡಿದ ಕಾಯಿಕ, ವಾಚಿಕ, ಮಾನಸಿಕ ಕರ್ಮ ವಿಶೇಷವು ಇಂಥ ನಿಷ್ಠೆಯಲ್ಲಿ ಕೊನೆಗಾಣುವದೋ ಅದೂ ಧರ್ಮವೆಂದೇ ಆಗುತ್ತದೆ.

ಈ ಅಭಿಪ್ರಾಯವನ್ನು ಅಂಗೀಕರಿಸಿದರೆ ನಾವು ಅನುಸರಿಸುವ ಗೌಣ ಧರ್ಮಗಳೆಲ್ಲ ಅವು ಮುಖ್ಯಧರ್ಮಕ್ಕೆ ಎಷ್ಟರಮಟ್ಟಿಗೆ ನಮ್ಮನ್ನು ಒಯ್ಯುವವೋ ಅಷ್ಟರ ಮಟ್ಟಿಗೆ ಧರ್ಮವೆಂಬ ಹೆಸರಿಗೆ ಯೋಗ್ಯವಾಗಿರುವವೆಂದು ಹೇಳಬೇಕಾಗುವದು; ಆದ್ದರಿಂದಲೇ ಯಾಜ್ಞವಲ್ಕ್ಯರು ತಮ್ಮ ಸ್ಮೃತಿಯಲ್ಲಿ ಹೀಗೆಂದು ಅಪ್ಪಣೆ ಕೊಡಿಸಿರುತ್ತಾರೆ

**ಇಜ್ಯಾಚಾರದಮಾಹಿಂಸಾದಾನಸ್ವಾಧ್ಯಾಯಕರ್ಮಣಾಮ್ ।**
**ಅಯಂ ತು ಪರಮೋ ಧರ್ಮೋ ಯದ್ಯೋಗೇನಾತ್ಮದರ್ಶನಮ್ ॥**

"ಯಜ್ಞ, ಆಚಾರ, ಅಹಿಂಸೆ, ದಾನ, ವೇದಾಧ್ಯಯನ, ಕರ್ಮಗಳು–ಇವುಗಳೊಳಗೆಲ್ಲ ಯೋಗದಿಂದ ಪರಮಾತ್ಮನನ್ನು ಕಾಣುವದೆಂಬುದೇ ಪರಮಧರ್ಮವು" ಎಂದು ಈ ಶ್ಲೋಕದ ಅರ್ಥ. ಇಲ್ಲಿ ತಿಳಿಸಿರುವ ಧರ್ಮಗಳೆಲ್ಲವೂ 'ವೇದಬೋಧಿತವಾದದ್ದೇ ಧರ್ಮವು' ಎಂಬ ಜೈಮಿನೀಯಸೂತ್ರಕ್ಕೆ ಅನುಗುಣವಾಗಿರುತ್ತವೆಯಾದರೂ ಇವುಗಳಲ್ಲಿ ಕೆಲವು ಆತ್ಮಸಾಕ್ಷಾತ್ಕಾರವೆಂಬ ಪರಮಧರ್ಮಕ್ಕೆ ಹೆಚ್ಚು ಅಂತರಂಗವಾಗಿರುತ್ತವೆ ಎಂಬುದು ಸ್ಪಷ್ಟವಾಗಿರುತ್ತದೆ. ಕಣಾದರ ಲಕ್ಷಣವೂ ಇದಕ್ಕೇ ಹೊಂದುಗಡೆಯಾಗುತ್ತದೆ. ಏಕೆಂದರೆ ಮನುಷ್ಯನು ಪರಮಾರ್ಥವಾಗಿ ಪರಮಾತ್ಮನ ಅಂಶವೇ ಆಗಿರುವದರಿಂದ ಪರಮಾತ್ಮನಿಷ್ಠೆಯನ್ನು (ನಿಃಶ್ರೇಯಸವನ್ನು) ಪಡೆಯುವದಕ್ಕೆ ಹವಣಿಸುವದು ಸ್ವಾಭಾವಿಕವಾಗಿದೆ; ಅದು ದಕ್ಕದೆ ಇರುವಲ್ಲಿ

ಅನಿತ್ಯವಾದ ಸುಖಭೋಗಗಳಲ್ಲಿ (ಅಭ್ಯುದಯಗಳಲ್ಲಿ) ಅಭಿಲಾಷೆಯನ್ನು ತೋರುವದೂ ಸ್ವಾಭಾವಿಕವೇ ಆಗಿದೆ; ಏಕೆಂದರೆ ನಾವು ಈ ಲೋಕದಲ್ಲಾಗಲಿ ಪರಲೋಕದಲ್ಲಾಗಲಿ ಪಡೆಯಬೇಕೆಂದು ಹಂಬಲಿಸುವ ಭೋಗಗಳೆಂಬವು ಈ ಪರಮಾತ್ಮನೆಂಬ ಅಪರಿಮಿತವಾದ ಆನಂದಸಾಗರದ ಹನಿಗಳೇ ಆಗಿರುತ್ತವೆ.

ಇದು ಧರ್ಮವು ಇದು ಅಧರ್ಮವು, ಇದು ಕರ್ತವ್ಯವು ಇದು ಅಕರ್ತವ್ಯವು–ಎಂಬ ವಿವೇಕವನ್ನು ಈ ಸಿದ್ಧಾಂತದ ದೃಷ್ಟಿಯಿಂದ ಸುಲಭವಾಗಿ ಮಾಡಿಕೊಳ್ಳುವದಕ್ಕೆ ಬರುತ್ತದೆ. ಯಾವದು ನಮ್ಮ ಆನಂದಾತ್ಮಸ್ವಭಾವವನ್ನು ಅನುಭವಕ್ಕೆ ತಂದುಕೊಳ್ಳುವದಕ್ಕೆ ಅನುಕೂಲವಾಗಿರುತ್ತದೆಯೋ ಅದೇ ಧರ್ಮವು, ಅದೇ ಕರ್ತವ್ಯವು; ಆದರೆ ಯಾವದು ಈ ಹಾದಿಯಿಂದ ನಮ್ಮನ್ನು ತಪ್ಪಿಸುವದಕ್ಕೆ ಮನವೊಲಿಸುವದೋ ಅಥವಾ ಯಾವದನ್ನು ಅನುಸರಿಸಿದರೆ ಈ ಹಾದಿಯನ್ನು ಬಿಟ್ಟೇಬಿಡಬೇಕಾಗುವದೋ ಅದು ಅಧರ್ಮವು–ಎಂದು ಮೇಲಿನ ವಿಚಾರದಿಂದ ಏರ್ಪಡುತ್ತದೆ. ಅಧರ್ಮದಿಂದ ನಮಗೆ ದುಃಖವಾಗುವದೆಂಬುದೂ ಅಧರ್ಮದ ಫಲವನ್ನು ಅನುಭವಿಸುವದಕ್ಕಾಗಿ ನಾವು ಮತ್ತೆ ಮತ್ತೆ ಜನಿಸಲೇಬೇಕಾಗಿರುವದೆಂಬುದೂ ನಾವು ಧರ್ಮಕ್ಕೆ ತಿರುಗುವವರೆಗೂ, ಧರ್ಮವನ್ನು ಅನುಷ್ಠಾನಮಾಡಿ ಧರ್ಮದ ಸ್ವರೂಪವೇ ಆಗಿರುವ ಪರಮಾತ್ಮತತ್ತ್ವದಲ್ಲಿ ನೆಲೆನಿಲ್ಲುವವರೆಗೂ, ನಮ್ಮನ್ನು ಹೆಜ್ಜೆಹೆಜ್ಜೆಗೂ ಧರ್ಮದ ಕಡೆಗೆ ಒಯ್ಯಬೇಕೆಂಬ ಪರಮಾತ್ಮನ ಪ್ರೇಮಯುತವಾದ ಸಂಕಲ್ಪದ ಹೆಗ್ಗುರುತಾಗಿರುತ್ತದೆ ಎಂದು ಹೇಳಬಹುದಾಗುತ್ತದೆ.

ಈಗ ಪ್ರಪಂಚದಲ್ಲಿರುವ ಬಗೆಬಗೆಯ 'ಮತ'ಗಳನ್ನು (Religions) ಧರ್ಮಗಳೆಂದು ಕರೆಯುವ ವಾಡಿಕೆಯಿದೆ. ಅವುಗಳಲ್ಲಿ ಎಷ್ಟರಮಟ್ಟಿಗೆ ಈ ಮುಖ್ಯ ಧರ್ಮದ ಆಧಾರವನ್ನು ಅವಲಂಬಿಸಿದೆಯೋ ಅಷ್ಟರಮಟ್ಟಿಗೂ ಅವುಗಳನ್ನು 'ಧರ್ಮ'ಗಳೆಂದು ಕರೆಯುವದಕ್ಕೆ ಅಡ್ಡಿಯಿರುವದಿಲ್ಲ. ಬಲುಮಟ್ಟಿಗೆ ಈ 'ಮತ'ಗಳು ಒಬ್ಬ ಧರ್ಮಪ್ರಿಯನಾದ ಪರಮೇಶ್ವರನಲ್ಲಿ ಭಕ್ತಿಯನ್ನು ಉಪದೇಶಿಸುತ್ತವೆ; ಆ ಭಕ್ತಿಯ ಆಧಾರದಿಂದ ನೆರೆಹೊರೆಯವರನ್ನು ಪ್ರೇಮದಿಂದ ಕಾಣುವದು, ಇಂದ್ರಿಯ ನಿಗ್ರಹ, ಸತ್ಯ, ಪರೋಪಕಾರ–ಮುಂತಾದವುಗಳನ್ನು ಅವು ಉಪದೇಶಿಸುತ್ತವೆ. ಈ ಮತಗಳಲ್ಲಿ ಒಳಪಂಗಡಗಳು ಹಲವು ಹುಟ್ಟಿರುವದು ನಿಜ; ಅವುಗಳಲ್ಲಿ ಪರಸ್ಪರಭಿನ್ನವಾದ ಆಚಾರವ್ಯವಹಾರಗಳು ಏರ್ಪಟ್ಟಿರುವದೂ ನಿಜ. ಆದರೆ ಅದು ಧರ್ಮದ ಹೆಸರಿನಲ್ಲಿ ಮಾನವನು ಮಾಡಿಕೊಂಡಿರುವ ಕೆಲವು ತೊಡಕುಗಳ ಗಂಟು. ಅದರ ಫಲವಾಗಿ ಮತಗಳು ಒಂದರೊಡನೊಂದು ಕಚ್ಚಾಡುತ್ತಿವೆ; ಮಾನವನಿಗೆ ಅಂಧಕಾರದಲ್ಲಿ ಬೆಳಕನ್ನು ತೋರಿಸುವದಕ್ಕೆ ಬದಲು ಕುರುಡರಿಗೆ

ಹಾದಿತೋರಿಸುವೆವೆನ್ನುವ ಬೇರೆಯ ಕುರುಡರಂತೆ ಈ ಮತಗಳು ಕಷ್ಟಪರಂಪರೆಗಳ ಕಗ್ಗಾಡಿಗೆ ಜನರನ್ನು ಒಯ್ಯುತ್ತಿವೆ.

ಕೆಲವು ಮತಗಳಲ್ಲಿ ಸರ್ವೇಶ್ವರನೊಬ್ಬನನ್ನು ಒಪ್ಪಿರುವದಿಲ್ಲ; ಸರ್ವಜ್ಞನೂ ಸರ್ವಶಕ್ತನೂ ಆದ ಪರಮೇಶ್ವರನ ನಿಯಮವೊಂದು ನಮ್ಮ ಜೀವನಕ್ಕೆ ಸುಪಥ ವನ್ನು ತೋರುವ ಬೆಳಕಾಗಿರುವದೆಂಬುದನ್ನೂ ಅವು ಒಪ್ಪಿರುವದಿಲ್ಲ. ಆದರೂ ಅವುಗಳಲ್ಲಿ ಧರ್ಮವನ್ನೇ ಈಶ್ವರನ ಸ್ಥಾನದಲ್ಲಿ ಕುಳ್ಳಿರಿಸಿ ಅಭಿಷೇಕ ಮಾಡಿರುತ್ತದೆ. ಗೌತಮಬುದ್ಧನಂಥ ಆದರ್ಶಪುರುಷರು ತಮ್ಮ ನಡತೆಯಿಂದ ಜನರನ್ನು ಉತ್ತಮ ವಾದ ಹಾದಿಗೆ ಒಯ್ಯುವದಕ್ಕೆ ಶ್ಲಾಘ್ಯತಮವಾದ ಪ್ರಯತ್ನವನ್ನು ಮಾಡಿರುತ್ತಾರೆ. ಆದರೆ ಧರ್ಮತತ್ತ್ವವನ್ನು ಒಂದು ಅಪ್ರಕಂಪ್ಯವಾದ ಆಧಾರದಮೇಲೆ ಅವರು ನಿಲ್ಲಿಸಲಿಲ್ಲವಾದ್ದರಿಂದ ಅವರ ಅನುಯಾಯಿಗಳಲ್ಲಿ ಬಲುಬೇಗನೆ ಮತಭೇದ ವುಂಟಾಗುವದಕ್ಕೆ ಅವಕಾಶವಾಗಿರುತ್ತದೆ.

ಮತಾಚಾರ್ಯರ ಪ್ರಭಾವವು ಕಡಿಮೆಯಾಗುತ್ತಾ ಬಂದಂತೆಲ್ಲ ಜನರಲ್ಲಿ ವಿಚಾರಸ್ವಾತಂತ್ರ್ಯವು ಬೆಳೆಯುತ್ತಾಬಂದಿದೆ. ಭೌತಿಕವಿಜ್ಞಾನಶಾಸ್ತ್ರವು ತಕ್ಕಮಟ್ಟಿಗೆ ಯೌವನವನ್ನು ಪಡೆದ ಚಿಹ್ನೆಗಳು ಕಾಣಿಸುತ್ತಿರುವ ಈ ಯುಗದಲ್ಲಿ ಮಾನವನು ಯುಕ್ತಿಪ್ರಧಾನನಾಗುತ್ತಾ ಯುಕ್ತಿಯುಕ್ತವಾದದ್ದೊಂದನ್ನೇ ಅವಲಂಬಿಸಬೇಕೆಂಬ ಹೊಸ ತತ್ತ್ವವನ್ನು ಎಲ್ಲೆಲ್ಲಿಯೂ ಹರಡುತ್ತಿದ್ದಾನೆ. ದೈವಭಕ್ತಿಯೇ ಧರ್ಮಕ್ಕೆ ಆಧಾರವಲ್ಲ; ನೀತಿ, ಪರೋಪಕಾರ, ಕಲೋಪಾಸನೆ-ಮುಂತಾದವುಗಳನ್ನು ಯುಕ್ತಿಯ ಆಧಾರದ ಮೇಲೆಯೇ ನಿಲ್ಲಿಸಬಹುದು-ಎಂಬ ಮನೋಭಾವವು ಈಗ ಹಲವರಲ್ಲಿ ಮೊಳೆತುಕೊಂಡಿರುತ್ತದೆ.

ಪರಮೇಶ್ವರನಲ್ಲಿ ನಂಬಿಕೆಯೂ ಪರಮೇಶ್ವರನ ಆರಾಧನೆಯೂ ಮೂಢ ವಿಶ್ವಾಸದ ಫಲವೆಂದು ಜನಗಳ ಮನಸ್ಸಿನಲ್ಲಿ ಎಂದಿನಿಂದ ಮೂಡುತ್ತಾ ಬಂದಿತೋ ಅಂದಿನಿಂದ ಪರಮೇಶ್ವರನನ್ನೂ ಪರಮೇಶ್ವರನ ನಿಷ್ಠೆಗೆ ಅನುಗುಣವಾದ ಧರ್ಮಾ ಚರಣೆಯನ್ನೂ ಜೀವನದ ಧ್ಯೇಯವಾಗಿಟ್ಟುಕೊಳ್ಳುವದರಲ್ಲಿ ರುಚಿಯಿಲ್ಲವೆಂದು ಅನೇಕರಿಗೆ ತೋರಲಾರಂಭಿಸಿತು. ಭೌತಿಕವಿಜ್ಞಾನಶಾಸ್ತ್ರವು ಯಕ್ಷಿಣಿಯಂತೆ ಬಗೆ ಬಗೆಯ ಜೀವನಸೌಕರ್ಯಗಳನ್ನು ಶೋಧಿಸಿಕೊಟ್ಟು ಮನುಷ್ಯನು ಇಷ್ಟಪಟ್ಟರೆ ಈ ಭೂಮಂಡಲವನ್ನೇ ಸ್ವರ್ಗತುಲ್ಯವೆನಿಸಿ ಸೌಖ್ಯವನ್ನು ಸೂರೆಗೊಳ್ಳಬಹುದೆಂಬ ಆಶೋತ್ತರವನ್ನು ಮುಂದೊಡ್ಡಿತು. ಹೊಸಹೊಸ ಭೋಗಸಾಮಗ್ರಿಗಳನ್ನು ಉತ್ಪಾದನೆ ಮಾಡುವ, ಮತ್ತು ಅವನ್ನು ಒಂದು ಸ್ಥಲದಿಂದ ಮತ್ತೊಂದು ದೂರಪ್ರದೇಶಕ್ಕೆ ಸಾಗಿಸುವ, ಉಪಾಯಗಳನ್ನು ಈ ಶಾಸ್ತ್ರವು ನಮಗೆ ಕಲಿಸಿಕೊಟ್ಟಿರುತ್ತದೆ. ಒಬ್ಬರ ಅಭಿಪ್ರಾಯವನ್ನು ಅತ್ಯಲ್ಪ ಕಾಲದಲ್ಲಿ ಸಾವಿರಾರು ಜನಗಳಿಗೆ ತಿಳಿಸುವ ಪುಸ್ತಕ

ಮುದ್ರಣ, ತಂತಿಯ ವರ್ತಮಾನ, ರೇಡಿಯೊ ಮುಂತಾದ ಹಲವು ಸಾಧನಗಳನ್ನೂ ತಂದೊಡ್ಡಿದೆ. ಈ ಶಾಸ್ತ್ರವನ್ನು ಸರಿಯಾಗಿ ಅಭ್ಯಾಸಮಾಡಿದರೆ ಈಶ್ವರನ ಗರಜಿಲ್ಲದೆಯೇ ಮಾನವನು ಸರ್ವಜ್ಞಕಲ್ಪನಾಗಬಹುದು, ಸರ್ವಶಕ್ತನಾಗಿ ಸರ್ವ ಪುರುಷಾರ್ಥಗಳನ್ನೂ ಪಡೆಯಬಹುದು-ಎಂಬ ಪ್ರತೀಕ್ಷೆಯೂ ಉಂಟಾಗಿರುತ್ತದೆ.

ಮಾನವನ ಯುಕ್ತಿಯು ಬಹುಶಾಖೆಗಳುಳ್ಳದ್ದು; ಅದು ಇಲ್ಲಿಗೇ ನಿಲ್ಲಬೇಕೆಂಬ ನಿಯಮವೇನೂ ಇಲ್ಲ. ಅತ್ಯಂತ ನಿಶ್ಚಲವಾದ ತತ್ತ್ವವೊಂದಿದೆ ಎಂದು ವಾದಿಸುವದಕ್ಕೂ ಯುಕ್ತಿಯನ್ನು ಉಪಯೋಗಿಸಬಹುದು; ಜಗತ್ತಿನಲ್ಲಿ ಸ್ಥಿರವಾಗಿ ಯಾವದೊಂದು ತತ್ತ್ವವೂ ಇರುವದಿಲ್ಲ. ಅತ್ಯಂತ ಚಂಚಲವಾಗಿ ನವನವೋನ್ಮೇಷ ಶಾಲಿಯಾಗಿರುವದೇ ಜಗತ್ತಿನ ಸ್ವಭಾವವು ಎಂದು ವಾದಿಸುವದಕ್ಕೂ ಇದೇ ಯುಕ್ತಿಯನ್ನು ಉಪಯೋಗಿಸಬಹುದು. ಬಹುಜನರು ಈ ಎರಡನೆಯ ವಾದಕ್ಕೇ ಯುಕ್ತಿಯನ್ನು ಉಪಯೋಗಿಸ ತೊಡಗಿರುತ್ತಾರೆ. ಹೊಸ ಸಮಾಜವನ್ನು ರಚಿಸಬೇಕು, ಹೊಸ ವಿದ್ಯಾಭ್ಯಾಸಕ್ರಮವನ್ನು ತರಬೇಕು, ಹೊಸ ನಾಗರಿಕತೆಯನ್ನುಂಟು ಮಾಡಬೇಕು, ಹೊಸ ರಾಜ್ಯಭಾರ ಕ್ರಮವನ್ನು ಏರ್ಪಡಿಸಬೇಕು-ಮುಂತಾದ ಕೂಗುಗಳು ಎಲ್ಲೆಲ್ಲಿಯೂ ಕೇಳಬರುತ್ತಿವೆ.

ಹೀಗೆ ಮಾನವನು ಮುಟ್ಟಬೇಕಾದ ಧ್ಯೇಯದ ವಿಷಯಕ್ಕೆ ಅಭಿಪ್ರಾಯವು ಬದಲಿಸಿದ ಬಳಿಕ, ಧ್ಯೇಯವನ್ನು ಮುಟ್ಟುವ ಸಾಧನವೂ ಬೇರೆಯಾಗುವದು ಸ್ವಾಭಾವಿಕವೇ ಆಗಿದೆ. ಯಾರ ಮತದಲ್ಲಿ ಪರಮಾತ್ಮನ ಪ್ರಾಪ್ತಿಯೇ ಪರಮ ಪುರುಷಾರ್ಥವಾಗಿತ್ತೋ ಅವರಿಗೆ ಅಹಂಕಾರವನ್ನು ಮಟ್ಟುಮಾಡುವದಕ್ಕೆ ಬೇಕಾದ ಯಮನಿಯಮಗಳೇ ಮುಖ್ಯಸಾಧನವಾಗಿದ್ದವು. ಮಿಕ್ಕವರ ಆವಶ್ಯಕತೆಯು ಮೊದಲು, ನನ್ನ ವಿಚಾರವು ಕೊನೆಗೆ-ಎಂಬುದೇ ನೀತಿಯಾಗಿತ್ತು. ಶಾಸ್ತ್ರಗುರು ವಚನಗಳಲ್ಲಿ ಶ್ರದ್ಧೆ, ಶರೀರವಾಙ್ಮನಸ್ಸುಗಳ ಸಂಯಮ, ಸರ್ವತ್ರ ಭಗವದ್ಭಾವನೆ, ಆದಷ್ಟುಮಟ್ಟಿಗೂ ಎಲ್ಲರನ್ನೂ ಪ್ರೀತಿಸುವದು-ಇಂಥ ಸಾಧನೆಗಳೇ ಜೀವನದಲ್ಲಿ ಮೇಲುಮಟ್ಟಕ್ಕೆ ಏರಿಸುವವೆಂಬ ನಂಬಿಕೆಯಿತ್ತು. ಆದರೆ ಯಾವಾಗ ಜಗತ್ತೆಲ್ಲವೂ ಕ್ಷಣಕ್ಷಣಕ್ಕೂ ಮಾರ್ಪಡುತ್ತಿರುವದೆಂದೂ ಕೂಟಸ್ಥನಿತ್ಯವಾದ ಪರಮಾರ್ಥತತ್ತ್ವವೊಂದಿದೆ ಎಂಬುದು ಭ್ರಾಂತಿಯೆಂದೂ ಮನುಷ್ಯನು ಇಹಜೀವನದ ಮಟ್ಟವನ್ನು, ಎಂದರೆ ಶರೀರಾದಿಗಳ ಆವಶ್ಯಕತೆಗೂ ಭೋಗಕ್ಕೂ, ಬೇಕಾದ ಸಾಮಗ್ರಿಯನ್ನು, ಆದಷ್ಟು ಹೆಚ್ಚಾಗಿ ಕೂಡಿಹಾಕುವದೇ ಪರಮಪುರುಷಾರ್ಥವೆಂದೂ ಸಿದ್ಧವಾಯಿತೋ ಆಗ ತನ್ನ ಹಕ್ಕನ್ನು ಮುಂದುಮಾಡಿಕೊಳ್ಳುವದೇ ಮುಖ್ಯವಾದ ಸಾಧನವಾಯಿತು. ಹಕ್ಕನ್ನು ಸಂಪಾದಿಸುವದಕ್ಕೆ ಅನುಕೂಲವಾಗುವ ಉಪಾಯಗಳೆಲ್ಲ ಸರಿಯಾದ ಸಾಧನೆಗಳೆಂಬ ಭಾವನೆಯೂ ಬೇರೂರಿಕೊಂಡಿತು.

ಈಗ ಬೇರೆಬೇರೆಯ ದೇಶಗಳಲ್ಲಿ ಬೇರೆಬೇರೆಯ ರಾಜ್ಯಭಾರಕ್ರಮವು ಆಚರಣೆಯಲ್ಲಿರುತ್ತದೆ. ಆದರೆ ಪ್ರತಿಯೊಂದು ಜನಾಂಗವೂ ತನ್ನತನ್ನ ದೇಶದಲ್ಲಿ ಭಕ್ತಿಯನ್ನು ಜನರಿಂದ ಬೇಡುತ್ತಿದೆ. ಇಂಥ ರಾಜ್ಯಶಾಸನಕ್ರಮವೇ ಉತ್ತಮವಾದದ್ದು ಎಂದು ಸ್ಥಾಪಿಸುವದಕ್ಕೆ ಯಾವ ಉಪಾಯವನ್ನಾದರೂ ಜನರು ಕೈಕೊಳ್ಳುವದಕ್ಕೆ ಸಿದ್ಧರಾಗಿರುತ್ತಾರೆ. ತಮ್ಮತಮ್ಮ ರಾಷ್ಟ್ರದಲ್ಲಿ ಅಭಿಮಾನವು ಹೆಚ್ಚಲೆಂದು ಆತ್ಮಶ್ಲಾಘನೆ, ಪರನಿಂದೆ, ಧನದ ಆಶೆ, ಜನರಿಗೆ ಹಿಂಸೆ–ಇವುಗಳನ್ನೆಲ್ಲ ಮಾಡಬಹುದು, ಮಾಡಲೇಬೇಕು–ಎಂಬುದು ಪ್ರತಿಯೊಂದು ರಾಷ್ಟ್ರದ ಧೋರಣೆಯಾಗಿರುತ್ತದೆ. ದೇಶದ ಪ್ರಜೆಗಳಲ್ಲಿಯೂ ತತ್ಕಾಲದಲ್ಲಿರುವ ಸರಕಾರದ ಅಭಿಪ್ರಾಯಕ್ಕೆ ಭಿನ್ನವಾಗಿರುವ ಮತಗಳುಳ್ಳವರ ಪಂಗಡಗಳಿಗೆ ಕಡಿಮೆಯಿಲ್ಲ. ಅಂಥ ಪಂಗಡಗಳನ್ನು ಹಿಂಸಿಸುವದೂ ಅವರಿಗೆ ಪ್ರತಿಬಂಧಕವನ್ನು ಹಾಕುವದೂ ಅವರ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವದೂ ಸರಕಾರಕ್ಕೆ 'ಧರ್ಮ'ವೆನ್ನುತ್ತಾರೆ; ಅಂಥ ಸರಕಾರವನ್ನು ಉರುಳಿಸುವದೂ ಸರಕಾರದವರಿಗೆ ಆದಷ್ಟು ಕಿರುಕುಳವನ್ನೊಡ್ಡುವದೂ ಅವರ ಶಾಸನಕ್ರಮವು ನಾನಾದೋಷಗಳಿಂದ ಕೂಡಿದೆಯೆಂದು ತೆಗಳುವದೂ ಆ ವಿರುದ್ಧಮತದವರ 'ಧರ್ಮ'ವೆನ್ನುತ್ತಾರೆ ! ನಾನಾರಾಷ್ಟ್ರಗಳು ಸೇರಿದ ವಿಶ್ವಸಂಸ್ಥೆಯೊಂದು ಶಾಂತಿಗೆಂದೇ ಏರ್ಪಟ್ಟಿದೆ; ಆ ಸಂಸ್ಥೆಯ ಸಭೆಯಲ್ಲಿ ಈ ವಿರುದ್ಧ ಮತಗಳ ರಾಷ್ಟ್ರಗಳ ಪ್ರತಿನಿಧಿಗಳು ಶಾಂತಿಗಾಗಿ ಚರ್ಚೆಮಾಡುತ್ತಾರೆ, ಒಬ್ಬರನ್ನೊಬ್ಬರು ಹಳಿಯುತ್ತಾರೆ, ದೂರುತ್ತಾರೆ, ಹಾಳುಮಾಡುವ ಸಲಹೆಗಳನ್ನು ಸಂಸ್ಥೆಗೆ ಕೊಡುತ್ತಾರೆ. ಇದೆಲ್ಲ ಅವರವರ ಧರ್ಮವೇ !

ಇಷ್ಟೆಲ್ಲ ಗದ್ದಲದ ನಡುವೆ ವೇದಾಂತವಾಣಿಯು ಕೇಳಬರುತ್ತಲೇ ಇದೆ. "ಸರ್ವಭೂತಗಳಲ್ಲಿಯೂ ಅಂತರಾತ್ಮನೊಬ್ಬನು ಇದ್ದಾನೆ, ಆತನೇ ತನ್ನ ಒಂದು ರೂಪವನ್ನು ಬಗೆಬಗೆಯಾಗಿ ಮಾಡಿಕೊಂಡಿರುತ್ತಾನೆ; ಅವನನ್ನು ತಮ್ಮೊಳಗೆ ಕಂಡುಕೊಂಡವರಿಗೇ ಶಾಶ್ವತಸುಖವು ದೊರಕುತ್ತದೆ. ನಿತ್ಯರಿಗೆಲ್ಲ ನಿತ್ಯನಾಗಿ ಚೇತನರ ಚೇತನನಾಗಿ ಎಲ್ಲರ ಕಾಮಗಳನ್ನೂ ಪರಿಪೂರ್ತಿಗೊಳಿಸುವ ಆ ಪರಮಾತ್ಮನನ್ನು ಕಂಡುಕೊಂಡ ವಿವೇಕಿಗಳಿಗೆ ಶಾಶ್ವತಶಾಂತಿಯು ದೊರಕುವದು" ಎಂದು ವೇದಾಂತವು ಸಾರುತ್ತಿದೆ. ಪರಮಾತ್ಮನನ್ನು ಕಂಡುಕೊಳ್ಳುವದಕ್ಕಿಂತ ಉತ್ತಮಧರ್ಮವಿಲ್ಲ. ಮಿಕ್ಕ ಧರ್ಮಗಳನ್ನೆಲ್ಲ ಬಿಟ್ಟು ಆ ಧರ್ಮಸ್ವರೂಪನೇ ಆಗಿರುವ ಪರಮಾತ್ಮನನ್ನು ಶರಣುಹೊಂದೋಣ. ನಮ್ಮ ಬುದ್ಧಿವೃತ್ತಿಗಳನ್ನು ಸರಿಯಾಗಿ ಪ್ರಚೋದನೆಮಾಡೆಂದು ಆತನನ್ನೇ ಬೇಡಿಕೊಳ್ಳೋಣ.

# 18. ಸದ್ವಿದ್ಯೆಯಿಂದ ಅಶುಭನಾಶ

**"ಆದರೆ ಈ ಗುಹ್ಯತಮವಾದ ಜ್ಞಾನವನ್ನು ವಿಜ್ಞಾನಸಹಿತವಾಗಿ ಅಸೂಯಾರಹಿತನಾದ ನಿನಗೆ ತಿಳಿಸಿಕೊಡುವೆನು. ಇದನ್ನು ಅರಿತುಕೊಂಡರೆ ಅಶುಭದಿಂದ ಬಿಡುಗಡೆಯನ್ನು ಹೊಂದುವೆ."**

**-ಭಗವದ್ಗೀತೆ, 9-1**

ಶ್ರೀ ಕೃಷ್ಣಭಗವಂತನು ಅರ್ಜುನನಿಗೆ ಜ್ಞಾನವಿಜ್ಞಾನಗಳ ಸ್ವರೂಪವನ್ನೂ ಪ್ರಯೋಜನವನ್ನೂ ಅವುಗಳಿಗೆ ಅಧಿಕಾರಿ ಯಾರೆಂಬುದನ್ನೂ ಈ ವಾಕ್ಯದಲ್ಲಿ ಸಂಗ್ರಹಿಸಿ ಉಪದೇಶಮಾಡಿರುತ್ತಾನೆ. ಈ ವಾಕ್ಯದಲ್ಲಿ ಅಡಗಿರುವ ಅಭಿಪ್ರಾಯವನ್ನು ಸ್ವಲ್ಪ ಬಿಡಿಸಿ ತಿಳಿದುಕೊಳ್ಳುವದರಿಂದ ಜಿಜ್ಞಾಸುಗಳಿಗೆ ಪ್ರಯೋಜನವುಂಟು.

ಜ್ಞಾನವು ಗುಹ್ಯತಮವಾಗಿರುತ್ತದೆ, ಗುಟ್ಟುಗಳಲ್ಲೆಲ್ಲ ಗುಟ್ಟಾಗಿರುತ್ತದೆ-ಎಂದರೇನು? ಜ್ಞಾನವನ್ನು ಯಾರೊಬ್ಬರಿಗೂ ಹೇಳಿಕೊಡಕೂಡದು, ಹೇಳಿಕೊಟ್ಟರೆ ಅಪಾಯವುಂಟು-ಎಂದು ಅಭಿಪ್ರಾಯವೆ? ಸ್ವಲ್ಪಮಟ್ಟಿಗೆ ಇದು ನಿಜ. ಏಕೆಂದರೆ ಅಧಿಕಾರಿಗಳಲ್ಲದವರಿಗೆ ತತ್ತ್ವಜ್ಞಾನವನ್ನು ಹೇಳಿದರೂ ತಿಳಿಯುವ ಸಂಭವವಿಲ್ಲ; ಹೇಳಿದವರಿಗೆ ವೃಥಾ ಆಯಾಸವಾಗುತ್ತದೆ. ಇಷ್ಟೇ ಅಲ್ಲ. ಅನಧಿಕಾರಿಗಳು ಈ ಜ್ಞಾನೋಪದೇಶವನ್ನು ತಪ್ಪಾಗಿ ತಿಳಿದುಕೊಂಡು ದುರುಪಯೋಗಮಾಡಿಕೊಳ್ಳುವ ಸಂಭವವಿದೆ. ತಮಗೆ ತಿಳಿದದ್ದೇ ಸಮ್ಯಗ್ಜ್ಞಾನವು ಎಂದುಕೊಂಡು ಅವರು ದುರಭಿಮಾನದಿಂದ ಮೆರೆಯಬಹುದು; ಮಿಕ್ಕವರಿಗೆ ಜ್ಞಾನೋಪದೇಶವನ್ನು ಮಾಡುತ್ತೇವೆಂದು ತಮಗೂ ಗೊತ್ತಿಲ್ಲದೆಯೇ ತಪ್ಪುಹಾದಿಯ ಕೊರಕಲುಗಳಿಗೆ ಎಳೆಯಬಹುದು; ಅಥವಾ ಸ್ವಾರ್ಥಕ್ಕಾಗಿ ಏನೂ ಅರಿಯದ ಜನರನ್ನು ಮೋಸಗೊಳಿಸಿ ಅನರ್ಥಕ್ಕೆ ಈಡುಮಾಡಲೂಬಹುದು. ಆದ್ದರಿಂದ ಅಧಿಕಾರಿಗಳಲ್ಲದವರಿಗೆ ಈ ಜ್ಞಾನವನ್ನು ತಿಳಿಸದೆ ಗುಟ್ಟಾಗಿ ಇಟ್ಟುಕೊಳ್ಳಬೇಕು ಎಂಬುದೂ ಒಂದು ದೃಷ್ಟಿಯಿಂದ ಸರಿಯೇ.

ಆದರೆ ಇನ್ನೊಂದು ಹೆಚ್ಚಿನ ಅರ್ಥದಲ್ಲಿಯೂ ಜ್ಞಾನವು ಗುಹ್ಯತಮವಾಗಿರುತ್ತದೆ. ಜ್ಞಾನವು ಅತ್ಯಂತಸೂಕ್ಷ್ಮವಾದ, ಅತೀಂದ್ರಿಯವಾದ ಪರಮಾರ್ಥವನ್ನು ತಿಳಿಸತಕ್ಕದ್ದಾಗಿರುತ್ತದೆ. ಆದ್ದರಿಂದ ಅದರ ನಿಜವು ಅನಧಿಕಾರಿಗಳಿಗೆ ಹೇಳಿದರೂ ತಿಳಿಯುವಹಾಗಿರುವದಿಲ್ಲ. ಪ್ರಾಕೃತಜನರಿಗೆ ಭೌತಿಕಶಾಸ್ತ್ರಗಳು ಕೂಡ ತಿಳಿಯುವದಿಲ್ಲ. ಈಗಿನ ಭೌತಿಕವಿಜ್ಞಾನವನ್ನು ಕಾಲೇಜುಗಳೆಂಬ ಪ್ರೌಢವಿದ್ಯಾಶಾಲೆಗಳಲ್ಲಿ ತಿಳಿಸಿಕೊಡುತ್ತಿದ್ದಾರೆ; ನಿರೀಕ್ಷಣ, ಪ್ರಯೋಗ, ಸಂವಾದೀಕರಣ-ಇವುಗಳ ಮೂಲಕ ಮನಗಾಣಿಸಿಕೊಡುತ್ತಲೂ ಇದ್ದಾರೆ. ಆದರೂ ನಿಜವಾದ ಅರ್ಥದಲ್ಲಿ ಭೌತಿಕ ವಿಜ್ಞಾನಶಾಸ್ತ್ರವನ್ನು ಅರಿತವರು ಭೂಮಂಡಲದಲ್ಲಿ ಎಲ್ಲಿಯೋ ಕೆಲವರು ಮಾತ್ರ ಇರುತ್ತಾರೆ.

ಭೌತಿಕವಿಜ್ಞಾನಶಾಸ್ತ್ರದಿಂದ ಆಗುವ ಫಲಿತಗಳನ್ನು ಕೆಲವರು ವ್ಯವಹಾರಗಳಲ್ಲಿ ಬಳಸಿಕೊಳ್ಳುವರು; ಮಿಕ್ಕವರಿಗೆ ಅದೂ ಸಾಧ್ಯವಾಗಿಲ್ಲ. ಈ ಅರ್ಥದಲ್ಲಿ ಶಾಸ್ತ್ರಗಳೆಲ್ಲವೂ ತಕ್ಕ ಯೋಗ್ಯತೆಯಿಲ್ಲದ ಚಿತ್ತಭೂಮಿಕೆಯ ಜನರಿಗೆ ರಹಸ್ಯವೇ ಆಗಿರುತ್ತವೆ. ಆದರೆ ಪರಮಾರ್ಥಜ್ಞಾನವು ಸಾಮಾನ್ಯಜನರಿಗೆ ಅತ್ಯಂತರಹಸ್ಯವಾಗಿರುತ್ತದೆ; ಅವರಿಗೆ ತತ್ತ್ವವನ್ನು ಎಷ್ಟು ಸಲ, ಎಷ್ಟು ಪ್ರಕಾರದಿಂದ ಹೇಳಿಕೊಟ್ಟರೂ ತಿಳಿಯುವದೇ ಇಲ್ಲ. ಅದೊಂದು ಗುಹ್ಯತಮವಾದ ಪದಾರ್ಥವಾಗಿರುತ್ತದೆ.

ಜ್ಞಾನವು ವಿಜ್ಞಾನಸಹಿತವಾಗಿದ್ದರೇ ಪ್ರಯೋಜನಕರವಾಗಿರುತ್ತದೆ. ಜ್ಞಾನವೆಂದರೇನು? ಶಾಸ್ತ್ರವನ್ನು ಶ್ರವಣಮಾಡಿದ್ದರಿಂದ ಆಗಿರುವ ತಿಳಿವಳಿಕೆಯು. ಸೂಕ್ಷ್ಮವಾದ ವಿಷಯಗಳು ಬರಿಯ ಶ್ರವಣಮಾತ್ರದಿಂದ ಮಂದಮಧ್ಯಮಾಧಿಕಾರಿಗಳಿಗೆ ಪೂರ್ಣವಾಗಿ ತಿಳಿಯಬರುವದಿಲ್ಲವೆಂಬುದು ಪ್ರಸಿದ್ಧವಾಗಿದೆ. ಶ್ರವಣಮಾಡಿದ ವಿಷಯವನ್ನು ವಿಶೇಷವಾಗಿ ಅನುಭವಕ್ಕೆ ತಂದುಕೊಂಡಬಳಿಕವೇ ಅದರ ಜ್ಞಾನವು ಪರಿಪೂರ್ಣವೂ ಪರಿಶುದ್ಧವೂ ಆಗುತ್ತದೆ. ಪರಮಾರ್ಥ ಜ್ಞಾನವೂ ಹಾಗೆಯೇ. ಅದನ್ನು ತಾನೇ ಮನಗಂಡು ಇಂಥದ್ದೆಂಬ ಅನುಭವವನ್ನು ಪಡೆದುಕೊಂಡ ಮೇಲೆಯೇ ಅದು ಕಾರ್ಯಕಾರಿಯಾಗುತ್ತದೆ.

ಈ ಜ್ಞಾನವು ಯಾರಿಗೆ ಲಭಿಸುತ್ತದೆ? ಯಾರಿಗೆ ಇದರಿಂದ ಪೂರ್ಣ ಪ್ರಯೋಜನವುಂಟಾಗುತ್ತದೆ? ಈ ಪ್ರಶ್ನೆಗೆ ಭಗವಂತನು 'ಅನಸೂಯುವಿಗೆ' ಎಂಬ ಉತ್ತರವನ್ನು ಕೊಟ್ಟಿರುತ್ತಾನೆ. ಅಸೂಯೆ ಎಂದರೆ ಗುಣದಲ್ಲಿಯೂ ದೋಷವನ್ನು ಆರೋಪಿಸುವ ಸ್ವಭಾವವು. ಯಾವನು ತತ್ತ್ವವನ್ನು ಇದ್ದಂತೆ ತಿಳಿಯುವದಕ್ಕೆ ಪ್ರಯತ್ನಿಸುವದಿಲ್ಲವೋ, ಯಾವನು ತನ್ನ ಮನಸ್ಸಿನ ದೋಷವನ್ನು ವಸ್ತುವಿನಲ್ಲಿ ಆರೋಪಿಸುತ್ತಿರುವನೋ, ಅಂಥವನಿಗೆ ತತ್ತ್ವವು ಎಂದಿಗೂ ಹೊಳೆಯಲಾರದು. ಇದ್ದ ವಸ್ತುವನ್ನು ಇದ್ದಂತೆ ಅರಿತುಕೊಳ್ಳುವದಕ್ಕೆ ಸಿದ್ಧನಾಗಿರುವವನಿಗೆ ಮಾತ್ರ ಪರಮಾರ್ಥಜ್ಞಾನವು ದಕ್ಕುತ್ತದೆ ಎಂಬುದನ್ನು 'ಅನಸೂಯುವಿಗೆ' ಎಂಬ ಅಧಿಕಾರಿವಿಶೇಷಣವು ತಿಳಿಸುತ್ತದೆ.

ಈಗ ಜ್ಞಾನದಿಂದ ಆಗುವ ಪ್ರಯೋಜನವೇನು? ಎಂಬ ಪ್ರಶ್ನೆಗೆ ಭಗವಂತನು ಕೊಟ್ಟಿರುವ ಉತ್ತರವನ್ನು ನೋಡೋಣ. "ಅದನ್ನು ತಿಳಿದುಕೊಂಡರೆ ಅಶುಭದಿಂದ ಬಿಡುಗಡೆಯನ್ನು ಹೊಂದುವೆ" ಎಂದು ಭಗವಂತನು ಹೇಳಿರುತ್ತಾನೆ. ಜ್ಞಾನವು ಎಲ್ಲಾ ಅನರ್ಥವನ್ನೂ ತಪ್ಪಿಸುತ್ತದೆ; ಏಕೆಂದರೆ ಪರಮಾರ್ಥವು ಎಲ್ಲರೂ ಬಯಸತಕ್ಕದ್ದಾಗಿರುತ್ತದೆ, ಅದು ಪರಮಪುರುಷಾರ್ಥವಾದ ಆನಂದಸ್ವರೂಪವೇ ಆಗಿರುತ್ತದೆ. ಅದರಲ್ಲಿ ಅನರ್ಥದ ಗಂಧವೂ ಇರುವದಿಲ್ಲ.

ಇಲ್ಲಿ ಕೆಲವು ಸಂಶಯಗಳು ಉಂಟಾಗುವ ಸಂಭವವಿದೆ, ಜ್ಞಾನವು ಯಾವಾಗಲೂ 'ಅನಸೂಯುವಾದವನಿಗೇ' ದೊರಕುತ್ತದೆ, ಈ ಗುಣವಿಲ್ಲದವನಿಗೆ ದೊರಕುವದಿಲ್ಲ ಎಂದು ವಾದಿಸಬಹುದೆ? ಈಗಿನ ಭೌತಿಕವಿಜ್ಞಾನಿಗಳಲ್ಲಿ ಒಬ್ಬೊಬ್ಬರು ಒಂದೊಂದು ಜನಾಂಗಕ್ಕೆ ಸೇರಿರುತ್ತಾರೆ. ಆಯಾ ಜನಾಂಗದವರಿಗೆ ಸ್ವಾತ್ಮಾಭಿಮಾನವೂ ಮಿಕ್ಕ ಜನಾಂಗದವರ ವಿಷಯದಲ್ಲಿ ಅನಾದರವೂ ಹಲವು ಕಾರಣಗಳಿಂದ ಏರ್ಪಟ್ಟಿರುತ್ತವೆ. ಆದರೂ ಹೊಸ ಹೊಸ ವಿಷಯಗಳನ್ನು ಶೋಧನ ಮಾಡಿರುವ ಭೌತಿಕವಿಜ್ಞಾನಿಗಳು ಎಲ್ಲಾ ಜನಾಂಗದಲ್ಲಿಯೂ ಇರುತ್ತಾರಲ್ಲ !– ಇದು ಹೇಗೆ? ಇನ್ನೊಂದು ಸಂಶಯ. ತತ್ತ್ವಜ್ಞಾನವು ಅನರ್ಥಗಳನ್ನು ತೊಲಗಿಸಬೇಕೆಂಬುದು ಸರಿಯಾದ ನಿಯಮವೆ? ಭೌತಿಕವಿಜ್ಞಾನವು ಕಂಡುಹಿಡಿದಿರುವ ಕೆಲವು ರಹಸ್ಯಗಳನ್ನುಪಯೋಗಿಸಿಕೊಂಡು ಬೇರೆಬೇರೆಯ ರಾಷ್ಟ್ರಗಳು ಕ್ಷುದ್ರರಾಷ್ಟ್ರಗಳನ್ನು ತುಳಿದು ತಮ್ಮ ವಶದಲ್ಲಿಟ್ಟುಕೊಳ್ಳುವದೂ ಹಿಂಸಿಸಿ ನಾಶಗೊಳಿಸುವದೂ ನಮ್ಮ ಕಣ್ಣಮುಂದೆಯೇ ಇರುವದಲ್ಲ ! ಜ್ಞಾನವು ಯಾವಾಗಲೂ ಅಶುಭದಿಂದ ಬಿಡುಗಡೆಯನ್ನು ಮಾಡಿಯೇತೀರುವದೆಂದು ಹೇಳಬಹುದೆ? ಭೌತಿಕಜ್ಞಾನದಿಂದ ಲೋಕದಲ್ಲಿ ಅನರ್ಥವಾಗಿರುವದೆಂಬ ದೃಷ್ಟಾಂತದಿಂದ ಈ ಇಡಿಯ ಜಗತ್ತಿನ ಪರಮಾರ್ಥದ ಜ್ಞಾನವೂ ಯಾವದಾದರೊಂದು ಅನರ್ಥಕ್ಕೆ ಕಾರಣವಾಗಬಹುದೆಂದು ಶಂಕಿಸುವದಕ್ಕೂ ಬರುವದಿಲ್ಲವೆ?

ಈ ಶಂಕೆಯ ಪರಿಹಾರಕ್ಕೆ ಈಗ ಪ್ರಯತ್ನಿಸುವೆನು. ಮೊದಲನೆಯದಾಗಿ ಭೌತಿಕವಿಜ್ಞಾನವು ಅನಾತ್ಮಜ್ಞಾನವು. ಪರಮಾರ್ಥತತ್ತ್ವವು ಅನಂತವಾಗಿಯೂ ಸಮತೆಯನ್ನು ಪಡೆದಿರುವದಾಗಿಯೂ ಆನಂದರೂಪವಾಗಿಯೂ ಇರುತ್ತದೆ; ಅದು ಅನಂತವಾಗಿರುವದರಿಂದ ಇರುವದೆಲ್ಲವನ್ನೂ ವ್ಯಾಪಿಸಿಕೊಂಡು ಅದರ ಆತ್ಮನೇ, ಅದರ ತಿರುಳೇ, ಆಗಿರುತ್ತದೆ. ಆದ್ದರಿಂದ ಪರಮಾರ್ಥತತ್ತ್ವವು ನಮ್ಮ ಆತ್ಮನೆಂಬ ಜ್ಞಾನವೇ ನಿಜವಾದ ಜ್ಞಾನವು. ಆದ್ದರಿಂದ ಅನಾತ್ಮಜ್ಞಾನವಾದ ಭೌತಿಕಜ್ಞಾನಕ್ಕೆ ಅನಸೂಯುತ್ವವೆಂಬ ಗುಣವೇನೂ ಅವಶ್ಯವಲ್ಲ; ಭೌತಿಕಶಾಸ್ತ್ರದ ವಿದ್ಯಾರ್ಥಿಯು ಎಂಥ ನಡತೆಯವನಾಗಿ ಎಂಥ ಸ್ವಭಾವದವನಾಗಿ ಇದ್ದರೂ ಚುರುಕಾದ ಬುದ್ಧಿಯವನಾಗಿದ್ದು ವಸ್ತುನಿರೀಕ್ಷಣೆಗೂ ಪರೀಕ್ಷೆಗೂ ಬೇಕಾದಷ್ಟು ಏಕಾಗ್ರತೆಯೂ ತತ್ಪರತೆಯೂ ಇರುವವನಾದರೆ ಸಾಕು. ಅಷ್ಟರಿಂದಲೇ ಭೌತಿಕ ಜ್ಞಾನವು ಆಗಿಬಿಡಬಹುದು. ಪರಮಾರ್ಥತತ್ತ್ವದ ಜ್ಞಾನಕ್ಕೆ ಅನಸೂಯುತ್ವವೇ ಮುಂತಾದ ಸಾಧನಗಳು ಇರಬೇಕೆಂಬ ನಿಯಮಕ್ಕೆ ಇದರಿಂದಲೇನೂ ಹಾನಿ ಯಿಲ್ಲ. ಹೀಗೆಂದು ಕೆಲವರು ವಿಮರ್ಶಕರು ಅಭಿಪ್ರಾಯಪಟ್ಟಿರುತ್ತಾರೆ.

ಆದರೆ ಸ್ವಲ್ಪ ಒಳಹೊಕ್ಕು ನೋಡಿದರೆ ಇರುವದು ಒಂದೇ ಪರಮಾರ್ಥವು; ಅದನ್ನೇ ನಮ್ಮ ತಿಳಿವಳಿಕೆಯು ಬಗೆಬಗೆಯಾಗಿ ತಿಳಿಸುತ್ತಿರುವದು–ಎಂಬುದು ವೈದಿಕಸಿದ್ಧಾಂತವು. ವೈದಿಕಸಿದ್ಧಾಂತವನ್ನು ಅವಲಂಬಿಸಿದ ಶಾಸ್ತ್ರದೃಷ್ಟಿಗೆ ಯಾವದೊಂದು ವಸ್ತುವೂ ಪರಮಾರ್ಥಕ್ಕಿಂತ ಬೇರೆಯಾಗಿ ಇರುವದಿಲ್ಲ. ಇರುವದೆಲ್ಲ ಒಂದೇ, ಅದೇ ಪರಮಾತ್ಮನು ಅಥವಾ ಬ್ರಹ್ಮವು; "ಬ್ರಹ್ಮೈವೇದಂ ಸರ್ವಮ್" ಎಂಬ ವೇದಾಂತವಾಕ್ಯಕ್ಕೆ ಇದೇ ಅಭಿಪ್ರಾಯವು. ಈ ದೃಷ್ಟಿಯಿಂದ ಎಲ್ಲಾ ಜಿಜ್ಞಾಸುಗಳೂ ಅರಿತೋ ಅರಿಯದೆಯೋ ಈ ಬ್ರಹ್ಮವೆಂಬ ಪರಮಾರ್ಥವನ್ನೇ ಜಿಜ್ಞಾಸೆಮಾಡುತ್ತಿದ್ದಾರೆ. ಲೌಕಿಕಶಾಸ್ತ್ರಗಳಿಗೆ ಬೇರೆಬೇರೆ ವಿಷಯಗಳಿರುವವೆಂದು ಭಾವಿಸಿರುವದು ವಿಚಾರದ ಸೌಕರ್ಯಕ್ಕಾಗಿಯೇ ಹೊರತು ನಿಜವಾಗಿ ಅಷ್ಟಷ್ಟು ಭಿನ್ನಭಿನ್ನವಿಷಯಗಳು ಇರುವವೆಂದಾಗಲಿ ಶಾಸ್ತ್ರಗಳು ಅತ್ಯಂತವಾಗಿ ಒಂದರಿಂದೊಂದು ವಿಂಗಡವಾಗಿದ್ದುಕೊಂಡಿರುವ ಜ್ಞೇಯಗಳನ್ನೇ ವಿಚಾರಕ್ಕೆ ತೆಗೆದು ಕೊಂಡಿರುವವೆಂದಾಗಲಿ ಭಾವಿಸುವಹಾಗಿಲ್ಲ. ಕಾರ್ಷಾಪಣವೆಂಬ ಒಂದು ತೊಲೆಯ ಚಿನ್ನದ ನಾಣ್ಯವು ಪೂರ್ವಕಾಲದಲ್ಲಿ ಬಳಕೆಯಲ್ಲಿತ್ತು. ಅಷ್ಟು ಹೆಚ್ಚಿನ ಬೆಲೆಯ ನಾಣ್ಯವನ್ನು ಎಲ್ಲರೂ ಕೊಳ್ಳುವ ಮಾರುವ ವ್ಯವಹಾರದಲ್ಲಿ ಬಳಸುವದಕ್ಕೆ ಆಗದ್ದರಿಂದ ಅದರ ಕಾಲುಭಾಗದಷ್ಟು ಬೆಲೆಯ ಬೇರೆಯ ನಾಣ್ಯಗಳನ್ನು ಉಪಯೋಗಿಸಬೇಕಾಗುತ್ತಿತ್ತು. ಇನ್ನು ಕೆಲವರಿಗೆ ಅದೂ ದಕ್ಕುತ್ತಿರಲಿಲ್ಲವಾದ್ದರಿಂದ ಇನ್ನೂ ಚಿಕ್ಕಪುಟ್ಟ ನಾಣ್ಯಗಳನ್ನು ಕಲ್ಪಿಸಿಕೊಳ್ಳಬೇಕಾಗಿಬರುತ್ತಿತ್ತು. ಈಗಲೂ ಆಯಾ ದೇಶದಲ್ಲಿ ಚಲಾವಣೆಯಲ್ಲಿರುವ ತೀರ ದೊಡ್ಡ ನಾಣ್ಯವನ್ನು ಎಲ್ಲರೂ ಸಣ್ಣಪುಟ್ಟ ವ್ಯವಹಾರಗಳಲ್ಲಿ ಬಳಸುವದಕ್ಕೆ ಆಗುವದಿಲ್ಲ; ಚಿಲ್ಲರೆಯ ವ್ಯಾಪಾರಕ್ಕೆ ಕಲ್ಪಿತವಾದ ಅಂಶರೂಪವಾದ ನಾಣ್ಯಗಳೇ ಬೇಕಾಗುತ್ತವೆ. ಆದಮಾತ್ರಕ್ಕೆ ಮೂಲದ ನಾಣ್ಯವು ಅಷ್ಟು ತುಂಡುಗಳಾಗಿರುವದೆಂದು ಭಾವಿಸಬಹುದೆ? ಕೂಡದು. ಹೀಗೆಯೇ ವಿಚಾರದ ಸೌಕರ್ಯಕ್ಕಾಗಿ ಪೂರ್ಣ ತತ್ತ್ವವನ್ನು ತಮ್ಮ ತಮ್ಮ ದೃಷ್ಟಿಕೋಣಗಳಿಂದ ನೋಡಿ ಆಯಾ ಕಲ್ಪಿತವಾದ ಅಂಶರೂಪವಾದ ಜ್ಞೇಯಗಳ ವಿಚಾರಕ್ಕೆ ಆಯಾ ಶಾಸ್ತ್ರಗಳು ಹೊರಟಿವೆ. ಆದಮಾತ್ರಕ್ಕೆ ಪರಮಾರ್ಥವು ನಿಜವಾಗಿಯೂ ಅಷ್ಟು ತುಂಡಾಗಿರುವದಿಲ್ಲ. ಈ ದೃಷ್ಟಿಯಿಂದ ನೋಡಿದಾಗ ಭೌತಿಕವಿಜ್ಞಾನದ ಶಾಸ್ತ್ರಗಳೂ ಅದೇ ಪರಮಾರ್ಥ ತತ್ತ್ವವನ್ನೇ ಬೇರೆಬೇರೆಯ ಕ್ರಮದಿಂದ ಹುಡುಕುತ್ತಿವೆ ಎಂದಾಗು ವದು. ಬ್ರಹ್ಮವು ಸರ್ವವಿದ್ಯಾಪ್ರತಿಷ್ಠೆಯು, ಎಲ್ಲಾ ವಿದ್ಯೆಗಳೂ ಬ್ರಹ್ಮವಿದ್ಯೆಯಲ್ಲಿಯೇ ಕೊನೆಗಾಣುವವು, ಎಂದು ಉಪನಿಷತ್ತಿನಲ್ಲಿ ಹೇಳಿರುವದಕ್ಕೆ ಇದೇ ಕಾರಣ. ಆದ್ದರಿಂದ ಭೌತಿಕ ವಿಜ್ಞಾನದ ವಿದ್ಯಾರ್ಥಿಗಳಿಗೂ ಅನಸೂಯುತ್ವವು ಬೇಕು; ಅವರಿಗೂ ಅಮಾನಿತ್ವ, ಅದಂಭಿತ್ವ, ಅಹಿಂಸೆ, ಕ್ಷಾಂತಿ–ಮುಂತಾದ ಗುಣಗಳು ಇರಲೇಬೇಕು. ಹಾಗಾದರೇ ಅವರಿಗೆ ಆಯಾ ಶಾಸ್ತ್ರದಲ್ಲಿ ತಲಸ್ಪರ್ಶಿಯಾದ ಜ್ಞಾನವು ಉಂಟಾಗುತ್ತದೆ.

ಭೌತಿಕವಿಜ್ಞಾನದ ಕೆಲವು ನವೀನ ಶೋಧಗಳು ಅನರ್ಥಕ್ಕೆ ಕಾರಣವಾಗಿರುವವಲ್ಲ!- ಎಂಬ ಆಕ್ಷೇಪಕ್ಕೆ ಈಗ ಪರಿಹಾರವನ್ನು ಕಂಡುಕೊಳ್ಳಬಹುದಾಗುವದು. ಏಕೆಂದರೆ ಮೊದಲನೆಯದಾಗಿ ಆ ಶೋಧನಗಳನ್ನು ದುರುಪಯೋಗಪಡಿಸಿಕೊಂಡದ್ದರಿಂದ ಲೋಕಕ್ಕೆ ಹಾನಿಯಾಗಿದ್ದರೆ ಅದು ಶಾಸ್ತ್ರದ ಅಪರಾಧವಾಗುವದಿಲ್ಲ. ಎರಡನೆಯದಾಗಿ ಭೌತಿಕವಿಜ್ಞಾನವನ್ನು ಪರಮಾರ್ಥಜ್ಞಾನದವರೆಗೂ ಮುಟ್ಟಿಸಿಯೇ ನಿರ್ಧರಿಸಬೇಕೆಂಬ ಸಂಕಲ್ಪವು ಬಹುಜನ ಶೋಧಕರಿಗೆ ಇರುವದೂ ಇಲ್ಲ. ಕೆಲವರು ಕೇವಲ ತತ್ತ್ವ ಶೋಧನೆಯ ಕುತೂಹಲದಿದ, ಮತ್ತೆ ಕೆಲವರು ಆಯಾ ಸರಕಾರದವರ ಪ್ರಲೋಭನಕ್ಕೆ ಒಳಗಾಗಿ, ಇನ್ನೂ ಕೆಲವರು ತಮ್ಮ ದುರ್ಭಾವನೆಯಿಂದಲೇ ಪ್ರೇರಿತರಾಗಿ, ಅನರ್ಥಕಾರಕವಾದ ವಸ್ತುಗಳನ್ನು ಅಥವಾ ಯಂತ್ರಗಳನ್ನು ಕಂಡುಹಿಡಿದು ಅಥವಾ ವಿರಚಿಸಿ ಹೊರಕ್ಕೆ ಬಿಡುತ್ತಿರುವರು. ಇಂಥ ಸಂದರ್ಭಗಳಲ್ಲಿ ಮಾಡಬಾರದ್ದನ್ನು ಮಾಡಿದ್ದರಿಂದ ಆಗಬಾರದ್ದು ಆಗುವದೆಂಬುದರಲ್ಲಿ ಆಶ್ಚರ್ಯವೇನೂ ಇಲ್ಲ.

ಪ್ರಕೃತಿಮಾತೆಯು ಎಲ್ಲಾ ಜ್ಞಾನವನ್ನೂ ಎಲ್ಲರಿಗೂ ನಿರಾಯಾಸವಾಗಿ ಕೊಡುವದಿಲ್ಲ. ಅದನ್ನು ಒಂದು ರಹಸ್ಯವಾಗಿಯೇ ಇಟ್ಟಿದ್ದು ಸಮಯಕ್ಕೆ ತಕ್ಕಷ್ಟು ಮಾತ್ರವೇ ಜನರಿಗೆ ಪ್ರಕಟಗೊಳಿಸುತ್ತಾಳೆ. ಪುಣ್ಯಕರ್ಮದಿಂದ ಪುಣ್ಯಫಲವೂ ಪಾಪಕರ್ಮದಿಂದ ಪಾಪಫಲವೂ ಉಂಟಾಗುವದೆಂಬ ನಿಯಮವು ಆಯಾ ಅಧಿಕಾರಿಗಳ ವರ್ತನೆಯಿಂದ ಜಿಜ್ಞಾಸುಗಳ ಮನಸ್ಸಿಗೆ ತಟ್ಟುವದೂ ಇದಕ್ಕೆ ಪ್ರಯೋಜನವಾಗುತ್ತದೆ. ಮುಂದೆ ಇದರಿಂದೇನಾಗಬಹುದೆಂಬ ವಿವೇಚನೆಯಿಲ್ಲದೆ ಜ್ಞಾನವನ್ನು ವ್ಯವಹಾರಕ್ಕೆ ಇಳಿಸುವದರಿಂದಾಗುವ ಅನರ್ಥವನ್ನು ಪಂಚತಂತ್ರಕಾರನು ಒಂದು ಕಥೆಯಿಂದ ವಿಶದಗೊಳಿಸಿರುತ್ತಾನೆ. ನಾಲ್ಕು ಜನ ತರುಣರು ಒಂದು ಅಡವಿಯಲ್ಲಿ ಹೋಗುತ್ತಿದ್ದರು; ದಾರಿಯಲ್ಲಿ ಒಂದು ಸತ್ತ ಪ್ರಾಣಿಯ ಅಸ್ಥಿಪಂಜರದ ಭಾಗಗಳು ಅವರ ಕಣ್ಣಿಗೆ ಬಿದ್ದವು. ಆಗ ಅವರು ತಮ್ಮ ವಿದ್ಯೆಯ ಪ್ರಭಾವವನ್ನು ಪರೀಕ್ಷಿಸುವ ತವಕದಿಂದ ಹೊರಟರು. ಒಬ್ಬನು ಆ ಎಲುಬುಗಳನ್ನು ಒಂದು ಕಡೆಗೆ ಸೇರಿಸಿ ಪಂಜರವನ್ನು ರೂಪಿಸಿದನು; ಇನ್ನೊಬ್ಬನು ಸಂಜೀವಿನೀವಿದ್ಯಾಶಕ್ತಿಯಿಂದ ಅದಕ್ಕೆ ಚರ್ಮಮಾಂಸರಕ್ತಗಳನ್ನು ಕೂಡಿಸಿಟ್ಟನು; ಮತ್ತೊಬ್ಬನು ಅದರೊಳಗೆ ಪ್ರಾಣವನ್ನು ತುಂಬುವದಕ್ಕೆ ಹೊರಟನು; ನಾಲ್ಕನೆಯವನು ಶಾಸ್ತ್ರಜ್ಞನಲ್ಲದಿದ್ದರೂ ಯುಕ್ತಾಯುಕ್ತ ವಿವೇಕಿಯಾದ್ದರಿಂದ ಅವರಿಗೆ 'ನೀವು ಮಾಡುತ್ತಿರುವದು ಅಕಾರ್ಯವು' ಎಂದು ಎಷ್ಟು ಹೇಳಿದರೂ ಆ ಮೂರ್ಖರು ಅವನ ಮಾತನ್ನು ಕಿವಿಗೆ ಹಾಕಿಕೊಳ್ಳಲಿಲ್ಲ. ಅವನು ಒಂದು ಮರದ ಮೇಲೆ ಅವಿತುಕೊಳ್ಳುವಷ್ಟರಲ್ಲಿ ಆ ಪ್ರಾಣಿಯು ಮೃತ

ಸಂಜೀವಿನೀಮಂತ್ರಪ್ರಭಾವದಿಂದ ಬದುಕಿ ಎದ್ದು ಆರ್ಭಟಿಸುತ್ತಾ ಆ ಮೂವರನ್ನೂ ಕೊಂದುಹಾಕಿತು ! ಈ ಕಾಲದ ಭೌತಿಕಶಾಸ್ತ್ರಜ್ಞರು ಕೆಲವರು ಆ ಅವಿವೇಕಿಗಳನ್ನೇ ಅನುಕರಿಸುತ್ತಿದ್ದಾರೆನ್ನಬಹುದು. ಇವರಲ್ಲಿ ಕೆಲವರು ಕಾಲದೇಶಗಳ ಪರಿಸ್ಥಿತಿಯನ್ನಾಗಲಿ ತಮ್ಮ ವ್ಯಾಪಾರದ ದುಷ್ಪರಿಣಾಮವನ್ನಾಗಲಿ ಮನಸ್ಸಿಗೆ ತಂದುಕೊಳ್ಳದೆ ಒಬ್ಬರು ಮರಣಕಿರಣಗಳನ್ನು, ಇನ್ನೊಬ್ಬರು ವಿಷವಾಯುಗಳನ್ನು, ಮತ್ತೊಬ್ಬರು ಆಟಂಬಾಂಬುಗಳನ್ನು, ಮಗುದೊಬ್ಬರು ವಿನಾಶಕ್ರಿಮಿಗಳನ್ನು-ಹೀಗೆಲ್ಲ ಶೋಧನೆ ಮಾಡಿ ತಮ್ಮ ಕೌಶಲವನ್ನು ತಾವೇ ಮೆಚ್ಚುತ್ತಾ ತಮ್ಮ ತಮ್ಮ ರಾಷ್ಟ್ರದ ಸರಕಾರಕ್ಕೆ ಮಾರುತ್ತಿರುವರು. ಆ ರಾಷ್ಟ್ರಗಳೂ "ಅನುಬನ್ಧಂ ಕ್ಷಯಂ ಹಿಂಸಾಮನಪೇಕ್ಷ್ಯ ಚ ಪೌರುಷಮ್ । ಮೋಹಾದಾರಭ್ಯತೇ ಕರ್ಮ ತತ್ತಾಮಸಮುದಾಹೃತಮ್" ಎಂಬ ಗೀತೋಕ್ತಿಯಂತೆ ತಮ್ಮ ಕೆಲಸದಿಂದ ಮುಂದಾಗುವ ಫಲವನ್ನಾಗಲಿ, ತಮಗಾಗುವ ಶಕ್ತಿಕ್ಷಯವನ್ನಾಗಲಿ ಅರ್ಥಕ್ಷಯವನ್ನಾಗಲಿ, ಪ್ರಾಣಿಗಳಿಗೆ ಆಗಬಹುದಾದ ಹಿಂಸೆಯನ್ನಾಗಲಿ, ಅದನ್ನು ಪರಿಪೂರ್ಣಗೊಳಿಸುವದಕ್ಕೆ ಅಥವಾ ಅದರ ದುಷ್ಪರಿಣಾಮವನ್ನು ನೇರ್ಪಡಿಸುವದಕ್ಕೆ ತಕ್ಕಷ್ಟು ಪೌರುಷವು ತಮ್ಮಲ್ಲಿದೆಯೆ ಎಂಬುದನ್ನಾಗಲಿ ಮನದಂದುಕೊಳ್ಳದೆ ಮೋಹದಿಂದ ಲಕ್ಷಗಟ್ಟಲೆಯ ಹಣವನ್ನು ವ್ಯಯಮಾಡಿ ಪೈಪೋಟಿಯಿಂದ ಈ ತಾಮಸ ವ್ಯಾಪಾರದಲ್ಲಿ ತೊಡಗುತ್ತಿರುವವು. ಹೀಗಿರುವದರಿಂದ ಭೌತಿಕವಿಜ್ಞಾನದಿಂದ ಸದ್ಯದಲ್ಲಿ ಆಗುತ್ತಿರುವ ಅನರ್ಥವು ಅಪೂರ್ಣವಾದ ತಾಮಸವಾದ ಜ್ಞಾನದ ಫಲವೇ ಹೊರತು ಪೂರ್ಣವಾದ ಸಾತ್ತ್ವಿಕಜ್ಞಾನದ ಫಲವಲ್ಲವೆಂಬುದು ಸ್ಪಷ್ಟ.

ಭೌತಿಕವಿಜ್ಞಾನಶಾಸ್ತ್ರದಲ್ಲಿ ತೊಡಗಿರುವವರಿಗೆ ಆ ಶಾಸ್ತ್ರದ ತಾತ್ಕಾಲಿಕ ಅಪೂರ್ಣತೆಯು ತಿಳಿದಿಲ್ಲವೆಂದಾಗಲಿ, ಆ ಶಾಸ್ತ್ರಜ್ಞಾನದ ಪ್ರವಾಹವು ಕೊನೆಗಾದರೂ ಬ್ರಹ್ಮಜ್ಞಾನಸಾಗರದಲ್ಲಿ ಸಂಗಮವಾಗುವದೆಂಬುದು ಹೊಳೆದಿಲ್ಲವೆಂದಾಗಲಿ ಹೇಳುವಹಾಗಿಲ್ಲ. ಎಷ್ಟೋ ಜನ ವಿಮರ್ಶಕರು ಈಗಾಗಲೆ ಈ ತತ್ತ್ವವನ್ನು ಮನಗಂಡಿರುತ್ತಾರೆಂಬುದು The Mysterious Universe by Sir James Jeans (ಸರ್ ಜೇಮ್ಸ್ ಜೀನ್ಸ್ ಎಂಬಾತನು ಬರೆದಿರುವ 'ದುರ್ವಿಜ್ಞೇಯ ವಿಶ್ವ') ಮತ್ತು The Nature of the Physical World by Eddington (ಎಡ್ಡಿಂಗ್ಟನ್ ಎಂಬಾತನು ಬರೆದಿರುವ 'ಭೌತಿಕಪ್ರಪಂಚಸ್ವಭಾವ)-ಎಂಬೀ ಜಾತಿಯ ಗ್ರಂಥಗಳಿಂದ ವ್ಯಕ್ತವಾಗುತ್ತದೆ. ಇದರಂತೆ ರಾಜನೀತಿ ವಿಶಾರದರಲ್ಲಿಯೂ ಈ ವಿಷಯಕ್ಕೆ ಮನ್ನಣೆಯಿಲ್ಲದೆ ಇಲ್ಲ. ಆದರೂ ಆಯಾ ರಾಷ್ಟ್ರಕ್ಕೆ ಅವರಲ್ಲಿರಬೇಕಾಗಿ ಬಂದಿರುವ ಅವರವರ ಹೊಣೆಗಾರಿಕೆಯು ಅಥವಾ ಅವರವರ ಅಧಿಕಾರಸ್ಥಾನವು

ಅವರನ್ನು ಇದರಲ್ಲಿ ಹೆಚ್ಚಿನ ಆಸಕ್ತಿಯನ್ನು ವಹಿಸಲು ಅವಕಾಶವನ್ನು ನೀಡಿಲ್ಲವೆಂದು ತಿಳಿಯಬೇಕಾಗಿದೆ. ಸೈನ್ಯವನ್ನು ಹೆಚ್ಚಿಸುವದೂ ಘಾತಕ ಸಾಧನ ಗಳನ್ನು ರಾಶಿಹಾಕಿಕೊಳ್ಳುವದೂ ಜನರ ಸುಖಶಾಂತಿಗಳಿಗೆ ಉತ್ತಮ ಸಾಧನ ವೆಂಬುದನ್ನು ಅವರುಗಳು ಯಾರೂ ಒಪ್ಪುವದಿಲ್ಲ. ಆದರೆ 'ರಾಷ್ಟ್ರದ ರಕ್ಷಣೆ' ಗೋಸ್ಕರ ಸೈನ್ಯವನ್ನೂ ಶಸ್ತ್ರಾಸ್ತ್ರಗಳನ್ನೂ ತಕ್ಕಮಟ್ಟಿಗೆ ಸಂಗ್ರಹಿಸದೆ ಇದ್ದರೆ ಸದ್ಯಃಸ್ಥಿತಿಯಲ್ಲಿ ಆಗುವಹಾಗಿಲ್ಲವೆಂದು ಅವರ ಹೇಳಿಕೆ !

ಇದು ಹೇಗಾದರೂ ಇರಲಿ. ಸದ್ಯಕ್ಕೆ ಮಾನವನಿಗೆ ಗೊತ್ತಾಗಿರುವ ಭೌತಿಕ ವಿಜ್ಞಾನವು ದುಷ್ಫಲವನ್ನು ಕೊಡುತ್ತಿರುವದು ಅವನ ಪಾಪವಾಸನೆಯ ಕಾರ್ಯ ವೆಂಬುದು ನಿಶ್ಚಯವು. ಆದರೆ ಸದ್ವಿದ್ಯಾಭ್ಯಾಸವು ಹೆಚ್ಚಿದಂತೆಲ್ಲ ಈ ಅಶುಭ ವಾಸನೆಯು ನಾಶವಾಗಿ ಎಲ್ಲಾ ತಿಳಿವಳಿಕೆಯೂ ಅಶುಭದಿಂದ ಬಿಡುಗಡೆಯನ್ನು ಹೊಂದುವದಕ್ಕೇ ಸಾಧನವಾಗುವದೆಂಬುದರಲ್ಲಿ ಯಾವ ಸಂಶಯವೂ ಇಲ್ಲ.

ಹೀಗಿರುವದರಿಂದ ತತ್ತ್ವಜ್ಞಾನದಿಂದ ಕೆಟ್ಟ ಪರಿಣಾಮವಾಗುವದೆಂಬ ಶಂಕೆಗೆ ಯಾವ ಬಡುವೂ ಇರುವದಿಲ್ಲ. ಸದ್ಯಃಸ್ಥಿತಿಯಲ್ಲಿ ವಿವೇಕಿಗಳಾದವರ ಕರ್ತವ್ಯ ವೇನೆಂದರೆ, ಭೌತಿಕವಿಜ್ಞಾನಕ್ಕಿಂತಲೂ ಮೊಟ್ಟಮೊದಲೇ ಜನಸಾಮಾನ್ಯಕ್ಕೆ ಸರ್ವ ವಿದ್ಯಾಪ್ರತಿಷ್ಠಾರೂಪವಾದ ಬ್ರಹ್ಮವಿದ್ಯೆಯ ಸ್ಥೂಲಪರಿಚಯವಾದರೂ ಆಗುವಂತೆ ಏರ್ಪಡಿಸಬೇಕು. ಅನಂತವಾದ ಸಮತೆಯ ಆನಂದವು ನಮ್ಮೆಲ್ಲರ ಜನ್ಮಸಿದ್ಧವಾದ ಹಕ್ಕೆಂಬುದನ್ನೂ ಅದನ್ನು ಅಂತಃಕರಣಶುದ್ಧಿಯಿಂದಲೇ ಸಂಪಾದಿಸಿಕೊಳ್ಳ ಬೇಕಾಗಿದೆಯೆಂಬುದನ್ನೂ ಜನರಿಗೆ ತಿಳಿಯಹೇಳಬೇಕು. ಬ್ರಹ್ಮವಿದ್ಯೆಯು ರಹಸ್ಯ ಜ್ಞಾನವೆಂಬುದು ನಿಶ್ಚಯ; ಆದರೆ ಅದನ್ನು ಶ್ರದ್ಧಾಭಕ್ತಿಗಳುಳ್ಳ ಜನರಲ್ಲಿ ಪ್ರಚಾರ ಮಾಡುವದು ಬಹಳ ಸುಲಭವು. ಈ ಪರಮಗುಹ್ಯವಾದ ವಿದ್ಯೆಯನ್ನು ಭಕ್ತಿಯುತರಾದವರಲ್ಲಿ ಪ್ರಚಾರಮಾಡುವದು ಪರಮಗುರುವಾದ ಭಗವಂತನ ಸೇವೆಯೆಂಬುದು ಗೀತೆಯ ಉಪದೇಶವು. ಆ ಉಪದೇಶಕ್ಕೆ ನಾವು ಕಿವಿಗೊಟ್ಟಂತೆಲ್ಲ ಮಾನವ ವರ್ಗವು ಅಶುಭರೂಪವಾದ ಬಂಧಗಳಿಂದ ಬಿಡುಗಡೆಯಾಗುತ್ತಾ ಹೋಗುವದೆಂಬುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ.

****

## 19. ಭಗವಂತನ ತೇಜಸ್ಸಿನ ಧ್ಯಾನ

ಪರಮಾರ್ಥತತ್ತ್ವವು ಋಷಿಗಳ ಮನಸ್ಸಿನಲ್ಲಿ ಮಾತ್ರ ಮೊದಲು ಹೊಳೆಯಿತೆಂದೂ ಅವರ ಬಾಯಿಂದ ಹೊರಟುಬಂದ ವಾಕ್ಯರಾಶಿಯೇ ವೇದವೆಂದೂ ಸನಾತನಾರ್ಯರ ನಂಬಿಕೆ. ವೇದವು ಅಪೌರುಷೇಯವು, ಕಾಳಿದಾಸಾದಿಗಳು ಕಾವ್ಯಗಳನ್ನು ರಚಿಸಿರುವಂತೆ ಅದನ್ನು ಋಷಿಗಳು ರಚಿಸಿರುವದಿಲ್ಲ. ವೇದವು ಅನಾದಿಯು, ಅದು ಯಾವಾಗಲೂ ಈ ರೂಪದಿಂದಲೇ ಇದ್ದುಕೊಂಡು ಆಗಾಗ್ಗೆ ಮರೆಯಾಗುವದು; ಬಳಿಕ ಬೇರೊಂದು ಯುಗದಲ್ಲಿ ಮಹರ್ಷಿಗಳು ತಪಸ್ಸಿನಿಂದ ಇದೇ ವೇದವನ್ನೇ ಕಂಡುಹಿಡಿಯುವರು–ಎಂದು ಆಸ್ತಿಕರೆಲ್ಲರೂ ನಂಬುತ್ತಾರೆ. ಈ ನಂಬಿಕೆಯಲ್ಲಿ ಒಂದು ಪರಮರಹಸ್ಯವು ಅಡಗಿರುತ್ತದೆ. ಉತ್ತಮವಾದ ಘನವಿಚಾರಗಳು ನಮ್ಮ ಅಂತಃಕರಣಕ್ಕೆ ಎಲ್ಲಿಂದ ಬಂದು ತೋರಿಕೊಳ್ಳುವವು?–ಎಂಬ ಪ್ರಶ್ನೆಗೆ ಈ ನಂಬಿಕೆಯಲ್ಲಿ ಉತ್ತರವು ದೊರೆಯುತ್ತದೆ.

ಇತಿಹಾಸದ ದೃಷ್ಟಿಯಿಂದ ನೋಡುವವರು ಕೂಡ ಋಗ್ವೇದವೆಂಬುದು ಬಹು ಪುರಾತನವಾದ ವಾಙ್ಮಯವೆಂದು ಒಪ್ಪಿಕೊಂಡಿರುತ್ತಾರೆ. ಸಾವಿರಗಟ್ಟಲೆಯಾಗಿ ವರ್ಷಗಳ ಹಿಂದೆ ಈ ವೇದವು ವಿರಚಿತವಾಯಿತೆಂದು ಐತಿಹಾಸಿಕರ ನಂಬಿಕೆ. ಇದರಲ್ಲಿ ಗಾಯತ್ರೀ ಎಂಬ ಒಂದು ಮಂತ್ರವಿದೆ. ಅದನ್ನು ಇಂದಿಗೂ ದ್ವಿಜರು ಸಂಧ್ಯಾವಂದನೆಯ ಕಾಲದಲ್ಲಿ ಜಪಿಸುತ್ತಿರುತ್ತಾರೆ. ಗಾಯತ್ರೀಮಂತ್ರದ ಸರಳವಾದ ಅರ್ಥವೇನೆಂದರೆ :

**"ಆ ಸವಿತೃದೇವನ ವರಣೀಯವಾದ ತೇಜಸ್ಸನ್ನು ಧ್ಯಾನಮಾಡುವೆವು. ಆತನು ನಮ್ಮಗಳ ಬುದ್ಧಿವೃತ್ತಿಗಳನ್ನು ಪ್ರೇರಿಸಲಿ!"**

ಈ ಮಂತ್ರದ ಆಶಯವೇನೆಂಬ ಬಗ್ಗೆ ಪಂಡಿತರು ಬೇರೆಬೇರೆಯ ಅಭಿಪ್ರಾಯವನ್ನು ಹೊರಪಡಿಸಿರುತ್ತಾರೆ. ಸವಿತೃವೆಂದರೆ ಸೂರ್ಯನು, ಆತನ ಬೆಳಕನ್ನು ನಾವು ಉಪಾಸನೆಮಾಡಬೇಕು. ಈ ಸೂರ್ಯನಿಂದಲೇ ನಮ್ಮ ಅಂತಃಕರಣದಲ್ಲಿ ನಮಗೆ ಬಗೆಬಗೆಯ ವೃತ್ತಿಗಳು ಉಂಟಾಗುವವು–ಎಂಬುದು ಕೆಲವರು ಹೇಳುವ ಅರ್ಥ. ಮಂತ್ರದ ಅಕ್ಷರಾರ್ಥವು ಇದಕ್ಕೂ ಹೊಂದುತ್ತದೆ. ಪೂರ್ವಕಾಲದಲ್ಲಿ ಆರ್ಯರು ಸೂರ್ಯನಿಂದಲೇ ನಮಗೆ ಎಲ್ಲಾ ಆನುಕೂಲ್ಯಗಳೂ ಉಂಟಾಗುವವೆಂದು ನಂಬಿದ್ದರು–ಎಂದು ಪುರಾತತ್ತ್ವ ಶೋಧಕರು ಹೇಳುತ್ತಾರೆ. ಇದು ಪುರಾತನರ ನಂಬಿಕೆಯಾದರೂ ಈಗಲೂ ಅದನ್ನು ಕೈಬಿಡುವದಕ್ಕೆ ಕಾರಣವಿಲ್ಲ. ಏಕೆಂದರೆ ಸೂರ್ಯನ ಬಿಸಿಬೆಳಕುಗಳಿಂದ ಭೂಲೋಕದ ಸ್ಥಾವರಜಂಗಮಗಳ ಜೀವನವು

ನಡೆಯುತ್ತಿದೆ ಎಂಬುದನ್ನು ಈಗಿನ ಭೌತಿಕ ಶಾಸ್ತ್ರಜ್ಞರೂ ಒಪ್ಪುತ್ತಾರೆ. ಸೂರ್ಯನಿಂದಲೇ ಜೀವರ ಪ್ರಾಣನಶಕ್ತಿಯು ಹೊರತೋರಿಕೊಳ್ಳುತ್ತಿರುವದು. ನಮ್ಮ ಚಟುವಟಿಕೆಗಳಿಗೂ ಬುದ್ಧಿವೃತ್ತಿಗಳಿಗೂ ಹೇಗೋ, ನಮಗೂ ತಿಳಿಯದ ಒಂದು ಕ್ರಮದಿಂದ ಸೂರ್ಯಮಂಡಲವು ಕಾರಣವಾಗಿರುತ್ತದೆ.

ಸವಿತೃಮಂಡಲದಲ್ಲಿ ನಾರಾಯಣನು ಸಂನಿಹಿತನಾಗಿರುವನೆಂದು ಅನೇಕ ಆಸ್ತಿಕರು ನಂಬುತ್ತಾರೆ.

**ಧ್ಯೇಯಃ ಸದಾ ಸವಿತೃಮಣ್ಡಲಮಧ್ಯವರ್ತೀ ನಾರಾಯಣಃ ಸರಸಿಜಾಸನಸಂನಿವಿಷ್ಟಃ ।**
**ಕೇಯೂರವಾನ್ ಮಕರಕುಣ್ಡಲವಾನ್ ಕಿರೀಟೀ ಹಾರೀ ಹಿರಣ್ಮಯವಪುರ್ಧೃತಶಙ್ಖಚಕ್ರಃ ॥**

ಎಂಬ ಧ್ಯಾನಶ್ಲೋಕವನ್ನು ಈಗಲೂ ಹಲವರು ಹೇಳಿಕೊಳ್ಳುತ್ತಿರುವರು. ಕೇಯೂರಾದಿವಿಭೂಷಣಗಳಿಂದಲಂಕೃತನಾಗಿ ಕಂಠಹಾರದಿಂದೊಪ್ಪುತ್ತಿರುವ ಹಿರಣ್ಮಯಶರೀರನಾದ ಶ್ರೀಮನ್ನಾರಾಯಣನು ಸೂರ್ಯಮಂಡಲದೊಳಗೆ ಕಮಲಾಸನದಲ್ಲಿ ಕುಳಿತಿರುವನು-ಎಂಬುದು ಶ್ಲೋಕದ ಅರ್ಥವು. ಸೂರ್ಯಮಂಡಲದಲ್ಲಿ ಈ ಆಕಾರದಿದ ಪರಮೇಶ್ವರನು ಇರುತ್ತಾನೆಂಬುದು ನಮ್ಮ ಚರ್ಮಚಕ್ಷುಸ್ಸಿಗಂತೂ ಗೋಚರವಾಗುವ ವಿಷಯವಲ್ಲ; ಅದನ್ನು ಯಾವ ಭೌತಿಕ ವಿಜ್ಞಾನಿಯೂ ಪರೀಕ್ಷೆಮಾಡಿ ಉಂಟೆಂದಾಗಲಿ ಇಲ್ಲವೆಂದಾಗಲಿ ನಿರ್ಧರಿಸುವದಕ್ಕೆ ಬರುವಹಾಗಿಲ್ಲ. ಅದು ಕೇವಲ ಶಾಸ್ತ್ರಗಮ್ಯವಿಷಯವು. ಹಾಗೆಂದು ಶ್ರದ್ಧೆಯಿಂದ ಧ್ಯಾನಮಾಡಿದವರಿಗೆ ಉತ್ತಮಫಲಗಳು ಉಂಟಾಗುವವೆಂದು ವೈದಿಕರ ನಂಬಿಕೆಯಿದೆ. ಆ ನಂಬಿಕೆಯಿಂದ ಧ್ಯಾನಮಾಡಿ ತಾವು ಬೇರೆಬೇರೆಯ ಫಲಗಳನ್ನು ಪಡೆದುಕೊಂಡಿರುವದಾಗಿಯೂ ಕೆಲವರು ಉಪಾಸಕರು ಹೇಳಿಕೊಳ್ಳುತ್ತಾರೆ.

ಇದಂತಿರಲಿ. ಗಾಯತ್ರೀಮಂತ್ರಕ್ಕೆ ಇನ್ನೂ ಒಳಗಿನ ಅರ್ಥವೊಂದಿದೆ. ಅದನ್ನು ವಿಚಾರಮಾಡುವದರಿಂದ ತತ್ತ್ವವನ್ನು ಹುಡುಕುತ್ತಿರುವ ಸಾಧಕರಿಗೆ ಲಾಭವಿದೆ. ಈ ದೃಷ್ಟಿಯಿಂದ ಮಂತ್ರಾರ್ಥವನ್ನು ನೋಡಿದಾಗ ಈ ಮಂತ್ರವು ಪರಮಾತ್ಮಧ್ಯಾನ ಪರವಾಗುತ್ತದೆ. ಹೇಗೆಂದರೆ ಸವಿತೃವೆಂದರೆ ಈ ಜಗತ್ತಿಗೆಲ್ಲ ಕಾರಣನಾಗಿರುವ ಪರಮೇಶ್ವರನು. ಈ ಚೇತನಾಚೇತನರೂಪವಾದ ಜಗತ್ತನ್ನು ಪಡೆದಿರುವ ಪರಮ ಕಾರಣನೆಂಬುದನ್ನು ಸವಿತೃಶಬ್ದವು ತಿಳಿಸುತ್ತದೆ. ಈ ಜಗತ್ತಿನಲ್ಲಿ ಯಾವಯಾವ ವಿಭೂತಿಗಳುಳ್ಳ ವಸ್ತುಗಳು ಕಾಣಿಸುತ್ತಿರುವವೋ, ಯಾವ ಯಾವ ಸಂಪದ್ಯುಕ್ತವಾದ ವಸ್ತುಗಳು ಕಾಣಿಸುತ್ತಿರುವವೋ, ಯಾವ ಯಾವ ಉತ್ಸಾಹೋಪೇತವಾದ ವಸ್ತುಗಳು ಕಾಣಿಸುತ್ತಿರುವವೋ, ಅವೆಲ್ಲವೂ ಆ ಪರಮಾತ್ಮನ ತೇಜಸ್ಸಿನ ಅಂಶದಿಂದ ಉಂಟಾಗಿರುವವೆಂದು ಭಗವದ್ಗೀತೆಯು ತಿಳಿಸುತ್ತದೆ. ಸರ್ವಶಕ್ತನಾದ ಪರಮೇಶ್ವರನಿಂದ ಬಂದಿರು

ವದರಿಂದಲೇ ಆ ವಸ್ತುಗಳು ಅಂಥ ಅದ್ಭುತವಾದ ಎಲ್ಲರ ಮೆಚ್ಚಿಗೆಯನ್ನೂ ಸೆಳೆಯುವ ಧರ್ಮವುಳ್ಳವಾಗಿರುತ್ತವೆ–ಎಂಬುದನ್ನು ಸವಿತೃ ಎಂಬ ಮಾತು ಸೂಚಿಸುತ್ತದೆ.

ಆ ಪರಮೇಶ್ವರನು ದೇವನು ಎಂದರೆ ಸ್ವಯಂಪ್ರಕಾಶನು. ಆತನ ಬೆಳಕಿನಿಂದಲೇ ಎಲ್ಲವೂ ತೋರಿಕೊಳ್ಳುತ್ತಿರುವದು. ಪರಮಾತ್ಮನು ಚೈತನ್ಯದ ಎಂದರೆ ಅರಿವಿನ ಗಟ್ಟಿಯು. ಆತನ ಜ್ಞಾನಕ್ಕೆ ವಿಷಯವಾಗದ ವಸ್ತುವೇ ಇಲ್ಲ. ಅಂಥ ನಿತ್ಯಜ್ಞಾನ ಸ್ವರೂಪನಾದವನು ಆತನು ಎಂಬುದನ್ನು 'ದೇವನು' ಎಂಬ ಶಬ್ದವು ತಿಳಿಸುತ್ತದೆ.

ಹೀಗೆ ಸರ್ವಜ್ಞನೂ ಸರ್ವಶಕ್ತನೂ ಆಗಿರುವ ಪರಮೇಶ್ವರನ ತೇಜಸ್ಸನ್ನು ನಾವು ಚಿಂತಿಸಬೇಕು. ಆತನ ಚೈತನ್ಯದ ಬೆಳಕು ಇಲ್ಲದಿದ್ದರೆ ಇಡಿಯ ಜಗತ್ತೇ ಅಂಧಕಾರಮಯವಾಗಿರುತ್ತದೆ. ನಾವು 'ಅದನ್ನು ಬಲ್ಲೆವು, ಇದನ್ನು ಬಲ್ಲೆವು' ಎಂದು ಮನುಷ್ಯರು ತಮಗಿರುವ ಅಲ್ಪಮತಿಯಿಂದ ತಮ್ಮನ್ನು ತಾವೇ ಮೆಚ್ಚಿಕೊಳ್ಳುತ್ತಿರುವರಷ್ಟೆ. ಆ ಪರಮೇಶ್ವರನ ಜ್ಞಾನದ ಬೆಳಕಿಗೆ ಹೋಲಿಸಿದರೆ ಈ ನಮ್ಮ ಜ್ಞಾನವೆಂಬುದೂ ಕತ್ತಲೆಯೇ ಆಗಿ ತೋರುತ್ತದೆ. ಕತ್ತಲೆಯಲ್ಲಿ ಮಾತ್ರವೇ ಹೊರಗಿನ ವಸ್ತುಗಳನ್ನು ನೋಡಬಲ್ಲ ಅತ್ಯಂತ ದೃಷ್ಟಿಮಾಂದ್ಯವುಳ್ಳ ಗೂಬೆಯೇ ಮುಂತಾದ ಪ್ರಾಣಿಗಳಿಗೆ ಹೇಗೆ ಧಗಧಗಿಸುತ್ತಿರುವ ಸೂರ್ಯಬಿಂಬದ ಹೊಳಪಿನ ಬಿಸಿಲಿನಲ್ಲಿ ಕಣ್ಣುಬಿಡುವದು ಆಗದೆ ಇರುವದೋ ಹಾಗೆಯೇ ವ್ಯವಹಾರದಲ್ಲಿ ನಮಗೆ ಬೇಕಾದ ಕೆಲವು ವಸ್ತುಗಳನ್ನು ಮಾತ್ರ ಪರಿಕಿಸಬಲ್ಲ ನಮ್ಮ ಸ್ವಾರ್ಥಪರವಾದ ಕಣ್ಣಿಗೆ ಆತನ ಪರಮಾರ್ಥಜ್ಞಾನದ ಬೆಳಕು ತೋರುವಂತೆಯೇ ಇಲ್ಲ. ನಾವು ಆ ಬೆಳಕನ್ನು ಈ ಕಣ್ಣಿನಿಂದ ನೋಡಿ ಅರಿಯಲೇ ಆರೆವು. ಆದ್ದರಿಂದ ನಾವು ಬಲ್ಲವರ ಸಹಾಯದಿಂದ ಆ ಚೈತನ್ಯರೂಪವಾದ ತೇಜಸ್ಸನ್ನು ಕೇಳಿ ತಿಳಿದುಕೊಳ್ಳಬೇಕು; ಅದನ್ನೇ ಧ್ಯಾನಿಸಬೇಕು. ಮೆಲ್ಲಮೆಲ್ಲಗೆ ಆತನು ಅನುಗ್ರಹಿಸುವ ಜ್ಞಾನಕಿರಣಗಳ ಬೆಳಕನ್ನು ಸಹಿಸಿಕೊಳ್ಳಬಲ್ಲ ದೃಷ್ಟಿಪಾಟವವನ್ನು ಸಂಪಾದಿಸಿಕೊಳ್ಳಬೇಕು. ಇದನ್ನು 'ಆತನ ತೇಜಸ್ಸನ್ನು ಧ್ಯಾನಮಾಡುವೆವು' ಎಂಬ ವಾಕ್ಯವು ಸೂಚಿಸುತ್ತದೆ.

ಆ ಭಗವಂತನ ತೇಜಸ್ಸನ್ನು ಧ್ಯಾನಮಾಡುವದರಿಂದ ನಮಗೆ ಆಗುವ ಪ್ರಯೋಜನವೇನು? ಎಂದರೆ ಆಗ ಆತನು ನಮ್ಮಗಳ ಬುದ್ಧಿವೃತ್ತಿಗಳನ್ನು ಸರಿಯಾಗಿ ಪ್ರೇರಿಸುವನು. ನಿಜವಾಗಿ ಈಗಲೂ ನಮ್ಮ ಬುದ್ಧಿವೃತ್ತಿಗಳಿಗೆ ಜ್ಞಾನದ ಬೆಳಕು ಆತನಿಂದಲೇ ಬರುತ್ತಿರುವದು; ಆದರೆ ಅದನ್ನು ನಾವು ಅರಿಯೆವು. ನಮಗೆ ಜ್ಞಾನವು ಎಲ್ಲಿಂದ ಹೇಗೆ ಬರುತ್ತಿದೆ ಎಂಬುದನ್ನು ನಾವುಗಳು ಸಾಮಾನ್ಯ ವಾಗಿ ವಿಚಾರಮಾಡುತ್ತಿಲ್ಲ. ಭೂಮಿಯಲ್ಲಿ ಭಾವಿಯನ್ನು ತೋಡಿ ಮೇಲಕ್ಕೆ ಚಿಮ್ಮುವ ಚಿಲುಮೆಯ ನೀರನ್ನು ಉಪಯೋಗಿಸುವ ಜನರು ಆ ನೀರಿನ ಮೂಲ

ವನ್ನು ಅರಿಯದೆ ಇರುವಂತೆ ನಾವುಗಳು ನಮಗೆ ಪ್ರತಿದಿನವೂ ಅನಾಯಾಸವಾಗಿ ಹೊಳೆಯುತ್ತಿರುವ ಜ್ಞಾನವೃತ್ತಿಗಳ ಮೂಲವನ್ನು ಅರಿಯದೆ ಅವು ನಮ್ಮ ಆಜನ್ಮ ಸಿದ್ಧವಾದ ಹಕ್ಕು, ಅವು ನಮ್ಮವೇ-ಎಂದು ಹೆಮ್ಮೆಪಡುತ್ತಿರುವೆವು. ಪಿತ್ರಾರ್ಜಿತವಾದ ಸ್ವತ್ತನ್ನು ತಂದೆಯ ಸ್ಮರಣೆಯನ್ನು ಕೂಡ ಮಾಡದೆ ಬಳಸುತ್ತಿರುವ ಮಕ್ಕಳಂತೆ ನಾವು ನಮ್ಮ ಜ್ಞಾನದಾತೃವಾದ ಆ ಭಗವಂತನ ಚಿಂತೆಯೇ ಇಲ್ಲದೆ ಜ್ಞಾನವು ನಮಗೆ ಸ್ವಾಭಾವಿಕವಾಗಿ ತನಗೆತಾನೆ ದೊರೆಯುತ್ತಿರುವದೆಂದು ಬಗೆಯುತ್ತಿರುವೆವು.

ಪ್ರಾಕೃತಜನರ ಅಂತಃಕರಣದಲ್ಲಿ ಏಳುವ ವೃತ್ತಿಗಳಿಗೆ ಹೊರಗಿನ ವಿಷಯಗಳೇ ಕಾರಣವಾಗಿರುತ್ತವೆ. ವಿಷಯಗಳಲ್ಲಿ ಕೆಲವು ನಮಗೆ ಪ್ರಿಯವಾಗಿರುತ್ತವೆ, ಮತ್ತೆ ಕೆಲವು ಅಪ್ರಿಯವಾಗಿರುತ್ತವೆ, ಇನ್ನೂ ಕೆಲವು ಪ್ರಿಯಾಪ್ರಿಯಗಳಲ್ಲದೆ ಉದಾಸೀನ ವಾಗಿರುತ್ತವೆ. ಆದ್ದರಿಂದ ಅವುಗಳಲ್ಲಿ ನಮಗೆ ಆಯಾ ಭಾವಗಳು ಉಂಟಾಗುತ್ತವೆ. ಕೆಲವು ವಸ್ತುಗಳು ಕುತೂಹಲ, ಆಶ್ಚರ್ಯ, ಮೆಚ್ಚಿಗೆ, ಸಂತೋಷ, ರಾಗ, ಪ್ರವೃತ್ತಿ-ಇವುಗಳಿಗೆ ಕಾರಣವಾಗುವವು. ಮತ್ತೆ ಕೆಲವು ಮನಸ್ಸಿನ ಕ್ಷೋಭೆ, ಕಳವಳ, ಅಂಜಿಕೆ, ಹಗೆತನ, ನಿವೃತ್ತಿ-ಇವುಗಳಿಗೆ ಕಾರಣವಾಗುವವು. ಇನ್ನೂ ಕೆಲವು. ಅನಾದರ. ಅಸಡ್ಡೆ-ಮುಂತಾದ ಉದಾಸೀನಭಾವಗಳಿಗೆ ಕಾರಣವಾಗುವವು. ಕತ್ತಲಲ್ಲಿ ನೋಡಿದ ದೃಶ್ಯಗಳೂ ಕೇಳಿದ ಧ್ವನಿಗಳೂ ನಮಗೆ ಪ್ರಿಯವೆಂದೋ ಅಪ್ರಿಯವೆಂದೋ ಎರಡೂ ಅಲ್ಲವೆಂದೋ ಎನಿಸುವಂತೆಯೇ ನಮ್ಮ ವ್ಯವಹಾರದಲ್ಲಿಯೂ ನಿತ್ಯವೂ ಪ್ರಿಯಾಪ್ರಿಯೋದಾಸೀನಭಾವಗಳನ್ನು ಎಬ್ಬಿಸುತ್ತಿರುವವು. ಹೀಗೆ ಶೀತೋಷ್ಣಾದಿ ವೇದನೆಗಳೂ ಅವುಗಳಿಂದಾಗುವ ಸುಖದುಃಖಭಾವಗಳೂ ನಮ್ಮನ್ನು ಹರ್ಷವಿಷಾದ ಗಳಿಗೆ ಗುರಿಮಾಡುತ್ತಿರುವವು. ಇದು ನಮ್ಮೆಲ್ಲರ ಅನುಭವದಲ್ಲಿಯೂ ಇದೆ.

ಭಗವಂತನ ತೇಜಸ್ಸನ್ನು ಧ್ಯಾನಮಾಡಿದಂತೆಲ್ಲ ಈ ಅನರ್ಥವು ಮಾಯ ವಾಗುವದು. ಅರುಣೋದಯವಾಗುತ್ತಲೂ ಕತ್ತಲು ಹರಿಯುತ್ತಾ ಬರುವಂತೆ ಭಗವಂತನ ಕಡೆಗೆ ತಿರುಗಿದ ಮಾತ್ರದಿಂದಲೇ ನಮ್ಮ ಬುದ್ಧಿಯ ಮಂಕು ಹರಿಯುವದು. ನಾವು ಎಷ್ಟರಮಟ್ಟಿಗೆ ಆತನಿಗೆ ಹತ್ತಿರವಾಗುವೆವೋ ಅಷ್ಟರಮಟ್ಟಿಗೆ ಆತನ ತೇಜಸ್ಸು ನಮ್ಮ ಅಂತಃಕರಣವನ್ನೆಲ್ಲ ವ್ಯಾಪಿಸಿಕೊಳ್ಳುವದು. ಅಷ್ಟರಮಟ್ಟಿಗೆ ಅದರಲ್ಲಿ ಸಾತ್ತ್ವಿಕವಾದ ವೃತ್ತಿಗಳು ಎದ್ದುಕೊಳ್ಳುವವು. ಆ ಭಗವಂತನಲ್ಲಿಯೇ ನಿಷ್ಠೆಯನ್ನು ಪಡೆದುಕೊಂಡರೆ ಆಗ ನಮ್ಮ ಅಂತಃಕರಣದಲ್ಲಿರುವ ತಾಮಸರಾಜಸ ವೃತ್ತಿಗಳೆಲ್ಲ ಸಂಪೂರ್ಣವಾಗಿ ಮಾಯವಾಗುವವು; ನಾವು ಯಾವ ಆಯಾಸವೂ ಇಲ್ಲದೆಯೇ ಸಾತ್ತ್ವಿಕಭಾವದಿಂದ ತುಂಬಿಕೊಳ್ಳುವೆವು. ಆಗ ನಮಗೆ ದಿಕ್ಕುಗಳೆಲ್ಲವೂ ಶಾಂತಿಸುಖಮಯವಾಗುವವು.

ಭಗವಂತನ ತೇಜಸ್ಸನ್ನು ನಾವು ಎಲ್ಲಿ ಕಂಡುಕೊಳ್ಳಬೇಕು?–ಎಂದು ಯಾರಾದರೂ ಕೇಳಬಹುದು. ಅದಕ್ಕೆ ವೇದದಲ್ಲಿ ಒಂದೇ ಒಂದು ಉತ್ತರವನ್ನು ಕೊಟ್ಟಿರುತ್ತದೆ. ಆ ಭಗವಂತನು ನಮ್ಮೆಲ್ಲರುಗಳ ಆತ್ಮನಾಗಿರುತ್ತಾನೆ. ಆದ್ದರಿಂದ ನಾವು ನಮ್ಮನಮ್ಮೊಳಗೇ ಆತನನ್ನು ಕಾಣಬೇಕು. ಆತ್ಮನೆಂದರೆ ಸ್ವರೂಪವು. ಈಗ ನಾವುಗಳೆಲ್ಲರೂ 'ನಾನು' ಎಂಬ ಒಂದು ಹುಸಿಕೇಂದ್ರವನ್ನು ನಮ್ಮ ಸ್ವರೂಪ ವೆಂದು ಭಾವಿಸಿಕೊಂಡಿರುತ್ತೇವೆ. ಈ ಕೇಂದ್ರವು ಒಬ್ಬೊಬ್ಬರಲ್ಲಿ ಒಂದೊಂದು ಇರುವಂತೆ ನಮಗೆ ತೋರುತ್ತಿರುತ್ತದೆ. ನಮಗಿಂತ ಬೇರೆಯಾಗಿ ನೀನು, ಅವನು, ಮಿಕ್ಕವರು–ಎಂದು ಬೇರೆಬೇರೆಯಾಗಿ ತೋರುವ ಅನಂತಸಂಖ್ಯೆಯ ನಾನುಗಳು ಇರುವಂತೆ ನಮಗೆ ಭಾಸವಾಗುತ್ತಿರುತ್ತದೆ. ಈ 'ನಾನು'ಗಳು ಅಥವಾ ತೋರಿಕೆಯ ಆತ್ಮಗಳು ಒಂದಕ್ಕೊಂದಕ್ಕೆ ಹೊಂದಿಕೆಯಾಗುವದೇ ಅಪೂರ್ವ. ಅವೆಲ್ಲವೂ ಒಂದನ್ನೊಂದು ಸಂಶಯ, ಅಂಜಿಕೆ, ಹಗೆತನ–ಮುಂತಾದ ಭಾವಗಳಿಂದಲೇ ಕಾಣುತ್ತಿರುವವು. ಈ ತಪ್ಪು ತಿಳಿವಳಿಕೆಯ ಫಲವಾಗಿ ನಮ್ಮಗಳ ಅಂತಃಕರಣದಲ್ಲಿ ರಾಗದ್ವೇಷಾದಿಗಳು ಮತ್ತೆಮತ್ತೆ ಎದ್ದುಕೊಳ್ಳುತ್ತಿರುವವು. ಒಮ್ಮೆ ರಾಗದ್ವೇಷಗಳಿಗೆ ಗುರಿಯಾದವರು ಅವುಗಳಿಂದ ತಪ್ಪಿಸಿಕೊಳ್ಳುವದೇ ಕಷ್ಟವಾಗಿಬಿಡುತ್ತದೆ. ಆದ್ದರಿಂದ ರಾಗದ್ವೇಷವೆಂಬುದು ನಮ್ಮಗಳ ಸ್ವಭಾವವೆಂದೇ ನಮ್ಮ ನಂಬಿಕೆಯಾಗಿಬಿಟ್ಟಿರುತ್ತದೆ. ಆದರೆ ನಮ್ಮ ನಿಜವಾದ ಆತ್ಮನು ಈ 'ನಾನು' ಎಂಬ ಹುಸಿಕೇಂದ್ರವನ್ನು ದಾಟಿ ಅದಕ್ಕೂ ಹಿನ್ನೆಲೆಯಾಗಿರುವ ಪರಮೇಶ್ವರನಾಗಿರುತ್ತಾನೆ. ನಾವುಗಳು ಈಗ ನಾನು ಎಂದುಕೊಂಡಿರುವ ತೋರಿಕೆಯ ಆತ್ಮನಿಗಿಂತ ಅವನೇ ಹೆಚ್ಚಿನ ನಿಜವಾದ ಆತ್ಮನಾಗಿರುವದರಿಂದ ಅವನನ್ನು ಶಾಸ್ತ್ರದಲ್ಲಿ ಪರಮಾತ್ಮ ಎಂದು ಕರೆದಿದೆ.

ಸೂರ್ಯನ ಕಿರಣಗಳು ನೇರಾಗಿ ಬರುತ್ತಿದ್ದರೂ ಕೆಲವು ಉಪಾಧಿಗಳ ಸಂಬಂಧದಿಂದ ಅವಕ್ಕೆ ಬೇರೆ ದಿಕ್ಕಿನಲ್ಲಿ ಚಲನೆಯುಂಟಾಗುವದನ್ನು ನೀವು ನೋಡಿರಬಹುದು. ಇದರಿಂದ ಪರಮಾತ್ಮನ ಸಂನಿಧಿಯಿಂದಲೇ ನಮ್ಮ ಅಂತಃ ಕರಣದಲ್ಲಿ ಉತ್ತಮವಾದ ಭಾವಗಳು ನಿತ್ಯವಾಗಿ ಉಂಟಾಗುತ್ತಿವೆಯಾದರೂ ನಾವು ಹೊರಗಿನ ವಿಷಯಗಳನ್ನೇ ಧ್ಯಾನಮಾಡುತ್ತಿರುವದರಿಂದ ಅದೇ ಭಾವಗಳು ದುರ್ಭಾವಗಳೆನಿಸಿರುತ್ತದೆ. ಸೂರ್ಯನ ಪ್ರತಿಬಿಂಬಗಳು ಜಲಾಶಯದ ಸ್ವಭಾವ ದಿಂದ ಉದ್ದ, ಗಿಡ್ಡ–ಮುಂತಾದ ಆಕಾರವನ್ನು ಪಡೆಯುವಂತೆಯೂ ಸೂರ್ಯನು ನಿಶ್ಚಲನಾಗಿದ್ದರೂ ನೀರಿನ ಚಲನೆಯಿಂದ ಪ್ರತಿಬಿಂಬಗಳೂ ಚಲಿಸುತ್ತಿರುವಂತೆಯೂ ಕಾಣಿಸುವವಲ್ಲವೆ? ಇದರಂತೆ ಪರಮಾತ್ಮನ ಸನ್ನಿಧಿಯಲ್ಲಿ ನಮ್ಮ ಅಂತಃಕರಣ ದಲ್ಲಾಗುವ ಉತ್ತಮಭಾವಗಳೇ ಹೊರಗಿನ ವಿಷಯಧ್ಯಾನದ ನಿಮಿತ್ತದಿಂದ ಈಗಿನ ವ್ಯವಹಾರದ ಭಾವನೆಗಳಾಗಿರುತ್ತವೆ. ಆದ್ದರಿಂದ ನಾವು ನಮ್ಮ ಬುದ್ಧಿವೃತ್ತಿಗಳು

ಉತ್ತಮವಾದ ಸ್ವಭಾವವನ್ನು ಪಡೆದು ನಮಗೆ ಶಾಂತಿಸುಖಗಳನ್ನು ನೀಡುವಂತಾಗ ಬೇಕಾದರೆ ಹೊರಗಿನ ವಿಷಯಗಳ ಧ್ಯಾನದಿಂದ ನಮ್ಮ ಅಂತಃಕರಣವನ್ನು ಬಗ್ಗಡವಾಗಿ ಮಾಡಿಕೊಳ್ಳುವ ಮತ್ತು ಚಾಂಚಲ್ಯಕ್ಕೊಳಗಾಗಿಸಿರುವ ಅಭ್ಯಾಸವನ್ನು ಕಡಿಮೆಮಾಡಬೇಕು. ಇದನ್ನು ಕಡಿಮೆಮಾಡುವದಕ್ಕೆ ನಾವು ವಿಷಯಧ್ಯಾನವನ್ನು ಬಿಡುವ ಪ್ರಯತ್ನವನ್ನು ಕೈಕೊಳ್ಳಬಾರದು. ಏಕೆಂದರೆ ಹಾಗೆ ಪ್ರಯತ್ನಮಾಡಿದಷ್ಟೂ ವಿಷಯದ ಚಿಂತನೆಯು ಪ್ರಬಲವಾಗುವದು. ಮತ್ತೇನು ಮಾಡಬೇಕೆಂದರೆ ನಮ್ಮ ನಮ್ಮೊಳಗೇ ಇರುವನೆಂದು ದೊಡ್ಡವರು ಹೇಳುತ್ತಿರುವ ಪರಮಾತ್ಮನನ್ನೇ ಚಿಂತಿಸುವ ಪ್ರಯತ್ನವನ್ನು ಕೂಡಲೆ ಕೈಕೊಳ್ಳಬೇಕು. ಆ ಆತ್ಮನನ್ನು ಕಾಣದೆ ಅವನನ್ನು ಹೇಗೆ ಧ್ಯಾನಿಸಬೇಕೆಂದು ಶಂಕಿಸಬಾರದು. ಏಕೆಂದರೆ ಅವನು ನಮ್ಮ ಆತ್ಮನೇ ಆಗಿರುವದರಿಂದ ಅವನನ್ನು ನಾವು ಕಾಣಬೇಕಾದದ್ದೇನೂ ಅವಶ್ಯವಿಲ್ಲ. ಈ ನಮ್ಮ ಆತ್ಮನು ದೇಹ, ಇಂದ್ರಿಯ, ಮನಸ್ಸು, ಬುದ್ಧಿ–ಈ ಎಲ್ಲಕ್ಕಿಂತಲೂ ವಿಲಕ್ಷಣ ವಾಗಿ ಇವುಗಳೆಲ್ಲಕ್ಕಿಂತಲೂ ಒಳಗೆ ಇರುವ ನಮ್ಮ ಸ್ವರೂಪವೆಂಬುದನ್ನು ಮನಸ್ಸಿಗೆ ತಂದುಕೊಂಡರೆ ಸಾಕಾಗಿರುತ್ತದೆ.

ಈ ಪರಮಾತ್ಮಚಿಂತನೆಯು ನಿರಾಯಾಸವಾಗಿ ಸಾಗುವದಕ್ಕೆ ಇನ್ನೊಂದು ಕಾರಣವಿರುತ್ತದೆ. ಅದೇನೆಂದರೆ ಅನಾತ್ಮವಾಗಿರುವ ಹೊರಗಿನ ವಸ್ತುಗಳ ಚಿಂತನೆಯೇ ಈ ಆತ್ಮನ ಚಿಂತೆಗೆ ಅಡ್ಡಿಯಾಗಿರುವದೇ ಹೊರತು ನಿಜವಾಗಿ ನಾವು ಆತ್ಮಚಿಂತನೆಯನ್ನು ಪ್ರಯತ್ನದಿಂದ ಸಂಪಾದಿಸಿಕೊಳ್ಳಬೇಕಾದದ್ದೇ ಇಲ್ಲ. ಭಗವಂತನು ನಮ್ಮಗಳೆಲ್ಲರ ಆತ್ಮನು, ಆತನು ನಮ್ಮೆಲ್ಲರ ಬುದ್ಧಿವೃತ್ತಿಗಳನ್ನು ಪ್ರೇರಿಸು ತ್ತಿರುತ್ತಾನೆ. ಆ ಬುದ್ಧಿವೃತ್ತಿಗಳು ಉತ್ತಮವಾದ ಹಾದಿಯಲ್ಲಿ ಹರಿಯದಿರುವದಕ್ಕೆ ನಾವು 'ನಾನು' ಎಂದು ಕಲ್ಪಿಸಿಕೊಂಡಿರುವ ಹುಸಿಕೇಂದ್ರದ ಅಭಿಮಾನವೇ ಕಾರಣ ಎಂಬಿಷ್ಟನ್ನು ಮನಸ್ಸಿಗೆ ತಂದುಕೊಂಡರೆ ಸಾಕು, ಅಷ್ಟರಿಂದಲೇ ಆತ್ಮ ಚಿಂತನೆಗಿರುವ ಅಡ್ಡಿಗಳ ಬಿಗಿತವು ಕಡಿಮೆಯಾಗಿಬಿಡುತ್ತದೆ. ಆದ್ದರಿಂದಲೇ ಭಗವಂತನು ಗೀತೆಯಲ್ಲಿ ಹೀಗೆಂದು ಅಪ್ಪಣೆಕೊಡಿಸಿರುತ್ತಾನೆ :

**"ನಾನೇ ಎಲ್ಲಕ್ಕೂ ಕಾರಣನು. ನನ್ನಿಂದಲೇ ಎಲ್ಲಾ ಆಗುಹೋಗುಗಳೂ ಉಂಟಾಗುತ್ತಿರುವವು– ಎಂಬ ಭಾವದಿಂದ ಆವಿಷ್ಟರಾಗಿ ವಿವೇಕಿಗಳು ನನ್ನನ್ನೇ ಭಜಿಸುತ್ತಿರುವರು. ಅವರು ಯಾವಾಗಲೂ ನನ್ನಲ್ಲಿಯೇ ಚಿತ್ತವಿಟ್ಟಿರುವರು, ನನ್ನಲ್ಲಿಯೇ ತಮ್ಮ ಜೀವನವನ್ನಿಟ್ಟಿರುವರು; ಒಬ್ಬರಿಗೊಬ್ಬರು ನನ್ನ ವಿಷಯವನ್ನೇ ಹೇಳುತ್ತಾ ಸಂತೋಷವನ್ನೂ ರತಿಯನ್ನೂ ಪಡೆಯುತ್ತಿರುವರು. ಅಂತು ನನ್ನನ್ನು ಪ್ರೇಮದಿಂದ ಭಜಿಸುತ್ತಿರುವ ಆ ನಿತ್ಯಯುಕ್ತರಿಗೆ ನಾನು ಉತ್ತಮಬುದ್ಧಿಯೋಗವನ್ನು ಕೊಡುವೆನು; ಆದ್ದರಿಂದ ಅವರು ನನ್ನನ್ನೇ ಸೇರುವರು."**

ಭಗವಂತನೇ ನಮ್ಮ ಅಂತಃಕರಣಗಳಿಗೂ ಅವುಗಳ ವ್ಯಾಪಾರಕ್ಕೂ ಮೂಲ ಕಾರಣನು, ಭಗವಂತನೊಬ್ಬನೇ ನಮ್ಮಗಳೆಲ್ಲರಿಗೂ ನಿಜವಾದ ಆತ್ಮನು. ಆತನ ಲ್ಲಿಯೇ ನಾವು ನಿಷ್ಠೆಯನ್ನು ಹೊಂದಿ ನಿಜವಾದ ಶಾಂತಿಸುಖಗಳನ್ನು ಪಡೆಯ ಬೇಕಾಗಿದೆ. ಹೀಗೆಂಬ ಭಾವನೆಯೇ ನಮ್ಮ ಬುದ್ಧಿವೃತ್ತಿಗಳಲ್ಲೆಲ್ಲ ಅತ್ಯಂತ ಉತ್ತಮವಾದ ವೃತ್ತಿಯು. ಈ ವೃತ್ತಿಯು ಭಗವಂತನ ಚಿಂತೆಯಿಂದಲೇ ನಮಗೆ ದೊರಕಬೇಕಾಗಿದೆ.

## 20. ಪರಿಪೂರ್ಣನಾದ ಪರಮಾತ್ಮ

ಶಾಸ್ತ್ರದೃಷ್ಟಿಯಿಂದ ನೋಡಿದರೆ ಇರುವದೆಲ್ಲ ಒಂದೇ ಒಂದು ಪರಮಾರ್ಥವು. ಅದನ್ನೇ ಪರಮಾತ್ಮ, ಪರಮೇಶ್ವರ, ಪರಬ್ರಹ್ಮ, ಭಗವಂತ–ಎಂದು ಮುಂತಾಗಿ ಶ್ರುತಿಯಲ್ಲಿಯೂ ಸ್ಮೃತಿಯಲ್ಲಿಯೂ ಪುರಾಣಗಳಲ್ಲಿಯೂ ವರ್ಣಿಸಿರುತ್ತದೆ. ಇರುವ ಒಂದು ಪರಮಾರ್ಥವನ್ನೇ ನಾವು ಕಾಲದೇಶವಸ್ತುಗಳ ಅಳತೆಗೆ ಒಳಪಡಿಸಿ ಕೊಂಡು ಪರಿಚ್ಛಿನ್ನವಾಗಿ 'ಅದು' 'ಇದು'–ಎಂದು ತಿಳಿಯುತ್ತಿರುವೆವು. ಈ ಅಭಿಪ್ರಾಯವನ್ನು ಮನನಮಾಡಿದರೆ ವ್ಯವಹಾರದಲ್ಲಿ ನಮಗೆ ಉಂಟಾಗುತ್ತಿರುವ ಶೋಕಮೋಹಾದ್ಯನರ್ಥಗಳ ಬಿಗಿತವು ಸಡಿಲವಾಗುವದು, ದುಃಖಮಯವಾಗಿರುವ ದೆಂದು ನಾವು ಈಗ ಎಣಿಸಿರುವ ಈ ಪ್ರಪಂಚವೇ ಆನಂದಮಯವಾಗಿ ಕಾಣಿಸು ವದಕ್ಕೆ ಮೊದಲಾಗುವದು. ಯಾವಾಗಲೂ ಬಗೆಬಗೆಯ ಕಷ್ಟವನ್ನು ಅನುಭವಿಸುವ ಸಂಸಾರಿಗಳೇ ನಾವು ಎಂಬ ಭ್ರಾಂತಿಯು ಹೋಗಿ ಆನಂದಧಾಮನಾದ ಆ ಪರಮೇಶ್ವರನ ಮಕ್ಕಳಾದ್ದರಿಂದ ನಮಗೆ ನಿತ್ಯಾನಂದದಲ್ಲಿ ಸ್ವಭಾವಸಿದ್ಧವಾದ ಹಕ್ಕು ಇದೆ ಎಂಬ ಒಸಗೆಯು ನಮಗೆ ಅನಾಯಾಸವಾಗಿ ಬಂದು ತಲುಪುವದು.

ಲೋಕದೃಷ್ಟಿಯು ಕಾಲದೇಶಗಳ ಕಟ್ಟಿನಿಂದ ಸಂಕಟಪಡುತ್ತಿರುವ ಅಂತಃಕರಣದ ಆಧಾರದ ಮೇಲೆ ನಿಂತಿರುತ್ತದೆ. ನಮಗೆ ಈ ದೃಷ್ಟಿಯಿಂದ ತಿಳಿಯಬರುವ ತತ್ತ್ವಗಳು ಎಷ್ಟೇ ಘನವೆಂದು ತೋರಲಿ, ಇಂಥ ಕಾಲದಲ್ಲಿ ಇಷ್ಟುಹೊತ್ತಿನವರೆಗೆ, ಇಂಥ ದೇಶದಲ್ಲಿ ಇಂತಿಷ್ಟು ವಿಸ್ತಾರದೊಳಗೇ ಅವು ಇರುತ್ತವೆ ಎಂಬ ಭಾವನೆಯು ತಪ್ಪುವಹಾಗಿಲ್ಲ. ನಮ್ಮ ವ್ಯಕ್ತಿತ್ವದ ವಿಷಯದಲ್ಲಂತೂ 'ನಾನು ಇಂಥ ಕಾಲದಲ್ಲಿ ಇಂಥ ಕಾಲದಲ್ಲಿ ಇಂಥ ದೇಶದಲ್ಲಿ ಇಂಥ ಮಾತಾಪಿತೃಗಳ ದೆಸೆಯಿಂದ ಜನ್ಮವನ್ನು ತಾಳಿರುವವನು, ಇಂತಿಷ್ಟು ಕಾಲ ಬಾಳಿ ಸುಖದುಃಖಗಳನ್ನು ಅನುಭವಿಸಿ ಕೊನೆ ಯಲ್ಲಿ ಕಾಲನ ದವಡೆಯಲ್ಲಿ ಸಿಕ್ಕಿಕೊಳ್ಳುವವನು' ಎಂಬ ಭಾವನೆಯ ಬಿಗಿತದಿಂದ ನಾವು ಎಂದಿಗೂ ಕೊಸರಿಕೊಳ್ಳಲಾರದೆ ಇರುವೆವು. ಹೀಗಿರುವಲ್ಲಿ ನಮಗೆ ಶಾಸ್ತ್ರ

ದೃಷ್ಟಿಯ ತತ್ತ್ವವು ಮನಸ್ಸಿಗೆ ಮುಟ್ಟುವದೆಂತು? ಎತ್ತರವಾದ ಮರದಲ್ಲಿ ಜೊಂಪುಲುಜೊಂಪಲಾಗಿ ಬಿಟ್ಟುಕೊಂಡು ನೇತಾಡುತ್ತಿರುವ ಹಣ್ಣುಗಳನ್ನು ಗುಜ್ಜಾರಿ ಯಾದವನು ಕೈಗಳನ್ನೆತ್ತಿದಮಾತ್ರಕ್ಕೆ ಎಟುಕಿಸಿಕೊಳ್ಳಬಲ್ಲನೆ? ಶಾಸ್ತ್ರದಿಂದ ತಿಳಿಯ ಬರುವ ಪರಮಾರ್ಥವು ವ್ಯವಹಾರದೃಷ್ಟಿಯ ಮಾನವರಿಗೆ ಎಟುಕುವದು ಹೇಗೆ?- ಎಂದು ಕೆಲವರು ನಿರಾಶೆಯಿಂದ ಕೇಳುವರು.

ಆದರೆ 'ಶಾಸ್ತ್ರದೃಷ್ಟಿ', 'ಲೋಕದೃಷ್ಟಿ'-ಎಂಬ ಮಾತುಗಳೇ ಈ ಪ್ರಶ್ನೆಗೆ ಉತ್ತರವಾಗಿವೆ, ಆ ಉತ್ತರವೇ ಈ ನಿರಾಶೆಯ ತೊಡಕಿಗೆ ಪರಿಹಾರವಾಗಿರುತ್ತದೆ. ನಮಗೆ ಸಂಸಾರದಲ್ಲಿ ಈಗ ತೋರುತ್ತಿರುವ ದುಃಖವು ಲೋಕ ದೃಷ್ಟಿಯಿಂದ. ನಮಗೆ ಬಗೆಬಗೆಯ ಪರಿಚ್ಛೇದಗಳು ಇರುವವೆಂದೂ ನಾವು ಅವುಗಳ ಕಟ್ಟಿಗೆ ಸಿಕ್ಕಿರುವೆವೆಂದೂ ನಾವು ಭಾವಿಸುತ್ತಿರುವದು ಈ ಲೋಕದೃಷ್ಟಿಯಿಂದಲೇ. ಈ ನಮಗೇ ಶಾಸ್ತ್ರದೃಷ್ಟಿಯು ಸಾಧ್ಯವಾಗಿರುತ್ತದೆ. ಆ ದೃಷ್ಟಿಯನ್ನು ಅಳವಡಿಸಿಕೊಂಡು ನೋಡಿದರೆ ಕೂಡಲೆ ಈ ಎಲ್ಲೆಕಟ್ಟುಗಳು ಯಾವವೂ ನಮಗೆ ಇರುವದಿಲ್ಲ; ನಾವು ನಿಜವಾಗಿಯೂ ಯಾವ ದೇಶಕಾಲಗಳ ಹದ್ದುಪಾಡಿಗೂ ಒಳಪಟ್ಟಿರದ ಪರಮೇಶ್ವರನ ಅಂಶಭೂತರೇ ಆಗಿರುತ್ತೇವೆ; ನಮಗೂ ಆ ಪರಮೇಶ್ವರನಿಗೂ ಅವಿನಾಭಾವವೇ ಇರುತ್ತದೆ, ಅಥವಾ ಏಕೀಭಾವವೇ ಇರುತ್ತದೆ-ಎಂಬ ಸಿದ್ಧ ವಿಚಾರವು ಹೊಳೆದುಬಿಡುವದು. ಲೋಕದಲ್ಲಿ ಅತ್ಯಂತಸ್ವಾಭಾವಿಕವಾಗಿ ಕಾಣುವ ಕೆಲವು ಘಟನೆಗಳಲ್ಲಿ ಅದ್ಭುತವಾದ ತತ್ತ್ವವು ಅಡಗಿರುತ್ತದೆ. ಉದಾಹರಣೆಗೆ ನೋಡಿರಿ. ಕಣ್ಣನ್ನು ಮುಚ್ಚಿಕೊಂಡಿದ್ದವನು ಕಣ್ಣುಬಿಟ್ಟಕೂಡಲೆ, ಎಂಥ ವಿಸ್ತೀರ್ಣವಾದ ರೂಪಪ್ರಪಂಚವು ಗೋಚರವಾಗಿಬಿಡುವದು ! ಭೂಮಿ, ನದಿಗಳು, ಬೆಟ್ಟ, ಸಮುದ್ರ, ಗ್ರಾಮಗಳು, ಪಟ್ಟಣಗಳು, ಅಂತರಿಕ್ಷ, ಆಕಾಶ, ಚಂದ್ರಸೂರ್ಯ ನಕ್ಷತ್ರಾದಿಗಳು-ಇವೆಲ್ಲ ಇಷ್ಟು ನಿರಾಯಾಸವಾಗಿ ಕಣ್ಣುಬಿಟ್ಟಮಾತ್ರದಿಂದ ನಮಗೆ ತೋರಿಕೊಳ್ಳುವದು ನಿಜವಾಗಿ ಎಂಥ ಮಾಯೆ! ಕಿವಿಯಿಂದ ಆಲೈಸಿದ ಮಾತ್ರ ದಿಂದ ಬಗೆಬಗೆಯ ಶಬ್ದಗಳ ಅರಿವು ನಮಗೆ ಆಗಿಬಿಡುವದು; ಕೈಯಿಂದ ಮುಟ್ಟಿದ ಮಾತ್ರದಿಂದ ಬಗೆಬಗೆಯ ಸ್ಪರ್ಶಗಳ ಅನುಭವವು ಆಗಿಬಿಡುವದು! ಹೀಗೆ ಆಯಾ ಜ್ಞಾನೇಂದ್ರಿಯಗಳ ಉಪಯೋಗದಿಂದ ಮತ್ತೊಂದು ರೀತಿಯಿಂದ ನಮಗೆ ಹೇಗೂ ದೊರೆಯದೆ ಇದ್ದ ವಸ್ತುಗಳ ಅರಿವು ಯಾವ ಕಾಲಮಿತಿಯನ್ನೂ ಬಯಸದೆ ಆಯಾ ಇಂದ್ರಿಯವ್ಯಾಪಾರದ ಸಮಕಾಲದಲ್ಲಿಯೇ ಆಗಿಬಿಡುವದಲ್ಲ! ಎಂಥ ಅದ್ಭುತಘಟನೆಯಿದು! ಹೀಗೆಯೇ ಲೋಕದೃಷ್ಟಿಯಿಂದ ನೋಡಿದಾಗ ನಮಗೆ ಅತ್ಯಂತ ಅಸಂಭವನೀಯವೆಂದು ತೋರುವ ಪರಮಾರ್ಥವು ಶಾಸ್ತ್ರ ದೃಷ್ಟಿಯನ್ನು

ಅವಲಂಬಿಸಿದ ಮಾತ್ರದಿಂದ ಕೂಡಲೆ ಅನುಭವದಲ್ಲಿ ಮಿಂಚಿ ಬಿಡುತ್ತದೆ. ಪರಮಾರ್ಥದ ಅರಿವೆಂಬುದು ಎಲ್ಲಿಯೋ ಯಾವಾಗಲೋ ಆಗುವ ಒಂದು ಅನುಭವವಲ್ಲ. ಅದು ಒಂದಾನೊಂದು ದೃಷ್ಟಿಯ ಬಲದಿಂದ ನೋಡಿದರೆ ಕೂಡಲೆ ಈಗಲೇ, ಇಲ್ಲಿಯೇ, ಯಾವ ಆಯಾಸವೂ ಇಲ್ಲದೆಯೇ ಉಂಟಾಗಿ ಬಿಡುತ್ತದೆ. ಹೀಗೆಂಬುದು ಅನುಭವಿಗಳ ಹೇಳಿಕೆ.

ಶಾಸ್ತ್ರದೃಷ್ಟಿಯೆಂಬುದು ಯಾವದೋ ಒಂದು ಹೊಸ ಇಂದ್ರಿಯದ ಲಾಭದಿಂದ ಬರುವದೆಂದು ಭಾವಿಸಬಾರದು. ಹೇಗೆ ನಮಗೆ ಎಲ್ಲಾ ಇಂದ್ರಿಯಗಳಿಂದಲೂ ಆಗುವ ಅರಿವು ಒಂದೇ ಒಂದು ಮನಸ್ಸಿನಲ್ಲಿ ತೋರಿಕೊಳ್ಳುವದೋ ಹಾಗೆಯೇ ಶಾಸ್ತ್ರದಿಂದಾಗುವ ಅರಿವೂ ಅದೇ ಮನಸ್ಸಿನಲ್ಲಿಯೇ ತೋರಿಕೊಳ್ಳುತ್ತದೆ. ಹೊರಗಿನ ವಸ್ತುಗಳ ಅರಿವಿಗೆ ಇಂದ್ರಿಯಗಳು ದ್ವಾರವಾಗಿರುವಂತೆ, ಪರಮಾರ್ಥದ ಅರಿವಿಗೆ ಶಾಸ್ತ್ರದ ಶ್ರವಣಮನನನಿದಿಧ್ಯಾಸನಗಳೇ-ಶಾಸ್ತ್ರವನ್ನು ಕಿವಿಯಾರೆ ಕೇಳುವದು, ಮನಸ್ಸಿನಲ್ಲಿ ಅದರ ಯುಕ್ತಾಯುಕ್ತತೆಯನ್ನು ಹೊರಳಾಡಿಸಿ ವಿಚಾರಿಸುವದು, ತನ್ನ ಅನುಭವಕ್ಕೆ ಈ ಶಾಸ್ತ್ರೋಪದೇಶವನ್ನು ಹೊಂದಿಸಿ ನೋಡುವದು, ಈ ಸಾಧನಗಳೇ-ದ್ವಾರವಾಗಿರುತ್ತವೆ. ವಿಷಯಗಳನ್ನು ಅರಿಯುವವನಿಗೆ ವಿಷಯಗಳ ಪರಿಶೀಲನೆಯ ಸಂಸ್ಕಾರವು ಹೇಗೆ ಬೇಕಾಗಿರುವದೋ ಹಾಗೆಯೇ ಅದ್ವಿತೀಯ ವಾದ ಪರಮಾರ್ಥವನ್ನು ತಿಳಿಯುವದಕ್ಕೂ ಸರಿಯಾಗಿ ಸಂಸ್ಕಾರವನ್ನು ಪಡೆ ದಿರುವ ಮನಸ್ಸೇ ಬೇಕಾಗುತ್ತದೆ. ಇಷ್ಟೇ ಹೊರತು 'ಶಾಸ್ತ್ರದೃಷ್ಟಿ' ಎಂಬ ಹೊಸ ಕರಣವೇನೂ ಶ್ರೋತ್ರಾದಿಗಳ ಜೊತೆಗೆ ಹುಟ್ಟಿಕೊಳ್ಳಬೇಕಾಗಿರುವದಿಲ್ಲ.

ಇದಂತಿರಲಿ. ಶಾಸ್ತ್ರದೃಷ್ಟಿಯಿಂದ ಪರಮಾರ್ಥವು ಹೇಗೆ ಕಾಣಿಸುವದು? ಎಂಬುದನ್ನು ತಿಳಿಸುವ ಒಂದಾನೊಂದು ಶ್ರುತಿವಾಕ್ಯದ ಅರ್ಥವನ್ನು ಇಲ್ಲಿ ಕೊಡುವೆನು. ವಾಚಕರು ಈ ವಾಕ್ಯವನ್ನು ಸಾವಧಾನವಾಗಿ ಓದಬೇಕು; ಏಕೆಂದರೆ ಇದರಲ್ಲಿ ಗರ್ಭಿತವಾಗಿರುವ ಅಭಿಪ್ರಾಯವನ್ನು ತಿಳಿಸುವದಕ್ಕೆಂದೇ ನಾನು ಈವರೆಗಿನ ಪೀಠಿಕೆಯನ್ನು ಬರೆದಿರುವದು.

**"ಅದು ಪೂರ್ಣವು, ಇದು ಪೂರ್ಣವು; ಪೂರ್ಣದಿಂದ ಪೂರ್ಣವು ಎದ್ದು ಬಂದಿರುವದು. ಪೂರ್ಣದ ಪೂರ್ಣವನ್ನು ತೆಗೆದುಕೊಂಡರೆ ಪೂರ್ಣವೇ ಉಳಿದುಕೊಳ್ಳುತ್ತದೆ.**

-ಬೃಹದಾರಣ್ಯಕ, ಖಿಲಕಾಂಡ, 5-1-1

ವೇದದಲ್ಲಿ ಉತ್ತಮವಾದ ತತ್ತ್ವವನ್ನು ಒಗಟಿನ ಮಾತಿನಲ್ಲಿ ತಿಳಿಸುವದೊಂದು ಕ್ರಮವಿದೆ. ಇದರಿಂದ ಶ್ರೋತೃಗಳಿಗೆ ವಿಷಯವನ್ನು ಅರಿತುಕೊಳ್ಳುವದರಲ್ಲಿ ಕುತೂಹಲವೂ, ವಿಷಯವನ್ನು ಅರಿತಮೇಲೆ ಅದರ ಘನತೆಯನ್ನು ಕಂಡು

ಮೆಚ್ಚಿ ನೆನಪಿಟ್ಟುಕೊಳ್ಳುವದರಲ್ಲಿ ಆದರವೂ, ಆ ತತ್ತ್ವದ ಅನುಭವವನ್ನು ತಂದು ಕೊಳ್ಳುವದರಲ್ಲಿ ಶ್ರದ್ಧಾತಾತ್ಪರ್ಯಗಳೂ ಉಂಟಾಗುವದು. ಪ್ರಕೃತವಾದ ವಾಕ್ಯದಲ್ಲಿ 'ಅದು ಪೂರ್ಣ, ಇದು ಪೂರ್ಣ'-ಎಂಬುದು ತಟ್ಟನೆ ನೋಡಿದರೆ ಹೊಂದು ವದಿಲ್ಲ. ಏಕೆಂದರೆ ಎರಡು ಪೂರ್ಣಗಳು ಹೇಗೆತಾನೆ ಇದ್ದಾವು? ತತ್ತ್ವವು ಒಂದೇ ಇರಬೇಕು; ಎರಡು ಪೂರ್ಣಗಳೆಂದರೆ ಒಂದರಿಂದೊಂದು ಪರಿಚ್ಛಿನ್ನ ವಾಗಿ ಅಪೂರ್ಣವೆಂದೇ ಆಗುವದು. ಪೂರ್ಣದಿಂದ ಪೂರ್ಣವು ಎದ್ದು ಕೊಂಡಿರುವದು, ಎಂದರೂ ಹಾಗೆಯೇ. ಪೂರ್ಣವೆಂದರೆ ಎಲ್ಲವೂ ಆಯಿತು; ಅದರಿಂದ ಮತ್ತೊಂದು ಎದ್ದುಕೊಳ್ಳುವದು ಹೇಗೆ? ಯಾವದಾದರೂ ಎದ್ದುಕೊಂಡರೆ ಅದು ಹೊಸದು; ಆದ್ದರಿಂದ ಮೊದಲು ಇದ್ದದ್ದು ಪೂರ್ಣವಲ್ಲ ಎಂದಾಗುತ್ತದೆ. 'ಪೂರ್ಣದಿಂದ ಪೂರ್ಣವನ್ನು ತೆಗೆದುಕೊಂಡರೆ ಪೂರ್ಣವೇ ಉಳಿಯುವದು ಹೇಗೆ? ಎಲ್ಲವನ್ನೂ ತೆಗೆದುಕೊಂಡರೆ ಉಳಿಯುವದು ಸೊನ್ನೆಯಲ್ಲವೆ? ಹೀಗೆ ವಾಕ್ಯದ ನಿಜವಾದ ಅಭಿಪ್ರಾಯವನ್ನು ತಿಳಿಯದವರಿಗೆ ಅದೊಂದು ಒಗಟಾಗಿ ಕಾಣಿಸುತ್ತಿರುವದು.

ಈಗ ವಾಕ್ಯದ ಅರ್ಥವನ್ನು ಸ್ವಲ್ಪ ವಿವರಿಸೋಣ. 'ಅದು ಪೂರ್ಣವು' ಎಂಬಲ್ಲಿ 'ಅದು' ಎಂಬ ಮಾತು ಪರೋಕ್ಷವಾಗಿರುವ, ಈಗ ನಮಗೆ ತಿಳಿಯ ಲಾಗದಿರುವ, ಪರಬ್ರಹ್ಮವು. ಆ ಬ್ರಹ್ಮವು ಪೂರ್ಣವೇ, 'ಇದು ಪೂರ್ಣವು' ಎಂಬಲ್ಲಿ ಇದು ಎಂದರೆ ಈಗ ನಮಗೆ ಬೇರೆಬೇರೆಯ ಪ್ರಮಾಣಗಳಿಂದ ತಿಳಿಯ ಬರುವ ಪ್ರಪಂಚವು; ಅದರಲ್ಲಿರುವ ಬ್ರಹ್ಮವೂ ಪೂರ್ಣವಾಗಿರುತ್ತದೆ ಎಂದರ್ಥ. ಬ್ರಹ್ಮವು ಶಾಸ್ತ್ರದೃಷ್ಟಿಯಿಂದ ಪೂರ್ಣವಾಗಿರುತ್ತದೆ; ಅದೊಂದೇ ಎಲ್ಲೆಲ್ಲಿಯೂ ಇರುತ್ತದೆ. ಅದನ್ನು ಇಲ್ಲಿಗೆ ಆಯಿತು ಎಂದು ದೇಶಕಾಲವಸ್ತುಗಳಿಂದ ಎಲ್ಲೆಕಟ್ಟು ತೋರಿಸುವ ಯಾವದೊಂದು ದ್ವಿತೀಯವಸ್ತುವೂ ಇಲ್ಲವೇ ಇಲ್ಲ. ಅದೊಂದೇ ಸರ್ವವ್ಯಾಪಕವಾದ ಪರಮಾರ್ಥವು. ಅದೇ ಬ್ರಹ್ಮವೇ, ಅದೇ ಪರಮಾತ್ಮವಸ್ತುವೇ, ಈ ನಮ್ಮ ಲೋಕದೃಷ್ಟಿಗೆ ಗೋಚರವಾಗಿರುವ ವಿವಿಧನಾಮರೂಪಗಳ ಪ್ರಪಂಚ ದಿಂದೊಡಗೂಡಿ ವಿಶೇಷಾಕಾರದಿಂದ ತೋರಿಕೊಳ್ಳುತ್ತಿದೆ. ಹೀಗೆ ತೋರಿ ಕೊಂಡರೂ ಇದು ಪೂರ್ಣವೇ. ಬೇರೆಬೇರೆಯ ಉಪಾಧಿಗಳ ಎಲ್ಲೆಕಟ್ಟಿನೊಳಗೆ ಸಿಕ್ಕಿಕೊಂಡಿರುವಂತೆ ತೋರಿದರೂ ಆ ಪೂರ್ಣರೂಪದಿಂದ ಇದ್ದುಕೊಂಡೇ ಇರುತ್ತದೆ ಎಂದರ್ಥ. ಆದ್ದರಿಂದ ಇದೂ ಪೂರ್ಣವೇ.

ಅಂತೂ ಹೀಗೆ ಈ ಕಾರ್ಯರೂಪವಾದ ಬ್ರಹ್ಮವಸ್ತುವು ಪೂರ್ಣವಾದ ಆ ಕಾರಣರೂಪವಾದ ಬ್ರಹ್ಮದಿಂದ ಎದ್ದುಕೊಂಡುಬಂದಿದೆ. ಕಾರಣದಿಂದ ಕಾರ್ಯವು

ಎದ್ದುಕೊಂಡುಬಂದಿದೆ ಎಂದ ಮಾತ್ರದಿಂದ ಇದು ತನ್ನ ಪೂರ್ಣತ್ವವನ್ನು ಬಿಟ್ಟಿದೆ ಎಂದು ಭಾವಿಸಬಾರದು. ಈಗಲೂ ಇದು ಪೂರ್ಣವೇ ಆಗಿರುತ್ತದೆ. ಪೂರ್ಣವಾದ ಬ್ರಹ್ಮವೇ ಲೋಕದೃಷ್ಟಿಯಿಂದ ಹೀಗೆ ಉಪಾಧಿಗಳಿಂದೊಡಗೂಡಿರುವಂತೆ ಕಾಣಿಸುತ್ತಿದೆ. ಆದರೆ ಈಗಲೂ ಇದು ಸರಿಯಾಗಿ ನೋಡಿದರೆ ಪೂರ್ಣವೇ ಆಗಿರುತ್ತದೆ; ತನ್ನ ಪೂರ್ಣಸ್ವರೂಪದಲ್ಲಿ ಒಂದಿಷ್ಟೂ ಮುಕ್ಕಾಗಿರುವದಿಲ್ಲ. ಆದ್ದರಿಂದ ಈ ಪೂರ್ಣವಾದ ಕಾರ್ಯರೂಪದ ಪೂರ್ಣತ್ವವನ್ನು ಕಂಡುಕೊಂಡರೆ, ಈಗ ಇದು ಲೋಕದೃಷ್ಟಿಯಿಂದ ಪರಿಚ್ಛಿನ್ನವಾಗಿ ಕಂಡರೂ ನಿಜವಾಗಿ ಈಗಲೂ ಪೂರ್ಣವೇ ಆಗಿರುವದೆಂಬುದನ್ನು ಕಂಡುಕೊಂಡರೆ, ಶಾಸ್ತ್ರ ಜನ್ಯವಾದ ನಿಜವಾದ ತಿಳಿವಳಿಕೆಯಿಂದ ಸ್ವಾಭಾವಿಕವಾದ ತಪ್ಪು ತಿಳಿವಳಿಕೆಯನ್ನು ಪರಿಹರಿಸಿಕೊಂಡರೆ, ಆಗ ಇದು ಪೂರ್ಣವಾಗಿಯೇ ಉಳಿದುಕೊಳ್ಳುತ್ತದೆ; ಇದು ಪರಮಾರ್ಥವಾದ ಪೂರ್ಣಬ್ರಹ್ಮದೊಡನೆ ಒಂದೇ ಆಗಿರುತ್ತದೆ ಎಂಬುದು ಮನದಟ್ಟಾಗುತ್ತದೆ ಎಂದರ್ಥ.

ನಾವೆಲ್ಲರೂ ಒಬ್ಬ ಪರಮಾತ್ಮನೆಂಬ ಸೂರ್ಯನ ಪ್ರತಿಬಿಂಬಗಳೇ ಆಗಿರುವೆವು; ಆ ಪರಮಾತ್ಮನಲ್ಲಿರುವ ಪೂರ್ಣತ್ವವು ಈಗಲೂ ನಮ್ಮಲ್ಲಿಯೂ ಪರಿಪೂರ್ಣವಾಗಿಯೇ ಇರುತ್ತದೆ. ಆದರೆ ಉಪಾಧಿಯಾಗಿರುವ ನೀರಿನ ಸ್ವಭಾವದಿಂದ ಸೂರ್ಯನ ಪ್ರತಿಬಿಂಬಗಳು ಒಂದಕ್ಕಿಂತ ಒಂದು ಬೇರೆಯಾಗಿ ತೋರುತ್ತಿರುವಂತೆ, ಆ ಪರಮಾತ್ಮಸೂರ್ಯನ ಪ್ರತಿಬಿಂಬಗಳೇ ಆಗಿರುವ ನಾವುಗಳು ನಮ್ಮ ಅಂತಃಕರಣಗಳೆಂಬ ಉಪಾಧಿಗಳ ಭೇದದಿಂದ ಒಬ್ಬೊಬ್ಬರು ಒಂದೊಂದು ವಿಧವಾಗಿ, ಒಬ್ಬರಿಂದೊಬ್ಬರು ಭಿನ್ನರಾಗಿ, ಇರುವಂತೆ ಕಾಣುತ್ತಿರುತ್ತೇವೆ. ಪ್ರತಿಬಿಂಬಗಳಿಗೆಲ್ಲ ಮೂಲವಾಗಿರುವ ಸೂರ್ಯಬಿಂಬವು ಹೇಗೆ ಒಂದೇ ಆಗಿರುವದೋ ಹಾಗೆ ನಮ್ಮಗಳಿಗೆಲ್ಲ ಮೂಲವಾಗಿರುವ ಪರಮಾತ್ಮನು ಒಬ್ಬನೇ ಆಗಿರುತ್ತಾನೆ. ನಾವು ಆತನಲ್ಲಿ ನಿತ್ಯವೂ ಒಂದೇ ಆಗಿರುವೆವು. ಇದನ್ನು ನಾವು ನೆನಪಿಟ್ಟರೆ ಪರಮಾರ್ಥ ದೃಷ್ಟಿಯು ನಮಗೆ ಬೇಗನೆ ಲಭಿಸುವದು.

ಬಿಂಬಪ್ರತಿಬಿಂಬದೃಷ್ಟಾಂತದಲ್ಲಿ ನಮಗೆ ಈ ವಿಷಯಕ್ಕೆ ಬೇಕಾದ ಹಲವು ಹೋಲಿಕೆಗಳು ಸಿಕ್ಕುತ್ತವೆ. ಹೇಗೆಂದರೆ ಹಿಮಗಾಲದಲ್ಲಿ ಹುಲ್ಲಿನ ಮೇಲೆ ಬಿದ್ದಿರುವ ನೀರಿನ ತೊಟ್ಟುಗಳನ್ನು ನೀವು ನೋಡಿರಬಹುದು. ಆ ಜಲಬಿಂದುಗಳಲ್ಲಿ ಒಂದೊಂದರಲ್ಲಿಯೂ ಸೂರ್ಯನ ಪ್ರಕಾಶವು ಮಾರುಹೋಳೆದಿರುವದರಿಂದ ಅವು ಸಣ್ಣಸಣ್ಣವಜ್ರದ ಹರಳುಗಳಂತೆ ಹೊಳೆಯುತ್ತಿರುವವು. ಸೂರ್ಯನಿಗೆ ಹೇಗೆ ಪ್ರಕಾಶವು ಸ್ವಾಭಾವಿಕವೋ ಅವಕ್ಕೂ ಪ್ರಕಾಶವು ಹಾಗೆಯೇ ಸ್ವಾಭಾವಿಕವೆಂದೇ ನಮಗೆ ತೋರುತ್ತಿರುತ್ತದೆ. ಇನ್ನೂ ಸ್ವಲ್ಪ ನಿಟ್ಟಿಸಿ ನೋಡಿದರೆ ಆ ನೀರಿನತೊಟ್ಟು

ಗಳಲ್ಲಿ ಒಂದೊಂದು ಸೂರ್ಯನ ಭಾವಚಿತ್ರವು ಪೂರ್ಣವಾಗಿ ಮೂಡಿಕೊಂಡಿರುವದು ಕಾಣಿಸುತ್ತದೆ. ಸೂರ್ಯಬಿಂಬದ ಸುತ್ತಲೂ ಹೇಗೆ ಕಿರಣಗಳು ಎಲ್ಲಾ ದಿಕ್ಕುಗಳಿಗೂ ಪಸರಿಸಿಕೊಂಡಿರುವವೋ ಹಾಗೆಯೇ ಈ ಒಂದೊಂದು ಪ್ರತಿಬಿಂಬ ಸೂರ್ಯನಿಂದಲೂ ಕಿರಣಗಳು ಪಸರಿಸಿಕೊಂಡಿರುವದು ಗೋಚರವಾಗುತ್ತದೆ. ಇಷ್ಟೇ ಅಲ್ಲ. ಈ ಪ್ರತಿಬಿಂಬಗಳನ್ನು ನಾವು ಬೇರೆಬೇರೆ ದೃಷ್ಟಿಕೋಣಗಳಿಂದ ನೋಡಿದರೆ ಪ್ರತಿಬಿಂಬಗಳ ಬಣ್ಣಗಳೂ ಬೇರೆಬೇರೆಯಾಗಿ ಕಾಣುವವು. ಅವುಗಳು ಕ್ರಮವಾಗಿ ಊದ, ನೀಲಿ, ಆಕಾಶನೀಲಿ, ಹಸುರು, ಹಳದಿ, ಕಿತ್ತಳೆ, ಕೆಂಪು-ಈ ಎಲ್ಲಾ ಬಣ್ಣಗಳನ್ನೂ ದೃಷ್ಟಿಗೆ ತೋರಿಸುವವು ! ಹೀಗೆ ಈ ನೀರಿನತೊಟ್ಟುಗಳಲ್ಲಿ ಒಂದೊಂದರಲ್ಲಿಯೂ ಒಬ್ಬೊಬ್ಬ ಪ್ರತಿಬಿಂಬಸೂರ್ಯನೂ, ಆ ಒಬ್ಬೊಬ್ಬಸೂರ್ಯನಲ್ಲಿಯೂ ಬೇರೆಬೇರೆಯ ಬಣ್ಣವೂ ತೋರುತ್ತಿರುವದು ನಮ್ಮ ದೃಷ್ಟಿ ವಿಶೇಷದಿಂದಾದದ್ದೇ ಹೊರತು ನಿಜವಾಗಿರುವದಲ್ಲ; ನಿಜವಾಗಿ ಅಷ್ಟು ಸೂರ್ಯರು, ಅಷ್ಟು ಬಗೆಬಗೆಯ ಬಣ್ಣದ ಸೂರ್ಯರು ಒಬ್ಬರಿಗಿಂತ ಒಬ್ಬರು ಬೇರೆಯಾಗಿ ಇರುವದೇ ಇಲ್ಲ. ಅವರೆಲ್ಲ ಒಬ್ಬನೇ ಒಬ್ಬ ಪರಮಾರ್ಥಸೂರ್ಯನನ್ನು ಅವಲಂಬಿಸಿರುತ್ತಾರೆ. ಅಲ್ಲವೆ? ಇದರಂತೆಯೇ ಬೇರೆಬೇರೆಯ ನಾಮರೂಪಗಳ ಆಕಾರವಿಶೇಷವಾದ ಶರೀರಗಳಿಂದ ನಾವುಗಳು ಬೇರೆಬೇರೆಯಾಗಿ ಕಾಣುತ್ತಿದ್ದರೂ-ನಮ್ಮಲ್ಲಿ ಬೇರೆಬೇರೆಯ ಲಿಂಗ, ಬಣ್ಣ, ಜಾತಿ, ರೂಪು ಮುಂತಾದ ಪ್ರಭೇದಗಳು ಗೋಚರವಾಗುತ್ತಿದ್ದರೂ-ನಾವೆಲ್ಲರೂ ಒಬ್ಬನೇ ಒಬ್ಬ ಪರಮಾರ್ಥಸ್ವರೂಪನಾದ ಭಗವಂತನಲ್ಲಿ ಒಂದಾಗಿರುವೆವು. ಆ ಭಗವಂತನು ಸಕಲವಿಧದಲ್ಲಿಯೂ ಪೂರ್ಣನಾಗಿರುವನು; ನಾವೂ ಆತನಲ್ಲಿ ಆತನ ರೂಪದಿಂದ ಪೂರ್ಣಸ್ವರೂಪರೇ ಆಗಿರುವೆವು.

ಈ ಪ್ರಪಂಚವೆಲ್ಲವೂ ಪರಿಪೂರ್ಣನಾಗಿರುವ ಪರಮಾತ್ಮನಿಂದಲೇ ಬಂದಿರುತ್ತದೆ; ಪರಮಾತ್ಮನ ದೃಷ್ಟಿಯಿಂದ ಇದೆಲ್ಲವೂ ಪೂರ್ಣವೇ ಆಗಿರುತ್ತದೆ. ಈ ಲೋಕದಲ್ಲಿ ಯಾವನೊಬ್ಬ ಮನುಷ್ಯನೂ ಅಪೂರ್ಣನಲ್ಲ; ಯಾವದೊಂದು ಪ್ರಾಣಿಯೂ ಅಪೂರ್ಣವಲ್ಲ; ಯಾವದೊಂದು ವಸ್ತುವೂ ಅಪೂರ್ಣವಲ್ಲ; ಯಾವದೊಂದು ಘಟನೆಯೂ ಅಪೂರ್ಣವಲ್ಲ. ನಮ್ಮಲ್ಲಿ ಪ್ರತಿಯೊಬ್ಬರೂ 'ನಾನು ಅಪೂರ್ಣನು, ಇಂಥಿಂಥ ಲೋಪದೋಷಗಳಿಂದ ಕೂಡಿರುವವನು, ಇಂಥಿಂಥ ಕುಂದುಕೊರತೆಗಳಿಂದ ಕೂಡಿರುವವನು' ಎಂದು ಪ್ರತಿದಿನವೂ ಭಾವಿಸಿಕೊಂಡು ನಮ್ಮಲ್ಲಿ ಲೋಕದೃಷ್ಟಿಯಿಂದ ಕಾಣಿಸುವ ಅಪೂರ್ಣತೆಯನ್ನೇ ಪರಿಭಾವಿಸಿಕೊಳ್ಳುತ್ತಿರುವೆವು. ಭೂತಗನ್ನಡಿಯ ಕಣ್ಣಿಂದ ನೋಡಿದ ವಸ್ತುವನ್ನು ವಿಪರೀತವಾಗಿ ಭಾವಿಸುವಂತೆ ಮೇಲೆಮೇಲೆ ಕಾಣಿಸುವ ದೋಷಗಳನ್ನೇ ನಮ್ಮ ಸ್ವಭಾವವೆಂದು

ಕೊಂಡು ಪರಿತಪಿಸುತ್ತಿರುವೆವು. ನಿಜವಾಗಿ ನಾವು ಪೂರ್ಣನಾದ ಅದ್ವಿತೀಯ ಪರಮಾತ್ಮನ ಅಂಶರೂಪರಾಗಿರುವದರಿಂದ ಶಾಸ್ತ್ರದೃಷ್ಟಿಯಿಂದ ನೋಡಿದಾಗ ನಮ್ಮಲ್ಲಿ ಯಾವ ದೋಷವೂ ಇರುವದಿಲ್ಲ. ಪೂರ್ಣನಾದ ಆ ಪರಮಾತ್ಮನಲ್ಲಿ ನಾವು ಎಂದೆಂದಿಗೂ ಒಂದಾಗಿರುತ್ತೇವೆ-ಎಂಬ ಧೈರ್ಯವನ್ನು ಕೊಡುವ ಭಾವನೆಯನ್ನು ಮನದಂದುಕೊಳ್ಳುತ್ತಿರಬೇಕು.

ಇದರಂತೆ ನಮ್ಮ ಸುತ್ತಲೂ ಕಾಣುತ್ತಿರುವ ಜನರಲ್ಲಿಯೂ ನಾವು ಮೇಲೆ ಮೇಲೆ ಕಾಣಿಸುತ್ತಿರುವ ಅಪೂರ್ಣತೆಯನ್ನೇ, ಕುಂದುಕೊರತೆಗಳನ್ನೇ, ಎಣಿಸುತ್ತಾ ಇರುವೆವು. ಆ ಕುಂದುಕೊರತೆಗಳು ಲೌಕಿಕದೃಷ್ಟಿಯಿಂದ ನಮಗೆ ಕಾಣಿಸುತ್ತಿರುವವೇ ಹೊರತು ಪರಮಾರ್ಥವಾದ ಶಾಸ್ತ್ರದೃಷ್ಟಿಯಲ್ಲಿ ಅವರಲ್ಲಿರುವದೇ ಇಲ್ಲ. ಮತ್ತೊಬ್ಬರ ಕುಂದು ಕೊರತೆಗಳು ನನ್ನ ದೃಷ್ಟಿದೋಷಗಳಿಂದ ಕಾಣುವದೇ ಹೊರತು ಪರಮಾರ್ಥ ವಾಗಿರುವದಿಲ್ಲ ಎಂಬುದನ್ನು ನಾವು ಮನದಂದರೆ, ಆಗ ಅದೇ ಜನರಲ್ಲಿರುವ ಪೂರ್ಣತ್ವವು ಪ್ರಕಟವಾಗುವದಕ್ಕೆ ಅವಕಾಶವು ಉಂಟಾಗುವದು. ಹಾಗೆಯೇ ಎಲ್ಲಾ ಪ್ರಾಣಿಗಳಲ್ಲಿಯೂ ಎಲ್ಲಾ ಘಟನೆಗಳಲ್ಲಿಯೂ ಪರಮಾತ್ಮನ ಪೂರ್ಣತೆಯನ್ನು ನಾವು ಕಾಣುವದಕ್ಕೆ ಅವಕಾಶವಿದೆ. ಕಷ್ಟಕಾಲವು ಬರಲಿ, ಸುಖಕಾಲವು ಬರಲಿ; ಮಳೆಯಾಗಲಿ ಚಳಿಯಾಗಲಿ, ಬಿಸಿಲಾಗಲಿ ಗಾಳಿಯಾಗಲಿ; ಸುಭಿಕ್ಷವಾಗಲಿ ದುರ್ಭಿಕ್ಷ ವಾಗಲಿ-ಎಲ್ಲವೂ ಆ ಪರಿಪೂರ್ಣನಾದ ಪರಮಾತ್ಮನಿಂದ ಬಂದಿರುವದರಿಂದ ಪರಿಪೂರ್ಣವೇ ಆಗಿರುತ್ತದೆ. ಅದರಲ್ಲಿ ನಾವು ಕಾಣುತ್ತಿರುವ ಕುಂದುಕೊರತೆ ಗಳೆಂಬಿವೆಲ್ಲ ನಮ್ಮ ದೃಷ್ಟಿದೋಷದಿಂದಲೇ ನಮಗೆ ಗೋಚರಿಸುವವು. ಈ ಪರಮಾರ್ಥವನ್ನು ಕಂಡುಕೊಂಡರೆ ಇಡಿಯ ಬ್ರಹ್ಮಾಂಡವೇ ನಮಗೆ ಆ ಪೂರ್ಣ ಬ್ರಹ್ಮದ ವಿಭೂತಿಯಾಗುವದು; ನಾವು ನಮ್ಮ ಸುತ್ತಮುತ್ತಲಿನ ಎಲ್ಲಾ ಜನರೊಡನೆ, ಎಲ್ಲಾ ಪ್ರಾಣಿಗಳೊಡನೆ, ಎಲ್ಲಾ ವಸ್ತುಗಳೊಡನೆ, ಎಲ್ಲಾ ಘಟನೆಗಳೊಡನೆ ಆ ಪೂರ್ಣಬ್ರಹ್ಮದಲ್ಲಿ ಒಂದಾಗಿರುವೆವು. ಪೂರ್ಣತ್ವವನ್ನು ಕಂಡುಕೊಂಡದ್ದರಿಂದ ಪೂರ್ಣವಾದ ಆನಂದವೊಂದೇ ಉಳಿದುಕೊಳ್ಳುವದು.

## 21. ಅಧ್ಯಾತ್ಮಯೋಗ

ಲೋಕದೃಷ್ಟಿಯಿಂದ ನಾವು ಎಷ್ಟೇ ಕುಂದುಕೊರತೆಗಳುಳ್ಳವರಾಗಿ ತೋರಿದರೂ ಶಾಸ್ತ್ರದೃಷ್ಟಿಯಲ್ಲಿ ನಾವು ಪರಿಪೂರ್ಣನಾದ ಪರಮಾತ್ಮನಿಗೆ ಬಲು ಹತ್ತಿರದ ಸಂಬಂಧವುಳ್ಳವರಾಗಿರುವೆವು-ಎಂಬುದೊಂದು ಬಲ್ಲವರ ಸಂದೇಶವು. ಇದನ್ನು ಮನದಂದುಕೊಂಡಂತೆಲ್ಲ ನಮಗೆ ಧೈರ್ಯದಿಂದಲೂ ಉತ್ಸಾಹದಿಂದಲೂ ವ್ಯವಹಾರವನ್ನು ಸಾಗಿಸಿಕೊಂಡು ಹೋಗುವ ಶಕ್ತಿಯು ಮೈದುಂಬಿಕೊಳ್ಳುವದು.

ಪರಮಾತ್ಮನಿಗೂ ಜೀವರಿಗೂ ಇರುವ ಸಂಬಂಧವನ್ನು ಅಧ್ಯಾತ್ಮಶಾಸ್ತ್ರದಲ್ಲಿ ಬಗೆ ಬಗೆಯ ದೃಷ್ಟಾಂತಗಳಿಂದ ವಿಶದಗೊಳಿಸಿರುತ್ತದೆ. ಅಲ್ಲಿ ದೃಷ್ಟಾಂತ ದಾರ್ಷ್ಟಾಂತಿಕ ಗಳಿಗೆ ಎಲ್ಲಾ ಪ್ರಕಾರದಿಂದಲೂ ಸಾರೂಪ್ಯವಿರುವದಿಲ್ಲವೆಂಬುದನ್ನು ಹೇಳಬೇಕಾ ದದ್ದೇ ಇಲ್ಲ. ಒಂದೊಂದು ದೃಷ್ಟಾಂತದಲ್ಲಿ ಒಂದೊಂದು ಅಂಶದಲ್ಲಿ ಹೋಲಿಕೆ ಇರುತ್ತದೆ. ಆ ಅಂಶವನ್ನು ಸ್ಫುಟಗೊಳಿಸುವದಕ್ಕೆಂದೇ ಆಯಾ ದೃಷ್ಟಾಂತವನ್ನು ಶಾಸ್ತ್ರದಲ್ಲಿ ಕೊಟ್ಟಿರುತ್ತದೆ. ಅಷ್ಟೆ.

ಉದಾಹರಣೆಗೆ ಸೂರ್ಯಚಂದ್ರಾದಿಗಳ ಪ್ರತಿಬಿಂಬಗಳಂತೆ ಜೀವರು ಪರ ಮಾತ್ಮನಿಗೆ ಸಂಬಂಧಿಸಿರುತ್ತಾರೆ ಎಂಬ ದೃಷ್ಟಾಂತವನ್ನು ತೆಗೆದುಕೊಳ್ಳಿರಿ. ಅಲ್ಲಿ ಸೂರ್ಯನು ಒಬ್ಬನು, ಸೂರ್ಯಪ್ರತಿಬಿಂಬಗಳು ಅನೇಕ; ಸೂರ್ಯನಲ್ಲಿ ಯಾವ ವಿಕಾರಗಳೂ ನಿಜವಾಗಿರುವದಿಲ್ಲ, ಪ್ರತಿಬಿಂಬಗಳಲ್ಲಿ ಆಯಾ ಪ್ರತಿಬಿಂಬಾಧಾರ ದಲ್ಲಿರುವ ಧರ್ಮಗಳ ಅನುಕಾರವು ಇರುತ್ತದೆ-ಎಂಬ ಹೋಲಿಕೆಯನ್ನು ಮಾತ್ರ ತೆಗೆದುಕೊಳ್ಳಬೇಕು. ನೀರು, ಕನ್ನಡಿ-ಮುಂತಾದ ಆಧಾರ ದ್ರವ್ಯಗಳು ಮಲಿನ ವಾಗಿದ್ದರೆ ಪ್ರತಿಬಿಂಬವು ಮಂಕಾಗಿ ಕಾಣಿಸುತ್ತದೆ, ಅವು ಸಣ್ಣವಾಗಿದ್ದರೆ, ಪ್ರತಿಬಿಂಬವೂ ಸಣ್ಣದಾಗಿ ಕಾಣಿಸುತ್ತದೆ, ಅವು ದೊಡ್ಡವಾದರೆ ಪ್ರತಿಬಿಂಬವೂ ದೊಡ್ಡದಾಗಿರುವಂತೆ ಕಾಣಿಸುತ್ತದೆ. ಹೀಗೆ ಪ್ರತಿಬಿಂಬವು ಆಯಾ ಆಧಾರದ್ರವ್ಯದ ಧರ್ಮವನ್ನು ಹೊಂದುವಂತೆ ಕಾಣಿಸುತ್ತಿದ್ದರೂ ಯಾವ ಉಪಾಧಿಯೂ ಇಲ್ಲದ ಸೂರ್ಯಬಿಂಬವು ಹೇಗೆ ತಾನು ಇದ್ದಂತೆಯೇ ಯಾವಾಗಲೂ ಸ್ವಚ್ಛವಾಗಿ ಯಾವ ಮಾರ್ಪಾಡೂ ಇಲ್ಲದೆ ಇರುವದೋ ಹಾಗೆ ಒಬ್ಬನೇ ಪರಮಾತ್ಮನಲ್ಲಿ ಒಂದಾಗಿರುವ ಜೀವರುಗಳೂ ತಮ್ಮ ತಮ್ಮ ಉಪಾಧಿಗಳಾದ ಅಂತಃಕರಣಗಳ ಧರ್ಮವನ್ನು ಹೊಂದಿರುವಂತೆ ಕಂಡರೂ ಪರಮಾರ್ಥವಾದ ಪರಮಾತ್ಮ ರೂಪದಲ್ಲಿ ಅವರೆಲ್ಲರೂ ಒಂದಾಗಿರುವರು, ಪೂರ್ಣರಾಗಿರುವರು, ಯಾವ ದೊಂದು ವಿಕಾರವೂ ಇಲ್ಲದೆ ಇರುವರು ಎಂಬುದೇ ದೃಷ್ಟಾಂತದಿಂದ ತಿಳಿದು ಕೊಳ್ಳಬೇಕಾಗಿರುವ ಭಾಗವು.

ದೃಷ್ಟಾಂತದಿಂದ ಮತ್ತೊಂದು ಅಂಶವನ್ನು ಗ್ರಹಿಸಬಹುದು. ಅದೇನೆಂದರೆ ಒಬ್ಬ ಸೂರ್ಯನಿಗೆ ಅನೇಕಪ್ರತಿಬಿಂಬಗಳಿವೆ ಎಂದು ನಮಗೆ ತೋರುತ್ತಿದ್ದರೂ ಅವು ನಿಜವಾಗಿ ಸೂರ್ಯನಂತೆ ಸ್ವತಂತ್ರಗಳಾದ ವಸ್ತುಗಳಲ್ಲ. ಆಕಾಶದಲ್ಲಿ ಒಂದು ನಕ್ಷತ್ರದ ಜೊತೆಗೆ ಇನ್ನೂ ಹಲವು ನಕ್ಷತ್ರಗಳು ಸ್ವತಂತ್ರವಾಗಿಯೇ ಇದ್ದುಕೊಂಡು ತಮ್ಮ ತಮ್ಮ ಯೋಗ್ಯತೆಗೆ ತಕ್ಕ ಪ್ರಕಾಶದಿಂದೊಡಗೂಡಿರುವಂತೆ ಈ ಸೂರ್ಯ ಪ್ರತಿಬಿಂಬಗಳು ತಾವು ತಾವೇ, ಮತ್ತೆ ಯಾರ ಹಂಗೂ ಇಲ್ಲದೆ, ಇದ್ದುಕೊಂಡಿರು

ವದಿಲ್ಲ. ಇದರಂತೆಯೇ ಜೀವರುಗಳು ಪರಮಾತ್ಮನನ್ನು ಬಿಟ್ಟು ತಾವು ತಾವೇ ಸ್ವತಂತ್ರರಾಗಿ ಇದ್ದುಕೊಂಡಿರುವದಿಲ್ಲ. ತಾವು ತಾವೇ ತಮ್ಮ ತಮ್ಮ ಪ್ರವೃತ್ತಿಗಳನ್ನು ಮಾಡುತ್ತಿರುವದಿಲ್ಲ. ನಮ್ಮೆಲ್ಲರ ಸ್ವರೂಪವೂ ಸ್ಥಿತಿಯೂ ಪ್ರವೃತ್ತಿಯೂ ಆ ಪರಮಾತ್ಮನನ್ನೇ ಎಲ್ಲಾ ವಿಧದಿಂದಲೂ ಅವಲಂಬಿಸಿರುವವು. ಆತನ ಇರವಿನಲ್ಲಿಯೇ ನಮ್ಮ ಇರವು, ಬರವು, ವ್ಯವಹಾರ–ಎಲ್ಲವೂ ಸಾಗುತ್ತಿರುತ್ತದೆ. ಈ ತತ್ತ್ವವನ್ನು ಸೂರ್ಯಪ್ರತಿಬಿಂಬ ದೃಷ್ಟಾಂತವು ಮನಗಾಣಿಸುತ್ತಿರುತ್ತದೆ.

ಆದರೆ ಸೂರ್ಯನಿಗೆ ಪ್ರತಿಬಿಂಬವು ನಿಜವಾಗಿ ದೂರದಲ್ಲಿರುವ ಒಂದಾನೊಂದು ಮೂರ್ತದ್ರವ್ಯವಾದ ನೀರು, ಕನ್ನಡಿ–ಮುಂತಾದದ್ದರಲ್ಲಿ ಒಡೆದು ಮೂಡಿಕೊಂಡು ತೋರುವಂತೆ ನಾವು ಪರಮಾತ್ಮನಿಗಿಂತ ಬೇರೆಯಾಗಿರುವ ಮತ್ತು ಅವನಿಗೆ ದೂರದಲ್ಲಿರುವ ಮತ್ತೊಂದು ಆಧಾರದಲ್ಲಿ ಪ್ರತಿಬಿಂಬಗಳಾಗಿರುವೆವು ಎಂದು ಮಾತ್ರ ಈ ದೃಷ್ಟಾಂತದ ಬಲದಿಂದ ಭಾವಿಸಬಾರದು. ಏಕೆಂದರೆ ಪರಮಾತ್ಮನು ಇಲ್ಲದ ಕಡೆಯೇ ಇಲ್ಲವಾದ್ದರಿಂದ ಅವನಿಗೆ ದೂರವಾಗಿ ನಾವು ಇರುತ್ತೇವೆಂಬುದಕ್ಕೆ ಶಾಸ್ತ್ರದ ಆಧಾರವಿಲ್ಲ; ಪರಮಾತ್ಮನನ್ನು ಬಿಟ್ಟು ಸ್ವತಂತ್ರವಾಗಿರುವ ಮತ್ತೊಂದು ವಸ್ತು ಯಾವದೊಂದೂ ಇಲ್ಲವೇ ಇಲ್ಲವಾದ್ದರಿಂದ ನಾವು ಆತನಿಗಿಂತ ಬೇರೆಯಾಗಿ ನಾವು ನಾವೇ ಇದ್ದುಕೊಂಡು ಇರುವದಿಲ್ಲ. ಇಷ್ಟೇ ಅಲ್ಲ, ಸೂರ್ಯನು ಪರಮಾರ್ಥ ವಸ್ತುವೆಂದಿಟ್ಟುಕೊಂಡರೆ ಅದರ ಹೋಲಿಕೆಯಿಂದ ಪ್ರತಿಬಿಂಬಗಳು ಬರಿಯ ಹುಸಿತೋರಿಕೆಯೇ ಆಗಿರುತ್ತವೆ. ಆದರೆ ನಾವುಗಳು ಪರಮಾತ್ಮನ ಆಧಾರದಿಂದ ಕಲ್ಪಿತವಾಗಿರುವ ಬರಿಯ ಹುಸಿ ತೋರಿಕೆಯಲ್ಲ; ಹಾಗೆಂದು ತಿಳಿಯುವದು ನಾವು ಚೇತನರೆಂಬ ನಿಸ್ಸಂಶಯವಾದ ಸ್ಫುಟತರಾನುಭವಕ್ಕೆ ವಿರುದ್ಧವಾಗುತ್ತದೆ.

ಪರಮಾತ್ಮನಿಗೂ ಜೀವರಾದ ನಮ್ಮಗಳಿಗೂ ಇರುವ ಈ ನಿಕಟಸಂಬಂಧವನ್ನು ತಿಳಿಯಪಡಿಸುವದಕ್ಕೆ ಉಪನಿಷತ್ತುಗಳಲ್ಲಿ ಮತ್ತೊಂದು ದೃಷ್ಟಾಂತವನ್ನು ಕೊಟ್ಟಿರುವದುಂಟು. ಒಂದು ಧಗಧಗನೆ ಉರಿಯುತ್ತಿರುವ ಕೊಳ್ಳಿಯಿಂದ ಹೇಗೆ ಸಣ್ಣಸಣ್ಣ ಕಿಡಿಗಳು ಎಲ್ಲಾ ಕಡೆಗೂ ಸಿಡಿದು ಬರುವವೋ ಹಾಗೆಯೇ ಪರಮಾತ್ಮನಿಂದ ಈ ಜೀವರುಗಳೂ ಸಿಡಿದುಬಂದಿರುತ್ತಾರೆ, ಕೊನೆಗೆ ಅವನಲ್ಲಿಯೇ ಸೇರಿಕೊಳ್ಳುತ್ತಾರೆ ಎಂದು ಅಲ್ಲಲ್ಲಿ ವೇದಾಂತದಲ್ಲಿ ವರ್ಣಿಸಿರುತ್ತದೆ. ಈ ದೃಷ್ಟಾಂತದಲ್ಲಿ ತಿಳಿಯಬೇಕಾದದ್ದೇನು? ನಮ್ಮೆಲ್ಲರಿಗೂ ಮೂಲವಾಗಿರುವ ಪರಮಾತ್ಮನು ಒಂದು ದೊಡ್ಡ ಚೈತನ್ಯದ ಗಟ್ಟಿಯೆಂದೂ ಅದರಿಂದ ನಾವು ಇಷ್ಟಿಷ್ಟಾಗಿ ಕಿತ್ತುಕೊಂಡು ಹೊರಕ್ಕೆ ಸಿಡಿದುಬಂದಿದೇವೆಂದೂ ಅಭಿಪ್ರಾಯವಲ್ಲ. ಪರಮಾತ್ಮನಿಂದ ಜೀವರು ಚೂರು ಚೂರಾಗಿ ಹೊರಕ್ಕೆ ಬಂದಿದ್ದರೆ ಪರಮಾತ್ಮನು ಪರಮಾತ್ಮನೇ ಆಗುವದಿಲ್ಲ.

ಏಕೆಂದರೆ ಆಗ ಎಷ್ಟು ಜೀವರೆಂಬ ಕಿಡಿಗಳು ಹೊರಕ್ಕೆ ಬಂದಿರುವವೋ ಅಷ್ಟು ಸಂಖ್ಯೆಯ ಗಾಯಗಳು ಪರಮಾತ್ಮಸ್ವರೂಪದಲ್ಲಿ ಆಗಿವೆಯೆಂದೂ ಹುಟ್ಟಬಂದಂತೆಲ್ಲ ಪರಮಾತ್ಮಸ್ವರೂಪವು ಅಷ್ಟಷ್ಟು ಜೀವರುಗಳು ಸವೆಯುತ್ತಾ ಬರುವದೆಂದೂ ಆಗುವದು. ಆದ್ದರಿಂದ ಹೀಗೆ ಕಲ್ಪಿಸುವದು ಎಂದಿಗೂ ಸರಿಯಾಗಲಾರದು. ಹೇಗೆ ಮೂಲವಾಗಿರುವ ಕೊಳ್ಳಿಯಲ್ಲಿ ಬಿಸಿ ಬೆಳಕು-ಮುಂತಾದವುಗಳು ಸ್ವಭಾವ ದಿಂದಲೇ ಇದ್ದುಕೊಂಡಿರುವವೋ ಹಾಗೆಯೇ ಪ್ರತಿಯೊಂದು ಕಿಡಿಯಲ್ಲಿಯೂ ಆ ಧರ್ಮಗಳು ಸ್ವಭಾವದಿಂದಲೇ ಇರುವವಲ್ಲವೆ? ಅದರಂತೆ ಹೇಗೆ ಪರಮಾತ್ಮ ನಲ್ಲಿ ಸತ್ಯಜ್ಞಾನಾನಂದಸ್ವಭಾವವು ಸ್ವರೂಪದಲ್ಲಿಯೇ ಇದ್ದುಕೊಂಡಿರುತ್ತದೆಯೋ ಹಾಗೆಯೇ ಪ್ರತಿಯೊಬ್ಬ ಜೀವನಲ್ಲಿಯೂ ಈ ಸ್ವಭಾವವು ಇದೆಯೆಂಬುದೇ ದೃಷ್ಟಾಂತದಲ್ಲಿ ವಿವಕ್ಷಿತವಾಗಿರುವ ಹೋಲಿಕೆಯ ಅಂಶವು. ಇಲ್ಲಿಯೂ ಜೀವರು ಗಳು ಪರಮಾತ್ಮನಿಗೆ ಎಲ್ಲಾ ಬಗೆಯಿಂದಲೂ ಹತ್ತಿರವಾದ ಸಂಬಂಧವುಳ್ಳವ ರೆಂಬುದನ್ನೇ ಮನಸ್ಸಿಗೆ ತಂದಿರುತ್ತದೆ ಎಂಬುದು ಸ್ಪಷ್ಟವಾಗಿದೆ.

ಶ್ರುತಿಯಲ್ಲಿ ಜೀವರುಗಳನ್ನು ಅಮೃತನಾದ ಪರಮಾತ್ಮನ ಪುತ್ರರು ಎಂದು ಕರೆದಿರುವದೂ ಉಂಟು. ಈಶ್ವರನನ್ನು ನಮ್ಮ ತಂದೆ ಎಂದು ಸ್ಮೃತಿಗಳಲ್ಲಿಯೂ ಕರೆದಿರುತ್ತದೆ. ಇದರ ಅಭಿಪ್ರಾಯವೇನು?-ಎಂಬುದನ್ನು ನಾವು ಆಲೋಚಿಸಬೇಕು. ಈಶ್ವರನು ನಮ್ಮಂತೆ ಹೆಂಡಿರುಮಕ್ಕಳು, ಮನೆಮಠ-ಮುಂತಾದವುಗಳನ್ನು ಇಟ್ಟುಕೊಂಡಿರುವ ಸಂಸಾರಿಯೇನೂ ಅಲ್ಲ. ಅವನಿಗೆ ಮಕ್ಕಳು ನಾವು ಎಂದರೆ ಏನರ್ಥ? ಪರಮಾತ್ಮನ ಸ್ವಭಾವವೇ ನಮ್ಮದಾಗಿದ್ದರೂ ಈಗಿನ ಸ್ಥಿತಿಯಲ್ಲಿ ನಾವು ಅದನ್ನು ಅರಿಯದೆ ವ್ಯಥೆಪಡುತ್ತಿದ್ದೇವೆ ಎಂಬುದನ್ನು ನೆನಪುಕೊಡುವ ರೀತಿಯಿದು.

ಈ ವಿಷಯದಲ್ಲಿ ಒಂದಾನೊಂದು ಕಥೆಯನ್ನು ಉದಾಹರಿಸುವದುಂಟು. ಒಮ್ಮೆ ಒಬ್ಬ ರಾಜಪುತ್ರನು ಹುಟ್ಟಿದ ಮಾತ್ರದಿಂದ ಅದೇಕೊ, ತಂದೆತಾಯಿಗಳನ್ನು ಬಿಟ್ಟಗಲಬೇಕಾಯಿತು. ಆಗ ಅವನನ್ನು ಒಬ್ಬ ಬೇಡರವನು ಸಾಕಿದನು. ಆ ಹುಡುಗನಿಗೆ ಇಂಥ ವಂಶದವನು ನಾನು ಎಂಬ ಭಾವನೆಯೇ ಇಲ್ಲ; ನಾನು ಬೇಡರವನು ಎಂಬ ಭಾವನೆಯಿಂದಲೇ ಬೆಳೆದನು. ಅವನಿಗೆ ಕ್ಷತ್ರಿಯೋಚಿತವಾದ ಸಂಸ್ಕಾರಗಳು ಯಾವವೂ ಆಗಿರಲಿಲ್ಲ; ಆ ಬೇಡರವನ ಮನೆಯ ಸಂಪ್ರದಾಯ ದಂತೆ ಆಯಾ ಕರ್ಮಗಳನ್ನೇ ಮಾಡಿಕೊಂಡು ಬೇಡರವನಾಗಿಯೇ ಬೆಳೆದನು. ಹೀಗಿರುವಲ್ಲಿ ಒಂದು ದಿನ ಒಬ್ಬ ಹಾದಿಹೋಕನು ಈ ಹುಡುಗನನ್ನು ಕಂಡನು. ಇವನ ಹಿಂದಿನ ಕಥೆಯನ್ನೆಲ್ಲ ಬಲ್ಲವನು, ಅವನು; ಅರಮನೆಯಲ್ಲಿ ಚೆನ್ನಾಗಿ ಬಳಕೆಯೂ ಅವನಿಗೆ ಇತ್ತು. ಈ ಹುಡುಗನು ರಾಜಶ್ರೀಯನ್ನು ಪಡೆಯಲು

ತಕ್ಕವನೆಂಬುದೂ ಇವನು ಪ್ರಯತ್ನಪಟ್ಟರೆ ಬಹುಸುಲಭವಾಗಿ ತನ್ನ ರಾಜ್ಯವನ್ನು ಮತ್ತೆ ಪಡೆಯಬಹುದೆಂಬುದೂ ಅವನಿಗೆ ತಿಳಿದಿತ್ತು. ಆದ್ದರಿಂದ ಅವನು ಕರುಣೆ ಯಿಂದ ಈ ಹುಡುಗನಿಗೆ ಅವನ ವಂಶ, ಚರಿತ್ರೆ-ಮುಂತಾದದ್ದನ್ನು ವಿಸ್ತಾರವಾಗಿ ತಿಳಿಸಿದನು. ಆಗ ಆ ಹುಡುಗನಿಗೆ ತನ್ನ ನಿಜವಾದ ಸ್ವರೂಪದ ಅರಿವಾಯಿತು; ಅಂದಿನಿಂದ ಅವನು ವ್ಯಾಧಾಚಾರವನ್ನು ಬಿಟ್ಟು ರಾಜಪುತ್ರನಿಗೆ ಉಚಿತವಾದ ಆಚಾರವನ್ನು ಕೈಕೊಂಡನು. ಕೆಲವು ದಿನಗಳಲ್ಲಿಯೇ ತನ್ನ ಪಿತೃಪಿತಾಮಹರುಗಳಿಗೆ ಸೇರಿದ್ದ ರಾಜ್ಯಲಕ್ಷ್ಮಿಯನ್ನು ಸಂಪಾದಿಸಿಕೊಂಡು ಸುಖವಾಗಿದ್ದನು. ಈಗ ಕಥೆಯಿಂದ ತಿಳಿದುಕೊಳ್ಳಬೇಕಾದದ್ದು ಏನೆಂಬುದನ್ನು ನೋಡೋಣ. ನಾವು ಈಗ ಕೈ ಕೊಂಡಿರುವ ಆಚರಣೆಯು ನಮ್ಮ ಪರಮಾರ್ಥಸ್ವರೂಪಕ್ಕೆ ಸ್ವಲ್ಪವೂ ಅನುಗುಣ ವಾಗಿಲ್ಲ. ನಾವು ಎಂದೆಂದಿಗೂ ಈ ದೇಹಾದಿಗಳಿಗೆ ಗಂಟುಬಿದ್ದಿರುವ ಸ್ವಭಾವದವ ರೆಂಬ ಭ್ರಾಂತಿಯು ನಮ್ಮೆಲ್ಲರಿಗೂ ಸ್ವಭಾವದಿಂದಲೇ ಇದ್ದುಕೊಂಡುಬಿಟ್ಟಿದೆ. ನಾವು ಇದಕ್ಕಿಂತ ಉತ್ತಮಸ್ಥಿತಿಗೆ ಏರಬಹುದೆಂಬ ಆಶೆಯು ನಮಗೆ ಒಂದಿಷ್ಟೂ ತೋರು ತ್ತಿರಲಿಲ್ಲ. ಆದರೆ ಶಾಸ್ತ್ರದೃಷ್ಟಿಯಿಂದ ನಾವು ನಿಜವಾಗಿ ಪರಮಾತ್ಮನ ಮಕ್ಕಳೇ ಆಗಿರುವೆವು; ಪರಮಾತ್ಮನ ಅಮೃತಸ್ವಭಾವವು ಪೂರ್ಣವಾಗಿಯೂ ನಮ್ಮದಾಗಿರುವದು. ಗುರುಶಾಸ್ತ್ರಗಳ ಸಹಾಯದಿಂದ ತಕ್ಕ ರೀತಿಯಲ್ಲಿ ಸಾಧನವನ್ನು ಮಾಡಿದರೆ ನಾವೂ ಕಥೆಯ ರಾಜಪುತ್ರನಂತೆ ಪರಮಾತ್ಮನ ಸ್ವರಾಜ್ಯವನ್ನು ಪಡೆದುಕೊಳ್ಳಬಹುದು.

ಹಿಂದಿನ ಸಂದೇಶದಲ್ಲಿ ತಿಳಿಸಿರುವಂತೆ ಪರಮಾತ್ಮನು ಪರಿಪೂರ್ಣನಾಗಿರು ತ್ತಾನೆ. ನಾನೂ ನೀವೂ ಎಲ್ಲರೂ ಆ ಪೂರ್ಣನಾದ ಪರಮಾತ್ಮನಿಂದಲೇ ಬಂದಿರುವ, ಆ ಪರಮಾತ್ಮನಿಂದ ಎಂದಿಗೂ ಭಿನ್ನರಲ್ಲದ, ಆತನ ಅಂಶರಾಗಿರು ತ್ತೇವಾದ್ದರಿಂದ ನಾವೆಲ್ಲರೂ ಪರಿಪೂರ್ಣರಾಗಿ ಇರುತ್ತೇವೆ. ಮೇಲೆಮೇಲೆ ನೋಡಿ ದರೆ ಎಷ್ಟು ಅಪೂರ್ಣರಾಗಿ ಕಂಡರೂ ಅಧ್ಯಾತ್ಮಸಾಧನಗಳಿಂದ ಒಳಹೊಕ್ಕು ಆಳವಾಗಿ ಇಳಿದು ನೋಡಿದರೆ ನಾವೆಲ್ಲರೂ ಆ ಪರಮಾತ್ಮನಲ್ಲಿ ಎಂದೆಂದಿಗೂ ಒಂದಾಗಿರುತ್ತೇವೆ. ಆದ್ದರಿಂದ ಶಾಸ್ತ್ರದೃಷ್ಟಿಯಿಂದ ನೋಡಿದರೆ ನಾವುಗಳೆಲ್ಲರೂ ಯೋಗ್ಯತೆಯುಳ್ಳವರೇ ಆಗಿರುತ್ತೇವೆ. ಆದರೆ ನಾವು ಈಗ ಲೋಕದೃಷ್ಟಿಗೆ ಕಟ್ಟುಬಿದ್ದಿರುವದರಿಂದ ಹೀಗೆ ಅಪೂರ್ಣರಾಗಿ, ಸಂಸಾರದುಃಖಭಾಜನರಾಗಿ ಕಾಣುತ್ತಿರುತ್ತೇವೆ. ಆದ್ದರಿಂದ ಶಾಸ್ತ್ರದೃಷ್ಟಿಯನ್ನವಲಂಬಿಸುವ ಯೋಗ್ಯತೆಯನ್ನು ಅಧ್ಯಾತ್ಮಸಾಧನಗಳಿಂದ ಸಂಪಾದಿಸಿ ಆ ಪರಮಾರ್ಥವಾದ ಪೂರ್ಣಸ್ಥಿತಿಯನ್ನು ಕಂಡುಕೊಳ್ಳುವದಕ್ಕೆ ಪ್ರಯತ್ನಿಸದಿರುವದೊಂದೇ ನಮ್ಮ ದುಃಖಗಳಿಗೆಲ್ಲ ಮೂಲವೆಂದು ಇದರಿಂದ ಸಿದ್ಧವಾಗುತ್ತದೆ. 'ಪೂರ್ಣದ ಪೂರ್ಣವನ್ನು ತೆಗೆದುಕೊಂಡರೆ ಪೂರ್ಣವೇ ಉಳಿದುಕೊಳ್ಳುತ್ತದೆ' ಎಂಬ ಉಪನಿಷತ್ತಿನ ವಾಕ್ಯಕ್ಕೆ ಇದೇ ಅಭಿಪ್ರಾಯ.

'ಪೂರ್ಣದಿಂದ ಪೂರ್ಣವು ಬಂದಿರುತ್ತದೆ' ಎಂಬ ವಾಕ್ಯದಲ್ಲಿ ಪೂರ್ಣನಾದ ಪರಮಾತ್ಮನಿಂದ ಪೂರ್ಣವಾದ ಜಗತ್ತು ಬಂದಿರುತ್ತದೆ ಎಂಬ ಅರ್ಥವನ್ನು ಕಂಡುಕೊಂಡ ಬಳಿಕವೂ ಪೂರ್ಣತತ್ತ್ವದ ಪರಮಾರ್ಥವನ್ನು ಸರಿಯಾಗಿ ಕಂಡು ಕೊಳ್ಳಬೇಕಾದದ್ದು ಇನ್ನೂ ಉಳಿದಿರುತ್ತದೆ. ಏಕೆಂದರೆ 'ಜಗತ್ತು ಪೂರ್ಣವಾಗಿರು ತ್ತದೆ' ಎಂಬ ವಾಕ್ಯದಲ್ಲಿ ನಾವುಗಳು ಜಗತ್ತಿನಲ್ಲಿರುವ ಬಿಡಿಬಿಡಿಗಳೆಂದೂ ಈ ಬಿಡಿಗಳೆಲ್ಲವೂ ಒಟ್ಟು ಸೇರಿದರೆ ಮಾತ್ರ ಪೂರ್ಣವಾಗುವದೆಂದೂ ಕೆಲವರು ತಪ್ಪಾಗಿ ಅರ್ಥವನ್ನು ಮಾಡಿಕೊಳ್ಳಬಹುದು. ಪೂರ್ಣವೆಂದರೇನು?- ಎಂಬುದರ ಅಭಿಪ್ರಾಯವು ಅಂಥವರಿಗೆ ಆಗದೆ ಇರುವದೇ ಈ ತಪ್ಪುತಿಳಿವಳಿಕೆಗೆ ಕಾರಣವು.

ಈ ಜಗತ್ತೆಲ್ಲವನ್ನೂ ಒಟ್ಟುಗೂಡಿಸಿ ಅದನ್ನು ಪೂರ್ಣವೆಂದು ಭಾವಿಸುವವರು ತಮ್ಮ ಅಭಿಪ್ರಾಯವನ್ನು ಸ್ವಲ್ಪ ಬಿಡಿಸಿ ನೋಡಿಕೊಳ್ಳುವದು ಒಳ್ಳೆಯದು. ಇಡಿಯ ಜಗತ್ತೆಂಬುದು ಯಾವದೋ ಒಂದು ದೇಶದಲ್ಲಿಲ್ಲ; ಆದ್ದರಿಂದ ಜಗತ್ತಿನಿಂದ ಆಚೆಗೆ ಏನಿದೆ?-ಎಂದು ಮುಂತಾಗಿ ಕೇಳುವದು ಅವಿವೇಕತನವಾಗಿರುತ್ತದೆ. ಜಗತ್ತು ಇದ್ದಂತೆಯೇ ಇರುವದೆನ್ನಬಹುದೆ? ಅದು ಅತ್ತಿತ್ತ ಚಲಿಸುವದಿಲ್ಲವೆ?-ಎಂದು ಕೆಲವರು ಕೇಳುತ್ತಾರೆ. ಆದರೆ ಅತ್ತ, ಇತ್ತ-ಎಂಬ ಮಾತುಗಳು ದೇಶ ಭಾವನೆಯಿಂದ ಬಂದವಲ್ಲವೆ? ಜಗತ್ತಿನಲ್ಲಿಯೇ ದೇಶವಿರುವದೇ ಹೊರತು, ಜಗತ್ತು ದೇಶದಲ್ಲಿಲ್ಲ. ಇದರಂತೆ ಹೊಸದಾಗಿ ಈಚೆಗೆ ಸೃಷ್ಟಿಮಾಡಿದ್ದು-ಎಂದು ಕಲ್ಪಿಸುವದೂ ಅವಿವೇಕವು. ಈಗ, ಈಚೆಗೆ, ಹಿಂದೆ, ಮುಂದೆ-ಎಂಬ ಮಾತುಗಳೆಲ್ಲ ಕಾಲವಾಚಕಗಳೇ. ಆದ್ದರಿಂದ ಕಾಲಸಹಿತವಾದ ಜಗತ್ತು ಮತ್ತೆಮತ್ತೆ ಮಾರ್ಪಡು ತ್ತಲೇ ಇರುತ್ತದೆ-ಎಂದು ಮುಂತಾಗಿ ಭಾವಿಸುವದೂ ಸರಿಯಾಗುವದಿಲ್ಲ. ಆದ್ದರಿಂದ ಉಪನಿಷತ್ತಿನಲ್ಲಿ ಹೇಳಿರುವ ಪೂರ್ಣವೆಂಬ ಮಾತನ್ನು ದೇಶಕಾಲ ಪರಿಚ್ಛಿನ್ನವಾಗಿರುವ ಭಾವನೆಗೆ ಸಂಬಂಧಪಡಿಸಬಾರದು. ಪೂರ್ಣವೆಂದರೆ ಯಾವ ದೇಶದ, ಯಾವ ಕಾಲದ, ಯಾವ ವಸ್ತುವಿನ ಅಳತೆಯೂ ಇಲ್ಲದ್ದು; ಇದನ್ನು ಅನಂತವೆಂದೂ ಶಾಸ್ತ್ರದಲ್ಲಿ ಕರೆದಿರುತ್ತದೆ. ಆ ಅನಂತದಲ್ಲಿ ಅಥವಾ ಪೂರ್ಣದಲ್ಲಿ ಯಾವ ಭಾಗವೂ ಇರುವದೇ ಇಲ್ಲ. ಇರುವದೆಲ್ಲ ಪೂರ್ಣವೇ, ಮತ್ತೇನೂ ಇಲ್ಲವೇ ಇಲ್ಲ.

ಈ ಸಂದೇಶದಲ್ಲಿ ಕೊಟ್ಟಿರುವ ಪೂರ್ಣದ ವಿವರಣೆಯು ತಿಳಿಯುವದಕ್ಕೆ ಸ್ವಲ್ಪ ಕಷ್ಟವೆಂದು ಕೆಲವರಿಗೆ ತೋರಬಹುದು. ಶಾಸ್ತ್ರದ ಸಂಸ್ಕಾರವಿಲ್ಲದವರೂ ವಿಚಾರಮಾರ್ಗದಲ್ಲಿ ಸಂಚರಿಸುವ ಅಭ್ಯಾಸವಿಲ್ಲದವರೂ ಇದೇನೊ ಶುಷ್ಕತರ್ಕ ವೆಂದು ಭಾವಿಸುವ ಸಂಭವವು ಕೂಡ ಇದೆ. ಆದರೆ ಸಾಧಕರಾದವರು ಇಷ್ಟರಿಂದ ಎದೆಗುಂದಬೇಕಾಗಿಲ್ಲ. ಏಕೆಂದರೆ ಇರುವದೆಲ್ಲ ಒಂದೇ ಒಂದು ಪರಮಾರ್ಥವು;

ಪರಮಾತ್ಮನೇ ಆ ಪರಮಾರ್ಥವು. ಅದರಿಂದಲೇ ಜಗತ್ತೆಲ್ಲವೂ ಬಂದಿರುತ್ತದೆ, ಅಥವಾ ಆ ಜಗತ್ತೇ ಲೌಕಿಕದೃಷ್ಟಿಯಿಂದ ಈ ಜಗತ್ತಿನ ವಿವಿಧ ದೃಶ್ಯಗಳಾಗಿ ಕಾಣುತ್ತಿದೆ ಎಂಬ ವಿಶ್ವಾಸವು ಮಾತ್ರ ಇದ್ದರೆ ಸಾಕು; ನಿಜವನ್ನು ತಮ್ಮತಮ್ಮ ಅನುಭವಕ್ಕೇ ತಂದುಕೊಂಡುಬಿಡಬಹುದು.

ಈ ಜಗತ್ತಿನಲ್ಲಿ ಅನೇಕ ದೃಶ್ಯಗಳಿವೆ ಎಂದೂ ಅವುಗಳು ಒಂದೊಂದೂ ಅಪೂರ್ಣವಾಗಿರುವವೆಂದೂ ಅವೆಲ್ಲ ಸೇರಿದ ಒಟ್ಟು ಪೂರ್ಣವಾಗುವದೆಂದೂ ತಿಳಿಯಬೇಡಿರಿ. ಈ ಜಗತ್ತಿನಲ್ಲಿ ಯಾವದೊಂದು ವಸ್ತುವೂ–ಅದು ನಮ್ಮೊಳಗಿನ ದೃಶ್ಯವಾಗಿರಲಿ ಅಥವಾ ನಮ್ಮ ಹೊರಗಿನ ದೃಶ್ಯವಾಗಿರಲಿ ಅಪೂರ್ಣವಲ್ಲ. ಅತ್ಯಂತ ಅಣುರೂಪವಾಗಿ ಕಾಣುವ ವಸ್ತುವು ಕೂಡ ಆ ಪೂರ್ಣವಾದ ಪರಮಾರ್ಥದ ರೂಪವೇ ಆಗಿರುತ್ತದೆ. ಸಾಧಕರಾದವರು ಇಷ್ಟೊಂದು ನಂಬಿ ಕೊಂಡು ಹೊರಟರೆ ಸಾಕಾಗಿದೆ; ನಾವು ಯಾರೊಬ್ಬರೂ ಅಪೂರ್ಣವಲ್ಲ. ಪರಮಾರ್ಥವಾಗಿರುವ ಪೂರ್ಣತತ್ತ್ವದಲ್ಲಿ ನಾವು ಎಲ್ಲಾ ಬಗೆಯಿಂದಲೂ ಒಂದಾಗಿರುವೆವು. ಇದನ್ನು ಕಂಡುಕೊಳ್ಳುವದೇ ನಮ್ಮ ಜೀವನದ ಗುರಿಯು. ನಮ್ಮ ಪೂರ್ಣತ್ವವನ್ನು ಕಂಡುಕೊಳ್ಳುವದಕ್ಕೆ ತರ್ಕವು ಸಾಧಕವಲ್ಲ; ಧ್ಯಾನ ಬಲದಿಂದ ನಮ್ಮೊಳಗೆ ನಾವು ನಿಂತು ಆ ಪೂರ್ಣನಾಗಿರುವ ಪರಮಾತ್ಮನಲ್ಲಿ ನಾವು ಒಂದಾಗಿರುವೆವೆಂಬುದನ್ನು ಅನುಭವಕ್ಕೆ ತಂದುಕೊಳ್ಳುವದೇ ಉಪಾಯವು.

ನಮ್ಮ ಶರೀರ, ಇಂದ್ರಿಯಗಳು–ಇವುಗಳು ನಮಗೆ ಈಗ ಬಹಳ ಪ್ರಿಯವಾಗಿರುವವು. ಇಂದ್ರಿಯಗಳಿಂದ ನಾವು ಜಗತ್ತನ್ನು ಅರಿತುಕೊಂಡು ವ್ಯವಹರಿಸುವದೇ ಜೀವನದ ಗುರಿ ಎಂದು ನಮಗೆ ತೋರುತ್ತಿರುವದು. ಇಂದ್ರಿಯಗಳಿಂದಾದ ತಿಳಿವಳಿಕೆಯು ಪೂರ್ಣವಾಗಿರುವ ತತ್ತ್ವವನ್ನು ಒಡೆದುಒಡೆದು ತೋರಿಸುತ್ತದೆ; ವಸ್ತುವನ್ನು ಇದ್ದಂತೆ ತಿಳಿಸದೆ ಅದರಲ್ಲಿಲ್ಲದ ಧರ್ಮಗಳನ್ನು ಸತ್ಯವಾಗಿರುವವೆಂಬ ಭಾವನೆಯನ್ನೂ ಮಾಡಿಕೊಡುತ್ತದೆ. ಈ ಲೋಕದೃಷ್ಟಿಯು ವ್ಯವಹಾರದಲ್ಲಿ ಸ್ವಲ್ಪಮಟ್ಟಿಗೆ ಕಾರ್ಯಕಾರಿಯಾಗಿರಬಹುದು; ಆದರೆ ಪರಮಾರ್ಥವನ್ನು ತಿಳಿಯುವದಕ್ಕಾಗಲಿ ನಿಜವಾದ ಪುರುಷಾರ್ಥವನ್ನು ಪಡೆದುಕೊಳ್ಳುವದಕ್ಕಾಗಲಿ ಪ್ರಯೋಜನಕರವಾಗಿರುವದಿಲ್ಲ. ಅಷ್ಟೇ ಅಲ್ಲ, ಲೋಕದೃಷ್ಟಿಯು ಆ ಪುರುಷಾರ್ಥದ ಸಾಧನೆಗೆ ಅಡ್ಡಿಯೂ ಆಗಿರುತ್ತದೆ. "ಎಲ್ಲಿ ಮತ್ತೊಂದು ವಸ್ತುವಿರುವಂತೆ ಇರುತ್ತದೆಯೋ ಅಲ್ಲಿ ಒಬ್ಬನು ಮತ್ತೊಂದನ್ನು ಕಾಣುತ್ತಾನೆ; ಆದರೆ ಎಲ್ಲಿ ಆತ್ಮನೊಬ್ಬನೇ ಎಲ್ಲವೂ ಆಗಿರುತ್ತಾನೋ ಅಲ್ಲಿ ಏತರಿಂದ ಯಾರನ್ನು ನೋಡಿಯಾನು?" ಎಂದು ಶ್ರುತಿಯು ಹೇಳುತ್ತದೆ.

ಪರಮಾರ್ಥವಾಗಿ ಪೂರ್ಣನಾಗಿರುವ ಪರಮಾತ್ಮನು ಯಾವಾಗಲೂ ಎಲ್ಲೆಲ್ಲಿಯೂ ಇದ್ದುಕೊಂಡೇ ಇರುತ್ತಾನೆ. ಎಡಕ್ಕೆ, ಬಲಕ್ಕೆ, ಮೇಲಕ್ಕೆ, ಕೆಳಕ್ಕೆ, ಹಿಂದಕ್ಕೆ ಮುಂದಕ್ಕೆ –ನಾವು ಯಾವಯಾವ ದೃಶ್ಯಗಳನ್ನು ಲೋಕದೃಷ್ಟಿಯಿಂದ ಕಾಣುತ್ತಿರುವೆವೋ ಅಲ್ಲೆಲ್ಲ ವ್ಯಾಪಿಸಿಕೊಂಡು ಆ ಪರಮಾರ್ಥವು ಇದ್ದುಕೊಂಡೇ ಇರುತ್ತದೆ. ಲೋಕ ದೃಷ್ಟಿಯಿಂದ ಕಾಣುವ ತೋರಿಕೆಗಳೆಲ್ಲ ಹುಸಿತೋರಿಕೆಗಳು ಮಾತ್ರ. ದುಃಖ, ಬಡತನ, ಭೇದ, ಅವ್ಯವಸ್ಥೆ, ವಿರೋಧ, ಕಷ್ಟ–ಎಂದು ನಮಗೆ ಈಗ ಕಾಣುತ್ತಿರುವದೆಲ್ಲ ಲೋಕದೃಷ್ಟಿಯಿಂದಲೇ. ಶಾಸ್ತ್ರದೃಷ್ಟಿಯಿಂದ ನೋಡಿದರೆ ಆನಂದ, ಸಮೃದ್ಧಿ, ಅಭೇದ, ವ್ಯವಸ್ಥೆ, ಹೊಂದಿಕೆ, ಸೌಲಭ್ಯ–ಇವುಗಳೇ ಕಾಣು ವವು. ಏಕೆಂದರೆ ಎಲ್ಲೆಲ್ಲಿಯೂ ಪೂರ್ಣವಾದ ತತ್ತ್ವವೊಂದೇ ನಿಜವಾಗಿರುತ್ತದೆ; ಅದೇ ನಮ್ಮಗಳೆಲ್ಲರ ಆತ್ಮನಾಗಿರುತ್ತದೆ. ಅದರಲ್ಲಿ ಯಾವ ಕುಂದುಕೊರತೆಗಳಾದರೂ ಹೇಗೆ ಇದ್ದಾವು?

ಇಂದ್ರಿಯಗಳ ಪ್ರಪಂಚವು ನೋಡುವದಕ್ಕೆ ಎಷ್ಟೇ ಪರಿಚ್ಛಿನ್ನವಾಗಿ, ಭೇದಸಹಿತ ವಾಗಿ, ದುಃಖಮಯವಾಗಿ ತೋರಿದರೂ ಅದಕ್ಕಾಗಿ ನಾವು ಬೆದರಬೇಕಾದದ್ದಿಲ್ಲ. ನಿಜವಾದ ಪರಮಾರ್ಥವು ಪೂರ್ಣವಾಗಿ, ಏಕರಸವಾಗಿ, ಆನಂದಮಯ ವಾಗಿಯೇ ಯಾವಾಗಲೂ ಇದ್ದುಕೊಂಡಿರುತ್ತದೆ. ಅದು ಶಾಸ್ತ್ರದೃಷ್ಟಿಯಿಂದ ನಮ್ಮ ಸ್ವರೂಪವೇ ಆಗಿದ್ದು ಅದನ್ನು ನಾವು ಕಂಡುಕೊಂಡ ಕೂಡಲೆ ಜಗತ್ತೆಲ್ಲವೂ ಅಖಂಡವಾದ ಆನಂದವೇ ಆಗಿರುವದೆಂದು ನಮಗೆ ಮನದಟ್ಟಾಗಿಬಿಡುತ್ತದೆ. ಪರಮಾರ್ಥವನ್ನು ತಿಳಿಯುವದಕ್ಕೆ ನಾವು ಇಂದ್ರಿಯಗಳನ್ನಾಗಲಿ ತರ್ಕಪ್ರಧಾನ ವಾದ ಮನಸ್ಸನ್ನಾಗಲಿ ಉಪಯೋಗಿಸುವ ಹಾಗಿಲ್ಲ. ಇಂದ್ರಿಯಗಳನ್ನೂ ಈ ಮನಸ್ಸನ್ನೂ ಹೊರಕ್ಕೇ ಬಿಟ್ಟು ನಮ್ಮೊಳಕ್ಕೇ ನಾವು ಇಳಿಯಬೇಕು. ಈ ಕ್ರಮಕ್ಕೆ **ಅಧ್ಯಾತ್ಮಯೋಗವೆಂದು** ಹೆಸರು.

## 22. ಆಹಾರ ಶುದ್ಧಿಯಿಂದ ನಿತ್ಯಾನಂದ ಪ್ರಾಪ್ತಿ

ಆಹಾರವು ಶುದ್ಧವಾದರೆ ಸತ್ತ್ವವು ಶುದ್ಧವಾಗುವದು, ಸತ್ತ್ವವು ಶುದ್ಧವಾದರೆ ನೆಲೆನಿಂತ ಸ್ಮೃತಿಯುಂಟಾಗುವದು, ಸ್ಮೃತಿಯು ದೊರೆತರೆ ಎಲ್ಲಾ ಹೃದಯದ ಗಂಟುಗಳೂ ಬಿಚ್ಚಿಕೊಳ್ಳುವವು–ಎಂಬುದೊಂದು ಶ್ರುತಿವಾಕ್ಯವು. ಈ ವಾಕ್ಯದ ಅರ್ಥವನ್ನು ಮನದಟ್ಟುಮಾಡಿಕೊಳ್ಳುವದು ಸಾಧಕರಿಗೆ ಲಾಭದಾಯಕವಾಗಿರುತ್ತದೆ.

ಸತ್ತ್ವವು ಎಂದರೆ ಅಂತಃಕರಣವು ಶುದ್ಧವಾದ ಹೊರತು ಪರಮಾತ್ಮನ ನೆನಹು ಎಡೆಬಿಡದೆ ನೆಲೆನಿಂತುಕೊಂಡಿರುವದಿಲ್ಲ. ಪರಮಾತ್ಮನ ನೆನಹು ಕಡಿವಡೆಯದೆ ನಿಂತವನಿಗೇ ಹೃದಯದಲ್ಲಿ ಅನೇಕ ಜನ್ಮಗಳಿಂದಲೂ ಆಗಿರುವ ಅನುಭವಗಳ

ಭಾವನೆಯಿಂದ ಗಟ್ಟಿಯಾಗಿರುವ ಕಗ್ಗಂಟುಗಳು ಬಿಚ್ಚಿಕೊಳ್ಳುವವು. ಸಂಸಾರದ ಅನರ್ಥಗಳಿಗೆ ಕಾರಣವೆಂದರೆ ನಮ್ಮ ಹೃದಯದಲ್ಲಿ ಗಟ್ಟಿಯಾಗಿ ಗಂಟುಹಾಕಿ ಕೊಂಡಿರುವ ವಾಸನೆಗಳೇ. ಈ ವಾಸನೆಗಳು ಕ್ಷಯವಾದಲ್ಲದೆ ನಮ್ಮ ದುಃಖಗಳು ಸಂಪೂರ್ಣವಾಗಿ ನಾಶವಾಗುವದೇ ಇಲ್ಲ; ಸಹಜವಾದ ಆನಂದವು ತೋರಿಕೊಳ್ಳುವದೂ ಇಲ್ಲ. ಆದ್ದರಿಂದ ನಿತ್ಯಾನಂದವನ್ನು ಬಯಸುವವರು, ಈ ವಾಸನೆಗಳ ಗಂಟುಗಳನ್ನು ಬಿಚ್ಚಿಕೊಳ್ಳುವದಕ್ಕೆ ಯತ್ನವನ್ನು ಮಾಡಬೇಕು. ವಾಸನೆಗಳನ್ನು ಬಿಚ್ಚಿಕೊಳ್ಳುವದಕ್ಕೆ ಪ್ರಯತ್ನ ಮಾಡುವವರನ್ನೇ ಅಧ್ಯಾತ್ಮಶಾಸ್ತ್ರದಲ್ಲಿ ಮುಮುಕ್ಷುಗಳು ಎಂದು ಕರೆಯುತ್ತಾರೆ.

ಅನರ್ಥಗಳಿಗೆ ಕಾರಣವಾಗಿರುವ ವಾಸನೆಗಳು ತೊಲಗುವದಕ್ಕೆ ಸುಮ್ಮನೆ ಅವನ್ನು ಬಿಡುವದಕ್ಕೆ ಪ್ರಯತ್ನಪಟ್ಟರೆ ಸಾಲದು. ಏಕೆಂದರೆ ಅವುಗಳ ತೊಡಕನ್ನು ಬಿಡಿಸಿಕೊಳ್ಳುವದಕ್ಕೆ ಪ್ರಯತ್ನಿಸಿದಂತೆಲ್ಲ ಅವು ಮತ್ತಷ್ಟು ಕಗ್ಗಂಟಾಗಿ ಪರಿಣಮಿಸು ತ್ತಿರುತ್ತವೆ. ದುಷ್ಟವಾಸನೆಗಳು ತೀರ ತೊಲಗಬೇಕಾದರೆ ಪರಮಾತ್ಮನ ನೆನಹು ನಮ್ಮ ಅಂತಃಕರಣದಲ್ಲಿ ಅವಿಚ್ಛಿನ್ನವಾಗಿ ಹರಿಯುತ್ತಿರಬೇಕು. ಪರಮಾತ್ಮನ ನೆನಹು ಇರುವಲ್ಲಿ ನಿತ್ಯಾನಂದವನ್ನು ಅಭಿವ್ಯಕ್ತಿಗೊಳಿಸುವ ಶುಭವಾಸನೆಗಳು ಸ್ವಾಭಾವಿಕ ವಾಗಿಯೇ ತೋರಿಕೊಳ್ಳುತ್ತವೆ. ಆದ್ದರಿಂದ ಪರಮಪುರುಷಾರ್ಥಪ್ರಾಪ್ತಿಗೆ ಒಂದೇ ಒಂದು ಉಪಾಯವು; ಪ್ರೀತಿಪೂರ್ವಕವಾಗಿ ಸತತವಾಗಿ ಪರಮಾತ್ಮನಲ್ಲಿಯೇ ಮನಸ್ಸಿಟ್ಟು ಆತನ ಭಜನೆಯಲ್ಲಿಯೇ ನಿರತರಾಗಿರುವದೇ ಆ ಉಪಾಯವು– ಎಂದು ಬಲ್ಲವರು ಹೇಳುತ್ತಾರೆ.

ಆದರೆ ಎಲ್ಲಾ ಅಂತಃಕರಣಗಳಲ್ಲಿಯೂ ಪರಮಾತ್ಮನ ನೆನಹು ನೆಲೆನಿಲ್ಲುವದಿಲ್ಲ. ಆ ನೆನಹು ನೆಲೆನಿಲ್ಲುವ ಮಾತಂತಿರಲಿ, ಪರಮಾತ್ಮನ ನೆನಪು ಒಂದು ಸಾರಿಯಾದರೂ ಬರುವದಕ್ಕೆ, ಅಥವಾ ಬಂದರೂ ಅದು ಅಂತಃಕರಣದಲ್ಲಿ ಸ್ವಲ್ಪಹೊತ್ತಾದರೂ ನಿಂತಿರುವದಕ್ಕೆ, ಅಂತಃಕರಣವು ಶುದ್ಧವಾಗಿರಬೇಕಾದದ್ದು ಅತ್ಯವಶ್ಯವು. ಸಾಮಾನ್ಯವಾಗಿ ಅಂತಃಕರಣವು ಸತ್ತ್ವ, ರಜಸ್ಸು, ತಮಸ್ಸು ಎಂಬ ಮೂರು ಗುಣಗಳ ಕಾರ್ಯವನ್ನು ಪ್ರಕಟಗೊಳಿಸುತ್ತಿರುತ್ತದೆ. ವ್ಯವಹಾರದಲ್ಲಿ ಈ ಮೂರು ಗುಣಗಳ ಮಿಶ್ರಣವೂ ಅಂತಃಕರಣಕ್ಕೆ ಸ್ವಲ್ಪಮಟ್ಟಿಗೆ ಬೇಕಾಗುತ್ತದೆ. ಆದರೆ ಒಳ್ಳೆಯ ಜ್ಞಾನ, ಒಳ್ಳೆಯ ನೆನಪು, ಧೈರ್ಯ, ಸ್ಥೈರ್ಯ, ಹರ್ಷ–ಮುಂತಾದವುಗಳು ನಮಗೆ ದಕ್ಕಬೇಕಾದರೆ ಸತ್ತ್ವಗುಣವೇ ಅಂತಃಕರಣದಲ್ಲಿ ಪ್ರಬಲವಾಗಿರಬೇಕು. ಆದ್ದರಿಂದಲೇ ರಜಸ್ಸು, ತಮಸ್ಸು–ಇವುಗಳಿಂದ ಅದು ಬಗ್ಗಡವಾಗದಂತೆ ನೋಡಿಕೊಳ್ಳುವದು ಅಧ್ಯಾತ್ಮದೃಷ್ಟಿಯಿಂದ ಅತ್ಯವಶ್ಯವಾಗಿರುತ್ತದೆ.

ಶುದ್ಧವಾದ ಅಂತಃಕರಣವನ್ನು ಸತ್ತ್ವವೆಂದೇ ಕರೆಯುತ್ತಾರೆ; ಏಕೆಂದರೆ ಅದರಲ್ಲಿ ಸತ್ತ್ವಗುಣವೇ ಮೇಲುಗೈಯಾಗಿರುತ್ತದೆ. ಹೀಗೆ ಅಂತಃಕರಣವು ನಿರ್ಮಲವಾಗುವದಕ್ಕೆ, ರಜಸ್ತಮಸ್ಸುಗಳೆಂಬ ಮಲಗಳು ಅದರಲ್ಲಿ ಸೇರಿಕೊಳ್ಳದಂತೆ ಮಾಡಿಕೊಳ್ಳುವದಕ್ಕೆ, ಉಪಾಯವೇನು?-ಎಂದರೆ ಆಹಾರ ಶುದ್ಧಿಯು. ಈ ದೃಷ್ಟಿಯಿಂದ ನೋಡಿದರೆ ಸರ್ವಾನರ್ಥನಿವಾರಣೆಯಿಂದ ಕೂಡಿದ ನಿತ್ಯಾನಂದಪ್ರಾಪ್ತಿಗೆ ಆಹಾರಶುದ್ಧಿಯು ಎಷ್ಟು ಮುಖ್ಯವಾದ ಸಾಧನವೆಂಬುದು ಸ್ಫುಟವಾಗುತ್ತದೆ.

ಆಹಾರವೆಂದರೇನು? ರೂಢಿಯಲ್ಲಿ ಆಹಾರವೆಂದರೆ ನಾವು ತಿನ್ನುವ ಉಣ್ಣುವ ಪದಾರ್ಥಗಳೆಂದು ಅರ್ಥ; ತಿನ್ನುವ ಅಥವಾ ಉಣ್ಣುವ ಕ್ರಿಯೆಯನ್ನು ಆಹಾರ ಎಂದೇ ಕರೆಯುತ್ತಾರೆ. ಆದರೆ ಈ ಶಬ್ದದ ವ್ಯುತ್ಪತ್ತಿಯಿಂದ ತೋರುವ ಅರ್ಥವು ಇನ್ನೂ ವಿಶಾಲವಾಗಿರುತ್ತದೆ. ನಾವು ಉಣ್ಣುವ ತಿನ್ನುವ ಪದಾರ್ಥಗಳೇ ಅಲ್ಲದೆ ಕುಡಿಯುವ ನೀರು, ಮೂಸುವ ವಾಸನೆ, ಮುಟ್ಟುವ ಸ್ಪರ್ಶ, ಕೇಳುವ ಶಬ್ದ, ನೋಡುವ ವಸ್ತುಗಳು ಎಲ್ಲವೂ ಈ ವಿಶಾಲಾರ್ಥದಲ್ಲಿ ಆಹಾರವೇ. ಇವುಗಳನ್ನು ಒಳಕ್ಕೆ ತೆಗೆದುಕೊಳ್ಳುವ ಕ್ರಿಯೆಯೆಲ್ಲ ಆಹಾರವೇ. ಭೋಕ್ತೃವಾದವನು ಭೋಗಿಸುವದಕ್ಕಾಗಿ ಯಾವಯಾವ ವಿಷಯಾನುಭವವನ್ನು ಮಾಡಿಕೊಳ್ಳುವನೋ ಅದೆಲ್ಲ ಈ ಅರ್ಥದಲ್ಲಿ ಆಹಾರವೆನಿಸುತ್ತದೆ. ಆದ್ದರಿಂದ ನಮಗೆ ಆಗುವ ವಿಷಯಾನುಭವವೆಲ್ಲವೂ ಶುದ್ಧವಾದರೆ ಆಹಾರ ಶುದ್ಧಿಯಾದಂತೆ ಎಂದು ದೊಡ್ಡವರು ಉಪದೇಶಮಾಡುತ್ತಾರೆ.

ಅತ್ಯಂತಸ್ಥೂಲವಾದ ಅರ್ಥದಲ್ಲಿ ಕೂಡ ಆಹಾರಶುದ್ಧಿಯು ವ್ಯವಹಾರಕ್ಕೂ ಬೇಕೇಬೇಕು. ನಾವು ಉಣ್ಣುವ ಅನ್ನ, ಕುಡಿಯುವ ನೀರು ಮುಂತಾದವುಗಳು ಶುದ್ಧವಾಗಿಲ್ಲದೆ ಇದ್ದರೆ ಶರೀರದಲ್ಲಿ ಧಾತುವೈಷಮ್ಯವಾಗಿ ರೋಗರುಜಿನಗಳು ಕಾಣಿಸಿಕೊಳ್ಳುವವು. ಅರೋಗದೃಢಕಾಯನಲ್ಲದವನು ಯಾವ ವ್ಯವಹಾರವನ್ನೂ ನಿರ್ವಹಿಸಲಾರನೆಂಬುದು ಸುಪ್ರಸಿದ್ಧವಾಗಿದೆ. ಆದ್ದರಿಂದಲೇ ವೈದ್ಯಶಾಸ್ತ್ರಜ್ಞರು ಶುದ್ಧವಾದ ಆಹಾರವು ಹೇಗಿರಬೇಕೆಂಬ ವಿಷಯದಲ್ಲಿ ಬೇಕಾದಷ್ಟು ತಿಳಿವಳಿಕೆಯನ್ನು ಪ್ರಕಟಿಸುತ್ತಿರುತ್ತಾರೆ. ಆದರೂ ಜನರು ಅವರ ಬುದ್ಧಿವಾದವನ್ನು ಕಡೆಗಣಿಸಿ ಅನಾರೋಗ್ಯಕ್ಕೆ ಕಾರಣವಾಗಿರುವ, ತಮ್ಮ ಶರೀರಕ್ಕೆ ಸಾತ್ಮ್ಯವಾಗದ, ಆಹಾರಗಳನ್ನು ತಿನ್ನುತ್ತಲೇ ಇರುತ್ತಾರೆ. ತಂಗಳು, ಹಸುಕಲು ಬಿಸಕಲು, ಒಣಗಿದ್ದು, ಸೀಕಲು, ದುರ್ಗಂಧವುಳ್ಳದ್ದು-ಮುಂತಾದ ಆಹಾರಗಳು ಹಾಗಿರಲಿ, ರುಚಿಯಾದ ಆಹಾರವಾದರೂ ಅಶುಚಿಯಾದವರು ಅಶುಚಿಯಾದ ಕ್ರಮಗಳಿಂದ ಮಾಡಿದ, ಅನೇಕ ಅಶುದ್ಧ ವಸ್ತುಗಳು ಮಿಶ್ರವಾಗಿರುವ, ಚೆನ್ನಾಗಿ ತೊಳೆಯದ ಪಾತ್ರೆಗಳಲ್ಲಿ

ಇಟ್ಟಿರುವ, ಧೂಳುಬಿದ್ದಿರುವ, ನೊಣಗಳೇ ಮುಂತಾದ ಕ್ರಿಮಿಗಳಿಂದ ದುಷ್ಟವಾಗಿರುವ ವಸ್ತುಗಳನ್ನು ಕೂಡ ನಾಲಗೆಯ ಚಟಕ್ಕೆ ಕಾಲದೇಶಗಳ ನಿಯಮವಿಲ್ಲದೆ, ತಮ್ಮ ಜೀರ್ಣಶಕ್ತಿಯನ್ನು ಲೆಕ್ಕಕ್ಕೆ ತಂದುಕೊಳ್ಳದೆ, ತಿನ್ನುತ್ತಿರುವರು! ಇಂಥ ಆಹಾರದಿಂದ ಶರೀರದ ಸ್ಥಿತಿಯು ವ್ಯವಸ್ಥೆಯಲ್ಲಿರುವದಿಲ್ಲವೆಂಬುದನ್ನು ಹೇಳಬೇಕಾದದ್ದೇ ಇಲ್ಲ. ಪರಂಪರೆಯಿಂದ ಮನಸ್ಸಿನಮೇಲೂ ಅವುಗಳ ಪರಿಣಾಮವು ಆಗಲೇಬೇಕೆಂಬುದನ್ನು ಒಪ್ಪಬೇಕಾಗಿದೆ.

ಸದ್ಯದ ಸ್ಥಿತಿಯಲ್ಲಿ ಜನರಿಗೆ ಸಾಕಾದಷ್ಟು ಅಹಾರವೇ ದೊರಕುವದಿಲ್ಲವಾಗಿದೆ. ಹೀಗಿರುವಲ್ಲಿ ಶುದ್ಧವಾದ ಆಹಾರವಸ್ತುಗಳು ಎಲ್ಲಿಂದ ಸಿಕ್ಕಬೇಕು?–ಎಂದು ಕೆಲವರು ಶಂಕಿಸುತ್ತಾರೆ. ಆದರೆ ಮನುಷ್ಯನು ಪದಾರ್ಥಗಳ ದೋಷವನ್ನಾಗಲಿ ಬೆಲೆಯನ್ನಾಗಲಿ ತನ್ನ ಶರೀರಮನಸ್ಸುಗಳ ಮೇಲೆ ಆಗಬಹುದಾದ ಪರಿಣಾಮ ವನ್ನಾಗಲಿ ಲೆಕ್ಕಕ್ಕೆ ತೆಗೆದುಕೊಳ್ಳದೆ ನುಂಗುತ್ತಿರುವನು. ಕೆಟ್ಟ ಆಹಾರಗಳ ಬಳಕೆಯನ್ನು ಕಡಿಮೆಮಾಡದೆ ಇರುವದಕ್ಕೆ ಇದು ಸಾಕಾದಷ್ಟು ಕಾರಣವಾಗಲಾರದು. ಅನವಶ್ಯಕ ವಾದ ಹವ್ಯಾಸಗಳಿಗೆ ಬಲಿಬಿದ್ದು ಕಾಫಿ, ಟೀ, ಹೊಗೆಸೊಪ್ಪು, ಸಿಗರೇಟುಗಳು, ನಶ್ಯ ಮುಂತಾದ ಅನರ್ಥಕರವಾದ ಆಹಾರವಸ್ತುಗಳಿಗೆ ದುಂದುವೆಚ್ಚವನ್ನು ಮಾಡು ವದಕ್ಕೂ ಯೋಗ್ಯ ಕಾರಣವಾಗಲಾರದು. ನಮ್ಮ ದೇಶದಲ್ಲಿ ಬೇಕಾದಷ್ಟು ಜನರಿಗೆ ಕಾಫಿ ಸಿಕ್ಕುವದೇ ಇಲ್ಲ; ಕುಡಿಯುವವರ ಸಂಖ್ಯೆಗೆ ಸಾಕಾಗುವಷ್ಟರ ಮೂರನೆಯ ಒಂದು ಪಾಲಿನಷ್ಟು ಮಾತ್ರ ಸದ್ಯಕ್ಕೆ ಪೇಟೆಯಲ್ಲಿ ಸಿಕ್ಕುತ್ತದೆಯಂತೆ. ಕಾಫಿಪುಡಿಯಲ್ಲಿ ಈಚಲ ಬೀಜಗಳ ಪುಡಿಯನ್ನು ಕೂಡ ಸೇರಿಸುತ್ತಿರುವರಂತೆ. ಆದರೂ ಅದರ ಪಾನವೇನೂ ಕಡಿಮೆಯಾಗಿಲ್ಲ! ಬಾಲ್ಯದಿಂದ ತನ್ನ ಅರುವತ್ತನೆಯ ವರ್ಷದ ವರೆಗೂ ಬಿಡದೆ ಒಬ್ಬನು ಧೂಮಪಾನಮಾಡಿದರೆ ಸುಮಾರು 75000 ರೂಪಾಯಿ ಗಳು ಖರ್ಚಾಗುವದಂತೆ ! ಆದರೂ ಅನವಶ್ಯವಾದ ಅದರ ವೆಚ್ಚವನ್ನು ನಿಲ್ಲಿಸ ಬೇಕೆಂಬ ಇಚ್ಛೆಯು ನಮ್ಮಲ್ಲಿ ಅನೇಕರಿಗೆ ಬರುವದಿಲ್ಲ. ಇಂಗ್ಲೆಂಡು ಮುಂತಾದ ಸೀಮೆಗಳಲ್ಲಿ ಈಗ ಹೊಗೆಯಸುತ್ತುಗಳಿಗೆ ಆಗುವ ವೆಚ್ಚವು ಮಿತಿಮೀರಿದೆ ಎಂದು ಅನೇಕರು ನಶ್ಯದ ಸೇವನೆಗೆ ಇಳಿದಿದ್ದಾರಂತೆ; ಅದರಿಂದ ಸುಮಾರು ಮುಕ್ಕಾಲು ಪಾಲಿನಷ್ಟು, ಖರ್ಚು ಉಳಿತಾಯವಾಗಿದೆಯೆಂತೆ ! ಹೊಗೆಯಸೊಪ್ಪು ಮನುಷ್ಯನಿಗೆ ಅತ್ಯವಶ್ಯವಾದ ಆಹಾರವಸ್ತುವೆಂದು ನಾವು ಯಾರೂ ಒಪ್ಪಿರುವದಿಲ್ಲ, ಅದರ ಉಪಯೋಗವನ್ನು ಬಿಡುವದಕ್ಕೂ ಒಪ್ಪಿಲ್ಲ !

ವಿಶಾಲವಾದ ಅರ್ಥದಲ್ಲಿ ಇಂದ್ರಿಯಗಳಿಂದ ವಿಷಯಗಳನ್ನು ಸೇವೆಮಾಡು ವದೆಲ್ಲವೂ ಆಹಾರವೇ ಎಂದು ಮೇಲೆ ತಿಳಿಸಿರುತ್ತೇನೆ. ಅವುಗಳನ್ನು ಸೇವನೆ

ಮಾಡುವ ಕ್ರಿಯೆಯನ್ನು ಆಹಾರವೆಂದೇ ಕರೆಯುತ್ತಾರೆಂದೂ ಹೇಳಿರುತ್ತೇನೆ. ವಿಷಯಗಳ ಅನುಭವವು ಶುದ್ಧವಾಗಿರುವದೆಂದರೇನು? ಕೆಲವು ವಸ್ತುಗಳ ಸೇವನೆಯು ರಾಗಪೂರ್ವಕವಾಗಿ ಆಗುತ್ತದೆ, ಮತ್ತೆ ಕೆಲವು ವಸ್ತುಗಳ ಸೇವನೆಯು ದ್ವೇಷಪೂರ್ವಕವಾಗಿ ಆಗುತ್ತವೆ, ಇನ್ನು ಕೆಲವು ವಸ್ತುಗಳ ಸೇವನೆಯು ಮೋಹಪೂರ್ವಕವಾಗಿ ಆಗುತ್ತದೆ. ವಿಷಯಗಳಲ್ಲಿ ಇಂದ್ರಿಯಗಳಿಗೆ ಯಾವಾಗಲೂ ರಾಗದ್ವೇಷಾದಿಗಳು ಗೊತ್ತಾಗಿ ಆಗುತ್ತಿರುವದು ಸ್ವಭಾವವು. ಇದಕ್ಕೆ ಬರಿಯ ವಿಷಯಗಳ ಸ್ವಭಾವವೇ ಕಾರಣ ವಾಗಿರುವದಿಲ್ಲ. ಮನಸ್ಸು ಅಭ್ಯಾಸವಶದಿಂದ ಕೆಲವು ವಸ್ತುಗಳಲ್ಲಿ ರಾಗವನ್ನೂ ಮತ್ತೆ ಕೆಲವು ವಸ್ತುಗಳಲ್ಲಿ ದ್ವೇಷವನ್ನೂ ಕಟ್ಟಿಕೊಂಡು ಕುಣಿಯುತ್ತಿರುತ್ತದೆ. ಆದರೆ ಯಾವ ಪುರುಷನು ಈ ರಾಗದ್ವೇಷಗಳಿಗೆ ವಶನಾಗದೆ ವಿಷಯಗಳು ಬಂದೊದಗಿದ ಹಾಗೆ ಅವುಗಳನ್ನು ಸೇವಿಸುತ್ತಿರುವನೋ ಅವುಗಳು ತನ್ನ ಬಳಿಗೆ ಬಂದರೂ ಕೈತಪ್ಪಿದರೂ ರಾಗವಾಗಲಿ ದ್ವೇಷವಾಗಲಿ ಮೋಹವಾಗಲಿ ಇಲ್ಲದಿರುವನೋ ಅವನಿಗೆ ಆಹಾರವು ಶುದ್ಧವಾಗಿದೆ, ಅವನ ವಿಷಯಸೇವನ ಕ್ರಮವು ಪರಿಶುದ್ಧವಾಗಿರುತ್ತದೆ ಎಂದು ಹೇಳಬಹುದು. ಆದರೆ ಯಾವನು ರಾಗದ್ವೇಷ ಪೂರ್ವಕವಾಗಿಯೇ ಆಯಾ ವಿಷಯಗಳ ಸಂಪಾದನೆಗೆ ಅಥವಾ ದೂರೀಕರಣಕ್ಕೆ ಪ್ರವರ್ತಿಸುತ್ತಿರುವನೋ ಆಗ ಅವನಿಗೆ ತನ್ನ ಧರ್ಮವನ್ನು ಬಿಟ್ಟು ಪರರ ಧರ್ಮವನ್ನಾದರೂ ಮಾಡಿ ಆಯಾ ಫಲವನ್ನು ಪಡೆದುಕೊಳ್ಳಬೇಕೆಂಬ ಹಂಬಲಿಕೆಯುಂಟಾಗುತ್ತದೆ. ಅದರಿಂದ ಅವನ ಅಂತಃಕರಣವು ಅಶುದ್ಧವಾಗಿರುತ್ತದೆ; ಹೀಗಲ್ಲದೆ ಯಾವನು ರಾಗದ್ವೇಷಗಳಿಗೆ ವಶನಾಗದೆ ಶಾಸ್ತ್ರೋಕ್ತವಾದ ರೀತಿಯಲ್ಲಿ ಕಾರ್ಯದಲ್ಲಿ ಪ್ರವರ್ತಿಸುವದನ್ನು ಕಲಿತುಕೊಳ್ಳುವನೋ ಅವನ ಅಂತಃಕರಣವು ಶುದ್ಧವಾಗಿ ಪರಮಾತ್ಮನ ನೆನಹನ್ನು ತಂದುಕೊಡುತ್ತದೆ.

ಮನುಷ್ಯನು ಆಹಾರಶುದ್ಧಿಗಾಗಿ ಹೇಗೆ ಪ್ರಯತ್ನವನ್ನು ಪ್ರಾರಂಭಿಸಬೇಕು?– ಎಂಬುದೊಂದು ಜೀವನದ ತೊಡಕು. ಏಕೆಂದರೆ ಮನಸ್ಸಿನ ಸ್ವಭಾವವು ನಮಗೆ ಅರಿಯದಂತೆಯೇ ನಮಗೆ ಹಿತವಾದ ಅಥವಾ ಅಹಿತವಾದ ವಿಷಯಗಳ ವಿವೇಚನೆಗೆ ಅವಕಾಶವನ್ನು ಕೊಡದೆಯೇ ನಮ್ಮನ್ನು ಮುನ್ನುಗ್ಗಿಸುತ್ತಿರುತ್ತದೆ. ಆಹಾರವು ಶುದ್ಧವಾದರೆ ಅಂತಃಕರಣವು ಶುದ್ಧವಾಗಿ ಹಿತಾಹಿತವಿವೇಚನೆ ಯುಂಟಾಗುತ್ತದೆ, ಹಿತಾಹಿತವಿವೇಚನೆಯುಂಟಾದವನಿಗೇ ಆಹಾರವು ಶುದ್ಧವಾದೀತು– ಎಂಬ ಅನ್ಯೋನ್ಯಾಶ್ರಯದೋಷವು ನಮ್ಮನ್ನು ಹಿಡಿದುಕಾಡುವಂತೆ ಕಾಣುತ್ತಿರುತ್ತದೆ. ಆದರೆ ಈ ತೊಡಕಿನಿಂದ ಪಾರಾಗುವದಕ್ಕೆ ಒಂದು ಉಪಾಯವಿದೆ. ಅದೇನೆಂದರೆ ಸ್ಥೂಲವಾದ ಅನ್ನಪಾನಗಳ ವಿಷಯದಲ್ಲಿ ನಾವು ಅನವಶ್ಯವಾದ ಅನ್ನಪಾನಗಳನ್ನು ಕೈಬಿಟ್ಟು ಅವಶ್ಯವಾಗಿರುವ ಅನ್ನಪಾನಗಳನ್ನು ಸ್ವೀಕರಿಸುವದು ಹೇಗೆ ಯುಕ್ತವೋ

ಹಾಗೆಯೇ ವಿಷಯ ಸಾಮಾನ್ಯದ ಸೇವನೆಯಲ್ಲಿಯೂ ಅನವಶ್ಯವಾದವುಗಳ ಸೇವನೆಯನ್ನು ಮೊದಲು ಬಿಡುವದನ್ನು ಕಲಿಯಬೇಕು. ನಾವು ನೋಡಿಯೇ ತೀರಬೇಕೆಂಬ ಅವಶ್ಯಕತೆಯಿಲ್ಲದ ಹಲವು ನೋಟಗಳನ್ನು ನೋಡುತ್ತಾ ಕಾಲ ಹಾಕುತ್ತಿರುತ್ತೇವೆ; ಕೇಳಿಯೇತೀರಬೇಕೆಂಬ ಆವಶ್ಯಕತೆಯಿಲ್ಲದ ಮಾತುಗಳನ್ನೂ ಶಬ್ದಗಳನ್ನೂ ಕೇಳುತ್ತಿರುತ್ತೇವೆ. ಹೀಗೆಯೇ ಗಂಧ, ಸ್ಪರ್ಶ, ರಸ-ಇವುಗಳನ್ನೂ ತಿಳಿಯಬೇಕು. ಅನವಶ್ಯವಾದ ಬೀಳುನುಡಿಗಳನ್ನು ಆಡುತ್ತಿರುವದು, ನಮಗೆ ಬೇಕಿಲ್ಲದ ವಸ್ತುಗಳನ್ನು ಕೂಡಿಹಾಕುವದಕ್ಕೆ ಕೈಗಳನ್ನು ಉಪಯೋಗಿಸುವದು, ಹೋಗಬೇಕಾದ್ದಿಲ್ಲದ ಸ್ಥಲಗಳಿಗೂ ಹೋಗಿಬರುವದು-ಇವೆಲ್ಲವನ್ನೂ ನಾವು ಸ್ವಲ್ಪ ಪ್ರಯತ್ನಪಟ್ಟರೆ ಸುಲಭವಾಗಿ ಬಿಟ್ಟುಬಿಡಬಹುದು. ಆಹಾರಶುದ್ಧಿಗೆ ಇದೇ ಮೊದಲನೆಯ ಪ್ರಯತ್ನವು.

ಆದರೆ ಈ ಪ್ರಯತ್ನದಲ್ಲಿ ಸ್ವಲ್ಪಮಟ್ಟಿಗೆ ಜಯಶೀಲವಾದವರು ಇನ್ನೂ ಸ್ವಲ್ಪ ಮುಂದುವರಿಯಬಹುದಾಗಿದೆ. ನಾವು ಸೇವಿಸುವ ಶಬ್ದ, ಸ್ಪರ್ಶ, ರೂಪ, ರಸ, ಗಂಧ-ಇವುಗಳನ್ನು ಪರಮೇಶ್ವರನಿಗೆ ಸಂಬಂಧಿಸಿಕೊಳ್ಳುವದೇ ಆ ಉಪಾಯವು. ಪರಮೇಶ್ವರನ ನೆನಹೇ ಇನ್ನೂ ಉಂಟಾಗದಿರುವವರು ಈ ಸಾಧನವನ್ನು ಅವಲಂಬಿಸುವದು ಹೇಗೆ?-ಎಂದು ಕೆಲವರು ಕೇಳಬಹುದು. ಅದಕ್ಕೆ ಉತ್ತರ ವೇನೆಂದರೆ, ಮೊದ ಮೊದಲು ನಮಗೆ ತಿಳಿಯದೆ ಇರುವ ಹೊಸಹೊಸ ವಸ್ತುಗಳ ಅಭ್ಯಾಸವನ್ನು ನಮ್ಮ ಒಡನಾಡಿಯವರ ಸಹವಾಸದಿಂದ ಹೇಗೆ ಕಲಿತುಕೊಳ್ಳುವೆವೋ ಹಾಗೆಯೇ ಇಲ್ಲಿಯೂ ಮಾಡಬಹುದಾಗಿದೆ. ಹೋಟಲಿಗೆ ಹೋಗುವದು, ಕ್ರಿಕೆಟ್, ಫುಟ್‌ಬಾಲ್, ಟೆನಿಸ್, ಕುದುರೆಯ ಜೂಜು, ಇಸ್‌ಪೀಟು, ಲಾಟರಿ, ಗಾನ, ನರ್ತನ-ಮುಂತಾದವುಗಳಲ್ಲಿ ನಮಗೆ ಪ್ರವೃತ್ತಿ ಹೇಗೆ ಉಂಟಾಗುತ್ತದೆ? ಅವುಗಳನ್ನು ಪ್ರಕಟಿಸುವವರ ಸಂಗದಿಂದ, ಅಥವಾ ಅವುಗಳಲ್ಲಿ ಆಸಕ್ತಿಯುಳ್ಳ ಸ್ನೇಹಿತರುಗಳ ಸಂಗದಿಂದ. ಅಲ್ಲವೆ? ಹೀಗೆಯೇ ವಿಷಯವ್ಯವಹಾರವನ್ನು ಈಶ್ವರನಿಗೆ ಸಂಬಂಧಿಸ ಬೇಕೆಂದು ಉಪದೇಶಿಸುವ ಶಾಸ್ತ್ರಗಳ ಅಥವಾ ಗುರುಗಳ ವಾಕ್ಯಶ್ರವಣವೆಂಬ ಪ್ರಕಟನೆಗಳಿಂದ ನಮಗೆ ಮೊದಲು ಕುತೂಹಲವುಂಟಾಗುತ್ತದೆ. ಆ ಬಳಿಕ ತೀರ್ಥ ಗಳಲ್ಲಿ ಸ್ನಾನಮಾಡುವದು, ಕ್ಷೇತ್ರಗಳಲ್ಲಿರುವ ದೇವತಾಪ್ರತಿಮೆಗಳ ದರ್ಶನಕ್ಕೆಂದು ಯಾತ್ರೆಗೆ ಹೋಗಿಬರುವದು, ಯೋಗ್ಯರಿಗೆ ದಾನವನ್ನು ಮಾಡುವದು, ದೇವತಾರ್ಚನೆ, ಸ್ತುತಿ, ನಮಸ್ಕಾರ, ಪುಷ್ಪಾಂಜಲಿ ಸಮರ್ಪಣೆ, ಉಪವಾಸಗಳು, ಜಾಗರಣೆ, ಈಶ್ವರನಿಗೆ ನೈವೇದ್ಯಸಮರ್ಪಣೆ, ಪ್ರಸಾದಸೇವನೆ-ಇವೇ ಮುಂತಾದ ಸತ್ಕರ್ಮ ಗಳನ್ನು ಮಾಡುವವರ ಸಂಗವನ್ನು ಮಾಡುವದರಿಂದ ಮೆಲ್ಲಮೆಲ್ಲಗೆ ನಮಗೂ

ವ್ಯವಹಾರದಲ್ಲಿ ವಿಷಯಗಳ ಸೇವನೆಯನ್ನು ಪರಮೇಶ್ವರನಿಗೆ ಸಂಬಂಧಿಸಿಕೊಳ್ಳುವ ಅಭ್ಯಾಸವು ಉಂಟಾಗುತ್ತದೆ.

ಮೇಲೆ ಹೇಳಿರುವ ಕ್ರಮದಿಂದ ನಮಗೆ ಅಶುಭವಸ್ತುಗಳ ಸೇವನೆಯು ಕಡಿಮೆಯಾಗುವದು, ಶುಭವಸ್ತುಗಳ ಸೇವನೆಯ ಅಭ್ಯಾಸವು ಸವಿಯಾಗಿ ತೋರುವದು; ಅಂತಃಕರಣವು ಸತ್ತ್ವಪ್ರಧಾನವಾಗುತ್ತಾಬಂದು ಪರಿಶುದ್ಧವಾದ ಕನ್ನಡಿಯಂತೆ ಸ್ವಚ್ಛವಾಗುವದು. ಆಗ ಪರಮೇಶ್ವರನು ಅದರಲ್ಲಿ ತನ್ನ ಪ್ರಕಾಶಸ್ವರೂಪದ ಪ್ರತಿಬಿಂಬವನ್ನು ಅನುಗ್ರಹಿಸುವನು.

## 23. ಭಗವಂತನ ಹಂಬಲಿಕೆ

**"ಒಬ್ಬನು ಈ ಪರಮಾತ್ಮನನ್ನು ಆಶ್ಚರ್ಯದಂತೆ ಕಾಣುತ್ತಾನೆ, ಹಾಗೆಯೇ ಮತ್ತೊಬ್ಬನು ಇವನನ್ನು ಆಶ್ಚರ್ಯದಂತೆಯೇ ಹೇಳುತ್ತಾನೆ; ಇವನನ್ನು ಆಶ್ಚರ್ಯವೆಂಬಂತೆಯೇ ಮತ್ತೊಬ್ಬನು ಕೇಳುತ್ತಾನೆ. ಹೇಗೆ ಕೇಳಿದರೂ ಇವನನ್ನು ಯಾವನೊಬ್ಬನೂ ಅರಿಯದೆ ಇರುವನು !" —ಭ. 2–29**

ಪರಮಾತ್ಮನನ್ನು ಅರಿತುಕೊಳ್ಳುವದಕ್ಕೆ ಹಲವು ಬಗೆಯ ಪ್ರಯತ್ನಗಳನ್ನು ಜನರು ಮಾಡಿರುತ್ತಾರೆ. ಪ್ರತಿಯೊಬ್ಬನಿಗೂ ಆತ್ಮನನ್ನು ತಿಳಿದುಕೊಂಡೇ ತೀರುವೆನೆಂಬ ಹಠ. ಅವರು ಮಾಡುವ ಪ್ರಯತ್ನಗಳನ್ನು ನೋಡಿದರೆ ಆಶ್ಚರ್ಯಕರವಾಗಿರುತ್ತದೆ. ಅವರು ಮನಃಪೂರ್ವಕವಾಗಿ ಸಾಧನಗಳನ್ನು ಮಾಡುತ್ತಾರೆ; ಶ್ರದ್ಧೆಯಿಂದ ಧರ್ಮಗ್ರಂಥಗಳನ್ನು ಓದುತ್ತಾರೆ; ಚಳಿಮಳೆಗಳಿಗೆ ಹೆದರದೆ ಬಿಸಲೆನ್ನದೆ ಗಾಳಿಯೆನ್ನದೆ, ಶರೀರದಲ್ಲಿ ಅಭಿಮಾನವನ್ನೆಲ್ಲ ತೊರೆದು ಉಪವಾಸವನವಾಸಗಳನ್ನು ಮಾಡಿ ವ್ರತಗಳನ್ನೂ ತಪಸ್ಸುಗಳನ್ನೂ ಮಾಡುತ್ತಾರೆ. ಹೀಗೆ ಶ್ರದ್ಧಾತಾತ್ಪರ್ಯಗಳಿಂದ ಪ್ರಯತ್ನವನ್ನು ಮಾಡುವವರು ಪರಮಾತ್ಮನನ್ನು ಕಂಡುಕೊಳ್ಳದೆ ಇದ್ದರೆ ಮತ್ತೆ ಯಾರುತಾನೆ ಕಂಡುಕೊಂಡಾರು?– ಎನ್ನಿಸುತ್ತದೆ, ಅವರ ಅನ್ವೇಷಣ ಕ್ರಮವನ್ನು ನೋಡಿದರೆ.

ಇಡಿಯ ಜಗತ್ತೇ ಪರಮೇಶ್ವರನ ಸೃಷ್ಟಿ. ಇಲ್ಲಿರುವ ಸಾಧಕರುಗಳೆಲ್ಲರ ದೇಹಗಳೂ ಆ ಪರಮಾತ್ಮನ ಅನುಗ್ರಹದಿಂದಲೇ ಅವರಿಗೆ ದೊರೆತಿವೆ. ಅವರ ಇಂದ್ರಿಯಗಳೂ ಮನಸ್ಸೂ ಆತನ ಅನುಗ್ರಹದಿಂದಲೇ ಅವರಿಗೆ ದೊರೆತಿವೆ. ಅವರವರಿಗೆ ಬೇರೆಬೇರೆಯ ಸಾಧನಕ್ರಮಗಳು ಆ ದಯಾಳುವಾದ ಪರಮೇಶ್ವರನ ಅನುಗ್ರಹದಿಂದಲೇ ತಿಳಿದುಬಂದಿದೆ. ಅವರು ಆಯಾ ಕ್ರಮಗಳನ್ನನುಸರಿಸಿ ಆತನ ಸಂಕಲ್ಪಕ್ಕೆ ಅನುಗುಣವಾಗಿಯೇ ನಡೆಯುತ್ತಿದ್ದಾರೆ. ಅವರವರಿಗೆ ತಿಳಿದಂತೆ ಆ ಪರಮೇಶ್ವರನನ್ನು ಆರಾಧನೆಮಾಡುತ್ತಿದಾರೆ.

ಅನಾದಿಕಾಲದಿಂದಲೂ ಬೇರೆಬೇರೆಯ ಆಚಾರ್ಯರುಗಳು ಈ ಲೋಕದಲ್ಲಿ ಕಾಣಿಸಿಕೊಂಡಿರುತ್ತಾರೆ. ಅವರು ತಮ್ಮ ನಡೆನುಡಿಗಳಿಂದ ಪರಮೇಶ್ವರನನ್ನು ಪಡೆಯುವ ಮಾರ್ಗವನ್ನು ಇತರರಿಗೆ ಬೋಧಿಸಿಯೂ ಇರುತ್ತಾರೆ. ಅನೇಕರು ಅನುಯಾಯಿಗಳಾಗಿ ಅವರು ಹೇಳಿಕೊಟ್ಟ ಸಾಧನಕ್ರಮವನ್ನು ಅನುಸರಿಸಿಯೂ ಇರುತ್ತಾರೆ. ಇವುಗಳೆಲ್ಲ ಇತಿಹಾಸಗಳಲ್ಲಿ ಕಂಡುಬರುತ್ತವೆ. ಬೋಧಕಮಹಾಶಯರ ಉಪದೇಶಗಳು ದೊಡ್ಡದೊಡ್ಡ ಗ್ರಂಥಗಳಲ್ಲಿ ಬರೆದಿರುತ್ತವೆ. ಅವುಗಳನ್ನು ಓದಿ ಮನನಮಾಡಿ ಅನೇಕರು ನಲಿಯುತ್ತಿದ್ದಾರೆ, ಅವುಗಳಿಂದ ಮನಃಸಮಾಧಾನವನ್ನೂ ಪಡೆದುಕೊಳ್ಳುತ್ತಿದ್ದಾರೆ.

ಅಪೌರುಷೇಯವಾದ ವೇದವೆಂದೂ ಈಶ್ವರಪ್ರೇರಿತವಾದ ಅಥವಾ ಈಶ್ವರನ ಅನುಗ್ರಹಕ್ಕೆ ಪಾತ್ರರಾದ ಮಹನೀಯರಿಂದ ಬಂದ ಧರ್ಮಗ್ರಂಥಗಳೆಂದೂ ಕೆಲವು ಪವಿತ್ರಗ್ರಂಥಗಳು ಬೇರೆಬೇರೆಯ ದೇಶದಲ್ಲಿ ಕಾಣಿಸಿಕೊಂಡಿವೆ. ಅವನ್ನು ಅನೇಕರು ಕಂಠಪಾಠಮಾಡಿಕೊಂಡು ಕಲಿಯುತ್ತಿದ್ದಾರೆ, ಕೆಲವರು ಅವಕ್ಕೆ ವ್ಯಾಖ್ಯಾನವನ್ನು ಬರೆದಿರುತ್ತಾರೆ ಮತ್ತು ಕೆಲವರು ಅವುಗಳ ಅಭಿಪ್ರಾಯವನ್ನು ತತ್ಕಾಲದ ದೇಶಭಾಷೆಗಳಿಂದ ವಿವರಿಸಿರುತ್ತಾರೆ. ಹೀಗೆ ಧರ್ಮದ ತತ್ತ್ವವನ್ನು ತಿಳಿಸುವದಕ್ಕೆ ಘನವಾದ ವಾಙ್ಮಯರಾಶಿಯು ಎದ್ದುಕೊಂಡಿದೆ.

ಹೀಗೆ ಬೇರೆಬೇರೆಯ ಧರ್ಮಗ್ರಂಥಗಳ ಮತ್ತು ಬೇರೆಬೇರೆಯ ಆಚಾರ್ಯ ಪುರುಷರ ಮುಂದಾಳುತನದಲ್ಲಿ ನಡೆದಿರುವ ಪರಮಾತ್ಮಾನ್ವೇಷಣೆಯ ಮಾರ್ಗಗಳಿಗೆ ಮತಗಳೆಂದು ಹೆಸರು. ಕೆಲವು ಮತಗಳು ತಮ್ಮತಮ್ಮ ಮತಬೋಧನೆಗೆ ತತ್ತ್ವಶಾಸ್ತ್ರದ ಆಧಾರವನ್ನು ತೋರಿಸುತ್ತಿವೆ; ಮತ್ತೆ ಕೆಲವು ಯೋಗಾದಿ ಸಾಧನಗಳ ವ್ಯಕ್ತ್ಯನುಭವ ವನ್ನು ಸಾಕ್ಷಿಯಾಗಿ ಕೊಡುತ್ತಿವೆ; ಕೆಲವು ಮತಗಳಲ್ಲಿ ಕರ್ಮಗಳಿಗೆ ಪ್ರಾಧಾನ್ಯವಿದೆ; ಕೆಲವು ಮತಗಳಲ್ಲಿ ಮಂತ್ರಗಳಿಗೆ ಪುರೋಹಿತರಿಗೆ ಅವಕಾಶವಿದೆ; ಕೆಲವು ಮತ ಗಳಲ್ಲಿ ಇಂಥಿಂಥ ನಂಬಿಕೆಗಳನ್ನು ಮುಖ್ಯವೆಂದೆಣಿಸಬೇಕೆಂದು ಹೇಳಿದೆ. ಈಗ ಮತಗಳು ಅನೇಕ ಒಳಹಾದಿಗಳಿಂದ ಕೂಡಿವೆ. ಆದರೆ ಮೂಲದಲ್ಲಿ ಮತಗಳು ಹೀಗಿರಲಿಲ್ಲ; ಅವುಗಳನ್ನು ಸ್ಥಾಪಿಸಿದ ಅಥವಾ ಬೋಧಿಸಿದ ಮಹಾಪುರುಷರು ಮುಖ್ಯವಾಗಿ ಪರಮಾತ್ಮಾನ್ವೇಷಣೆಯನ್ನೇ ತಮ್ಮ ಗುರಿಯಾಗಿಟ್ಟುಕೊಂಡಿದ್ದರು. ಅವರಿಗೆ ಜೀವನವನ್ನು ಸುಖಮಯವಾಗಿ ಮಾಡಿಕೊಳ್ಳುವದೇ ಉದ್ದೇಶವು, ಎಲ್ಲರಲ್ಲಿಯೂ ಆ ಪರಮಾನಂದವನ್ನು ಕಾಣುವದೇ ಅವರ ಹಂಬಲಿಕೆ.

ಮತಗಳಿಂದ ಜನರಿಗೆ ಮೊದಮೊದಲು ಪರಮೋಪಕಾರವಾಯಿತು. ಪರಮೇ ಶ್ವರನ ಸಂಕಲ್ಪದಂತೆ ನಡೆಯುತ್ತಿದ್ದ ಮತಾಚಾರ್ಯರೂ ಅವರ ಅನುಯಾಯಿಗಳೂ

ಎಲ್ಲೆಲ್ಲಿಯೂ ಪರಮೇಶ್ವರನನ್ನೇ ಕಾಣುತ್ತಿದ್ದರು. ತಮತಮಗೆ ಆ ಪರಮೇಶ್ವರನು ಅನುಗ್ರಹಿಸಿದ ಬುದ್ಧಿಯೋಗದಿಂದಲೇ ಅವರು ಆತನನ್ನು ತಮ್ಮ ಹೃದಯದಲ್ಲಿಯೂ ತಮ್ಮ ಸುತ್ತುವಳಯದಲ್ಲಿಯೂ ಕಂಡುಕೊಂಡು ಎಲ್ಲರಿಗೂ ಸುಖಶಾಂತಿಗಳ ಸಂದೇಶವನ್ನು ಬೀರುತ್ತಿದ್ದರು. ಆದರೆ ಈಗ ಆಯಾ ಮತಗಳ ಅನುಯಾಯಿಗಳು ಬಾಯಿಭಕ್ತಿಯನ್ನು ತೋರಿಸುತ್ತಿದ್ದಾರೆ. ಆದರೆ ಅವರಿಗೆ ಪರಮೇಶ್ವರನ ಸನ್ನಿಧಿಯು ಮುಖ್ಯವಾಗಿರುವದಿಲ್ಲ; ಶಬ್ದ ಜಾಲವೂ ಒಣನಂಬಿಕೆಗಳೂ ಪ್ರಧಾನವಾಗಿರುತ್ತವೆ. ಅನೇಕರು ತಾವು ಪರಮಧಾರ್ಮಿಕರೆಂದು ತೋರಿಸಿಕೊಳ್ಳುತ್ತಾರೆ; ಇತರರನ್ನು ಧರ್ಮಬಾಹ್ಯರೆಂದು ಹಳಿಯುತ್ತಾರೆ; ಈಶ್ವರಾನ್ವೇಷಣೆಯ ಹಾದಿಯು ಯಾವ ದಿಕ್ಕಿಗೆ ಹೋಗಿದೆ ಎಂಬುದನ್ನು ಮರೆಯುತ್ತಾರೆ.

ಕೆಲವರು ನಿಜವಾಗಿಯೂ ಶ್ರದ್ಧಾಳುಗಳಾಗಿರುತ್ತಾರೆ; ಆದರೆ ಅವರಿಗೆ ತಮ್ಮಂತೆಯೇ ಇನ್ನು ಕೆಲವರು ಬೇರೆ ಹಾದಿಗಳಿಂದಲೂ ಪರಮೇಶ್ವರನನ್ನು ಕಾಣಬಹುದೆಂಬ ಉದಾರಹೃದಯವು ಇರುವದಿಲ್ಲ. ಈಶ್ವರನು ಎಲ್ಲರ ಹೃದಯದಲ್ಲಿಯೂ ಇರುತ್ತಾನೆ; ಈಶ್ವರನೇ ಧರ್ಮಮಾರ್ಗದ ಕೇಂದ್ರವು-ಎಂಬುದು ಅವರ ಬುದ್ಧಿಗೆ ಹೊಳೆಯುವದಿಲ್ಲ. ಕೆಲವರಿಗೆ ತಮಗೊಂದು ಮಾರ್ಗವು ಸಿಕ್ಕಿದೆ ಎಂತ ತೋರುತ್ತದೆ; ಇದೊಂದೇ ಪರಮೇಶ್ವರನನ್ನು ಕಾಣುವದಕ್ಕೆ ಮಾರ್ಗವು ಎಂದು ಅವರಿಗೆ ತೋರುತ್ತದೆ. ಇದು ಪರಮೇಶ್ವರನೇ ಅನುಗ್ರಹಿಸಿರುವ ಮಾರ್ಗವು, ಮಿಕ್ಕದ್ದೆಲ್ಲವೂ ಪುರುಷಮತಿ ಕಲ್ಪಿತವಾದದ್ದು ಎನ್ನುತ್ತಾರೆ, ಅವರು. ಇಂಥಿಂಥ ಕ್ರಮವನ್ನು ಅನುಸರಿಸಬೇಕು, ಇಂಥಿಂಥ ಆಚಾರಗಳನ್ನು ನಡೆಯಿಸಬೇಕು, ಇಂಥಿಂಥ ಭೂಮಿಕೆಗಳನ್ನು ದಾಟಬೇಕು, ಇಂಥಿಂಥ ಮಹಾಪುರುಷರನ್ನು ಸೇವಿಸಬೇಕು, ಇಂಥಿಂಥ ಯೋಗಸಾಧನಗಳನ್ನು ಮಾಡಬೇಕು, ಇಂಥಿಂಥ ಸಿದ್ಧಿಗಳನ್ನು ಪಡೆಯಬೇಕು-ಎಂದು ಸವಿವರವಾಗಿ ಪ್ರಕ್ರಿಯೆಯನ್ನು ರಚಿಸಿಕೊಂಡು ಈ ಮಾರ್ಗದಿಂದ ಹೋದವರಿಗೇ ಪುರುಷಾರ್ಥ, ಮಿಕ್ಕವರಿಗೆಲ್ಲ ಅನರ್ಥ-ಎಂದು ಅವರು ಸಾರುತ್ತಿರುತ್ತಾರೆ.

ಈ ಮತಬೋಧಕರ ಸಂತೆಯಲ್ಲಿ ನಿಜವಾಗಿ ಜಿಜ್ಞಾಸುಗಳಿಗೆ ದಿಕ್ಕು ತೋಚದಂತೆ ಆಗಿರುತ್ತದೆ. ಇಷ್ಟು ಮತಗ್ರಂಥಗಳಲ್ಲಿ ಯಾವದು ನಿರ್ದುಷ್ಟವಾದದ್ದು, ಇಷ್ಟುಜನ ಮತಾಚಾರ್ಯರಲ್ಲಿ ಯಾರ ಬೋಧನೆಯನ್ನು ಕಿವಿಗೊಟ್ಟು ಕೇಳಿದರೆ ನಿಃಸಂಶಯವಾಗಿ ಪರಮಪುರುಷಾರ್ಥವು ದೊರಕೀತು? ಇಷ್ಟು ವಿವಿಧವಾಗಿರುವ ಆಚಾರವಿಚಾರಗಳಲ್ಲಿ ಯಾವದನ್ನು ಅನುಸರಿಸುವದು ಯುಕ್ತವಾದದ್ದು? ಈಶ್ವರನಿಗೆ ಯಾವ ಜನಾಂಗದ ಮೇಲೆ ಪ್ರೀತಿ? ಯಾವ ಭಾಷೆಯಲ್ಲಿ ಆದರ? ಅವನು ಯಾರನ್ನು ತನ್ನ ಮೆಚ್ಚಿನ ಭಕ್ತರಾಗಿ ಆರಿಸಿಕೊಳ್ಳುವನು? ಈ ಅಪರಿಮಿತವಾದ ರಸ್ತೆಗಳು, ಕಾಲುಹಾದಿಗಳು, ಸೀಳುಹಾದಿಗಳು-ಇವುಗಳಲ್ಲಿ ಯಾವದರಲ್ಲಿ ನಡೆದರೆ

ನಮಗೆ ಪರಗತಿಯು ಸಿಕ್ಕೀತು?–ಎಂದು ಅವರು ಆಲೋಚನೆಗಳ ತರಂಗದ ಹೊಡೆತಕ್ಕೆ ಸಿಕ್ಕಿ ಪೇಚಾಡುತ್ತಿರುತ್ತಾರೆ.

ಈ ಕಷ್ಟದಿಂದ ಪಾರಾಗುವದಕ್ಕೆ ಒಂದೇ ಒಂದು ಉಪಾಯವಿದೆ. ಒಂದಾನೊಂದು ತತ್ತ್ವವನ್ನು ನಾವು ಒಪ್ಪಿಕೊಳ್ಳುವದಕ್ಕೆ ಧೈರ್ಯವನ್ನು ಮಾಡಬೇಕು. "ಎಲ್ಲಾ ಮತಗಳೂ ಸರಿ, ಎಲ್ಲಾ ಆಚಾರ್ಯರೂ ಸರಿ; ಎಲ್ಲಾ ಮತಗಳೂ ತಪ್ಪು, ಎಲ್ಲಾ ಆಚಾರ್ಯರುಗಳೂ ತಪ್ಪು !" ಇದು ಹೇಗೆ–ಎಂದು ನೀವು ಆಶ್ಚರ್ಯಪಡ ಬಹುದು. ಈ ವಿಷಯವನ್ನು ಸ್ವಲ್ಪಮಟ್ಟಿಗೆ ಇಲ್ಲಿ ವಿವರಿಸುವದಕ್ಕೆ ಪ್ರಯತ್ನಿಸುವೆನು.

ಪರಮೇಶ್ವರನು ನಿತ್ಯವಾದ ವೇದವನ್ನು ಎಲ್ಲರ ಹೃದಯದಲ್ಲಿಯೂ ಇಟ್ಟಿರು ತ್ತಾನೆ. ಬ್ರಹ್ಮನನ್ನು ಜಗತ್ಸೃಷ್ಟಿಮಾಡೆಂದು ನಿಯಮಿಸಿದಾಗಲೇ ಅವನಿಗೆ ವೇದ ಗಳನ್ನು ಅನುಗ್ರಹಿಸಿರುವನಂತೆ ! ಬ್ರಹ್ಮನ ಸೃಷ್ಟಿಯಲ್ಲಿರುವ ಮಾನವರೆಲ್ಲ ಪರಮೇಶ್ವರನ ಸಂಕಲ್ಪವೇನೆಂಬುದನ್ನು ಅರಿಯುವದಕ್ಕೆ ಸೌಕರ್ಯವಿರಬೇಡವೆ? ಪರಮಾತ್ಮನು ಜಗತ್ತನ್ನೆಲ್ಲ ಸೃಜಿಸಿ ಅದರೊಳಕ್ಕೇ ಪ್ರವೇಶಮಾಡಿರುತ್ತಾನೆಂದೂ ಪ್ರತಿಯೊಬ್ಬ ಜೀವನ ಹೃದಯಗುಹೆಯಲ್ಲಿಯೂ ಅವನು ಈಗಲೂ ಇದ್ದು ಕೊಂಡಿರುತ್ತಾನೆಂದೂ ಇದನ್ನು ಅರಿತರೆ ಸಕಲಕಾಮಗಳ ಪ್ರಾಪ್ತಿಯೂ ಒಂದೇ ಕಾಲದಲ್ಲಿ ಆಗಿಬಿಡುವದೆಂದೂ ಶ್ರುತಿಯು ಸಾರುತ್ತಿದೆ. ಪರಮಾತ್ಮನು ನಮ್ಮೆಲ್ಲರ ಆತ್ಮನೇ ಆಗಿರುವನೆಂದೂ ಅವನ ಸ್ವರೂಪವನ್ನು ಕಂಡುಕೊಳ್ಳುವದಕ್ಕೆ ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯ–ಎಂಬ ಐದು ಕೋಶಗಳನ್ನು ಬಿಡಿಸಿಕೊಂಡು ನಮ್ಮೊಳಕ್ಕೇ ನಾವು ಹೊಕ್ಕುನೋಡಿಕೊಳ್ಳಬೇಕೆಂದೂ ಉಪನಿಷತ್ತಿನಲ್ಲಿ ಹೇಳಿರುತ್ತದೆ. ಅನ್ನಮಯಪ್ರಾಣಮಯಕೋಶಗಳ ವಿಷಯದಲ್ಲಿ ಸ್ವಲ್ಪಮಟ್ಟಿಗೆ ನಮಗೆ ತಿಳಿವಳಿಕೆಯಿದೆ ಎಂದು ನಾವು ಊಹಿಸುವದಕ್ಕೆ ಅವಕಾಶ ವಿದೆ. ಏಕೆಂದರೆ ಈ ನಮ್ಮ ದೇಹವು ಅನ್ನಮಯವಾಗಿರುತ್ತದೆ, ಅನ್ನದಿಂದಲೇ ಬೆಳೆಯುತ್ತಾ ಜೀವಿಸಿಕೊಂಡಿರುತ್ತದೆ. ಪ್ರಾಣವೆಂಬುದು ಈ ದೇಹದಲ್ಲಿ ಬಗೆಬಗೆಯ ವ್ಯಾಪಾರವನ್ನು ಮಾಡುತ್ತಿರುತ್ತದೆ. ಆದರೆ ಅನ್ನಪ್ರಾಣಗಳ ಒಳಗೆ ಇರುವ ಮನೋಮಯದ ವಿಚಾರವು ಅಷ್ಟು ನಮಗೆ ತಿಳಿಯದು. ಯಾವದೋ ಒಂದು ಶಕ್ತಿವಿಶೇಷದಿಂದ ನಾವು ಎಲ್ಲವನ್ನೂ ಅರಿತುಕೊಳ್ಳುತ್ತಿದ್ದೇವೆ; ಇಂದ್ರಿಯಗಳ ವ್ಯಾಪಾರಗಳೆಲ್ಲ ಅದರ ಅಧೀನವಾಗಿರುತ್ತದೆ. ಅದೇ ಮನಸ್ಸು–ಎಂದು ಕೆಲವರು ಮಾತ್ರ ಅನುಮಾನಪ್ರಮಾಣದಿಂದ ಊಹಿಸುವರು. ಇನ್ನು ಕೆಲವರು ಈ ಮನಸ್ಸನ್ನು ತಮ್ಮಲ್ಲಿ ತಾವೇ ನೋಡಿಕೊಂಡು ವಿಮರ್ಶಿಸುವರು. ಆಗ ಅದರಲ್ಲಿರುವ ರಾಗದ್ವೇಷಾದಿದೋಷಗಳೂ ಚಾಂಚಲ್ಯವೂ ಸ್ವಲ್ಪಮಟ್ಟಿಗೆ ಅವರಿಗೆ ಗೋಚರ

ವಾಗುವವು. ಆದರೆ ನಿಜವಾದ ಮನಸ್ಸಿನ ಸ್ವರೂಪವು ಇದಲ್ಲ. ಈ ದೋಷಗಳೂ ಈ ಚಾಂಚಲ್ಯವೂ ಹೊರಗಿನ ಇಂದ್ರಿಯಾರ್ಥಗಳ ಸಂಬಂಧದಿಂದ ಅದರಲ್ಲಿ ಆಗಿರುತ್ತವೆ. ಇಂದ್ರಿಯಾರ್ಥಗಳ ಗ್ರಹಣವಾಗಲಿ ಅವುಗಳ ಸಂಕಲ್ಪವಿಕಲ್ಪಗಳಾಗಲಿ ಇಲ್ಲದ ಪರಿಶುದ್ಧವಾದ ಮನಸ್ಸೂ ಉಂಟು. ಅದೇ ನಿಜವಾದ ಮನಸ್ಸು. ಮನೋಮಯಕೋಶವನ್ನು ಉಪನಿಷತ್ತಿನಲ್ಲಿ ಹೇಗೆ ವರ್ಣಿಸಿದೆ, ನೋಡಿರಿ :

**"ಈ ಪ್ರಾಣಮಯನಾದ ಆತ್ಮನಿಗಿಂತ ಬೇರೆಯಾದ ಮತ್ತೊಬ್ಬ ಆತ್ಮನು ಇನ್ನೂ ಒಳಗಿರುವನು. ಅವನು ಇವನೊಳಗೆ ತುಂಬಿರುವನು. ಅವನೂ ಪುರುಷಾಕಾರವಾಗಿರುವನು. ಅವನಿಗೆ ಯಜುಸ್ಸೇ ತಲೆ, ಋಕ್ಕೇ ಬಲಪಕ್ಕ, ಸಾಮವೇ ಎಡಪಕ್ಕ, ಆದೇಶವೇ ಆತ್ಮನು, ಅಥರ್ವಾಂಗಿರಸವೇ ಪುಚ್ಛವು, ಪ್ರತಿಷ್ಠೆಯು".**

ಈ ವಾಕ್ಯದ ಅಭಿಪ್ರಾಯವನ್ನೆಲ್ಲ ವಿವರಿಸುವದಕ್ಕೆ ಇದು ಸಮಯವಲ್ಲ. ಆದರೆ ಮನೋಮಯಾತ್ಮನಿಗೆ ಯಜುಸ್ಸು. ಋಕ್ಕು, ಸಾಮ-ಇವುಗಳೇ ಅವಯವ ಗಳಾಗಿರುವವೆಂಬುದನ್ನು ಮಾತ್ರ ಇಲ್ಲಿ ಲಕ್ಷ್ಯಕ್ಕೆ ತಂದುಕೊಳ್ಳಬೇಕು. ಪರಮ ಶುದ್ಧವಾದ ನಮ್ಮ ಮನಸ್ಸಿನಲ್ಲಿ ಋಗ್ವೇದ, ಯಜುರ್ವೇದ, ಸಾಮವೇದ-ಇವುಗಳೆಲ್ಲ ಇದ್ದುಕೊಂಡಿರುವವು. ಹೊರಗಿನ ಶಬ್ದರೂಪವಾದ ವೇದವು ನಿಜವಾದ ವೇದದ ಬಾಹ್ಯರೂಪವು ಮಾತ್ರ, ನಿಜವಾದ ರೂಪವು ನಮ್ಮ ಒಳಗೆ ನಮ್ಮನಮ್ಮ ಮನಸ್ಸಿ ನಲ್ಲಿಯೇ ಎಂದೆಂದಿಗೂ ಇದ್ದುಕೊಂಡಿದೆ-ಎಂಬುದು ಈ ಉಪದೇಶದ ತಿರುಳು.

ಈ ದೃಷ್ಟಿಯಿಂದ ನೋಡಿದರೆ ಯಾರಿಗೆತಾನೆ ಪರಮೇಶ್ವರನ ಸಂದೇಶರೂಪ ವಾದ ವೇದವು ದೂರವಿರುವದು? ಮನಸ್ಸು ಶುದ್ಧವಾಯಿತೆಂದರೆ ಅದಕ್ಕೆ ಯಾರೊಬ್ಬರ ಆತಂಕವೂ ಇಲ್ಲದೆ ಪರಮೇಶ್ವರನ ಅನುಗ್ರಹದಿಂದ ವೇದರಾಶಿಯೇ ವಶವಾಗಿಬಿಡುವದು, ತತ್ತ್ವವೆಲ್ಲವೂ ತಿಳಿದುಬಿಡುವದು. ಆದ್ದರಿಂದ ಯಾರೊಬ್ಬ ರಿಗೂ ಪರಮೇಶ್ವರನ ಜ್ಞಾನವು ಎಟುಕದಷ್ಟು ದೂರವಿರುವದಿಲ್ಲ. ಪರಿಶುದ್ಧರಾಗಿ ತಮ್ಮೊಳಗೆ ತಾವು ಶ್ರದ್ಧಾಭಕ್ತಿಗಳಿಂದ ನೋಡುವವರಿಗೆ ವೇದದ ತತ್ತ್ವವೇ ಅವರವರ ಮನಸ್ಸಿನಲ್ಲಿಯೇ ಹೊಳೆದುಬಿಡುವಹಾಗಿದೆ. ಈ ದೃಷ್ಟಿಯಿಂದ ಮತಾಚಾರ್ಯರು ಗಳೆಲ್ಲರೂ ತತ್ತ್ವಪಕ್ಷಪಾತಿಗಳಾದ ಧರ್ಮಬೋಧಕರೆಲ್ಲರೂ ಸರಿಯಾದ ಮಾರ್ಗ ವನ್ನೇ ಅನುಸರಿಸಿರುತ್ತಾರೆ. ಅವರ ಅನುಯಾಯಿಗಳು ಶ್ರದ್ಧಾತಾತ್ಪರ್ಯಗಳಿಂದ ತತ್ತ್ವವನ್ನು ಹುಡುಕುವವರಾಗಿದ್ದರೆ ಅವರಿಗೆಲ್ಲ ಪರಮಾರ್ಥವು ಅವಶ್ಯವಾಗಿ ದೊರಕುವದು. ಇದು ಪರಮೇಶ್ವರನ ನಿಯಮ.

ಆದರೆ ಮಾನವನು ಯಾವಾಗಲೂ ಅಂತರ್ಮುಖಿಯಾಗಿರುವದಿಲ್ಲ. ಯಾವಾ ಗಲೂ ತನ್ನ ಅಂತಃಕರಣವನ್ನು ಶುದ್ಧವಾಗಿಟ್ಟುಕೊಂಡಿದ್ದು ಪರಮೇಶ್ವರನನ್ನು

'ನನಗೆ ನಿಜವಾದ ವೇದವನ್ನು ಅನುಗ್ರಹಿಸು !' ಎಂದು ಪ್ರಾರ್ಥಿಸಿಕೊಳ್ಳುತ್ತಲಿಲ್ಲ. ಆ ಅಂತಃಕರಣದಲ್ಲಿಯೇ ತನಗೆ ಬೇಕಾದ ಸದ್ಗುರುವಿನ ಆದೇಶವು ಸಿಕ್ಕುವದೆಂಬ ಗಟ್ಟಿಯಾದ ನಂಬಿಕೆಯಿಂದ ಕೂಡಿ ಒಳಗೆ ನೋಡಿಕೊಳ್ಳುತ್ತಲಿಲ್ಲ. ಆದ್ದರಿಂದ ಅವನು ಶಾಂತನಾಗಿದ್ದಾಗ ಯಾವಾಗಲೋ ಒಮ್ಮೆ ಕೇಳಿದ ಒಂದಿಷ್ಟು ವೇದ ಸಂದೇಶಕ್ಕೆ ತನ್ನ ಕಲ್ಪನೆಯ ವೇದಾಭಾಸಗಳನ್ನು ಸೇರಿಸಿಕೊಳ್ಳುತ್ತಲಿದ್ದಾನೆ. ತಾನೇ ಕೂಡಿಟ್ಟುಕೊಂಡಿರುವ ವೇದಕ್ಕೆ ತಾನೇ ಅರ್ಥವನ್ನು ಕಲ್ಪಿಸಿಕೊಳ್ಳುತ್ತಲಿದ್ದಾನೆ. ತಾನೇ ಕೆಲವು ನಿಯಮಗಳನ್ನು ಏರ್ಪಡಿಸಿಕೊಳ್ಳುತ್ತಲಿದ್ದಾನೆ, ಭೂಮಿಕೆಗಳನ್ನೇ ರ್ಪಡಿಸಿಕೊಳ್ಳುತ್ತಿದ್ದಾನೆ, ರಹಸ್ಯೋಪದೇಶಗಳನ್ನು ಕಲ್ಪಿಸುತ್ತಿದ್ದಾನೆ. ಇದೆಲ್ಲ ತನ್ನ ಕಲ್ಪನೆಗಳೇ ಎಂದು ಅವನು ಒಂದಿಷ್ಟೂ ಮನಸ್ಸಿಗೆ ತಂದುಕೊಳ್ಳುವದಿಲ್ಲ. ತನ್ನ ಉಪದೇಶಗಳನ್ನು ಚಾಚೂ ತಪ್ಪದೆ ನಡೆಯಿಸಿದವರಿಗೇ ಮುಕ್ತಿ ಎಂಬ ಭ್ರಾಂತಿಯ ಬಲೆಯಲ್ಲಿ ಬಿದ್ದು ಒದ್ದಾಡುತ್ತಿರುತ್ತಾನೆ.

ಆದರೇನು? ಈ ಎಲ್ಲಾ ಮತಗಳಿಗೂ ಪ್ರೇರಕನು ಮೂಲದಲ್ಲಿ ಪರಮೇಶ್ವರನೇ. ಆತನು ಕರುಣಾನಿಧಿಯು. ಮಾನವನು ತತ್ತ್ವದ ಜೊತೆಗೆ ತನ್ನ ಕಲ್ಪನೆಗಳನ್ನೂ ಬೆರೆಯಿಸಿಕೊಂಡು ಹೀಗೆ ಆಟವಾಡುತ್ತಿದ್ದರೂ ಆ ಪರಮೇಶ್ವರನು ಅವನನ್ನು ಕೈಬಿಡುವದಿಲ್ಲ. ಜನರು ಅರಿತೋ ಅರಿಯದೆಯೋ ತನ್ನನ್ನೇ ಅರಸುತ್ತಿರುವರೆಂಬು ದನ್ನು ಅವನು ಬಲ್ಲನು. ಒಬ್ಬ ಭಕ್ತನು ಎಂದಿರುವದೇನೆಂದರೆ "ತ್ರಯೀ (ವೈದಿಕಮತ), ಸಾಂಖ್ಯ, ಯೋಗ, ಪಶುಪತಿಮತ, ವೈಷ್ಣವಮತ–ಎಂದು ಪ್ರಸ್ಥಾನ ಗಳು ಭಿನ್ನಭಿನ್ನವಾಗಿ ಇದೇ ಪಥ್ಯ, ಅದೇ ಪಥ್ಯ–ಎಂದು ಅವರವರ ರುಚಿಯ ವೈಚಿತ್ರ್ಯದಿಂದ ಬಗೆಬಗೆಯ ಹಾದಿಗಳನ್ನು ತುಳಿಯುವ ಜನರಿಗೆಲ್ಲ, ಹೇ ದೇವ, ನದಿಗಳಿಗೆ ಸಮುದ್ರದಂತೆ ನೀನೊಬ್ಬನೇ ಗಮ್ಯನಾಗಿರುವೆ!" ಇದು ಅಕ್ಷರಶಃ ನಿಜವು. ಇಂದು ಮತಗಳು ಹಲವು ಇರುತ್ತವೆ. ಹಿಂದೂ, ಬೌದ್ಧ, ಜೈನ, ಫಾರಸಿ, ಇಸ್ಲಾಮ್, ಯಹೂದಿ, ಕ್ರಿಸ್ತಿಯನ್–ಮುಂತಾಗಿ ಎಷ್ಟು ಮತಗಳಿದ್ದರೂ ಆ ಪರಮೇಶ್ವರನು ಎಲ್ಲರಿಗೂ ಆರಾಧನೆಯ ಸವಿಯನ್ನು ಹತ್ತಿಸಿರುತ್ತಾನೆ. ಮತ ಬೋಧಕರು ಎಷ್ಟೇ ದುರಭಿಮಾನದಿಂದ ಮತ್ತೊಬ್ಬರ ಮತವನ್ನು ಹಳಿಯುತ್ತಿರಲಿ, ಆತನು ಎಲ್ಲಾ ಮತದವರನ್ನೂ ಸಮಾನಪ್ರೇಮದಿಂದ ಕಾಣುತ್ತಿರುವನು. ತನ್ನನ್ನು ಹುಡುಕಿದರೆ ಸಾಕೆಂದು ಎಲ್ಲರಿಗೂ ಅನುಗ್ರಹಮಾಡುತ್ತಿರುವನು. ಯಾವ ವರ್ಣ ಭೇದಗಳನ್ನೂ ಕುಲಭೇದಗಳನ್ನೂ ಲಿಂಗಭೇದವನ್ನೂ ವಯೋಭೇದವನ್ನೂ ಲೆಕ್ಕಿಸದೆ ಭಕ್ತಿಯೊಂದನ್ನೇ ಮುಖ್ಯವಾಗಿ ಎಣಿಸುತ್ತಿರುವನು. ಅಹಂಕಾರವನ್ನು ತೊರೆದು ತನ್ನನ್ನೇ ಹುಡುಕುವವರಿಗೆಲ್ಲ ಅವರವರ ಹೃದಯದಲ್ಲಿಯೇ ದರ್ಶನವನ್ನು ಕೊಟ್ಟು ಅವರೆಲ್ಲರನ್ನೂ ಒಂದೇ ಸಮನಾಗಿ ಕಾಪಾಡುವನು.

ನೀವು ಯಾವ ಮತದವರೆಂಬುದೇನೂ ಅಷ್ಟು ಮುಖ್ಯವಲ್ಲ. ಯಾವ ಹೊರಗಿನ ಆಚಾರಗಳ ಆಡಂಬರವನ್ನು ತೋರಿಸಿಕೊಳ್ಳುತ್ತಿದ್ದೀರೆಂಬುದೇನೂ ಮುಖ್ಯವಲ್ಲ. ಯಾವ ಗ್ರಂಥ, ಯಾವ ಗುರು, ಯಾವ ಮಂತ್ರ ನಿಮ್ಮದೆಂದು ಹೊರಗೆ ಹೇಳಿಕೊಳ್ಳುತ್ತೀರೆಂಬುದೂ ಮುಖ್ಯವಲ್ಲ. ಮತ, ಆಚಾರ, ವೇದ, ಶಾಸ್ತ್ರ, ಗುರು, ಉಪದೇಶ, ದೀಕ್ಷೆ–ಇವುಗಳು ವ್ಯರ್ಥವೆಂದೇನೂ ನನ್ನ ಅಭಿಪ್ರಾಯವಲ್ಲ. ಆದರೆ ತೆಂಗಿನಕಾಯಿನ ಸಿಪ್ಪೆಗಿಂತಲೂ ಕರಟಕ್ಕಿಂತಲೂ ಒಳಗಿರುವ ತಿರುಳೇ ಪ್ರಧಾನವಾಗಿರುವಂತೆ, ಸರ್ವಜ್ಞನೂ ಸರ್ವಶಕ್ತನೂ, ನಿತ್ಯಶುದ್ಧಬುದ್ಧಮುಕ್ತಸ್ವಭಾವನೂ ದಯಾನಿಧಿಯೂ ಪ್ರೇಮದ ಮುದ್ದೆಯೂ ಆಗಿರುವ ಭಗವಂತನ ಹಂಬಲಿಕೆಯು ನಿಮ್ಮ ಅಂತಃಕರಣದಲ್ಲಿ ಎಷ್ಟರಮಟ್ಟಿನ ಪ್ರಬಲವಾಗಿರುವದೆಂಬುದು ಬಲು ಮುಖ್ಯವು. ಆ ಪರಮೇಶ್ವರನನ್ನು ನೀವು ಅನನ್ಯಭಕ್ತಿಯಿಂದ ಮಕ್ಕಳು ತಾಯಿಯನ್ನೇ ಹುಡುಕುವಂತೆ ಅರಸುತ್ತಿರುವಿರಾದರೆ ನೀವು ಹುಟ್ಟಿರುವ ಮತದಲ್ಲಿಯೇ, ನಿಮ್ಮ ಆಚಾರವಿಚಾರಗಳಿಂದಲೇ ನಿಮ್ಮ ಧರ್ಮಗ್ರಂಥ, ನಿಮ್ಮ ಗುರು, ನಿಮ್ಮ ಮಂತ್ರ–ಇವುಗಳ ಮೂಲಕವೇ ಆ ಪರಮಾತ್ಮನು ನಿಮಗೆ ಅನುಗ್ರಹವನ್ನು ಮಾಡುವನು. ಮಿಕ್ಕ ಹೊರಗಿನ ಉಪಾಧಿಗಳನ್ನೆಲ್ಲ ಮೀರಿ ನಿಮ್ಮ ಹೃದಯದಲ್ಲಿಯೇ ಆತನನ್ನು ಕಾಣುವಂತೆ ತನ್ನ ವರದಹಸ್ತವನ್ನು ನಿಮ್ಮ ತಲೆಯ ಮೇಲಿಡುವನು.

## 24. ನಾಮ ಸಂಕೀರ್ತನೆ

"ಆರ್ತರೂ ವಿಷಣ್ಣರಾದವರೂ ನಿಶ್ಶಕ್ತರಾದವರೂ ಅಂಜಿದವರೂ ಕೆಟ್ಟ ರೋಗಗಳಿಂದ ನರಳುತ್ತಿರುವವರೂ ನಾರಾಯಣನೆಂಬ ಶಬ್ದಮಾತ್ರವನ್ನು ಸಂಕೀರ್ತನೆಮಾಡಿದರೆ ದುಃಖದಿಂದ ಬಿಡುಗಡೆಯನ್ನು ಹೊಂದಿ ಸುಖಿಗಳಾಗುವರು"–ಎಂಬುದೊಂದು ಅಭಿಯುಕ್ತರ ವಚನವು. ಇಲ್ಲಿ ಹೇಳಿರುವ ದುಃಖಗಳು ಉಪಲಕ್ಷಣಮಾತ್ರವಾಗಿವೆ. ಮನುಷ್ಯನಿಗೆ ದಾರಿದ್ರ್ಯ, ಮನೋವ್ಯಥೆ, ಚಾಂಚಲ್ಯ, ಕೋಪತಾಪಗಳು, ಸಮಾಜದಲ್ಲಿ ಸರಿಯಾದ ಸ್ಥಾನಮಾನಗಳು ದೊರೆಯದಿರುವದು, ಕುಟುಂಬದಲ್ಲಿ ವ್ಯವಸ್ಥೆಯಿಲ್ಲದಿರುವದು–ಮುಂತಾದ ಅನೇಕ ದುಃಖಕಾರಣಗಳಿರುತ್ತವೆ. ಅವೆಲ್ಲಕ್ಕೂ ಭಗವನ್ನಾಮಸಂಕೀರ್ತನೆಯು ದಿವ್ಯೌಷಧವಾಗಿರುತ್ತದೆ. 'ನಾರಾಯಣ'ನೆಂಬ ನಾಮವು ಉಪಲಕ್ಷಣವಾಗಿರುತ್ತದೆ. ಹರಿ, ರಾಮ, ಕೃಷ್ಣ, ಶಿವ–ಮುಂತಾದ ಪರಮೇಶ್ವರನ ನಾಮಗಳು ಅನಂತವಾಗಿವೆ. ಅವುಗಳಲ್ಲಿ ಯಾವದಾದರೊಂದು ನಾಮಕ್ಕಾದರೂ ಇಂಥ ದುಃಖನಾಶಕಶಕ್ತಿಯೇ ಇರುತ್ತದೆ. ಇಷ್ಟೇ ಅಲ್ಲ, ಉತ್ತಮ ಸುಖಪ್ರಾಪ್ತಿಗೂ ನಾಮಸಂಕೀರ್ತನೆಯು ಕಾರಣವಾಗಿರುತ್ತದೆ. ಹೀಗೆಂದು ಶ್ರುತಿಸ್ಮೃತಿಪುರಾಣಗಳಲ್ಲಿದೆ; ಅನುಭವಿಗಳಾದ ಭಕ್ತರು ಬರೆದ

ಗ್ರಂಥಗಳಲ್ಲಿಯೂ ವರ್ಣಿಸಿದೆ. ಆದ್ದರಿಂದ ಭಗವನ್ನಾಮದ ವಿಷಯದ ವಿಚಾರವು ಅನರ್ಥ ನಿವೃತ್ತಿಗೂ ಪುರುಷಾರ್ಥಪ್ರಾಪ್ತಿಗೂ ಒಂದು ಸುಲಭೋಪಾಯವನ್ನು ಹುಡುಕುತ್ತಿರುವವರಿಗೆಲ್ಲ ಆದರಣೀಯವಾಗಿರುತ್ತದೆ.

ನಾಮಸಂಕೀರ್ತನೆಯಲ್ಲಿರುವ ಒಂದು ವಿಶೇಷವೇನೆಂದರೆ ಇತರ ಸಾಧನಗಳಿಗೆ ಬೇಕಾಗಿರುವ ಯೋಗ್ಯತೆಯಾಗಲಿ ಆನುಕೂಲ್ಯವಾಗಲಿ ಇಲ್ಲದವರೂ ಇದನ್ನು ಅನುಸರಿಸಬಹುದು, ಪುರುಷಾರ್ಥವನ್ನೂ ಪಡೆಯಬಹುದು, "ಧರ್ಮಗಳಲ್ಲೆಲ್ಲ ಪರಮೋಚ್ಚವಾದ ಧರ್ಮವು ಯಾವದು?" ಎಂಬ ಧರ್ಮರಾಯನ ಪ್ರಶ್ನೆಗೆ ಭೀಷ್ಮಾಚಾರ್ಯರು "ಭಗವಂತನನ್ನು ಸ್ತೋತ್ರಗಳಿಂದ ಅರ್ಚನೆಮಾಡುತ್ತಿರುವದೇ ಪರಮಧರ್ಮವೆಂಬುದು ನನ್ನ ಮತವು" ಎಂದು ಉತ್ತರಕೊಟ್ಟಿರುತ್ತಾರೆ. ಇತರ ಸಾಧನಗಳಲ್ಲಿ ಕೆಲವಕ್ಕೆ ಹಿಂಸೆಯನ್ನು ಮಾಡುವದೂ ಅವಶ್ಯವಾಗಬಹುದು; ಅವಕ್ಕೆ ಬೇರೆಬೇರೆ ದ್ರವ್ಯಗಳ ಸಂಪತ್ತಿಯು ಇರಬೇಕಾಗಬಹುದು; ತನ್ನ ಸಹಾಯಕ್ಕೆ ಬೇರೆ ಕೆಲವರು ಜನರೂ ಇರಬೇಕಾಗಬಹುದು; ಇದಲ್ಲದೆ ಅವುಗಳನ್ನು ಮಾಡುವದಕ್ಕೆ ಜಾತಿ, ಲಿಂಗ, ವಯಸ್ಸು, ಆಶ್ರಮ, ವೇದಾಧ್ಯಯನ-ಮುಂತಾದವುಗಳೂ ಬೇಕೇಬೇಕಾಗಿರಬಹುದು. ಅವುಗಳನ್ನು ಮಾಡುವದಕ್ಕೆ ಶಾಸ್ತ್ರಜ್ಞಾನವೂ ಗುರೂಪದೇಶವೂ ದೇಶಕಾಲಾದಿಗಳ ನಿಯಮವೂ ಅವಶ್ಯವಾಗಬಹುದು. ಆದರೆ ನಾಮಕೀರ್ತನೆಗೆ ಈ ಯಾವ ಕಟ್ಟುಕಟ್ಟಳೆಯೂ ಇರುವದಿಲ್ಲ.

ಇನ್ನೊಂದು ದೃಷ್ಟಿಯಿಂದಲೂ ನಾಮಸಂಕೀರ್ತನೆಯು ಉತ್ತಮ ಸಾಧನವೆನಿಸಿರುತ್ತದೆ. ಅದೇನೆಂದರೆ ಈ ಕಲಿಕಾಲದಲ್ಲಿ ಮಿಕ್ಕ ಸಾಧನಗಳನ್ನು ಅನುಷ್ಠಾನ ಮಾಡುವದಕ್ಕೆ ಬೇಕಾದ ಯೋಗ್ಯತೆಯು ಮುಕ್ಕಾಲುಪಾಲು ಜನರಲ್ಲಿ ಇರುವದೇ ಇಲ್ಲ. ಒಂದಾನೊಂದು ಸ್ಮೃತಿವಾಕ್ಯವು ಹೀಗೆನ್ನುತ್ತಿದೆ : "ಕಲೌ ಕಲ್ಮಷಚಿತ್ತಾನಾಂ ಪಾಪದ್ರವ್ಯೋಪಜೀವಿನಾಮ್ । ವಿಧಿಕ್ರಿಯಾ ವಿಹೀನಾನಾಂ ಗತಿರ್ಗೋವಿನ್ದ-ಕೀರ್ತನಮ್ ॥" ಕಲಿಯುಗದಲ್ಲಿ ಜನರು ಚಿತ್ತದ ಕಾಲುಷ್ಯವುಳ್ಳವರಾಗಿರುತ್ತಾರೆ; ಅವರು ಪಾಪದ್ರವ್ಯದಿಂದಲೇ ಜೀವಿಸುತ್ತಿರುತ್ತಾರೆ; ವಿಧಿವತ್ತಾದ ಕ್ರಿಯೆಯನ್ನು ಮಾಡುತ್ತಲೇ ಇರುವದಿಲ್ಲ. ಅಂಥವರಿಗೆ ಗೋವಿಂದಕೀರ್ತನವೇ ಗತಿ ಎಂದು ಶ್ಲೋಕಕ್ಕೆ ಅರ್ಥ. ಚಿತ್ತದ ಕಾಲುಷ್ಯವು ಇರುವ ಜನರೇ ಕ್ರತುಯುಗದಲ್ಲಿ ಹೇರಳವಾಗಿರುತ್ತಾರೆ; ಆದ್ದರಿಂದ ಅವರು ಭಗವಂತನ ಧ್ಯಾನವನ್ನೇ ನೇರಾಗಿ ಮಾಡುತ್ತಿರಬಹುದು. ಮಿಕ್ಕ ಯುಗಗಳಲ್ಲಿ ವೇದಶಾಸ್ತ್ರಾಧ್ಯಾಯನವನ್ನು ಮಾಡುವದಕ್ಕೂ ಧರ್ಮದಿಂದ ಧನವನ್ನು ಸಂಪಾದಿಸುವದಕ್ಕೂ ಅವಕಾಶವು ಹೆಚ್ಚಾಗಿರುತ್ತದೆ. ಆದ್ದರಿಂದ ಅವರು ಆ ಧನಸಂಪತ್ತಿಯಿಂದ ಯಜ್ಞಾದಿಗಳನ್ನೂ ಭಗವಂತನ ಅರ್ಚನಾದಿಗಳನ್ನೂ ಮಾಡಬಹುದಾಗಿರುತ್ತದೆ. ಆದರೆ ಶುದ್ಧವಾದ ಚಿತ್ತವಾಗಲಿ

ಧರ್ಮದಿಂದ ಜೀವನವನ್ನು ಮಾಡುವದಕ್ಕೆ ಅವಕಾಶವಾಗಲಿ ಇಲ್ಲದ ಈ ಕಲಿಯುಗದಲ್ಲಿ ಯಾವ ಸಾಧನವನ್ನು ತಾನೆ ಮಾಡಿ ಭಗವಂತನನ್ನು ಒಲಿಸಬಹುದು? ಈಗ "ಪಾಪೋಽಹಂ ಪಾಪಕರ್ಮಾಹಂ ಪಾಪಾತ್ಮಾ ಪಾಪಸಂಭವಃ" ಎಂಬಂತೆ ಜನರು ಪಾಪದಲ್ಲಿ ಹುಟ್ಟಿ ಪಾಪದಲ್ಲಿಯೇ ಬೆಳೆದು ಪಾಪಮಯರಾಗಿರುತ್ತಾರೆ. ಅಂಥವರಿಗೆ ಪಾಪದ ಫಲವಾದ ದುಃಖದಿಂದ ಬಿಡುಗಡೆಯಾಗುವದಕ್ಕೂ ಸುಖಪ್ರಾಪ್ತಿಗೂ ಉಪಾಯವು ಯಾವದು?-ಎಂಬ ಪ್ರಶ್ನೆಯು ಆಗಾಗ್ಗೆ ಮುಂದೆ ಬಂದುನಿಂತುಕೊಳ್ಳುತ್ತಲೇ ಇರುವದು ಸ್ವಾಭಾವಿಕ ವಾಗಿದೆ. 'ಅವರಿಗೆ ಗೋವಿಂದಕೀರ್ತನವೇ ಗತಿ' ಎಂಬುದೇ ಉತ್ತರವು.

ಈ ಸಂದೇಶಕ್ಕೆ ಒಬ್ಬ ಸಜ್ಜನಮಹೋದಯರ ಪ್ರಶ್ನೆಯು ನಿಮಿತ್ತ ವಾಯಿತು. ಅವರು ಹೀಗೆಂದು ಕೇಳಿ ಒಂದು ಪತ್ರವನ್ನು ಬರೆದಿರುತ್ತಾರೆ: "ದೇವರ ಸ್ಮರಣೆಯನ್ನು ದುಃಖದಲ್ಲಿರುವವರು ಮಾಡಿದರೂ ಸದ್ಯಃ ದುಃಖದಿಂದ ಬಿಡುಗಡೆ ಯಾಗುತ್ತಿಲ್ಲ. ಸ್ಮರಣೆಗೆ ಅದೃಷ್ಟಫಲವನ್ನಷ್ಟೇ ಹೇಳಿದೆಯೊ, ಹೇಗೆ? ಭಾಗವತದಲ್ಲಿ ನಾಮೋಚ್ಚಾರಣೆಯು ಎಂಥ ದುಃಖಗಳನ್ನಾದರೂ ಹೋಗಲಾಡಿಸುತ್ತದೆ ಎಂದು ಹೇಳಿದೆಯಲ್ಲ !" ಈ ಪ್ರಶ್ನೆಗೆ ಉತ್ತರವನ್ನು ಕೊಡುವದಕ್ಕೆ ಭಗವದ್ಭಕ್ತರೇ ಸಮರ್ಥರು. ಮನಸ್ಸಿಗೆ ಸಮಾಧಾನವನ್ನು ಕೊಡುವ ಉತ್ತರವನ್ನು ಬರೆಯುವದಕ್ಕೆ ನಮ್ಮಂಥವರಿಗೆ ದೀರ್ಘವಾದ ಲೇಖನವೇ ಆದರೂ ಸಾಲದೆ ಇರಬಹುದು. ಆದರೂ ಇದೇ ಪ್ರಶ್ನೆಗೆ ಉತ್ತರವನ್ನು ಹುಡುಕುತ್ತಿರಬಹುದಾದ ಭ್ರಾತೃಗಳ ಸಲುವಾಗಿ ಕೆಲವು ಸೂಚನೆಗಳನ್ನಾದರೂ ಕೊಡಬೇಕೆಂದು ಈ ಸಂದೇಶವನ್ನು ಬರೆಯುವದಕ್ಕೆ ಕೈಹಾಕಿರುತ್ತೇನೆ.

ದುಃಖವು ಯಾವದೇ ಆಗಿರಲಿ, ಪರಮಾತ್ಮನ ನಾಮದ ಸಂಕೀರ್ತನೆಯಿಂದ ಅದು ಬಿಡುಗಡೆಯಾಗುವದೆಂಬುದು ನಿಃಸಂಶಯ. ಆದರೆ ಅದು ಸಂಕೀರ್ತನೆಯೇ ಆಗಿರಬೇಕೆಂಬುದು ಅವಶ್ಯವಾದ ಹೇತು. **ಸಂಕೀರ್ತನೆ** ಎಂದರೆ ಯಾವ ದೋಷವೂ ಇಲ್ಲದೆ ನಾಮವನ್ನು ಕೀರ್ತನಮಾಡುವದು. ಭಾಗವತಪುರಾಣದಲ್ಲಿ "ಯಾವ ದಾದರೊಂದು ಸಂಕೇತದಿಂದ, ಅಥವಾ ಹಾಸ್ಯಕ್ಕಾಗಿ, ಇಲ್ಲವೆ ಮಾತಿನ ನಡು ನಡುವೆ ಸುಮ್ಮನೆ ಸೇರಿಸಿಕೊಂಡು, ಕೊನೆಗೆ ಒಬ್ಬರನ್ನು ನಿಂದಿಸುವದಕ್ಕಾಗಿ ಪರಮಾತ್ಮನ ನಾಮಗ್ರಹಣವನ್ನು ಮಾಡಿದರೂ ಅದು ಪಾಪವನ್ನೆಲ್ಲ ನಾಶಗೊಳಿಸು ತ್ತದೆ" ಎಂದು ಹೇಳಿರುವದು ನಿಜ. ಅಜಾಮಿಲನ ಕಥೆಯಲ್ಲಿ ಮಗನ ಸಂಕೇತ ನಾಮವನ್ನುಚ್ಚರಿಸಿದ್ದರಿಂದ ಕೂಡ ಅವನಿಗೆ ಪಾಪನಾಶವಾಯಿತೆಂದೂ ಯಮ ದೂತರ ಭೀತಿಯು ತಪ್ಪಿತೆಂದೂ ಹೇಳಿರುವದೂ ನಿಜ. ಆದರೆ ಮನುಷ್ಯನು ಪಾಪವನ್ನು ನಾಮೋಚ್ಚಾರಣೆಯಿಂದ ಕಳೆದುಕೊಂಡರೂ ಮತ್ತೆಮತ್ತೆ ಪಾಪವನ್ನೇ

ಮಾಡುತ್ತಿದ್ದರೆ ಅವನಿಗೆ ಪಾಪದ ಫಲವಾದ ದುಃಖವು ಬಿಡುಗಡೆಯಾಗುವದೆಂದು ಎಲ್ಲಿಯೂ ಹೇಳಿಲ್ಲ. ಕೈಯಲ್ಲಿ ಎಲುಬನ್ನು ಹಿಡಿದುಕೊಂಡು ಗಂಗಾನದಿಯಲ್ಲಿ ಮುಳುಗುತ್ತಿದ್ದರೆ ಪಾವಿತ್ರ್ಯವು ಹೇಗೆ ದೊರಕಬೇಕು? ಇದನ್ನು ನಾವು ಆಲೋಚಿಸಬೇಕು. ತಪಸ್ಸು, ಬ್ರಹ್ಮಚರ್ಯ, ಶಮ, ದಮ, ತ್ಯಾಗ, ಸತ್ಯ, ಶೌಚ, ಯಮ, ನಿಯಮ-ಇವುಗಳೆಲ್ಲ ಪಾಪವನ್ನು ಹೋಗಲಾಡಿಸುವದಕ್ಕೆ ಉಪಾಯಗಳು; ಆದರೆ ಶ್ರದ್ಧಾತಾತ್ಪರ್ಯಗಳಿಂದ ಮಾಡಿದ ಭಗವಂತನ ಸೇವೆಯಿಂದ ಪಾಪವು ಇನ್ನೂ ಹೆಚ್ಚಿನ ವೇಗದಿಂದ ತೊಲಗುವದೆಂದು ಅದೇ ಭಾಗವತದಲ್ಲಿ ಹೇಳಿರುತ್ತದೆ. ಅಜಾಮಿಳನುಕೂಡ ಯಮದೂತರಿಂದ ಮುಕ್ತನಾದ ಬಳಿಕ ಹಿಂದಿನ ಪಾಪ ಕರ್ಮಕ್ಕೆ ಪಶ್ಚಾತ್ತಾಪಪಟ್ಟು ಗಂಗಾದ್ವಾರಕ್ಕೆ ಹೋಗಿ ಅಲ್ಲಿ ಭಗವಂತನ ಧ್ಯಾನ ದಿಂದಲೇ ಮುಕ್ತನಾದನೆಂದು ಬರೆದಿದೆ. ಆದ್ದರಿಂದ ನಾಮಕೀರ್ತನೆಯು ದುಃಖ ವನ್ನು ಕಳೆಯುವದೆಂಬುದು ನಿಜವಾದರೂ ಪರಮಾತ್ಮನ ನಾಮದ ಸಂಕೀರ್ತನೆಯು-ಭಗವತ್ಸ್ಮರಣಪೂರ್ವಕವಾದ ನಿರ್ದುಷ್ಟವಾದ ನಾಮ ಕೀರ್ತನೆಯು-ದುಃಖವನ್ನು ಸಂಪೂರ್ಣವಾಗಿ ಹೋಗಲಾಡಿಸುತ್ತದೆ ಎಂದು ತಿಳಿಯಬೇಕು.

ಭಗವನ್ನಾಮಸ್ಮರಣೆಯಿಂದ ನಮಗೆ ಆಗುವ ಲಾಭಕ್ಕೆ ಅಡ್ಡಿಯಾಗುವ ವರ್ತನೆ ಗಳನ್ನೆಲ್ಲ ನಾವು ಸಂಪೂರ್ಣವಾಗಿ ಬಿಟ್ಟುಬಿಡುವದರಿಂದ ಬೇಗನೆ ನಮಗೆ ಅದರ ಪ್ರಯೋಜನವು ಎದ್ದುಕಾಣುವದು. ತಿಳಿದು ಕೀರ್ತನಮಾಡಲಿ, ತಿಳಿಯದೆ ಕೀರ್ತನಮಾಡಲಿ, ನಾಮವು ಪಾಪವನ್ನು ಸುಟ್ಟು ಬೂದಿಗೈಯುತ್ತದೆ ಎಂಬುದು ನಿಶ್ಚಯ. ಇದು ಇಂಥ ಔಷಧಿ ಎಂದು ತಿಳಿಯದೆ ಸೇವನೆಮಾಡಿದರೂ ಅದರಿಂದ ರೋಗವು ವಾಸಿಯಾಗಿಯೇ ತೀರುತ್ತದೆ; ಆದರೆ ಅಪಥ್ಯವನ್ನು ಬಲವಾಗಿ ಮಾಡುತ್ತಿದ್ದರೆ ಔಷಧವು ಎಷ್ಟೇ ವೀರ್ಯವಂತವಾಗಿದ್ದರೂ ತನ್ನ ಕಾರ್ಯವನ್ನು ಮಾಡಲಾರದ್ದಾಗುವಂತೆ, ನಾಮಕ್ಕೆ ಒಗ್ಗದ ಅಪರಾಧಗಳನ್ನು ಮಾಡುತ್ತಿದ್ದರೆ ನಾಮವು ತನ್ನ ಫಲವನ್ನು ಕೂಡಲೆ ಕೊಡುವದಕ್ಕೆ ಅಶಕ್ತವಾಗುತ್ತದೆ. ಆದ್ದರಿಂದ ನಾಮವೆಂಬ ದಿವ್ಯೌಷಧವನ್ನು ಸೇವಿಸುವವರು ನಾಮಾಪರಾಧಗಳೆಂಬ ಅಪಥ್ಯ ಗಳನ್ನು ಮಾಡದಂತೆ ಎಚ್ಚರಿಕೆಯನ್ನು ತೆಗೆದುಕೊಳ್ಳಬೇಕು. ಈ ಶ್ಲೋಕದಲ್ಲಿ ಹತ್ತು ನಾಮಾಪರಾಧಗಳನ್ನು ಸಂಗ್ರಹಿಸಿದೆ :

**ಸನ್ನಿನ್ದಾಽಸತಿನಾಮವೈಭವಕಥಾ ಶ್ರೀಶೇಶಯೋರ್ಭೇದಧೀರಶ್ರದ್ಧಾ ಗುರುಶಾಸ್ತ್ರವೇದವಚನೇ ನಾಮ್ನ್ಯರ್ಥವಾದಭ್ರಮಃ । ನಾಮಾಸ್ತೀತಿ ನಿಷಿದ್ಧವೃತ್ತಿವಿಹಿತತ್ಯಾಗೌ ಚ ಧರ್ಮಾನ್ತರೈಃ ಸಾಮ್ಯಂ ನಾಮಜಪೇ ಶಿವಸ್ಯ ಚ ಹರೇರ್ನಾಮಾಪರಾಧಾ ದಶ ॥**

ಸತ್ಪುರುಷರನ್ನು ನಿಂದಿಸುವದು, ಅಸತ್ಪುರುಷರಾದ ನಾಸ್ತಿಕರಿಗೆ ನಾಮಮಹಿಮೆ ಯನ್ನು ಉಪದೇಶಿಸುವದು, ಶಿವವಿಷ್ಣುಭೇದವನ್ನು ಮಾಡಿ ಒಬ್ಬರ ಪುರಸ್ಕಾರಕ್ಕಾಗಿ

ಮತ್ತೊಬ್ಬರನ್ನು ಅನಾದರಮಾಡುವದು, ಗುರುವಚನ ಶಾಸ್ತ್ರವಚನ ವೇದವಚನಗಳಲ್ಲಿ ಶ್ರದ್ಧೆಯಿಲ್ಲದಿರುವದು, ನಾಮವು ಬರಿಯ ಅರ್ಥವಾದವೇ ಹೊರತು ಫಲಕಾರಿಯಲ್ಲವೆಂದು ಭ್ರಾಂತಿಪಡುವದು, ನಾಮದ ಬಲವಿದೆಯಲ್ಲ ಎಂದು ನಿಷಿದ್ಧ ಕರ್ಮವನ್ನು ಮಾಡುವದು, ನಾಮದ ಹೆಮ್ಮೆಯಿಂದ ವಿಹಿತವಾದ ಸ್ವಧರ್ಮವನ್ನು ತ್ಯಜಿಸುವದು, ನಾಮಜಪಕ್ಕೆ ಮಿಕ್ಕಧರ್ಮಗಳು ಸಮನೆಂದು ಹೋಲಿಸುವದು- ಇವು ಹತ್ತೂ ನಾಮಾಪರಾಧಗಳು. ಇವುಗಳಿಂದ ನಾಮಕೀರ್ತನೆಯು ನಮಗೆ ತನ್ನ ಫಲವನ್ನು ಬೇಗನೆ ಅಥವಾ ತಕ್ಕ ಪ್ರಮಾಣದಲ್ಲಿ ತೋರಿಸಲಾರದೆ ಹೋಗುತ್ತದೆ.

ನಾಮವನ್ನು ಸಾಮಾನ್ಯಬುದ್ಧಿಯಿಂದ ಜಪಿಸುತ್ತಿದ್ದರೂ ಅದು ನಿಷ್ಫಲವೆಂದು ಭಾವಿಸಬಾರದು. ಕ್ರಮಕ್ರಮವಾಗಿ ಅದರಿಂದ ನಾಮವನ್ನು ಭಕ್ತಿಯಿಂದ ಸ್ಮರಿಸುವದಕ್ಕೂ ಪರವಶನಾಗಿ ಕೀರ್ತನಮಾಡುವದಕ್ಕೂ ಉತ್ತೇಜನೆಯು ದೊರೆಯುತ್ತದೆ. ನಾಮಾಪರಾಧಗಳನ್ನು ಮಾಡುತ್ತಿರುವವರು ಕೂಡ ನಾಮಜಪವನ್ನು ಮಾಡುವದು ನಿಷ್ಫಲವಲ್ಲ; ಒಂದು ದೊಡ್ಡ ಕಟ್ಟಿಗೆಯ ರಾಶಿಯಲ್ಲಿರುವ ಒಂದು ಕಿಡಿಯೇ ಅವಕಾಶವು ದೊರೆತರೆ ಮೆಲ್ಲಮೆಲ್ಲಗೆ ಕಟ್ಟಿಗೆಗೆಲ್ಲ ಹತ್ತಿಕೊಳ್ಳಬಹುದಾಗಿರುವಂತೆ ಆ ನಾಮಜಪವೇ ನಾಮಸ್ಮರಣೆಯಾಗಿ ಪರಿಣಮಿಸಿ ನಾಮಾಪರಾಧಗಳಿಂದಾಗಿರುವ ಪಾಪವನ್ನೂ ಕಳೆದು ದುಃಖವನ್ನೆಲ್ಲ ನಾಶಗೊಳಿಸಬಹುದಾಗಿರುತ್ತದೆ. ಆದರೆ ವಿವೇಕಿಯಾದವನು ಯಾವನು ತಾನೆ ತಿಳಿದುತಿಳಿದೂ 'ನಾಮಸ್ಮರಣೆಯ ಫಲವಾಗಬೇಕು, ಆದರೆ ನಾಮಾಪರಾಧಗಳನ್ನು ಬಿಡಲೊಲ್ಲೆನು' ಎಂದಾನು?

ದುಃಖಗಳು ಹೆಚ್ಚಿದಾಗ ಭಗವಂತನ ನಾಮವನ್ನು ಕೀರ್ತನಮಾಡುವದೂ, ಜಪಿಸುವದೂ, ಸ್ಮರಣೆಮಾಡುವದೂ ಆ ದುಃಖಗಳ ಶಾಂತಿಗೆ ಕಾರಣವಾಗುವದರಲ್ಲಿ ಸಂಶಯವೇನೂ ಇಲ್ಲ. ನಾಮಾಪರಾಧಗಳನ್ನು ಮಾಡದೆ ಇದ್ದರೂ ದುಃಖದ ಶಾಂತಿಯಾಗಿಲ್ಲವಲ್ಲ !- ಎಂದು ಕೆಲವರಿಗೆ ಆಶ್ಚರ್ಯವಾಗಬಹುದು. ಆದರೆ ಅಪರಾಧಗಳನ್ನು ಬಿಡುವದು ಮಾತ್ರವಲ್ಲ; ನಾಮದ ಮಾಹಾತ್ಮ್ಯವನ್ನು ತಿಳಿದೇ ಅದನ್ನು ಉಪಯೋಗಿಸಿಕೊಳ್ಳುವದರಲ್ಲಿ ಹೆಚ್ಚಿನ ಲಾಭವಿದೆ. ನಾಮವು ಭಗವಂತನ ನಾಮವೆಂಬುದನ್ನು ಮರೆಯದಿರಬೇಕು; ಭಗವಂತನು ನಾಮರೂಪಗಳಾಗಿ ತೋರುತ್ತಿರುವ ಪ್ರಪಂಚಕ್ಕೆಲ್ಲ ಮೂಲಕಾರಣವಾಗಿರುವದರಿಂದ ಸಕಲ ನಾಮರೂಪಗಳೂ ಅವನೇ ಆಗಿರುತ್ತಾನೆ. ಅದರಲ್ಲಿ ಭಗವನ್ನಾಮಗಳೆಂದು ಶ್ರುತಿಸ್ಮೃತಿಪುರಾಣಗಳಲ್ಲಿ ಪ್ರಸಿದ್ಧವಾಗಿರುವ ನಾಮಗಳು ಅವನ ಹೊರಗಿನ ರೂಪಗಳೇ ಆಗಿರುತ್ತವೆ; ಏಕೆಂದರೆ ಆ ನಾಮಗಳು ಮಹಾಭಗವದ್ಭಕ್ತರುಗಳು ತಮ್ಮ ಪ್ರೇಮದ ಮೂಲಕ ಕಂಡುಕೊಂಡು ಜಪಿಸಿದವುಗಳಾಗಿವೆ. ಭಗವಂತನು ನಾಮದ ರೂಪದಿಂದ ಸತ್ಪುರುಷರ ನಾಲಗೆಯಮೇಲೆ ನಲಿಯುತ್ತಿರುವನು; ಅವರ ಉಪದೇಶ

ದಿಂದ ಸಾಧಕರ ಕರ್ಣರಂಧ್ರದ ಮೂಲಕ ಅವರ ಹೃದಯದಲ್ಲಿ ಪ್ರವೇಶಿಸುವನು. ಆದ್ದರಿಂದ ಸಕಲದುಃಖಗಳಿಗೂ ಬಡವಾನಲನಾಗಿರುವದು ಭಗವನ್ನಾಮವೆಂದು ನಂಬಬೇಕು. ಇಷ್ಟೇ ಅಲ್ಲ, ಆನಂದಘನನಾದ ಭಗವಂತನ ವಿಭೂತಿಯೇ ನಾಮವು. ಅದು ನಮ್ಮ ಹೃದಯದಲ್ಲಿ ಕುಳಿತರೆ, ಅದರ ಉಚ್ಚಾರಣೆಯು ನಮ್ಮ ನಾಲಗೆಯಲ್ಲಿ ಆದರೆ, ಆಗ ದುಃಖಕ್ಕೆ ಅವಕಾಶವೆಲ್ಲಿಯದು ?

ಇನ್ನೊಂದು ವಿಷಯ. ನಾವು ದಾರಿದ್ರ್ಯದಿಂದ ಸಂಕಟಪಡುತ್ತಿರುವಾಗ, ರೋಗ ದಿಂದ ನರಳುತ್ತಿರುವಾಗ, ಯಾವದಾದರೂ ಅಂಜಿಕೆಯಿಂದ ಕುಗ್ಗಿರುವಾಗ, ಅಥವಾ ಮತ್ತೆ ಯಾವದಾದರೂ ದುಃಖಕಾರಣದಿಂದ ತಳಮಳಗೊಳ್ಳುತ್ತಿರುವಾಗ, ಭಗವನ್ನಾಮವು ಅದನ್ನು ಪರಿಹರಿಸಬಲ್ಲದೆಂಬ ದೃಢವಾದ ನಂಬಿಕೆಯು ಉಂಟಾಗದಿರುವದಕ್ಕೆ ಒಂದು ಕಾರಣವಿದೆ. ನಾವು ಭಗವನ್ನಾಮದಲ್ಲಿ ನಮ್ಮ ಆದರವನ್ನು ಇಡುವದಕ್ಕಿಂತಲೂ ನಮ್ಮ ದುಃಖದಲ್ಲಿಯೇ ಹೆಚ್ಚು ಆದರವನ್ನು ತೋರಿಸುವ ಸಂಭವವುಂಟು. ಇದಕ್ಕೊಂದು ಉದಾಹರಣೆಯನ್ನು ತೆಗೆದು ಕೊಳ್ಳೋಣ. ಒಬ್ಬ ಮನುಷ್ಯನು ಈ ಶ್ಲೋಕವನ್ನು ನಿತ್ಯವೂ ಪಠಿಸುತ್ತಾನೆಂದೂ ಇದರ ಅರ್ಥವೂ ಅವನಿಗೆ ತಿಳಿದಿದೆಯೆಂದೂ ಇಟ್ಟುಕೊಳ್ಳಿರಿ :

**ದರಿದ್ರೋऽಸ್ಮ್ಯಭದ್ರೋऽಸ್ಮಿ ಭಗ್ನೋऽಸ್ಮಿ ದೂಯೇ ವಿಷಣ್ಣೋऽಸ್ಮಿ ಭಿನ್ನೋऽಸ್ಮಿ ಖಿನ್ನೋऽಸ್ಮಿ ಚಾಹಮ್ ।**
**ಭವಾನ್ ಪ್ರಾಣಿನಾಮನ್ತರಾತ್ಮಾಸಿ ಶಂಭೋ ಮಮಾಧಿಂ ನ ವೇತ್ಸಿ ಪ್ರಭೋ ರಕ್ಷಮಾಂ ತ್ವಮ್॥**

"ದೇವನೆ, ನಾನು ಬಡವನು, ಪಾಪಿಯು, ಭಗ್ನನಾಗಿರುತ್ತೇನೆ, ದುಮ್ಮಾನ ದಿಂದಿರುವೆನು, ವಿಷಾದಹೊಂದಿರುವೆನು, ಭಿನ್ನನಾಗಿದ್ದೇನೆ, ಖಿನ್ನನಾಗಿದ್ದೇನೆ, ನೀನು ಪ್ರಾಣಿಗಳಿಗೆ ಅಂತರಾತ್ಮನಾಗಿರುವೆ, ನನ್ನ ಸಂಕಟವು ನಿನಗೆ ತಿಳಿಯದೆ? ಪ್ರಭುವೆ, ನನ್ನನ್ನು ಕಾಪಾಡು !"

ಈ ಶ್ಲೋಕದ ಅಭಿಪ್ರಾಯವನ್ನು ಮನದಲ್ಲಿ ಹೊರಳಾಡಿಸುವಾತನು ತನ್ನ ಬಡತನ, ಪಾಪ-ಮುಂತಾದವುಗಳನ್ನೇ ಪ್ರಾರ್ಥನೆಯ ಕಾಲದಲ್ಲಿ ಮನಸ್ಸಿನಲ್ಲಿ ಎತ್ತಿಹಿಡಿದಿದ್ದರೆ ಅವು ಅವನ ಮನಸ್ಸಿನಲ್ಲಿ ಮತ್ತಷ್ಟು ಬಲವಾಗಿ ಕೂತುಕೊಳ್ಳುವವು. ಮನುಷ್ಯನು ತಾನು ಮಾಡಿರುವ ಪಾಪದ ಫಲವಾಗಿಯೇ ಈಗ ದುಃಖವನ್ನು ಅನುಭವಿಸುತ್ತಿರುತ್ತಾನೆ. ಪಾಪವೆಂದರೆ ಸ್ವಾರ್ಥಬುದ್ಧಿಯಿಂದ ವಿಷಯಗಳನ್ನು ಹೇಗಾದರೂ ಅನುಭವಿಸಬೇಕೆಂಬ ಬುದ್ಧಿ; ಭಗವಂತನ ಸ್ಮರಣೆಯಿಲ್ಲದಿರುವದೇ ಈ ಸ್ವಾರ್ಥಕ್ಕೆ ಕಾರಣ. ಪಾಪದ ಫಲವಾದ ದುಃಖಸ್ಮರಣೆಯೂ ಪಾಪದ ಫಲವೇ. ಆದ್ದರಿಂದ ಅದರಿಂದ ಮನಸ್ಸಿನಲ್ಲಿ ಪಾಪವೇ ಮತ್ತೂ ನೆಟ್ಟುಕೊಳ್ಳುತ್ತದೆ ! ನಮ್ಮ ಹೊರಗೂ ಪಾಪದ ಫಲಗಳೇ ಕಾಣಿಸಿಕೊಳ್ಳುತ್ತವೆ.

ಇದಕ್ಕೆ ಬದಲು ಭಗವಂತನು ಎಲ್ಲಾ ಪ್ರಾಣಿಗಳಿಗೂ ಅಂತರಾತ್ಮನಾಗಿರುತ್ತಾನೆ; ಆತನಿಗೆ ನಮಗೇನು ಬೇಕೆಂಬುದು ತಿಳಿದೇ ಇದೆ; ಆದ್ದರಿಂದ ನಾವುಗಳೆಲ್ಲರೂ ಆತನ ಮಕ್ಕಳಾಗಿ ಬಾಳಬೇಕೆಂದೇ, ಆತನ ಐಶ್ವರ್ಯ, ಮಂಗಲ ಸ್ವರೂಪ, ಆನಂದ, ಸಂತೋಷ, ಉತ್ಸಾಹ, ಧೈರ್ಯ, ಸ್ಥೈರ್ಯ-ಮುಂತಾದವುಗಳಲ್ಲಿ ಸಮಭಾಗಿಗಳಾಗಿರಬೇಕೆಂದೇ ಆತನ ಸಂಕಲ್ಪವಿದೆ. ಈಗ ನಾನು ಭಗವಂತನ ಬಳಿಯಲ್ಲಿದ್ದೇನೆ, ಆತನನ್ನು ಸ್ತೋತ್ರಮಾಡುತ್ತಿದ್ದೇನೆ. ಆದ್ದರಿಂದ ಆತನ ಅಂಶ ಭೂತನಾದ ನನ್ನಲ್ಲಿ ಯಾವ ಬಡತನವಾಗಲಿ, ಬೇನೆಯಾಗಲಿ, ಅಂಜಿಕೆಯಾಗಲಿ, ದುಗುಡದುಮ್ಮಾನಗಳಾಗಲಿ ಇರಲು ಕಾರಣವೇ ಇಲ್ಲ-ಎಂಬುದನ್ನು ಮನದಂದು ಕೊಂಡರೆ ಕೂಡಲೆ ದುಃಖಗಳು ನಿಶ್ಶೇಷವಾಗಿ ಮಾಯವಾಗಿಬಿಡುವವು.

ಈ ತತ್ತ್ವವನ್ನು ತಿಳಿದವರು ಭಗವಂತನ ನಾಮಸ್ಮರಣೆಯನ್ನು ಮಾಡಿದರೂ ದುಃಖವು ಹೋಗಲಿಲ್ಲವಲ್ಲ !-ಎಂದು ಕಳವಳಪಡಬಾರದು, ಭಗವಂತನ ನಾಮಕ್ಕೆ ಅದೃಷ್ಟಫಲವು ಮಾತ್ರ ಇರುವಂತೆ ತೋರುತ್ತಿದೆ ಎಂದು ನಾಮದ ಶಕ್ತಿಯ ವಿಷಯಕ್ಕೆ ಅವಿಶ್ವಾಸವನ್ನೂ ತೋರಿಸಬಾರದು. ನಮ್ಮ ದುಃಖಗಳು, ರೋಗಗಳು, ಆಶಾಭಂಗಗಳು, ಬಡತನ-ಮುಂತಾದವುಗಳ ಚಿಂತೆಯನ್ನು ಮನಸ್ಸಿಗೆ ಸ್ವಲ್ಪವೂ ಹತ್ತಿಸಿಕೊಳ್ಳದೆ ಆನಂದಧಾಮನಾದ ಆ ಭಗವಂತನನ್ನು ಮಾತ್ರ ಹೃದಯದಲ್ಲಿಟ್ಟು ಕೊಳ್ಳುವದಕ್ಕೆ ಯತ್ನಿಸಬೇಕು. 'ನಮಗೆ ಕಷ್ಟಗಳು ಎಷ್ಟುಬೇಕಾದರೂ ಬರಲಿ, ಆತನ ಅಮೃತತುಲ್ಯವಾದ ನಾಮಸ್ಮರಣೆಯೊಂದಿರಲಿ' ಎಂದುಕೊಳ್ಳುತ್ತಿರಬೇಕು; ಆಗ ಆ ಕಷ್ಟಗಳು ಕಷ್ಟಗಳಲ್ಲದೆಹೋಗುವವು. ಅಷ್ಟೇ ಅಲ್ಲ, ಅವುಗಳೇ ಆನಂದದ ಅರಮನೆಗೆ ಹೋಗುವ ಹೆಬ್ಬಾಗಿಲುಗಳಾಗುವವು.

****

# 3. ಅಧ್ಯಾತ್ಮ ಪ್ರಗತಿಯ ಮಾರ್ಗಗಳು

## 25. ಅಧ್ಯಾತ್ಮ ಗ್ರಂಥಗಳ ಚಿಂತನೆ

ವಾಚಕಮಹಾಶಯರಿಗೆಲ್ಲ ನಾರಾಯಣಸ್ಮರಣೆಗಳು. ಮುಂದೆ ಯಾವ ಯಾವ ಹೊಸ ವಿಷಯಗಳು ಬರುವವೋ ಎಂದು ತಾವುಗಳು ಕುತೂಹಲಯುಕ್ತರಾಗಿರುವದು ಯುಕ್ತವಾಗಿದೆ. ಆದರೆ ಪರಮಾರ್ಥವು ಎಂದೆಂದಿಗೂ ಇರತಕ್ಕದ್ದಾದ್ದರಿಂದ ಅದು ಹೊಸ ವಿಷಯವಾಗಲಾರದು. ನಮ್ಮೆಲ್ಲರಿಗೂ ಆತ್ಮನಾಗಿರುವ ಪರಮೇಶ್ವರನ ವಿಷಯವಾದ ಲೇಖನ ಹಳೆಯದೆಲ್ಲಕ್ಕಿಂತಲೂ ಹಳೆಯದಾಗಿರುವ ಈ ಆತ್ಮತತ್ತ್ವವೇ ಮತ್ತೆಮತ್ತೆ ವಿಚಾರಕ್ಕೆ ಬರುವದು ಸ್ವಾಭಾವಿಕವಾಗಿರುತ್ತದೆ.

ಹೀಗಿದ್ದರೂ ನಮಗೆ ಅಧ್ಯಾತ್ಮವಿಚಾರವು ಬೇಸರವನ್ನುಂಟುಮಾಡತಕ್ಕದ್ದಲ್ಲ ವೆಂಬುದನ್ನು ನಾವು ಮರೆಯಬಾರದು. ಇದು ಯಾರಿಗೆ ಆಗಲೇ ತಿಳಿದಿಲ್ಲವೋ ಅವರಿಗೆ ಇದೊಂದು ಹೊಸವಿಷಯವೂ ಆಗಿರುವದು. ಬಹಳ ಹಿಂದಿನದು, ಅತ್ಯಂತವಾಗಿ ಹಳೆಯದು–ಎಂಬುದನ್ನು ಸಂಸ್ಕೃತದಲ್ಲಿ 'ಪುರಾಣ' ಎಂಬ ಶಬ್ದ ದಿಂದ ಕರೆಯುತ್ತಾರೆ. ಈ ಅರ್ಥದಲ್ಲಿ ಪರಮಾತ್ಮನು ಅತ್ಯಂತ ಪುರಾಣನು. ಅವನನ್ನು ತಿಳಿಸುವ ವೇದವೂ ಪುರಾಣವೇ. ಪರಮಾತ್ಮನ ಗುಣಕರ್ಮಲೀಲೆ ಗಳನ್ನು ಪ್ರಕಟಿಸುವ ಕೆಲವು ಗ್ರಂಥಗಳನ್ನು ಪುರಾಣಗಳೆಂದೇ ನಮ್ಮ ಹಿರಿಯರು ಕರೆದಿರುತ್ತಾರೆ. ಆದರೆ ಆತ್ಮತತ್ತ್ವವು ಹೀಗೆ ಪುರಾಣವಾಗಿದ್ದರೂ ಈಗ ನಮಗೆ ಯಾವ ಕೆಲಸಕ್ಕೂ ಬಾರದೆಂದಾಗಲಿ, ಅದರ ವಿಚಾರದಿಂದ ನಮ್ಮ ಮುಂದಿನ ಜೀವನಕ್ಕೆ ಯಾವ ಪ್ರಯೋಜನವೂ ಆಗುವಹಾಗಿಲ್ಲವೆಂದಾಗಲಿ ನಾವು ಭಾವಿಸುವದಕ್ಕೆ ಬರುವದಿಲ್ಲ. ಭಗವದ್ಗೀತೆಯಲ್ಲಿ ಆತ್ಮನನ್ನು 'ಅಜನು, ನಿತ್ಯನು, ಶಾಶ್ವತನು, ಪುರಾಣನು' ಎಂದು ಕರೆದಿರುತ್ತದೆ. ಶ್ರೀಶಂಕರಾಚಾರ್ಯರವರು ಅಲ್ಲಿರುವ ಪುರಾಣವೆಂಬ ವಿಶೇಷಣವನ್ನು ವಿವರಿಸುವಾಗ 'ಪುರಾಪಿ ನವ ಏವ' ಹಿಂದಕ್ಕೂ ಹೊಸಬನೇ ಎಂದು ಬರೆದಿರುತ್ತಾರೆ. ಆತ್ಮತತ್ತ್ವವು ಹಿಂದಕ್ಕೆ ಹೊಸದೇ, ಈಗಿನ ಕಾಲಕ್ಕೂ ಹೊಸದೇ, ಮುಂದಕ್ಕೂ ಹೊಸದೇ; ಏಕೆಂದರೆ ಅದು ಭೂತಭವಿಷ್ಯ ದ್ವರ್ತಮಾನಕಾಲಗಳನ್ನು ಮೀರಿರುವದಾಗಿದ್ದರೂ ಕಾಲತ್ರಯದಲ್ಲಿಯೂ ಪ್ರತಿ ಯೊಬ್ಬನೂ "ಈಗ ಇದು ತಿಳಿಯಿತು; ಇದೆಂಥ ಅಮೋಘತತ್ತ್ವವು ! ಇದನ್ನು ಅರಿಯದಿದ್ದರೆ ಎಂಥ ನಷ್ಟವಾಗುತ್ತಿತ್ತು !" ಎಂದು ಪ್ರೇಮದಿಂದ ಸ್ವಾಗತಿಸುವಂತೆ ಇರುತ್ತದೆ.

ಪರಮಾತ್ಮನ ವಿಚಾರವಾದ ವೇದವಾಗಲಿ, ಪುರಾಣವಾಗಲಿ, ಅಥವಾ ಆಧುನಿಕಗ್ರಂಥವಾಗಲಿ ಬೇಸರವನ್ನುಂಟುಮಾಡುವದು ಏಕೆಂದರೆ, ಓದುವವನ

ಮನಸ್ಸು ಈ ತತ್ತ್ವವನ್ನು ತನ್ನದಾಗಿ ಮಾಡಿಕೊಳ್ಳುವಷ್ಟು ಮೇಲುಮಟ್ಟಕ್ಕೆ ಏರಿರುವದಿಲ್ಲ; ಅಥವಾ ಅದನ್ನು ಅರಿಯವುದಕ್ಕೆ ಬೇಕಾದ ಸಂಸ್ಕಾರವನ್ನು ಹೊಂದಿಯೇ ಇರುವದಿಲ್ಲ. ಈಚೆಗೆ ಬರೆದಿರುವ ಅಧ್ಯಾತ್ಮಲೇಖನಗಳು ಬರೆದವರ ದೋಷಗಳಿಂದಲೂ ಬೇಸರವನ್ನುಂಟುಮಾಡಬಹುದು ನಿಜ. ಆದರೆ ಲೇಖನದಲ್ಲಿ ಯಾವ ಸ್ವಾರಸ್ಯವೂ ಇಲ್ಲ ಎಂದು ಅತ್ತ ಒಗೆಯುವ ಮೊದಲು ಅಧ್ಯಾತ್ಮಗ್ರಂಥಗಳನ್ನು ಓದುವದಕ್ಕೆ ಬೇಕಾದ ಸಿದ್ಧತೆಯು ನಮ್ಮಲ್ಲಿದೆಯೆ, ಅವುಗಳನ್ನು ಓದಬೇಕಾದ ಕ್ರಮವನ್ನು ನಾವು ಅನುಸರಿಸುತ್ತಿದ್ದೇವೆಯೆ? ಎಂಬ ಪ್ರಶ್ನೆಗೆ ಉತ್ತರವನ್ನು ಹೇಳಿಕೊಳ್ಳಬೇಕಾದದ್ದು ಅವಶ್ಯ.

ಅಧ್ಯಾತ್ಮಗ್ರಂಥಗಳನ್ನು ಓದಿ ಲಾಭವನ್ನು ಪಡೆಯಬೇಕೆಂದಿರುವವರಿಗಾಗಿ ಈ ಸಂದೇಶದಲ್ಲಿ ಕೆಲವು ಸೂಚನೆಗಳನ್ನು ಕೊಡುವೆನು. ಇವು ಆಗಲೆ ತಮಗೆ ತಿಳಿದಿದ್ದವೆನ್ನುವ ವಾಚಕರಿಗೆ ಮತ್ತೆ ನೆನಪಿಗೆ ತಂದ ಸೇವೆಯು ನನ್ನದಾಗುವದು; ತಿಳಿಯದೆ ಇರುವವರು ಲಕ್ಷ್ಯವಿಟ್ಟು ಅವುಗಳನ್ನು ಮನಸ್ಸಿನಲ್ಲಿ ಹೊರಳಾಡಿಸಿ ಮುಂದೆ ಓದುವಾಗ ಅವುಗಳನ್ನು ಉಪಯೋಗಿಸಿ ನೋಡಬೇಕೆಂದು ಪ್ರಾರ್ಥಿಸುತ್ತೇನೆ.

ಅಧ್ಯಾತ್ಮದ ಗ್ರಂಥಗಳು ಹಳೆಯವಾಗಿದ್ದರೆ, ಉದಾಹರಣೆಗೆ ಉಪನಿಷತ್ತುಗಳು, ಭಗವದ್ಗೀತೆ-ಇಂಥವುಗಳಾಗಿದ್ದರೆ, ಅವನ್ನು ಸಾವಧಾನವಾಗಿ ಮತ್ತೆಮತ್ತೆ ಓದುತ್ತಿರಬೇಕು. ಕಬ್ಬನ್ನು ಜಗಿದಹಾಗೆಲ್ಲ ಅದರ ಸ್ವಾದವು ನಾಲಗೆಗೆ ಹತ್ತುವಂತೆ ಆ ಗ್ರಂಥಗಳನ್ನು ಮತ್ತೆಮತ್ತೆ ಓದುವದರಿಂದ ಅವುಗಳ ಸವಿಯು ಹೆಚ್ಚುಹೆಚ್ಚಾಗಿ ಗೊತ್ತಾಗುವದು. ಆದರೆ ಅಂಥ ಗ್ರಂಥಗಳನ್ನು ಹೀಗೆ ಪಾರಾಯಣಮಾಡುವದಕ್ಕಿಂತ ಮೊದಲು ಅವುಗಳ ಸವಿಯನ್ನು ಬಲ್ಲವರಿಂದ ಉಪದೇಶವನ್ನು ಪಡೆಯಬೇಕು; ಎಂದರೆ ಆ ಗ್ರಂಥಗಳನ್ನು ಹೇಗೆ ಓದಿದರೆ ನಮಗೆ ಲಾಭವಾಗುತ್ತದೆ, ಅವುಗಳಲ್ಲಿ ಹೇಳಿರುವ ತತ್ತ್ವದ ಸ್ವರೂಪವು ಯಾವದು?- ಎಂಬುದನ್ನು ಮೊದಲೇ ಅವರಿಂದ ಕೇಳಿ ತಿಳಿದುಕೊಂಡಿರಬೇಕು.

ಅಧ್ಯಾತ್ಮಗ್ರಂಥಗಳಲ್ಲಿ ಭಾಷೆಯು ಮುಖ್ಯವಲ್ಲ. ವ್ಯಾಕರಣ, ಅಲಂಕಾರ, ಶಬ್ದಚಿತ್ರ-ಮುಂತಾದವುಗಳನ್ನೇ ಮುಖ್ಯವೆಂದು ಇಟ್ಟುಕೊಂಡು ಅವುಗಳನ್ನು ಓದಬಾರದು. ಕಾವ್ಯಚಂಪೂನಾಟಕಗಳನ್ನು ಓದಿರುವ ಅಭ್ಯಾಸದಿಂದ "ಇಲ್ಲಿ ಪ್ರಕ್ರಮಭಂಗವಾಗಿಲ್ಲವೆ? ಇಲ್ಲಿ ಪ್ರಯೋಗಿಸಿರುವ ಶಬ್ದವು ಸಾಧುವಾಗಿದೆಯೆ? ಇಲ್ಲಿ ಒಂದು ಅನುಪ್ರಾಸವಿದ್ದರೆ ಚೆನ್ನಾಗಿತ್ತಲ್ಲವೆ?"-ಎಂದು ಮುಂತಾಗಿ ವಿಚಾರಿಸುತ್ತಾ ಕೂರುವದು ನಮಗೆನಾವೇ ಅನ್ಯಾಯವನ್ನು ಮಾಡಿಕೊಂಡಂತೆ ಆಗುವದು. ಭಾಷೆಯನ್ನು ಲೆಕ್ಕಿಸದೆಯೇ ಅಂಥ ಗ್ರಂಥಗಳೆಲ್ಲ ರಚಿತವಾಗಿವೆ ಎಂಬುದು ನನ್ನ ಅಭಿಪ್ರಾಯವಲ್ಲ, ಆದರೆ ಅವುಗಳಲ್ಲಿರುವ ಶೈಲಿ, ರೀತಿ, ಅಲಂಕಾರ, ಗುಣ-

ಮುಂತಾದವುಗಳನ್ನು ಲಕ್ಷಿಸುವದಕ್ಕಿಂತಲೂ ಅವುಗಳಲ್ಲಿ ಅಡಗಿರುವ ಅರ್ಥವು ಯಾವದು? ಅದರ ತಿಳಿವಳಿಕೆಯಿಂದ ನಮಗೆ ಆಗುವ ಲಾಭವೇನು? ಎಂಬುದರ ಕಡೆಗೇ ಹೆಚ್ಚಿನ ಗಮನವಿರಬೇಕು. ಒಂದು ದೋಣಿಯ ಸುತ್ತಲೂ ಬಣ್ಣದ ಚಿತ್ರವಿದ್ದ ಮಾತ್ರದಿಂದ ಅದು ನಮ್ಮನ್ನು ನದಿಯ ದಡಕ್ಕೆ ಒಯ್ಯುವದೆಂಬ ಭರವಸೆಯಿರುವದಿಲ್ಲ; ಯಾವ ಚಿತ್ರವೂ ಇಲ್ಲದ ಬರಿಯ ದೋಣಿಯಾದ ಮಾತ್ರದಿಂದ ಅದು ನಮ್ಮನ್ನು ಪಾರುಗಣಿಸಲಾರದು ಎಂದು ತೀರ್ಮಾನಿಸುವದೂ ಯೋಗ್ಯವಾಗಲಾರದು. ಅಲ್ಲವೆ?

ಒಂದು ಬಯಲನ್ನು ಅಥವಾ ಕಾಡನ್ನು ಕಂಡರೆ ಅದರೊಳಗೆ ಬಂಗಾರದ ಅಥವಾ ವಜ್ರದ ಗಣಿಯೊಂದಿದೆ ಎಂಬುದು ಎಲ್ಲರಿಗೂ ಸುಲಭವಾಗಿ ತಿಳಿಯು ವದಿಲ್ಲ. ಆ ಸ್ಥಲದ ಮೇಲುಮೈಯನ್ನು ಮಾತ್ರಕಂಡು 'ಇಲ್ಲಿಂದ ಆದಷ್ಟು ಬೇಗನೆ ಮತ್ತೆಲ್ಲಿಗಾದರೂ ಹೋಗೋಣ' ಎಂಬ ಯೋಚನೆಯು ಬಹುಜನರಿಗೆ ಉಂಟಾಗ ಬಹುದು. ಆದರೆ ಸರಿಯಾದ ಭೂಸ್ವಭಾವವನ್ನು ಬಲ್ಲ ಕ್ಷೇತ್ರಜ್ಞರು ಅಲ್ಲಿ ಬಿದ್ದಿರುವ ಕಲ್ಲುಗಳೇ ಮುಂತಾದವುಗಳ ಸ್ವಭಾವದಿಂದ ಇಲ್ಲಿ ಅಮೋಘವಾದ ಪದಾರ್ಥವು ಸಿಕ್ಕುವ ಸಂಭವವಿದೆ ಎಂದು ಆಳವಾಗಿ ಅಗೆದು ನೋಡುವರು, ಇದರಂತೆ ಅಧ್ಯಾತ್ಮಗ್ರಂಥಗಳನ್ನು ಮೇಲೆಮೇಲೆ ನೋಡುವವರಿಗೆ ಭಾಷೆ ಮುಂತಾದವುಗಳ ಸೌಂದರ್ಯವು ಗೋಚರವಾಗದೆ ಸ್ವಲ್ಪ ಬೇರಸವನ್ನುಂಟುಮಾಡಿದರೂ ಮಾಡ ಬಹುದು. ಆದರೆ ತತ್ತ್ವವಿಚಾರಕರಾದವರ ಸಂಗವನ್ನು ಮಾಡಿದ ವಿವೇಕಿಗಳು ಒಳಹೊಕ್ಕು ನೋಡಿ ಅವುಗಳಲ್ಲಿರುವ ತತ್ತ್ವರತ್ನಗಳನ್ನು ಕಂಡುಕೊಳ್ಳುವರು.

ಭಗವದ್ಗೀತೆಯಂಥ ಗ್ರಂಥದಲ್ಲಿ ಭಾಷೆಯೂ ಸುಂದರವಾಗಿರಬಹುದು, ವಿಷಯವೂ ಸುಲಭವಾಗಿ ತೋರಬಹುದು. ಆದರೆ ಏಕಾಗ್ರಚಿತ್ತದಿಂದ ಅದರಲ್ಲಿರುವ ಭಾವಗಳನ್ನು ಹೀರಿಕೊಳ್ಳದವರಿಗೆ ಅಂಥ ಗ್ರಂಥವು ಯಾವ ಲಾಭವನ್ನೂ ಉಂಟುಮಾಡಲಾರದು. ಗೀತೆಯ ಏಳುನೂರು ಶ್ಲೋಕಗಳನ್ನೂ ಕಂಠಪಾಠ ಮಾಡಿರುವವರು ಸಿಕ್ಕಬಹುದು. ಅದರಲ್ಲಿರುವ ಕರ್ಮಯೋಗ, ಧ್ಯಾನಯೋಗ, ಭಕ್ತಿಯೋಗ, ಜ್ಞಾನಯೋಗ, ಸ್ಥಿತಪ್ರಜ್ಞ, ಯುಕ್ತ, ಗುಣಾತೀತ, ಶಮದಮಾದಿಗಳು, ಅಮಾನಿತ್ವಾದಿ ಗಳು, ಅದ್ವೇಷ್ಟೃತ್ವಾದಿಗಳು-ಇವುಗಳನ್ನು ಕುರಿತು ಧಾರಾಕಾರವಾಗಿ ಒಂದೆರಡು ಘಂಟೆಗಳ ಹೊತ್ತು ಉಪನ್ಯಾಸಮಾಡುವವರೂ ಸಿಕ್ಕಬಹುದು. ಆದರೆ ಭಕ್ತಿಜ್ಞಾನ ವೈರಾಗ್ಯಾದಿಗಳ ಭಾವನೆಯಿಂದ ಆರ್ದ್ರವಾಗಿರುವ ಹೃದಯದವರು ಸಿಕ್ಕುವದು ಕಷ್ಟ; ಗೀತೋಪದೇಶದ ಫಲವನ್ನು ತಮ್ಮ ಜೀವನದಲ್ಲಿ ಕಂಡುಕೊಂಡು ಆನಂದಿಸು ವವರು ಸಿಕ್ಕುವದೂ ಕಷ್ಟ.

ವೇದಗಳು ಪರಮಾತ್ಮನ ಉಸಿರೆಂದು ಉಪನಿಷತ್ತಿನಲ್ಲಿ ಹೇಳಿದೆ; ಭಗವದ್ಗೀತೆಯು ಭಗವಂತನಾದ ಶ್ರೀಕೃಷ್ಣನ ಮುಖದಿಂದ ಹೊರಟ ಒಂದಾನೊಂದು ಆನಂದ ದಾಯಕವಾದ ಗಾನ ಎಂದು ಬಲ್ಲವರು ಹೇಳುತ್ತಿದ್ದಾರೆ. ಇದು ನಿಜವಾದರೆ ವೇದವಾಕ್ಯಗಳು ನಮ್ಮ ಕಿವಿಗೆ ಬಿದ್ದಾಗ ಪರಮಾತ್ಮನ ಆನಂದಧಾಮದಿಂದ ಬರುತ್ತಿರುವ ನರುಗುಂಪಿನ ಮಂದಮಾರುತವದೆಂಬ ಅರಿವು ನಮಗೆ ಆಗಬೇಕು; ಭಗವದ್ಗೀತೆಯ ಶ್ಲೋಕಗಳು ಕೇಳಿಬಂದಾಗ ಇಲ್ಲಿಯೇ ಶ್ರೀಕೃಷ್ಣ ಭಗವಂತನು ನಮ್ಮೆದುರಿಗಿದ್ದು ನಮಗೆ ಬೋಧಿಸುತ್ತಿದ್ದಾನೆಂಬ ಅರಿವಾಗಬೇಕು. ಅಲ್ಲವೆ? ಈ ಭಾವನೆಯು ಯಾರಿಗಿರುವದೋ ಅವರಿಗೆ ವೇದಾಧ್ಯಯನದ ನಿಜವಾದ ಪ್ರಯೋಜನವು ಲಭಿಸುವದು; ಅವರಿಗೆ ಗೀತೆಯ ಉಪದೇಶದಿಂದ ಜೀವನದಲ್ಲಿ ಇಂಪೂ ಸೊಂಪೂ ಕಾಣಿಸುವವು.

ಉಪನಿಷತ್ತುಗಳು, ಭಗವದ್ಗೀತೆ–ಇಂಥ ಅಧ್ಯಾತ್ಮಗ್ರಂಥಗಳು ಯಾವದೊಂದು ಕಾಲಕ್ಕೂ ಕಟ್ಟುಬೀಳದ ತತ್ತ್ವವನ್ನು ತಿಳಿಸುವವೆಂದು ಆಗಲೆ ಹೇಳಿರುತ್ತೇನೆ. ಆದ್ದರಿಂದ ಅವುಗಳ ಉಪದೇಶವು ಎಲ್ಲಾ ಕಾಲದಲ್ಲಿಯೂ ಎಲ್ಲಾ ದೇಶದಲ್ಲಿಯೂ ಇರುವ ಎಲ್ಲಾ ಜನರಿಗೂ ಅನ್ವಯಿಸುವಂತೆ ಇರುತ್ತದೆ. ರೇಡಿಯೊ ಯಂತ್ರವನ್ನು ಇಟ್ಟುಕೊಂಡಿರುವವರು ಇಂಥಿಂಥ ದಿನ ಇಂತಿಷ್ಟು ಘಂಟೆಗೆ ಇಂಥಿಂಥವರು ಹಾಡುವರು ಅಥವಾ ಭಾಷಣಮಾಡುವರು ಎಂಬ ಕಾರ್ಯಕ್ರಮದ ಪಟ್ಟಿಯನ್ನು ನೋಡಿಕೊಂಡಿದ್ದು ಅದರಂತೆ ಯಂತ್ರಕ್ಕೆ ಕೀಲುಕೊಟ್ಟು, ಸಜ್ಜುಗೊಳಿಸಿಕೊಂಡು ಆಯಾ ಗಾನವನ್ನೂ ಭಾಷಣವನ್ನೂ ಕೇಳುವರು. ಅಲ್ಲವೆ? ಇದರಂತೆ ನಿಮ್ಮನಿಮ್ಮ ಹೃದಯಯಂತ್ರಕ್ಕೆ ಸತ್ಪುರುಷರ ಸಂಗದಿಂದ ಸಂಸ್ಕಾರವನ್ನು ಮಾಡಿಕೊಂಡು ಕೇಳಿದರೆ ಇಲ್ಲಿಯೇ ಈಗಲೇ ಭಗವಂತನ ಉಪದೇಶವನ್ನು ನೀವೆಲ್ಲರೂ ಕೇಳಬಹುದು, ಆನಂದಿಸಬಹುದು. ಆದರೆ ರೇಡಿಯೊಯಂತ್ರದಲ್ಲಿ ಕೇಳಬರುವ ಗಾನಾದಿಗಳಿಗೂ ಹೃದಯಯಂತ್ರದ ದ್ವಾರದಿಂದ ಕೇಳಬಹುದಾದ ಅಧ್ಯಾತ್ಮೋಪದೇಶಕ್ಕೂ ಒಂದು ಮುಖ್ಯತಾರತಮ್ಯವಿದೆ. ಅಲ್ಲಿ ಕಾರ್ಯಕ್ರಮದ ಪಟ್ಟಿಯು ಬದಲಾಯಿಸುತ್ತಲೇ ಇರುತ್ತದೆ; ಇಲ್ಲಿ ಅಧ್ಯಾತ್ಮಗ್ರಂಥವೆಂಬ ಮೂಲಗ್ರಂಥವು ಅದೇ ಆಗಿರುತ್ತದೆ. ಅಲ್ಲಿ ಗಾನವನ್ನು ಅಥವಾ ಭಾಷಣವನ್ನು ಸುಮ್ಮನೆ ಕುತೂಹಲದಿಂದ ಕೇಳಿ ಬೇಕಾದದ್ದನ್ನು ಇಟ್ಟುಕೊಂಡು ಬೇಡವಾದದ್ದನ್ನು ಬಿಡುವೆವು; ಇಲ್ಲಿ ಇದನ್ನು ಕೇಳಿದಮೇಲೆ ನಮ್ಮ ಸ್ವಭಾವವನ್ನೇ ಮಾರ್ಪಡಿಸಿಕೊಂಡು ಜೀವನವನ್ನು ನಿತ್ಯಾನಂದಮಯವಾಗಿ ಮಾಡಿಕೊಳ್ಳುವದಕ್ಕೆ ಅವಕಾಶವಿರುತ್ತದೆ.

ಅಧ್ಯಾತ್ಮಗ್ರಂಥದಲ್ಲಿರುವ ನಿಮಗೆ ಮೆಚ್ಚಾದ ಯಾವದಾದರೊಂದು ಭಾವವನ್ನು ಮನಸ್ಸಿನಲ್ಲಿಟ್ಟುಕೊಳ್ಳಿರಿ. ಅದರ ಸಾರವೆಲ್ಲ ನಿಮಗೆ ಮನದಟ್ಟಾಗುವಂತೆ ಅದನ್ನು

ಮತ್ತೆಮತ್ತೆ ನಿಮ್ಮ ಜ್ಞಾನಚಕ್ಷುಸ್ಸಿನ ಮುಂದೆ ನಿಲ್ಲಿಸಿಕೊಳ್ಳಿರಿ. ನಿಮ್ಮ ನಡೆನುಡಿಗಳೆಲ್ಲವೂ ಆ ಭಾವನೆಯಿಂದ ಪ್ರೇರಿತವಾಗುವವರೆಗೂ ಆ ಭಾವವನ್ನು ಸಂತತವಾಗಿ, ಮತ್ತೊಂದು ವಿಜಾತೀಯವಾದ ಭಾವಕ್ಕೆ ಎಡೆಗೊಡದಂತೆ, ಪ್ರವಾಹವಾಗಿ ಹರಿಸಿ ಕೊಳ್ಳಿರಿ. ಆಗ್ಗೆ ನಿಮಗೆ ಆ ಭಾವದ ಸಾಕ್ಷಾತ್ಕಾರವಾದಂತೆ ಆಯಿತು. ಹೀಗೆ ಬೇರೆ ಬೇರೆಯ ಭಾವಗಳ ಸಾಕ್ಷಾತ್ಕಾರವನ್ನು ಪಡೆದುಕೊಳ್ಳುವಂತೆ ಅರ್ಥಾನುಸಂಧಾನ ವನ್ನು ಮಾಡಿಕೊಂಡು ನಿತ್ಯವಾಗಿ ಗ್ರಂಥವನ್ನು ಪಠಿಸುವದೇ ಪಾರಾಯಣವು. ಟೆಲಿವಿಷನ್ ಎಂಬ ದೂರದರ್ಶಕಯಂತ್ರವನ್ನು ಉಪಯೋಗಿಸುವವರಿಗೆ ಎಷ್ಟೋ ಮೈಲಿಗಳ ದೂರದಲ್ಲಿರುವ ಒಬ್ಬ ಮಿತ್ರನ ಭಾವಚಿತ್ರವು ಎದುರಿಗೆ ಕಾಣುವದು; ಸಿನೆಮದಲ್ಲಿ ಕಾಣುವ ಚಿತ್ರಗಳಲ್ಲಿ ಆಯಾ ಪಾತ್ರದವರು ಆಡಿದ ಮಾತುಗಳು ಕೇಳಿದಂತೆ ಅತ್ಯಂತ ದೂರದಲ್ಲಿರುವವರು ಮಾತನಾಡಿದ ಮಾತುಗಳನ್ನೂ ನಾವು ಈಗಾಗಲೇ ಕೇಳುವ ಅಭ್ಯಾಸವನ್ನು ಮಾಡಿಕೊಂಡೇ ಇರುತ್ತೇವೆ. ಆದರೆ ಉಪನಿಷತ್ತು, ಭಗವದ್ಗೀತೆ –ಇಂಥ ಗ್ರಂಥಗಳಲ್ಲಿ ನಿಜವಾಗಿಯೂ ಪರಮಾತ್ಮನ ಸಂನಿಧಿಯು ಇದ್ದೇ ಇರುತ್ತದೆ. ಸಂಸ್ಕಾರವನ್ನು ಪಡೆದ ಹೃದಯದಿಂದ ಅವುಗಳನ್ನು ಓದುವವರಿಗೆ ಸಮೀಪದಲ್ಲಿಯೇ ಇರುವ ಭಗವಂತನ ವಾಣಿಯನ್ನು ಕೇಳುವ ಆನಂದವು ದೊರಕುತ್ತದೆ.

ಗೀತಾದಿಗ್ರಂಥಗಳನ್ನು ಬರಿಯ ಕಾಗದದ ಹಾಳೆಗಳಿರುವ ಪುಸ್ತಕಗಳೆಂದು ತಿಳಿಯ ಬೇಡಿರಿ. ಅವುಗಳ ದ್ವಾರದಿಂದ ಭಗವಂತನು ತನ್ನ ಹೃದಯವನ್ನೇ ಬಿಚ್ಚಿ ನಿಮ್ಮೆದುರಿಗೆ ಇಟ್ಟಿರುತ್ತಾನೆ; ಅವುಗಳ ಮೂಲಕವಾಗಿ ಆ ಭಗವಂತನೇ ನೇರಾಗಿ ನಿಮಗೆ ಉಪದೇಶಮಾಡುತ್ತಿರುತ್ತಾನೆ. ಆ ಉಪದೇಶಗಳು ನಿಮ್ಮ ಕಿವಿಗಳ ಮೂಲಕ ನಿಮ್ಮ ಹೃದಯದೊಳಕ್ಕೆ ಇಳಿಯಬೇಕು; ಆ ಉಪದೇಶಗಳಲ್ಲಿರುವ ಭಾವಗಳು ನಿಮ್ಮ ಮನಸ್ಸಿನಲ್ಲಿ ನೆಲಸಿ ಮಿಕ್ಕ ಸಾಂಸಾರಿಕಭಾವನೆಗಳನ್ನು ಅಲ್ಲಿಂದ ಅಟ್ಟಿಬಿಡಬೇಕು, ಅಥವಾ ಮೊದಲಿದ್ದ ಸಾಂಸಾರಿಕಭಾವನೆಗಳೇ ಈ ಉತ್ತಮಭಾವನೆಗಳಾಗಿ ಪರಿವರ್ತನೆಯಾಗಿಬಿಡಬೇಕು. ರೋಗದಿಂದ ನರಳುತ್ತಿದ್ದವನೇ ಯೋಗೀಶ್ವರರ ದಯೆಯಿಂದ ವಜ್ರಕಾಯನಾಗುವಂತೆ ಸರ್ವಯೋಗಿಗಳಿಗೂ ಈಶ್ವರನಾದ ಭಗವಂತನ ದಯೆಯಿಂದ ನಿಮ್ಮ ಭಾವನಾ ಪ್ರಪಂಚವೆಲ್ಲ ಸಂಪೂರ್ಣವಾಗಿ ರೂಪಾಂತರವಾಗಿ ನಿಮ್ಮ ಜೀವನಕ್ಕೆ ತಂಪನ್ನು ತಂದುಕೊಡಬೇಕು; ನಿಮ್ಮ ಮಾತಿಗೆ ಇಂಪನ್ನುಂಟುಮಾಡಬೇಕು; ನಿಮ್ಮ ನಡೆಯ ನರುಗಂಪನ್ನು ನಿಮ್ಮ ಸುತ್ತಲೂ ಪ್ರಸರಿಸುವಂತೆ ಮಾಡಬೇಕು. ನಿಮ್ಮ ಸುತ್ತುವಳೆಯವೆಲ್ಲ ಆನಂದಮಯವಾಗಬೇಕು. ಆಗ ನಿಮಗೆ ಅಧ್ಯಾತ್ಮಗ್ರಂಥದ ಪಾರಾಯಣದ ಫಲವು ದೊರೆತಂತೆ ಆಯಿತು.

ಅಧ್ಯಾತ್ಮಗ್ರಂಥಗಳಲ್ಲಿ ಉತ್ತಮಭಾವನೆಗಳು ಲೆಕ್ಕವಿಲ್ಲದಷ್ಟು ಇರುವವು. ಅಧಿಕಾರತಾರತಮ್ಯದಿಂದ ಒಂದೊಂದು ಶಬ್ದವೇ ಹಲವು ಭಾವನೆಗಳನ್ನು

ಉಂಟುಮಾಡುವದು; ಒಂದೊಂದು ಭಾವನೆಯೊಳಗೇ ಹಲವು ಪ್ರಭೇದಗಳು ಇರುವವು. ಹೀಗಿರುವಲ್ಲಿ ಈ ಗ್ರಂಥದಿಂದ ಯಾವ ಭಾವನೆಯನ್ನು ಆರಿಸಿಕೊಳ್ಳುವದು? ಎಲ್ಲವನ್ನೂ ಒಟ್ಟಿಗೆ ಚಿಂತನೆಗೆ ಇಟ್ಟುಕೊಳ್ಳುವದು ಆಗಲಾರದಲ್ಲ ! ಎಂದು ಕೆಲವರು ಕೇಳುವದುಂಟು. ಆದರೆ ಈ ಪೇಚಾಟವು ಸಾಧನೆಯ ಮರ್ಮವನ್ನು ಅರಿಯದೆ ಇರುವಾಗ ಮಾತ್ರವೇ ತೋರಿಕೊಳ್ಳುವದು. ಏಕೆಂದರೆ ಯಾವದಾದರೂ ಒಂದು ಭಾವನೆಯನ್ನು ಆರಿಸಿಕೊಂಡು ಚಿಂತನೆಗೆ ಇಟ್ಟುಕೊಂಡರೆ ಅದು ಹೃದಯದಲ್ಲಿ ಮೂಡಿಕೊಂಡು ತನ್ನ ಪ್ರಭಾವವನ್ನು ತೋರಿಸುವದಕ್ಕೆ ಮೊದಲುಮಾಡಿದರೆ ಮಿಕ್ಕ ಭಾವಗಳೂ ಕಾಲಕಾಲಕ್ಕೆ ಬಂದು ಅದನ್ನು ಸೇರಿಕೊಳ್ಳುವವು. ಬೀಜವು ಮೊಳಕೆಯಾಗಿ ಮೆಲ್ಲಮೆಲ್ಲಗೆ ಚಿಗುರಿಕೊಂಡು ಕೊಂಬೆರೆಂಬೆಗಳಾಗಿ ಒಡೆದುಕೊಳ್ಳುವ ಬಗೆಯನ್ನೂ ಅದರಲ್ಲಿ ಆಯಾ ಕಾಲಕ್ಕೆ ತಕ್ಕಂತೆ ಬಣ್ಣ, ಸುವಾಸನೆ, ಸವಿ-ಮುಂತಾದವುಗಳಿಂದೊಡಗೂಡಿದ ಎಲೆ ಹೂ ಹಣ್ಣುಗಳು ತಲೆದೋರುವ ಬಗೆಯನ್ನೂ ಇಲ್ಲಿ ಮನದಂದುಕೊಳ್ಳಬೇಕು. ಅಧ್ಯಾತ್ಮಭಾವನೆಯ ಚಿಂತನೆಯಿಂದಾಗುವ ಹೃದಯವಿಕಾಸವೂ ಹಾಗೆಯೇ ಆಗುತ್ತದೆ. ಆದ್ದರಿಂದ ನಿಮ್ಮ ನಡೆನುಡಿಗಳಲ್ಲಿಯೂ ಭಾವನೆಯ ಆಶಯದಲ್ಲಿಯೂ ಯಾವ ಕೊರತೆಯು ಕಾಣುವದೋ ಅದನ್ನು ಪರಿಪೂರ್ಣಗೊಳಿಸಿ ಉತ್ತಮರೂಪಕ್ಕೆ ತಿರುಗಿಸಬಲ್ಲ ಭಾವನೆಯನ್ನೊಂದನ್ನು ಆರಿಸಿಕೊಂಡು ಗ್ರಂಥವನ್ನು ಮತ್ತೆ ಮತ್ತೆ ಪಠಿಸಿರಿ. ಅದರಿಂದ ನಿಮಗೆ ಆ ಭಾವನೆಯು ಕ್ರಮಕ್ರಮವಾಗಿ ಅಳವಡುವದಲ್ಲದೆ, ತನ್ನ ಬಂಧುಗಳಾಗಿರುವ ಬೇರೆಯ ಶುಭಭಾವನೆಗಳನ್ನೂ ಬೇಗ ತನ್ನೊಂದಿಗೆ ಸೇರಿಸಿಕೊಳ್ಳುವದು. ನಿಮಗೆ ಯಾವ ಭಾವನೆಯನ್ನು ಆರಿಸಿಕೊಳ್ಳಬೇಕೆಂಬ ಯೋಚನೆಯು ಹೀಗೂ ಬಗೆಹರಿಯದಿದ್ದರೆ ನಿಮ್ಮ ಮನಸ್ಸಿಗೆ ಯಾವದು ಮೆಚ್ಚಾಗುವದೋ ಆ ಭಾವನೆಯನ್ನೇ ಆರಿಸಿಕೊಂಡು ಚಿಂತಿಸಿರಿ. ಆಗಲೂ ಇಷ್ಟಾರ್ಥವು ಅವಶ್ಯವಾಗಿ ನೆರವೇರುವದು.

ಶ್ರೀಮದ್ರಾಮಾಯಣದಂಥ ಕಥಾರೂಪದಲ್ಲಿರುವ ಅಧ್ಯಾತ್ಮಗ್ರಂಥಗಳು ಕೆಲವು ಇರುತ್ತವೆ. ನೇರಾಗಿ ಸಾಧನವನ್ನೇ ಉಪದೇಶಿಸುವ ಗ್ರಂಥಗಳು ಕೆಲವರಿಗೆ ರುಚಿಸುವದಿಲ್ಲ. ಅಂಥವರು ಇಂಥ ಕಥಾರೂಪವಾದ ಗ್ರಂಥಗಳನ್ನೇ ಪಠಿಸಬಹುದು. ಆದರೆ ಒಂದು ಎಚ್ಚರಿಕೆಯನ್ನು ತೆಗೆದುಕೊಳ್ಳಬೇಕು. ಗ್ರಂಥವನ್ನು ಕಾವ್ಯದೃಷ್ಟಿಯಿಂದ ಮೊದಮೊದಲು ನೀವು ಓದಿ ಆನಂದಿಸಿರಬಹುದು; ಅಷ್ಟಕ್ಕೇ ಗ್ರಂಥದ ಸ್ವಾರಸ್ಯವು ಮುಗಿಯಿತೆಂದು ಮಾತ್ರ ಎಂದಿಗೂ ತಿಳಿಯಬಾರದು. ಹುಡುಗರಾದಾಗಲೇ ನೀವು ರಾಮಾಯಣದ ಕಥೆಯನ್ನು ಕೇಳಿರುವಿರಿ; ಸ್ವಲ್ಪ ದೊಡ್ಡವರಾದ ಮೇಲೆ ಕಥೆಯ ವಿವರಗಳೂ ಅಲ್ಲಲ್ಲಿ ಬರುವ ಅದ್ಭುತ ವರ್ಣನೆಗಳೂ ನಿಮಗೆ ಮೆಚ್ಚಾಗಿದ್ದವು.

ಈಗ ಗ್ರಂಥಕರ್ತನ ವರ್ಣನಾಶಕ್ತಿಯೂ ಭಾಷಾಸೌಂದರ್ಯವೂ ಪ್ರತಿಪಾದನ ಶೈಲಿಯೂ ನಿಮ್ಮನ್ನು ಆಕರ್ಷಿಸಿರಬಹುದು. ಈ ಹೃದಯವಿಕಾಸಕ್ರಮವು ಸ್ವಾಭಾವಿಕ ವಾದದ್ದೇ. ಆದರೆ ಇದು ಅರ್ಧವಾಗಿ ಬೆಳೆದು ಅಷ್ಟಕ್ಕೇ ಕುರುಟುಬೀಳುವ ಮರ ದಂತೆ ಆಗಬಾರದು. ನಿಮ್ಮ ಅಂತಃಕರಣವು ರಾಮಾಯಣದಲ್ಲಿರುವ ಧರ್ಮ ನೀತಿಗಳನ್ನು ಪರಿಶೀಲಿಸುವದಕ್ಕೂ ಆ ಧರ್ಮನೀತಿಗಳು ಜೀವನದಲ್ಲಿ ಆಚರಣೆಗೆ ಬಂದರೆ ಆಗಬಹುದಾದ ಪರಿಣಾಮವನ್ನು ಚಿಂತಿಸುವದಕ್ಕೂ ಈಗ ಸಮಯ ವಾಗಿದೆ. ರಾಮಾಯಣವನ್ನು ಬರೆದ ಕಾಲವು, ಅಥವಾ ಅದರಲ್ಲಿ ವರ್ಣಿಸಿರುವ ಘಟನೆಗಳ ಕಾಲವು ಯಾವದಾದರೂ ಆಗಲಿ; ಅದರಲ್ಲಿ ವಾಲ್ಮೀಕಿಋಷಿಗಳು ವಾಚಕರ ಹೃದಯದಲ್ಲಿ ಎಬ್ಬಿಸಬೇಕೆಂದು ಹವಣಿಸಿರುವ ಉತ್ತಮಭಾವನೆಗಳು ಯಾವವು?–ಎಂಬುದನ್ನು ಅನ್ವೇಷಣಮಾಡುವದಕ್ಕೆ ಮೊದಲುಮಾಡಿರಿ.

ಇನ್ನೊಂದು ಮುಖ್ಯವಾದ ಮಾತು. ರಾಮಾಯಣದಂಥ ಗ್ರಂಥಗಳಲ್ಲಿ ಪರಮಾತ್ಮನ ತತ್ತ್ವವನ್ನು ತಿಳಿಯುವದಕ್ಕೆ ಸೋಪಾನವಾಗಿ ಆತನ ಸಗುಣಸಾಕಾರ ಮೂರ್ತಿಯ ಕರ್ಮಗಳನ್ನೂ ಲೀಲೆಗಳನ್ನೂ ವರ್ಣಿಸಿರುತ್ತದೆ ಎಂದು ಬಲ್ಲವರು ಹೇಳುತ್ತಾರೆ. ಆ ಕರ್ಮಗಳೂ ಲೀಲೆಗಳೂ ಒಂದಾನೊಂದು ಗೊತ್ತಾದ ಕಾಲದಲ್ಲಿ ಜನರಿಗೆ ಗೋಚರವಾದವಾದರೂ ಅವುಗಳಿಂದ ತಿಳಿಯಬರುವ ತತ್ತ್ವವು ತ್ರಿಕಾಲಾ ತೀತವಾಗಿರುವದೆಂದು ಆಗಲೆ ತಿಳಿಸಿರುತ್ತೇನೆ. ಆದ್ದರಿಂದ ಇಂಥ ಗ್ರಂಥದಲ್ಲಿ ಕಾಣುವ ಪ್ರಧಾನಭಾಗವನ್ನು ಭೂತಕಾಲವಾಚಕ ಶಬ್ದಗಳಿಂದ ವರ್ಣಿಸಿದ್ದರೂ ಅವನ್ನು ನಿತ್ಯವರ್ತಮಾನಸ್ವಭಾವದವೆಂದೇ ಭಾವಿಸಬೇಕು. ವೇದವೇದ್ಯನಾದ ಪರಮಪುರುಷನಾದ ಭಗವಂತನು ಶ್ರೀರಾಮನಾಗಿ ಅವತರಿಸಲು, ವೇದವು ರಾಮಾಯಣರೂಪದಿಂದ ಪ್ರಕಟವಾಯಿತು ಎಂದು ಒಂದು ಸೂಕ್ತಿಯಿದೆ. ಹಾಗಾದರೆ ರಾಮಾಯಣದಲ್ಲಿರುವ ಪರತತ್ತ್ವವು ಯಾವದು? ಅದರ ಸಗುಣ ವರ್ಣನೆಯಿಂದ ನಾವು ಅರಿತುಕೊಳ್ಳಬೇಕಾದದ್ದು ಏನು?–ಎಂಬುದನ್ನು ವಿಚಾರಿಸು ವದಕ್ಕೆ ಮನಸ್ಸನ್ನು ಉಪಯೋಗಿಸಿಕೊಂಡು ಈ ಗ್ರಂಥವನ್ನು ಪಾರಾಯಣ ಮಾಡಿರಿ. ಆಗ ನಿಮಗೆ ರಾಮಾಯಣದ ಪೂರ್ಣಪ್ರಯೋಜನವು ಲಭಿಸುವದು.

****

# 26. ಭಾವದ ಸಾಕ್ಷಾತ್ಕಾರ

ಅಧ್ಯಾತ್ಮಗ್ರಂಥಗಳಲ್ಲಿ ಭಾವವೇ ಪ್ರಧಾನವೆಂದು ತಿಳಿಸಿರುತ್ತೇನೆ. ನಿಮಗೆ ಮೆಚ್ಚಾದ ಭಾವವನ್ನು ಆರಿಸಿಕೊಂಡು ಸಂತತವಾಗಿ ಅದನ್ನೇ ಮನಸ್ಸಿನಲ್ಲಿ ಸಂತತಪ್ರವಾಹ ವಾಗಿ ಹರಿಯಿಸಿಕೊಳ್ಳಬೇಕು; ಆ ಭಾವನೆಯಿಂದ ನಿಮ್ಮ ನಡೆನುಡಿಗಳೆಲ್ಲವೂ ಪ್ರೇರಿತವಾಗಿವೆಯೆಂದು ಕಂಡುಬಂದರೆ ಅದರ ಸಾಕ್ಷಾತ್ಕಾರವಾದಂತಾಯಿತು. ಇದನ್ನು ಒಂದೆರಡು ಉದಾಹರಣೆಗಳಿಂದ ಇಲ್ಲಿ ಸ್ಪಷ್ಟಪಡಿಸುವೆನು.

ಭಗವದ್ಗೀತೆಯ ಮೂರನೆಯ ಅಧ್ಯಾಯದಲ್ಲಿ ಒಂದು ಶ್ಲೋಕವನ್ನು ಆರಿಸಿ ಕೊಳ್ಳೋಣ. "ಯಜ್ಞಾರ್ಥಾತ್ ಕರ್ಮಣೋಽನ್ಯತ್ರ ಲೋಕೋಽಯಂ ಕರ್ಮಬನ್ಧನಃ। ತದರ್ಥಂ ಕರ್ಮ ಕೌನ್ತೇಯ ಮುಕ್ತಸಙ್ಗಃ ಸಮಾಚರ" ಈ ಶ್ಲೋಕದಲ್ಲಿ ಯಜ್ಞಕ್ಕಾಗಿ ಕರ್ಮವನ್ನು ಮಾಡಿದರೆ ಕರ್ಮವು ಬಂಧಕವಾಗುವದಿಲ್ಲ, ಇಲ್ಲದಿದ್ದರೆ ಕರ್ಮವು ಬಂಧಕವಾಗುವದು; ಆದ್ದರಿಂದ ಅದಕ್ಕಾಗಿ ಮುಕ್ತಸಂಗನಾಗಿ ಕರ್ಮವನ್ನು ಮಾಡು ಎಂದು ಭಗವಂತನು ಅರ್ಜುನನಿಗೆ ಉಪದೇಶಮಾಡಿರುತ್ತಾನಷ್ಟೆ. ಮೊಟ್ಟಮೊದಲು ಇದು ಅರ್ಜುನನನ್ನು ನಿಮಿತ್ತವಾಗಿ ಮಾಡಿಕೊಂಡು ನಮ್ಮೆಲ್ಲರಿಗೂ ಹೇಳಿದ್ದು; ಇದಕ್ಕೆ ದೇಶಕಾಲಗಳ ಕಟ್ಟು ಇರುವದಿಲ್ಲ ಎಂಬ ಭಾವನೆಯು ನಮ್ಮ ಮನಸ್ಸಿಗೆ ಬರಬೇಕು. ಆಮೇಲೆ ಕರ್ಮಗಳು ಬಂಧಕವೆಂದರೇನು? ಎಂಬುದು ಮನಸ್ಸಿನಲ್ಲಿ ನಿಲ್ಲಬೇಕು. ಕರ್ಮಗಳನ್ನು ಮಾಡಿದವರಿಗೆ ಫಲಗಳು ತಪ್ಪದೆ ಆಗಬೇಕಾಗಿರು ವದರಿಂದ ಈ ಜನ್ಮದಲ್ಲಿ ಅನುಭವಿಸಿದವುಗಳಲ್ಲದೆ ಹಾಗೆಯೇ ಉಳಿದು ಕೊಂಡಿರುವ ಕರ್ಮಗಳಿಗೆ ತಕ್ಕಂತೆ ಆಯಾ ದೇಶಕಾಲಗಳಲ್ಲಿ ಬೇರೆಬೇರೆ ಜನ್ಮಗಳಲ್ಲಿ ಹುಟ್ಟಿ ಆಯಾ ದೇಹೇಂದ್ರಿಯಗಳ ಸಂಘಾತವನ್ನು ಪಡೆದು ಅವುಗಳ ಫಲವನ್ನು ಅನುಭವಿಸಬೇಕಾಗುವದು; ಆ ಜನ್ಮಗಳಲ್ಲಿ ಮತ್ತೂ ಕರ್ಮಗಳನ್ನು ಮಾಡಿಯೇತೀರಬೇಕಾದ್ದರಿಂದ ಮತ್ತೂ ಫಲಭೋಗಕ್ಕಾಗಿ ಈ ದೇಹಧಾರಣವನ್ನು ಮಾಡಬೇಕಾಗುವದು-ಹೀಗೆ ನಿಲುಗಡೆಯಿಲ್ಲದೆ ಕರ್ಮಗಳಿಗೆ ಪರವಶನಾಗಿರುವದೇ ಕರ್ಮಬಂಧವು ಎಂಬ ಭಾವವು ಮನಸ್ಸಿನಲ್ಲಿ ಮೂಡಿಕೊಳ್ಳಬೇಕು. ಹಾಗಾದರೆ ನಾನು ಈವರೆಗೆ ಮಾಡಿರುವ ಕರ್ಮಗಳು ಲೆಕ್ಕವಿಲ್ಲದಷ್ಟಿರುವವಲ್ಲ ! ಅವುಗಳಿಗೆ ನಾನು ಎಷ್ಟು ಜನ್ಮವನ್ನು ಎತ್ತಿ ಸಂಸಾರಚಕ್ರದಲ್ಲಿ ಸುಖದುಃಖಗಳನ್ನು ಅನುಭವಿಸಬೇಕಾಯಿತು ! ಎಂಬ ಕಳವಳವು ಮನಸ್ಸಿನಲ್ಲಿ ಈಗ ಹತ್ತಿಕೊಳ್ಳಬೇಕು. ಹಾಗಾದರೆ ಕರ್ಮಬಂಧವೆಂಬ ಮಾತಿನ ಪೂರ್ಣವಾದ ಅರ್ಥವು ನಮ್ಮ ಮನಸ್ಸಿಗೆ ತಾಕಿದಂತೆ ಆದೀತು. ಈಗ ಯಜ್ಞಾರ್ಥವಾಗಿ ಕರ್ಮವನ್ನು ಮಾಡುವದು ಎಂದರೇನು? ಮುಕ್ತಸಂಗನಾಗಿ ಮಾಡುವದೆಂದರೇನು, ಅದರಿಂದ ಕರ್ಮಬಂಧವು

ಹೇಗೆ ಬಿಚ್ಚಿಕೊಂಡೀತು?-ಎಂಬ ಯೋಚನೆಯು ಹತ್ತಿಕೊಳ್ಳಬೇಕು. ಯಜ್ಞವೆಂಬ ಮಾತಿಗೆ ಅಕ್ಷರಾರ್ಥವನ್ನು ಹಿಡಿದರೆ ದೇವತೆಗಳಿಗಾಗಿ ಮಾಡುವ ಸ್ವತ್ವತ್ಯಾಗವು ಎಂಬ ಅಭಿಪ್ರಾಯವು ಮನಸ್ಸಿಗೆ ಮೊದಲು ಹೊಳೆಯುವದು; ಆದರೆ ಭಗವದ್ಗೀತೆಯಲ್ಲಿ ದೇವತೆಗಳನ್ನು ಬೇರೆಬೇರೆಯಾಗಿ ಆರಾಧಿಸುವ ಪದ್ಧತಿಯನ್ನೇನೂ ಹೊಗಳಿಲ್ಲ. ದೇವತೆಗಳಲ್ಲೆಲ್ಲ ಇರುವ ಪರಮಾತ್ಮನನ್ನೇ ಮುಖ್ಯವಾಗಿ ಪ್ರತಿಪಾದಿಸಿರುತ್ತದೆ. ಆದ್ದರಿಂದ ಯಜ್ಞಕ್ಕಾಗಿ ಎಂದರೆ ಯಜ್ಞದ ಅಧಿದೇವತೆಯಾದ ಪರಮಾತ್ಮನಿಗಾಗಿ ಎಂಬ ಅರ್ಥವು ಮನಸ್ಸಿನಲ್ಲಿ ಮಿಂಚುವದಕ್ಕೆ ಎಷ್ಟೋ ಕಾಲವು ಬೇಕಾಗಬಹುದು. ಆ ಪರಮಾತ್ಮನು ನಮಗೆ ಅನುಗ್ರಹಿಸಿರುವ ದೇಹೇಂದ್ರಿಯಗಳ ವ್ಯಾಪಾರವು ನನ್ನದೆಂಬ ಅಭಿಮಾನವೂ ಈ ಯಜ್ಞದ ಫಲವು ನನಗೇ ಆಗಬೇಕೆಂಬ ಅಭಿಮಾನವೂ ಸಂಗವೆನಿಸುತ್ತದೆ ಎಂಬ ಅಭಿಪ್ರಾಯವು ಮನಸ್ಸಿಗೆ ತೋರುವದಂತೂ ಬಲುಕಷ್ಟ. ಭಾವಗಳನ್ನೆಲ್ಲ ಒಟ್ಟುಗೂಡಿಸಿಕೊಂಡರೇ ಪರಮೇಶ್ವರ ಪ್ರೀತ್ಯರ್ಥವಾಗಿ ಕರ್ಮಗಳನ್ನು ನಿರಭಿಮಾನದಿಂದ ಮಾಡುವದು ಕರ್ಮಬಂಧದಿಂದ ಬಿಡುಗಡೆಯಾಗುವದಕ್ಕೆ ಉಪಾಯವು ಎಂಬುದು ಮನಸ್ಸಿನೊಳಕ್ಕೆ ಹೊಕ್ಕೀತು. ಇಷ್ಟೆಲ್ಲ ಅಭಿಪ್ರಾಯವು ಈ ಶ್ಲೋಕವನ್ನು ಸರ್‍ರನೆ ಓದಿಕೊಂಡು ಮುಂದೆ ಸಾಗುವವರಿಗೆ ಹೇಗೆ ತಾನೆ ತಿಳಿದೀತು?

ಈ ಶ್ಲೋಕದ ವ್ಯಾಖ್ಯಾನವನ್ನಾಗಲಿ ಭಾಷ್ಯವನ್ನಾಗಲಿ ಓದಿದರೆ ಇಷ್ಟು ಅರ್ಥವೂ ಒಂದೇ ಸಲಕ್ಕೆ ನಮಗೆ ತಿಳಿಯಲಾರದೆ?- ಎಂದು ಯಾರಾದರೂ ಶಂಕಿಸಬಹುದು. ಆದರೆ ಈ ಶ್ಲೋಕದ ಅಭಿಪ್ರಾಯವು ತಿಳಿಯುವದೆಂದರೇನು?- ಎಂಬುದನ್ನು ಅಂಥವರು ಆಲೋಚಿಸಬೇಕು. ಏಕೆಂದರೆ ಈ ಶ್ಲೋಕದಲ್ಲಿ ಹೀಗೆಂದು ಹೇಳಿದೆ ಎಂದು ತಿಳಿದಮಾತ್ರದಿಂದ ನಮಗೆ ಅಭಿಪ್ರಾಯದ ಅರಿವಾದಂತೆ ಅಲ್ಲ. "ಈ ಶ್ಲೋಕದಲ್ಲಿ ಭಗವಂತನ ಅಭಿಪ್ರಾಯವಿದೇ. ಲೋಕಕ್ಕೆಲ್ಲ ಕಲ್ಯಾಣವನ್ನು ಸಂಕಲ್ಪಿಸಿರುವ ಭಗವಂತನು ಹೇಳಿದ ಈ ವಾಕ್ಯದ ಉಪದೇಶದಂತೆ ನಾನು ನಡೆದುಕೊಂಡಿರುವದಿಲ್ಲ. ನಾನು ಶಾಸ್ತ್ರೋಕ್ತಕರ್ಮಗಳನ್ನು ಮಾಡುತ್ತಲೇ ಇಲ್ಲ; ಅಥವಾ ಮಾಡಿದರೂ ಅವುಗಳನ್ನು ಮುಕ್ತಸಂಗನಾಗಿ ಪರಮೇಶ್ವರನ ಪ್ರೀತಿಗಾಗಿ ಮಾಡುತ್ತಿಲ್ಲ. ನನ್ನ ಹಿತಕ್ಕೆ ಉಪಾಯವೇನೆಂಬುದನ್ನು ತಿಳಿದುತಿಳಿದೂ, ಹೀಗೆ ಸುಮ್ಮನಿರುವದು ಎಂಥ ಮೌರ್ಖ್ಯವು!" ಎಂದು ಪಶ್ಚಾತ್ತಾಪದಿಂದೊಡಗೂಡಿ "ಇನ್ನುಮೇಲೆ ಈ ಉಪದೇಶದಂತೆ ನಡೆಯಲು ಪ್ರಯತ್ನಿಸುವೆನು. ಭಗವಂತ, ಈ ದೀನನಿಗೆ ನಿಷ್ಕಾಮಕರ್ಮವನ್ನು ಮಾಡಿ ನಿನಗೆ ಅರ್ಪಿಸುವ ಮನೋ ಬಲವನ್ನು ನೀನೇ ಅನುಗ್ರಹಿಸಬೇಕು!" ಎಂದು ದೈನ್ಯದಿಂದ ಬೇಡಿಕೊಳ್ಳುವ ಸಂಕಲ್ಪವುಂಟಾದರೆ ಈ ಭಾವದ ಸಾಕ್ಷಾತ್ಕಾರವಾದಂತೆ ಆಯಿತು.

ಇನ್ನೊಂದು ಉದಾಹರಣೆ. "ಬನ್ಧುರಾತ್ಮಾತ್ಮನಸ್ತಸ್ಯ ಯೇನಾತ್ಮೈವಾತ್ಮನಾ ಜಿತಃ। ಅನಾತ್ಮನಸ್ತು ಶತ್ರುತ್ವೇ ವರ್ತೇತಾತ್ಮೈವ ಶತ್ರುವತ್ ॥" ಈ ಶ್ಲೋಕವನ್ನು ಓದಿದರೆ "ಆತ್ಮಜಯವೆಂದರೇನು? ದೇಹೇಂದ್ರಿಯಗಳನ್ನು ವಶದಲ್ಲಿಟ್ಟುಕೊಳ್ಳುವದೆಂದರೆ ಹೇಗೆ? ನಾನು ನನ್ನ ದೇಹೇಂದ್ರಿಯಗಳನ್ನು ವಶದಲ್ಲಿಟ್ಟುಕೊಂಡಿರುವೆನೆ? ನನಗೆ ನಾನು ಬಂಧುವಾದಂತಾಯಿತೊ, ಶತ್ರುವಾದಂತಾಯಿತೊ? ಇನ್ನುಮೇಲೆ ಹೇಗಾದರೂ ಮಾಡಿ ಆತ್ಮಜಯಕ್ಕೆ ಪ್ರಯತ್ನಿಸುವೆನು. ಭಗವಂತನ ಅನುಗ್ರಹ ವಿರಲಿ!" ಎಂದು ಆಲೋಚನಾಪೂರ್ವಕವಾಗಿ ಸಂಕಲ್ಪಿಸುವದಾದರೆ ಶ್ಲೋಕದ ಭಾವವು ಸಾಕ್ಷಾತ್ಕೃತವಾದಂತಾಯಿತು. ಹೀಗೆಯೇ ವಾಚಕರು ತಾವುತಾವು ಆರಿಸಿಕೊಳ್ಳುವ ಭಾಗಗಳ ವಿಚಾರವನ್ನೂ ತಿಳಿಯಬೇಕು.

ಕಥಾರೂಪದಲ್ಲಿರುವ ಶ್ರೀಮದ್ರಾಮಾಯಣದಂಥ ಗ್ರಂಥಗಳ ಪಾರಾಯಣವನ್ನು ಮಾಡುವಾಗ ಅನುಸರಿಸಬೇಕಾದ ಕ್ರಮವನ್ನು ಸ್ಫುಟಗೊಳಿಸುವದಕ್ಕೆ ಒಂದೆರಡು ಉದಾಹರಣೆಗಳನ್ನು ಕೊಡುವೆನು. ಈ ಬಗೆಯ ಗ್ರಂಥಗಳಲ್ಲಿ ಭೂತಕಾಲವಾಚಕ ಪದಗಳಲ್ಲಿ ಕಥೆಯನ್ನು ವರ್ಣಿಸಿದ್ದರೂ ಅದರಲ್ಲಿ ತ್ರಿಕಾಲಾಬಾಧಿತವಾದ ತತ್ತ್ವವನ್ನೇ ವರ್ಣಿಸಿರುವದೆಂದು ಬಲ್ಲವರು ಹೇಳುತ್ತಾರೆಂದು ಹಿಂದೆಯೇ ಹೇಳಿರುತ್ತೇನೆ. ಇದನ್ನು ಮನಗಾಣುವದಕ್ಕೆ ನಾವು ಪ್ರಯತ್ನಿಸಬೇಕು. ಉದಾಹರಣೆಗೆ ಶ್ರೀಮದ್ರಾಮಾಯಣದಲ್ಲಿ ಶ್ರೀಮಹಾವಿಷ್ಣುವು ದೇವತೆಗಳಿಂದ ಪ್ರಾರ್ಥಿತನಾಗಿ ಶ್ರೀರಾಮಚಂದ್ರನಾಗಿ ಅವತರಿಸಿ ತನ್ನ ಗುಣಕರ್ಮಲೀಲೆಗಳನ್ನು ಪ್ರಕಟಿಸಿದ ನೆಂಬುದು ರಾಮಾಯಣದ ಕಥೆಯ ಸಾರ. ಆದರೂ ಶ್ರೀರಾಮನು ತಾನು ಮನುಷ್ಯನೇ ಎಂದು ಮನುಷ್ಯರಿಗೆ ಉಚಿತವಾದ ನಡೆನುಡಿಗಳನ್ನೇ ಪ್ರಕಟಿಸಿದ ನೆಂಬುದು ಲೋಕವಿದಿತವಾದದ್ದು. ಆದ್ದರಿಂದ ಕಥೆಯಲ್ಲಿ ಹೇಳುವ ರಾಮಚರಿತ್ರೆ ಯನ್ನು ಶ್ರವಣಮಾಡಿದರೂ ನಾವು ಹೇಗೆಹೇಗೆ ನಡೆದುಕೊಳ್ಳಬೇಕೆಂಬುದನ್ನು ಅದರಿಂದ ಮನಗಾಣುವದಕ್ಕೆ ಅವಕಾಶವಿದೆ. ಪಿತೃವಾಕ್ಯವನ್ನು ಪರಿಪಾಲನೆ ಮಾಡುವದರಲ್ಲಿ ಎಂಥ ಆದರವಿರಬೇಕೆಂಬುದನ್ನು ಶ್ರೀರಾಮಚಂದ್ರನು ಹೇಗೆ ನುಡಿದು ನಡೆದು ನಮಗೆ ತೋರಿಸಿಕೊಟ್ಟಿದ್ದಾನೆ! ನೋಡಿರಿ. ವನವಾಸಕ್ಕೆ ಹೋಗ ಬೇಕಾಗಿಬಂದ ಸಂದರ್ಭದಲ್ಲಿ ಆತನು ಆಡಿದ ಉಕ್ತಿಗಳು ಈಗಲೂ ನಮಗೆಲ್ಲ ಮನನೀಯವಾಗಿರುತ್ತವೆ. "ಪುರವನ್ನೂ, ರಾಷ್ಟ್ರವನ್ನೂ, ಅಷ್ಟೇಕೆ, ಇಡಿಯ ಭೂ ಮಂಡಲವನ್ನೇ, ನಾನು ಬಿಟ್ಟುಕೊಟ್ಟಿರುತ್ತೇನೆ; ಅವಶ್ಯವಾಗಿ ಅದನ್ನು ಭರತನಿಗೆ ಕೊಡಬೇಕು. ತಂದೆಯೆ, ನಿನ್ನ ಅಪ್ಪಣೆಯನ್ನು ಪಾಲಿಸುವದಕ್ಕಾಗಿ ಈಗಲೆ ವನಕ್ಕೆ ಹೊರಡುವೆನು. ನಾನು ಹೀಗೆ ಬಿಟ್ಟುಕೊಟ್ಟ ಈ ಭೂಮಿಯನ್ನು-ಪುರ, ಬೆಟ್ಟ

ಗುಡ್ಡಗಳು, ಅರಣ್ಯ ಇವೆಲ್ಲವೂ ಸೇರಿದ ಈ ಭೂಮಿಯನ್ನು-ಭರತನು ಕ್ಷೇಮದಿಂದ ಆಳುತ್ತಿರಲಿ; ನೃಪತಿಯೆ, ನೀನು ಆಡಿದ ಮಾತು ಮಾತ್ರ ಸತ್ಯವಾಗಲಿ! ನನಗೆ ಮಹಾಕಾಮಗಳಲ್ಲಿ ಮನಸ್ಸು ಇಲ್ಲ, ನನಗೆ ಪ್ರಿಯವಾಗಬೇಕೆಂಬುದರಲ್ಲಿಯೂ ಇಲ್ಲ; ಶಿಷ್ಟರು ಒಪ್ಪುವಂತೆ ನಿನ್ನ ಆಜ್ಞಾಪಾಲನೆಯೊಂದೇ ನನಗೆ ಬೇಕಾಗಿದೆ. ನನಗಾಗಿ ನೀನು ಎಂದಿಗೂ ದುಃಖಿಸದಿರು. ಹೀಗಿರುವದರಿಂದ ನಿನ್ನ ಮಾತನ್ನು ಸುಳ್ಳುಮಾಡಿದ ಅವ್ಯಯವಾದ ರಾಜ್ಯವೂ ನನಗೆ ಬೇಡ, ಯಾವ ಕಾಮಗಳೂ ಬೇಡ, ಸುಖವೂ ಬೇಡ, ಸೀತೆಯೂ ಬೇಡ, ಹಾಗೆ ನಿನ್ನ ಮಾತನ್ನು ಸುಳ್ಳುಮಾಡಿ ಬದುಕಿರುವದು ಕೂಡ ಬೇಡ! ನಿನ್ನ ಮಾತೊಂದು ಸತ್ಯವಾದರೆ ಸಾಕು!"

ಇಂಥ ಸತ್ಯಧರ್ಮಪ್ರಧಾನವಾದ ಸೂಕ್ತಿಗಳು ರಾಮಾಯಣದಲ್ಲಿ ತುಂಬಿ ತುಳುಕುತ್ತಿವೆ. ರಾಮಾಯಣದಲ್ಲಿ ನಮಗೆ ನಿಷ್ಠೆಯುಂಟಾಗಿರುವದಕ್ಕೆ ಇವುಗಳು ನಮ್ಮ ಮೇಲೆ ಮಾಡುವ ಪರಿಣಾಮವೇ ಗುರುತೆನ್ನಬಹುದು. ರಾಗದ್ವೇಷ ಶೋಕಮೋಹಾದಿಗಳನ್ನು ಪ್ರದರ್ಶಿಸುವ ಭಾಗಗಳೆಂದು ತಟ್ಟನೆ ತೋರುವ ಸಂದರ್ಭಗಳಲ್ಲಿ ಕೂಡ ಇಂಥ ಉಪದೇಶರತ್ನಗಳನ್ನು ನಾವು ಕಾಣಬಹುದು. ಉದಾಹರಣೆಗೆ ನೋಡಿ. ರಾವಣನು ಯುದ್ಧದಲ್ಲಿ ಹತನಾಗಿ ರಣರಂಗದಲ್ಲಿ ಪವಡಿಸಿದ್ದಾಗ ಮಂಡೋದರಿಯು ಮಾಡಿದ ವಿಲಾಪದಲ್ಲಿ ಈ ಉಕ್ತಿಯು ಕಾಣಿಸುತ್ತದೆ; "ಈ ರಾಮನು ಮಹಾಯೋಗಿಯಾದ ಸನಾತನನಾದ ಪರಮಾತ್ಮನೇ ಎಂಬುದು ಸ್ಪಷ್ಟವಾಗಿದೆ. ಆದಿಮಧ್ಯಾಂತಗಳಿಲ್ಲದೆ ಮಹತ್ತತ್ತ್ವಕ್ಕಿಂತಲೂ ಮಹಾಂತನಾಗಿ, ತಮಸ್ಸನ್ನೂ ಮೀರಿರುವಾತನಿವನು. ಶಂಖಚಕ್ರಗದಾಧರನೂ ಶ್ರೀವತ್ಸಾಂಕಿತನೂ ನಿತ್ಯಶ್ರೀಸಂಪನ್ನನೂ ಅಜನೂ ಶಾಶ್ವತನೂ ಧ್ರುವನೂ ಆದ ಸತ್ಯಪರಾಕ್ರಮನಾದ ವಿಷ್ಣುವೇ ಈ ಮಾನುಷರೂಪವನ್ನು ತಳೆದು ವಾನರ ರೂಪವನ್ನು ಹೊಂದಿದ ದೇವತೆಗಳಿಂದ ಪರಿವೃತನಾಗಿ ಸರ್ವಲೋಕೇಶ್ವರ ನಾದ್ದರಿಂದ ಎಲ್ಲರಿಗೂ ಹಿತವಾಗಲೆಂದು ರಾಕ್ಷಸಪರಿವಾರದಿಂದೊಡಗೂಡಿದ ನಿನ್ನನ್ನು ವಧಿಸಿರುತ್ತಾನೆನ್ನ ಬೇಕು. ನೀನು ಹಿಂದೆ ಇಂದ್ರಿಯಗಳನ್ನು ಜಯಿಸಿ ಲೋಕತ್ರಯವನ್ನು ಗೆದ್ದುಕೊಂಡೆ ಯಲ್ಲವೆ? ಆ ವೈರವನ್ನು ಸ್ಮರಿಸಿಕೊಂಡವೋ ಎಂಬಂತೆ ಆ ಇಂದ್ರಿಯಗಳೇ ನಿನ್ನನ್ನು ಈಗ ಗೆದ್ದಿರುತ್ತವೆ......" ಈ ಭಾಗವನ್ನು ಮನಮುಟ್ಟಿ ಓದಿದರೆ ಇಂದ್ರಿಯ ಸಂಯಮದಿಂದ ಪರಮೇಶ್ವರನ ಅನುಗ್ರಹವೂ ಇಹಪರಸೌಖ್ಯಗಳೂ ಆಗುವಂತೆ ಇಂದ್ರಿಯಲೌಲ್ಯದಿಂದ ಸರ್ವವಿನಾಶವೂ ಆಗುವ ವೆಂದೂ ಇದೇ ಭಗವಂತನ ಸಂಕಲ್ಪವೆಂದೂ ಯಾರಿಗೆತಾನೆ ಅನ್ನಿಸಲಾರದು?

ಇಷ್ಟೇ ಅಲ್ಲ, ಶ್ರೀರಾಮಾಯಣದ ಕಥೆಯುಕೂಡ ನಿತ್ಯವರ್ತಮಾನವಾದ ಒಂದಾನೊಂದು ತತ್ತ್ವವನ್ನು ತನ್ನಲ್ಲಿ ಅಡಗಿಸಿಕೊಂಡಿದೆ ಎಂದು ಅಭಿಯುಕ್ತರು

ಹೇಳುತ್ತಾರೆ. ಅದನ್ನು ಅರಿತುಕೊಂಡರಂತೂ ನಾವು ವೇದಾರ್ಥವನ್ನೇ ಅರಿತು ಕೊಂಡಂತೆ ಆಗುವದು. ವೇದವೇದ್ಯನಾದ ಪರಮಪುರುಷನು ಶ್ರೀರಾಮಚಂದ್ರ ನಾಗಿ ಅವತರಿಸಲು ವೇದವೇ ವಾಲ್ಮೀಕರಿಂದ ರಾಮಾಯಣರೂಪವನ್ನು ಹೊಂದಿ ಪ್ರಕಟವಾಯಿತು-ಎಂದು ಒಂದು ಸುಭಾಷಿತವಿದೆ. ವೇದದಲ್ಲಿ ಹೇಳಿರುವ ದೇವಾಸುರಸಂಗ್ರಾಮವೇ ವಾನರರಾಕ್ಷಸರ ಯುದ್ಧದ ರೂಪದಲ್ಲಿ ರಾಮಾಯಣದಲ್ಲಿ ವರ್ಣಿತವಾಗಿದೆ; ಈ ಸಂಗ್ರಾಮವು ಒಂದಾನೊಂದು ಕಾಲದಲ್ಲಿ ನಡೆಯಿತೆಂದು ಬರಿಯ ಭೂತಕಾಲಕ್ಕೇ ಇದನ್ನು ಸೇರಿಸಿಕೊಳ್ಳುವದಕ್ಕಿಂತಲೂ ಈಗಲೂ ಅಧ್ಯಾತ್ಮವಾಗಿ ನಮ್ಮೆಲ್ಲರ ಒಳಗೂ ಈ ದೇವಾಸುರರ ಸ್ಪರ್ಧೆಯು ನಡೆಯುತ್ತಲೇ ಇರುವದೆಂದು ತಿಳಿದರೆ ರಾಮಾಯಣವು ನಮ್ಮ ನಮ್ಮ ಒಳಗೇ ಅಭಿನಯ ವಾಗುತ್ತಿರುವದೆಂಬುದನ್ನು ಮನಗಾಣಬಹುದು. ಶಾಸ್ತ್ರೀಯವಾದ ಸಂಸ್ಕಾರ ಗಳಿಂದೊಡಗೂಡಿದ ಇಂದ್ರಿಯವೃತ್ತಿಗಳೇ ದೇವತೆಗಳು; ಸ್ವಾಭಾವಿಕವಾದ ಲೌಕಿಕ ಸಂಸ್ಕಾರಗಳಿಂದೊಡಗೂಡಿದ ಇಂದ್ರಿಯ ವೃತ್ತಿಗಳೇ ಅಸುರರು. ದೇವಾಸುರರ ಈ ಸ್ಪರ್ಧೆಯಲ್ಲಿ ಒಂದೊಂದು ಸಲ ಒಬ್ಬೊಬ್ಬರಿಗೆ ಜಯವಾಗುತ್ತಿರುವದು. ನಾವು ಬಹಿರ್ಮುಖರಾಗಿ ಇಂದ್ರಿಯಗಳಿಗೆ ವಶರಾದಾಗ ಅಸುರರಿಗೆ ಜಯವಾದಂತೆ; ಇಂದ್ರಿಯಗಳನ್ನು ಬಿಗಿಹಿಡಿದುಕೊಂಡು ಶಾಸ್ತ್ರೀಯವಾದ ಕರ್ಮೋಪಾಸನೆಗಳನ್ನು ಅನುಷ್ಠಾನಮಾಡಿ ಭಗವಂತನಕಡೆಗೆ ತಿರುಗುವದಕ್ಕೆ ಪ್ರಯತ್ನಿಸಿದರೆ ದೇವತೆಗಳಿಗೆ ಜಯವಾದಂತೆ. ಶ್ರೀರಾಮಚಂದ್ರನು ವಾನರರಿಂದೊಡಗೂಡಿ ಲಂಕೆಯನ್ನು ಮುತ್ತಿ ರಾಕ್ಷಸ ಸೇನಾಪರಿವೃತನಾದ ರಾವಣನನ್ನು ಸದೆಬಡಿದಂತೆ ನಾವೂ ಉತ್ತಮವಾದ ಶಾಸ್ತ್ರೀಯವಾಸನೆಗಳನ್ನು ಸಹಾಯವಾಗಿ ಮಾಡಿಕೊಂಡು ಆಸುರವೃತ್ತಿಗಳನ್ನು ಗೆದ್ದುಕೊಳ್ಳಬೇಕು. ಶ್ರೀರಾಮನು ಸೀತೆಯಿಂದ ಮತ್ತೆ ಕೂಡಿಕೊಂಡಂತೆಯೇ ಶುದ್ಧ ಸಾತ್ತ್ವಿಕವಾದ ಬುದ್ಧಿವೃತ್ತಿಯಿಂದ ನಾವೂ ಕೂಡಿಕೊಂಡು ನಮ್ಮ ಪರಮಾರ್ಥ ವಾದ ಸ್ವರೂಪವಾದ ಪರಮಾತ್ಮತತ್ತ್ವದಲ್ಲಿ ನೆಲೆನಿಲ್ಲಬೇಕು. ಇದೇ ರಾಮಾಯಣದ ಒಳ ಅರ್ಥವು-ಎಂದು ತತ್ತ್ವಜ್ಞರು ಬೋಧಿಸುತ್ತಾರೆ. ಈ ಬೋಧೆಯನ್ನು ಮನ ದಂದರೆ ತತ್ತ್ವಮಸಿ ಎಂಬ ವೇದಾಂತವಾಕ್ಯದ ತಾತ್ಪರ್ಯವೇ ಇಲ್ಲಿ ಬಂದಿರುತ್ತದೆ ಎಂದು ನಾವು ತಿಳಿಯಬಹುದಲ್ಲವೆ?

ಈ ವಿಚಾರಸರಣಿಯನ್ನು ಮನದಂದರೆ ಚತುರ್ಮುಖಬ್ರಹ್ಮನು ಶ್ರೀರಾಮ ಚಂದ್ರನನ್ನು ನಾರಾಯಣನೆಂದು ಸಂಬೋಧಿಸಿ ಮಾಡಿದ ಸ್ತೋತ್ರಕ್ಕೆ ಇನ್ನಷ್ಟು ಪುಷ್ಟಿಯು ದೊರಕುತ್ತದೆ. ಸೀತಾದೇವಿಯು ಅಗ್ನಿಪ್ರವೇಶವನ್ನು ಮಾಡಿದ ಸಂದರ್ಭದಲ್ಲಿ ಸುತ್ತಲೂ ನಿಂತಿದ್ದ ವಾನರರೂ ರಾಕ್ಷಸರೂ ಹಾ! ಹಾ! ಎಂದು

ದುಃಖಪ್ರದರ್ಶನವನ್ನು ಮಾಡುತ್ತಿರಲು ಅಲ್ಲಿಗೆ ಸಕಲ ದೇವತೆಗಳೂ ತಮ್ಮತಮ್ಮ ವಿಮಾನಗಳಿಂದಿಳಿದು ಬಂದರೆಂದೂ ಆ ಕಾಲಕ್ಕೆ ಚತುರ್ಮುಖಬ್ರಹ್ಮನನ್ನು ಶ್ರೀರಾಮನು "ನಾನು ಯಾರು? ಯಾರವನು? ಎಲ್ಲಿಂದ ಬಂದೆನು? ಇದನ್ನೆಲ್ಲ ಪೂಜ್ಯರಾದ ತಾವು ಹೇಳಬೇಕು" ಎಂದು ಕೇಳಿದನೆಂದೂ ವಾಲ್ಮೀಕರು ವರ್ಣಿಸಿರುತ್ತಾರೆ. ಅದಕ್ಕೆ ಬ್ರಹ್ಮನು "ಸತ್ಯಪರಾಕ್ರಮನಾದ ರಾಮನೆ, ನಿಜವನ್ನು ಕೇಳು; ನೀನು ವಿಭುವಾದ ಶ್ರೀನಾರಾಯಣನೇ" ಎಂದು ಆತನ ಮಹಿಮೆಯನ್ನು ಕೊಂಡಾಡಿರುತ್ತಾನೆ. ಅವಿದ್ಯೆಯಿಂದ ತಾನು ಸಂಸಾರಿಯಾದ ಜೀವನೆಂದು ತಿಳಿದು ಕೊಂಡಿರುವವನು ಯಜ್ಞದಾನತಪಸ್ಸುಗಳಿಂದ ಬುದ್ಧಿಶುದ್ಧಿಯನ್ನು ಪಡೆದು ವೈರಾಗ್ಯದಿಂದ ಸದ್ಗುರುವನ್ನು ಸೇರಿ ತತ್ತ್ವವನ್ನು ವಿಚಾರಮಾಡಲು "ನೀನು ಬ್ರಹ್ಮವೇ" ಎಂದು ಆತನು ಉಪದೇಶಿಸಿದ ಮಾತ್ರದಿಂದ ತತ್ತ್ವಜ್ಞಾನವನ್ನು ಪಡೆದು ಸರ್ವಾತ್ಮಭಾವವನ್ನು ಹೊಂದುವನು ಎಂಬ ವೇದಾಂತಾರ್ಥವೇ ಇದೆಂದು ಭಾವಿಸಿದರೆ ತಪ್ಪೇನು?

ಹೀಗೆ ನೋಡಿದರೆ ಗೀತಾರಾಮಾಯಣಗಳಂಥ ಧಾರ್ಮಿಕಗ್ರಂಥಗಳು ಒಂದೊಂದು ಮಹಾಮಂತ್ರವಿದ್ದಂತೆ ಇರುವವೆಂಬುದು ನಮಗೆ ಮನದಟ್ಟಾಗು ವದರಲ್ಲಿ ಸಂಶಯವಿಲ್ಲ. ಮಂತ್ರವನ್ನು ಸಿದ್ಧಪುರುಷರಿಂದ ಉಪದೇಶಿಸಿಕೊಂಡು ಅರ್ಥಾನುಸಂಧಾನಪೂರ್ವಕವಾಗಿ ಜಪಿಸಿದಂತೆಲ್ಲ ಅದರ ಬಲವು ನಮ್ಮ ಕಾರ್ಯಕರಣಸಂಘಾತದಲ್ಲೆಲ್ಲ ತೋರಿಕೊಳ್ಳುವದಲ್ಲದೆ ಬೇರೆಬೇರೆಯ ಭೂಮಿಕೆ ಗಳಲ್ಲಿ ಬೇರೆಬೇರೆಯ ಸಿದ್ಧಿಗಳೂ ತೋರಿಕೊಳ್ಳುವವೆಂದು ಮಂತ್ರಜ್ಞರು ಹೇಳುತ್ತಾರೆ. ಇದರಂತೆ ಈ ಗ್ರಂಥಗಳನ್ನು ಬಲ್ಲವರ ಉಪದೇಶದಿಂದ ಪಾರಾಯಣ ಮಾಡುವ ವರಿಗೆ ಅದರಿಂದ ಕ್ರಮಕ್ರಮವಾಗಿ ಉತ್ತರೋತ್ತರವಾಗಿ ಬೆಲೆಯುಳ್ಳ ತತ್ತ್ವಗಳು ಮನಸ್ಸಿಗೆ ಹೊಳೆಯುವವು. ಅವುಗಳನ್ನು ಅರಗಿಸಿಕೊಂಡು ಸ್ವಾತ್ಮ್ಯವಾಗಿ ಮಾಡಿ ಕೊಂಡವರಿಗೆ ಬಗೆಬಗೆಯ ಅಧ್ಯಾತ್ಮಶಕ್ತಿಗಳು ತೋರಿಕೊಳ್ಳುವವು; ಇಹಜೀವನವು ಸುಲಲಿತವಾಗಿ ಆನಂದದಿಂದ ಸಾಗುವದು; ಧರ್ಮಮಾರ್ಗದಲ್ಲಿಯೇ ಮುನ್ನಡೆ ಯುವ ಉತ್ಸಾಹವು ಪುಟಗೊಳ್ಳುವದು; ತಮ್ಮ ಸುತ್ತುವಳೆಯವನ್ನೆಲ್ಲ ಸುಖ ಮಯವಾಗಿ ಮಾಡಿ ಎಲ್ಲರಿಗೂ ಆದರ್ಶವಾದ ಜೀವನವನ್ನು ನಡೆಯಿಸುವ ಸುಯೋಗವು ಲಭಿಸುವದು. ಎಲ್ಲಕ್ಕೂ ಮೇಲಾಗಿ ವಿದ್ಯೆಗಳಲ್ಲೆಲ್ಲ ಶ್ರೇಷ್ಠವಾದ ಅಧ್ಯಾತ್ಮವಿದ್ಯೆಯ ಮರ್ಮವು ಮನದಟ್ಟಾಗಿ ಜಗತ್ತಿಗೆಲ್ಲ ಆತ್ಮನಾಗಿರುವ ಶ್ರೀಮನ್ನಾರಾಯಣನಲ್ಲಿಯೇ ನೆಲೆನಿಲ್ಲುವ ಮಹಾಸಿದ್ಧಿಯು ತಾನೇ ಅಳವಡುವದು. ಇದೇ ಪಾರಾಯಣದ ಪರಮಫಲವು.

# 27. ಗ್ರಂಥಗಳ ಸದುಪಯೋಗ

ವೇದಾಧ್ಯಯನವು ಪೂರ್ವದಲ್ಲಿ ಶ್ರವಣಪೂರ್ವಕವಾಗಿ ನಡೆಯುತ್ತಿತ್ತೇ ಹೊರತು ಈಗಿನಂತೆ ಪುಸ್ತಕಪಾಠವಾಗಿರಲಿಲ್ಲ. ಪುಸ್ತಕದ ದ್ವಾರದಿಂದ ವೇದವನ್ನು ಕಲಿಯುವವನು ಪಾಠಕಾಧಮನು, ತೀರ ಕೀಳು ಅಂತಸ್ತಿನ ಪಾಠಕನು-ಎಂದು ನಮ್ಮ ಹಿರಿಯರು ಎಣಿಸಿದ್ದರು. ಬರೆಯುವ ವಿದ್ಯೆಯು ವೇದದ ಕಾಲದಲ್ಲಿ ಇನ್ನೂ ಆಚರಣೆಗೆ ಬಾರದ್ದರಿಂದಲೂ ಪುಸ್ತಕಗಳನ್ನು ಅಚ್ಚುಮಾಡಿಸುವ ಕೌಶಲ್ಯವು ಬಹಳ ಈಚೆಗೆ ಮಾನವನಿಗೆ ತಿಳಿಯಿತಾದ್ದರಿಂದಲೂ ಪುರಾತನಕಾಲದಲ್ಲಿ ಈ ಶ್ರವಣಪದ್ಧತಿಯು ಅನುಷ್ಠಾನದಲ್ಲಿತ್ತೆಂದು ಕೆಲವರು ಐತಿಹಾಸಿಕದೃಷ್ಟಿಯಿಂದ ನಿರ್ಣಯಿಸಿರುತ್ತಾರೆ. ಆ ನಿರ್ಣಯದಲ್ಲಿ ಎಷ್ಟುಮಟ್ಟಿನ ನಿಜದ ಅಂಶವು ಇರಬಹುದೆಂಬುದನ್ನು ಪುರಾತತ್ತ್ವಶೋಧಕರಿಗೆ ಬಿಟ್ಟುಬಿಡಬಹುದು. ಆದರೆ ಅಚ್ಚಿನ ಪುಸ್ತಕಗಳು ಕೋಟ್ಯನುಕೋಟಿಯಾಗಿ ಪ್ರತಿವರ್ಷವೂ ಹೊರಬೀಳುತ್ತಿರುವ ಈ ನಮ್ಮ ಯುಗಕ್ಕೂ ಅಧ್ಯಾತ್ಮಗ್ರಂಥಗಳನ್ನು ಶ್ರವಣಪದ್ಧತಿಯಿಂದ ದೊರಕಿಸಿಕೊಂಡು ಮನನಮಾಡುವದೇ ಹೆಚ್ಚು ಲಾಭದಾಯಕವಾಗಿರುತ್ತದೆ ಎಂಬುದು ಅಬಾಧಿತಸತ್ಯವಾಗಿರುತ್ತದೆ. ಎಷ್ಟು ಜಾಗರೂಕತೆಯಿಂದ ಮುದ್ರಿಸಿದ ಪುಸ್ತಕದಲ್ಲಿಯೂ ಅಕ್ಷರಸ್ಖಾಲಿತ್ಯಗಳು ತಪ್ಪುವದಿಲ್ಲ. ಗ್ರಂಥವನ್ನು ಬರೆದವರು, ಅಚ್ಚಿನ ಮೊಳೆಗಳನ್ನು ಜೋಡಿಸುವವರು, ಅಚ್ಚುಮಾಡುವವರು, ಅಚ್ಚಿನ ಕರಡುಗಳನ್ನು ತಿದ್ದುವವರು-ಮುಂತಾದವರ ದೃಷ್ಟಿದೋಷದಿಂದಲೂ ಮತಿದೋಷದಿಂದಲೂ ಎಷ್ಟೋ ತಪ್ಪುಗಳು ಪುಸ್ತಕಗಳಲ್ಲಿ ಸೇರಿಕೊಂಡಿರುತ್ತವೆ. ಇದರ ಜೊತೆಗೆ ಪುಸ್ತಕವನ್ನು ಓದುವವರಿಗೆಲ್ಲ ಗ್ರಂಥಕರ್ತನ ಆಶಯಕ್ಕೆ ಅನುಗುಣವಾಗಿ ಓದಿಕೊಂಡು ವಿಷಯವನ್ನು ಅರ್ಥಮಾಡಿಕೊಳ್ಳುವಷ್ಟು ಗ್ರಹಣಶಕ್ತಿಯು ಇರುವದೆಂದು ಹೇಳುವದಕ್ಕೆ ಬರುವದಿಲ್ಲ. ಈ ಕಾರಣದಿಂದ ಅಧ್ಯಾತ್ಮಗ್ರಂಥಗಳು ಅಚ್ಚಾಗಿರುವ ಈ ಕಾಲದಲ್ಲಿಯೂ ವಿಷಯವನ್ನು ಗ್ರಹಿಸಿ ಅನುಭವದಲ್ಲಿಟ್ಟುಕೊಂಡಿರುವ ಸದ್ಗುರುವಿನ ಉಪದೇಶವನ್ನು ಶ್ರವಣ ಮಾಡಿಯೇ ಗ್ರಹಿಸುವದು ಒಳ್ಳೆಯದೆಂದು ಧೈರ್ಯದಿಂದ ಹೇಳಬಹುದಾಗಿದೆ.

ಇದಂತಿರಲಿ, ಅಧ್ಯಾತ್ಮಗ್ರಂಥಗಳನ್ನು ಸರಿಯಾದ ಮಾರ್ಗದಿಂದಲೇ ಸದ್ಗುರುವಿನ ಉಪದೇಶದ ಶ್ರವಣದ ದ್ವಾರದಿಂದಲೇ, ಪಾರಾಯಣಮಾಡಿದ ಬಳಿಕ ಸಾಧಕನು ಏನು ಮಾಡಬೇಕು?-ಎಂಬುದು ಈ ಲೇಖನದ ಪ್ರಧಾನ ವಿಷಯವು. ಗ್ರಂಥದ ಪಾರಾಯಣವು ಯಾರ ಮನಸ್ಸಿನಮೇಲೆ ಪೂರ್ಣವಾಗಿ ತನ್ನ ಪ್ರಭಾವವನ್ನು ಬೀರಿರುತ್ತದೆಯೋ ಅಂಥವರಿಗೆ ಈ ಪ್ರಶ್ನೆಯಿಂದ ಯಾವ ಉಪಯೋಗವೂ ಇಲ್ಲ. ಏಕೆಂದರೆ ಸದ್ಗ್ರಂಥಗಳ ಪಠನವು ಮನಸ್ಸಿನಲ್ಲಿ ಸದ್ಭಾವನೆಗಳನ್ನು ಮುದ್ರೆಯೊತ್ತಿ

ದಂತೆ ಮಾಡಿಸಿಬಿಡುತ್ತದೆ. ಮನಸ್ಸಿನಲ್ಲಿ ಯಾವ ಭಾವಗಳು ಬಲವಾಗಿ ಮೂಡಿಕೊಳ್ಳುವವೋ ಅವು ಅವಶ್ಯವಾಗಿ ಮನುಷ್ಯನನ್ನು ತಮಗೆ ಅನುರೂಪವಾದ ಕ್ರಿಯೆಯಲ್ಲಿ ತೊಡಗುವಂತೆ ಮಾಡಿಬಿಡುವವು. ಆದರೆ ಯಾರಿಗೆ ಅಧ್ಯಾತ್ಮಗ್ರಂಥಗಳ ಪಠನವು ಇನ್ನೂ ಮನಸ್ಸಿನ ಮೇಲೆ ತಮ್ಮ ಪರಿಣಾಮವನ್ನು ಮಾಡಿಲ್ಲವೋ, ಅಂಥವರು ಯಾವ ಗುರಿಯನ್ನಿಟ್ಟುಕೊಂಡು ಪಠಿಸಬೇಕು? ಆ ಗ್ರಂಥಗಳ ಸದುಪಯೋಗವನ್ನು ಹೇಗೆ ಮಾಡಿಕೊಳ್ಳಬೇಕು?– ಎಂಬ ಪ್ರಶ್ನೆಗೆ ಉತ್ತರವನ್ನು ಬಯಸುವದು ಸ್ವಾಭಾವಿಕವಾಗಿದೆ.

ಅಧ್ಯಾತ್ಮಗ್ರಂಥಗಳನ್ನು ಓದಿ ಕೆಲಕೆಲವು ಶ್ಲೋಕಗಳನ್ನೂ ಗ್ರಂಥ ಭಾಗಗಳನ್ನೂ ಬಾಯಿಗೆ ಗಟ್ಟಿಮಾಡಿಕೊಂಡು ಸಂಭಾಷಣೆಯಲ್ಲಿಯೂ ಸಭೆಗಳಲ್ಲಿಯೂ ಪಾಂಡಿತ್ಯಪ್ರದರ್ಶನಕ್ಕೆ ಉಪಕರಣವಾಗಿ ಮಾಡಿಕೊಳ್ಳುವವರು ಅನೇಕರು ಕಣ್ಣಿಗೆ ಬೀಳುತ್ತಾರೆ. ಸಮಾಜಸುಧಾರಣೆ, ರಾಜಕೀಯವಿಚಾರ–ಮುಂತಾದವುಗಳಿಗೆ ಸಂಬಂಧಪಟ್ಟ ವ್ಯವಹಾರದಲ್ಲಿ ಕೂಡ ಜನರು ಭಗವದ್ಗೀತೆ, ಭಾರತ, ರಾಮಾಯಣ –ಮುಂತಾದವುಗಳಿಂದ ಶ್ಲೋಕಾದಿಗಳನ್ನು ಎತ್ತಿಕೊಂಡು ಉದಾಹರಿಸುತ್ತಿರುವದು ಈಗ ವಾಡಿಕೆಯಲ್ಲಿದೆ. ನಮ್ಮ ದೇಶದ ಸಂಸ್ಕೃತಿಯನ್ನು ನೆನಪಿಗೆ ತಂದುಕೊಳ್ಳುವದಕ್ಕೆ ಇದೊಂದು ಉಪಾಯವೇ ಸರಿ. ಆದರೆ ಅಧ್ಯಾತ್ಮಗ್ರಂಥಗಳು ಹೀಗೆ ಬರಿಯ ಭಾಷೆಯ ಅಲಂಕಾರಸ್ಥಾನದಲ್ಲಿ ಮಾತ್ರ ಇರುವದಕ್ಕೆಂದು ಏರ್ಪಟ್ಟವಲ್ಲ. ಅವುಗಳಲ್ಲಿರುವ ಭಾವವು ನಮ್ಮ ಮನಸ್ಸಿನಲ್ಲಿ ಮನೆಮಾಡಿಕೊಂಡು ನಮ್ಮ ನಿತ್ಯಜೀವನದಲ್ಲಿ ರೂಪಿಸಿಕೊಳ್ಳಬೇಕೆಂಬುದೇ ಗ್ರಂಥಕರ್ತರ ಅಭಿಲಾಷೆ. ಮನಸ್ಸಿನ ಭಾವವು ನಮ್ಮ ಸಂನಿವೇಶವನ್ನೆಲ್ಲ ಮಾರ್ಪಡಿಸುತ್ತಿರುವದೆಂಬುದೊಂದು ನಿತ್ಯನಿಯಮವು. ಇದು ನಿಜವಾದರೆ ಅಧ್ಯಾತ್ಮಗ್ರಂಥಗಳಲ್ಲಿರುವ ಭಾವಗಳು ನಮ್ಮ ಮನಸ್ಸಿನ ಮೇಲೆ ನಿಜವಾದ ಪರಿಣಾಮವನ್ನು ಮಾಡಿದ್ದಕ್ಕೆ ನಮ್ಮ ಹೊರವಳಯವೆಲ್ಲ ಆ ಭಾವಗಳಿಗೆ ಅನುಗುಣವಾಗಿ ರೂಪಿಸಿಕೊಳ್ಳುವದೇ ಸಾಕ್ಷಿ. ಆದ್ದರಿಂದ ನಾವು ಆ ಗ್ರಂಥಗಳನ್ನು ಈ ಹೆಗ್ಗುರಿಯಿಂದಲೇ ಪಠಿಸಬೇಕು.

ಸಾಮಾನ್ಯವಾಗಿ ಮಾನವನ ಭಾವಗಳಿಗೂ ವ್ಯವಹಾರಕ್ಕೂ ಹೊಂದುಗೆಯಿರುವದಿಲ್ಲ. ಮನಸ್ಸಿನಲ್ಲಿ ಆಗಾಗ್ಗೆ ಅವನಿಗೆ ಉತ್ತಮಭಾವನೆಗಳು ಎದ್ದುಕೊಳ್ಳುವದುಂಟು; ಆದರೆ ಆ ಭಾವನೆಗಳನ್ನು ತನ್ನ ನಡೆನುಡಿಗಳಲ್ಲಿ ರೂಪಕ್ಕೆ ತರೋಣವೆಂದು ಅವನು ಸಂಕಲ್ಪಿಸಿದರೂ ಅವನಿಗೆ ಏಕೋ ಆಗದೆ ಇರುತ್ತದೆ. ಸುಳ್ಳುಹೇಳಬಾರದು, ಜನರನ್ನು ಮೋಸಗೊಳಿಸಬಾರದು, ಯಾವ ಪ್ರಾಣಿಯನ್ನೂ ಹಿಂಸಿಸಬಾರದು–ಎಂದಮುಂತಾದದ್ದರ ತಿಳಿವಳಿಕೆಯೇನೋ ಅವನಿಗೆ ಇದ್ದೇ ಇರುತ್ತದೆ;

ಆದರೂ ಈ ಮಾಡಬಾರದ ಕಾರ್ಯಗಳನ್ನು ಮತ್ತೆ ಮತ್ತೆ ಮಾಡುತ್ತಲೇ ಇರುತ್ತಾನೆ. ಸತ್ಯವನ್ನೇ ಹೇಳಬೇಕು, ಧರ್ಮವನ್ನೇ ಆಚರಿಸಬೇಕು, ಪರೋಪಕಾರ ವನ್ನು ಮಾಡಬೇಕು, ಎಲ್ಲರನ್ನೂ ಪ್ರೀತಿಸಬೇಕು-ಎಂಬುದೂ ಅವನಿಗೆ ತಿಳಿದಿರು ತ್ತದೆ; ಆದರೂ ಅವನು ಈ ಮಾಡಬೇಕಾದ ಕಾರ್ಯಗಳನ್ನು ಮಾಡುವದೇ ಇಲ್ಲ. ಇದೇಕೆ? ಎಂದರೆ, ಮನಸ್ಸಿನಲ್ಲಿರುವ ಭಾವವು ಕಾರ್ಯರಂಗಕ್ಕಿಳಿಯುವಷ್ಟು ಬಲವಾಗಿರುವದಿಲ್ಲ. ಕೆರೆಯು ತುಂಬಿದಮೇಲಲ್ಲವೆ, ಕೋಡಿಹರಿಯುವದು? ಇದರಂತೆ ಮನಸ್ಸಿನಲ್ಲಿ ಸದ್ಭಾವನೆಗಳೇ ತುಂಬಿತುಳುಕುವಂತಾಗಬೇಕು. ಆಗ ನಾವು ತಪ್ಪದೆ ಮನಸ್ಸಿನಲ್ಲಿ ಭಾವಿಸಿದಂತೆಯೇ ಆಚರಿಸುವದಕ್ಕೆ ಮೊದಲುಮಾಡುವೆವು.

ಗೀತೆ, ರಾಮಾಯಣ, ಭಾರತ, ಪುರಾಣಗಳು-ಇವುಗಳನ್ನು ಸುಮ್ಮನೆ ಓದಿದರೆ ಸಾಲದು; ಅವುಗಳನ್ನು ಕ್ರಮವರಿತು ಓದಿದ ಬಳಿಕ, ವ್ಯವಹಾರವನ್ನು ಅವಕ್ಕೆ ಅನುಗುಣವಾಗಿ ಮಾರ್ಪಡಿಸಿಕೊಳ್ಳುವದಕ್ಕೆ ಪ್ರಯತ್ನಿಸಬೇಕು. ಅಧ್ಯಾತ್ಮಗ್ರಂಥಗಳಲ್ಲಿ ಹೇಳಿರುವ ಕರ್ಮಗಳನ್ನು ಮಾಡಬೇಕೆಂಬ ಆಶೆಯು ಹುಟ್ಟಿದವನೇ ಧನ್ಯನು. ಆದರೆ ಆ ಕರ್ಮಗಳನ್ನು ಕೇವಲ ಸ್ವಾರ್ಥಕ್ಕೆ ಉಪಯೋಗಿಸಿಕೊಳ್ಳುವ ಹಂತವನ್ನು ಮೀರಿರುವವನು ಮತ್ತೂ ಧನ್ಯನು. ಶಾಸ್ತ್ರದಲ್ಲಿ ಹೇಳಿರುವ ಕಾಯಿಕವಾಚಿಕಮಾನಸಿಕ ಕರ್ಮಗಳನ್ನು ಸ್ವಾರ್ಥಬುದ್ಧಿಯಿಲ್ಲದೆ ಈಶ್ವರನ ಆರಾಧನೆ ಎಂಬ ಭಾವದಿಂದ ಮಾಡುವದಕ್ಕೆ ಯಾವನು ಹೊರಡುವನೋ ಅವನಿಗೇ ಗ್ರಂಥಗಳ ಪಠನದ ಪರಮಫಲವು ದೊರಕಿದಂತಾಯಿತು.

ಅಧ್ಯಾತ್ಮಶಾಸ್ತ್ರದ ಸಾಧನವಿಷಯಕವಾದ ಉಪದೇಶವನ್ನು ಯಮ, ನಿಯಮ-ಎಂಬ ಎರಡು ಮಾತುಗಳಿಂದ ಸಂಗ್ರಹಿಸಬಹುದು. ಇವುಗಳೊಳಗೆ ನಿಯಮ ವೆಂಬುದು ಶರೀರಪ್ರಧಾನವಾಗಿರುತ್ತದೆ. ಶರೀರವು ತಾಮಸವ್ಯಾಪಾರದಿಂದ ಆಲಸ್ಯ ದಲ್ಲಿಯೇ ಮುಳುಗಿ ಯಾವದೊಂದು ಸಪ್ರಯೋಜನವಾದ ಕರ್ಮವನ್ನೂ ಮಾಡಲೊಲ್ಲದೆ ಇರುತ್ತದೆ. ಇಂಥ ಅವಸ್ಥೆಯಲ್ಲಿ ಶಾಸ್ತ್ರದಲ್ಲಿ ಹೇಳಿದಂತೆ ಅದನ್ನು ಯುಕ್ತಾಹಾರವಿಹಾರಗಳಿಂದ ಸ್ವಾಧೀನಕ್ಕೆ ತೆಗೆದುಕೊಂಡು ಉತ್ತಮವಾದ ಆಚಾರಗಳನ್ನು ಅವಲಂಬಿಸುವಂತೆ ಮಾಡಿಕೊಳ್ಳುವದೇ ನಿಯಮವು. ಈ ನಿಯಮವು ಮನಸ್ಸಿನ ಸಹಾಯವನ್ನು ಪಡೆಯದೆ ಇದ್ದರೆ ಬರಿಯ ದಾಂಭಿಕವಾಗಿ ಬಿಡುತ್ತದೆ. ಶೌಚ, ಸ್ನಾನ, ಆಚಮನ, ಶುಭ್ರವಸ್ತ್ರಧಾರಣ, ಜಪಾದ್ಯನುಷ್ಠಾನ, ದೇವತಾರ್ಚನ, ಉಪವಾಸ, ಅತಿಥಿಪೂಜೆ, ವ್ರತಾದಿಗಳನ್ನು ಮಾಡುವದು-ಇವೆಲ್ಲ ಮನಃಪೂರ್ವಕವಾಗಿ ಮಾಡಿದರೇ ತಮ್ಮ ಮುಖ್ಯಫಲವನ್ನು ಕೊಡುತ್ತವೆ. ಒಬ್ಬ ಮನುಷ್ಯನು ಪ್ರತಿನಿತ್ಯವೂ ಗರಡಿಯ ಮನೆಗೆ ಹೋಗಿಬಂದಮಾತ್ರದಿಂದ

ಅವನ ಶರೀರಕ್ಕೆ ಸಾಧನೆಯಾಗಲಾರದು, ಲಾಘವವಾಗಲಿ ಬಲವಾಗಲಿ ದಕ್ಕಲಾರದು. ಗರಡಿಯ ಮನೆಗೆ ನಿಯಮದಿಂದ ಹೋಗುವದೇನೊ ಬೇಕೇಬೇಕು; ಆದರೆ ಅಲ್ಲಿ ಸಾಧನೆಯನ್ನೂ ಮಾಡುವದು ಅತ್ಯವಶ್ಯವಾಗಿ ಬೇಕು. ಹೀಗೆಯೇ ಶರೀರಪ್ರಧಾನವಾದ ಆಚಾರಗಳು ಒಳ್ಳೆಯವೇ ಸರಿ; ಆದರೆ ಅದಕ್ಕೆ ಮನಸ್ಸಿನ ಹಿಂತಡಿಕೆಯು ಅತ್ಯವಶ್ಯವಾಗಿರುತ್ತದೆ.

ಈ ದೃಷ್ಟಿಯಿಂದ ನೋಡಿದರೆ ಯಮವೆಂಬ ಮನಃಪ್ರಧಾನವಾದ ಸಾಧನದ ಬೆಲೆಯು ಎಷ್ಟು ಹೆಚ್ಚಿನದೆಂಬುದು ನಮಗೆ ಮನದಟ್ಟಾಗುತ್ತದೆ. ಮನುಸ್ಮೃತಿಯಲ್ಲಿ ಹೇಳಿರುವದೇನೆಂದರೆ "ಯಮವೆಂಬ ಸಾಧನಗಳನ್ನು ಮಾಡದಿದ್ದರೆ ಪತಿತನಾಗುತ್ತಾನೆ, ಕೇವಲ ನಿಯಮಗಳನ್ನು–ಯಮರಹಿತವಾದ ಬರಿಯ ನಿಯಮಗಳನ್ನು–ಮಾಡುತ್ತಿದ್ದರೂ ಪತಿತನಾಗುತ್ತಾನೆ". ಅಧ್ಯಾತ್ಮ ಸಾಧನವೆಂಬುದೇ ಮನಸ್ಸಿಗೆ ಸಂಬಂಧಪಟ್ಟದ್ದು. ಯಾವನು ಮನಸ್ಸನ್ನು ಸರಿಯಾಗಿಟ್ಟುಕೊಂಡಿರುತ್ತಾನೋ ಅವನೇ ಜೀವನದ ಜೀವಾಳವನ್ನು ಬಲ್ಲವನು. ಇದನ್ನು ತಿಳಿಸುವದಕ್ಕೆಂದೇ ಗೀತಾದಿಗ್ರಂಥಗಳಲ್ಲಿ ಅಮಾನಿತ್ವ, ಅದಂಭಿತ್ವ, ಅಹಿಂಸಾ, ಕ್ಷಾಂತಿ, ಆರ್ಜವ–ಮುಂತಾದ ಸಾಧನಗಳನ್ನು ಮತ್ತೆಮತ್ತೆ ಉಪದೇಶಿಸಿರುತ್ತದೆ. ಆದ್ದರಿಂದ ಅಂಥ ಗ್ರಂಥಗಳನ್ನು ಪಾರಾಯಣಮಾಡಿದ್ದಕ್ಕೆ ಈ ಸಾಧನಗಳು ಅಳವಟ್ಟದ್ದೇ ಮುಖ್ಯ ಪ್ರಯೋಜನವು; ಆ ಸಾಧನಗಳು ಅಳವಟ್ಟದ್ದಕ್ಕೆ ನಮ್ಮ ಜೀವನವು ಸುಖಮಯವಾಗಿ ಪರಿಣಮಿಸುವದೇ ಪ್ರತ್ಯಕ್ಷವಾದ ಫಲವು.

ವೇದದಲ್ಲಿಯೂ ಅದಕ್ಕನುಸಾರವಾದ ಸ್ಮೃತಿಗಳಲ್ಲಿಯೂ ಕಾಮ್ಯಕರ್ಮಗಳೆಂಬ ಹೆಸರಿನಿಂದ ಕೆಲವು ಕರ್ಮಗಳನ್ನು ವಿಧಿಸಿರುತ್ತದೆ. ಮನುಷ್ಯನಿಗೆ ಬೇರೆಬೇರೆಯ ಕಾಮಗಳಿರುವದರಿಂದ ಅವುಗಳನ್ನು ಪಡೆಯುವದಕ್ಕೆ ಇಚ್ಛಿಸುವದು ಸ್ವಾಭಾವಿಕವೇ ಸರಿ. ಆದರೆ ಆಯಾ ಕಾಮಗಳು ಅನಿತ್ಯವಾಗಿರುತ್ತವೆ. ಮತ್ತು ಅವುಗಳ ಆಶೆಯಿಂದ ಮನುಷ್ಯನ ಮನಸ್ಸು ಪ್ರಕ್ಷುಬ್ಧವೂ ಆಗುತ್ತದೆ. ಬೇರೆಬೇರೆಯ ಕಾಮಗಳಿಂದ ಮನುಷ್ಯನ ವಿವೇಚನಶಕ್ತಿಯು ನಷ್ಟವಾಗಿ ಹೋಗುತ್ತದೆ; ಆದ್ದರಿಂದಲೇ ಅವನು ಕಂಡಕಂಡವರನ್ನು ಕಾಲುಕಟ್ಟಿಕೊಂಡು 'ಅದನ್ನು ಮಾಡಿಕೊಡಿ, ಇದನ್ನು ಮಾಡಿಕೊಡಿ' ಎಂದು ಅಂಗಲಾಚಿ ಬೇಡಿಕೊಳ್ಳುತ್ತಿರುತ್ತಾನೆ. ಈ ದೈನ್ಯಬುದ್ಧಿಯು ಎಲ್ಲಿಯವರೆಗೆ ಇರುತ್ತದೆಯೋ ಅಲ್ಲಿಯವರೆಗೆ ಹೆಚ್ಚಿನ ಪುರುಷಾರ್ಥದ ಕಡೆಗೆ ಮನಸ್ಸು ಹರಿಯುವದೇ ಇಲ್ಲ. ಆದ್ದರಿಂದಲೇ ವಿವೇಕಿಗಳಾದವರು ಮಾಡಬಾರದೆಂದು ಶಾಸ್ತ್ರದಲ್ಲಿ ಹೇಳಿರುವ ನಿಷಿದ್ಧಕರ್ಮಗಳಂತೆಯೇ ಕಾಮ್ಯಕರ್ಮಗಳನ್ನೂ ಬಿಟ್ಟು ಬಿಡಬೇಕೆಂದು ಬಲ್ಲವರು ಉಪದೇಶಿಸುತ್ತಿರುತ್ತಾರೆ.

ಕಾಮ್ಯಕರ್ಮಗಳನ್ನು ಮಾಡುವದೇನೂ ಪಾಪವಲ್ಲ; ಅದು ಮನುಷ್ಯನ ಸ್ವಭಾವಕ್ಕನುಗುಣವಾಗಿರುತ್ತದೆ. ಆದರೆ ಕಾಮಗಳನ್ನು ಸಂಪಾದಿಸುವದಕ್ಕೆ ಮನುಷ್ಯನು ಅನುಸರಿಸುತ್ತಿರುವ ಮಾರ್ಗವು ಸರಿಯಾಗಿರುವದು ಅತ್ಯವಶ್ಯ. ಮನುಷ್ಯನಿಗೆ ಕೆಲಕೆಲವು ಜೀವನದ ಆವಶ್ಯಕತೆಗಳಿರುತ್ತವೆ. ಆಹಾರ, ವಸ್ತ್ರ, ಮನೆ, ಆರೋಗ್ಯ, ನಿತ್ಯಜೀವನವನ್ನು ಸಾಗಿಸುವದಕ್ಕೆ ಬೇಕಾದಷ್ಟು ಹಣಕಾಸು-ಮುಂತಾದದ್ದು-ಇವೆಲ್ಲ ಬೇಕೇಬೇಕು. ಆದರೆ ನಮಗೆ ಇವೇ ಬೇಕು, ಇನ್ನೇನೂ ಬೇಡ-ಎಂಬ ಮನೋಭಾವವು ಸರಿಯಲ್ಲ. ಆದ್ದರಿಂದಲೇ ಮನುಷ್ಯನು ಆಯಾ ಕಾಮಗಳ ಪರಿಪೂರ್ತಿಗಾಗಿ ಆಯಾ ದೇವತೆಗಳನ್ನು ಪೂಜಿಸಬೇಕೆಂದು ವೇದದಲ್ಲಿ ವಿಧಿಸಿರುತ್ತದೆ. ದೇವತೆಗಳ ಅಸ್ತಿತ್ವದಲ್ಲಿ ನಂಬಿಕೆಯಿಲ್ಲದವರ ಸಂಖ್ಯೆಯು ಹೆಚ್ಚುತ್ತಿರುವ ಈ ಕಾಲದಲ್ಲಿ ಆ ಕರ್ಮಗಳ ಬೆಲೆಯೂ ಕಡಿಮೆಯಾಗಿ ತೋರಬಹುದು; ಆದ್ದರಿಂದಲೇ ಜನರು ದೇವತೆಗಳನ್ನು ನಂಬುವದಕ್ಕಿಂತ ತಮ್ಮ ಒಡನಾಡಿಗಳಾದ ಹೆಚ್ಚಿನಂತಸ್ತಿನ ಮನುಷ್ಯರ ಅಡಿಯಾಳಾಗಿ ದುಡಿಯುವದಕ್ಕೆ ಸಿದ್ಧರಾಗಿರುತ್ತಾರೆ. ಆದರೆ ಶಾಸ್ತ್ರದೃಷ್ಟಿಯಿಂದ ನೋಡಿದರೆ ದೇವತೆಗಳು ಈಗಲೂ ಇರುತ್ತಾರೆ; ಅವರುಗಳ ಉಪಾಸನೆಯಿಂದ ಈಗಲೂ ಆಯಾ ಕಾಮಗಳ ಪ್ರಾಪ್ತಿಯು ಆಗುವ ಭರವಸೆಯಿದೆ. ಲೋಕದಲ್ಲಿ ಮನುಷ್ಯನು ತಾನೇ ಪ್ರಯತ್ನಮಾಡುವದಕ್ಕೂ ದೇವತೆಗಳ ಸಹಾಯದಿಂದ ಪ್ರಯತ್ನಮಾಡುವದಕ್ಕೂ ಬಹಳ ತಾರತಮ್ಯವಿರುತ್ತದೆ. ಆದ್ದರಿಂದಲೇ ಭಗವದ್ಗೀತೆಯಲ್ಲಿ "ಯಾವಯಾವನು ಯಾವಯಾವ ದೇವತೆಯನ್ನು ಆರಾಧಿಸುವದಕ್ಕೆ ಹೊರಡುತ್ತಾನೋ ಅವನವನಿಗೆ ಆಯಾ ದೇವತೆಯಲ್ಲಿಯೇ ಶ್ರದ್ಧೆಯು ನೆಡುವಂತೆ ನಾನು ಮಾಡುತ್ತೇನೆ. ಆ ಶ್ರದ್ಧೆಯಿಂದ ಮಾಡಿದ ಆರಾಧನೆಯಿಂದ ಜನರು ಆ ದೇವತೆಗಳಿಂದ ತಮ್ಮತಮ್ಮ ಕಾಮಗಳನ್ನು ಪಡೆದುಕೊಳ್ಳುತ್ತಾರೆ" ಎಂದು ಭಗವಂತನೇ ಅಪ್ಪಣೆಕೊಡಿಸಿರುತ್ತಾನೆ.

ಆದರೆ ಇಲ್ಲಿ ಒಂದು ವಿಶೇಷ. ದೇವತೆಗಳಿಂದ ಈ ಪುಡಿಕಾಮಗಳನ್ನು ಪಡೆಯುವದಕ್ಕೂ ಭಗವಂತನನ್ನೇ ನೇರಾಗಿ ಪೂಜಿಸಿ ಕಾಮಪ್ರಾಪ್ತಿಯನ್ನು ಪಡೆಯುವದಕ್ಕೂ ಒಂದು ವಿಶೇಷವಿದೆ. ಆ ದೇವತೆಗಳೆಂದರೆ ಬೇರೆ ಯಾರೂ ಅಲ್ಲ; ಅವರು ನಿಜವಾಗಿ ಭಗವಂತನ ಶಕ್ತಿವಿಶೇಷಗಳೇ ಆಗಿರುತ್ತಾರೆ. ಜನರಿಗೆ ಈ ಗುಟ್ಟು ತಿಳಿಯದೆ ಇರುವದರಿಂದ ದೇವತೆಗಳು ಅನಂತವಾಗಿರುತ್ತಾರೆಂಬ ನಂಬಿಕೆಯಾಗಿರುತ್ತದೆ. ದೇವತೆಗಳಿಂದ ಫಲವು ಬಂತೆಂಬುದೂ ಭಗವಂತನಿಂದಲೇ ಬರುತ್ತದೆ; ಆದರೆ ಅವರಿಗೆ ಅದು ಭಗವಂತನಿಂದ ಬಂದಿದೆ ಎಂಬದರ ಅರಿವು ಇರುವದಿಲ್ಲ. ನಲ್ಲಿಯ ಬಾಯಿಯಿಂದ ಬರುವ ನೀರು ಮೂಲಜಲಾಶಯ

ವಾದ ಕೆರೆ ಅಥವಾ ನದಿಯಿಂದಲೇ ಬರುವಂತೆ ಆ ಬೇರೆಬೇರೆಯ ದೇವತೆಗಳಿಂದ ಬರುವದೆಂದು ನಾವು ನಂಬಬಹುದಾದ ಫಲವೂ ಭಗವಂತನಿಂದಲೇ ಬಂದದ್ದಾಗಿರುತ್ತದೆ. ಬಿಡಿಬಿಡಿಯಾಗಿ ದೇವತೆಗಳ ಉಪಾಸನೆಯಿಂದ ಪಡೆದ ಫಲಗಳು ಅನಿತ್ಯವಾಗಿರುತ್ತವೆ; ಆದರೆ ಭಗವಂತನ ಆರಾಧನೆಯಿಂದ ಪೂರ್ಣಫಲವಾದ ಅನಂತವಾದ ಪುರುಷಾರ್ಥವೂ ದೊರಕುತ್ತದೆ, ನಮಗೆ ಅತ್ಯಂತ ಅವಶ್ಯವಾಗಿ ಬೇಕಾಗುವ ಕಾಮಗಳೂ ನಾವು ಪ್ರಾರ್ಥಿಸದಿದ್ದರೂ ಹೂವಿನೊಡನೆ ಸುಗಂಧವೂ ದೊರಕುವಂತೆ ತಾವೇ ದೊರಕಿಬಿಡುವವು.

ಆದ್ದರಿಂದ ವಿವೇಕಿಗಳಾದವರು ಅಧ್ಯಾತ್ಮಗ್ರಂಥಗಳ ಪೂರ್ಣಪ್ರಯೋಜನವನ್ನು ಪಡೆಯಬೇಕೆಂಬ ಇಚ್ಛೆಯನ್ನೇ ಮಾಡುತ್ತಾರೆ. ಅದರಿಂದ ಅವರಿಗೆ ಇಹಲೋಕದ ಜೀವನವು ಕಷ್ಟತರವಾಗುವದೆಂಬ ಅಂಜಿಕೆಯೇನೂ ಇಲ್ಲ. ದಯಾಲುವಾದ ಭಗವಂತನು ತನ್ನ ಭಕ್ತರ ಯೋಗಕ್ಷೇಮವನ್ನು ತಾನೇ ವಹಿಸುತ್ತಾನೆ; ಅವರಿಗೆ ಕೊನೆಯಲ್ಲಿ ಪರಮಪುರುಷಾರ್ಥವೂ ದೊರಕುವಂತೆ ಮಾಡುತ್ತಾನೆ.

ಮನುಷ್ಯನಿಗೆ ಇಂಥಿಂಥ ಸಂಕಟದಿಂದ ಪಾರಾಗಬೇಕು ಎಂಬ ತಲ್ಲಣವಿರಬಹುದು; ಮನಸ್ಸು ಯಾವದೋ ಒಂದು ಕಾರಣದಿಂದ ಕುಸಿದುಬಿದ್ದಿರುವದನ್ನು ಸರಿಪಡಿಸಿಕೊಳ್ಳಬೇಕೆಂಬ ಹಂಬಲಿಕೆಯು ನಮಗಿರಬಹುದು; ತನಗೆ ಆಗಿರುವ ಹಣಕಾಸಿನ ಮುಗ್ಗಟ್ಟಿನಿಂದ ಪಾರಾಗಬೇಕೆಂದು ಅಥವಾ ಹೆಚ್ಚಿನ ಸುಖಸಾಮಗ್ರಿಗಳಿಂದ ಜೀವನವು ಸುಪಥವಾಗಿ ಸಾಗಬೇಕೆಂಬ ಹವಣಿಕೆಯಿರಬಹುದು; ತನಗೆ ಬಂದೊದಗಿರುವ ಯಾವದೋ ಅನಿರೀಕ್ಷಿತವಾದ ಭಯದಿಂದ ಪಾರಾಗಬೇಕೆಂಬ ಕಾತರಿಕೆಯಿರಬಹುದು; ಘೋರವಾದ ಯಾವದೋ ಒಂದು ರೋಗದಿಂದ ಬಿಡುಗಡೆಯನ್ನು ಹೊಂದಬೇಕೆಂಬ ಔತ್ಕಂಠ್ಯವಿರಬಹುದು. ಈ ಇಷ್ಟಾರ್ಥಗಳು ಬೇರೆಬೇರೆಯ ಸಾಧನಗಳಿಂದ ನೆರವೇರಬೇಕಾಗಿರುವದೆಂಬುದು ನಮ್ಮ ಲೌಕಿಕದೃಷ್ಟಿ ಆದರೆ ಶಾಸ್ತ್ರದೃಷ್ಟಿಯಿಂದ ನೋಡಿದರೆ ಈ ಬಗೆಯ ಕುಂದುಕೊರತೆಗಳಿಗೆಲ್ಲ ಒಂದೇ ನಿದಾನವಿದೆ; ಇವುಗಳಿಗೆಲ್ಲ ಒಂದೇ ಚಿಕಿತ್ಸೆಯು ಸಾಕಾಗಿರುತ್ತದೆ. ನಮ್ಮ ಮನಸ್ಸಿನಲ್ಲಿರುವ ಕ್ಷುದ್ರಭಾವನೆಗಳು ಹೋಗಿಬಿಡಬೇಕು; ಅವುಗಳ ಸ್ಥಾನವನ್ನು ಅವುಗಳ ವಿರುದ್ಧವಾದ ಶುಭಭಾವನೆಗಳು ತುಂಬಿಕೊಳ್ಳಬೇಕು. ಶುಭಭಾವನೆಗಳು ನಮ್ಮ ಅಂತಃಕರಣದಲ್ಲಿ ಅತ್ಯಂತವಾಗಿ ಪ್ರಬಲವಾಗಬೇಕು; ಅವಕ್ಕೆ ಅನುಗುಣವಾದ ಕರ್ಮಗಳು ನಮ್ಮ ವ್ಯವಹಾರದಲ್ಲಿ ಪ್ರಾರಂಭವಾಗಬೇಕು.

ಅಧ್ಯಾತ್ಮಗ್ರಂಥಪಠನದ ಪೂರ್ಣಪ್ರಯೋಜನವು ನಿಮಗೆ ಆಗಬೇಕೆ? ಹಾಗಾದರೆ ಈ ಕೂಡಲೆ ಆ ಗ್ರಂಥಗಳಲ್ಲಿರುವ ಭಾವನೆಗಳಲ್ಲಿ ನಿಮಗೆ ಮೆಚ್ಚಾಗುವ ಒಂದು

ಭಾವನೆಯನ್ನು ನಿಮ್ಮ ಅಂತಃಕರಣದಲ್ಲಿ ಎತ್ತಿಹಿಡಿದುಕೊಳ್ಳಿರಿ. ಅದನ್ನೇ ಚೆನ್ನಾಗಿ ಬೆಳೆಯಿಸಿಕೊಳ್ಳಿರಿ, ಆ ಭಾವನೆಯು ಕರ್ಮರೂಪವಾಗಿ ಹೊರಗೆ ಮೊಳಕೆಯಾಗು ವಂತೆ ಪ್ರಯತ್ನಿಸಿರಿ. ನೀವು ಮಾಡುವ ಶಾಸ್ತ್ರೀಯ ಕರ್ಮಗಳನ್ನೂ ಲೌಕಿಕ ಕರ್ಮಗಳನ್ನೂ ಭಗವಂತನ ಆರಾಧನೆಯಾಗುವಂತೆ ಮಾಡಿರಿ. ಅಲ್ಲಿಂದ ಮುಂದಕ್ಕೆ ನಿಮ್ಮ ಜೀವನವು ಸುಖಮಯವಾಗುವದು.

## 28. ಅಧ್ಯಾತ್ಮ ಗ್ರಂಥಗಳಲ್ಲಿ ಅಭಿರುಚಿ

ಅಧ್ಯಾತ್ಮಪ್ರಕಾಶದಂಥ ಪತ್ರಿಕೆಗಳಿಗೆ ಚಂದಾದಾರರು ಏಕೆ ಹೆಚ್ಚುವದಿಲ್ಲ? ಎಂದು ಕೆಲವರು ಕೇಳುತ್ತಾರೆ. ಸಾಮಾನ್ಯದೃಷ್ಟಿಯಿಂದ ನೋಡಿದರೆ ಇದಕ್ಕೆ ಅನೇಕ ಕಾರಣಗಳನ್ನು ಹೇಳಬಹುದು. ಈ ಪತ್ರಿಕೆಯ ವ್ಯವಸ್ಥಾಪಕರು ಪತ್ರಿಕೆಯನ್ನು ಕುರಿತು ಹೆಚ್ಚಾಗಿ ಪ್ರಚಾರವನ್ನು ಮಾಡದೆ ಇರಬಹುದು. ಅಂದರೆ ತಕ್ಕಷ್ಟು ಏಜಂಟರುಗಳನ್ನು ಇಟ್ಟುಕೊಳ್ಳುವದು, ಚಂದಾದಾರರನ್ನು ಸಂಗ್ರಹಿಸುವದಕ್ಕಾಗಿ ಅಲ್ಲಲ್ಲಿ ಸುತ್ತಾಡಿ ಜನರಿಗೆ ತಿಳಿವಳಿಕೆಕೊಡುವದು, ಬೇರೆಬೇರೆ ಪ್ರಾಂತಗಳ ಪತ್ರಿಕೆಗಳಲ್ಲಿ ತಮ್ಮ ವಿಷಯವಾಗಿ ವಿವರಗಳನ್ನು ಕೊಡುವದು-ಮುಂತಾದ ಕಾರ್ಯವು ಸಾಕಾದಷ್ಟು ನಡೆಯದೆ ಇರಬಹುದು. ಅಥವಾ ಈಗಿನ ಕಾಲಕ್ಕೆ ತಕ್ಕಂಥ ಸುಲಭವಾದ ಚಿತ್ತಾಕರ್ಷಕವಾದ ರೀತಿಯಿಂದ ವಿವಿಧವಾದ ಲೇಖನ ಗಳನ್ನೂ ಬರೆಯಿಸದೆ ಇರಬಹುದು. ಆದರೆ ನನಗೆ ತೋರುವ ಮುಖ್ಯವಾದ ಕಾರಣವು ಮತ್ತೊಂದಿದೆ. ಅಧ್ಯಾತ್ಮವಿಚಾರಗಳನ್ನು ನಾವು ಎಷ್ಟೇ ಪ್ರಚಾರಮಾಡಲಿ, ಎಷ್ಟೇ ಸುಲಭಗೊಳಿಸಲಿ, ಎಷ್ಟೇ ವೈಭವದಿಂದ ಮನೋರಂಜಕವಾಗಿ ಮಾಡಲಿ, ಈ ಬಗೆಯ ವಿಚಾರವು ರುಚಿಸುವ ಅಂತಸ್ತಿಗೆ ಏರದ ಮನಸ್ಸಿನವರಿಗೆ ಇಂಥ ಪತ್ರಿಕೆಗಳು ಎಂದಿಗೂ ಬೇಕಾಗುವದೇ ಇಲ್ಲ.

ಅಧ್ಯಾತ್ಮಗ್ರಂಥಗಳನ್ನು ತಾವು ಓದುತ್ತೇವೆಂದು ಹೊರಗೆ ತೋರಿಸಿಕೊಳ್ಳುವ ಜನರು ಅನೇಕರಿರಬಹುದು. ಆದರೆ ಅವುಗಳಿಂದಾಗುವ ನಿಜವಾದ ಪ್ರಯೋಜನವನ್ನು ಪಡೆಯುವ ಮಟ್ಟಕ್ಕೆ ಎಲ್ಲರ ಮನಸ್ಸೂ ಏರಿರುವದಿಲ್ಲ. ಎಲ್ಲಿಯವರೆಗೆ ಸತ್ಕರ್ಮಗಳ ಫಲವಾಗಿ ಪರಮೇಶ್ವರನ ಅನುಗ್ರಹವಾಗಿರುವದಿಲ್ಲವೋ ಅಲ್ಲಿಯವರೆಗೆ ಯಾವನಿಗೂ ಸಚ್ಛಾಸ್ತ್ರವಾಗಲಿ ಸದ್ಗುರುವಾಗಲಿ ದೊರೆಯುವದೇ ಇಲ್ಲ ಎಂದು ಬಲ್ಲವರು ಹೇಳುತ್ತಾರೆ. ಸಚ್ಛಾಸ್ತ್ರವನ್ನೊಳಗೊಂಡ ಪುಸ್ತಕಗಳು ಅಚ್ಚಾಗಿಲ್ಲವೆಂದಾಗಲಿ ಆ ಪುಸ್ತಕಗಳ ಬೆಲೆಯು ಬಹಳವಾಗಿರುವದರಿಂದ ಅವುಗಳನ್ನು ಎಲ್ಲರೂ ಕೊಂಡುಕೊಳ್ಳಲಾರರೆಂದಾಗಲಿ ನನ್ನ ಅಭಿಪ್ರಾಯವಿಲ್ಲ; ಅಥವಾ ಸಚ್ಛಾಸ್ತ್ರಗಳ ಅಭಿಪ್ರಾಯವನ್ನೂ ಸತ್ಸಾಧನಗಳ ಮರ್ಮಗಳನ್ನೂ ತಿಳಿಯಹೇಳಬಲ್ಲ ಸದ್ಗುರುಗಳು

ಎಲ್ಲರ ಕಣ್ಣಿಗೂ ಬೀಳುವದಿಲ್ಲವೆಂದೂ ನನ್ನ ಅಭಿಪ್ರಾಯವಿಲ್ಲ. ಉತ್ತಮವಾದ ಪುಸ್ತಕಗಳು ಸಿಕ್ಕಿದರೂ ಅವುಗಳನ್ನು ಓದಿದ ಮೇಲೂ ಅವುಗಳಲ್ಲಿರುವ ಅಭಿಪ್ರಾಯಗಳು ಸರಿಯಾಗಿ ತೋರುವದಕ್ಕೆ ಒಂದಾನೊಂದು ಅಧಿಕಾರಸಂಪತ್ತು ಬೇಕಾಗುತ್ತದೆ. ಉದಾತ್ತವಾದ ಸಾಧನಗಳನ್ನೂ ಸಿದ್ಧಾಂತಗಳನ್ನೂ ತಿಳಿಸುವ ಮಹಾತ್ಮರು ಎದುರಿಗೇ ಇದ್ದರೂ ಅವರಲ್ಲಿ ಶ್ರದ್ಧಾಭಕ್ತಿಗಳುಂಟಾಗುವದಕ್ಕೂ ಅವರ ಉಪದೇಶವು ಮನಸ್ಸಿನ ಮೇಲೆ ಪರಿಣಾಮವಾಗುವದಕ್ಕೂ ಒಂದಾನೊಂದು ಅಧಿಕಾರ ಸಂಪತ್ತು ಬೇಕಾಗುತ್ತದೆ. ಈ ಅಧಿಕಾರವು ಉಂಟಾಗುವವರೆಗೂ ಅಧ್ಯಾತ್ಮ ಗ್ರಂಥಗಳನ್ನು ಓದಿದರೂ ಓದಿದಂತಲ್ಲ. ಸತ್ಪುರುಷರ ಬೋಧೆಯನ್ನು ಕೇಳಿದರೂ ಕೇಳಿದಂತಲ್ಲ.

ಶ್ರೀಕೃಷ್ಣಭಗವಂತನು ಗೀತೋಪದೇಶವನ್ನೆಲ್ಲ ಮಾಡಿಮುಗಿಸಿದ ಬಳಿಕ "ಪಾರ್ಥನೆ, ಈ ನಾನು ಹೇಳಿದ ಮಾತನ್ನು ನೀನು ಏಕಾಗ್ರಚಿತ್ತದಿಂದ ಕೇಳಿದೆಯೇನು? ಧನಂಜಯನೆ, ನಿನ್ನ ಅಜ್ಞಾನಸಂಮೋಹವು ಸಂಪೂರ್ಣವಾಗಿ ನಾಶವಾಯಿತೇನು?" ಎಂದು ಕೇಳಿರುತ್ತಾನೆ. ಭಗವಂತನು ಹೇಳಿದ ಮಾತುಗಳು ಅರ್ಜುನನ ಕಿವಿಗೆ ಬಿದ್ದಿರಬಹುದು. ಆದರೆ ಅದನ್ನು ಏಕಾಗ್ರಚಿತ್ತದಿಂದ ಕೇಳಿ ಅಭಿಪ್ರಾಯವನ್ನು ಒಳಕ್ಕಿಳಿಸಿಕೊಂಡದ್ದಾಯಿತೊ? ಅದರ ಫಲವಾಗಿ ಮೋಹವು ಸಂಪೂರ್ಣವಾಗಿ ತೊಲಗಿತೊ? ತಿಳಿಯಬೇಕಾದದ್ದು ಚೆನ್ನಾಗಿ ತಿಳಿಯಿತೊ? ಎಂಬುದೀಗ ಭಗವಂತನ ಪ್ರಶ್ನೆ. ಹೇಳಿದವನು ಭಗವಂತನು, ಕೇಳುತ್ತಿದ್ದವನು ಅರ್ಜುನನಂಥ ಉತ್ತಮಾಧಿಕಾರಿಯು; ಆಗಲೂ ಭಗವಂತನು 'ಇದನ್ನು ಕೇಳಿದೆಯೊ?' ಎಂದು ಪ್ರಶ್ನೆಹಾಕಿರುತ್ತಾನೆ. ಹೀಗಿರುವಲ್ಲಿ ಸಾಮಾನ್ಯಜನರಿಗೆ ಅಧ್ಯಾತ್ಮವಿಚಾರಗಳು ಕಿವಿಗೆ ಬಿದ್ದ ಮಾತ್ರದಿಂದ ಅವರು ನಿಜವಾಗಿ ಕೇಳುತ್ತಾರೆಂಬ ಭರವಸೆ ಎಲ್ಲಿಯದು?

ಅಧ್ಯಾತ್ಮವಿಚಾರಗಳು ಯಾರ ಮನಸ್ಸಿಗೆ ರುಚಿಸುವದಿಲ್ಲ? ಎಂದರೆ ಯಾರಿಗೆ ತಾವು ಈಗ ಇರುವ ವ್ಯಾವಹಾರಿಕಸ್ಥಿತಿಯೇ ಸರಿಯಾದದ್ದೆಂದು ತೋರುತ್ತಿರುವದೋ, ಯಾರಿಗೆ ತಾವು ಅವಲಂಬಿಸಿರುವ ಲೌಕಿಕದೃಷ್ಟಿಯನ್ನು ಬದಲಾಯಿಸಿ ಕೊಳ್ಳಬೇಕಾದದ್ದಿರುವದೆಂಬುದೇ ಮನವರಿಕೆಯಾಗಿಲ್ಲವೋ, ಅವರಿಗೆ ಅಧ್ಯಾತ್ಮಗ್ರಂಥಗಳಾಗಲಿ ಆ ವಿಚಾರವನ್ನು ತಿಳಿಸುವ ಸಾಧುಸಂತರ ಬೋಧೆಯಾಗಲಿ ಎಂದಿಗೂ ಅವಶ್ಯವೆನಿಸುವದಿಲ್ಲ. ಆದ್ದರಿಂದ ಅವುಗಳು ಎಂದಿಗೂ ಅವರಿಗೆ ರುಚಿಸುವದಿಲ್ಲ. ಲೋಕದಲ್ಲಿಯೇ ನೋಡಿರಿ. ಸಮಾಜದ ತೀರ ಕೆಳಗಿನ ಭೂಮಿಕೆಯಲ್ಲಿದ್ದುಕೊಂಡು ಜೂಜು, ಕಳವು, ಮೋಸ-ಮುಂತಾದವುಗಳನ್ನು ಸ್ವಭಾವದಿಂದಲೇ ಮಾಡುತ್ತಾ ಇರುವ ಒಂದು ಗುಂಪು ಎಲ್ಲಾ ದೇಶದಲ್ಲಿಯೂ ಇದ್ದೇ ಇರುತ್ತದೆ. ಆ ಗುಂಪಿನವರಿಗೆ

ಕಷ್ಟಪಟ್ಟು ಜೀವನೋಪಾಯವೊಂದನ್ನವಲಂಬಿಸಿಕೊಂಡಿರುವದು ಎಂದಿಗೂ ಬೇಡವಾಗಿರುತ್ತದೆ. ತಮ್ಮ ಎದುರಿಗೇ ಜನರು ಬೇರೆಬೇರೆಯ ಉದ್ಯೋಗಗಳನ್ನು ಕಲ್ಪಿಸಿಕೊಂಡು ಆಹಾರ, ವಸ್ತ್ರ, ಮನೆಮಠಗಳು, ಹಣ, ವಿದ್ಯೆ-ಮುಂತಾದ ಸೌಕರ್ಯಗಳನ್ನು ಕಲ್ಪಿಸಿಕೊಂಡು ಸುಖವಾಗಿ ಜೀವಿಸುತ್ತಿರುವದು ಕಣ್ಣಿಗೆ ಬಿದ್ದರೂ ತಾವು ಈಗ ಇರುವದು ತ್ಯಾಜ್ಯವಾದ ಸ್ಥಿತಿಯೆಂದೇನೂ ಅವರಿಗೆ ತೋರುವದಿಲ್ಲ; ತಾವೂ ಮತ್ತೊಬ್ಬರಂತೆ ಸಮಾಜದಲ್ಲಿ ಉನ್ನತಸ್ಥಿತಿಗೆ ಏರಬೇಕೆಂದೂ ತೋರುವದಿಲ್ಲ. ಅವರಿಗೆ ಕಾನೂನಿನ ನಿರ್ಬಂಧಗಳೂ ಪೋಲೀಸಿನವರ ಬೆಂಗಾವಲೂ ಕಾರಾಗೃಹವಾಸದ ಏರ್ಪಾಡೂ ಅನವಶ್ಯವಾದ ಅಡಚಣೆಗಳೆಂದು ತೋರುವವು. ಅವರಿಗೆ ಯಾರಾದರೂ ಉತ್ತಮಜೀವನದ ಉಪಾಯಗಳನ್ನು ಬೋಧಿಸಿದರೆ ಅಂಥವರನ್ನು ಅವರು ಹಾಸ್ಯ ಮಾಡುವರು; ಅಥವಾ ಅವರ ಮಾತಿಗೆ ಕಿವಿಗೊಡದೆ ತಮ್ಮ ಹೇಯವೃತ್ತಿಯಲ್ಲಿಯೇ ಎಂದಿನಂತೆ ಇದ್ದುಕೊಂಡು ಕಾಲವನ್ನು ಹಾಕುತ್ತಿರುವರು. ಇಂಥ ಸಮಾಜಭಾಗದಲ್ಲಿ ಎಲ್ಲೆಲ್ಲಿಯೋ ಒಬ್ಬೊಬ್ಬನಿಗೆ ದೈವಿಕವಾಗಿ ಒಳ್ಳೆಯವರ ಸಹವಾಸವು ದೊರಕಿದರೆ ಅವನು ಕೂಡಲೆ ತನ್ನ ದುಷ್ಟಮಾರ್ಗವನ್ನು ಬಿಟ್ಟು ಮೇಲಿನ ಸ್ಥಿತಿಗೆ ಏರುವದೂ ಉಂಟು. ಆದರೆ ಅಷ್ಟುಹೊತ್ತಿಗೆ ಅವನ ಯಾವದೋ ಒಂದು ಸತ್ಕರ್ಮವು ಪರಿಪಕ್ವವಾಗಿದೆ ಎಂದು ನಾವು ಎಣಿಸಬೇಕಾಗುತ್ತದೆ. ಅಲ್ಲವೆ?

ಇದರಂತೆಯೇ ಅಧ್ಯಾತ್ಮಗ್ರಂಥಗಳೂ ಅಧ್ಯಾತ್ಮವಿಚಾರಗಳನ್ನು ಬೋಧಿಸುವ ಸಾಧುಗಳೂ ಈ ಭೂಮಂಡಲದಲ್ಲಿ ಎಷ್ಟು ಇದ್ದರೂ ಅವುಗಳಲ್ಲಿ ವ್ಯಾವಹಾರಿಕರಿಗೆ ಯಾವ ಶ್ರದ್ಧಾದರಗಳೂ ಉಂಟಾಗುವಂತಿರುವದಿಲ್ಲ. ಸಾತ್ತ್ವಿಕರನೇಕರು ಶಾಸ್ತ್ರಗಳನ್ನು ಪಠಿಸುತ್ತಿರಬಹುದು, ಸತ್ಪುರುಷರ ಬೋಧೆಯಿಂದ ಬೇರೆಬೇರೆಯ ಸಾಧನಗಳನ್ನು ಅವಲಂಬಿಸುತ್ತಲೂ ಇರಬಹುದು. ಆದರೇನು? ಅದರಿಂದ ಈ ಪ್ರಾಪಂಚಿಕರಿಗೆ ತಮ್ಮ ಸ್ಥಿತಿಯು ಪರಿತ್ಯಾಗಮಾಡಬೇಕಾದದ್ದೆಂದೇನೂ ತೋರುವದಿಲ್ಲ. ತಾವೂ ಅಧ್ಯಾತ್ಮಸಾಧನಗಳನ್ನು ಅವಲಂಬಿಸಿ ಮೇಲಕ್ಕೇರಬಹುದೆಂಬ ಕಲ್ಪನೆಯೇ ಅವರ ಮನದಲ್ಲಿ ಮೂಡುವದಿಲ್ಲ. ತಿಳಿದವರು ಅಲ್ಲಲ್ಲಿ ಈ ಸಂಸಾರವು ಒಂದು ಬಂಧವೆಂದು ಬೋಧಿಸುತ್ತಿದ್ದರೆ, ಅಥವಾ ಪ್ರಪಂಚವ್ಯವಹಾರದಲ್ಲಿಯೇ ಮುಳುಗಿರುವವರನ್ನು ಹಳಿದರೆ, ಅದೊಂದು ತಿಳಿಗೇಡಿತನವೆಂದೂ ಮಾನವ ಸ್ವಾತಂತ್ರ್ಯಕ್ಕೆ ಒಡ್ಡಿರುವ ಅಡಚಣೆಯೆಂದೂ ಅವರು ಭಾವಿಸುವರು. ಇಷ್ಟೇ ಅಲ್ಲ. ಲೋಕದಲ್ಲಿರುವ ಸುಖಸಾಮಗ್ರಿಗಳನ್ನು ಸಂಪಾದಿಸಿಕೊಂಡು ಆನಂದದಿಂದ ಇರಲಾರದ ಹೇಡಿಗಳೇ ಶಾಸ್ತ್ರ, ಗುರು, ಧರ್ಮ, ಪರಲೋಕ-ಎಂದು ಹರಟುತ್ತಾ

ವ್ಯರ್ಥಕಾಲಕ್ಷೇಪವನ್ನು ಮಾಡುತ್ತಿರುವರು, ಅವರು ಸಮಾಜಕ್ಕೇ ಒಂದು ಹೊರೆ ಎಂದು ಅವರು ಎಣಿಸುವರು. ಆದ್ದರಿಂದ ಅಂಥವರಿಗೆ ತತ್ತ್ವಬೋಧೆಯ ಸವಿಯು ಎಂದಿಗೂ ಅರಿಕೆಯಾಗುವ ಸಂಭವವಿರುವದಿಲ್ಲ.

ಹೀಗಿದ್ದರೂ ಈ ಗುಂಪಿನವರಲ್ಲಿಯೇ ಕೆಲಕೆಲವರಿಗೆ, ಅದೇನು ವಿಚಿತ್ರವೊ, ಯಾವದಾದರೊಂದು ನಿಮಿತ್ತದಿಂದ ಈ ಸಂಸಾರವು ತಾವು ಈವರೆಗೆ ತಿಳಿದುಕೊಂಡಿದ್ದಷ್ಟು ಸಾರವತ್ತಾಗಿಲ್ಲವೆಂದು ಒಂದಾನೊಂದು ಕಾಲದಲ್ಲಿ ತೋರುತ್ತದೆ. 'ಇದುವರೆಗೆ ಇಷ್ಟು ಸಂಪಾದಿಸಿಟ್ಟುಕೊಂಡಿರುತ್ತೇನೆ, ಇನ್ನು ಮುಂದೆ ಇಷ್ಟನ್ನು ಸಂಪಾದಿಸಿಕೊಂಡು ಹೀಗೆಹೀಗೆ ಸುಖವನ್ನು ಪಡುವೆನು' ಎಂಬ ರೂಪದ ಹಿಂದಿನ ಕಾಲದ ಸ್ಮರಣೆಯೂ ಮುಂದಿನ ಕಾಲದ ನಿರೀಕ್ಷಣೆಯೂ ಅವರಿಗೆ ಇನ್ನು ಮೇಲೆ ರುಚಿಸುವದಿಲ್ಲ. ಉಂಡದ್ದನ್ನೇ ಉಣ್ಣುತ್ತಾ, ತಿಂದದ್ದನ್ನೇ ತಿನ್ನುತ್ತಾ, ಉಟ್ಟದ್ದನ್ನೇ ಉಡುತ್ತಾ, ಆಡಿದ್ದನ್ನೇ ಆಡುತ್ತಾ ಆಹಾರನಿದ್ರಾಭಯಾದಿಗಳಿಂದ ಕೇವಲ ಪಶುವಿನಂತೆ ಕಾಲವನ್ನು ಹಾಕುವದು ಮಾನವಜನ್ಮಕ್ಕೆ ತಕ್ಕದ್ದಲ್ಲ ಎಂಬ ಅರಿವು ಹೇಗೋ ಅವರಿಗೆ ಹೊಳೆದುಬಿಡುತ್ತದೆ. ಶಬ್ದ, ಸ್ಪರ್ಶ, ರೂಪ, ರಸ, ಗಂಧ-ಎಂಬ ಐದು ವಿಷಯಗಳಿಂದಲೇ ಸುಖವನ್ನು ಹಿಂಡಿಕೊಳ್ಳಬಹುದೆಂಬ ಭ್ರಾಂತಿಯು ಅಂದಿನಿಂದ ಅವರಿಗೆ ತಪ್ಪುವದು. ಈ ಚರ್ವಿತಚರ್ವಣವು ಅವರಿಗೆ ಇನ್ನುಮೇಲೆ ಸೇರುವದಿಲ್ಲ. ಈ ವಿಷಯಗಳಿಂದ ತತ್ಕಾಲಕ್ಕೆ ತೋರಿ ಸ್ವಲ್ಪಕಾಲದಲ್ಲಿಯೇ ಹಾರುವ ಈ ಸುಖವು ನಿಜವಾಗಿ ಸುಖವಾಗಿರಲಾರದು, ಇದಕ್ಕಿಂತಲೂ ಹೆಚ್ಚಿನದೊಂದು ಸುಖವು ಇರಬೇಕು-ಎಂಬ ಸಂಭಾವನಾಯುಕ್ತಿಯೇ ಅವರ ಮನಸ್ಸಿಗೆ ಸೊಗಸುವದು. ಹೆಂಡಿರುಮಕ್ಕಳು, ಮನೆಮಠ, ಹಣಕಾಸು, ವಿದ್ಯಾಬುದ್ಧಿ, ಕೀರ್ತಿ-ಮುಂತಾದವುಗಳನ್ನು ಅವರು ಇನ್ನು ಮೇಲೆ ಹಗೆಮಾಡುವರೆಂದೇನೂ ಅಭಿಪ್ರಾಯವಲ್ಲ. ಚಿಕ್ಕಹುಡುಗರು ಆಡುವದಕ್ಕೆಂದು ಕೂಡಿಹಾಕಿಕೊಳ್ಳುವ ಚಂಡು, ಬುಗುರಿ, ದಾಂಡು-ಮುಂತಾದ ಸಾಮಾನುಗಳನ್ನು ಅವರು ವಯಸ್ಸಿಗೆ ಬರುತ್ತಲೂ ಸ್ವಾಭಾವಿಕವಾಗಿ ಕೈಬಿಡುವಂತೆ ಈ ಜನರೂ ಸಂಸಾರಸುಖದಲ್ಲಿ ದೋಷವನ್ನು ಕಂಡುಕೊಂಡು ಹೆಚ್ಚಿನ ಸುಖವೊಂದು ಇದೆಯೆ? ಇದ್ದರೆ ಅದಕ್ಕೆ ಉಪಾಯವೇನು?- ಎಂಬ ವಿಚಾರವನ್ನು ಮನಸ್ಸಿಗೆ ಹತ್ತಿಸಿಕೊಳ್ಳುವರು. ಇದೂ ಅವರು ಮಾಡಿರುವ ಪುಣ್ಯಗಳ ಪರಪಾಕದ ಫಲವೇ ಎನ್ನಬೇಕು.

ಬಹುಕಾಲ ರೋಗದಲ್ಲಿ ಬಿದ್ದು ನರಳುತ್ತಿದ್ದವರು ಆರೋಗ್ಯವನ್ನು ಪಡೆದುಕೊಂಡಾಗ ಅವರಿಗೆ ಸಾಮಾನ್ಯವಾದ ಅನ್ನ, ಸಾರು-ಇಂಥ ಆಹಾರದಲ್ಲಿಯೂ ಹೆಚ್ಚಿನ ರುಚಿಯು ತೋರುವ ಹಾಗೆ ಇಂಥ ಜನರಿಗೆ ಅಧ್ಯಾತ್ಮವಿಚಾರಗಳನ್ನೊಳಗೊಂಡ

ಭಾಷಣ, ಗ್ರಂಥ, ಪತ್ರಿಕೆ, ಸತ್ಪುರುಷರ ಬೋಧೆ–ಇವುಗಳು ಚೆನ್ನಾಗಿ ರುಚಿಸುವದಕ್ಕೆ ಮೊದಲಾಗುವವು. ಹೂಹಣ್ಣುಗಳಿಂದ ತುಂಬಿರುವ ಉದ್ಯಾನದಲ್ಲಿಯೂ ಕಾಗೆಯು ಬೇವಿನಹಣ್ಣನ್ನೇ ಆರಿಸಿಕೊಳ್ಳುವಂತೆ ಅಧ್ಯಾತ್ಮವಿಚಾರದ ಫಲವೃಕ್ಷಗಳು ಬೇಕಾದಷ್ಟು ಇರುವ ಈ ಲೋಕದಲ್ಲಿ ಮೂರು ಗಳಿಗೆಯ ಬಾಳಿನ ಇಹಜೀವನವನ್ನೂ ವಿಷಯಸುಖವನ್ನೂ ಆರಿಸಿಕೊಳ್ಳುವದಕ್ಕೇ ವಿನಿಯೋಗಿಸುವದು ಅವಿವೇಕವೆಂದು ಅವರಿಗೆ ತೋರುವದು. ಶಾಸ್ತ್ರವಚನಗಳನ್ನು ಪಠನಮಾಡುತ್ತಾ ಬಂದಂತೆಲ್ಲ, ಬಲ್ಲವರ ಬೋಧೆಯನ್ನು ಶ್ರವಣಮಾಡಿದಂತೆಲ್ಲ, ಅವರಿಗೆ ಅಧ್ಯಾತ್ಮ ವಿಚಾರದ ಹಸಿವು ಹೆಚ್ಚುತ್ತಾ ಬರುವದು. ಕಾಮ್ಯಕರ್ಮಗಳನ್ನೂ ನಿಷಿದ್ಧಕರ್ಮಗಳನ್ನೂ ಅವರು ಸಂಪೂರ್ಣವಾಗಿ ಬಿಟ್ಟುಬಿಡುವದಕ್ಕೆ ಪ್ರಯತ್ನಿಸುತ್ತಾರೆ. ಕರ್ಮದಲ್ಲಿ ತಮ್ಮದೆಂಬ ಸಂಗವನ್ನೂ ಕರ್ಮಫಲದಲ್ಲಿ ತಮಗೇ ಅದು ಅವಶ್ಯವಾಗಿ ಆಗಬೇಕೆಂಬ ಹಂಬಲನ್ನೂ ಅವರು ಪೂರ್ಣವಾಗಿ ತೊರೆದುಬಿಡುತ್ತಾರೆ, ಅಥವಾ ತೊರೆಯುವದಕ್ಕೇ ಬಲವಾದ ಪ್ರಯತ್ನವನ್ನು ಮಾಡುತ್ತಾರೆ. ಹೀಗೆ ಮಾಡು ವದರಿಂದ ಚೆನ್ನಾಗಿ ಶುದ್ಧಿಗೊಳಿಸಿದ ಕನ್ನಡಿಯಲ್ಲಿ ಮುಖವು ಅತ್ಯಂತ ಸ್ಪಷ್ಟವಾಗಿ ಕಾಣಿಸುವಂತೆ ಅವರ ಮನಸ್ಸಿನಲ್ಲಿ ತಮ್ಮ ದೋಷಗಳು ಅತ್ಯಂತ ಸ್ಪಷ್ಟವಾಗಿ ಕಾಣಿಸುವದಕ್ಕೆ ಪ್ರಾರಂಭಿಸುವವು. ದೊಡ್ಡವರ ನಡೆನುಡಿಗಳನ್ನು ಅನುಕರಿಸಬೇಕೆಂಬ ತೀವ್ರೇಚ್ಛೆಯು ಅವರನ್ನು ಬಾಧಿಸತೊಡಗುವದು. ಇನ್ನುಮುಂದೆ ಅವರು ಎಂದಿಗೂ ಪ್ರಾಕೃತಜನರ ಸಂಗವನ್ನು ಬಯಸುವದಿಲ್ಲ; ಇನ್ನುಮುಂದೆ ಅವರಿಗೆ ಕೇವಲ ಲೌಕಿಕವಾದ ವಿಷಯಗಳ ಮಾತು ಎಂದಿಗೂ ಮನಸ್ಸಿಗೆ ಬೇಕಾಗುವದಿಲ್ಲ. ಇಂಥವರೇ ಅಧ್ಯಾತ್ಮ ವಿಚಾರಕ್ಕೆ ಮುಖ್ಯಾಧಿಕಾರಿಗಳು.

ವಾಚಕವೃಂದ, ಈವರೆಗೆ ನಾನು ಬರೆದಿರುವದನ್ನು ಓದಿ ನಿಮ್ಮನಿಮ್ಮ ಮನಸ್ಸನ್ನು ನೀವುನೀವೇ ಪರೀಕ್ಷಿಸಿಕೊಳ್ಳಿರಿ. ಮನುಷ್ಯನಿಗೆ ಮತ್ತೊಬ್ಬರ ಗುಣದೋಷ ಗಳನ್ನು ವಿಮರ್ಶೆಮಾಡಿಕೊಳ್ಳುವದರಲ್ಲಿ ಇರುವ ಕೌತೂಹಲವು ತನ್ನ ಗುಣದೋಷ ಗಳನ್ನು ವಿಮರ್ಶೆಮಾಡಿಕೊಳ್ಳುವದರಲ್ಲಿ ಉಂಟಾದರೆ ಮನುಷ್ಯನು ಸನ್ಮಾರ್ಗಕ್ಕೆ ಹತ್ತಿದಂತೆ ಆಯಿತು, ಅವನು ಅಧ್ಯಾತ್ಮತೀರ್ಥಕ್ಕೆ ಹೋಗುವ ಯಾತ್ರಿಕನಾದಂತಾ ಯಿತು. ಆದ್ದರಿಂದ ಮತ್ತೊಬ್ಬರ ವಿಚಾರವು ನಮಗೆ ಬೇಡ, ನಮ್ಮನಮ್ಮ ಅಂತಃ ಕರಣವನ್ನು ನಾವುನಾವೇ ಪರೀಕ್ಷಿಸಿಕೊಳ್ಳೋಣ. ಮತ್ತೊಬ್ಬರು ನಮ್ಮನ್ನು ಹೊಗಳು ವದಾಗಲಿ, ತೆಗಳುವದಾಗಲಿ ಮುಖ್ಯವಲ್ಲ; ಮತ್ತೊಬ್ಬರ ಹೊಗಳಿಕೆಯಿಂದ ಹಿಗ್ಗುವ ಅಥವಾ ಮತ್ತೊಬ್ಬರ ತೆಗಳಿಕೆಯಿಂದ ಕಿಡಿಕಿಡಿಯಾಗುವವನ ಮನಸ್ಸು ಇನ್ನೂ ಅಧ್ಯಾತ್ಮವಿಚಾರಕ್ಕೆ ತಕ್ಕ ಅಧಿಕಾರವನ್ನು ಸಂಪಾದಿಸಿಕೊಂಡಿರುವದಿಲ್ಲ. ಮತ್ತೊಬ್ಬ ರನ್ನು ತಾನು ಕಣ್ಣಿಟ್ಟು ಪರೀಕ್ಷಿಸುವ ಕೌಶಲವನ್ನು ತನ್ನನ್ನು ತಾನೇ ಪರೀಕ್ಷಿಸಿಕೊಳ್ಳು

ವದರಲ್ಲಿ ವಿನಿಯೋಗಿಸುವದಕ್ಕೆ ಪ್ರಾರಂಭಿಸಬೇಕು. ನನಗೆ ನಿಷಿದ್ಧಕರ್ಮದಲ್ಲಿ ಆಸೆಯಿಲ್ಲವೆ?–ಎಂಬುದನ್ನು ಕಂಡುಹಿಡಿಯುವದಕ್ಕೆ ಯತ್ನಿಸಬೇಕು. ಜನರು 'ನೀನು ಇಂಥ ಮಾಡಬಾರದ ಕರ್ಮಗಳನ್ನು ಮಾಡುತ್ತಿರುವೆ' ಎಂದರೆ, ಅಥವಾ ನನ್ನ ಹಿಂದುಗಡೆಯಲ್ಲಿ ನನ್ನನ್ನು ಆಕ್ಷೇಪಿಸುತ್ತಿರುವರೆಂದು ತಿಳಿದರೆ 'ನಾನು ನಿಜವಾಗಿ ಹಾಗೆ ಮಾಡುತ್ತಿರುವೆನೆ?' ಎಂದು ಪರೀಕ್ಷಿಸಿನೋಡಿಕೊಳ್ಳಬೇಕು, 'ನನಗೆ ಯಾವ ಕಾಮ್ಯಕರ್ಮದಲ್ಲಿಯೂ ಆಸಕ್ತಿಯಿಲ್ಲವೆ? ನಾನು ಇಂಥದ್ದೊಂದು ಫಲವಾಗಬೇಕೆಂಬ ಹಂಬಲಿನಿಂದ ಯಾವ ಕರ್ಮವನ್ನೂ ಮಾಡುತ್ತಲಿಲ್ಲವೆ?' ಎಂಬುದನ್ನು ಒಳಹೊಕ್ಕು ನೋಡುವದಕ್ಕೆ ಮೊದಲುಮಾಡಬೇಕು. 'ಇವನಿಗೆ ಬಹಳ ಆಶೆ! ಹಣದ, ಕೀರ್ತಿಯ, ಅಥವಾ ಮತ್ತೆ ಯಾವದಾದರೊಂದರ ಆಶೆಯಿಂದ ಏನುಬೇಕಾದರೂ ಮಾಡಿಬಿಡುತ್ತಾನೆ' ಎಂದು ಯಾರಾದರೂ ಅಂದದ್ದು ತಿಳಿಯಬಂದರೆ ಕೂಡಲೆ 'ನನಗೆ ನಿಜವಾಗಿಯೂ ಇಂಥ ಆಸೆಯಿದೆಯೆ, ಇಲ್ಲವೆ?' ಎಂಬುದನ್ನು ಶಾಂತಮನಸ್ಸಿನಿಂದ ಪರೀಕ್ಷಿಸಿನೋಡುವದಕ್ಕಾರಂಭಿಸಬೇಕು. ಇಂಥ **ಆತ್ಮಪರೀಕ್ಷೆಯೇ** ಅಧ್ಯಾತ್ಮಮಾರ್ಗಕ್ಕೆ **ಮೊದಲನೆಯ ಹೆಜ್ಜೆ.**

ಇದಾದಮೇಲೆ ಶಾಸ್ತ್ರದಲ್ಲಿ ಹೇಳಿರುವ ನಿಷ್ಕಾಮಕರ್ಮದ ಮರ್ಮವನ್ನು ಭೇದಿಸುವದಕ್ಕೆ ಪ್ರಾರಂಭಿಸಬೇಕು; ಬಲ್ಲವರು ಹೇಳುವ ಕರ್ಮಯೋಗದ ಲಕ್ಷಣವನ್ನು ಮನಗಾಣುವದಕ್ಕೂ ನಡೆಯಲ್ಲಿ ತಂದುಕೊಳ್ಳುವದಕ್ಕೂ ಪ್ರಯತ್ನಿಸಬೇಕು. 'ನನಗೆ ಕರ್ಮದಲ್ಲಿ ಮನಸ್ಸು ಹೋಗುವದಿಲ್ಲ. ಕರ್ಮಯೋಗವು ಅಧಮಾಧಿಕಾರಿಗಳ ವಿಷಯವು; ಉತ್ತಮವೇದಾಂತವಿಚಾರಗಳನ್ನು ಮಾಡುವ ಕಾಲವನ್ನು ವ್ಯರ್ಥವಾಗಿ ಕರ್ಮಕ್ಕೆ ಹಾಕಲು ನನ್ನ ಮನಸ್ಸಿಗೆ ಬರುವದಿಲ್ಲ' ಎಂದು ಆತ್ಮಶ್ಲಾಘನೆಯನ್ನು ಮಾಡಿಕೊಳ್ಳಬಾರದು. ನಾನು ಕರ್ಮದ ಹಂತವನ್ನು ಮೀರಿರುತ್ತೇನೆ, ಜ್ಞಾನದ ಉಚ್ಚಭೂಮಿಕೆಯಲ್ಲಿರುತ್ತೇನೆ–ಎಂದು ತನ್ನನ್ನು ತಾನೇ ಶ್ಲಾಘಿಸಿಕೊಳ್ಳುವವನು ಅಧ್ಯಾತ್ಮಮಾರ್ಗದಲ್ಲಿ ಮುಳ್ಳನ್ನು ಹರಡಿಕೊಂಡವನಾಗುತ್ತಾನೆ. ಯಾವ ಕೆಲಸವೇ ಆಗಲಿ, ಈಶ್ವರನ ಪ್ರೀತಿಯಾಗಲಿ ಎಂದು ಸಂಗತ್ಯಾಗಫಲತ್ಯಾಗಗಳನ್ನವಲಂಬಿಸಿ ಮಾಡಿದರೆ ಅದರಿಂದ ಚಿತ್ತವು ಬಹಳ ಮೇಲಿನ ಮಟ್ಟಕ್ಕೆ ಏರುವದು. ಆಲಸ್ಯದಿಂದ ಸುಮ್ಮನೆ ಕೂಡುವ, ಅಥವಾ ತನಗೆ ಅರ್ಥವಾಗದ ಜ್ಞಾನವೈರಾಗ್ಯಾದಿಗಳ ಎಂಜಲು ಮಾತುಗಳನ್ನಾಡಿಕೊಂಡು ಸಂತೋಷಪಡುವ, ದುರಭ್ಯಾಸವು ಹೋಗುವದಕ್ಕೆ ತನ್ನತನ್ನ ಪಾಲಿಗೆ ಬಂದಿರುವ ವ್ಯವಹಾರದ ಕರ್ಮವನ್ನು ಸಂಗತ್ಯಾಗಪೂರ್ವಕವಾಗಿಯೂ ಫಲತ್ಯಾಗಪೂರ್ವಕವಾಗಿಯೂ ಪರಮೇಶ್ವರನ ಆರಾಧನೆಯಾಗಲಿ ಎಂದು ಮಾಡುವದು ಬಲುದೊಡ್ಡ ಸಾಧನವು. ಆದ್ದರಿಂದಲೇ

ಜ್ಞಾನಿಗಳಾದ ಅನೇಕ ಮಹನೀಯರು ತಮಗೆ ಕರ್ಮದಿಂದ ಆಗಬೇಕಾದ ಯಾವ ಪ್ರಯೋಜನವೂ ಇಲ್ಲದಿದ್ದರೂ ಸಾಮಾನ್ಯಜನರಿಗೆ ಮೇಲುಪಙ್ಕ್ತಿಯಾಗಿರಲಿ!- ಎಂಬ ಇಚ್ಛೆಯಿಂದ ತಮ್ಮತಮ್ಮ ಕರ್ಮವನ್ನು ಉತ್ತಮರೀತಿಯಿಂದ ಮಾಡಿ ತೋರಿಸಿರುತ್ತಾರೆ. ನಾವೂ ಅವರ ನಡೆಯನ್ನು ಪ್ರಯತ್ನಪೂರ್ವಕವಾಗಿ ಅನುಕರಿಸಬೇಕು. ಹಿರಿಯರು ಸಂಪಾದಿಸಿಟ್ಟಿರುವ ಆಸ್ತಿಯನ್ನು ಮತ್ತೊಬ್ಬರಿಗೆ ಗುತ್ತಿಗೆಗೆ ಕೊಟ್ಟು, ಅಥವಾ ಅದನ್ನು ಮಾರಿದ ಹಣವನ್ನು ಬ್ಯಾಂಕಿನಲ್ಲಿಟ್ಟು, ಕಾಲಕಾಲಕ್ಕೆ ಊಟಕ್ಕೂ ಮಿಕ್ಕ ಭೋಗಗಳಿಗೂ ಆಗುವಷ್ಟನ್ನು ಉಪಯೋಗಿಸಿ ಕೊಳ್ಳುತ್ತಾ ನನಗೆ ಐಹಿಕ ವ್ಯವಹಾರದಲ್ಲಿ ಅಭಿರುಚಿಯಿಲ್ಲ!- ಎಂದು ಬಡಾಯಿ ಕೊಚ್ಚಿಕೊಳ್ಳುವ ಜನರು ಹಲವರು ಸಿಕ್ಕುತ್ತಾರೆ. ಅಂಥವರು ಸಿದ್ಧರೂ ಅಲ್ಲ, ಸಾಧಕರೂ ಅಲ್ಲ-ಎಂದು ನಿಶ್ಚಯಿಸಬೇಕು. ಎಲ್ಲಿಯವರೆಗೆ ಮನೆಮಠ, ಹೆಂಡಿರು ಮಕ್ಕಳು, ಆಳುಕಾಳು, ಕಾಲಕಾಲಕ್ಕೆ ಊಟತಿಂಡಿ, ಬಟ್ಟೆಬರೆ-ಮುಂತಾದ ಸೌಕರ್ಯಗಳು ಬೇಕೆಂಬ ಆಶೆಯು ನಮ್ಮ ಮನಸ್ಸಿನಲ್ಲಿದ್ದುಕೊಂಡಿರುವದೋ ಅಲ್ಲಿಯವರೆಗೆ ಯಾವ ಕೆಲಸವನ್ನೂ ಮಾಡದೆ ಸುಮ್ಮನೆ ಕುಳಿತುಕೊಳ್ಳುವ ಹಕ್ಕು ನಮಗೆ ಖಂಡಿತವಾಗಿ ಇರುವದಿಲ್ಲ. ಪರಮೇಶ್ವರನ ವಿಚಾರವೇ ಯಾವಾಗಲೂ ನಿಮ್ಮ ಮನಸ್ಸಿನಲ್ಲಿ ಬರುತ್ತಿರುವದೆ? ಊಟ, ನಿದ್ರೆ-ಮುಂತಾದವುಗಳು ಹೋದರೂ ಚಿಂತೆಯಿಲ್ಲ, ಅಧ್ಯಾತ್ಮಚಿಂತನೆಯೇ ನನಗೆ ಬೇಕು!-ಎಂಬ ಹಂಬಲು ನಿಮ್ಮನ್ನು ಹಿಡಿದುಕೊಂಡಿರುವದೆ? ದಿನವೆಲ್ಲ ಒಂದಿಷ್ಟೂ ಬಿಡುವಿಲ್ಲದಂತೆ ಅಧ್ಯಾತ್ಮ ಸಾಧನಾನುಷ್ಠಾನ, ಅಧ್ಯಾತ್ಮಚಿಂತನೆ-ಇವುಗಳಲ್ಲಿಯೇ ಇರುವದು ನಿಮಗೆ ಸಾಧ್ಯವಾಗಿದೆಯೆ? ಎಲ್ಲವನ್ನೂ ಬಿಟ್ಟು ಹಗಲೆಲ್ಲ ಏಕಾಸನದಲ್ಲಿ ಕುಳಿತು ಭಗವನ್ನಾಮವನ್ನು ಅಖಂಡವಾಗಿ ಜಪಿಸುವದಕ್ಕೆ, ಭಗವಂತನ ಧ್ಯಾನದಲ್ಲಿಯೇ ಮುಳುಗಿರುವದಕ್ಕೆ, ಕೊನೆಯ ಪಕ್ಷಕ್ಕೆ ಭಗವದ್ವಿಚಾರವಾಗಿಯೇ ಶ್ರವಣಮನನಗಳನ್ನು ಮಾಡುತ್ತಾ ನಿಮ್ಮ ದೇಹಾದಿಗಳ ಆವಶ್ಯಕತೆಗಳನ್ನು ಕೂಡ ಮರೆತಿರುವದಕ್ಕೆ, ನಿಮಗೆ ಸಾಧ್ಯವಾಗಿದೆಯೆ? ಈ ಪ್ರಶ್ನೆಗಳಿಗೆ ನಿಮಗೆ ನೀವೇ ನಿಷ್ಪಕ್ಷಪಾತವಾದ ಉತ್ತರವನ್ನು ಕೊಟ್ಟುಕೊಳ್ಳಿರಿ. ಇಂಥ ಸ್ಥಿತಿಯನ್ನು ನಿಮ್ಮ ಅಂತಃಕರಣವು ಮುಟ್ಟದೆ ಇದ್ದರೆ ನೀವು ವ್ಯವಹಾರವನ್ನು ಬಿಟ್ಟು ಕೇವಲ ಅಧ್ಯಾತ್ಮವಿಚಾರದಲ್ಲಿಯೇ ಇರುತ್ತೇನೆನ್ನುವದು ಸತ್ಸಂಕಲ್ಪವಲ್ಲವೆಂದು ನಿಶ್ಚಯಿಸಿಕೊಳ್ಳಿರಿ.

ಅಧ್ಯಾತ್ಮಗ್ರಂಥಗಳನ್ನು ಓದುವದರಲ್ಲಿ ಅಭಿರುಚಿಯಾಗುವದೊಂದು ಮಹಾ ಪುಣ್ಯದ ಫಲವು. ಆ ಗ್ರಂಥಗಳಲ್ಲಿ ಹೇಳಿರುವ ಸಾಧನಗಳನ್ನು ಅವಲಂಬಿಸ ಬೇಕೆಂಬ ತಹತಹವುಂಟಾದರೆ ಅದು ಇನ್ನೂಹೆಚ್ಚಿನ ಪುಣ್ಯದ ಫಲವು.

ಅದರಲ್ಲಿಯೂ ಕಾಮ್ಯ ನಿಷಿದ್ಧಕರ್ಮಗಳನ್ನು ಬಿಟ್ಟು ತನಗೆ ಬಂದೊದಗಿರುವ ವ್ಯವಹಾರವನ್ನು ತನಗೆ ಕುಲಕ್ರಮಗತವಾಗಿ ಅಥವಾ ಗುರೂಪದಿಷ್ಟವಾಗಿ ಬಂದೊದಗಿರುವ ಲೌಕಿಕಕರ್ಮಗಳನ್ನೂ ಶಾಸ್ತ್ರೀಯಕರ್ಮಗಳನ್ನೂ ಪರಮೇಶ್ವರನ ಆರಾಧನೆಗೆಂದೇ ಆಚರಿಸುತ್ತಿರುವದು ಒಂದು ಮಹಾತಪಸ್ಸೇ ಸರಿ. ಈ ತಪಸ್ಸಿನ ಫಲವಾಗಿ ಸಂಸಾರದ ಅಲ್ಪಸುಖಗಳಲ್ಲಿ ಆಶೆಯು ಹೋಗಿ ಸಂಸಾರವು ಈಗ ನಮಗೆ ತೋರುತ್ತಿರುವ ರೂಪದಲ್ಲಿ ನಿಸ್ಸಾರವೆಂದೂ ದೋಷಯುಕ್ತವೆಂದೂ ಮನಸ್ಸಿಗೆ ಕಾಣಹತ್ತಿದರೆ, ಇದಕ್ಕಿಂತಲೂ ಹೆಚ್ಚಿನ ಪುರುಷಾರ್ಥವನ್ನು ಕಂಡು ಕೊಳ್ಳಬೇಕೆಂಬ ಹಣ್ಣಾದ ಹಂಬಲಿಕೆಯುಂಟಾದರೆ, ಅದು ಪರಮೇಶ್ವರನ ಪ್ರಸಾದವೆಂದೇ ತಿಳಿಯಬೇಕು.

## 29. ಸತ್ಪುರುಷರ ಸಂಗ

ಅಧ್ಯಾತ್ಮಸಾಧನಾನುಷ್ಠಾನದಲ್ಲಿ ಅಥವಾ ತತ್ತ್ವವಿಚಾರದಲ್ಲಿ ಸ್ವಲ್ಪಮಟ್ಟಿಗೆ ಆದರವುಂಟಾದವರಲ್ಲಿ ಅನೇಕರು ಯಾವದೋ ಒಂದು ಅಂತಸ್ತಿಗೆ ಬಂದು ಹಾಗೆಯೇ ತಮ್ಮ ಜೀವಾವಧಿಯೆಲ್ಲ ಕಾಲಕ್ಷೇಪವನ್ನು ಮಾಡುತ್ತಾ ಉಳಿದುಕೊಂಡು ಬಿಡುತ್ತಾರೆ. ತಾವು ಇನ್ನೂ ಮುಂದಕ್ಕೆ ನಡೆಯಬಹುದಾಗಿದ್ದಿತೆಂಬುದಾಗಲಿ ಪರಮಪುರುಷಾರ್ಥಕ್ಕೂ ತಾವಿರುವ ಸ್ಥಿತಿಗೂ ಬಹಳ ದೂರವೆಂಬುದಾಗಲಿ ಆ ಜನರ ಮನಸ್ಸಿಗೆ ಹೊಳೆದೇ ಇರುವದಿಲ್ಲ. ಇದಕ್ಕೇನು ಕಾರಣ? ಬಹಳ ಸೂಕ್ಷ್ಮಬುದ್ಧಿ ಯವರೆಂದೂ ಅಧ್ಯಾತ್ಮವಿಚಾರದಲ್ಲಿ ಕುಶಲರೆಂದೂ ಹೆಸರಾಂತವರು ಕೂಡ ಈ ಗುಂಪಿನಲ್ಲಿಯೇ ಸೇರಿರುತ್ತಾರೆ. ಹೊರಟ ಸಂಪತ್ತು ದಾರಿಯಲ್ಲಿ ಯಾವ ಅಡಚಣೆಗಳು ಒದಗಿದ್ದರಿಂದ ಅಥವಾ ಯಾವ ಸಹಾಯ ಸಾಲದ್ದರಿಂದ ಅವರಿಗೆ ಮುನ್ನಡೆಯಿಲ್ಲದಾಗುವದೆಂಬುದೊಂದು ಮನನೀಯವಾದ ವಿಚಾರವಾಗಿರುತ್ತದೆ.

ಅಧ್ಯಾತ್ಮಸಾಧನಗಳನ್ನು ಮಾಡುವದಾಗಲಿ ಅಧ್ಯಾತ್ಮವಿಚಾರವನ್ನು ಮಾಡುವ ದಾಗಲಿ ಕೆಲವರಿಗೆ ಪರಿಚಿತವಾದ ವಿಷಯವಾಗಿರುವದಿಲ್ಲ. ಅಂಥವರಿಗೆ ಅಧ್ಯಾತ್ಮ ಜೀವನವೆಂದರೇನೆಂಬುದೇ ತಿಳಿದಿರುವದಿಲ್ಲ. ಆದರೆ ಪೂರ್ವಪುಣ್ಯದ ಫಲವಾಗಿ, ಈಶ್ವರನ ಅನುಗ್ರಹದಿಂದ ಕೆಲವರು ಧಾರ್ಮಿಕಕುಟುಂಬದಲ್ಲಿ ಜನಿಸಿರುತ್ತಾರೆ. ಸ್ನಾನ, ಜಪ, ಪೂಜೆ, ಪಾರಾಯಣ, ದೇವಾಲಯಕ್ಕೆ ಹೋಗಿಬರುವದು, ಹಬ್ಬ ಹರಿದಿನಗಳನ್ನು ಮಾಡುವದು, ದಾನಧರ್ಮಗಳನ್ನು ಮಾಡುತ್ತಿರುವದು–ಈ ಬಗೆಯ ಚಟುವಟಿಕೆಗಳಿರುವ ಕುಟುಂಬದಲ್ಲಿ ಹುಟ್ಟಿರುವದೆಂಬುದೊಂದು ಅಲಭ್ಯ ಲಾಭವು. ಯಾರ ತಂದೆತಾಯಿಗಳು ತಾವೂ ಈಶ್ವರನ ಆರಾಧನೆಯನ್ನು ಮಾಡುತ್ತಾ

ತಮ್ಮ ಮಕ್ಕಳನ್ನೂ ಅತ್ತಕಡೆಗೆ ಚಿತ್ತವಿಡುವಂತೆ ಮಾಡುವರೋ ಅವರ ಸಂತತಿಯು ಪರಮೇಶ್ವರನ ಅನುಗ್ರಹಕ್ಕೆ ಪಾತ್ರವಾದದ್ದೆಂದು ಭಾವಿಸಬೇಕು. ಆದರೆ ಹೀಗೆ ಉತ್ತಮಾಚಾರದವರ ಮನೆಯಲ್ಲಿ ಜನಿಸಿ, ಅಧ್ಯಾತ್ಮಸಾಧನಗಳ ಪರಿಚಯವನ್ನು ಅಷ್ಟಿಷ್ಟು ಮಾಡಿಕೊಂಡ ಬಳಿಕ ಮುಂದಕ್ಕೆ ನಡೆಯಲಾರದೆ ಹಾಗೆಯೇ ಇದ್ದು ಕೊಂಡು ಬಿಟ್ಟರೆ, ಅದಕ್ಕೆ ಯಾವದೋ ಒಂದು ಮುಖ್ಯಕಾರಣವಿರಬೇಕು. ಅಧ್ಯಾತ್ಮ ಸಾಧನಗಳನ್ನು ಬೆಳೆಯಿಸಿಕೊಳ್ಳುವದಕ್ಕೂ ಅಧ್ಯಾತ್ಮತತ್ತ್ವಗಳ ವಿಚಾರವನ್ನು ಮುಂದು ವರಿಸುವದಕ್ಕೂ ತಕ್ಕಷ್ಟು ಮಾನಸಿಕವಾದ ಹಸಿವು ಅವರಿಗೆ ಇಲ್ಲದಿರುವದಕ್ಕೆ ಯಾವದೋ ಒಂದು ಅಡಚಣೆ ಅಥವಾ ಕೊರತೆ ಇರಬೇಕು ಎನಿಸುತ್ತದೆ. ಅಲ್ಲವೆ? ಅದು ಯಾವದು? ಎಂಬುದು ಪ್ರಕೃತವಿಚಾರದ ವಿಷಯ.

ಕೆಲವು ಜನರಿಗೆ ಧಾರ್ಮಿಕ ಆಚಾರವಿಚಾರಗಳೆಂಬಿವು ಊಟದಲ್ಲಿ ಉಪ್ಪಿನ ಕಾಯಿಯ ಸ್ಥಾನದಲ್ಲಿರುವವು. ಒಂದು ಮನೆಯಲ್ಲಿ ತಕ್ಕಷ್ಟು ಕಿಟಕಿಗಳೂ ಬಾಗಿಲು ಗಳೂ ಇರಬೇಕೆಂಬುದು ಈಗ ಬಹುಜನಕ್ಕೆ ತಿಳಿದಿದೆ ಎಂದು ಭಾವಿಸಬಹುದು; ಆದರೆ ಗಾಳಿಬೆಳಕುಗಳು ಹೊರಗಿನಿಂದ ಬರುವದಕ್ಕೂ ಮನೆಯೊಳಗಿನ ಅಶುದ್ಧ ವಾಯು, ಹೊಗೆ-ಮುಂತಾದವು ಹೊರಕ್ಕೆ ಹೋಗುವದಕ್ಕೂ ಈ ಕಿಟಕಿಬಾಗಿಲು, ಮಾಳಿಗೆಯಗೂಡು-ಮುಂತಾದವುಗಳನ್ನು ತೆರೆದಿಟ್ಟಿರುವದು ಅವಶ್ಯವೆಂಬುದು ಇನ್ನೂ ಅನೇಕರಿಗೆ ತಿಳಿಯದೆ ಇರುತ್ತದೆ. ಇದರಂತೆ ಮನೆಯಲ್ಲಿ ದೇವರಪೂಜೆ, ಪಾರಾಯಣ-ಮುಂತಾದವುಗಳು ನಡೆಯುತ್ತಿರಬೇಕೆಂಬುದು ಕೆಲವು ಕುಟುಂಬ ದವರಿಗೆ ತಿಳಿದಿರುತ್ತದೆ; ಆದರೆ ಪೂಜಾದಿಗಳು ಕುಟುಂಬದಲ್ಲಿರುವವರ ಆಧ್ಯಾತ್ಮ ಶಕ್ತಿಯು ಜೀವಂತವಾಗಿರುವದಕ್ಕೆ ಅತ್ಯವಶ್ಯ ಎಂಬುದು ಹಲವರಿಗೆ ತಿಳಿಯದೆ ಇರುತ್ತದೆ. ಹಬ್ಬಹರಿದಿನ, ವ್ರತಕಥೆಗಳು, ದೇವಾಲಯಗಮನ, ಪುರಾಣ ಶ್ರವಣ- ಇವುಗಳನ್ನು ಸಂಪ್ರದಾಯವೆಂದು ಮಾತ್ರ ನಡೆಯಿಸುತ್ತಿರುವವರನ್ನು ಸಂತೆಯ ಬಂಡಿಯ ಎತ್ತುಗಳಿಗೆ ಹೋಲಿಸಬಹುದು. ಹಳ್ಳಿಗಳಿಂದ ವಾರವಾರಕ್ಕೂ ಒಂದೆರಡು ಗೊತ್ತಾದ ಸಂತೆಗಳಿಗೆ ಬಂಡಿಯನ್ನು ಎಳೆದುಕೊಂಡು ಹೋಗುವ ವಾಡಿಕೆಯಿರುವ ಎತ್ತುಗಳು ಯಜಮಾನನು ಎಚ್ಚರವಾಗಿರಲಿ ನಿದ್ರೆಮಾಡುತ್ತಿರಲಿ, ತಾವು ಮಾತ್ರ ದಾರಿಹಿಡಿದು ಸಂತೆಯ ಸ್ಥಲವನ್ನು ಮುಟ್ಟುವವರೆಗೂ ನಡೆದೇ ಮುಗಿಯುತ್ತವೆ. ಬಂಡಿಯಲ್ಲಿ ಹಾಕಿರುವದು ಎಂಥ ಪದಾರ್ಥ, ಅವುಗಳನ್ನು ಸಂತೆಗೆ ಏತಕ್ಕೆ ತೆಗೆದುಕೊಂಡುಹೋಗುತ್ತಿದಾರೆ?-ಅಲ್ಲಿ ಅವನ್ನು ಮಾರುವದರಿಂದ ಯಜಮಾನನಿಗೆ ಲಾಭವೊ, ನಷ್ಟವೊ?-ಇದೊಂದೂ ಎತ್ತುಗಳಿಗೆ ತಿಳಿದಿರುವದಿಲ್ಲ. ಹಿಂಬಾರಮುಂಬಾರಗಳು ಇಲ್ಲದಂತೆ ಬಂಡಿಯು ಸಲೀಸಾಗಿ ಎಳೆಯುವದಕ್ಕೆ

ಬಂದರಾಯಿತು; ಆ ಎತ್ತುಗಳು ತಮ್ಮ ಕೆಲಸವನ್ನು ತಾವು ಮಾಡಿಬಿಡುತ್ತವೆ. ಹೀಗೆಯೇ ಸಂಪ್ರದಾಯಶರಣರಾದ ಕೆಲವರು ಮನೆಯ ಪದ್ಧತಿಯಂತೆ ಪೂಜೆ ಪುರಸ್ಕಾರಗಳನ್ನು ಆಯಾ ಕಾಲಕ್ಕೆ ಮಾಡಿದರೆ ತಾವು ಕೃತಕೃತ್ಯರಾದೆವೆಂದು ತಿಳಿದುಕೊಳ್ಳುತ್ತಾರೆ. ಅವರಿಗೆ ಈ ಆಚಾರಗಳನ್ನು ಅನುಸರಿಸದೆ ಇದ್ದರೆ ಮನಸ್ಸಿನಲ್ಲಿ ಹೇಗೆಹೇಗೋ ಆಗಬಹುದು; ಆ ಕಳವಳವನ್ನು ತಪ್ಪಿಸಿಕೊಳ್ಳುವದೊಂದೇ ಈ ಆಚಾರಗಳ ಪ್ರಯೋಜನವೆಂದು ಅವರ ಭಾವನೆ. ಪಾಪ! ತಾವು ಸಾಧನಾನುಷ್ಠಾನ ದಲ್ಲಾಗಲಿ ತತ್ತ್ವವಿಚಾರದಲ್ಲಾಗಲಿ ಏತಕ್ಕೆ ಮುಂದುವರಿದಿಲ್ಲ ಎಂಬ ಪ್ರಶ್ನೆ ಯಾದರೂ ಅಂಥವರಿಗೆ ಹೇಗೆ ಮನಸ್ಸಿನಲ್ಲಿ ಹೊಳೆಯಬೇಕು?

ಇನ್ನು ಕೆಲವರ ಹೃದಯದಲ್ಲಿ ನಿಜವಾಗಿಯೂ ಅಧ್ಯಾತ್ಮಭಾವನೆಯ ಕಿಡಿಯು ಇದ್ದುಕೊಂಡಿರುವದು. ಅದನ್ನು ತಕ್ಕಷ್ಟು ಉಜ್ಜ್ವಲಗೊಳಿಸುವ ನಿಮಿತ್ತವು ಮಾತ್ರ ಸಿಕ್ಕಿರುವದಿಲ್ಲ. ಅಷ್ಟೆ. ಅಧ್ಯಾತ್ಮಗ್ರಂಥಗಳನ್ನು ಮನಮುಟ್ಟಿ ಓದುತ್ತಲೂ ಒಡನಾಡಿ ಗಳೊಡನೆ ಅವುಗಳ ಅರ್ಥವನ್ನು ಚರ್ಚಿಸುತ್ತಲೂ ಇರುವವರು ಕೆಲವರು ಉಂಟು. ಅಂಥವರು ಊರಿಗೆ ಯಾರಾದರೂ ತತ್ತ್ವ ವಿಚಾರಪರರು ಬಂದರೆಂದರೆ ಅವರಲ್ಲಿಗೆ ಹೋಗಿ ತಮ್ಮಲ್ಲಿರುವ ಗ್ರಂಥಜ್ಞಾನವನ್ನು ಪ್ರದರ್ಶಿಸುವರು. ಅವರಲ್ಲಿ ಯಾವದೋ ಒಂದು ಸಂಶಯವನ್ನು ಪರಿಹರಿಸಿಕೊಳ್ಳುವದಕ್ಕೆ ಇಚ್ಛಿಸುವವರಂತೆ ಒಂದು ವಾಕ್ಯವನ್ನೋ ಶ್ಲೋಕವನ್ನೋ ತೆಗೆದು ಯಾವದಾದರೊಂದು ವಿಷಯ ವನ್ನು ಕುರಿತು ಪ್ರಶ್ನೆಯನ್ನು ಮಾಡುವದೂ ಉಂಟು. ಆದರೆ ತಮಗೆ ಆ ಪ್ರಶ್ನೆಯ ಉತ್ತರವು ತಿಳಿದೇ ಇದೆ ಎಂದು ಅವರ ಭಾವನೆ; ಆ ಉತ್ತರವನ್ನೇ ಅವರು ಆ ಹೊಸಬರಿಂದಲೂ ನಿರೀಕ್ಷಿಸುತ್ತಿರುವರು. ಮಹಾತ್ಮರುಗಳ ಜಯಂತಿ, ಆರಾಧನೆ-ಮುಂತಾದ ವಿಶೇಷಸಂದರ್ಭಗಳಲ್ಲಿ ಅವರವೇ ಭಾಷಣಗಳು ನಡೆಯುತ್ತಿರುವವು. ಅಧ್ಯಾತ್ಮ ವಿಚಾರಗಳು ಊರಲ್ಲಿ ನಡೆಯಬೇಕಾದರೆ ಅವರ ನೇತೃತ್ವದಲ್ಲಿಯೇ ನಡೆಯುವವು. ಆದರೆ ಯಾವ ವಿಚಾರವೇ ನಡೆಯಲಿ, ಯಾವ ಭಾಷಣವೇ ಆಗಲಿ, ಯಾವ ಗ್ರಂಥದ ಪಠನವೇ ಆಗಲಿ, ಅವರಿಗೆ ಮುಂದೆ ಇನ್ನೂ ತಿಳಿದುಕೊಳ್ಳತಕ್ಕದ್ದಿದೆ ಎಂದು ಮಾತ್ರ ತೋರುವದಿಲ್ಲ. ಅಧ್ಯಾತ್ಮವಿಚಾರದಲ್ಲಿ ಮುಟ್ಟಬೇಕಾದ ಮಜಲನ್ನು ತಾವು ಮುಟ್ಟಿರುವೆವೆಂದೇ ಅವರ ಭಾವನೆ.

ಸಾಧನೆಗಳ ವಿಷಯದಲ್ಲಿಯೂ ಇಷ್ಟೇ. ಅವರು ಆಯಾ ದಿನದಲ್ಲಿ ಗೊತ್ತಾದ ವೇಳೆಗಳಲ್ಲಿ ಆಹ್ನಿಕವನ್ನು ಶ್ರದ್ಧೆಯಿಂದಲೇ ಮಾಡುವರು; ಮಂತ್ರಜಪವನ್ನು ಇಂತಿಷ್ಟೆಂಬ ನಿಯತಸಂಖ್ಯೆಯಿಂದ ಬಿಡದೆ ಮಾಡುತ್ತಿರುವರು; ದೇವತಾರ್ಚನೆ ಯನ್ನು ತಪ್ಪದೆ ಮಾಡುವರು. ಅವರು ಮಾಡುವ ಪಾರಾಯಣವು ನಿಜವಾಗಿಯೂ

ಅರ್ಥಾನುಸಂಧಾನಪೂರ್ವಕವಾಗಿಯೇ ನಡೆಯುತ್ತಿರುವದು. ಆದರೇನು? ಸಿದ್ಧಾಂತವಿಷಯದಲ್ಲಿ ಹೇಗೋ ಹಾಗೆ ಸಾಧನ ವಿಷಯದಲ್ಲಿಯೂ ಅವರಿಗೆ ತೃಪ್ತಿಯುಂಟಾಗಿಬಿಟ್ಟಿರುತ್ತದೆ. ಇನ್ನುಮುಂದಕ್ಕೆ ಅವರ ವಿಚಾರವಾಗಲಿ ಸಾಧನವಾಗಲಿ ಸಾಗುವ ಸಂಭವವೇ ತೋರುವದಿಲ್ಲ.

ಈ ಬಗೆಯ ಅಧ್ಯಾತ್ಮವಿದ್ಯಾರಸಿಕರನ್ನು ಅರ್ಧ ಬೆಳೆದು ಕುರುಟುಬಿದ್ದಿರುವ ಫಲವೃಕ್ಷಕ್ಕೆ ಹೋಲಿಸಬಹುದು. ಆ ಮರದಲ್ಲಿ ಮಿಕ್ಕ ಮರಗಳಂತೆ ಬೆಳೆದು ಹೇರಳವಾಗಿ ಫಲವನ್ನು ಕೊಡುವ ಯೋಗ್ಯತೆಯೇನೋ ಇತ್ತು; ಆದರೆ ಅದಕ್ಕೆ ತಕ್ಕ ಪೋಷಣೆ ಇಲ್ಲದೆಹೋಯಿತು. ಚಿಕ್ಕಂದಿನಿಂದ ಅದರ ಬೆಳೆವಣಿಗೆಗೆ ಸಹಕಾರಿ ಯಾದ ನೀರು, ಗೊಬ್ಬರ, ಕಳೆಕೀಳುವದು-ಮುಂತಾದವುಗಳು ಕಾಲಕ್ಕೆ ತಕ್ಕಂತೆ ಒದಗದೆ ಇದ್ದದ್ದರಿಂದ ಅದು ಹೀಗೆ ಕುರೂಪಿಯಾಗಿರಬೇಕಾಯಿತು. ಅಲ್ಲವೆ? ಅಧ್ಯಾತ್ಮಮಾರ್ಗದಲ್ಲಿ ನಡೆಯುತ್ತಿರುವವರಿಗೂ ಸಾಧನವೂ ವಿಚಾರವೂ ಪರಿ ಪೂರ್ಣವಾಗುವದಕ್ಕೇ ಹೀಗೆಯೇ ಕೆಲವು ಹೊರಗಿನ ಸಹಾಯಗಳು ಆಗ ಬೇಕಾಗಿರುತ್ತವೆ. ಇವುಗಳಲ್ಲಿ ಭಗವದ್ಭಕ್ತರ ಸಹವಾಸವೆಂಬುದು ಮುಖ್ಯವಾದದ್ದು.

ಅಧ್ಯಾತ್ಮಮಾರ್ಗದಲ್ಲಿ ಮುಂದುವರಿಯುವದಕ್ಕೆ ಸಾಧುಸಂಗವು ಹೇಗೆ ಸಹಾಯ ಮಾಡುತ್ತದೆ ಎಂಬುದನ್ನು ವಿವರಿಸುವದೇ ಈ ಸಂದೇಶದ ಮುಖ್ಯೋದ್ದೇಶವು. ಅಧ್ಯಾತ್ಮವಿದ್ಯೆ ಎಂದರೆ ಕೇವಲ ಬುದ್ಧಿಗೆ ಸಂಬಂಧಪಟ್ಟ ವಿಚಾರಕೌಶಲವೆಂದು ಕೆಲವರು ಭ್ರಾಂತರಾಗಿರುತ್ತಾರೆ. ಶಾಸ್ತ್ರಗ್ರಂಥಗಳನ್ನು ಓದಿ ನೆನಪಿನಲ್ಲಿಟ್ಟುಕೊಳ್ಳುವದು, ಶಾಸ್ತ್ರವಾಕ್ಯಗಳನ್ನು ವ್ಯಾಖ್ಯಾನಮಾಡುವದು, ಅಥವಾ ಅಧ್ಯಾತ್ಮವಿಷಯಗಳನ್ನು ಕುರಿತು ಬೇರೆಬೇರೆಯ ಗ್ರಂಥಗಳಲ್ಲಿ ಬರೆದಿರುವದನ್ನು ಅಥವಾ ಯಾರಾದರೂ ವಿದ್ವಾಂಸರುಗಳು ಭಾಷಣಮಾಡಿ ತಿಳಿಸಿರುವದನ್ನು ಸಂಗ್ರಹಿಸಿಟ್ಟುಕೊಂಡಿದ್ದು ಸಭೆಗಳಲ್ಲಿ ಪ್ರದರ್ಶನಮಾಡುವ ವಾಗ್ವೈಖರಿ, ಶ್ಲೋಕಗಳನ್ನೂ ಕೀರ್ತನೆಗಳನ್ನೂ ರಾಗವಾಗಿ ಹಾಡಿ ಶ್ರೋತೃಗಳನ್ನು ತಲೆದೂಗಿಸುವ ಜಾಣತನ, ಚರ್ಚೆಯಲ್ಲಿ ಪ್ರತಿವಾದಿಗಳನ್ನು ಮೂಕರನ್ನಾಗಿ ಮಾಡುವ ಪ್ರತಿಭೆ-ಇವೇ ಅಧ್ಯಾತ್ಮವಿದ್ಯಾ ವಿಶಾರದತ್ವದ ಗುರುತುಗಳೆಂದು ಹಲವರು ತಿಳಿದಿರಬಹುದು. ಆದರೆ ನಿಜವಾದ ಅಧ್ಯಾತ್ಮವಿದ್ಯೆಯು ಹೃದಯಕ್ಕೆ ಸಂಬಂಧಪಟ್ಟದ್ದು. ಯಾವ ವಿದ್ಯೆಯಿಂದ ಪ್ರಪಂಚದ ಮತ್ತು ತನ್ನ ಪರಮಾರ್ಥದ ವಿಷಯದ ದೃಷ್ಟಿಕೋಣವೇ ಮಾರ್ಪಡುವದೋ, ಯಾವ ವಿದ್ಯೆಯಿಂದ ಮನುಷ್ಯನ ಅಹಂಕಾರವು ಸಂಪೂರ್ಣವಾಗಿ ತೊಲಗಿ ವಿಶ್ವಪ್ರೇಮವು ಸ್ವಭಾವವಾಗಿಬಿಡುವದೊ, ಅದೇ ಅಧ್ಯಾತ್ಮವಿದ್ಯೆ. ವಿದ್ಯಕ್ಕೆ ವಿನಯವೇ ಗುರುತು ಎಂಬುದು ನಿಜವಾದರೆ ಅಧ್ಯಾತ್ಮವಿದ್ಯೆಗೆ ಸಮನಾದ ವಿದ್ಯೆಯು

ಇನ್ನೊಂದಿಲ್ಲವೆಂದು ಧೈರ್ಯದಿಂದ ಹೇಳಬಹುದು. ಈ ಅಧ್ಯಾತ್ಮವಿದ್ಯೆಯನ್ನು ಬರಿಯ ಗ್ರಂಥಗಳಾಗಲಿ, ಶಾಸ್ತ್ರವ್ಯಾಖ್ಯಾನಗಳಾಗಲಿ, ಮೇಧಾಶಕ್ತಿಯಾಗಲಿ, ವಾಗ್ಮಿತೆಯಾಗಲಿ ಎಂದಿಗೂ ಕೊಡಲಾರವು. ಕೇವಲ ವೇದಾಧ್ಯಯನ, ನಿಘಂಟು ವ್ಯಾಕರಣಗಳ ಪರಿಚಯ–ಇವುಗಳಿಂದಲೇ ಅಧ್ಯಾತ್ಮವಿದ್ಯೆಯನ್ನು ಹಿಂಡಿಕೊಳ್ಳುವದು ಯಾರಿಂದಲೂ ಆಗಲಾರದು. ಅಧ್ಯಾತ್ಮವಿದ್ಯೆಗೆ ವಿಷಯನಾದ ಭಗವಂತನಲ್ಲಿ ಅನನ್ಯತೆಯಿಂದ ನೆಲೆನಿಂತಿರುವ ಅನುಭವಿಗಳು ಮಾತ್ರ ಈ ವಿದ್ಯೆಯನ್ನು ಉಪದೇಶಿಸಬಲ್ಲರು. ಅಂಥವರಿಂದ ಮಾತ್ರವೇ ಈ ವಿದ್ಯೆಯನ್ನು ಸಂಪಾದಿಸಿಕೊಳ್ಳುವದು ಸಾಧ್ಯವಾಗುತ್ತದೆ.

ಸಾಧುಗಳೇ ಅಧ್ಯಾತ್ಮವಿದ್ಯೆಯ ಅಭಿರುಚಿಯನ್ನು ನಮ್ಮ ಹೃದಯದಲ್ಲಿ ಬಿತ್ತುವದಕ್ಕೂ ಅದು ಮೊಳೆತು ಕ್ರಮಕ್ರಮವಾಗಿ ಬೆಳೆದು ಸಫಲವಾಗುವಂತೆ ಮಾಡುವದಕ್ಕೂ ತಕ್ಕವರು. ಅವರು ತತ್ತ್ವವನ್ನು ಉಪದೇಶಿಸುವದೆಂದರೆ ಸ್ಕೂಲಿನ, ಅಥವಾ ಕಾಲೇಜಿನ ಉಪಾಧ್ಯಾಯರೂ ವಿದ್ವಾಂಸರೂ ಪಾಠಹೇಳುವಂತೆ ಅಲ್ಲ. ಅವರು ಉಪದೇಶಿಸಿರುವದು ದೊಡ್ಡದೊಡ್ಡ ಗ್ರಂಥಗಳನ್ನು ಓದಿಸುವದು, ಉದ್ದುದ್ದನೆಯ ಭಾಷಣಗಳನ್ನು ಮಾಡುವದು, ಅಥವಾ ಗ್ರಂಥಗಳ ಸಾರವಿಮರ್ಶೆ ಮುಂತಾದವುಗಳನ್ನು ಹೇಳಿ ಬರೆಯಿಸುವದು–ಮುಂತಾದ ಮಾರ್ಗಗಳಿಂದಲ್ಲ. ಅವರ ಸಂಗವೇ ನಮಗೆ ಉಪದೇಶವಾಗುವದು, ನಮ್ಮನ್ನು ಅಧ್ಯಾತ್ಮದ ಹಾದಿಯಲ್ಲಿ ಮುನ್ನಡೆಯಿಸುವದು. ಅವರ ಸೇವೆಯೇ ನಮಗೆ ಆ ವಿದ್ಯೆಯಲ್ಲಿ ನಿಜವಾದ ಪ್ರವೇಶವನ್ನುಂಟುಮಾಡಿಕೊಡುವದು.

ಸಾಧುಗಳಿಂದ ಉಪದೇಶವನ್ನು ಹೊಂದಿದೆವೆಂದು ಅನೇಕರು ಕೆಲವು ಮಂತ್ರಗಳನ್ನು ಅವರಿಂದ ಕಿವಿಯಲ್ಲಿ ನುಡಿಯಿಸಿಕೊಂಡು ಹಿಂತೆರಳುತ್ತಾರೆ. ಒಂದು ಜಪಮಾಲಿಕೆಯನ್ನು ಹಿಡಿದು ಆ ಮಂತ್ರವನ್ನು ಜಪಿಸುವದು, ಆ ಮಂತ್ರೋಪದೇಶವನ್ನು ಮಾಡಿದ ಗುರುವಿನ ಭಾವಚಿತ್ರವನ್ನು ಮನೆಯಲ್ಲಿಟ್ಟು ಪೂಜಾ ನಮಸ್ಕಾರಾದಿಗಳಿಂದ ಸತ್ಕರಿಸುವದು–ಇಷ್ಟರಿಂದ ತಾವು ಸಾಧುಸಂಗದ ಫಲವನ್ನು ಪಡೆದೆವೆಂದು ಅವರು ಭಾವಿಸಿಕೊಂಡಿರುತ್ತಾರೆ. ಸುಮ್ಮನಿರುವದಕ್ಕಿಂತಲೂ, ಅಥವಾ ತಮ್ಮ ತಿಳಿವಳಿಕೆಯಿಂದಲೇ ನಾಮೋಚ್ಚಾರಣೆಯೇ ಮುಂತಾದವುಗಳನ್ನು ಮಾಡುವದಕ್ಕಿಂತಲೂ ಇದು ಹೆಚ್ಚಿನದೇ ಸರಿ. ಆದರೆ ಸಾಧುಸಂಗದ ಪೂರ್ಣಫಲವು ಇದಲ್ಲ. ಹೀಗೆಯೇ ಸಾಧುಸೇವೆ ಎಂದರೆ ಅವರಿಗೆ ಉಣಬಡಿಸುವದು, ವಸ್ತ್ರಾದಿಗಳನ್ನು ಕೊಡುವದು, ಅಥವಾ ಬಟ್ಟೆ ಒಗೆದುಕೊಡುವದು, ಆಹ್ನಿಕಸ್ಥಲವನ್ನು ಶುದ್ಧಿಮಾಡಿಕೊಡುವದು, ಕಾಲೊತ್ತುವದು, ಮಲಗುವ ಹಾಸಿಗೆಯನ್ನು ಸಿದ್ಧಗೊಳಿಸಿ

ಕೊಡುವದು-ಮುಂತಾದ ರೀತಿಯಿಂದ ಅವರ ಶರೀರಕ್ಕೆ ಮಾಡುವ ಉಪಕಾರವೇ ಅಲ್ಲ. ಸಾಧುಗಳು ಭಗವಂತನನ್ನು ಹೃದಯದಲ್ಲಿಟ್ಟು ದೇವತಾವಿಗ್ರಹವು ಪ್ರತಿಷ್ಠಿತ ವಾಗಿರುವ ದೇವಾಲಯಗಳಂತಿರುವದರಿಂದ ಅವರಿಗೆ ಮಾಡುವ ಈ ಬಾಹ್ಯೋಪ ಚಾರವೂ ಪುಣ್ಯಪ್ರದವು, ಅಭ್ಯುದಯಕಾರಿಯು-ಎಂಬುದಕ್ಕೆ ಅಡ್ಡಿಯಿಲ್ಲ. ಆದರೆ ಅಧ್ಯಾತ್ಮವಿದ್ಯೆಯು ಹೃದಯಕ್ಕೆ ಸಂಬಂಧಪಟ್ಟದ್ದಾದ್ದರಿಂದ ಹೃದಯದಿಂದಲೇ ಸಾಧುಸಂಗವನ್ನು ಮಾಡಬೇಕು; ಆಗಲೇ ನಮಗೆ ಅವರಿಂದಾಗುವ ಪೂರ್ಣ ಪ್ರಯೋಜನವುಂಟಾಗುತ್ತದೆ.

ಸಾಧುಗಳು, ಸತ್ಪುರುಷರು, ಸಂತರು-ಎಂದರೆ ಸದ್ರೂಪನಾದ ಪರಮಾತ್ಮನಲ್ಲಿ ನಿತ್ಯನಿಷ್ಠೆಯನ್ನು ಪಡೆದವರು. ನಿಜವಾದ ಸಂತರು ತಾವು ಗುರುಗಳೆಂದು ತೋರಿಸಿಕೊಳ್ಳುವದಕ್ಕೆ ಪ್ರಯತ್ನಿಸುವದಿಲ್ಲ; ಮತ್ತೊಬ್ಬರ ಸೇವೆಯನ್ನು ನಿರೀಕ್ಷಿಸು ವದಿಲ್ಲ. ಏಕೆಂದರೆ ಅವರು ಭಗವಂತನಲ್ಲಿ ಅನನ್ಯಭಕ್ತಿಯನ್ನು ಸಂಪಾದಿಸಿಕೊಂಡು ಅಷ್ಟರಿಂದಲೇ ನಿತ್ಯತೃಪ್ತರಾಗಿಬಿಟ್ಟಿರುತ್ತಾರೆ. ಆದರೆ ಈ ಕಾರಣದಿಂದಲೇ ಅವರ ದರ್ಶನವು ನಮಗೆ ಭಗವಂತನ ದರ್ಶನವೇ ಆಗುತ್ತದೆ; ಅವರ ಅರ್ಚನೆಯು ಭಗವಂತನ ಅರ್ಚನೆಯೇ ಆಗುತ್ತದೆ. ಮತ್ತೆ ಏನನ್ನೂ ಬಯಸದೆ ಇರುವ ಪರಿಶುದ್ಧವಾದ ಅಂತಃಕರಣವುಳ್ಳವರಾದ್ದರಿಂದ ಅವರ ಚಿತ್ತದಲ್ಲಿ ಏಳುವ ಸಂಕಲ್ಪಗಳು ಭಗವಂತನ ಸಂಕಲ್ಪಗಳೇ ಆಗಿರುತ್ತವೆ. ಆದ್ದರಿಂದ ಅಂಥವರನ್ನು ಮನಃಪೂರ್ವಕವಾಗಿ ನಮಸ್ಕರಿಸುವದೇ ಮುಂತಾದ ರೀತಿಗಳಿಂದ ಅರ್ಚಿಸುವವರ ಇಷ್ಟಾರ್ಥಗಳೂ ಆ ಸತ್ಪುರುಷರ ಅನುಗ್ರಹದಿಂದ ಅವಶ್ಯವಾಗಿ ನೆರವೇರುವವು. ಆದರೆ ಜೀವನದ ಸೌಕರ್ಯಗಳನ್ನು ಬಯಸಿ ಸತ್ಪುರುಷರ ಸೇವೆಯನ್ನು ಮಾಡಿ ದವರು ಮಾಣಿಕ್ಯವನ್ನು ಗೋಲಿಯಾಗಿ ಉಪಯೋಗಿಸಿದ ಮೂಢರಾಗುತ್ತಾರೆ. ನಿಷ್ಕಾಮರಾಗಿ ಆ ಭಗವದ್ಭಕ್ತರನ್ನು ಅರ್ಚನೆಮಾಡಿ, ಅವರ ಹೃದಯಕ್ಕೆ ತಮ್ಮ ಹೃದಯದ ಸಂಸ್ಪರ್ಶವನ್ನು ಸಂಪಾದಿಸಿಕೊಂಡ ಪುಣ್ಯವಂತರಿಗೆ ಅವರಂತೆಯೇ ಪರಿಶುದ್ಧವಾದ ಅಂತಃಕರಣದ ಲಾಭವಾಗುವದು; ಅವರಂತೆಯೇ ಭಗವಂತನಲ್ಲಿ ಮಿಗಿಲಿಲ್ಲದ ಪ್ರೇಮವು ದೊರಕುವದು; ಅವರಂತೆಯೇ ಎಲ್ಲರನ್ನೂ ಪ್ರೇಮದಿಂದ ಕಾಣುವ ವಿಶಾಲ ಹೃದಯವು ದೊರಕುವದು.

ದೊಡ್ಡದೊಂದು ಸ್ವಚ್ಛವಾದ ನಿಲುಗನ್ನಡಿಯ ಮುಂದೆ ನಿಂತವನಿಗೆ ತನ್ನ ಶರೀರವೆಲ್ಲ ಮಾರುಹೊಳೆದು ತೋರುವಂತೆ, ಸತ್ಪುರುಷರನ್ನು ಶ್ರದ್ಧೆಯಿಂದ ಸೇವಿಸುವವನಿಗೆ ತನ್ನ ಈಗಿನ ಸ್ವಭಾವವು ಇದ್ದದ್ದು ಇದ್ದಂತೆ ಮನದಟ್ಟಾಗುವದು. ಆ ಮಹನೀಯರ ದರ್ಶನದಿಂದಲೇ ಹೃದಯವು ಪಾಪವಾಸನೆಯನ್ನು ಕಳೆದು

ಕೊಳ್ಳುವದು; ಅವರಲ್ಲಿರುವ ಅಮಾನಿತ್ವ, ಅದಂಭಿತ್ವ, ಅಹಿಂಸೆ, ಕ್ಷಾಂತಿ, ವಿಶ್ವ ಪ್ರೇಮ–ಮುಂತಾದ ಸದ್ಗುಣಗಳು ಎದ್ದುಕಾಣುವದರಿಂದ ತನ್ನಲ್ಲಿರುವ ದೋಷ ಗಳೂ ಸ್ಫುಟವಾಗಿ ಕಾಣಿಸುವವು. ಸುಂದರವಾದ ಅಕ್ಷರಗಳ ಮೇಲು ಪಙ್ಕ್ತಿಯನ್ನು ನೋಡಿದವನಿಗೆ ತನ್ನ ಬರೆವಣಿಗೆಯಲ್ಲಿರುವ ಲೋಪದೋಷಗಳು ಮನವರಿಕೆಯಾಗಿ ಆ ಮನೋಹರವಾದ ಅಕ್ಷರಗಳ ಆಕಾರವು ಮನಸ್ಸಿನಲ್ಲಿ ನೆಟ್ಟು, ಇಂಥ ಬರವಣಿಗೆಯು ನನಗೆ ಎಂದಿಗೆ ದಕ್ಕೀತು!–ಎಂಬ ಹಂಬಲು ಹತ್ತಿಕೊಳ್ಳುವದು. ನಾನು ಎಲ್ಲವನ್ನೂ ತಿಳಿದಿರುವೆನು, ನಾನು ಇನ್ನು ಮುಂದೆ ಮಾಡತಕ್ಕದ್ದು ಏನೂ ಇಲ್ಲ–ಎಂಬ ಒಣತೃಪ್ತಿಯೂ ಹೆಮ್ಮೆಯೂ ಮಾಯವಾಗುವವು. ಒಳಗೆ ಸ್ವಲ್ಪವಾಗಿ ಎಲ್ಲಿಯೋ ಅವಿತುಕೊಂಡಿದ್ದ ಅಧ್ಯಾತ್ಮಶಕ್ತಿಯು ಉಜ್ಜೀವಿತವಾಗುವದು. ತನಿನಿದ್ರೆಯಿಂದ ಎಚ್ಚತ್ತವನಿಗೆ ಆಗುವ ವಿಶೇಷವಿಜ್ಞಾನದಂತೆ, ಅಥವಾ ಮೂರ್ಛಿತ ನಾಗಿ ಸಾಯುವ ಅವಸ್ಥೆಗೆ ಹತ್ತಿರವಿದ್ದ ಸಂಜೀವಿನಿಯಿಂದ ಚೇತರಿಸಿಕೊಂಡವನಿಗೆ ಆಗುವ ಉಲ್ಲಾಸದಂತೆ ಅಂತಃಕರಣಕ್ಕೆ ಹೊಸ ಹುರುಪು ಉಂಟಾಗುವದು. ಸರಿಯಾಗಿ ನೋಡಿಕೊಳ್ಳುವವರಿಲ್ಲದ ಸ್ಥಲದಲ್ಲಿ ಸಪ್ಪಲಾಗಿದ್ದ ಗಿಡವು ನೀರು, ಗೊಬ್ಬರ–ಮುಂತಾದವುಗಳಿಂದ ಕವಲುಕವಲಾಗಿ ಕೋಮಲವಾಗಿ ಚಿಗುರುವದಕ್ಕೆ ಆರಂಭಿಸುವಂತೆ ಇನ್ನುಮುಂದೆ ತನ್ನ ಅಧಿಕಾರಕ್ಕೆ ತಕ್ಕ ಸಾಧನವನ್ನು ಕೈಕೊಳ್ಳ ಬೇಕೆಂಬ ಹವಣಿಕೆಯುಂಟಾಗುವದು.

ಸಾಧುಜನರ ಗೋಷ್ಠಿಯಲ್ಲಿರುವಾತನಿಗೆ ಭೂಲೋಕದಿಂದ ಇಂದ್ರಲೋಕಕ್ಕೆ ತಟ್ಟನೆ ಬಂದವರಿಗಾಗುವ ಅಂತಃಕರಣಪರಿಣಾಮವು ಉಂಟಾಗುತ್ತದೆ. ವ್ಯವಹಾರ ದಲ್ಲಿ ವ್ಯರ್ಥವಾದ ನಡೆನುಡಿಗಳು ಹೇರಳವಾಗಿರುವವೆಂಬುದರ ಅರಿವು ಈಗ ಸ್ಫುಟವಾಗುವದು. ಇದುವರೆಗೆ ತನ್ನ ಮನಸ್ಸಿನಲ್ಲಿ ಮತ್ತೊಬ್ಬರ ದೋಷವನ್ನೇ ಹುಡುಕುವ, ಮತ್ತೊಬ್ಬರಿಗೆ ಕೇಡನ್ನೇ ಹಾರೈಸುವ, ಕ್ಷುದ್ರಬುದ್ಧಿಗಳ ವಾಸನೆಗಳೇ ಹೇರಳವಾಗಿದ್ದವೆಂಬುದು ಮನವರಿಕೆಯಾಗುವದು. ತಾನು ಸಾಧಕನೆಂದೂ ತತ್ತ್ವ ವಿಚಾರನಿರತನೆಂದೂ ವಿದ್ಯಾವಂತನೆಂದೂ ಈವರೆಗೆ ತೋರಿಸಿಕೊಂಡ ಹೆಮ್ಮೆಯ ಜೊಳ್ಳುತನವು ಮನದಟ್ಟಾಗಿಬಿಡುವದು. ಭಗವಂತನ ಅನುಗ್ರಹವಿಲ್ಲದೆ ಇಂಥ ಮಹನೀಯರ ಸೇವೆಯಾಗಲಿ ಅನುಕರಣವಾಗಲಿ ತನಗೆ ಎಂದಿಗೂ ಲಭಿಸಲಾರ ದೆಂಬುದು ಸ್ಪಷ್ಟವಾಗುವದು. ಸಾಧುಗಳು ಯಾವಾಗಲೂ ಭಗವಂತನ ಭವ್ಯವಾದ ಕರ್ಮಗುಣಲೀಲೆಗಳನ್ನು ಕುರಿತ ಮಾತನ್ನೇ ಆಡುತ್ತಿರುವರು; ಭಗವಂತನ ಅರ್ಚನೆ, ಭಗವಂತನ ಧ್ಯಾನ–ಮುಂತಾದವುಗಳಿಂದಲೇ ಕಾಲವನ್ನು ಕಳೆಯುತ್ತಿರುವರು. ತಿಳಿದವರು ತಿಳಿಯದವರು, ಧನಿಕರು ದರಿದ್ರರು, ದೊಡ್ಡವರು ಚಿಕ್ಕವರು, ಗಂಡಸರು

ಹೆಂಗಸರು, ಸುಂದರರು ಕುರೂಪಿಗಳು, ಕುಲೀನರು ಹೀನಜಾತಿಯವರು- ಮುಂತಾದ ಭೇದವನ್ನು ಮನಸ್ಸಿನಲ್ಲಿ ಎಂದಿಗೂ ತಾರದೆ ಎಲ್ಲರಲ್ಲಿಯೂ ಭಗವಂತನೊಬ್ಬನನ್ನೇ ಕಾಣುವ ಸಮಬುದ್ಧಿಯುಳ್ಳವರಾಗಿರುವರು. ಇಂಥವರ ಸಹವಾಸದಲ್ಲಿಯೇ ಇರುವದೆಂಬುದು ಅನಲ್ಪವಾದ ತಪಸ್ಸಿನ ಫಲವೇ ಸರಿ.

ಒಂದೇಸಮನೆ ಮೂಲದಿಂದ ಹಿಡಿದು ಸಮುದ್ರವನ್ನು ಕಾಣುವವರೆಗೂ ಪ್ರವಹಿಸುತ್ತಿರುವ ಪವಿತ್ರವಾದ ಮಹಾನದಿಗಳಂತೆ ಸತ್ಪುರುಷರ ಅಂತಃಕರಣವು ಭಗವದ್ಭಕ್ತಿಭರಿತವಾಗಿಯೇ ಹರಿಯುತ್ತಿರುವದು. ವಿಶಾಲವಾದ ನದಿಗಳಿಂದ ಅಲ್ಲಲ್ಲಿ ಕಾಲುವೆಗಳನ್ನು ತೆಗೆದು ತಮ್ಮತಮ್ಮ ಕಡೆಯ ಗದ್ದೆಗಳಿಗೆ ನೀರು ಹಾಯಿಸಿಕೊಳ್ಳುವ ಜಾಣರಂತೆ ಸಾಧುಸೇವೆಯ ಮೂಲಕವಾಗಿ ಭಕ್ತಿಯ ಕಾಲುವೆಯನ್ನು ಮುಮುಕ್ಷು ಗಳಾದವರು ತಮ್ಮತಮ್ಮ ಹೃದಯಕ್ಷೇತ್ರಕ್ಕೆ ಹರಿಯಿಸಿಕೊಳ್ಳಬೇಕು. ಸತ್ಸಂಗವನ್ನು ಮಾಡುವ ಪುಣ್ಯವು ಒದಗುವದಕ್ಕಿಂತ ಮುಂಚೆ ಇರುವ ಭಕ್ತಿಯು ವಿಷಯಸಂಗದ ಗಾಳಿಯಿಂದ ಅದುರಾಡುತ್ತಿರುವದು. ಆದರೆ ಸತ್ಸಂಗವು ದೊರಕಿದಾಗಿನಿಂದ ಆ ಗಾಳಿಯ ಹೊಡೆತವು ತಪ್ಪುವದರಿಂದ ಭಕ್ತಿಯು ದೃಢವಾಗುವದು. ಇದೇ ಸತ್ಸಂಗದಿಂದಾಗುವ ಪರಮಲಾಭವು.

ನಿಮಗೆ ಅಧ್ಯಾತ್ಮಸಾಧನಗಳಲ್ಲಿಯೂ ಅಧ್ಯಾತ್ಮವಿಚಾರಗಳಲ್ಲಿಯೂ ಹೆಚ್ಚಿನ ಅಭಿರುಚಿಯುಂಟಾಗಬೇಕೆ? ನೀವು ಈಗಾಗಲೆ ಮಾಡುತ್ತಿರುವ ಸಾಧನಗಳು ವೀರ್ಯವತ್ತರವಾಗಬೇಕೆ? ನಿಮ್ಮ ಅಧ್ಯಾತ್ಮವಿಚಾರವು ಸಜೀವವಾಗಬೇಕೆ? ಹಾಗಾದರೆ ನಿತ್ಯಸಿದ್ಧರಾಗಿಯೂ ತತ್ತ್ವಜ್ಞಾನನಿಷ್ಠರಾಗಿಯೂ ಇರುವ ಸತ್ಪುರುಷರ ಸಂಗವನ್ನು ಮಾಡಿರಿ. ಅವರ ಚಿತ್ತವೃತ್ತಿಯನ್ನು ಅನುಸರಿಸಿ ನಿಮ್ಮ ನಡೆನುಡಿಗಳನ್ನು ತಿದ್ದಿಕೊಳ್ಳುವಂತೆ ಅನುಗ್ರಹಿಸಬೇಕೆಂದು ಭಗವಂತನನ್ನು ನಿತ್ಯವೂ ಪ್ರಾರ್ಥಿಸುತ್ತಿರಿ. ಸತ್ಪುರುಷರ ಸಂಗವು ದೊರೆತರೆ ಸುಪ್ತವಾಗಿರುವ ಅಧ್ಯಾತ್ಮಶಕ್ತಿಗಳು ಉದ್ಬುದ್ಧ ವಾಗುವವು, ಸಚೇತನವಾಗುವವು, ಉಜ್ಜ್ವಲವಾಗುವವು, ಸಫಲಗಳು ಪರಿಣಮಿಸು ವವು. ಸಾಧುಜನರನ್ನು ಹುಡುಕಿ, ಗುರುತುಹಿಡಿದು ಅವರ ಸಂಗವನ್ನು ಸಂಪಾದಿಸಿ ಕೊಳ್ಳುವದೆಂಬ ಮಹಾಪ್ರಯತ್ನದಲ್ಲಿ ನೀವು ಜಯಶೀಲರಾದರೆ ಅಧ್ಯಾತ್ಮಸಾಧನಗಳ ಗನಿಯೊಂದನ್ನು ಸಂಪಾದಿಸಿಕೊಂಡಂತೆ. ಸತ್ಸಂಗದಿಂದ ನೀವು ತೋಡಿಕೊಳ್ಳ ಲಾರದ ಸಾಧನರತ್ನಗಳು ಇಲ್ಲವೇ ಇಲ್ಲ, ಅದರಿಂದ ಲಭಿಸದೆ ಇರುವ ಪುರುಷಾರ್ಥ ಸಾಧನಗಳೂ ಇಲ್ಲ.

****

# 30. ಕಪಿಲ ಭಗವಂತನ ಬೋಧನೆ

ಸತ್ಸಂಗದಿಂದ ಆಗುವ ಮುಖ್ಯವಾದ ಲಾಭವೆಂದರೆ ಜೀವನಕ್ಕೆ ಶಾಂತ್ಯಾದಿಗಳ ಮೆರುಗು ಉಂಟಾಗುವದು, ಮತ್ತು ಭಗವಂತನಲ್ಲಿ ಭಕ್ತಿಯು ಗಟ್ಟಿಯಾಗುವದು. ಆದ್ದರಿಂದ ನಮಗೆ ಸತ್ಸಂಗದ ಫಲವು ಆಗಿದೆಯೋ ಇಲ್ಲವೋ ಎಂಬುದನ್ನು ನಮ್ಮ ಅಂತಃಕರಣದಲ್ಲಿ ಶಾಂತ್ಯಾದಿಗಳು ಎಷ್ಟರಮಟ್ಟಿಗೆ ಮೂಡಿಕೊಂಡಿವೆ, ಭಗವದ್ಭಕ್ತಿಯು ಎಷ್ಟರಮಟ್ಟಿಗೆ ಬೇರೂರಿಕೊಂಡಿದೆ ಎಂಬುದರ ಮೇಲಿಂದ ಅಳೆಯಬೇಕು.

ಸತ್ಸಂಗದಿಂದ ಲಾಭವನ್ನು ಪಡೆಯಬಹುದು, ಅಧ್ಯಾತ್ಮಮಾರ್ಗದಲ್ಲಿ ಮುಂದು ವರಿಯುವದಕ್ಕೆ ಸತ್ಸಂಗವೆಂಬುದೊಂದು ಅಮೋಘವಾದ ಸಹಾಯವು-ಎಂಬು ದನ್ನು ನಮ್ಮ ದೇಶದಲ್ಲಿ ಬಹಳ ಪುರಾತನಕಾಲದಿಂದಲೂ ಕಂಡುಹಿಡಿದಿರುತ್ತಾರೆ. ಉಪನಿಷತ್ತುಗಳಲ್ಲಿ ಸತ್ಸಂಗವನ್ನು ಹುಡುಕಿಕೊಂಡು ಹೊರಟವರ ಕಥೆಗಳು ಅಲ್ಲಲ್ಲಿ ಕಾಣಬರುತ್ತವೆ; ಪುರಾಣಗಳಲ್ಲಿ ಇಂಥ ಕಥೆಗಳು ತಂಬಿ ತುಳುಕಾಡುತ್ತಿವೆ. ವಿಷಯಸುಖದ ಲೋಲುಪತೆಯು ಹೆಚ್ಚುತ್ತಿರುವ ಈ ಕಾಲದಲ್ಲಿಯೂ ತೀರ್ಥ ಗಳನ್ನೂ ಕ್ಷೇತ್ರಗಳನ್ನೂ ನೋಡಿಕೊಂಡು ಬರುವೆವೆಂದು ಪ್ರಯಾಣಮಾಡುವ ಜನಗಳ ಸಂಖ್ಯೆಯೇನೂ ಕಡಿಮೆಯಾಗಿಲ್ಲ; ಪುಣ್ಯಸ್ಥಲಗಳಲ್ಲಿ ಸಾಧುಗಳನ್ನೂ ಸಂನ್ಯಾಸಿಗಳನ್ನೂ ಹುಡುಕಿಕೊಂಡು ತಿರುಗುವ ಆಸ್ತಿಕರ ಸಂಖ್ಯೆಯೂ ಕಡಿಮೆ ಯಾಗಿಲ್ಲ. ಆದರೆ ಯಾವ ಸಂದರ್ಭದಲ್ಲಿಯೇ ಆಗಲಿ ನಿಜಕ್ಕೆ ಬೆಲೆ ಬರುವದು ಅನುಕರಣಗಳ ಹೆಚ್ಚಿಗೆಯಿಂದ. ಇದರಂತೆ ಅಧ್ಯಾತ್ಮಕ್ಷೇತ್ರದಲ್ಲಿಯೂ ನಿಜವಾದ ಸತ್ಸಂಗದ ಅವಕಾಶಗಳು ಹತ್ತು ಇದ್ದರೆ, ಸತ್ಸಂಗದ ಆಭಾಸಗಳು ನೂರು ಇರುತ್ತವೆ-ಎಂಬುದನ್ನು ನಾವು ನಿರೀಕ್ಷಿಸತಕ್ಕದ್ದೇ ಆಗಿದೆ.

ಭರತಖಂಡದಲ್ಲಿ ಸಾಧುಗಳು, ಸಂತರು, ಸಂನ್ಯಾಸಿಗಳು, ಬೈರಾಗಿಗಳು-ಎಂದು ಮುಂತಾದ ಹೆಸರನ್ನು ಧರಿಸಿರುವ ನೂರಾರು ಸಂಪ್ರದಾಯದ ಜನರು ಇರುತ್ತಾರೆ. ಇವರು ಜಟಾಧಾರಣೆ, ಮುಂಡನ, ಕಪಿನಿಯನ್ನು ಧರಿಸುವದು, ಕಾಷಾಯಾಂ ಬರವನ್ನು ಉಟ್ಟು ಹೊದೆಯುವದು, ರುದ್ರಾಕ್ಷಿತುಲಸೀಮಣಿ-ಮುಂತಾದವುಗಳನ್ನು ಧರಿಸುವದು, ಭಸ್ಮಗೋಪೀಚಂದನಾದಿಗಳ ನಾಮವನ್ನು ಹಾಕಿಕೊಳ್ಳುವದು- ಮುಂತಾದ ಬಗೆಬಗೆಯ ವೇಷಭೂಷಾದಿಗಳಿಂದ ಅಲಂಕೃತರಾಗಿರುತ್ತಾರೆ. ಅವರಲ್ಲಿ ಅನೇಕರು ಸ್ಥಲದಿಂದ ಸ್ಥಲಕ್ಕೆ ಓಡಾಡುತ್ತಿರುತ್ತಾರೆ; ಕೆಲವರು ಕಾಶಿ, ರಾಮೇಶ್ವರ, ಅಯೋಧ್ಯೆ, ಪಂಢರಿ-ಮುಂತಾದ ಪುಣ್ಯಸ್ಥಲಗಳಲ್ಲಿ ಇರುತ್ತಾರೆ. ಮತ್ತೆಕೆಲವರು ಒಂದೊಂದು ಆಶ್ರಮ, ತಪೋವನ, ಕುಟೀರ-ಮುಂತಾದವುಗಳನ್ನು ಮಾಡಿ

ಕೊಂಡಿರುತ್ತಾರೆ. ಇಂಥವರ ಸೇವೆಯಿಂದ ಪುಣ್ಯವು ಪ್ರಾಪ್ತವಾಗುವದೆಂದೂ ತಮ್ಮ ಇಷ್ಟಪ್ರಾಪ್ತಿಯೂ ಅನಿಷ್ಟನಿವೃತ್ತಿಯೂ ಲಭಿಸುವವೆಂದೂ ಜನರು ಭಾವಿಸಿರುತ್ತಾರೆ. ಅದಕ್ಕೆ ತಕ್ಕಂತೆ ವೇಷಧಾರಿಸಾಧುಗಳು ಜನರಿಗೆ ಸಾಮುದ್ರಿಕ, ಜ್ಯೋತಿಷ, ಶಕುನ-ಮುಂತಾದವುಗಳನ್ನು ಹೇಳುವದೂ, ಮಂತ್ರ, ಯಂತ್ರ, ಭಸ್ಮ-ಮುಂತಾದವುಗಳಿಂದ ಅನುಗ್ರಹವನ್ನು ಮಾಡುವೆವೆಂದು ನಟಿಸುವದೂ ಹೆಚ್ಚಾಗುತ್ತಾಬಂದಿದೆ. ಆದರೂ ಇವೆಲ್ಲ ಅನುಕರಣಗಳು ಮಾತ್ರವಾಗಿವೆ. ಅನುಕರಣಕ್ಕೆ ಮೂಲವಾದ ನಿಜವು ಇದ್ದೇಇರಬೇಕಷ್ಟೆ.. ಆದ್ದರಿಂದ ನಿಜವಾದ ಸಾಧುಗಳೂ ಇರುತ್ತಾರೆ, ಅವರ ನಿಜವಾದ ಸೇವೆಯಿಂದ ನಿಜವಾದ ಫಲವನ್ನು ಪಡೆಯುವ ನಿಜವಾದ ಮುಮುಕ್ಷುಗಳೂ ಇದ್ದೇ ಇರುತ್ತಾರೆಂದು ನಾವೆಲ್ಲರೂ ನಂಬಬಹುದು.

ನಿಜವಾದ ಸಾಧುಗಳೆಂದರೆ ಯಾರು? ಅವರ ಸಂಗದಿಂದ ನಮಗೆ ಆಗುವ ಪರಮಲಾಭವು ಯಾವದು? ಎಂಬುದನ್ನು ಶ್ರೀಮದ್ಭಾಗವತದಲ್ಲಿ ದೇವಹೂತಿಗೆ ಕಪಿಲಭಗವಂತನು ಬೋಧಿಸಿರುವ ಪ್ರಕಾರವನ್ನು ಇಲ್ಲಿ ಹೇಳುವೆನು. ಅದನ್ನು ಆಸ್ತಿಕರು ಚಿತ್ತವಿಟ್ಟು ಲಾಲಿಸಬೇಕು. ಭಗವಂತನು ಹೇಳುತ್ತಿದಾನೆ:

"ಯಾವ ಜನರು ಸಹನಶೀಲರೂ ದಯಾಲುಗಳೂ ಆಗಿರುವರೋ ಯಾರು ಸಮಸ್ತದೇಹಧಾರಿಗಳಿಗೂ ಯಾವ ಹೇತುವೂ ಇಲ್ಲದೆ ಹಿತವನ್ನೇ ಮಾಡುತ್ತಿರುವರೋ ಯಾರೊಬ್ಬರಲ್ಲಿಯೂ ವೈರವನ್ನು ಮಾಡುವದಿಲ್ಲವೋ, ಯಾರು ಶಾಂತರಾಗಿ ಸರಲಸ್ವಭಾವದಿಂದೊಡಗೂಡಿ ಸತ್ಪುರುಷರನ್ನು ಗೌರವಿಸುವದರಲ್ಲಿಯೇ ಉದ್ಯುಕ್ತರಾಗಿರುವರೋ, ಯಾರು ನನ್ನಲ್ಲಿ ಅನನ್ಯಭಾವದಿಂದ ಸದೃಢವಾದ ಪ್ರೇಮವನ್ನು ಮಾಡುತ್ತಿರುವರೋ ನನಗೋಸ್ಕರವಾಗಿ ಕರ್ಮವನ್ನು ಸಂಪೂರ್ಣವಾಗಿ ತ್ಯಜಿಸಿರುವರೋ ತಮ್ಮ ಸಕಲಸಂಬಂಧಿಗಳನ್ನೂ ಪರಿತ್ಯಾಗ ಮಾಡಿರುವರೋ ಮತ್ತು ಯಾರು ನನ್ನಲ್ಲಿಯೇ ಪರಾಯಣರಾಗಿ ನನ್ನ ಪವಿತ್ರವಾದ ಕಥೆಗಳನ್ನು ಶ್ರವಣಮಾಡುತ್ತಲೂ ಕೀರ್ತನೆಮಾಡುತ್ತಲೂ ನನ್ನಲ್ಲಿಯೇ ಚಿತ್ತವನ್ನಿಟ್ಟುಕೊಂಡಿರುವರೋ ಅಂಥ ಭಕ್ತರಿಗೆ ಸಂಸಾರದ ವಿಧವಿಧವಾದ ತಾಪಗಳು ಯಾವವೂ ಬರುವದಿಲ್ಲ. ಸಾಧ್ವಿಯೆ, ಇಂಥ ಸರ್ವಸಂಗಪರಿತ್ಯಾಗಿಗಳಾದ ಮಹಾಪುರುಷರೇ ಸಾಧುಗಳೆನಿಸುವರು. ನೀನು ಇಂಥವರ ಸಂಗವನ್ನು ಇಚ್ಛಿಸಬೇಕು. ಏಕೆಂದರೆ ಅವರು ಸಂಗದಿಂದಾಗುವ ಸಕಲದೋಷಗಳನ್ನೂ ಪರಿಹರಿಸುವರು. ಸತ್ಪುರುಷರ ಉತ್ತಮಸಂಗದಿಂದ ನನ್ನ ವೀರ್ಯದ ಯಥಾರ್ಥಜ್ಞಾನವನ್ನುಂಟುಮಾಡುವ, ಹೃದಯಕ್ಕೂ ಕಿವಿಗಳಿಗೂ ರಸಾಯನವಾಗಿರುವ ಕಥೆಗಳು ಕಿವಿಗೆ ಬೀಳುವವು. ಅವುಗಳ ಶ್ರವಣದಿಂದ ಬೇಗನೆ ಮೋಕ್ಷಮಾರ್ಗದಲ್ಲಿ ಶ್ರದ್ಧೆಯೂ

ರತಿಯೂ ಭಕ್ತಿಯೂ ಕ್ರಮಕ್ರಮವಾಗಿ ಉಂಟಾಗುವವು. ನನ್ನ ಸೃಷ್ಟಿಸ್ಥಿತಿಲಯಾದಿಗಳ ಮತ್ತು ಅವತಾರಲೀಲೆಗಳ ಚಿಂತನೆಯಿಂದುಂಟಾದ ಭಕ್ತಿಯಿಂದ ಈ ಲೋಕದ ಮತ್ತು ಪರಲೋಕದ ವಿಷಯಭೋಗಗಳಲ್ಲಿ ವೈರಾಗ್ಯವು ತೋರಿಕೊಳ್ಳಲು, ಮನುಷ್ಯನು ಸಾವಧಾನದಿಂದ ಯೋಗದ ಸರಲವಾದ ಉಪಾಯಗಳಿಂದ ಸಮಾಹಿತನಾಗಿ ಮನೋನಿಗ್ರಹವನ್ನು ಮಾಡಿಕೊಳ್ಳುವದಕ್ಕೆ ಪ್ರಯತ್ನಿಸುವನು. ಈ ಪ್ರಕಾರದಿಂದ ಪ್ರಕೃತಿಯ ಗುಣಗಳಿಂದೊಡಗೂಡಿದ ವಿಷಯಗಳನ್ನು ತ್ಯಾಗ ಮಾಡುವದರಿಂದಲೂ ವೈರಾಗ್ಯಯುಕ್ತವಾದ ಜ್ಞಾನದಿಂದಲೂ ಯೋಗದಿಂದಲೂ ಮತ್ತು ನನ್ನಲ್ಲುಂಟಾದ ಸುದೃಢವಾದ ಭಕ್ತಿಯಿಂದಲೂ ಈ ದೇಹದಿಂದೊಡ ಗೂಡಿರುವಾಗಲೇ ಸರ್ವಾಂತರ್ಯಾಮಿಯಾದ ನನ್ನನ್ನು ಸೇರುವನು."

ಮೇಲೆ ಹೇಳಿರುವ ವಚನವು ಒಬ್ಬ ಮಹಾತ್ಮಳಾದ ಸ್ತ್ರೀಗೆ ಉಪದೇಶಿಸಿದ್ದೆಂಬುದನ್ನು ನಾವು ನೆನಪಿಡಬೇಕು. ದೇವಹೂತಿಯು ಮಹಾಸಿದ್ಧಪುರುಷರಾದ ಕರ್ದಮ ಋಷಿಗಳ ಅನುಗ್ರಹದಿಂದ ದಿವ್ಯವಾದ ನಾನಾಭೋಗಗಳನ್ನು ಅನುಭವಿಸಿದವಳು. ಆಕೆಗೆ ಯಾವ ಬಗೆಯ ಇಂದ್ರಿಯಸುಖಕ್ಕೂ ಕೊರತೆಯಿರಲಿಲ್ಲ. ಆಕೆಯು ಮಾಡಿದ ತಮ್ಮ ಸೇವೆಯಿಂದ ಪರಿತೃಪ್ತರಾಗಿ ಯಾವ ವರವನ್ನು ಬೇಕಾದರೂ ಕೇಳಿಕೊಳ್ಳುವಂತೆ ಕರ್ದಮರು ಅಪ್ಪಣೆಮಾಡಿದ್ದರು. ಆದರೂ ಲೋಕಕ್ಕೆಲ್ಲ ಸ್ವಾಭಾವಿಕವಾಗಿರುವ ಕಾಮವು ಆಕೆಯನ್ನು ಗಾರ್ಹಸ್ಥ್ಯದ ಸುಖವನ್ನು ಅನುಭವಿಸಿ ತನ್ನ ಆ ಪತಿದೇವನಿಂದ ಸತ್ಪ್ರಜೆಯನ್ನು ಪಡೆದುಕೊಳ್ಳುವಂತೆ ಪ್ರೇರಿಸಿತು. ಆದರೆ ಆಕೆಯ ಆ ಕಾಮನೆಯು ಧರ್ಮಾವಿರುದ್ಧವಾಗಿದ್ದದ್ದರಿಂದ ಕರ್ದಮರು ಆಕೆಗೆ ಭೋಗಮೋಕ್ಷಗಳೆರಡೂ ದೊರಕುವದಕ್ಕೆ ತಕ್ಕ ಉಪಾಯವನ್ನು ಮಾಡಿಕೊಟ್ಟರು. ಅವರಿಂದ ದೇವಹೂತಿಯಲ್ಲಿ ಭಗವಾನ್ ನಾರಾಯಣನೇ ಅವತರಿಸಿದನು, ದಂಪತಿಗಳಿಬ್ಬರಿಗೂ ಸದ್ಗತಿಯಾಗುವಂತೆ ಹರಸಿದನು. ಕರ್ದಮರು ವಿರಕ್ತಿಯಿಂದ ತಪೋವನಕ್ಕೆ ತೆರಳಿದ ಬಳಿಕ ದೇವಹೂತಿಯು ತನ್ನ ಮಗನು ಸಾಕ್ಷಾದ್ಭಗವಂತನೇ ಎಂಬ ನಿಶ್ಚಯವಿದ್ದದ್ದರಿಂದ ಆತನಿಂದ ಮೋಕ್ಷಮಾರ್ಗವನ್ನು ತಿಳಿದುಕೊಳ್ಳಬೇಕೆಂದು ಕುತೂಹಲದಿಂದ ಕೂಡಿ ಶ್ರದ್ಧಾ ಪೂರ್ವಕವಾಗಿ ಮಾಡಿದ ಪ್ರಶ್ನೆಗಳಿಗೆ ಕಪಿಲಭಗವಂತನು ಕೊಟ್ಟ ಉತ್ತರಗಳು ಭಾಗವತದಲ್ಲಿ ಅಡಕವಾಗಿವೆ. ಅದರಲ್ಲಿ ಪ್ರಕೃತ ನಾವು ಆರಿಸಿಕೊಂಡಿರುವ ಉಪದೇಶವೂ ಅಂತರ್ಗತವಾಗಿರುತ್ತದೆ.

ಈ ಸಂವಾದದಿಂದ ನಾವು ತಿಳಿದುಕೊಳ್ಳಬೇಕಾದ ವಿಷಯಗಳು ಅನೇಕವಿವೆ. ಸಾಧುಗಳ ಲಕ್ಷಣವನ್ನು ಹೇಳಿದ ಭಗವಂತನು ಇಲ್ಲಿ ಅನುಕ್ರಮವಾಗಿ ಹೇಳಿರುವದನ್ನು ನಾವು ಮನಸ್ಸಿನಲ್ಲಿ ಮೆಲುಕುಹಾಕಿದರೆ ನಿಜವಾದ ಸಾಧುಗಳನ್ನು ಹುಡುಕಿ

ಅರಿತುಕೊಳ್ಳುವದು ಕಷ್ಟವಾಗಲಾರದೆಂಬುದು ಅಂಥ ವಿಷಯಗಳಲ್ಲಿ ಮೊದಲನೆಯದು. ಭಗವಂತನಲ್ಲಿ ಸುದೃಢವಾದ ಅನನ್ಯಪ್ರೇಮವಿರುವವರೇ ಸಾಧುಗಳು. ಮತ್ತೆ ಯಾವ ವೇಷಭಾಷೆಗಳನ್ನು ಅನುಸರಿಸಲಿ ಅನುಸರಿಸದಿರಲಿ, ಸರ್ವಭೂತಗಳಲ್ಲಿಯೂ ಭಗವಂತನನ್ನು ಕಾಣುವದೆಂಬುದೂ ಸರ್ವರನ್ನೂ ಸಮವಾಗಿ ಪ್ರೇಮದಿಂದ ಕಾಣುವದೆಂಬುದೂ ಸಾಧುಗಳಿಗೆ ಅಸಾಧಾರಣಧರ್ಮವು. ಸಾಧುಗಳ ದರ್ಶನವು ಭಗವಂತನ ದರ್ಶನದಂತೆಯೇ ಆನಂದವನ್ನುಂಟುಮಾಡುವದು. ಅವರ ದರ್ಶನವೂ ಅವರ ಬಾಯಿಂದ ಸಹಜವಾಗಿ ನಿರಂತರವೂ ಬರುತ್ತಿರುವ ಭಗವದ್ವಿಚಾರದ ಉಪದೇಶಗಳೂ ನಮ್ಮನ್ನು ತಮ್ಮ ಕಡೆಗೆ ಎಳೆದುಕೊಂಡುಬಿಡುವವು-ಎಂಬುದು ಮತ್ತೊಂದು ವಿಷಯವು. ಭಗವದ್ವಿಚಾರದಿಂದ ತುಂಬಿರುವ ಎಷ್ಟೋ ಪುರಾಣಗಳನ್ನು ನಾವು ಕೇಳಿರುತ್ತೇವೆ, ಕೇಳುತ್ತಲೂ ಇರುತ್ತೇವೆ. ಆದರೂ ಭಗವಂತನ ಲೀಲೆಗಳನ್ನು ಸ್ಮರಿಸುವಂತೆ ನಮ್ಮ ಮನಸ್ಸು ನೇರ್ಪಡಲೊಲ್ಲದು. ಇದೇಕೆ? ಪುರಾಣವನ್ನು ಹೇಳುವವರು ಇಂಥ ವಿರಕ್ತರೂ ಭಗವದ್ಭಕ್ತರೂ ಆಗಿರುವದು ಸಿಕ್ಕುವದು ಅಪೂರ್ವ. ಪುರಾಣವನ್ನು ತಮ್ಮ ಜೀವಿಕೆಗಾಗಿ ಶ್ರವಣ ಮಾಡಿಸುವವರು ಅನೇಕರು ಇರಬಹುದು. ಆದರೆ ಸಂಸಾರದ ತಾಪತ್ರಯದಿಂದ ಪಾರಾಗಿ ಯಾವಾಗಲೂ ಹಸನ್ಮುಖರಾಗಿ ಭಗವಂತನ ಆನಂದವನ್ನು ತಾವೂ ಪಡೆದುಕೊಂಡು ಮತ್ತೊಬ್ಬರಿಗೂ ಸೂರೆಗೊಡುವ ಪುರಾಣಿಕರು ಸಿಕ್ಕುವದು ದುರ್ಲಭವೇ ಸರಿ. ನಿಜವಾದ ಸಾಧುಗಳು ಯಾವ ಪುರಾಣವನ್ನೂ ಹೇಳಬೇಕಾದದ್ದಿಲ್ಲ; ಅವರು ಆಡುವ ಮಾತುಗಳೆಲ್ಲ ಭಗವಂತನ ವಿಷಯವೇ ಆಗಿರುತ್ತವೆ. ಅವರನ್ನು ಸಂಸಾರದ ತಾಪತ್ರಯಗಳು ಗೋಳುಗುಟ್ಟಿಸು ವದಿಲ್ಲವೆಂಬುದು ಹಾಗಿರಲಿ, ಅವರ ಬಳಿಗೆ ಬಂದವರಿಗೆ ಕೂಡ ಅವು ಅಂಜಿಕೊಂಡು ದೂರ ಸರಿಯುವವು!

ಇನ್ನೊಂದು ವಿಷಯವನ್ನು ನಾವು ಕಪಿಲೋಪದೇಶದಿಂದ ಸಂಗ್ರಹಿಸಬಹುದು. ಅದೇನೆಂದರೆ ಸಾಧುಗಳು ನಮಗೆ ಈ ಲೋಕದ ಭೋಗಗಳನ್ನು ಒದಗಿಸಿಕೊಡುವ ಉಪಕರಣವೆಂದು ಎಂದಿಗೂ ಭಾವಿಸಬಾರದು. ಅವರು ಮನಸ್ಸುಮಾಡಿದರೆ, ಅನುಕಂಪೆಯಿಂದ ಅನುಗ್ರಹಿಸಿದರೆ, ನಮಗೆ ಇರುವದಕ್ಕೆ ಮನೆ, ಉಣ್ಣುವದಕ್ಕೆ ಮೃಷ್ಟಾನ್ನ, ಉಡುವದಕ್ಕೆ ಅನರ್ಘ್ಯವಾದ ವಸ್ತ್ರಗಳು, ದಿವ್ಯವಾದ ವಿಹಾರಸ್ಥಾನಗಳು, ಆಳುಕಾಳು, ಹೊಲಗದ್ದೆ, ಹಣಕಾಸು, ನೆಂಟರಿಷ್ಟರು, ಸ್ನೇಹಿತರು, ವಿದ್ಯಾಬುದ್ಧಿ, ಕೀರ್ತಿ, ಆರೋಗ್ಯ-ಎಲ್ಲವೂ ದೊರಕಬಹುದು. ಆದರೆ ಚಿಂತಾಮಣಿಯೇ ದೊರಕುವ ರೋಹಣಗಿರಿಯನ್ನು ಏರಿದವನು ಕಾಡುಕಲ್ಲುಗಳನ್ನು ಎಂದಿಗೂ ಆರಿಸಿಕೊಳ್ಳಲಾರನಲ್ಲವೆ? ಮಹಾಪುರುಷರ ಸಂಗದಿಂದ ನಾವು ಪಡೆದುಕೊಳ್ಳಬೇಕಾದ ಚಿಂತಾಮಣಿಯಂಥ ಒಂದು ಅಮೋಘವರವಿದೆ. ಇಂದ್ರಿಯ

ಸುಖದಲ್ಲಿ ವೈರಾಗ್ಯವನ್ನೂ, ಸುಲಭವಾದ ಮಾರ್ಗದಿಂದ ಮನೋನಿಗ್ರಹವನ್ನೂ, ಪಡೆದುಕೊಂಡು ಭಗವಂತನಲ್ಲಿ ಕ್ರಮಕ್ರಮವಾಗಿ ಶ್ರದ್ಧೆ, ರತಿ, ಭಕ್ತಿ–ಇವುಗಳನ್ನು ಸಂಪಾದಿಸಿಕೊಳ್ಳುವ ಮೋಕ್ಷಮಾರ್ಗವನ್ನು ಅರಿತುಕೊಳ್ಳುವದೇ ಈ ವರವು.

ಸಾಧುಗಳ ಉಪದೇಶವು ವಿಷಯಭೋಗದಲ್ಲಿ ವಿರಾಗವನ್ನೂ ಭಗವಂತನ ವಿಚಾರದಲ್ಲಿ ಶ್ರದ್ಧಾರತಿಭಕ್ತಿಗಳನ್ನೂ ಕೊಡುವದೆಂದು ಮೇಲೆ ಹೇಳಿದೆಯಷ್ಟೆ. ಆದರೆ ಅವರ ಉಪದೇಶವು ಶಾಸ್ತ್ರವಚನಗಳ ಜಾಲವಾಗಿರುವದಿಲ್ಲ; ತರ್ಕದಿಂದ ಕರ್ಕಶವಾಗಿರುವದೂ ಇಲ್ಲ. ಅವರು ನಮಗೆ ತೋರಿಸುವ ಮೋಕ್ಷಮಾರ್ಗವು ಕಲ್ಲುಮುಳ್ಳುಗಳಿರುವ ಕಾಡುಹಾದಿಯಾಗಿರುವದೂ ಇಲ್ಲ. ಶರೀರವನ್ನು ಉಪವಾಸ ವನವಾಸಗಳಿಂದ ದಂಡಿಸುವದು, ಹಠಯೋಗವೇ ಮುಂತಾದ ಕೆಲವರಿಗೆ ಮಾತ್ರವೇ ದೊರಕುವ ಕಠಿನಸಾಧನಗಳನ್ನು ಮಾಡುವದು–ಮುಂತಾದ ಘೋರ ತಪಸ್ಸನ್ನೂ ಅವರು ವಿಧಿಸುವದಿಲ್ಲ. ಅವರು ಸಾಮಾನ್ಯತಿಳಿವಳಿಕೆಯುಳ್ಳ ಹೆಣ್ಣು ಮಕ್ಕಳು, ಹುಡುಗರು–ಇಂಥವರಿಗೂ ತಿಳಿಯುವ ಸುಲಭತರವಾದ ಲಲಿತವಾದ ಭಾಷೆಯಿಂದ ಅತ್ಯಂತಗಹನವಿಷಯಗಳನ್ನು ಮನಗಾಣುವಂತೆ ಬೋಧಿಸಬಲ್ಲವ ರಾಗಿರುತ್ತಾರೆ. ಹೃದಯಕ್ಕೆ ಮೆಚ್ಚಾಗುವ, ತಾಪವನ್ನು ಕಳೆದು ತಂಪನ್ನುಂಟು ಮಾಡುವ, ಸುಲಭವಾಗಿ ಸಾಧಿಸಬಹುದಾದ ಸಾಧನದ ಮರ್ಮವನ್ನು ಅವರು ಅತ್ಯಂತಸುಗಮರೀತಿಯಿಂದ ತಿಳಿಸಿಕೊಡುತ್ತಾರೆ. ಅವರು ಸಹಜವಾಗಿಯೇ ಎಲ್ಲರಲ್ಲಿಯೂ ಪ್ರೇಮದಿಂದ ವರ್ತಿಸುತ್ತಿರುವದರಿಂದ ಅವರನ್ನು ನಾವು ಪ್ರೀತಿಸುವದು ಕಷ್ಟವಾಗುವದೇ ಇಲ್ಲ. ದಿನದಿನವೂ ಅವರ ನಡೆನುಡಿಗಳಿಂದ ನಮಗೆ ಭಗವಂತನಲ್ಲಿ ಭಕ್ತಿಯನ್ನು ಹೇಗೆ ಬೆಳೆಸಿಕೊಳ್ಳಬೇಕೆಂಬುದು ತನಗೆತಾನೇ ಅರಿವಾಗುತ್ತಾಬರುತ್ತದೆ. ಅವರು ಬೋಧಿಸುತ್ತಿರುವರೆಂಬ ಅರಿವೇ ನಮಗೆ ಆಗುವದಿಲ್ಲ; ಏಕೆಂದರೆ ಅವರು ಹಸುಮಕ್ಕಳಂತೆ ಎಷ್ಟೋ ವೇಳೆಗಳಲ್ಲಿ ನಮ್ಮನ್ನೇ ಸಲಹೆಕೇಳುವವರಂತೆ ಕೆಲವು ಮಾತುಗಳನ್ನಾಡುತ್ತಾರಾದರೂ •ಅದರಿಂದಲೇ ನಮ್ಮ ಅಂತಃಕರಣಕ್ಕೆ ದಿವ್ಯದೃಷ್ಟಿಯು ದೊರಕಿದಂತೆ ಕಾಣುತ್ತದೆ.

ಭಗವಂತನು ಇಂಥ ಸಾಧುವರ್ಯರ ಹೃದಯದಲ್ಲಿ ನಿತ್ಯವಾಗಿ ವಾಸವಾಗಿರು ತ್ತಾನೆ; ಇವರ ಮನಸ್ಸಿಗೆ ಮೆಚ್ಚಾಗುವಂತೆ ನಡೆದುಕೊಂಡರೆ ಆ ಭಗವಂತನಿಗೆ ಅವಶ್ಯವಾಗಿ ಸುಪ್ರೀತಿಯುಂಟಾಗುತ್ತದೆ–ಎಂಬುದು ನಮಗೆ ಯಾರೊಬ್ಬರೂ ಹೇಳಿಕೊಡದೆಯೇ ಮನದಟ್ಟಾಗಿಬಿಡುತ್ತದೆ. ನಿಜವಾದ ಸಾಧುಗಳ ಸಂಗವು ದೊರಕಿದ್ದಕ್ಕೆ ಇದೊಂದು ದೊಡ್ಡ ಗುರುತು. 'ಭಗವಂತನು ಇವರ ಆಶ್ರಮದಲ್ಲಿ ನಿತ್ಯವಾಗಿ ಸಂನಿಹಿತನಾಗಿರುತ್ತಾನೆ. ಭಗವಂತನೆಂಬ ಚಂದ್ರನ ಬೆಳದಿಂಗಳು ಈ

ಆವರಣದಲ್ಲೆಲ್ಲ ಹರಡಿಕೊಂಡಿರುತ್ತದೆ. ಆದ್ದರಿಂದ ನಾವು ಇಲ್ಲಿ ವಾಸವಾಗಿದ್ದರೆ ನಮಗೆ ಆತನ ಕೃಪಾಕಿರಣಗಳು ಅವಶ್ಯವಾಗಿ ಸೋಕುತ್ತಿರುವವು' ಎಂದು ಹೇಗೋ ನಮ್ಮ ಮನಸ್ಸಿಗೆ ತಾಕಿಬಿಡುತ್ತದೆ. ಅವರ ಬಳಿಯಲ್ಲಿದ್ದರೆ ಭಗವಂತನ ಸಾಂನಿಧ್ಯದ ಭಾವನೆಯುನ್ನು ಮನಸ್ಸಿಗೆ ತಂದುಕೊಳ್ಳುವದೇನೂ ಕಷ್ಟವಾಗುವದಿಲ್ಲ. ಹಿಮಗಾಲದಲ್ಲಿ ಚಳಿಯೂ ಬೇಸಿಗೆಯಲ್ಲಿ ಬಿಸಿಲ ತಾಪವೂ ತಂಗಾಳಿಯ ಸುಖವೂ ತಾನೇ ತೋರಿಕೊಳ್ಳುವಂತೆ ಭಗವಂತನ ಸಾಂನಿಧ್ಯದ ಭಾವನೆಯು ನಮಗೆ ಸಹಜವಾಗಿ ಮನಸ್ಸಿನಲ್ಲಿ ನಿಂತುಬಿಡುತ್ತದೆ.

ಭಗವಂತನು ಈ ಪ್ರಪಂಚವನ್ನು ತನ್ನ ಪ್ರೇಮಮಯವಾದ ಸಂಕಲ್ಪದಿಂದ ಸೃಷ್ಟಿಸಿರುತ್ತಾನೆ; ಇಲ್ಲಿರುವ ಪ್ರಾಣಿಗಳ ಹೃದಯದಲ್ಲೆಲ್ಲ ಅವನು ತನ್ನ ಪ್ರೇಮದ ಅಂಶವನ್ನು ತುಂಬಿಕೊಂಡಿರುತ್ತಾನೆ. ಭಗವಂತನ ಪ್ರೇಮಕ್ಕೆ ಪಾತ್ರವಾಗದ ಪ್ರಾಣಿಯೇ ಇಲ್ಲ. ಎಲ್ಲೆಲ್ಲಿಯೂ ಬೆಳದಿಂಗಳು ಹರಡಿಕೊಂಡಿರುವಾಗ ಕಣ್ಣುಮುಚ್ಚಿ ಕೊಂಡವನೊಬ್ಬನಿಗಲ್ಲದೆ ಮತ್ತೆ ಯಾರಿಗೆ ತಾನೆ ಕತ್ತಲು ಕಾಣಿಸೀತು? ಹಾಗೆಯೇ ಭಗವಂತನ ಪ್ರೇಮದ ಬೆಳದಿಂಗಳಿನಲ್ಲಿಯೇ ನಾವೆಲ್ಲರೂ ಇರುತ್ತಿದ್ದರೂ ಕಣ್ಣುಮುಚ್ಚಿ ಕೊಂಡು ಅಜ್ಞಾನದ ಕತ್ತಲೆಯಲ್ಲಿ ಎಡವುತ್ತಲೂ ಮುಗ್ಗರಿಸುತ್ತಲೂ ಇರುವೆವು. ಇದೇ ಸಂಸಾರದ ದುಃಖವೆಂಬುದು. ಆದ್ದರಿಂದ ಈ ದುಃಖದಿಂದ ಪಾರಾಗು ವದಕ್ಕೆ ಕಣ್ಣುತೆರೆದು ಭಗವಂತನ ಪ್ರೇಮಪ್ರಪಂಚವನ್ನು ನೋಡಬೇಕು; ಎಲ್ಲರನ್ನೂ ಪ್ರೇಮದಿಂದ ಕಾಣುವದನ್ನು ಕಲಿಯಬೇಕು; ಎಲ್ಲೆಲ್ಲಿಯೂ ಭಗವಂತನ ಪ್ರೇಮದ ಫಲವಾಗಿ ಕಾಣಬರುತ್ತಿರುವ ದೃಶ್ಯಗಳನ್ನು ನೋಡಿ ನಲಿಯಬೇಕು. ಆತನ ಕೃಪೆಗೆ ಪಾತ್ರರಾಗಿಯೇ ಇರುವೆವಾದ್ದರಿಂದ ನಮಗೆ ಯಾವ ಕಷ್ಟಗಳೂ ಎಲ್ಲಿಂದಲೂ ಬರಲಾರವು, ಬಂದರೂ ಅವು ನಮ್ಮನ್ನು ಏನೂ ಮಾಡಲಾರವು–ಇದೇ ಸಾಧುಗಳ ಸಹಜವಾದ ಉಪದೇಶ; ಇದೇ ಅವರ ನಂಬಿಕೆ, ಇದೇ ಅವರ ಜೀವನ ಮಂದಿರದ ತಳಹದಿ. ಅವರ ಆಶ್ರಯದಲ್ಲಿರುವವರೆಗೆ ನಮಗೆ ಈ ಉಪದೇಶಗಳೇ ಉಸಿರಾಗಿಬಿಡುವವು. ಹೀಗೆ ಅನಾಯಾಸವಾಗಿ ಭಗವಂತನಲ್ಲಿ ಭಕ್ತಿಯು ದೃಢವಾಗಿ ನಿಂತುಬಿಡುವದೇ ಸತ್ಸಂಗದ ಪರಮಫಲವು.

****

# 31. ಅಧ್ಯಾತ್ಮಸಾಧನೆಯ ಮಾರ್ಗ

ಸತ್ಸಂಗದಿಂದ ಎರಡು ಮುಖ್ಯಲಾಭಗಳುಂಟಾಗುವವೆಂದು ಹಿಂದೆ ಆಗಲೆ ಹೇಳಿದ್ದೇನೆ. ಭಗವಂತನಲ್ಲಿ ಭಕ್ತಿ ಎಂಬುದು ಆ ಲಾಭಗಳಲ್ಲಿ ಒಂದು, ಶಾಂತ್ಯಾದಿಗಳ ಪರಿಚಯವು ಮತ್ತೊಂದು.

ಯಾರು ಹುಟ್ಟಿದವರು ಹುಟ್ಟಿದ ಹಾಗೆಯೇ ಬೆಳೆದಿರುತ್ತಾರೋ, ಯಾರಿಗೆ ತಂದೆತಾಯಿಗಳ ಮತ್ತು ಗುರುಹಿರಿಯರ ಉಪದೇಶದ ಲಾಭವು ದೊರಕಿಲ್ಲವೋ ಅವರ ಮನಸ್ಸು ಕಾಡಿನಲ್ಲಿ ಬೆಳೆದಿರುವ ಬಿದಿರು, ಲ್ಯಾಂಟಾನ-ಮುಂತಾದ ಗಿಡಗಳಂತೆ ಸ್ವೇಚ್ಛೆಯಿಂದ ಬೆಳೆದಿರುತ್ತದೆ. ಅವರಿಗೆ ಜನ್ಮದ ಗುರಿಯು ಏನು ಎಂಬುದು ತಿಳಿದೇ ಇರುವದಿಲ್ಲ. ಅವರಿಗೆ ಮುಖ್ಯವಾಗಿ ಉಣ್ಣುವದು ತಿನ್ನುವದು, ಕುಡಿಯುವದು, ಮೆರೆಯುವದು, ಹೆಚ್ಚೇನು? ತಮ್ಮ ಇಚ್ಛೆಗೆ ಯಾವ ಅಡ್ಡಿಯೂ ಇಲ್ಲದಿರುವದು, ಬೇಕು. ಅವರು ಯಾವ ಕಟ್ಟಿಗೂ ಸಿಕ್ಕಿರುವದಿಲ್ಲ. ಆದರೆ ಯಾರು ಚಿಕ್ಕಂದಿನಲ್ಲಿಯೇ ವೇದಶಾಸ್ತ್ರಗಳನ್ನು ಚೆನ್ನಾಗಿ ಅಭ್ಯಾಸಮಾಡಿ ಅರ್ಥವನ್ನು ಮನದಂದುಕೊಂಡಿರುತ್ತಾರೋ, ಯಾರು ಶಾಸ್ತ್ರದಲ್ಲಿ ಹೇಳಿದಂತೆ ಕರ್ಮಗಳನ್ನು ಮಾಡಿರುತ್ತಾರೋ, ಯಾರಿಗೆ ಪರಮೇಶ್ವರನೊಬ್ಬನು ಇದಾನೆಂಬ ನಂಬಿಕೆಯಾಗಿರುವದೋ, ಯಾರು ತಾವು ಮಾಡುವ ಸತ್ಕರ್ಮಗಳು ಆ ಪರಮೇಶ್ವರನ ಆರಾಧನೆಯೆಂಬ ಭಾವನೆಯನ್ನು ಸಂಪಾದಿಸಿಕೊಂಡಿರುತ್ತಾರೋ ಅಂಥವರ ಮಾತೇ ಬೇರೆ. ಅವರು ಮಾಡಬಾರದ ಕೆಲಸಗಳನ್ನು ಎಂದಿಗೂ ಮಾಡುವದಿಲ್ಲ; ಇಷ್ಟೇ ಅಲ್ಲ, ತಮ್ಮ ಕಾಮಗಳನ್ನು ಪರಿಪೂರ್ತಿಗೊಳಿಸಿಕೊಳ್ಳುವದಕ್ಕೆಂದು ಕೂಡ ಶಾಸ್ತ್ರೀಯಕರ್ಮಗಳನ್ನು ಮಾಡುವದಿಲ್ಲ. ಅವರಿಗೆ ಬೇಕಾದದ್ದೆಲ್ಲ ಒಂದೇ. ತಾವು ಮಾಡುವ ಕೆಲಸವು ಶಾಸ್ತ್ರಕ್ಕೆ ವಿರುದ್ಧವಾಗಿರಬಾರದು, ಸತ್ಕರ್ಮವೇ ಆಗಿರಬೇಕು; ಅದು ಭಗವಂತನ ಪ್ರೀತಿಗಾಗಿ ಮಾಡಿದ ಆರಾಧನೆಯಾಗಿರಬೇಕು.

ತಾವು ಮಾಡುವ ಕರ್ಮವನ್ನು ಭಗವಂತನ ಅರ್ಚನೆಯಾಗಿ ಮಾಡಿಕೊಂಡ ಮಹನೀಯರಿಗೆ ಬೇಗನೆ ಚಿತ್ತವು ಶುದ್ಧವಾಗುತ್ತದೆ. ಅವರ ಚಿತ್ತದಲ್ಲಿ ಬರಿಯ ಸುಖದ ಆಶೆಯು ಇರುವದಕ್ಕೆ ಎಡೆಯಿರುವದಿಲ್ಲ. ಈ ಸಂಸಾರದ ಸುಖದಲ್ಲಿ ದೋಷಗಳಿವೆ ಎಂಬುದು ಅವರ ಮನಸ್ಸಿಗೆ ಆಗಾಗ್ಗೆ ತಾಕುತ್ತಲೇ ಇರುತ್ತದೆ. ಮನುಷ್ಯನಿಗೆ ಆಗುವ ವಿಷಯಸುಖದಲ್ಲಿ ಮುಖ್ಯವಾಗಿ ಎರಡು ದೋಷಗಳಿರುತ್ತವೆ. ವಿಷಯೇಂದ್ರಿಯಗಳ ಸಂಬಂಧದಿಂದಲೇ ಅದು ತೋರಿಕೊಳ್ಳಬೇಕಾಗಿರುವದರಿಂದಲೂ ಆ ವಿಷಯೇಂದ್ರಿಯಗಳು ಇದ್ದಂತೆ ಇರದೆ ಆಗಾಗ್ಗೆ ಮಾರ್ಪಡುತ್ತಲೇ ಇರುವದರಿಂದಲೂ ವಿಷಯಸುಖವು ನಿತ್ಯವಾಗಿರುವ ಹಾಗೇ ಇಲ್ಲ. ಈಗ ಸುಖವು

ಹುಟ್ಟಿತು ಎಂದರೆ ಇನ್ನೊಂದು ಘಳಿಗೆಯೊಳಗೆ ಅದು ಹೋಗಿಬಿಡುತ್ತದೆ. ಇದೊಂದು ದೋಷ. ಹೀಗೆ ಮತ್ತೆಮತ್ತೆ ನಾಶವಾಗುವ ಸುಖವನ್ನು ಮತ್ತೆಮತ್ತೆ ಸಂಪಾದಿಸುವ ಆಯಾಸವು ಚಿತ್ತಶುದ್ಧಿಯುಳ್ಳ ವಿವೇಕಿಗೆ ಬೇಕಾಗುವದಿಲ್ಲ. ವಿಷಯ ಸುಖವು ಅನಿತ್ಯಮಾತ್ರವಲ್ಲ, ಅದು ಸಾತಿಶಯವೂ ಆಗಿರುತ್ತದೆ. 'ಈ ಸುಖಕ್ಕಿಂತ ಆ ಸುಖ ಮೇಲು, ಅದು ನನಗೆ ಹೇಗೆ ಸಿಕ್ಕೀತು' ಎಂಬ ಹಂಬಲವನ್ನು ಹುಟ್ಟಿಸುವದು ವಿಷಯಸುಖದ ಸ್ವಭಾವ. ನನಗಿರುವದು ಸಣ್ಣಮನೆ, ದೊಡ್ಡ ಮನೆಯಿಲ್ಲವಲ್ಲ! ನನಗಿರುವದು ಸಾಮಾನ್ಯವಾದ ಬಟ್ಟೆ, ನನಗೆ ಅನರ್ಘ್ಯವಾದ ಪೀತಾಂಬರವಿಲ್ಲವಲ್ಲ! -ಎಂದು ಮುಂತಾಗಿ ಹಂಬಲಿಸುವಂತೆ ಮಾಡದೆ ವಿಷಯ ಸುಖವು ಸಿಕ್ಕುವದೇ ಇಲ್ಲ, ನಮಗಿಂತ ಮತ್ತೊಬ್ಬರಿಗೆ ಆ ಹೆಚ್ಚಿನ ಸುಖವಿದೆ ಎಂದು ನಮಗೆ ತೋರಿದರೆ ಅಂಥವರಲ್ಲಿ ಅಸೂಯೆ, ಅದರಿಂದ ಅದನ್ನು ಹೇಗಾದರೂ ಮಾಡಿ ಕಸಿದು ಕೊಳ್ಳಬೇಕೆಂಬ ದುರಾಶೆ-ಮುಂತಾದವುಗಳೂ ಇದರಿಂದ ಹುಟ್ಟಿಕೊಳ್ಳುವವು. ಇದು ವಿಷಯಸುಖದ ಮತ್ತೊಂದು ದೋಷ. ಪರಮೇಶ್ವರನನ್ನು ಸ್ವಕರ್ಮದಿಂದ ಆರಾಧನೆಮಾಡಿದ ಪುಣ್ಯಾತ್ಮರಿಗೆ ಇಂಥ ಚಿತ್ತದೋಷಗಳು ಎದ್ದುಕಾಣುತ್ತವೆ. ಆದ್ದರಿಂದ ಅವರು ವಿಷಯಸುಖಕ್ಕಿಂತ ಹೆಚ್ಚಿನ ಸುಖವು ಯಾವದಾದರೂ ಇದೆಯೆ? ಎಂದು ಹುಡುಕುವದಕ್ಕೆ ಮೊದಲು ಮಾಡುವರು.

ಪರಮಾತ್ಮವಿದ್ಯೆಯು ಬ್ರಹ್ಮಾನಂದವೆಂಬ ಹೆಚ್ಚಿನ ಸುಖವನ್ನು, ಮಿಗಿಲಿಲ್ಲದ ಸುಖವನ್ನು, ತಂದುಕೊಡುವದೆಂದು ಶಾಸ್ತ್ರದಲ್ಲಿ ಹೇಳಿರುತ್ತದೆ; ದೊಡ್ಡವರೂ ಹಾಗೆಂದು ಉಪದೇಶಿಸುತ್ತಿರುತ್ತಾರೆ. ಯಾರಿಗೆ ಮೇಲೆ ಹೇಳಿರುವ ಕಾರಣಗಳಿಂದ ವಿಷಯಸುಖದಲ್ಲಿ ದೋಷದೃಷ್ಟಿಯುಂಟಾಗಿ ಅದರಲ್ಲಿ ವೈರಾಗ್ಯವುಂಟಾಗಿರುವದೋ ಅಂಥವರು ಈ ಪರಮಾತ್ಮವಿದ್ಯೆಯನ್ನು ಉಪದೇಶಿಸಬಲ್ಲವರನ್ನು ಹುಡುಕಿಕೊಂಡು ಹೊರಡುವರು. ಅವರಿಗೆ ಹಿಂದೆ ಮಾಡಿರುವ ಪುಣ್ಯದ ಬಲದಿಂದ ಸತ್ಪುರುಷರ ಸಂಗವಾಗುವದು. ಸತ್ಪುರುಷರ ದರ್ಶನ, ಅವರೊಡನೆ ಸಂಭಾಷಣೆ, ಅವರ ಸೇವೆ-ಮುಂತಾದವುಗಳಿಂದ ಭಗವಂತನಲ್ಲಿ ದೃಢವಾದ ಭಕ್ತಿಯೂ ಶಾಂತ್ಯಾದಿ ಗಳೂ ಮೊದಲು ದೊರಕುವವು. ಭಗವದ್ಭಕ್ತಿಯು ದೃಢವಾಗುವದೆಂದರೇನೆಂಬು ದನ್ನು ಆಗಲೆ ಹೇಳಿದ್ದಾಗಿದೆ. ಈ ಸಂದೇಶದಲ್ಲಿ ಶಾಂತ್ಯಾದಿಗಳನ್ನು ಕುರಿತು ಕೆಲವು ಮಾತುಗಳನ್ನು ಬರೆಯುವೆನು.

ಸತ್ಪುರುಷರ ಹೃದಯದಲ್ಲಿ ಭಗವಂತನು ನೆಲಸಿರುವನೆಂದು ಆಗಲೆ ಹೇಳಿರು ತ್ತೇನೆ. ಅವರಿಗೆ ಭಗವಂತನ ಅರ್ಚನ, ಧ್ಯಾನ, ಭಗವದ್ವಿಚಾರ, ಭಗವಂತನ ವಿಷಯದ ಸಂಬೋಧನೆ ಸಂಭಾಷಣೆ-ಇವುಗಳು ಪ್ರತಿದಿನದ ಕರ್ತವ್ಯವಾಗಿರುವವು.

ಇಂಥ ಸಾಧುಗಳ ಬಳಿಯಲ್ಲಿರುವವರಿಗೆ ಭಗವಂತನಲ್ಲಿ ದೃಢಭಕ್ತಿಯುಂಟಾಗುವದರಲ್ಲಿ ಏನೂ ಆಶ್ಚರ್ಯವಿಲ್ಲವಷ್ಟೆ. ಇದರಂತೆಯೇ ಭಗವಂತನಿಗೆ ಅಚ್ಚುಮೆಚ್ಚಿನ ಭಕ್ತರಾದ ಇಂಥ ಮಹನೀಯರ ನೆರಳಿನಲ್ಲಿ ವಾಸಮಾಡಿಕೊಂಡಿರುವವನಿಗೆ ಶಾಂತ್ಯಾದಿಗಳು ಪರಿಚಯವಾಗುವದರಲ್ಲಿ ಯಾವ ಆಶ್ಚರ್ಯವೂ ಇರುವದಿಲ್ಲ. ಭಗವಂತನು ಸದ್ಗುಣಗಳಿಗೆಲ್ಲ ಗನಿಯಾಗಿರುತ್ತಾನೆ. ಅಂಥವನನ್ನೇ ತಮ್ಮ ಆತ್ಮನನ್ನಾಗಿ ಮಾಡಿಕೊಂಡಿರುವ ಸಾಧುವರ್ಯರಲ್ಲದಿದ್ದರೆ ಮತ್ತೆ ಯಾರಲ್ಲಿ ಈ ಸುಗುಣಗಳು ನಮಗೆ ಕಾಣಬರಬೇಕು?

**ಅಧ್ಯಾತ್ಮಮಾರ್ಗವೆಂಬುದು ಬಹುದೀರ್ಘವಾದದ್ದು.** ಈ ಮಾರ್ಗವನ್ನು ಹಿಡಿದ ಮೇಲೂ ಎಷ್ಟೋ ಜನ್ಮಗಳವರೆಗೂ ಇದೇ ಮಾರ್ಗದಲ್ಲಿ ನಡೆಯುತ್ತಲೇ ಇರಬೇಕಾಗುತ್ತದೆ. ಆದ್ದರಿಂದಲೇ ಭಗವಂತನು ಅರ್ಜುನನಿಗೆ ಸಾಧನವಿಚಾರವನ್ನು ಹೇಳುವಾಗ "ಭಗವಂತನನ್ನು ಧ್ಯಾನಮಾಡುವ ಯೋಗಿಯು ಎಷ್ಟೋ ಜನ್ಮಗಳಲ್ಲಿ ಮಾಡಿದ ಸಾಧನಾಭ್ಯಾಸದ ಸಂಸ್ಕಾರದಿಂದ ಸಿದ್ಧನಾಗಿ ಪರಗತಿಯನ್ನು ಪಡೆಯುವನು" (6–45) ಎಂದು ಹೇಳಿರುತ್ತಾನೆ. ಈ ಅಧ್ಯಾತ್ಮಸಾಧನೆಯ ಮಾರ್ಗದ ಕೊನೆಯನ್ನು ಯಾವನು ಮುಟ್ಟುತ್ತಾನೆಂಬುದನ್ನು ಉಪನಿಷತ್ತಿನಲ್ಲಿ ಹೀಗೆಂದು ವರ್ಣಿಸಿದೆ :

**"ಸಂಸಾರಿಯಾದ ಸಾಧಕನೇ ರಥಿ, ಶರಿರವೇ ರಥ, ಬುದ್ಧಿಯು ಸಾರಥಿ, ಮನಸ್ಸು ಕಡಿವಾಣವು, ಇಂದ್ರಿಯಗಳು ಕುದುರೆಗಳು, ವಿಷಯಗಳು ಅವುಗಳ ದಾರಿ, ಶರೀರೇಂದ್ರಿಯಮನಸ್ಸುಗಳಿಂದ ಕೂಡಿದವನೇ ಭೋಕ್ತೃವಾದ ಸಂಸಾರಿಯು. ಯಾವನು ಬುದ್ಧಿಯಿಲ್ಲದವನೋ ಯಾವನ ಮನಸ್ಸು ಯುಕ್ತವಾಗಿಲ್ಲವೋ ಅವನಿಗೆ ಇಂದ್ರಿಯಗಳೆಂಬ ಕುದುರೆಗಳು ವಶವಾಗಿರುವದಿಲ್ಲ. ಆದರೆ ಯಾವನು ಬುದ್ಧಿವಂತನೋ ಯುಕ್ತವಾದ ಮನಸ್ಸುಳ್ಳವನೋ ಅವನಿಗೆ ಅವು ವಶವಾಗಿರುವವು. ಯಾವನು ಬುದ್ಧಿಯಿಲ್ಲದೆ, ಮನಸ್ಸು ಹಿಡಿತದಲ್ಲಿಲ್ಲದೆ, ಅಶುಚಿಯಾಗಿರುವನೋ ಅವನಿಗೆ ಆ ದಾರಿಯ ಕೊನೆಯು ಸಿಕ್ಕುವದಿಲ್ಲ. ಅವನು ಸಂಸಾರಕ್ಕೆ ಬೀಳುವನು. ಆದರೆ ಯಾವನು ಬುದ್ಧಿವಂತನೋ, ಸಮನಸ್ಕನಾಗಿ ಶುಚಿಯಾಗಿರುವನೋ, ಅವನು ಮಜಲನ್ನು ಮುಟ್ಟುವನು. ಯಾವನು ವಿಜ್ಞಾನಸಾರಥಿಯಾದವನೂ ಮನಸ್ಸೆಂಬ ಕಡಿವಾಣವುಳ್ಳವನೂ ಆಗಿರುವನೋ ಅವನೇ ಈ ದಾರಿಯ ಕೊನೆಯನ್ನು, ಆ ವಿಷ್ಣುವಿನ ಪರಮಪದವನ್ನು ಮುಟ್ಟುತ್ತಾನೆ"**–ಕಠ. 1–3–3–ರಿಂದ19.

ನಾವೆಲ್ಲರೂ ಅಧ್ಯಾತ್ಮದ ದಾರಿಯಲ್ಲಿಯೇ ಇರುತ್ತೇವೆ. ಬೇಗನೆ ಪ್ರಯಾಣಮಾಡಿ ಮಜಲನ್ನು ಮುಟ್ಟಬೇಕೆಂದೇ ನಮ್ಮೆಲ್ಲರ ಉದ್ದೇಶ. ಪರಮಾತ್ಮನು ನಮ್ಮೆಲ್ಲರಿಗೂ ಇದಕ್ಕೆ ಅನುಕೂಲವಾಗುವ ಶರೀರೇಂದ್ರಿಯಗಳನ್ನು ಕೊಟ್ಟೂ ಇರುತ್ತಾನೆ. ಆದರೆ ದುರ್ದೈವದಿಂದ ನಮ್ಮಲ್ಲನೇಕರಿಗೆ ಶರೀರವೆಂಬ ಗಾಡಿಯು ಸರಿಯಾದ ಸ್ಥಿತಿಯಲ್ಲಿರುವದಿಲ್ಲ. ಅದನ್ನು ನಾವು ಕಟ್ಟುಪಾಡಿನಲ್ಲಿಟ್ಟುಕೊಂಡು ಚೆನ್ನಾಗಿ ನೋಡಿ

ಕೊಂಡಿಲ್ಲ. ಕಮಾನಿಲ್ಲದೆ ಮುಂದಿನ ಮೂಕು ಮುರಿದಿರುವ, ಚಕ್ರದ ಹಾರೆಕೋಲು ಗಳು ಲಡ್ಡಾಗಿರುವ, ಕಡಾಣಿಗಳು ಈಗಲೊ ಆಗಲೊ ಬೀಳುವಂತಿರುವ, ಗಾಡಿಯು ಏತಕ್ಕೆ ಬಂದೀತು? ನಮ್ಮ ಕುದುರೆಗಳನ್ನು ನಾವು ಪಳಗಿಸಿಕೊಂಡಿಲ್ಲ; ಇಂದ್ರಿಯಗಳೇ ಕುದುರೆಗಳು. ಅವು ತುಂಟುಕುದುರೆಗಳಂತೆ ಕಂಡಕಡೆಗೆ ಹರಿಯುತ್ತಿರುವವು; ಈಗ ಓಡುವವು, ಈಗ ನಿಂತೇಬಿಡುವವು! ಇಂಥ ಕುದುರೆಗಳು ನಾವು ಹೇಳಿದಂತೆ ಕೇಳುವದು ಹೇಗೆ? ಇನ್ನು ನಾವು ಹಿಡಿದಿರುವ ಕಡಿವಾಣವಾದ ಮನಸ್ಸೆಂಬುದು ನಮ್ಮ ಬುದ್ಧಿಗೆ ವಶವಾಗಿಯೇ ಇಲ್ಲ; ನಮ್ಮ ಬುದ್ಧಿಯೆಂಬ ಸಾರಥಿಗೂ ಕುದುರೆಯ ಗಾಡಿಯನ್ನು ಹೊಡೆಯುವ ಅಭ್ಯಾಸವೇ ಇಲ್ಲ. ಆದ್ದರಿಂದ ಗಾಡಿಯು ಒಂದೊಂದು ಕಡೆಗೆ ಹೋಗುತ್ತಲೂ ಆಗಾಗ್ಗೆ ಇಡಕುಮುಡುಕುಗಳನ್ನು ಲೆಕ್ಕಿಸದೆ ಸಿಕ್ಕಿದ ಕಡೆಗೆಲ್ಲ ಹೋಗಿ ಬೀಳುತ್ತಲೂ ಇರುವದು. ಇದು ನಮ್ಮ ಪ್ರಯಾಣ !

ಆದರೆ ಯಾರು ಈವರೆಗೆ ವರ್ಣಿಸಿರುವ ಸಾಧನಗಳನ್ನು ಮಾಡಿ, ಸತ್ಪುರುಷರ ಸಂಗವನ್ನು ಮಾಡಿಕೊಂಡಿರುವರೋ ಅವರಿಗೆ ಪ್ರಯಾಣವು ಸುಪಥವಾಗಿ ಸಾಗುತ್ತಿರುವದು. ಈ ಪ್ರಯಾಣವು ಅಜ್ಞರಿಗೆ ಬಹುದೀರ್ಘಕಾಲದ್ದೆಂದು ಕಂಡುಬರುತ್ತಿದ್ದರೂ ಅವರಿಗೆ ಬಲುಬೇಗನೆ ದಾರಿಯ ಕೊನೆಯಾದ ವಿಷ್ಣುಪದವು ದೊರಕಿಬಿಡುವದು. ಇದಕ್ಕೆ ಕಾರಣವೇನು? ಅವರು ಸಾಧುಸಂಗದಿಂದ ಶಾಂತ್ಯಾದಿಗಳನ್ನು ಪರಿಚಯಮಾಡಿಕೊಂಡಿರುವದೇ. ಶಾಂತ್ಯಾದಿಗಳಿಂದ ಅವರಿಗೆ ಉತ್ತಮವಾದ ಬುದ್ಧಿಯೂ ಮನಸ್ಸೂ ದೊರಕಿರುವವು. ಅದರಿಂದ ಇಂದ್ರಿಯ ಗಳೂ ಅವರ ಇಷ್ಟದಂತೆ ಸತ್ಪಥದಲ್ಲಿಯೇ ನಡೆಯುವವು. ಆದ್ದರಿಂದ ಅವರಿಗೆ ಪ್ರಯಾಣವು ಅಷ್ಟು ಸುಕರವಾಗಿರುತ್ತದೆ.

ಈಗ ಈ ಶಾಂತ್ಯಾದಿಗಳ ವಿವರಣೆಯನ್ನು ಒಂದಿಷ್ಟು ಮಾಡಿಕೊಳ್ಳುವದು ಅವಶ್ಯವಾಗುತ್ತದೆ. ಶಾಂತಿ, ದಾಂತಿ, ಉಪರತಿ, ತಿತಿಕ್ಷೆ, ಶ್ರದ್ಧೆ, ಸಮಾಧಾನ- ಇವೇ ಶಾಂತ್ಯಾದಿಗಳು. ಈ ಆರು ಯಾವನಿಗೆ ಅಳವಟ್ಟಿರುವವೋ ಅವನನ್ನು ಅಂತರ್ಮುಖಿಯು ಎಂದು ಬ್ರಹ್ಮಜ್ಞಾನಿಗಳು ಎಣಿಸುತ್ತಾರೆ. ಯಾವನಿಗೆ ಇವು ಅಳವಟ್ಟಿರುವವೋ ಅವನೇ ಬ್ರಹ್ಮಜಿಜ್ಞಾಸೆಯನ್ನು ಮಾಡುವದಕ್ಕೆ ಅರ್ಹನಾದ ಅಧಿಕಾರಿಯು; ಅವನಿಗೆ ಬ್ರಹ್ಮಜಿಜ್ಞಾಸೆಯಲ್ಲದೆ ಮತ್ತೆ ಯಾವದೂ ರುಚಿಸುವದಿಲ್ಲ. ವಿವೇಕ, ವೈರಾಗ್ಯ, ಮುಮುಕ್ಷುತ್ವ-ಈ ಮೂರು ಸಾಧನಗಳಿದ್ದರೂ ಶಮಾದಿಗಳು ಇಲ್ಲದವನಿಗೆ ಪರಮಾತ್ಮತತ್ತ್ವವನ್ನು ವಿಚಾರಮಾಡುವದಾಗಲಿ, ಅದರಲ್ಲಿಯೇ ಮನಸ್ಸನ್ನಿಟ್ಟು ಸಾಕ್ಷಾತ್ಕರಿಸಿಕೊಳ್ಳುವದಾಗಲಿ ಎಂದಿಗೂ ಸಾಧ್ಯವಾಗಲಾರದು.

ಮೊಟ್ಟಮೊದಲು **ದಾಂತಿ** ಅಥವಾ ದಮ ಎಂಬ ಸಾಧನವು ಅಳವಡಬೇಕು. ಸಾಮಾನ್ಯರ ಇಂದ್ರಿಯಗಳು ವಿಷಯಗಳಲ್ಲಿ ಎರಗುವಾಗ ಯಾವಾಗಲೂ ರಾಗದ್ವೇಷ ಗಳಿಂದ ಕೂಡಿಯೇ ಅವುಗಳನ್ನು ಕಾಣುತ್ತಿರುವವು. ಈ ವಿಷಯವು ಒಳ್ಳೆಯದು, ಇದನ್ನು ಅವಶ್ಯವಾಗಿ ಸಂಪಾದಿಸಬೇಕು; ಇದು ಕೆಟ್ಟದ್ದು, ಇದನ್ನು ಪ್ರಯತ್ನಮಾಡಿ ದೂರವಾಗಿರಿಸಬೇಕು-ಎಂಬುದು ಮನುಷ್ಯರಿಗೆ ಸಾಮಾನ್ಯವಾಗಿ ಯಾರೂ ಹೇಳಿ ಕೊಡದಂತೆಯೇ ಮನಸ್ಸಿನಲ್ಲಿದ್ದುಬಿಟ್ಟಿರುತ್ತದೆ. ಆದ್ದರಿಂದಲೇ ಅವರಿಗೆ ಇಚ್ಛೆಯಿಲ್ಲ ದಿದ್ದರೂ ಇಂದ್ರಿಯಗಳು ಅವರನ್ನು ಸೆಳೆದುಕೊಂಡು ಹೋಗಿ ತುಂಟುಕುದುರೆಗಳು ಗಾಡಿಯನ್ನು ಕೊರಕಲಿಗೆ ಎಳೆಯುವಂತೆ ಅನರ್ಥಕ್ಕೆ ಈಡುಮಾಡಿಬಿಡುತ್ತವೆ. ಮಹಾತ್ಮರಾದವರು ಪ್ರಪಂಚದಲ್ಲಿ ಯಾವದೊಂದು ವಸ್ತುವೂ ಸ್ವಭಾವದಿಂದಲೇ ಒಳ್ಳೆಯದಾಗಿ ಅಥವಾ ಕೆಟ್ಟದ್ದಾಗಿ ಇರುವದಿಲ್ಲ ವೆಂಬುದನ್ನು ಕಂಡುಹಿಡಿದಿರುವರು. ಅದೇ ವಸ್ತುವಿನಲ್ಲಿ ನಮಗೆ ಒಮ್ಮೆ ರಾಗವೂ ಇನ್ನೊಮ್ಮೆ ದ್ವೇಷವೂ ಉಂಟಾಗುತ್ತಿರುವದರಿಂದ ಅವುಗಳಲ್ಲಿ ಒಳ್ಳೆಯದು ಕೆಟ್ಟದ್ದೆಂಬ ಬುದ್ಧಿಯು ಭ್ರಾಂತಿಯಿಂದಾಗಿರಬೇಕೆಂಬುದನ್ನು ಅವರು ನಿಶ್ಚಯಿಸಿರು ತ್ತಾರೆ. ಆದ್ದರಿಂದ ಆಯಾ ಕಾಲಕ್ಕೆ ಪ್ರಾಪ್ತವಾದ ವಿಷಯಗಳನ್ನು ರಾಗದ್ವೇಷಗಳಿಲ್ಲದೆ ಅನುಭವಿಸುವದಕ್ಕೆ ಪ್ರಯತ್ನಿಸುವದೆಂಬ ದಮವನ್ನು ಅವರು ಅಭ್ಯಾಸಮಾಡಿ ಕೊಂಡಿರುತ್ತಾರೆ. ಹೀಗೆ ಇಂದ್ರಿಯಗಳು ದಮದಿಂದ ಪಳಗಿದರೆ, ಅವಕ್ಕೆ ನಾವು ವಶರಾಗುವ ಬದಲು, ನಮಗೆ ಅವು ವಶವಾಗಿಬಿಡುತ್ತವೆ. ದಮವನ್ನು ಸಂಪಾದಿಸಿಕೊಂಡವರೇ ಜಿತೇಂದ್ರಿಯರೆನಿಸುವರು.

ಇನ್ನು **ಶಾಂತಿ** ಅಥವಾ ಶಮದ ವಿಚಾರ. ಇಂದ್ರಿಯಗಳನ್ನು ಹಟದಿಂದ ಹಿಂದಕ್ಕೆಳೆದುಕೊಂಡರೆ ಸಾಲದೆಂಬುದು ಈಗಾಗಲೆ ವಾಚಕರಿಗೆ ಮನದಟ್ಟಾಗಿರ ಬೇಕು. ಇಂದ್ರಿಯಗಳು ನಮ್ಮ ಮಾತನ್ನು ಕೇಳದೆಯೇ ವಿಷಯಗಳಲ್ಲಿ ಎರಗುವದಕ್ಕೆ ಅಥವಾ ಅವುಗಳಿಂದ ಹಿಮ್ಮೆಟ್ಟುವದಕ್ಕೆ ಕಾರಣವೇನು? ಈ ಕಾರಣವು ವಿಷಯ ಗಳಲ್ಲಿರುವದಿಲ್ಲ, ಇಂದ್ರಿಯಗಳಲ್ಲಿಯೂ ಇರುವದಿಲ್ಲ. ಒಳಗಿರುವ ಅಂತಃ ಕರಣವು ವಸ್ತುಗಳಲ್ಲಿಲ್ಲದ ಒಳ್ಳೆಯದು ಕೆಟ್ಟದೆಂಬ ವಿಭಾಗವನ್ನು ಕಲ್ಪಿಸಿಕೊಂಡು ಇಂದ್ರಿಯ ಗಳ ಮೂಲಕ ಆಯಾ ವಿಷಯಗಳನ್ನು ಸಂಕಲ್ಪಿಸುತ್ತಾ ಸುಖದುಃಖಗಳನ್ನು ಪಡೆಯುತ್ತಿರುತ್ತದೆ. ಒಂದು ಘಳಿಗೆಯೂ ಬಿಡುವಿಲ್ಲದೆ, ಅದು ಹೀಗೆ ಸಂಕಲ್ಪಿಸು ತ್ತಲೇ ಇರುವದರಿಂದ ಅದರ ಪ್ರಭಾವಕ್ಕೆ ಒಳಗಾಗಿರುವ ಇಂದ್ರಿಯಗಳೂ ರಾಗ ದ್ವೇಷಪೂರ್ವಕವಾಗಿ ಮುನ್ನುಗ್ಗುತ್ತಲೂ ಹಿಂಜರಿಯುತ್ತಲೂ ಇರುತ್ತವೆ. ಹಟದಿಂದ ಇಂದ್ರಿಯಗಳನ್ನು ಬಿಗಿಹಿಡಿದುಕೊಂಡಿದ್ದರೂ ಮತ್ತೆ ಮೊದಲಿಗಿಂತಲೂ ಬಲವಾಗಿ

ಅವು ವಿಷಯದಲ್ಲಿ ವರ್ತಿಸುವದಕ್ಕೆ ಈ ಅಂತಃಕರಣದ ದೋಷವೇ ಕಾರಣ. ಆದ್ದರಿಂದ ವಿಷಯಗಳ ಸ್ವಭಾವವನ್ನೂ ಇಂದ್ರಿಯಗಳ ಸ್ವಭಾವವನ್ನೂ ಮನಸ್ಸಿನ ಸ್ವಭಾವವನ್ನೂ ಮತ್ತೆಮತ್ತೆ ಚಿಂತಿಸಿ ಅಂತಃಕರಣವನ್ನು ವಶಕ್ಕೆ ತಂದುಕೊಳ್ಳಬೇಕಾಗಿರುತ್ತದೆ. ಅಂತಃಕರಣವೆಂಬ ಈ ಶಬ್ದಕ್ಕೆ ಒಳಗಿನ ಕರಣವೆಂದು ಅರ್ಥ. ಅಂತಃಕರಣವು ಒಳಗಿರುವದೆಂಬರ್ಥದಲ್ಲಿ ಅದು ಅಂತಃಕರಣವಾಗಿದ್ದರೂ ಸಾಮಾನ್ಯ ಜನರಲ್ಲಿ ಅದು ಇಂದ್ರಿಯಗಳ ಮೂಲಕ ಮತ್ತೆಮತ್ತೆ ಹೊರಕ್ಕೇ ಇಣಿಕಿ ನೋಡುತ್ತಿರುವದರಿಂದ ಈ ಅರ್ಥದಲ್ಲಿ ಅದೂ ಅವರಿಗೆ ಬಹಿಃಕರಣವೇ ಆಗಿಬಿಟ್ಟಿರುತ್ತದೆ. ಕೆಲವರಿಗೆ ಒಳಗಿನ ಸುಖದುಃಖಗಳನ್ನು ಅನುಭವಿಸುವ ಮಟ್ಟಿಗೆ ಅದು ಅಂತಃಕರಣವೂ ಆಗಿರುವದು ನಿಜ; ಆದರೆ ಸುಖದುಃಖಗಳನ್ನು ಅನುಭವಿಸಿದಮಾತ್ರದಿಂದ ಅಥವಾ ಸುಖದುಃಖಗಳು ನಮಗೆ ಹೇಗೆ ಆಗುತ್ತಿರುವವೆಂಬುದನ್ನು ಮನಸ್ಸಿನಲ್ಲಿ ಹೊರಳಾಡಿಸಿದಮಾತ್ರದಿಂದಲೇ ಅದು ಪೂರ್ಣಾರ್ಥದಲ್ಲಿ ಅಂತಃಕರಣವೆನಿಸುವದಿಲ್ಲ. ಸರ್ವಾಂತರನಾದ-ಎಲ್ಲಕ್ಕೂ ಒಳಗಿರುವ-ಪರಮಾತ್ಮನೊಬ್ಬನಿದಾನೆಂದೂ ಅವನನ್ನು ಅರಿತು ಅವನಲ್ಲಿಯೇ ನಿಷ್ಠೆಯನ್ನು ಸಂಪಾದಿಸಿಕೊಳ್ಳಬೇಕೆಂದೂ ಯಾವನಿಗೆ ಅನ್ನಿಸಿರುವದೋ ಅಂಥವನ ಅಂತಃ ಕರಣವು ಅನ್ವರ್ಥವಾಗಿ ಅಂತಃಕರಣವೆನಿಸುವದು. ಹೀಗೆ ಅಂತಃಕರಣವನ್ನು ಅನ್ವರ್ಥವಾಗಿ ಅಂತಃಕರಣವಾಗಿಸಿಕೊಳ್ಳುವದಕ್ಕೆ ಪ್ರಯತ್ನಿಸುತ್ತಿರುವ ಮಹಾತ್ಮನಿಗೆ ಅದು ಮೆಲ್ಲಮೆಲ್ಲಗೆ ವಶಕ್ಕೆ ಬರುವದು. ಈ ಸಾಧನಕ್ಕೇ ಶಾಂತಿ ಅಥವಾ **ಶಮ** ಎಂದು ಹೆಸರು.

**ಉಪರತಿ** ಎಂಬುದು ಮೂರನೆಯ ಸಾಧನವು. ಅಂತಃಕರಣವು ಸಾಮಾನ್ಯ ಸ್ಥಿತಿಯಲ್ಲಿ ಹೊರಕ್ಕೇ ತೂರುತ್ತಾ ಇಂದ್ರಿಯಗಳ ಸಹಾಯದಿಂದ ವಿಷಯಗಳನ್ನು ಅನುಭವಿಸುವದರಲ್ಲಿಯೇ ಅಥವಾ ಅವುಗಳನ್ನು ದೂರಮಾಡಿಕೊಳ್ಳುವದರಲ್ಲಿಯೇ ವ್ಯಾಪೃತವಾಗಿರುವವನ ಕರ್ಮೇಂದ್ರಿಯಗಳು ಎಂದಿಗೂ ಸುಮ್ಮನಿರುವದಿಲ್ಲ. ಆ ಸುಖವು ಬೇಕು. ಈ ದುಃಖವು ಬೇಡ-ಎಂದು ಅಂತಃಕರಣವು ನೆನಸಿಕೊಳ್ಳುವದರೊಳಗಾಗಿ ಕರ್ಮೇಂದ್ರಿಯಗಳು ಆಯಾ ವಿಷಯಗಳನ್ನು ದೊರಕಿಸಿಕೊಳ್ಳುವದಕ್ಕೆ ಅಥವಾ ತೊಲಗಿಸುವದಕ್ಕೆ ಹೊರಟುಬಿಡುತ್ತವೆ. ಬೇಟೆಯ ನಾಯಿಗಳ ಬಗುಳುವಿಕೆಯ ಧ್ವನಿಯು ಕಿವಿಗೆ ಬಿದ್ದಮಾತ್ರದಿಂದ ಟಣ್ಣನೆ ಹಾರಿಬಿಡುವ ಜಿಂಕೆಯ ಕಾಲುಗಳಂತೆ ಕರ್ಮೇಂದ್ರಿಯಗಳು ಮನುಷ್ಯನ ಸಂಕಲ್ಪಮಾತ್ರದಿಂದ ಕಾರ್ಯದಲ್ಲಿ ತೊಡಗಿಬಿಡುವ ಚಟವುಳ್ಳವಾಗಿರುತ್ತವೆ. ಇದನ್ನು ತಪ್ಪಿಸಿಕೊಳ್ಳುವದಕ್ಕಾಗಿ ಈ ಇಂದ್ರಿಯಗಳನ್ನು ವಿಚಾರಪೂರ್ವಕವಾಗಿ ಹಿಡಿತದಲ್ಲಿಟ್ಟುಕೊಂಡು ನಿಷ್ಕ್ರಿಯನಾಗುವದೂ, ಇಂದ್ರಿಯಗಳನ್ನೂ ಮನಸ್ಸನ್ನೂ ಮುನ್ನುಗ್ಗದಂತೆ ಹಿಂದಕ್ಕೆಳೆದು

ಕೊಳ್ಳುವದೂ ಉಪರತಿ ಎನ್ನಿಸುವದು. ಸ್ವಭಾವದಿಂದ ಯಾವನಿಗೆ ಈ ಉಪರತಿಯಿರುವದೋ ಅವನಿಗೆ ಅಧ್ಯಾತ್ಮಸಾಧನವು ಬಲುಬೇಗನೆ ವಶವಾಗುವದು.

**ತಿತಿಕ್ಷೆ** ಎಂಬುದು ಉಪರತಿಗೆ ಬೆಂಬಲವನ್ನು ಕೊಡುವ ಸಾಧನವು. ವಿಷಯಗಳನ್ನು ನಾವು ಇಂದ್ರಿಯಗಳಿಂದ ಅನುಭವಿಸುವಾಗ ಅವಶ್ಯವಾಗಿ ನಮಗೆ ಸುಖವೋ ದುಃಖವೋ ಉಂಟಾಗುವವು. ಶೀತೋಷ್ಣಾದಿದ್ವಂದ್ವರೂಪವಾದ ವೇದನೆಗಳು ಒಂದು ಸಲ ಸುಖವಾಗಿಯೂ ಒಂದು ಸಲ ದುಃಖವಾಗಿಯೂ ತೋರುತ್ತಿರುವದರಿಂದ ಸುಖವೇ ಬೇಕು, ದುಃಖವು ಬೇಡವೇಬೇಡ–ಎಂದು ಆಗ್ರಹವನ್ನು ತೊಟ್ಟಿರುವ ನಮ್ಮ ಮನಸ್ಸು ಯಾವ ವಿಷಯಗಳನ್ನು ಬಿಡಬೇಕೋ, ಯಾವವನ್ನು ಆರಿಸಿಕೊಳ್ಳಬೇಕೋ ತಿಳಿಯದೆ ಹೊಯ್ದಾಡುತ್ತಿರುವದು. ಹೀಗೆ ಸುಖದುಃಖಗಳ ಅಲೆಗಳು ಮೇಲಿಂದಮೇಲೆ ಎದ್ದೆದ್ದು ಮೇಲೆರಗುತ್ತಿರುವದರಿಂದ ಎಷ್ಟೋ ಜನರು–ಸಮುದ್ರದ ಅಲೆಗಳು ಇಲ್ಲವಾಗಿದ್ದರೆ ಸುಲಭವಾಗಿ ಸ್ನಾನವನ್ನು ಮಾಡಬಹುದಿತ್ತು–ಎನ್ನುವ ಅವಿವೇಕಿಗಳಂತೆ ಈ ಸುಖದುಃಖಗಳ ಹೊಡೆತದಿಂದ ಹೇಗೆ ತಪ್ಪಿಸಿಕೊಳ್ಳಬೇಕೆಂಬುದನ್ನು ತಿಳಿಯದೆ ಸಂಕಟಪಡುತ್ತಿರುವರು. ಆದರೆ ವಿವೇಕಿಗಳಾದವರು ಅಲೆಗಳು ಬಂದು ಹೋಗುತ್ತಿರುವಾಗಲೆ ತಮ್ಮಮೇಲೆಯೇ ಅವುಗಳನ್ನು ಹಾಯಬಿಟ್ಟು ಸ್ನಾನಮಾಡುವ ಜಾಣರಂತೆ ಇಂಥ ಸುಖದುಃಖಗಳ ಅಲೆಗಳು ಬಂದವುಗಳು ಅವಶ್ಯವಾಗಿ ಹೋಗಿಯೇತೀರುವವೆಂಬುದನ್ನು ಮನಸ್ಸಿಗೆ ತಂದುಕೊಂಡು ಅವುಗಳಿಂದ ಉಬ್ಬದೆಯೂ ಕುಸಿಯದೆಯೂ ಇರುವರು. ಈ ಸಾಧನವೇ ತಿತಿಕ್ಷೆಯೆನಿಸುವದು.

ಇನ್ನು ಶ್ರದ್ಧೆಯೆಂಬ ಐದನೆಯ ಸಾಧನವನ್ನು ಕುರಿತು ಸ್ವಲ್ಪ ಹೇಳಬೇಕಾದದ್ದಿದೆ. ಶ್ರದ್ಧೆಯೆಂದರೆ ಯಾರು ಏನು ಹೇಳಿದರೂ ನಿಜವೆಂದು ನಂಬುವದಿಲ್ಲ; ಅಥವಾ ತನಗೆ ತೋಚಿದ್ದೆಲ್ಲವೂ ಸರಿಯೆಂಬ ಕುರುಡುನಂಬಿಕೆಯೂ ಅಲ್ಲ, ಶಾಸ್ತ್ರವಾಕ್ಯದಲ್ಲಿಯೂ ಆಚಾರ್ಯರ ವಚನದಲ್ಲಿಯೂ ಇದು ಸತ್ಯವೇ, ಇದರಂತೆ ಆಚರಿಸಿದರೆ ನನಗೆ ಶ್ರೇಯಸ್ಸಾಗುವದು–ಎಂಬ **ಅನುಭವಪೂರ್ವಕವಾದ ವಿಶ್ವಾಸದಿಂದ** ವರ್ತಿಸುವದೇ ನಿಜವಾದ ಶ್ರದ್ಧೆಯು. ಗೀತೆಯಲ್ಲಿ "ಶ್ರದ್ಧಾವಂತನೂ ತತ್ಪರನಾದವನೂ ಜಿತೇಂದ್ರಿಯನೂ ಆಗಿರುವವನಿಗೆ ತತ್ತ್ವಜ್ಞಾನವು ಲಭಿಸುತ್ತದೆ" ಎಂದು ಹೇಳಿರುವದು ಈ ಶ್ರದ್ಧೆಯನ್ನೇ. ವಿಚಾರಪೂರ್ವಕವಾಗಿ ಪಡೆದುಕೊಂಡಿರುವ ಅನುಭವವನ್ನು ನಂಬದೆ ಇರುವ ಸಂಶಯಾತ್ಮನಿಗೆ ಯಾವ ಇಹಪರಸುಖವೂ ದಕ್ಕಲಾರದು. ಆದ್ದರಿಂದ ಸಾಧಕರಾದವರು ಅವಶ್ಯವಾಗಿ ಶ್ರದ್ಧೆಯನ್ನು ಸಂಪಾದಿಸಿಕೊಳ್ಳಬೇಕು.

ಸಮಾಧಾನವೆಂಬುದು ಆರನೆಯ ಸಾಧನವು. ಸಮಾಧಾನ, ಸಮಾಧಿ-ಎಂಬ ಹೆಸರಿನಿಂದ ಕರೆಯುವ ಈ ಸಾಧನವನ್ನು ಯೋಗಶಾಸ್ತ್ರದಲ್ಲಿ ಸಂಪ್ರಜ್ಞಾತ, ಅಸಂಪ್ರಜ್ಞಾತ-ಮುಂತಾದ ಭೇದಗಳಿಂದ ಪ್ರಸಿದ್ಧವಾಗಿರುವ ಚಿತ್ತವೃತ್ತಿನಿರೋಧ ವೆಂದು ಭ್ರಮಿಸಿರುವವರು ಅನೇಕರು ಇರುತ್ತಾರೆ. ಹಠಯೋಗದಲ್ಲಿ ಹೇಳಿರುವ ಬಂಧ, ಲಕ್ಷ್ಯ, ಮುದ್ರೆ-ಮುಂತಾದವುಗಳಿಂದ ಸಮಾಧಿಯನ್ನು ಸಂಪಾದಿಸಿಕೊಂಡ ಹೊರತು ಯಾವ ಅಧ್ಯಾತ್ಮಸಾಧನವೂ ದಕ್ಕುವದಿಲ್ಲವೆಂದು ತಿಳಿದಿರುವವರೂ ಹಲವರುಂಟು. ಆದರೆ ಇಲ್ಲಿ ಹೇಳಿರುವ ಸಮಾಧಾನವೆಂಬುದು ಅದಲ್ಲ. ಮನಸ್ಸನ್ನು ಚದರಗೊಡದೆ ವಿಚಾರಣೀಯವಾದ ವಿಷಯದಲ್ಲಿಯೇ ಇಟ್ಟು ಕೊಂಡಿರುವದೇ ಈ ಸಮಾಧಾನ.

ಇದುವರೆಗೆ ನಾವು ಹೇಳಿರುವ ಶಾಂತ್ಯಾದಿಗಳು ಸ್ವಪ್ರಯತ್ನದಿಂದಲೇ ಸಂಪಾದಿಸಿಕೊಳ್ಳತಕ್ಕವೆಂಬುದು ನಿಜವಾದರೂ ಸತ್ಸಂಗದಿಂದ ಇವು ಬಲುಬೇಗನೆ ಆಯಾಸವಿಲ್ಲದೆ ಅಳವಡುತ್ತವೆ. ಈ ಮೊದಲೇ ಹೇಳಿರುವಂತೆ ಯಾರಿಗೆ ಪರಮೇಶ್ವರನಲ್ಲಿ ಅಚಲವಾದ ಭಕ್ತಿಯಿರುತ್ತದೆಯೋ ಅವರಿಗೆ ಪರಮೇಶ್ವರನ ಸ್ವರೂಪವಾಗಿರುವ ಗುಣಗಳೆಲ್ಲ ಸಹಜವಾಗಿರುತ್ತವೆ. ಆದ್ದರಿಂದಲೇ ಸತ್ಸಂಗವು ಅಧ್ಯಾತ್ಮಸಾಧನೆಗಳಲ್ಲಿ ಅಷ್ಟು ಬೆಲೆಯುಳ್ಳದ್ದೆನಿಸಿರುವದು. ಸತ್ಪುರುಷರ ಸೇವೆಯಿಂದ ಸಾಧಕರು ತಮಗೂ ಅರಿವಿಲ್ಲದೆಯೇ ಅವರನ್ನು ಅನುಕರಿಸುವದನ್ನು ಕಲಿತುಕೊಂಡುಬಿಡುತ್ತಾರೆ. ಬೆಳಕಿನಲ್ಲಿ ಕಾಣುವ ಪದಾರ್ಥಗಳೆಲ್ಲ ಬೆಳಕಿನಿಂದೊಡ ಗೂಡಿಯೇ ಗೋಚರವಾಗುವಂತೆ ಸತ್ಪುರುಷರ ಬಳಿಯಲ್ಲಿರುವವರಿಗೆಲ್ಲ ಅವರ ಗುಣಗಳೆಲ್ಲ ಬೇಡವೆಂದರೂ ಬಂದು ಸೇರಿಕೊಳ್ಳುತ್ತವೆ. ಆದ್ದರಿಂದ ಮುಮುಕ್ಷುಗಳಾ ದವರು ಸತ್ಸಂಗದ ಮೂಲಕವಾಗಿ ತಮಗೆ ಬೇಕಾಗಿರುವ ಎಲ್ಲಾ ಸಾಧನಗಳ ಮರ್ಮವನ್ನೂ ಸುಲಭವಾಗಿ ಸಂಪಾದಿಸಿಕೊಂಡುಬಿಡಬಹುದಾಗಿದೆ.

## 32. ವೇದೋಕ್ತ ಕರ್ಮ

ಲೋಕದಲ್ಲಿ ನಾವು ಇಷ್ಟಸಿದ್ಧಿಗಾಗಿ ಉಪಯೋಗಿಸುವ ಸಾಧನಗಳಿಗೆಲ್ಲ ಒಂದು ಸಾಧಾರಣಧರ್ಮವಿರುತ್ತದೆ. ಅವು ತಮ್ಮತಮ್ಮ ಫಲವನ್ನು ಕೊಟ್ಟಬಳಿಕ ತಮಗೆ ತಾವೇ ಮರೆಯಾಗುವವು; ಅಲ್ಲಿಂದ ಮುಂದಕ್ಕೆ ಅವುಗಳಿಂದಾಗಬೇಕಾದದ್ದೇನೂ ಇರುವದಿಲ್ಲ. ಇದು ಅಧ್ಯಾತ್ಮವಿದ್ಯೆಯ ಸಾಧನಗಳಾದ ಕರ್ಮಗಳಿಗೂ ಅನ್ವಯಿಸುವ ದೆಂಬುದು ಸ್ವಾಭಾವಿಕವಾಗಿರುತ್ತದೆ. ಆದರೂ ವೇದೋಕ್ತ ಕರ್ಮಗಳನ್ನು ಯಾವಾಗಲಾದರೂ ಬಿಡಬಹುದಾಗುವದೆ?-ಎಂಬ ಪ್ರಶ್ನೆಯು ಅನೇಕರ ಮನಸ್ಸಿನಲ್ಲಿ ಅನಿರ್ಣೀತವಾಗಿಯೇ ಉಳಿದುಕೊಂಡಿರುತ್ತದೆ.

ಕರ್ಮಗಳು ನಿತ್ಯ, ನೈಮಿತ್ತಿಕ, ಕಾಮ್ಯ, ಪ್ರಾಯಶ್ಚಿತ್ತ–ಎಂದು ನಾಲ್ಕು ಬಗೆಯಾಗಿರುತ್ತವೆ. ನೈಮಿತ್ತಿಕಕರ್ಮಗಳು ಆಯಾ ನಿಮಿತ್ತದಿಂದ ಮಾಡತಕ್ಕವಾದ್ದರಿಂದ ನಿಮಿತ್ತವಿಲ್ಲದಾಗ ಅವೂ ಇರುವದಿಲ್ಲವೆಂಬುದು ಸ್ಪಷ್ಟವಾಗಿದೆ. ಕಾಮ್ಯಕರ್ಮಗಳು ಆಯಾ ಕಾಮದ ಪ್ರಾಪ್ತಿಗಾಗಿ ಮಾಡತಕ್ಕವಾಗಿರುವದರಿಂದ ಆಯಾ ಕಾಮವು ಪರಿಪೂರ್ತಿಯಾದವರೂ ಅಥವಾ ಆಯಾ ಕಾಮವು ಬೇಕಿಲ್ಲದವರೂ ಅವುಗಳನ್ನು ಮಾಡಬೇಕಾದದ್ದಿಲ್ಲವೆಂಬುದರಲ್ಲಿಯೂ ಸಂಶಯವಿರುವದಿಲ್ಲ. ಕೆಲಕೆಲವು ದೋಷಗಳನ್ನು ಪರಿಹರಿಸಲೋಸುಗವೇ ಪ್ರಾಯಶ್ಚಿತ್ತ ಕರ್ಮಗಳು ವಿಹಿತವಾಗಿರುವದರಿಂದ ಅವೂ ಯಾವಾಗಲೂ ಮಾಡತಕ್ಕವಲ್ಲವೆಂಬುದು ನಿರ್ವಿವಾದವೇ ಆಗಿದೆ. ಆದರೆ ನಿತ್ಯಕರ್ಮಗಳ ವಿಷಯವು ಹೀಗಿಲ್ಲ; ಅವುಗಳನ್ನು ಆಯಾ ವರ್ಣಾಶ್ರಮದವರು ಬದುಕಿರುವವರೆಗೂ ಮಾಡಲೇಬೇಕೆಂದು ಶ್ರುತಿವಚನವಿದೆ. ಹೀಗಿರುವಲ್ಲಿ ಅವುಗಳನ್ನು ಯಾವಾಗಲಾದರೂ ಬಿಡುವದು ಸರಿಯಾದೀತೆ? ನಿತ್ಯಕರ್ಮಗಳನ್ನು ಬಿಟ್ಟರೆ ಪ್ರತ್ಯವಾಯವುಂಟಾಗುವದೆಂದೂ ಪೂರ್ವಮೀಮಾಂಸಕರು ಹೇಳುವರಲ್ಲ ! ಎಂಬ ಸಂಶಯವೊಂದು ಆಸ್ತಿಕರ ಮನಸ್ಸಿನಲ್ಲಿ ಮೂಡುತ್ತಿರುತ್ತದೆ. ಅದನ್ನು ಕುರಿತು ಈಗ ಸ್ವಲ್ಪ ವಿಚಾರವನ್ನು ಮಾಡೋಣ.

ವರ್ಣಾಶ್ರಮಧರ್ಮವು ಮನುಷ್ಯಮಾತ್ರಕ್ಕೆ ವಿಧಿಸಿಲ್ಲ; ವರ್ಣಾಶ್ರಮಧರ್ಮವು ಎಲ್ಲಾ ದೇಶಗಳಲ್ಲಿಯೂ ಪ್ರಚಾರದಲ್ಲಿಲ್ಲ. ಅದರ ಪ್ರಚಾರವಿರುವ ನಮ್ಮ ಭಾರತದಲ್ಲಿಯೂ ಈಗ ಭಗ್ನಾವಶೇಷವಾದ ಕೋಟೆಯಂತೆ ಬಹಳ ಶಿಥಿಲವಾಗಿರುತ್ತದೆ. ಆದರೂ ಮೋಕ್ಷಾರ್ಥವಾಗಿ ಸ್ವಕರ್ಮಗಳನ್ನು ಯಥಾಶಕ್ತಿಯಿಂದ ಮಾಡತಕ್ಕವರಿಗೆ ಈ ಕರ್ಮಗಳನ್ನು ಎಂದೆಂದಿಗೂ ಮಾಡಿಕೊಂಡಿರಬೇಕೊ, ಅಥವಾ ಎಂದಾದರೂ ಬಿಡತಕ್ಕದ್ದಿದೆಯೊ?–ಎಂಬ ಸಂಶಯವೊಂದು ಆಗಾಗ್ಗೆ ಮನದಲ್ಲಿ ಮಿಂಚುತ್ತಿರುವದು. ವಾದಿಗಳೂ ಬಗೆಬಗೆಯ ಅಭಿಪ್ರಾಯಗಳನ್ನು ಹೊರಪಡಿಸುತ್ತಿರುವರು. ವೇದವಿಹಿತವಾದ ಕರ್ಮಗಳನ್ನು ಬಿಟ್ಟವನು ಅನಾರ್ಯನಾಗುವನು; ಅವನಿಗೆ ವೇದೋಕ್ತವಾದ ಮೋಕ್ಷವು ಎಂದಿಗೂ ದೊರಕಲಾರದು ಎಂದು ಕೆಲವರು ಕರ್ಮತ್ಯಾಗವನ್ನು ನಿಂದಿಸುತ್ತಿರುವರು. ಆದರೆ ಮತ್ತೆ ಕೆಲವರು ಸಕಲಕರ್ಮಗಳನ್ನೂ ತ್ಯಜಿಸಿ ಪರಮಹಂಸಪರಿವ್ರಾಜಕರಾಗಿರುವದೂ ಆಚಾರದಲ್ಲಿ ಕಂಡುಬರುತ್ತಿದೆ. ಈ ಎರಡು ಅಭಿಪ್ರಾಯಗಳಲ್ಲಿಯೂ ಎಷ್ಟರಮಟ್ಟಿಗೆ ದಿಟದ ಅಂಶವಿದೆ? ಎಂಬುದನ್ನು ವಿಚಾರಿಸುವದು ಪ್ರಕೃತ ಲೇಖನದ ವಿಷಯ.

ನಿತ್ಯಕರ್ಮವು ವೇದವಿಹಿತವಾಗಿದೆ ಎಂಬುದು ನಿಜ. ಅದನ್ನು ಮಾಡದೆ ಬಿಟ್ಟವರಿಗೆ ಅದನ್ನು ಮಾಡುವದರಿಂದ ದೊರೆಯುವ ಅಮೂಲ್ಯವಾದ ಲಾಭವು

ಹೋಗುವ ನಷ್ಟವುಂಟು. ವೇದವೆಂಬ ಜಹಜನ್ನು ಬಿಟ್ಟು ಸ್ವಬುದ್ಧಿ ಎಂಬ ತೆಪ್ಪವನ್ನು ನಂಬಿಕೊಂಡು ಕಾಮಕ್ರೋಧಾದಿಗಳೆಂಬ ಬಿರುಗಾಳಿಗಳಿಂದೊಡ ಗೂಡಿರುವ ಸಂಸಾರಸಾಗರದಲ್ಲಿ ಪ್ರಯಾಣಮಾಡುವವರಿಗೆ ಹೆಚ್ಚಿನ ಅಪಾಯವ ಉಂಟು. ಆದ್ದರಿಂದ ವಿವೇಕಿಗಳಾದವರು ಸತ್ಕರ್ಮಗಳನ್ನು ಮಾಡುವದೇ ಒಳ್ಳೆಯದು. ಆದ್ದರಿಂದ ಅವನ್ನು ಹೇಗೆ ಮಾಡಬೇಕೆಂಬುದನ್ನು ಶಾಸ್ತ್ರಾಚಾರ್ಯ ರಿಂದ ತಿಳಿದುಕೊಂಡು ಅವುಗಳಿಂದಾಗಬೇಕಾದ ಲಾಭವನ್ನು ಅವಶ್ಯವಾಗಿ ಪಡೆದುಕೊಳ್ಳಬೇಕು. ಕರ್ಮಗಳನ್ನು ಈಶ್ವರಾರಾಧನೆಗೆಂದು ಮಾಡಿದರೆ ಚಿತ್ತಶುದ್ಧಿ ಯೂ ಶಾಂತ್ಯಾದಿಗಳ ಪರಿಚಯವೂ ಕ್ರಮಕ್ರಮವಾಗಿ ಉದಯಿಸುವವೆಂಬುದನ್ನು ಕೆಲವು ಲೇಖನಗಳಲ್ಲಿ ತಿಳಿಸಿದ್ದೂ ಆಗಿದೆ. ಆದರೆ ಕರ್ಮಗಳಿಂದ ಆಗಬೇಕಾದ ಈ ಪ್ರಯೋಜನವನ್ನು ಹೊಂದಿದವರು ಕರ್ಮಗಳನ್ನು ಮತ್ತೂ ಮಾಡುತ್ತಲೇ ಇರುವದು ಒಳ್ಳೆಯದೆ, ಅಥವಾ ಯಾವಾಗಲಾದರೂ ಅವನ್ನು ಬಿಟ್ಟುಬಿಡುವದು ಒಳ್ಳೆಯದಾದೀತೆ? ಇದೀಗ ಈಗಿನ ವಿಚಾರದ ವಿಷಯ.

ಕರ್ಮಗಳನ್ನು ಶಾಸ್ತ್ರವು ವಿಧಿಸುತ್ತದೆ; ಅವುಗಳನ್ನು ಮಾಡದಿದ್ದರೆ ಪ್ರತ್ಯ ವಾಯವೆಂಬ ದೋಷವುಂಟು, ಮಾಡಿದರೆ ಯಾವ ಫಲವೂ ಇಲ್ಲ-ಎನ್ನುತ್ತಿದ್ದ ಮೀಮಾಂಸಕರೂ ಕೆಲವರು ಇದ್ದರು. ಈ ಪಕ್ಷದಲ್ಲಿ ಕರ್ಮಗಳನ್ನು ಮಾಡಿದರೂ ಮಾಡದಿದ್ದರೂ ದೋಷವೇ ಎಂದಾಗುವದು. ನಿರ್ದೋಷವಾದ ಶಾಸ್ತ್ರದಲ್ಲಿ ಇಂಥ ಆಯಾಸಕರವಾದ ಕರ್ಮಗಳನ್ನು ವೃಥಾ ವಿಧಿಸಿದೆ ಎಂದು ನಂಬುವದೂ ಸಾಮಾನ್ಯರಿಗೆ ಕಷ್ಟವಾಗಿರುವದು. ಆದ್ದರಿಂದ ನಿತ್ಯಕರ್ಮಗಳನ್ನು ಮಾಡದಿದ್ದರೆ, ಆ ಅಭಾವದಿಂದ ಭಾವರೂಪವಾದ ಪ್ರತ್ಯವಾಯವು ಉಂಟಾಗುವದೆಂಬುದು ಪ್ರಮಾಣವಿರುದ್ಧವೆಂದು ವೇದಾಂತಿಗಳು ವಾದಿಸಿರುತ್ತಾರೆ. ಯಾವ ಕರ್ಮವೇ ಆಗಲಿ ತನ್ನ ಪ್ರಯೋಜನವನ್ನು ಉಂಟುಮಾಡಿದ ಬಳಿಕ ಮತ್ತೂ ಮಾಡತಕ್ಕ ದ್ದೆಂದು ಅನುಷ್ಠಾತೃಗಳನ್ನು ಬಲಾತ್ಕರಿಸಲಾರದು. ಲೋಕದಲ್ಲಿ ತೃಪ್ತಿಯಾದ ಮೇಲೂ ಊಟಮಾಡಬೇಕೆಂದು ನಿರ್ಬಂಧಿಸುವದು ಯುಕ್ತವಾಗುವದಿಲ್ಲ; ಶಾಸ್ತ್ರಾ ಭ್ಯಾಸವನ್ನು ಮಾಡುವವರೂ ಅಕ್ಷರಾಭ್ಯಾಸವನ್ನು ಮಾಡುತ್ತಲೇ ಇರಬೇಕೆಂದು ನಿರ್ಬಂಧಿಸುವದೂ ಯುಕ್ತವಲ್ಲ. ವೇದದಲ್ಲಾದರೂ ಕರ್ಮಗಳು ತಮ್ಮ ಫಲವನ್ನು ಕೊಟ್ಟಬಳಿಕವೂ ಇರಬೇಕೆಂದು ನಿರ್ಬಂಧಿಸಿದೆ ಎಂದು ನಾವೇಕೆ ಕಲ್ಪಿಸಬೇಕು?

ಇನ್ನೊಂದು ವಿಷಯ. ವೇದೋಕ್ತಕರ್ಮಗಳನ್ನೆಲ್ಲ ಮನುಷ್ಯಲೋಕ, ಪಿತೃ ಲೋಕ, ದೇವಲೋಕ-ಎಂಬ ಲೋಕತ್ರಯಸಾಧನಕ್ಕಾಗಿ ವಿಧಿಸಿರುತ್ತದೆ. ಮನುಷ್ಯ ಲೋಕದ ಸುಖವನ್ನು ಪುತ್ರನಿಂದಲೂ ಪಿತೃಲೋಕದ ಸುಖವನ್ನು ಕರ್ಮದಿಂದಲೂ

ದೇವಲೋಕದ ಸುಖವನ್ನು ಉಪಾಸನೆಯಿಂದಲೂ ಸಂಪಾದಿಸಿಕೊಳ್ಳಬಹುದು ಎಂದು ಈ ಸಾಧನಗಳನ್ನು ಹೇಳಿರುತ್ತದೆ. ಆದರೆ ಯಾರಿಗೆ ಈ ಲೋಕತ್ರಯವೂ ಬೇಕಿಲ್ಲವೋ ಅವರಿಗೆ ಈ ಸಾಧನತ್ರಯವೂ ಬೇಕಿಲ್ಲವೆಂಬುದು ಯುಕ್ತವಾಗುತ್ತದೆ. ಈ ಮೂರು ಬಗೆಯ ಬಯಕೆಗಳಿಲ್ಲದವರು ಬಹಳ ವಿರಳರಾಗಿರುತ್ತಾರೆಂಬುದನ್ನು ನಾವು ಒಪ್ಪಬಹುದು; ಆದರೆ ಇದಕ್ಕಿಂತ ಹೆಚ್ಚಿನ ಪುರುಷಾರ್ಥವನ್ನು ಬಯಸುವ ಮುಮುಕ್ಷುಗಳು ಇಲ್ಲವೇ ಇಲ್ಲವೆಂದು ಎದೆತಟ್ಟಿಕೊಂಡು ಯಾರುತಾನೆ ಹೇಳಲಾಪರು? ಅದ್ದರಿಂದಲೇ ಶ್ರುತಿಯು ಹೀಗೆನ್ನುತ್ತಿದೆ :

**"ಈ ಆತ್ಮನನ್ನು ಅರಿತುಕೊಂಡ ಬ್ರಾಹ್ಮಣರು ಪುತ್ರೈಷಣೆಯನ್ನೂ ವಿತ್ತೈಷಣೆಯನ್ನೂ ಲೋಕೈಷಣೆಯನ್ನೂ ಬಿಟ್ಟಿದ್ದು ಭಿಕ್ಷಾಚರ್ಯೆಯನ್ನು ಆಚರಿಸುವರು."** –ಬೃ. 3–5–1

ಯಾವನು ಏನನ್ನು ಇಚ್ಛಿಸುತ್ತಾನೋ ಅವನಿಗೆ ಅದು ಸಾಧನವಾಗುತ್ತದೆ; ಮಿಕ್ಕದ್ದೆಲ್ಲವೂ ಅವನಿಗೆ ಬೇಡವಾಗುತ್ತದೆ. ಇದು ಲೋಕವಿದಿತವಾದ ತತ್ತ್ವವು. ಆದ್ದರಿಂದ ಏಷಣಾತ್ರಯದಿಂದ ಬಿಡುಗಡೆಯಾಗಬೇಕೆನ್ನುವವರು ಮತ್ತೆ ಅವುಗಳ ಬಿಗಿತಕ್ಕೇ ಸಿಕ್ಕಿಕೊಂಡಾರೆ? ಅಂಥವರು ವೇದೋಕ್ತಕರ್ಮಗಳನ್ನು ಬಿಡಬೇಕೆಂದು ಹವಣಿಸುವದಕ್ಕೆ ತಕ್ಕ ಒಂದಾನೊಂದು ಕಾಲವು ಬಂದೀತೆಂದು ನಾವು ನಿರೀಕ್ಷಿಸಬಹುದಲ್ಲವೆ?

ಯಾರು ವೇದೋಕ್ತವಾದ ಕರ್ಮಗಳನ್ನು ಮಾಡಿರುವರೋ, ಆ ಕರ್ಮಗಳಿಂದ ಈಶ್ವರಾರಾಧನೆಯನ್ನು ಮಾಡಿ ಚಿತ್ತನೈರ್ಮಲ್ಯವನ್ನು ಹೊಂದಿ ಸತ್ಸಂಗದಿಂದ ಭಗವದ್ಭಕ್ತಿಯನ್ನೂ ಶಾಂತ್ಯಾದಿಗಳನ್ನೂ ಸಂಪಾದಿಸಿಕೊಂಡಿರುವರೋ ಅವರಿಗೆ ಪರಮಾರ್ಥತತ್ತ್ವದ ಸಾಕ್ಷಾತ್ಕಾರವೇ ಬೇಕಾಗಿರುತ್ತದೆ. ಅವರಿಗೆ ಕರ್ಮಗಳಿಂದ ಸಿಕ್ಕಬಹುದಾದ ಯಾವ ಅಲ್ಪಫಲವೂ ಬೇಕಾಗುವದಿಲ್ಲ. ಆದ್ದರಿಂದ ಮಳೆಯನ್ನು ಕರೆದಬಳಿಕ ಮೋಡಗಳು ಕಣ್ಮರೆಯಾಗುವಹಾಗೆ ಕರ್ಮಗಳು ಅಂಥವರನ್ನು ಬಿಟ್ಟುಹೋಗುವವೆಂಬುದು ನಿರೀಕ್ಷಿಸತಕ್ಕದ್ದೇ ಆಗಿದೆ. ಏಕೆಂದರೆ ಈಗ ಅವರ ಮನಸ್ಸನ್ನು ಸಮಾಧಾನಗೊಳಿಸುವದಕ್ಕೆ ಶಾಂತ್ಯಾದಿಗಳು ಉಪಯೋಗಕ್ಕೆ ಬರುವಂತೆ ಕರ್ಮಗಳು ಉಪಯೋಗಕ್ಕೆ ಬರುವದಿಲ್ಲ; ಇಷ್ಟೇ ಅಲ್ಲ, ಅವು ಮನಸ್ಸನ್ನು ಅತ್ತಿತ್ತ ಚದರುವಂತೆ ಮಾಡುತ್ತವೆ. ಆದ್ದರಿಂದಲೇ ಮನುವು ಹೀಗೆಂದು ಬರೆದಿರುತ್ತಾನೆ:

**ಯಥೋಕ್ತಾನ್ಯಪಿ ಕರ್ಮಾಣಿ ಪರಿಹಾಯ ದ್ವಿಜೋತ್ತಮಃ ।**
**ಆತ್ಮಜ್ಞಾನೇ ಶಮೇ ಚ ಸ್ಯಾದ್ವೇದಾಭ್ಯಾಸೇ ಚ ಯತ್ನವಾನ್ ॥**
**ಏತದ್ಧಿ ಜನ್ಮಸಾಫಲ್ಯಂ ಬ್ರಾಹ್ಮಣಸ್ಯ ವಿಶೇಷತಃ ।**
**ಪ್ರಾಪ್ಯೈತತ್ ಕೃತಕೃತ್ಯೋ ಹಿ ದ್ವಿಜೋ ಭವತಿ ನಾನ್ಯಥಾ ॥**

"ಶಾಸ್ತ್ರಗಳಲ್ಲಿ ಹೇಳಿರುವ ಕರ್ಮಗಳನ್ನೆಲ್ಲ ಬಿಟ್ಟು ದ್ವಿಜೋತ್ತಮನಾದವನು ವೇದೋಕ್ತವಾದ ಸಾಧನಗಳ ಅಭ್ಯಾಸವನ್ನು ಮಾಡಬೇಕು. ಶಾಂತಿಯನ್ನು ಪ್ರಯತ್ನಪೂರ್ವಕವಾಗಿ ಸಂಪಾದಿಸಿಕೊಳ್ಳಬೇಕು, ಆತ್ಮಜ್ಞಾನವನ್ನು ಪಡೆದುಕೊಳ್ಳುವದಕ್ಕೇ ಯತ್ನಿಸಬೇಕು. ಮನುಷ್ಯನು, ಅದರಲ್ಲಿಯೂ ಬ್ರಾಹ್ಮಣನು, ಹುಟ್ಟಿದ್ದಕ್ಕೆ ಇದೇ ಸಾರ್ಥಕ್ಯವು; ಇದನ್ನು ಪಡೆದುಕೊಂಡರೇ ದ್ವಿಜನಾದವನು ಕೃತಕೃತ್ಯನಾಗುವನು, ಬೇರೆ ಯಾವ ರೀತಿಯಿಂದಲೂ ಕೃತಕೃತ್ಯನಾಗಲಾರನು"-ಎಂಬುದು ಮನುಸ್ಮೃತಿಯ ಈ ಶ್ಲೋಕಗಳ ಅಭಿಪ್ರಾಯವು. ಕರ್ಮವನ್ನು ಮಾಡುವದು ಹೇಗೆಂದು ತಿಳಿಸುವದಕ್ಕೇ ಹೊರಟ ಮನುಸ್ಮೃತಿಯಲ್ಲಿ ಕರ್ಮಸಂನ್ಯಾಸವನ್ನು ಹೀಗೆ ಪ್ರಶಂಸಿಸಿರುವದರಿಂದ ಕರ್ಮತ್ಯಾಗದ ವಿಷಯದಲ್ಲಿ ನಾವು ಯಾವ ಸಂಶಯವನ್ನೂ ಮಾಡಿಕೊಳ್ಳುವದಕ್ಕೆ ಕಾರಣವಿರುವದಿಲ್ಲ.

ಆದರೆ ಇಲ್ಲಿ ಒಂದು ಎಚ್ಚರಿಕೆಯ ಮಾತನ್ನು ಹೇಳತಕ್ಕದ್ದು ಅತ್ಯಂತ ಅವಶ್ಯವಾಗಿರುತ್ತದೆ. ಶಾಸ್ತ್ರೋಕ್ತವಾದ ಕರ್ಮಗಳನ್ನು ಮಾಡುವದು ಶರೀರಕ್ಕೆ ಬಹಳ ಕ್ಲೇಶಕರವಾಗಿರುತ್ತದೆ. ಬೆಳಗಿನ ಜಾವದಲ್ಲಿ ಏಳಬೇಕು, ತಣ್ಣೀರಿನಲ್ಲಿ ಸ್ನಾನಮಾಡಬೇಕು, ಸಂಧ್ಯಾದಿಕರ್ಮಗಳನ್ನೂ ಜಪ, ಉಪವಾಸ, ದೇವತಾರ್ಚನೆ, ಅತಿಥಿಸತ್ಕಾರ, ಕುಟುಂಬಪೋಷಣೆ-ಮುಂತಾದವುಗಳನ್ನೂ ತಪ್ಪದೆ ನಡೆಯಿಸಬೇಕು. ಧರ್ಮದಿಂದಲೇ ಧನವನ್ನು ಸಂಪಾದಿಸಿ ಸತ್ಯಧರ್ಮಗಳನ್ನು ಬಿಡದೆ ನಿತ್ಯಜೀವನವನ್ನು ಸಾಗಿಸಬೇಕು-ಎಂದು ಮುಂತಾಗಿ ಹೇಳುವ ಶಾಸ್ತ್ರವಚನವು ಶರೀರಾಭಿಮಾನಿಗಳಿಗೆ ಬಹಳ ಕಷ್ಟತರವಾಗಿ ಕಾಣುತ್ತಿರುವದು. ಆದ್ದರಿಂದ 'ಈ ಕರ್ಮಗಳನ್ನು ಬಿಡಬಹುದು; ಯಾವ ಹೊಣೆಗಾರಿಕೆಯೂ ಇಲ್ಲದೆಯೇ ಕರ್ಮಾನುಷ್ಠಾನವಿಲ್ಲದೆ **ಭಿಕ್ಷಾಚರ್ಯೆಯಿಂದಲೇ ದೇಹಯಾತ್ರೆಯನ್ನು** ಮಾಡಿಕೊಳ್ಳುವ **ಸಂನ್ಯಾಸಾಶ್ರಮವನ್ನು ಸ್ವೀಕರಿಸಬಹುದು**'-ಎಂಬವರ ಮಾತು ಸೋಮಾರಿಗಳಾದವರ ಕಿವಿಗೆ ಬಹಳ ಇಂಪಾಗಿ ಕೇಳಿಸುವ ಸಂಭವವಿದೆ. ಆದ್ದರಿಂದ 'ನಮಗೆ ಚಿತ್ತಶುದ್ಧಿಯಾಗಿರುವದರಿಂದ ಈ ಕರ್ಮಗಳಿಂದ ನಮಗೆ ಯಾವ ಪ್ರಯೋಜನವೂ ಆಗಬೇಕಾದದ್ದಿಲ್ಲ' ಎಂದು **ಆತ್ಮವಂಚನೆಗಳಾಗುವವರೂ** ಹಲವರು ಉಂಟು. ಆದರೆ ಮನಸ್ಸಿನಲ್ಲಿರುವ ಕಷಾಯವು ಕರ್ಮಗಳಿಂದ ಪಕ್ವವಾದ ಮೇಲೆಯೇ ಜ್ಞಾನವು ತಲೆದೋರೀತು. ಆದ್ದರಿಂದ ಬಾಹ್ಯವಿಷಯಗಳಲ್ಲಿ ಮನಸ್ಸಿರುವ ಯಾವನೂ ಕರ್ಮತ್ಯಾಗಮಾಡುವ **ಮಿಥ್ಯಾಚಾರಕ್ಕೆ** ಮನಸ್ಸು ಕೊಡಬಾರದು. ಕರ್ಮಗಳಿಂದ ಚಿತ್ತಶುದ್ಧಿಯಾಗಿರುವದಕ್ಕೆ ಮನಸ್ಸು ಪ್ರತ್ಯಗಾತ್ಮನ ಕಡೆಗೆ ತಿರುಗಿದ್ದೇ ಗುರುತು; ಬಾಹ್ಯಭೋಗಗಳ ಫಲಾಶೆಯು ಸಂಪೂರ್ಣವಾಗಿ ಅಳಿಸಿಹೋದದ್ದೇ ಗುರುತು; ಇಷ್ಟ, ಅನಿಷ್ಟ, ಇಷ್ಟಾನಿಷ್ಟ-ಎಂಬ ಫಲಗಳ ಆಸೆಯ ಸೆಲೆಯೂ ಚಿತ್ತದಲ್ಲಿ

ಸುಳಿದಾಡದಿರುವದೇ ಗುರುತು. ಈ ಗುರುತುಗಳಿಂದ ತನಗೆ ಕರ್ಮಗಳು ಬೇಕೊ, ಬೇಡವೊ–ಎಂಬುದನ್ನು ಪ್ರತಿಯೊಬ್ಬನೂ ತಾನುತಾನೇ ನಿರ್ಣಯಿಸಿಕೊಳ್ಳಬೇಕು.

ಸಂನ್ಯಾಸವೆಂದರೆ ಬರಿಯ ಬಾಹ್ಯಕರ್ಮತ್ಯಾಗವು ಮಾತ್ರವಲ್ಲ. ಕರ್ಮಗಳಿಗೆ ಕಾರಣವಾಗಿರುವ ಕಾಮದ ತ್ಯಾಗವೇ ನಿಜವಾದ ಸಂನ್ಯಾಸವು. ಯಾಜ್ಞವಲ್ಕ್ಯನಂಥ ಆತ್ಮಜ್ಞಾನಿಗಳಿಗೆ ಕರ್ಮಗಳಿಂದ ಆಗಬೇಕಾದ ಯಾವ ಪ್ರಯೋಜನವೂ ಇರುವದಿಲ್ಲ. ಆದ್ದರಿಂದಲೇ ಅಂಥವರು ತಮಗಿರುವ ಲೌಕಿಕಸಂಪತ್ತನ್ನೆಲ್ಲ ತ್ಯಜಿಸಿ ಪರಮಹಂಸ ಪರಿವ್ರಾಜಕರಾಗಿ ಏಕಾಂತವಾಸವನ್ನು ಸೇರಿ ತಮ್ಮ ಆತ್ಮನಲ್ಲಿಯೇ ವಿಶ್ರಾಂತಿ ಸುಖವನ್ನು ಅನುಭವಿಸು ತ್ತಿರುವರು. ಅಂಥವರಿಗಲ್ಲ, ಕರ್ಮವನ್ನು ಮಾಡಬೇಕೆ, ಬಿಡಬೇಕೆ–ಎಂಬ ಜಿಜ್ಞಾಸೆ; ಆದರೆ ಯಾರು ಇನ್ನೂ ಆತ್ಮಜ್ಞಾನವನ್ನು ಸಂಪಾದಿಸಿಕೊಂಡಿಲ್ಲವೋ, ಯಾರು ಅದು ತಮಗೆ ಅವಶ್ಯವಾಗಿ ಬೇಕೇಬೇಕೆಂದು ಹಂಬಲಿಸುತ್ತಿರುವರೋ ಅವರು ತಮ್ಮ ಮನಸ್ಸಿನ ಸ್ಥಿತಿಯನ್ನು ಚೆನ್ನಾಗಿ ಪರೀಕ್ಷಿಸಿಕೊಂಡು ಕರ್ಮಯೋಗವನ್ನೋ ಧ್ಯಾನಯೋಗವನ್ನೋ ಆಚರಿಸಿಕೊಳ್ಳಬೇಕಾಗುತ್ತದೆ. ಅಂಥವರಿಗೆ ಕರ್ಮಯೋಗವು ಜ್ಞಾನಕ್ಕೆ ಬಹಿರಂಗವಾಗಿರುತ್ತದೆ; ಕರ್ಮ ಸಂನ್ಯಾಸವನ್ನು ಮಾಡಿ ಆತ್ಮಚಿಂತನೆಯನ್ನು ಮಾಡುವ ಧ್ಯಾನಯೋಗವು ಅಂತರಂಗಸಾಧನವಾಗುತ್ತದೆ.

ಸಂನ್ಯಾಸಾಶ್ರಮಸ್ವೀಕಾರವೆಂಬುದು ಒಂದಾನೊಂದು ವೇಷದ ಸ್ವೀಕಾರವಲ್ಲವೆಂಬುದನ್ನು ಮುಮುಕ್ಷುಗಳೆಲ್ಲರೂ ಅವಶ್ಯವಾಗಿ ಮನದಂದುಕೊಳ್ಳಬೇಕು. ಪ್ರಸಿದ್ಧರಾದ ಜಟ್ಟಿಗಳನ್ನು ಅನುಕರಿಸಬೇಕೆನ್ನುವವನು ಮೊದಲು ಏಕಾಂತವಾಗಿ ಗರಡಿಯಮನೆಯಲ್ಲಿ ಅಂಗಸಾಧನೆಯನ್ನು ಅಭ್ಯಾಸಮಾಡುವಂತೆ, ಆತ್ಮಜ್ಞಾನಿಗಳ ಅಂತಸ್ತಿಗೆ ಏರಬೇಕೆಂದು ಆಶಿಸುವ ಮುಮುಕ್ಷುವು ಸಂನ್ಯಾಸಾಶ್ರಮವೆಂಬ ಗರಡಿಯ ಮನೆಯನ್ನು ಪ್ರವೇಶಿಸಿ ಅಲ್ಲಿ ಯಮನಿಯಮಾದಿಸಾಧನಸಮೇತವಾದ ಧ್ಯಾನ ಯೋಗವನ್ನು ಅವಲಂಬಿಸಬೇಕು. ಆದರೆ ಅರೋಗದೃಢಕಾಯರಲ್ಲದೆ ಬರಿಯ ಕುತೂಹಲದಿಂದ ಗರಡಿಯಮನೆಯನ್ನು ಹೊಕ್ಕು ಕೆಲವು ದಿನಗಳವರೆಗೆ ದಂಡೆ, ಚಕ್ರ–ಮುಂತಾದ ಸಾಧನಗಳನ್ನು ಮಾಡಿಕೊಳ್ಳುತ್ತಿರುವೆವೆಂದು ಜಂಭಕೊಚ್ಚಿಕೊಳ್ಳುವವರ ಹಾಗೆ ಪ್ರತ್ಯಕ್ಪ್ರವಣತೆಯಿಲ್ಲದೆಯೇ ಕಾವಿಯಬಟ್ಟೆ, ದಂಡ, ಕಮಂಡಲು, ಪಾದುಕೆ–ಮುಂತಾದ ವೇಷಗಳನ್ನು ಧರಿಸಿ ಅಲ್ಲಲ್ಲಿ ಅಲೆದಾಡುವ ದುರ್ಬಲಚಿತ್ತರಿಗೆ ತುರೀಯಾಶ್ರಮವು ಮುಳ್ಳಿನ ಹಾಸಿಗೆಯಂತೆ ವ್ಯಥೆಗೊಳಿಸುವದಾಗಿರುತ್ತದೆ. ಒಂದೊ, ಅವರು ಆ ಆಶ್ರಮದ ಧರ್ಮಗಳನ್ನೆಲ್ಲ ಕಾಪಾಡಿಕೊಳ್ಳಲಾರದೆ ಇಂದ್ರಿಯ ಜಯ, ಪ್ರಣವಜಪ, ಉಪನಿಷದ್ವಿಚಾರವೇ ಮುಂತಾದಸಾಧನಗಳ ಕಿರಿಕಿರಿಯನ್ನು ತಡೆದುಕೊಳ್ಳಲಾರದೆ ಬಹಳ ಸಂಕಟಪಡುತ್ತಾ 'ಅಯ್ಯೋ! ಗೃಹಸ್ಥಾಶ್ರಮದಲ್ಲಿದ್ದರೇ

ಚೆನ್ನಾಗಿತ್ತಲ್ಲ!' ಎಂದು ಪಶ್ಚಾತ್ತಾಪದಿಂದ ಅನಿವಾರ್ಯವಾದ ವ್ಯಥೆಗೆ ಈಡಾಗುವರು. ಇಲ್ಲದಿದ್ದರೆ ಧರ್ಮಲಂಡರಾಗಿ ಇಹಪರಗಳನ್ನು ಕಳೆದುಕೊಂಡು ಪಾಪಪುಣ್ಯಗಳನ್ನೂ ಲೆಕ್ಕಿಸದೆ ಸ್ವೇಚ್ಛಾಚಾರರತರಾಗಿ ಕಾಲವನ್ನು ಹಾಕುವರು!

ವೇದವು ಮನುಷ್ಯನಿಗೆ ಇಹಪರಗಳೆರಡರಲ್ಲಿಯೂ ಸುಖವೇ ದೊರಕಲಿ ಎಂಬ ಹಿತೈಷಿಯಾದ್ದರಿಂದ ಮೆಲ್ಲಮೆಲ್ಲಗೆ ಸ್ವೇಚ್ಛಾಚಾರವನ್ನು ತಪ್ಪಿಸಿ ಕರ್ಮಾಚರಣೆಯಲ್ಲಿ ತೊಡಗಿಸುತ್ತದೆ. ಆ ಕರ್ಮವನ್ನು ಕಾಮಪೂರ್ತಿಗಾಗಿ ಮಾಡದೆ ನಿತ್ಯಕರ್ಮವನ್ನು ಆತ್ಮಸಂಸ್ಕಾರಕ್ಕಾಗಿ ಮಾಡುವದು ಉತ್ತಮವೆಂದು ಆಮೇಲೆ ಹೇಳುತ್ತದೆ. ಕರ್ಮದಿಂದ ಚಿತ್ತವು ಶುದ್ಧಿಯಾದವನಿಗೆ ಆತ್ಮನನ್ನು ಅರಿತುಕೊಳ್ಳಬೇಕೆಂಬ ಸದಿಚ್ಛೆಯುಂಟಾಗಲು ಕಾಮವೆಲ್ಲವೂ ಏಷಣೆಯ ಕಾರ್ಯವಾದ್ದರಿಂದ ಅದನ್ನು ಬಿಟ್ಟಿದ್ದು ಆತ್ಮಜ್ಞಾನಕ್ಕಾಗಿಯೇ ಹವಣಿಸಬೇಕೆಂದು ಹೇಳುತ್ತದೆ. ಹೀಗೆ ಮೆಟ್ಟಿಲುಮೆಟ್ಟಲಾಗಿ ಮೆಲ್ಲಮೆಲ್ಲಗೆ ಮನುಷ್ಯನಿಗೆ ಸ್ವಾಭಾವಿಕವಾಗಿರುವ ಅವಿದ್ಯಾಭೂಮಿಯ ಯಥೇಷ್ಟಾಚಾರದಿಂದ ಯಮನಿಯಮಾದಿಗಳಿಂದೊಡಗೂಡಿದ ಅಧ್ಯಾತ್ಮಯೋಗವನ್ನು ಉಪದೇಶಿಸುವದೇ ಶಾಸ್ತ್ರಕ್ಕೆ ಗುರಿ ಎಂಬುದು ಸ್ಪಷ್ಟವಾಗಿರುತ್ತದೆ. ಆದ್ದರಿಂದ ಶಾಸ್ತ್ರೋಕ್ತಕರ್ಮವನ್ನು ಮಾಡಬೇಕೊ, ಬಿಡಬೇಕೊ?-ಎಂಬ ಪ್ರಶ್ನೆ ಏಳುವದಿಲ್ಲ. ಕರ್ಮದಿಂದಾಗುವ ಪ್ರಯೋಜನವನ್ನು ಪಡೆದುಕೊಳ್ಳುವದಕ್ಕಿಂತ ಮುಂಚೆ ಅವಶ್ಯವಾಗಿ ಕರ್ಮವನ್ನು ಮಾಡಬೇಕು. ಆ ಕರ್ಮಗಳಿಂದಾಗಬೇಕಾದ ಫಲವು ದೊರಕಿ ಚಿತ್ತವು ಪ್ರತ್ಯಕ್ಪ್ರವಣವಾದ ಬಳಿಕ ಕರ್ಮಗಳು ತಮಗೆ ತಾವೇ ಕಳಚಿಕೊಳ್ಳುವವು. ಆಗ ಕರ್ಮವನ್ನು ಸಾಧಕನು ಬಿಡುವದಿಲ್ಲ; ಅವನನ್ನು ಅವೇ ಬಿಟ್ಟುಹೋಗುವವು ಎನ್ನಬಹುದು. ಇದೇ **ಕರ್ಮಸಂನ್ಯಾಸದ ತತ್ತ್ವವು.**

ಸಂನ್ಯಾಸವೆಂಬ ಶಬ್ದವನ್ನು ದುರುಪಯೋಗಮಾಡಿಕೊಳ್ಳುವ ರೂಢಿಯು ಈಗೀಗ ಜನರಲ್ಲಿ ಹೆಚ್ಚುತ್ತಲಿದೆ. ಸ್ವಾರ್ಥವಾಗಿರುವ ವ್ಯವಹಾರವನ್ನು ಬಿಟ್ಟು ಮಹಾ ಜನರ ಪ್ರಯೋಜನಕ್ಕಾಗಿ ನಿಸ್ಸ್ವಾರ್ಥಕರ್ಮವನ್ನು ಮಾಡುವದು ಸಂನ್ಯಾಸಿಯ ಗುರುತೆಂದು ಕೆಲವರು ಅಭಿಪ್ರಾಯಪಡುತ್ತಿರುವರು. ಆದರೆ **ಪರಮಾರ್ಥಚಿಂತನೆಯೊಂದಲ್ಲದೆ ಮತ್ತೆ ಯಾವ ಕರ್ತವ್ಯವೂ ಯಾವನಿಗಿಲ್ಲವೋ ಅವನೇ ನಿಜವಾದ ಸಂನ್ಯಾಸಿಯು.** ಈ ಲೋಕದ ಪರಲೋಕದ ಯಾವ ಪದಾರ್ಥದ ಹಂಬಲೂ ಇಲ್ಲದೆ ಪರಮಾತ್ಮನ ನಿಷ್ಠೆಯಲ್ಲಿಯೇ ನಿಂತವನು ಮುಖ್ಯಾರ್ಥದಲ್ಲಿ ಸಂನ್ಯಾಸಿಯು; ಆ ನಿಷ್ಠೆಯನ್ನು ಪಡೆಯುವದಕ್ಕೆಂದು ಶ್ರವಣಮನನನಿದಿಧ್ಯಾಸನಗಳನ್ನು ಮಾಡುವದಕ್ಕೆ ಅನುಕೂಲವಾಗಲೆಂದು ಎಲ್ಲಾ ಬಗೆಯ ಶಾಸ್ತ್ರೀಯಕರ್ಮಗಳನ್ನೂ ಬಿಟ್ಟು ಯಮನಿಯಮಾದಿಗಳನ್ನು ಅನುಸರಿಸುತ್ತಿರುವವನು ಗೌಣಾರ್ಥದಲ್ಲಿ ಸಂನ್ಯಾಸಿಯು-ಎಂಬುದು ವೇದಾಂತಗಳಲ್ಲಿ ಸಾರಿರುವ ಪರಮಾರ್ಥಸಂನ್ಯಾಸವು.

# 33. ವಿದ್ವತ್ಸಂನ್ಯಾಸ

ಪರಮಾರ್ಥತತ್ತ್ವವನ್ನು ಅರಿತುಕೊಳ್ಳಬೇಕೆಂಬ ಹಂಬಲಿಕೆಯುಳ್ಳವನು ಸತ್ಸಂಗದಿಂದ ಈಶ್ವರಭಕ್ತಿಯನ್ನೂ ಶಾಂತಿದಾಂತ್ಯಾದಿಸಾಧನಗಳನ್ನೂ ಸಂಪಾದಿಸಿಕೊಂಡ ಬಳಿಕ ವೇದೋಕ್ತಕರ್ಮಗಳನ್ನು ಬಿಟ್ಟುಬಿಡಬೇಕು, ಪರಮಹಂಸಪಾರಿವ್ರಾಜ್ಯವೆಂಬ ಸಂನ್ಯಾಸವನ್ನು ಮಾಡಬೇಕು–ಎಂದು ಹಿಂದೆ ಹೇಳಿದೆನು. ಅಧಿಕಾರಿಯಾದವನು ಚಿತ್ತಕ್ಕೆ ತಕ್ಕ ಸಂಸ್ಕಾರವನ್ನು ಪಡೆದುಕೊಂಡಿರುವಾಗ ಅವನಿಗೆ ಶಾಸ್ತ್ರೋಕ್ತಕರ್ಮಗಳು ಯಾವವೂ ಬೇಕಾಗುವದಿಲ್ಲ; ಅವನು ಶಾಂತಿದಾಂತ್ಯಾದಿಗಳಿಂದೊಡಗೂಡಿ ಪರಮಾರ್ಥಚಿಂತನೆಗೇ ತನ್ನ ಜೀವನವನ್ನೆಲ್ಲ ಮೀಸಲಾಗಿರಿಸಬೇಕಾಗಿಬರುತ್ತದೆ; ಅದೇ ಕರ್ಮಸಂನ್ಯಾಸವು ಎಂಬುದನ್ನು ಹಿಂದಿನ ಲೇಖನದಲ್ಲಿ ಸ್ಪಷ್ಟಗೊಳಿಸಿದ್ದೆನು.

ಈ ಸಂನ್ಯಾಸವು ಎರಡು ಬಗೆಯಾಗಿರುತ್ತದೆ. ಪರಮಾರ್ಥತತ್ತ್ವವನ್ನು ಅರಿತುಕೊಂಡಬಳಿಕ ಕರ್ಮದ ಅನುಷ್ಠಾನದಿಂದ ಆಗಬೇಕಾದ ಯಾವ ಪ್ರಯೋಜನವೂ ಇಲ್ಲದ್ದರಿಂದ ಕರ್ಮತ್ಯಾಗವನ್ನು ಮಾಡುವ ವಿದ್ವತ್ಸಂನ್ಯಾಸವು ಒಂದು. ಆ ತತ್ತ್ವವನ್ನು ಅರಿತುಕೊಳ್ಳಬೇಕೆಂಬ ಹಂಬಲಿಕೆಯು ಅತ್ಯಂತವಾಗಿ ಬಲವಾಗಿರುವದರಿಂದ ಶಾಸ್ತ್ರೋಕ್ತಕರ್ಮಗಳನ್ನೆಲ್ಲ ಬಿಟ್ಟು ಪರಮಾರ್ಥವನ್ನರಿತುಕೊಳ್ಳುವದಕ್ಕೇ ಪ್ರಯತ್ನಿಸುತ್ತಿ ರುವ ವಿವಿದಿಷಾಸಂನ್ಯಾಸವು ಮತ್ತೊಂದು. ಮೊದಲನೆಯ ಪ್ರಕಾರದ ಸಂನ್ಯಾಸವು ಜ್ಞಾನದ ಪರಿಪಾಕಕ್ಕೆ ಬೇಕಾಗುವದೆಂದೂ ಎರಡನೆಯ ಪ್ರಕಾರದ ಸಂನ್ಯಾಸವು ಜ್ಞಾನಪ್ರಾಪ್ತಿಗೇ ಅಂತರಂಗವಾಗಿರುವದೆಂದೂ ಬಲ್ಲವರು ಹೇಳುವರು.

ಆತ್ಮಜ್ಞಾನವು ಬಂದ ಬಳಿಕ ಸಂನ್ಯಾಸವನ್ನು ಸ್ವೀಕರಿಸುವದೆಂದರೆ ತಾನು ಸಂಪಾದಿಸುವ ತಿಳಿವಳಿಕೆಯನ್ನು ಮತ್ತೊಬ್ಬರಿಗೆ ಹಂಚದೆ ಇರುವ ಸ್ವಾರ್ಥವಲ್ಲವೆ? ಎಂದು ಕೆಲವರು ಕೇಳುವರು. ಇದು ಜ್ಞಾನದ ಸ್ವರೂಪವನ್ನು ತಿಳಿಯದೆ ಮಾಡುವ ಪ್ರಶ್ನೆಯಾಗಿರುತ್ತದೆಯಾದ್ದರಿಂದ, ಆತ್ಮಜ್ಞಾನವೆಂದರೇನು?–ಎಂಬ ಚರ್ಚೆಯನ್ನು ಮಾಡುವಾಗ ಇದಕ್ಕೆ ಉತ್ತರವನ್ನು ಹೇಳುವದಕ್ಕೆ ಪ್ರಯತ್ನಿಸಬಹುದಾಗಿರುತ್ತದೆಯಾದರೂ ಆತ್ಮಜ್ಞಾನವನ್ನು ಸಂಪಾದಿಸಿಕೊಳ್ಳಬೇಕೆಂಬ ವಿವಿದಿಷಾಸಂನ್ಯಾಸಿಗಳಿಗೂ ಜ್ಞಾನದ ಸ್ವರೂಪವನ್ನು ಕುರಿತ ಸಾಮಾನ್ಯವಾದ ತಿಳಿವಳಿಕೆಯಾದರೂ ಇರಬೇಕಾಗುವದರಿಂದ ಇಲ್ಲಿಯೇ ಅದನ್ನು ಕುರಿತು ಎರಡು ವಾಕ್ಯಗಳನ್ನು ಬರೆಯ ಬೇಕಾಗಿರುತ್ತದೆ.

ವೇದೋಕ್ತವಾದ ಕರ್ಮವನ್ನು ಮಾಡುವದಕ್ಕೆ ಪುತ್ರೈಷಣೆ, ವಿತ್ತೈಷಣೆ, ಲೋಕೈಷಣೆ–ಎಂಬ ಸಾಧ್ಯಸಾಧನವಿಷಯಕವಾದ ಇಚ್ಛೆಯೇ ಕಾರಣವಾಗಿರುತ್ತದೆ. ಪುತ್ರನಿಂದ ತಾನು ಮಾಡದೆ ಇದ್ದ ಕರ್ಮಗಳನ್ನು ಪರಿಪೂರ್ಣಗೊಳಿಸಿಕೊಂಡು

ಈ ಲೋಕವನ್ನು ಗೆದ್ದುಕೊಳ್ಳಬೇಕು-ಎಂಬುದು ಪುತ್ರೈಷಣೆಯು. ಪಿತೃಲೋಕವನ್ನು ಕರ್ಮದಿಂದಲೂ ದೇವಲೋಕವನ್ನು ಉಪಾಸನೆಯಿಂದಲೂ ಗೆದ್ದುಕೊಳ್ಳಬೇಕೆಂಬ ಇಚ್ಛೆಯು ವಿತ್ತೈಷಣೆಯು. ವಿತ್ತವೆಂದರೆ ಕರ್ಮಕ್ಕೆ ಬೇಕಾದ ಗೋವುಗಳೇ ಮುಂತಾದ ಸಾಧನವು, ಮತ್ತು ಅದರಿಂದಾಗುವ ಕರ್ಮವು; ಉಪಾಸನೆಯು ಈ ವಿತ್ತದಂತೆಯೇ ದೇವಲೋಕಕ್ಕೆ ಸಾಧನವಾಗಿರುವದರಿಂದ ಅದನ್ನು ದೈವವಿತ್ತ ವೆನ್ನುವರು. ಹೇಗೇ ಆಗಲಿ, ಮನುಷ್ಯಲೋಕ, ಪಿತೃಲೋಕ, ದೇವಲೋಕ- ಎಂಬ ಲೋಕತ್ರಯದಲ್ಲಿ ಫಲಭೋಗವನ್ನು ಸಂಪಾದಿಸಿಕೊಳ್ಳಬೇಕೆನ್ನುವವನೇ ವೇದೋಕ್ತವಾದ ಕರ್ಮೋಪಾಸನೆಗಳನ್ನು ಮಾಡತಕ್ಕವನು. ಆದರೆ ಆತ್ಮಲೋಕವನ್ನು ಬಯಸುವವರು ಈ ಲೋಕಗಳ ವಿಷಯವಾದ ಇಚ್ಛೆಯನ್ನೂ ಅವುಗಳ ಸಾಧನ ಗಳ ಇಚ್ಛೆಯನ್ನೂ ತೊರೆಯಬೇಕೆಂಬುದು ಸ್ವಾಭಾವಿಕವಾಗಿದೆ. ಪಿತೃಲೋಕದೇವ ಲೋಕಗಳಲ್ಲಿ ಅಪರಿಮಿತವಾದ ಸುಖವಾಗುವದೆಂಬುದು ಶಾಸ್ತ್ರಮಾತ್ರದಿಂದ ತಿಳಿಯತಕ್ಕದ್ದಾಗಿದೆ. ಸಾಮಾನ್ಯರು ಈ ಲೋಕದ ಸುಖಕ್ಕೆ ಹೇಗೋ ಹಾಗೆಯೇ ಶಾಸ್ತ್ರದಲ್ಲಿ ಶ್ರದ್ಧೆಯಿರುವವರು ಪರಲೋಕದ ಸುಖಕ್ಕೂ ಹಾತುವರಿಯುವರು. ಆದರೆ ಅದೇ ಶಾಸ್ತ್ರವೇ ಮಿಕ್ಕ ಲೋಕಗಳೆಲ್ಲವೂ ಅನಿತ್ಯವಾಗಿರುವವೆಂದೂ ಅವುಗಳಲ್ಲಿ ದೊರೆಯುವ ಸುಖವು ಎಷ್ಟೇ ಹೆಚ್ಚಾಗಿದ್ದರೂ ನಾಶವಾಗತಕ್ಕದ್ದೆಂದೂ ಹೇಳಿ ಆತ್ಮಲೋಕವೊಂದೇ ನಿತ್ಯವಾದದ್ದರಿಂದ ಅದನ್ನು ಬಯಸುವವರು ಈ ಏಷಣಾತ್ರಯವನ್ನು ಬಿಡತಕ್ಕದ್ದು ಎಂದು ಉಪದೇಶಿಸಿರುತ್ತದೆ. ಈ ಏಷಣೆಗಳ ತ್ಯಾಗವೇ ಪಾರಿವ್ರಾಜ್ಯವು ಅಥವಾ ಕರ್ಮಸಂನ್ಯಾಸವು.

ತನ್ನ ಮೋಕ್ಷಕ್ಕಾಗಿ ಲೋಕಗಳನ್ನೆಲ್ಲ ತ್ಯಾಗಮಾಡುವದು ಸ್ವಾರ್ಥವಲ್ಲವೆ? ಲೋಕದಲ್ಲಿರುವ ಮಿಕ್ಕ ಜೀವರ ಸಂಬಂಧವನ್ನೆಲ್ಲ ಕಡಿದುಹಾಕುವದು ಯುದ್ಧದಲ್ಲಿ ಪರಾಜಯವಾದೀತೆಂಬ ಅಂಜಿಕೆಯಿಂದ ರಣಾಂಗಣವನ್ನು ಬಿಟ್ಟು ಓಡುವ ಹೇಡಿತನವಾಗುವದಿಲ್ಲವೆ?- ಎಂದು ಅನೇಕರು ಆಕ್ಷೇಪಿಸಿರುತ್ತಾರೆ. ಸಮಾಜವನ್ನು ಕಟ್ಟಿ ಸಂಘಬಲದಿಂದ ಜ್ಞಾನವನ್ನೂ ಸುಖವನ್ನೂ ಸಂಪಾದಿಸಿ ಲೋಕೋಪಕಾರ ವನ್ನು ಮಾಡಿ ತಾನೂ ಕೃತಾರ್ಥನಾಗುವದೇ ಮನುಷ್ಯನ ಗುರಿ ಎಂಬುದು ವ್ಯವಹಾರದೃಷ್ಟಿಯಿಂದ ಸರಿಯೇ. ಆದರೆ ಧರ್ಮಾರ್ಥಕಾಮಗಳಲ್ಲಿ ಒಬ್ಬರಿಗೊಬ್ಬರು ಸಹಾಯಮಾಡುವದಕ್ಕೆ ಆಗುವಂತೆ ಮೋಕ್ಷವಿಚಾರದಲ್ಲಿ ಆಗುವಂತಿಲ್ಲ. ಈ ಶರೀರೇಂದ್ರಿಯಗಳ ಪಂಜರವು ನಮಗೆ ಹೊರಗಿನ ವಿಷಯದಲ್ಲಿ ಎಷ್ಟೇ ಜ್ಞಾನ ವನ್ನೂ ಸುಖವನ್ನೂ ಕೊಡಲಿ, ಆ ಜ್ಞಾನಾಭಾಸಕ್ಕಿಂತಲೂ ಸುಖಾಭಾಸಕ್ಕಿಂತಲೂ ವಿಲಕ್ಷಣವಾದ ಜ್ಞಾನವೂ ಸುಖವೂ ಬೇರೊಂದು ಇದೆ ಎಂದು ವೇದಗಳು

ಸಾರುತ್ತಿವೆ; ಸಾಧುಸಂತರು ಮತ್ತೆಮತ್ತೆ ಸಾರುತ್ತಿದ್ದಾರೆ. ಹೀಗಿರುವಲ್ಲಿ ಈ ಜನ್ಮದ ಶರೀರೇಂದ್ರಿಯಕ್ಕೆ ಸಂಬಂಧಪಟ್ಟ ಬಾಹ್ಯಜೀವನವನ್ನು ನಂಬಿ ಸುಮ್ಮನೆ ಕೂತುಕೊಳ್ಳದೆ ಆ ನಿರತಿಶಯವಾದ ಸುಖವನ್ನು ಹುಡುಕಿಕೊಂಡು ಹೋಗುವದು ಹೇಡಿತನವೆಂದಾಗಲಿ ತಪ್ಪೆಂದಾಗಲಿ ಯಾರು ತಾನೆ ಹೇಳಲಾಪರು? ತನ್ನ ಪರಮ ಪುರುಷಾರ್ಥವನ್ನು ತಾನೇ ಸಂಪಾದಿಸಿಕೊಳ್ಳಬೇಕಾಗಿರುತ್ತದೆ; ಅದಕ್ಕೆ ಮತ್ತೊಬ್ಬರ ಸಾಧನವಾಗಲಿ ಸಹಾಯವಾಗಲಿ ನೆರವಾಗಲಾರದು. ಒಂದಲ್ಲ ಒಂದುದಿನ, ಈ ಜನ್ಮದಲ್ಲಲ್ಲದಿದ್ದರೆ ಮತ್ತೊಂದು ಜನ್ಮದಲ್ಲಿಯಾದರೂ, 'ಆತ್ಮಲಾಭಕ್ಕಿಂತ ಹೆಚ್ಚಿನ ಲಾಭವಿಲ್ಲವಲ್ಲ, ಅದಕ್ಕಾಗಿಯೇ ಸರ್ವಸ್ವವನ್ನೂ ತ್ಯಾಗಮಾಡಿ ಅದನ್ನೇ ಅನ್ವೇಷಣೆ ಮಾಡುವದು ಮಾನವನ ಕರ್ತವ್ಯವು' ಎಂಬುದು ವಿವೇಕಿಯಾದವನಿಗೆ ಹೊಳೆಯದೆ ಇರಲಾರದು. ಅಂಥ ವೇಳೆಯಲ್ಲಿ ಮತ್ತೆ ಯಾವದನ್ನೂ ಗಣನೆಗೆ ತಾರದೆ ಜನನಮರಣರಹಿತವಾದ ಪರಮಾರ್ಥಸ್ಥಿತಿಯನ್ನು ಪಡೆದುಕೊಳ್ಳುವದಕ್ಕೆಂದೇ ಜೀವನು ಹೊರಡುವನು. ಅದನ್ನು ಸ್ವಾರ್ಥವೆಂದು ಮಿಕ್ಕವರು ಹಳಿದರೆ ಹಳಿಯಲಿ; ಇಂದ್ರಿಯಭೋಗಗಳಿಂದಲೇ ತೃಪ್ತನಾಗಿ ಆ ಭೋಗಗಳಿಗೆಂದೇ ಹೊಡೆದಾಡುತ್ತಿರುವ ಜನಸಾಮಾನ್ಯಕ್ಕೂ ಭೋಗಸಾಧನೋಪಾಯಗಳನ್ನು ಹುಡುಕಿ ತೋರಿಸುವ ಹುಚ್ಚು ವಿಚಾರಗಳನ್ನೇ ಮನಸ್ಸಿನಲ್ಲಿ ತುಂಬಿಕೊಳ್ಳುವದನ್ನು ಇನ್ನು ಮೇಲೆ ಅವನು ಬಿಟ್ಟುಬಿಡುವನು. ತಿರ್ಯಗ್ಜಂತುಗಳ ಸ್ಥಿತಿಗಿಂತಲೂ ಮಾನವನ ಸ್ಥಿತಿಯು ಎಷ್ಟು ಹೆಚ್ಚಿನದೋ, ಮಾನವಸ್ಥಿತಿಗಿಂತಲೂ ದೇವತ್ವವು ಎಷ್ಟು ಹೆಚ್ಚಿನದೋ, ಅದೆಲ್ಲಕ್ಕಿಂತಲೂ ಅಪರಿಮಿತವಾಗಿ ಹೆಚ್ಚಿನದೆನಿಸಿರುವ ನಿತ್ಯನಿರತಿಶಯವಾದ ಆನಂದಸ್ಥಿತಿಯನ್ನೇ ಸಂಪಾದಿಸಿಕೊಳ್ಳುವೆನೆಂದು ಸೊಂಟಕಟ್ಟುವನು. ಇದೇ ಪಾರಿವ್ರಾಜ್ಯವು ಅಥವಾ ಸಂನ್ಯಾಸವು.

ಆತ್ಮಲೋಕಕ್ಕಾಗಿ ಮಿಕ್ಕಲೋಕಗಳನ್ನು ಬಿಡುತ್ತಾನೆಂದು ನಾವು ಹೇಳಿರುವದು ಲೌಕಿಕದೃಷ್ಟಿಯಿಂದ. ಆ ದೃಷ್ಟಿಯಿಂದ ನೋಡಿದರೂ ಕರ್ಮಸಂನ್ಯಾಸವನ್ನು ಮಾಡುವ ಮಹಾಪುರುಷನು ಧೀರನೇ ಆಗಿರುತ್ತಾನೆ. "ಕರ್ಮದಿಂದಲ್ಲ, ಪ್ರಜೆಯಿಂದಲ್ಲ, ಧನದಿಂದಲೂ ಅಲ್ಲ; ತ್ಯಾಗದಿಂದಲೇ ಹಿಂದಿನ ಹಿರಿಯರು ಅಮೃತತ್ವವನ್ನು ಪಡೆದರು" ಎಂಬ ಶ್ರುತಿಯ ಉಪದೇಶವನ್ನು ಸರಿಯಾಗಿ ಅರ್ಥಮಾಡಿಕೊಂಡವನು ಅವನೇ. ಮೃಷ್ಟಾನ್ನಭೋಜನವನ್ನು ಬಿಟ್ಟು ಹಸಿವಿನಿಂದ ಬಳಲುತ್ತಿದ್ದರೂ ಗೋಲಿಗಜ್ಜುಗಗಳ ಆಟದಿಂದ ತೃಪ್ತರಾಗಿರುವ ಏನೂ ಅರಿಯದ ಮಕ್ಕಳಂತೆ 'ಅದನ್ನು ಮಾಡುವೆನು, ಇದನ್ನು ಪಡೆದುಕೊಳ್ಳುವೆನು' ಎಂಬ ಹಗಲುಕನವರಿಕೆಯಲ್ಲಿಯೇ ಮಿಕ್ಕವರು ಇರುತ್ತಿರುವಲ್ಲಿ ತನ್ನ ಕರ್ತವ್ಯವನ್ನು ತಿಳಿದುಕೊಂಡು ಅದನ್ನೇ ನೆರವೇರಿಸುವೆನೆಂದು

ಸಂಕಲ್ಪವನ್ನು ಮಾಡುವ ಮಹಾ ವಿವೇಕಿಯು, ಅವನು. ಅಂಥವನ ಕರ್ಮ ಸಂನ್ಯಾಸವು ಅವನ ಸುತ್ತಮುತ್ತಲೂ ನಿದ್ರಿಸುತ್ತಾ ಕನವರಿಸುತ್ತಿರುವ ಎಷ್ಟೋ ಜೀವರನ್ನು ಹೊಡೆದೆಬ್ಬಿಸುವದು. 'ಹಾ! ನಾವು ಎಂಥ ಅವಿವೇಕಿಗಳು ! ಆ ಮಹಾತ್ಮನು ತತ್ತ್ವಾನ್ವೇಷಣೆಗಾಗಿಯೇ ತನ್ನ ಸರ್ವಸ್ವವನ್ನೂ ತ್ಯಾಗಮಾಡಿದಂತೆ ನಾವೇಕೆ ಮಾಡಬಾರದು?' ಎಂದು ಅವರೂ ಸನ್ಮಾರ್ಗವನ್ನು ಅವಲಂಬಿಸುವರು. ಶಾಸ್ತ್ರೋಕ್ತಕರ್ಮಗಳನ್ನು ಸರಿಯಾದ ವಿಧಾನದಿಂದ ಅನುಷ್ಠಾನಮಾಡಿ ಅವುಗಳ ಪ್ರಯೋಜನವನ್ನು ಹೊಂದಿ ಹೀಗೆ ಕರ್ಮಸಂನ್ಯಾಸವನ್ನು ಮಾಡಿದ ಪುರುಷ ಧೌರೇಯರೇ ಮಿಕ್ಕವರಿಗೂ ಮಾರ್ಗದರ್ಶಕರಾಗುವವರು. ಆದ್ದರಿಂದ ಲೌಕಿಕ ದೃಷ್ಟಿಯಿಂದ ನೋಡಿದರೂ ಕರ್ಮಸಂನ್ಯಾಸವು ಸ್ವಪುರುಷಾರ್ಥಕ್ಕೆ ಸಾಧನ ವಾಗಿರುವದಲ್ಲದೆ ಪರೋಪಕಾರದ ಸಾಧನವೂ ಆಗಿರುತ್ತದೆ ಎನ್ನಬಹುದು. ಆದ್ದರಿಂದಲೇ ಯಾವನು ಹೀಗೆ ಸರ್ವತ್ಯಾಗವನ್ನೂ ಮಾಡಿ ಪರಮಪುರುಷಾರ್ಥ ವನ್ನು ಹುಡುಕಿಕೊಂಡು ಹೊರಡುವನೋ ಅಂಥ ಮಹಾತ್ಮನ ಸಂನ್ಯಾಸದ ಪರಿಣಾಮವಾಗಿ ಅವನ ತಾಯಿ ತಂದೆಗಳ ವಂಶದಲ್ಲಿ ಏಳುತಲೆಯವರೆಗಿನವರೂ ಉದ್ಧಾರವಾಗುವರೆಂದು ಶಾಸ್ತ್ರಕಾರರು ಹೇಳುತ್ತಾರೆ.

ಆದರೆ ವೇದಾಂತೋಕ್ತವಾಗಿರುವ ಪರಮಾರ್ಥದೃಷ್ಟಿಯಿಂದ ನೋಡಿದರೆ ಮೂರು ಲೋಕಗಳ ತ್ಯಾಗವೆಂಬುದು ಒಂದೂರನ್ನು ತ್ಯಜಿಸಿ ಮತ್ತೊಂದೂರಿಗೆ ಹೋಗುವಂಥ ಕರ್ಮವಲ್ಲವೆಂಬುದು ಸ್ಪಷ್ಟವಾಗುತ್ತದೆ. ಏಕೆಂದರೆ ಪರಮಾರ್ಥವು ಒಂದೇ ಒಂದು, ಅದ್ವಿತೀಯವಾಗಿರುತ್ತದೆ; ಆ ಪರಮಾರ್ಥದಲ್ಲಿಯೇ ಕ್ರಿಯಾಕಾರಕ ಫಲರೂಪವಾದ ಸಂಸಾರವೆಲ್ಲವೂ ಅಧ್ಯಾರೋಪಿತವಾಗಿರುತ್ತದೆ-ಎಂಬುದು ವೇದಾಂತದ ಸಿದ್ಧಾಂತವು. ಮನುಷ್ಯಲೋಕ, ಪಿತೃಲೋಕ, ದೇವಲೋಕ-ಎಂಬ ಫಲಗಳೂ ಅವಕ್ಕೆ ಉಪಾಯವಾಗಿರುವ ಪ್ರಜೆ, ಕರ್ಮ, ಉಪಾಸನೆ-ಎಂಬ ಸಾಧನಗಳೂ ಎಲ್ಲವೂ ಅದೇ ಪರಮಾರ್ಥವೇ ಆಗಿರುತ್ತವೆ. ಎಲ್ಲಾ ಜೀವರುಗಳೂ ಎಲ್ಲಾ ಕರ್ಮಗಳೂ ಎಲ್ಲಾ ದೇವತೆಗಳೂ ಎಲ್ಲಾ ವೇದಗಳೂ ಎಲ್ಲಾ ಫಲಗಳೂ ಈ ಪರಮಾರ್ಥದಲ್ಲಿಯೇ ಅಡಕವಾಗಿವೆ. ಸಾಧ್ಯಸಾಧನಗಳ ರೂಪವಾಗಿರುವ ಈ ಲೋಕಗಳು ವ್ಯವಹಾರದೃಷ್ಟಿಯಿಂದ ಎಷ್ಟೇ ಸತ್ಯವಾಗಿ ಕಾಣುತ್ತಿರಲಿ, ಇವುಗಳಲ್ಲಿರುವ ಸತ್ಯತ್ವವು ಆ ಪರಮಾರ್ಥಕ್ಕೇ ಸೇರಿದ್ದು. ಇವು ತಮ್ಮ ತೋರಿಕೆಯ ರೂಪದಿಂದ ಅಪರಮಾರ್ಥವೇ ಆಗಿರುತ್ತವೆ. ಆದ್ದರಿಂದ ಈ ದೃಷ್ಟಿಯಿಂದ ನೋಡುವಾಗ ಸಂನ್ಯಾಸಿಯಾದವನು ಯಾವದನ್ನೂ ಬಿಡುವದಿಲ್ಲ, ಯಾವದನ್ನೂ ಹೊಸದಾಗಿ ಹಿಡಿಯುವದಿಲ್ಲ. ಅವನು ತನ್ನ ದೃಷ್ಟಿಕೋಣವನ್ನು ಬದಲಾಯಿಸಿ

ಕೊಳ್ಳುವದಕ್ಕೆ ಪ್ರಯತ್ನಿಸುತ್ತಾನೆ, ಅಷ್ಟೆ. ಕರ್ಮದೃಷ್ಟಿಯಲ್ಲಿ ಈ ಜಗತ್ತು ಕ್ರಿಯಾಕಾರಕ ಫಲರೂಪವಾಗಿ ಕಾಣಿಸುತ್ತಿರುತ್ತದೆ. ಸ್ವಾಭಾವಿಕವಾದ ಜ್ಞಾನಕರ್ಮಗಳನ್ನು ಅವಲಂಬಿಸಿರುವ ಮನುಷ್ಯನು ತನ್ನ ಸ್ವಂತಬುದ್ಧಿಗೆ ತಿಳಿದ ಸಾಧ್ಯಸಾಧನಗಳ ಸಂಬಂಧವನ್ನು ನಂಬಿಕೊಂಡು ಹೀಗೆ ಮಾಡಿದರೆ ಇಂಥ ಫಲವು ಬರಬಹುದು; ಆದರೆ ಇದಕ್ಕಾಗಿ ಇಂಥಿಂಥ ಸಾಧನಸಾಮಗ್ರಿಗಳು ಬೇಕಾಗುವವು–ಎಂದು ಲೌಕಿಕ ಕ್ರಿಯಾಕಾರಕ ಫಲಗಳ ಒಂದು ಲೋಕದಲ್ಲಿ ವ್ಯವಹಾರಮಾಡುತ್ತಿರುವನು. ಆ ಬಳಿಕ ಶಾಸ್ತ್ರದ ಕರ್ಮಕಾಂಡದಲ್ಲಿ ಉಪದೇಶಿಸಿರುವ ಜ್ಞಾನಕರ್ಮಗಳನ್ನು ಅವಲಂಬಿಸಿದಾಗ ಸಾಮಾನ್ಯಜನರು ನಂಬಿರುವ ಕೃಷಿವಾಣಿಜ್ಯಾದಿಲೌಕಿಕಸಾಧನಗಳಿಗಿಂತ ವಿಲಕ್ಷಣವಾದ ಕರ್ಮೋಪಾಸನೆಗಳನ್ನು ಆಶ್ರಯಿಸಿ ಪಿತೃಲೋಕದೇವಲೋಕಗಳೆಂಬ ಸಾಧ್ಯಗಳನ್ನು ಪಡೆಯುವದಕ್ಕೆ ಹವಣಿಸುವನು. ಆದರೆ ಸಂನ್ಯಾಸಿಯಾದವನು, ಪರಮಾರ್ಥ ತತ್ತ್ವವನ್ನೇ ತಿಳಿದುಕೊಳ್ಳಬೇಕೆಂಬ ಹವಣಿಕೆಯುಳ್ಳವನು, "ಈ ಸಾಧ್ಯಸಾಧನದೃಷ್ಟಿಯು ತಪ್ಪೆಂದು ಶ್ರುತಿಗಳು ಸಾರುತ್ತಿವೆ. ಆದ್ದರಿಂದ ಇನ್ನುಮೇಲೆ ನಾನು ಯಾವ ಕರ್ಮವನ್ನೂ ಮಾಡಬೇಕಾದದ್ದೂ ಇಲ್ಲ, ಬಿಡಬೇಕಾದದ್ದೂ ಇಲ್ಲ; ಸಾಧ್ಯವೂ ಅಲ್ಲದ ಸಾಧನವೂ ಅಲ್ಲದ ಪರಮಾರ್ಥವನ್ನು ಅರಿತುಕೊಳ್ಳುವದೇ ನನ್ನ ಕರ್ತವ್ಯವು" ಎಂಬ ತತ್ತ್ವವಿಚಾರದೃಷ್ಟಿಯನ್ನು ಅವಲಂಬಿಸಿರುತ್ತಾನೆ. ಆದ್ದರಿಂದ ಕರ್ಮದೃಷ್ಟಿಯ ತ್ಯಾಗವೇ ನಿಜವಾದ ಸಂನ್ಯಾಸವು; ಬರಿಯ ವೈದಿಕಕರ್ಮಗಳನ್ನು ಬಿಡುವದನ್ನು ತ್ಯಾಗವೆಂದು ಕರೆಯುವದು ತೆಂಗಿನಕಾಯಿಯ ಕರಟವನ್ನೇ ತೆಂಗಿನಕಾಯಿ ಎಂದು ಕರೆದಂತೆ ಆಗುವದು.

ಸಂನ್ಯಾಸಾಶ್ರಮದಲ್ಲಿ ಮಾಡಬೇಕಾದದ್ದೇನು? ಎಂಬ ಪ್ರಶ್ನೆಗೆ ಈಗ ವಾಚಕರಿಗೆ ಉತ್ತರವು ಹೊಳೆದಿರಬಹುದು. ಸಂನ್ಯಾಸವೆಂಬುದು ನಿಜವಾಗಿ ಆಶ್ರಮವೇ ಅಲ್ಲ; ಅದು ಅತ್ಯಾಶ್ರಮವು. ಶ್ವೇತಾಶ್ವತರೋಪನಿಷತ್ತೆಂಬ ಹೆಸರಿನಿಂದ ಪ್ರಸಿದ್ಧವಾಗಿರುವ ಉಪನಿಷತ್ತಿನಲ್ಲಿ ಈ ಉಪಸಂಹಾರವಾಕ್ಯಗಳಿವೆ :

**"ತಪಸ್ಸಿನ ಪ್ರಭಾವದಿಂದಲೂ ದೇವನ ಪ್ರಸಾದದಿಂದಲೂ ಶ್ವೇತಾಶ್ವತರನು ಬ್ರಹ್ಮವನ್ನು ಅರಿತುಕೊಂಡವನಾಗಿ ಋಷಿಸಂಘವು ಸೇವಿಸುವ ಈ ಪರಮಪವಿತ್ರತತ್ತ್ವವನ್ನು ಅತ್ಯಾಶ್ರಮಿಗಳಿಗೆ ತಿಳಿಸಿದನು. ವೇದಾಂತದಲ್ಲಿರುವ ಪರಮರಹಸ್ಯವಿದು; ಇದನ್ನು ಪುರಾಕಲ್ಪದಲ್ಲಿ ತಿಳಿಸಿರುತ್ತದೆ. ಪ್ರಶಾಂತನಲ್ಲದವನಿಗಾಗಲಿ ಪುತ್ರನಂತೆ ಅಥವಾ ಶಿಷ್ಯನಂತೆ ಪ್ರೀತಿಗೆ ಪಾತ್ರನಲ್ಲದವನಿಗಾಗಲಿ ಇದನ್ನು ತಿಳಿಸಿಕೊಡಬಾರದು."**

ಯಾವನು ಅತ್ಯಾಶ್ರಮಿಯೋ ಅವನೇ ಪರಮಾರ್ಥವಿದ್ಯೆಗೆ ಮುಖ್ಯಾಧಿಕಾರಿಯು. ಬ್ರಹ್ಮಲೋಕಾದಿಗಳನ್ನು ಪಡೆಯುವದಕ್ಕೆಂದು ಉಪಾಸನೆಯನ್ನು ಮಾಡುವ

ಯತ್ಯಾಶ್ರಮವೊಂದಿದೆ. ಅದನ್ನು ಸ್ಮೃತಿಗಳಲ್ಲಿ ವಿಧಿಸಿದೆಯಾದ್ದರಿಂದ ಅದಕ್ಕೆ ಸ್ಮಾರ್ತಸಂನ್ಯಾಸವೆಂದು ಹೆಸರು. ಆ ಆಶ್ರಮದಲ್ಲಿ ದಂಡ, ಕಮಂಡಲು, ಶಿಖಾ ಯಜ್ಞೋಪವೀತಾದಿಗಳು-ಮುಂತಾದವುಗಳೆಲ್ಲವೂ ಉಂಟು. ಆ ಸಂನ್ಯಾಸವನ್ನಲ್ಲ, ಇಲ್ಲಿ ನಾವು ವಿಚಾರಕ್ಕೆ ತೆಗೆದುಕೊಂಡಿರುವದು. ಈಗ ಪರಮಹಂಸಸಂನ್ಯಾಸಿಗಳೆಂಬ ಹೆಸರಿನಿಂದ ಅಲ್ಲಲ್ಲಿ ಕಾಣಬರುವ ಅನೇಕ ಸಂನ್ಯಾಸಿಗಳೂ ಸಂನ್ಯಾಸಾಶ್ರಮದ ಚಿಹ್ನೆಗಳನ್ನು ಧರಿಸಿಕೊಂಡು, ಪರಮಹಂಸರಿಗೆ ಎಲ್ಲಿಯೂ ವಿಧಿಸದಿರುವ ಕೆಲ ಕೆಲವು ಕರ್ಮಗಳನ್ನೂ ಅನುಷ್ಠಾನದಲ್ಲಿಟ್ಟುಕೊಂಡಿರುತ್ತಾರೆ. ಆ ಬಗೆಯ ಸಂನ್ಯಾಸವೂ ಪ್ರಕೃತವಿಚಾರಕ್ಕೆ ವಿಷಯವಲ್ಲ. ಸರ್ವಕರ್ಮಗಳನ್ನೂ ಸಂನ್ಯಾಸ ಮಾಡಿ ಶಮ ದಮಾದಿಗಳನ್ನವಲಂಬಿಸಿ ಬ್ರಹ್ಮನಿಷ್ಠನಾಗುವದಕ್ಕೆ ಪ್ರಯತ್ನಿಸುತ್ತಿರುವ ಸಂನ್ಯಾಸಿಯನ್ನೇ ನಾವು ಈಗ ವಿಚಾರಕ್ಕೆ ತೆಗೆದುಕೊಂಡಿರುವದು. ಭಗವದ್ಗೀತೆಯಲ್ಲಿ ಹೇಳಿರುವ ಅಮಾನಿತ್ವಾದಿಸಾಧನಗಳನ್ನು ಅವಲಂಬಿಸಿರುವವನೇ ನಿಜವಾಗಿ ಈ ಅರ್ಥದಲ್ಲಿ ಸಂನ್ಯಾಸಿಯು. ಯಾವ ಕರ್ಮವನ್ನೂ ಮಾಡದಿದ್ದರೆ ಸಂನ್ಯಾಸಿಗೆ ಪ್ರತ್ಯವಾಯವು ಬರುತ್ತದೆ ಎಂದು ಕೆಲವರು ಕರ್ಮಠರು ಮುಮುಕ್ಷುಗಳನ್ನು ಹೆದರಿಸುವದುಂಟು. ಆದರೆ ಪರಮಾತ್ಮನ ಚಿಂತನೆಯಲ್ಲಿಯೇ ಕಾಲವನ್ನು ಕಳೆಯುವದೊಂದೇ ಸಂನ್ಯಾಸಿಗೆ ನಿಜವಾದ ಕರ್ಮವು; ಶಮದಮಾದಿಗಳಿಂದ ಬಲಪಟ್ಟ ಬ್ರಹ್ಮನಿಷ್ಠೆಯೇ ಅವನ ಕರ್ಮವಾದ್ದರಿಂದ ಅದನ್ನು ಮೀರಿದರೇ ಅವನಿಗೆ ಪ್ರತ್ಯವಾಯವೇ ಹೊರತು ಮಿಕ್ಕ ಯಾವ ಕರ್ಮಗಳೂ ಪರಮಹಂಸನಿಗೆ ಇಲ್ಲ-ಎಂದೇ ಬಲ್ಲವರು ಅಭಿಪ್ರಾಯಪಟ್ಟಿರುತ್ತಾರೆ.

ಸಂನ್ಯಾಸಿಗೆ ತಪಸ್ಸೇ ಆಶ್ರಮಕರ್ಮವೆಂದು ಕೆಲವರು ಹೇಳುತ್ತಿರುವರು. ಇದರಲ್ಲಿ ನಿಜದ ಅಂಶವೂ ಇದೆ. ಆದರೆ ತಪಸ್ಸೆಂದರೆ ಏನು? ಕೃಚ್ಛ್ರ, ಚಾಂದ್ರಾಯಣ-ಮುಂತಾದವುಗಳಿಂದ ಕಾಯವನ್ನು ಕ್ಲೇಶಗೊಳಿಸುವದು ವಾನಪ್ರಸ್ಥನ ಧರ್ಮವು; ಮುಖ್ಯಾರ್ಥದಲ್ಲಿ ವಾನಪ್ರಸ್ಥಾಶ್ರಮಧರ್ಮಗಳನ್ನೇ ಶಾಸ್ತ್ರದಲ್ಲಿ ತಪಸ್ಸೆಂದು ಕರೆದಿರುತ್ತದೆ. ಆದರೆ ಸಂನ್ಯಾಸಿಯೋ ಎಂದರೆ ಬದುಕಿರುವದಕ್ಕಾಗಲಿ ಸಾಯುವದಕ್ಕಾಗಲಿ ಬಯಸಬಾರದು, ಯಾವದು ಯಾವ ಕಾಲಕ್ಕೆ ಹೇಗೆ ಬಂದೊದಗುತ್ತದೆಯೋ ಹಾಗೆಯೇ ಇರಬೇಕು-ಎಂದು ಶಾಸ್ತ್ರವು ಉಪದೇಶಿಸುತ್ತದೆ. ಆದ್ದರಿಂದ ಸಂನ್ಯಾಸಿಯ ತಪಸ್ಸೆಂದರೆ ಕಾಯಕ್ಲೇಶ ಪ್ರಧಾನವಾದದ್ದಲ್ಲ; ಉಪವಾಸವನವಾಸ ಗಳಿಂದಲಾಗಲಿ ಸ್ನಾನಾಚಮನಾದಿಗಳಿಂದಲಾಗಲಿ ಸಂನ್ಯಾಸಿಯನ್ನು ಗುರುತಿಸುವದು ಸರಿಯಲ್ಲ. ಇಂದ್ರಿಯಗಳ ಸಂಯಮವೇ ಸಂನ್ಯಾಸಿಯ ತಪಸ್ಸು. ಬ್ರಹ್ಮವನ್ನು ತಿಳಿಯುವದಕ್ಕೆ ಬೇಕಾಗಿರುವ ಇಂದ್ರಿಯಮನಸ್ಸುಗಳ ಐಕಾಗ್ರ್ಯವೇ ಅವನಿಗೆ ಪರಮತಪಸ್ಸು. ಆದ್ದರಿಂದ ಅದನ್ನೇ ಪರಿವ್ರಾಜಕನು ಅನುಸರಿಸಬೇಕಾದದ್ದು.

ಕಲಿಯುಗದಲ್ಲಿ ಸಂನ್ಯಾಸವು ನಿಷಿದ್ಧ-ಎಂದು ಕೆಲವರು ಸ್ಮೃತಿವಾಕ್ಯಗಳನ್ನು ಉದಾಹರಿಸುತ್ತಿರುವರು. ಆದರೆ ಪ್ರತ್ಯಕ್ಷವಾಗಿ ಶ್ರುತಿವಿಹಿತವಾದ ಸಂನ್ಯಾಸವು, ಅದರಲ್ಲಿಯೂ ಜ್ಞಾನಕ್ಕೆ ಅಂಗವಾಗಿ ವಿಹಿತವಾಗಿರುವ ಸಂನ್ಯಾಸವು, ಕಲಿನಿಷಿದ್ಧ ಎಂಬ ಸ್ಮೃತಿಯಿಂದ ಹೇಗೆ ಬಾಧಿತವಾದೀತು? ಎಂಬುದನ್ನು ಆ ವಾದಿಗಳು ತಾವೇ ನಿರ್ಣಯಿಸಿಕೊಳ್ಳಬೇಕಾಗಿದೆ. ಆಶ್ರಮರೂಪವಾದ ಸಂನ್ಯಾಸದ ಧರ್ಮಗಳನ್ನು ಕಾಪಾಡುವದು ಬಹಳ ಕಷ್ಟ ಎಂಬುದನ್ನು ತಿಳಿಸುವದಕ್ಕೋಸ್ಕರ ಕಲಿವರ್ಜ್ಯಗಳಲ್ಲಿ ಸಂನ್ಯಾಸವನ್ನೂ ಸ್ಮೃತಿಕಾರರು ಕೆಲವರು ಸೇರಿಸಿರಬಹುದು. ಆದರೆ ಜ್ಞಾನವೇ ಕಲಿವರ್ಜ್ಯವೆಂದು ಯಾವ ದಿಟ್ಟನೂ ಹೇಳಲಾರನು; ಜ್ಞಾನಪ್ರಧಾನವಾದ ಪಾರಮ ಹಂಸ್ಯವು ಹೇಗೆತಾನೆ ವರ್ಜ್ಯವಾದೀತು? ಶ್ರೀ ಶಂಕರಾಚಾರ್ಯರವರು ಕಲಿಯುಗ ದಲ್ಲಿಯೇ ಅವತರಿಸಿದರು; ಬ್ರಹ್ಮಚರ್ಯದಿಂದಲೇ ಪಾರಿವ್ರಾಜ್ಯವನ್ನು ಸ್ವೀಕರಿಸಿ ಲೋಕಕ್ಕೆಲ್ಲ ತಮ್ಮ ಉದಾಹರಣೆಯಿಂದ ತುರೀಯಾಶ್ರಮವು ಮುಮುಕ್ಷುಗಳಿಗೆ ಅತ್ಯಂತವಾಗಿ ಆದರಣೀಯವೆಂಬುದನ್ನು ತೋರಿಸಿಕೊಟ್ಟರು. ಅವರು ತಮ್ಮ ಭಾಷ್ಯಗ್ರಂಥಗಳಲ್ಲಿ ವಿದ್ವತ್ಸಂನ್ಯಾಸವನ್ನೂ ವಿವಿದಿಷಾಸಂನ್ಯಾಸವನ್ನೂ ಶ್ರುತಿಸ್ಮೃತಿಗಳ ಆಧಾರದಿಂದ ಸ್ಥಾಪಿಸಿರುತ್ತಾರೆ. ಈಗಿನ ಮುಮುಕ್ಷುಗಳು ಅದನ್ನು ಮನಸ್ಸಿನಲ್ಲಿ ಇಟ್ಟುಕೊಂಡು ವರ್ತಿಸುವದು ಅವರಿಗೆ ಹೆಚ್ಚು ಶ್ರೇಯಸ್ಕರವಾಗಿರುತ್ತದೆ. ಆದ್ದರಿಂದ ತತ್ತ್ವವನ್ನು ಈ ಜನ್ಮದಲ್ಲಿಯೇ ಮನಗಾಣಬೇಕೆಂಬ ಮುಮುಕ್ಷುಗಳು ಕರ್ಮ ದಿಂದಾಗಬೇಕಾದ ಪ್ರತ್ಯಕ್ಪ್ರವಣತೆಯು ಆದಮೇಲೆ ಸರ್ವಕರ್ಮಸಂನ್ಯಾಸವನ್ನು ಮಾಡಿ ಬ್ರಹ್ಮನಿಷ್ಠರಾದ ವಿದ್ವತ್ಸಂನ್ಯಾಸಿಗಳ ಉಪದೇಶವನ್ನು ಪಡೆದು ಸನ್ಮಾರ್ಗದಲ್ಲಿ ನಡೆಯುವದಕ್ಕೆ ಪ್ರಯತ್ನಿಸಬೇಕು.

## 34. ಪರಮಹಂಸನ ಗುರುತು

ವೇದೋಕ್ತಕರ್ಮಗಳನ್ನು ಪರಮೇಶ್ವರನಿಗೆ ಅರ್ಪಣೆಯಾಗಲೆಂದು ಆಚರಿಸುವದ ರಿಂದ ಚಿತ್ತಶುದ್ಧಿಯಾಗುವದು; ಸತ್ಸಂಗದಿಂದ ಈಶ್ವರಭಕ್ತಿಯೂ ಶಾಂತ್ಯಾದಿಗಳ ಪರಿಚಯವೂ ಉಂಟಾಗುವವು; ಆಮೇಲೆ ಆ ಕರ್ಮಗಳಿಂದ ಮತ್ತೆ ಯಾವ ಪ್ರಯೋಜನವೂ ಆಗಬೇಕಾದದ್ದಿರುವದಿಲ್ಲವಾದ್ದರಿಂದ ಕರ್ಮಸಂನ್ಯಾಸವನ್ನು ಮಾಡಬೇಕು-ಎಂದು ಸಾಧನಪರಂಪರೆಯನ್ನು ಬೇರೆಬೇರೆಯ ಸಂದೇಶಗಳಲ್ಲಿ ತಿಳಿಸಿದ್ದಾಯಿತು. ಆದರೆ ಈ ಎಲ್ಲಾ ಸಾಧನಗಳಿಂದ ಪಡೆದುಕೊಳ್ಳಬೇಕಾದದ್ದೇನು? ಅದಕ್ಕಾಗಿ ಮುಮುಕ್ಷುಗಳು ಮಾಡಬೇಕಾದದ್ದೇನು?-ಎಂಬುದನ್ನು ವಿವರಿಸುವದಕ್ಕೆ ಇದು ಸಮಯವಾಗಿದೆ.

ವೇದೋಕ್ತವಾದ ಕರ್ಮಗಳನ್ನು ಮಾಡಿ ಚಿತ್ತಶುದ್ಧಿಯನ್ನು ಪಡೆದ ಮಹನೀಯರು ವೈದಿಕಧರ್ಮವೃಕ್ಷದ ಮಹಾಫಲವಾದ ಜ್ಞಾನವನ್ನು ಬಯಸುವರೆಂಬುದು ಸ್ವಾಭಾವಿಕವಾಗಿರುತ್ತದೆ. ವೇದದಲ್ಲಿ ಕರ್ಮಕಾಂಡವು ಹೇಗೆ ಪ್ರವೃತ್ತಿಧರ್ಮವನ್ನು ತಿಳಿಸುತ್ತದೆಯೋ ಹಾಗೆಯೇ ಜ್ಞಾನಕಾಂಡವೆಂಬ ಅದರ ಎರಡನೆಯ ಭಾಗವು ನಿವೃತ್ತಿಧರ್ಮವನ್ನು ತಿಳಿಸುತ್ತದೆ. ಮನುಷ್ಯನು ಧರ್ಮಾಧರ್ಮಗಳನ್ನು ಮಾಡಿಮಾಡಿ ಬಗೆಬಗೆಯ ಯೋನಿಗಳಲ್ಲಿ ಜನಿಸಿದ ಬಳಿಕ ಪುಣ್ಯವಶದಿಂದ ವೇದೋಕ್ತವಾದ ಕರ್ಮವನ್ನು ಮಾಡುವ ಸತ್ಕುಲದಲ್ಲಿ ಹುಟ್ಟುತ್ತಾನೆ. ಅದರ ಪರಂಪರೆಯ ಫಲವು ವೇದೋಕ್ತಜ್ಞಾನವು.

ಈ ಜ್ಞಾನವು ಉಪಾಸನೆಯೆಂದೂ ಪರಮಾತ್ಮವಸ್ತುಜ್ಞಾನವೆಂದೂ ಎರಡು ಬಗೆಯಾಗಿರುತ್ತದೆ. ಉಪಾಸನೆಯು ಅಥವಾ ಧ್ಯಾನವು ಶಾಸ್ತ್ರದಲ್ಲಿ ಹೇಳಿರುವ ಬೇರೆಬೇರೆಯ ದೇವತೆಗಳ ಅಥವಾ ಪರಮಾತ್ಮನ ಧ್ಯಾನರೂಪವಾಗಿರುತ್ತದೆ. ಎಲ್ಲಾ ದೇವತೆಗಳ ಒಟ್ಟೇ ಪರಮೇಶ್ವರನಾಗಿರುವದರಿಂದ ಆ ಪರಮೇಶ್ವರನ ಉಪಾಸನೆಯೇ ಉಪಾಸನೆಯನ್ನು ತಿಳಿಸುವ ವೇದಭಾಗಕ್ಕೆ ಕೊನೆಯ ಗುರಿಯೆನ್ನ ಬಹುದು. ಆದ್ದರಿಂದ ಬರಿಯ ಕರ್ಮಗಳಲ್ಲಿ ವಿರಕ್ತರಾದವರು, ಎಂದರೆ ಕರ್ಮ ದಿಂದಾಗುವ ಸ್ವಲ್ಪಕಾಲದ ಸುಖವನ್ನು ಕೊಡುವ ಸ್ವರ್ಗಾದಿಫಲಕ್ಕಿಂತಲೂ ಹೆಚ್ಚಿನ ಸುಖವು ತಮಗೆ ಬೇಕೆನ್ನುವವರು, ಬ್ರಹ್ಮಲೋಕದವರೆಗಿನ ಉತ್ತಮಫಲವನ್ನು ಕೊಡುವ ಶಾಸ್ತ್ರೋಕ್ತವಾದ ಉಪಾಸನೆಗಳನ್ನು ಮಾಡಬೇಕಾಗುವದು. ಆ ಉಪಾಸನೆಗಳನ್ನೂ ವೇದದಲ್ಲಿ ಹೇಳಿರುತ್ತದೆ. ಆ ಉಪಾಸನೆಗಳನ್ನು ಮಾಡುವದಕ್ಕೆ ತಕ್ಕ ಯತ್ಯಾಶ್ರಮವನ್ನು ಸ್ಮೃತಿಗಳಲ್ಲಿ ವರ್ಣಿಸಿರುತ್ತದೆ. ಆ ಸ್ಮಾರ್ತ ಸಂನ್ಯಾಸವನ್ನು ತ್ರಿದಂಡಸಂನ್ಯಾಸವೆಂದೂ ಕರೆಯುವರು. ವಾಗ್ದಂಡ, ಕಾಯದಂಡ, ಮನೋದಂಡ –ಎಂಬ ರೂಪದ ತ್ರಿಕರಣಗಳನ್ನು ಬಿಗಿಹಿಡಿದುಕೊಂಡಿರುವ ದಂಡತ್ರಯದ ಹೊರ ಗುರುತಾಗಿ ತ್ರಿದಂಡವನ್ನು ಈ ಯತಿಗಳು ಧರಿಸಿರುವದರಿಂದ ಇವರನ್ನು ತ್ರಿದಂಡಿ ಗಳೆಂದೂ ಕರೆಯುತ್ತಾರೆ. ತ್ರಿದಂಡಿಗಳು ತಮ್ಮ ಆಶ್ರಮಕ್ಕೆ ಹೇಳಿರುವ ಕರ್ಮಗಳನ್ನು ಮಾಡಿಕೊಂಡೇ ಬ್ರಹ್ಮೋಪಾಸನೆಯನ್ನು ಮಾಡುತ್ತಾರೆ. ಅದರಿಂದ ಬ್ರಹ್ಮಲೋಕ ಪ್ರಾಪ್ತಿಯಾಗುವದೆಂದು ಶಾಸ್ತ್ರದಲ್ಲಿ ಹೇಳಿದೆ. ಮಿಕ್ಕ ಎಲ್ಲಾ ಲೋಕಗಳಿಗಿಂತಲೂ ಬ್ರಹ್ಮಲೋಕವೆಂಬುದು ಬಹುಕಾಲದವರೆಗೆ ನಿಲ್ಲುವ ಉತ್ತಮಲೋಕವು; ಅದರಲ್ಲಿ ಸಾತ್ತ್ವಿಕಭಾವನೆಗಳೇ ಇರುತ್ತವೆ. ತತ್ತ್ವವಿಚಾರವನ್ನು ಮಾಡುವದೂ ಮುಖ್ಯ ಜ್ಞಾನವನ್ನು ಪಡೆದುಕೊಳ್ಳುವದೂ ಆ ಲೋಕದಲ್ಲಿ ಬಹಳ ಸುಲಭವಂತೆ. ಆದರೆ ಎಡೆಬಿಡದೆ ಸಾಯುವವರೆಗೂ ಅಖಂಡವಾಗಿ ಉಪಾಸನೆಯನ್ನು ಮಾಡಿ

ಸಾಕ್ಷಾತ್ಕಾರವನ್ನು ಹೊಂದಿ ಬ್ರಹ್ಮಲೋಕವನ್ನು ಪಡೆದುಕೊಳ್ಳುವದೆಂಬುದು ಬಹಳ ಕಷ್ಟ. ಈ ಕಾಲದಲ್ಲಿ ಈ ತ್ರಿದಂಡಸಂನ್ಯಾಸವನ್ನು ವಹಿಸುವವರೂ ಅಲ್ಲಿ ಆಶ್ರಮಧರ್ಮವನ್ನು ಸಾಧಿಸುವವರೂ ಬಹಳ ಕಡಿಮೆಯಾಗಿರುತ್ತಾರೆ.

ಆದರೆ ಉತ್ತಮಾಧಿಕಾರಿಯಾದವನಿಗೆ ಈ ಲೋಕದಲ್ಲಿ ಮಾಡುವ ಕರ್ಮಗಳ ಫಲಭೋಗದಲ್ಲಿ ಹೇಗೆ ಅನಾಸಕ್ತಿಯುಂಟಾಗಿರುವದೋ ಹಾಗೆಯೇ ಈ ಬ್ರಹ್ಮಾಂತ ವಾದ ಪರಲೋಕದ ಭೋಗದಲ್ಲಿಯೂ ಅನಾಸಕ್ತಿಯುಂಟಾಗಿರುತ್ತದೆ. ಇದನ್ನೇ ಇಹಾಮುತ್ರಫಲಭೋಗವಿರಾಗ ಎನ್ನುವದು. ಈ ಬಗೆಯ ವೈರಾಗ್ಯವು ಯಾವ ನಿಗೆ ಇರುವದೋ ಅವನೇ ಪರಮಹಂಸಪಾರಿವ್ರಾಜ್ಯವನ್ನು ಸ್ವೀಕರಿಸಿ ಪರಮಾತ್ಮ ತತ್ತ್ವದ ಜ್ಞಾನಕ್ಕೆಂದು ಹೊರಡುವವನು. ಈ ಬಗೆಯ ಉತ್ತಮಾಧಿಕಾರಿಯನ್ನು ಲಕ್ಷ್ಯದಲ್ಲಿಟ್ಟುಕೊಂಡು ಉಪನಿಷತ್ತಿನಲ್ಲಿ ಹೇಳಿರುವದೇನೆಂದರೆ,

**ಕರ್ಮಗಳಿಂದ ಗೆದ್ದುಕೊಳ್ಳಬಹುದಾದ ಲೋಕಗಳ ಸ್ವಭಾವವನ್ನು ಚೆನ್ನಾಗಿ ಪರೀಕ್ಷಿಸಿದ ಬ್ರಾಹ್ಮಣನು ಕರ್ಮದಿಂದ ನಿತ್ಯಪರಮಪುರುಷಾರ್ಥವು ಎಂದಿಗೂ ದೊರಕಲಾರದು–ಎಂದು ನಿಶ್ಚಯಿಸಿ ಆ ಲೋಕಗಳಲ್ಲಿ ವೈರಾಗ್ಯವನ್ನು ಹೊಂದುತ್ತಾನೆ. ಅವನು ಆ ನಿತ್ಯಪುರುಷಾರ್ಥಕ್ಕೆ ಬೇಕಾದ ಸಾಧನವನ್ನು ಅರಿತುಕೊಳ್ಳುವದಕ್ಕಾಗಿ ಶ್ರೋತ್ರಿಯನೂ ಬ್ರಹ್ಮನಿಷ್ಠನೂ ಆದ ಗುರುವಿನ ಬಳಿಗೇ ಕಾಣಿಕೆಯೊಡಗೂಡಿ ಹೋಗಬೇಕು.**

ಈ ಲೋಕದಲ್ಲಿಯೇ, ಈ ಜನ್ಮದಲ್ಲಿಯೇ, ಪರಮಪುರುಷಾರ್ಥಕ್ಕೆ ಸಾಧನವಾದ ಬ್ರಹ್ಮವಿಜ್ಞಾನವನ್ನು ಸಾಧಿಸಿಕೊಂಡು ಬಿಡಬೇಕು ಎಂದು ಯಾವ ಮಹಾಪುರುಷನ ಮನಸ್ಸು ಹಾತುವರಿಯುತ್ತಿರುವದೋ ಅವನೇ ವೇದಾಂತದಲ್ಲಿ ಹೇಳಿರುವ ಮುಖ್ಯಜ್ಞಾನಕ್ಕೆ ತಕ್ಕವನು. ಆ ಜ್ಞಾನಕ್ಕಾಗಿಯೇ ಪರಮಹಂಸಸಂನ್ಯಾಸವನ್ನು ಶ್ರುತಿಯಲ್ಲಿ ವಿಧಿಸಿರುವದು.

ಪರಮಹಂಸನಾದದ್ದಕ್ಕೆ ಗುರುತೇನು? ಮೊದಲನೆಯದಾಗಿ ನಿತ್ಯಾನಿತ್ಯ ವಿವೇಕವು ಮನಸ್ಸಿನಲ್ಲಿ ಉಂಟಾಗಿರಬೇಕು. ಯಾವದು ಕಾಲದಲ್ಲಿ ಹುಟ್ಟುವದೋ ಅದು ಕೃತಕವಾಗಿರುವದರಿಂದ ಈಗಲ್ಲದಿದ್ದರೆ ಕಾಲಾನುಕಾಲದಲ್ಲಿ ಎಂದಾದರೂ ನಾಶವಾಗತಕ್ಕದ್ದೇ ಆಗಿರುವದರಿಂದ ಅನಿತ್ಯವೇ–ಎಂಬ ವಿವೇಕಕ್ಕೆ ನಿತ್ಯಾನಿತ್ಯ ವಿವೇಕವೆಂದು ಹೆಸರು. "ಬ್ರಹ್ಮಲೋಕದವರೆಗಿನ ಸಮಸ್ತಲೋಕಗಳಿಂದಲೂ ಪುನರಾ ವೃತ್ತಿಯುಂಟು; ಆಯಾ ಲೋಕಗಳಲ್ಲಿ ಕರ್ಮೋಪಾಸನೆಗಳ ಫಲವನ್ನು ಅನುಭವಿಸಿದ ಬಳಿಕ ಮತ್ತೂ ಈ ಲೋಕಕ್ಕೆ ಬಂದು ಸಂಸಾರದಲ್ಲಿ ತೊಳಲಬೇಕಾಗುವದು. ಆದರೆ ಪರಮಾತ್ಮನನ್ನು ಪಡೆದುಕೊಂಡರೆ ಪುನರ್ಜನ್ಮವಿರುವದಿಲ್ಲ" ಎಂದು

ಭಗವದ್ಗೀತೆಯಲ್ಲಿ ಉಪದೇಶಿಸಿದೆ. ಆಯಾ ಲೋಕಗಳನ್ನು ಪಡೆದು ಅಲ್ಲಿಯ ಭೋಗಗಳನ್ನು ಅನುಭವಿಸಿದ ಮೇಲೆಯೇ ಈ ವೈರಾಗ್ಯವು ಹುಟ್ಟುವದೆಂದು ತಿಳಿಯಬಾರದು. ಯಾವದು ಸಾಧನದಿಂದ ಪಡೆಯತಕ್ಕದ್ದೋ ಅದೆಲ್ಲವೂ ಅನಿತ್ಯವೇ ಎಂಬ ವ್ಯಾಪ್ತಿಯು ಯಾವ ವಿವೇಕಿಯ ಮನಸ್ಸಿನಲ್ಲಿ ಚೆನ್ನಾಗಿ ಹತ್ತಿಕೊಂಡಿರುವದೋ ಅವನಿಗೆ ನಿತ್ಯಾನಿತ್ಯವಿವೇಕವೆಂಬ ಮೊದಲನೆಯ ಸಾಧನವು ಅಳವಟ್ಟಂತೆ ಆಯಿತು.

ಎರಡನೆಯದಾಗಿ ಇಹಾಮುತ್ರಾರ್ಥಭೋಗವಿರಾಗವೆಂಬ ಸಾಧನವು ಅಳವಟ್ಟಿರುವದು ನಿಜವಾದ ಪರಮಹಂಸನಿಗೆ ಒಂದು ಗುರುತು. ಇದರ ಸ್ವರೂಪವನ್ನು ಆಗಲೆ ವರ್ಣಿಸಿದ್ದಾಗಿದೆ. ಎಲ್ಲಾ ಲೋಕಗಳೂ ಅನಿತ್ಯವಾಗಿರುವದರಿಂದ ಅವುಗಳಿಗೆ ಸಾಧನವಾದ ಕರ್ಮವಾಗಲಿ ಉಪಾಸನೆಯಾಗಲಿ ನನಗೆ ಬೇಕಿಲ್ಲ ಎಂಬ ತೀವ್ರ ವೈರಾಗ್ಯವೇ ಇಹಾಮುತ್ರಾರ್ಥ ಫಲಭೋಗವಿರಾಗವು. ಇದನ್ನು ಏಷಣಾತ್ರಯ ತ್ಯಾಗವೆಂದೂ ಕರೆಯುವರು. ಮನುಷ್ಯಲೋಕಕ್ಕೆ ಸಾಧನವಾಗಿರುವ ಪುತ್ರ, ಪಿತೃಲೋಕಕ್ಕೆ ಸಾಧನವಾಗಿರುವ ಕರ್ಮ, ದೇವಲೋಕಕ್ಕೆ ಸಾಧನವಾಗಿರುವ ಉಪಾಸನೆ–ಈ ಮೂರರ ಇಚ್ಛೆಯನ್ನು ತ್ಯಜಿಸಿರುವದೇ ಏಷಣಾತ್ರಯ ತ್ಯಾಗವು.

ಮೂರನೆಯದಾಗಿ ಶಮದಮಾದಿಸಾಧನಸಂಪತ್ತೆಂಬ ಸಾಧನವಿರಬೇಕು. ಹಿಂದೆ ಶಮಾದಿಗಳನ್ನು ಕುರಿತ ಒಂದು ಲೇಖನವನ್ನೇ ಬರೆದಿರುತ್ತೇನಾಗಿ ಈಗ ಅದರ ವಿಷಯವನ್ನು ಮತ್ತೆ ವಿವರಿಸಬೇಕಾಗಿಲ್ಲ. ಈ ಶಮದಮಾದಿಗಳಿದ್ದವನೇ ನಿಜವಾದ ಪರಮಹಂಸನು; ಇವುಗಳನ್ನು ಎಡೆಬಿಡದೆ ಸಾಧಿಸುತ್ತಿರುವವನೇ ಜ್ಞಾನಕ್ಕೆ ನಿಜವಾದ ಅಧಿಕಾರಿಯು.

ಇನ್ನು ನಾಲ್ಕನೆಯದಾಗಿ ಮುಮುಕ್ಷುತ್ವವೆಂಬ ಸಾಧನವು ಅತ್ಯವಶ್ಯವಾಗಿರಬೇಕು. ಈ ಲೋಕದಲ್ಲಾಗಲಿ ಪರಲೋಕದಲ್ಲಾಗಲಿ ಪರಮಾರ್ಥವಾದ ಸುಖವೆಂಬುದು ಇಲ್ಲವೇ ಇಲ್ಲ. ನಮಗೆ ಸಿಕ್ಕುವ ಸುಖವೆಂಬುದು ಆಭಾಸಮಾತ್ರವಾಗಿದೆ. ಅದು ಪರಮಾರ್ಥವಾದ ಆನಂದದ ಪ್ರತಿಬಿಂಬಮಾತ್ರವಾಗಿರುತ್ತದೆ. ಪರಮಾತ್ಮಜ್ಞಾನದಿಂದ ಪರಮಾರ್ಥವನ್ನು ಅರಿತುಕೊಂಡವನಿಗೆ ಮಾತ್ರ ಅದು ಸಿಕ್ಕುತ್ತದೆ ಎಂದು ಶಾಸ್ತ್ರದಲ್ಲಿ ಹೇಳಿರುತ್ತದೆ. ಆ ವಾಕ್ಯದಲ್ಲಿ ಅಚಲವಾದ ಶ್ರದ್ಧೆಯಿದ್ದು ಆ ಪರಮಾರ್ಥಾನಂದ ಪ್ರಾಪ್ತಿಗಾಗಿ ಈ ಆಭಾಸಮಾತ್ರಸುಖವಿರುವ ಸಂಸಾರದ ಹಿಡಿತದಿಂದ ಹೇಗಾದರೂ ಬಿಡುಗಡೆಯನ್ನು ಪಡೆಯಬೇಕು ಎಂಬ ಉತ್ಕಟೇಚ್ಛೆಯೇ ಮುಮುಕ್ಷುತ್ವವು.

ಮೇಲೆ ಹೇಳಿರುವ ನಾಲ್ಕು ಸಾಧನಗಳನ್ನು ಅಳವಡಿಸಿಕೊಂಡಿರುವ ಸಾಧಕನು ನಿತ್ಯಾನಂದರೂಪವಾದ ಪರಮಪುರುಷಾರ್ಥಕ್ಕೆ ಸಾಧನವಾದ ಜ್ಞಾನವನ್ನು

ಸಂಪಾದಿಸಿಕೊಳ್ಳುವದಕ್ಕಾಗಿ ಆ ಜ್ಞಾನವನ್ನು ಅನುಗ್ರಹಿಸುವ ಸದ್ಗುರುವನ್ನು ಹುಡುಕಿಕೊಂಡು ಹೊರಡುವನು. ಇದೇ ಸರ್ವಕರ್ಮಸಂನ್ಯಾಸವನ್ನು ಮಾಡಿದ ಬಳಿಕ ಅನುಸರಿಸಬೇಕಾದ ಸಾಧನವು.

ನಿಜವಾದ ಸಂನ್ಯಾಸದ ಗುರಿಯಾಗಲಿ ಸಂನ್ಯಾಸಿಯ ಧರ್ಮವಾಗಲಿ ಯಾರಿಗೆ ಹೊಳೆದಿಲ್ಲವೋ ಅವರು ಬರಿಯ ಹೊರಗಿನ ವೇಷಮಾತ್ರದಿಂದ ಮರುಳಾಗುವರು. ತಮಗೆ ಕಾಷಾಯವನ್ನೂ ದಂಡಕಮಂಡಲಗಳನ್ನೂ ಧರಿಸುವದಕ್ಕೆ ಅನುಜ್ಞೆಯನ್ನು ಕೊಡಬಲ್ಲ ಪ್ರಖ್ಯಾತನಾದ ಯಾವನಾದರೊಬ್ಬ ಕಾಷಾಯಧಾರಿಯನ್ನು ಹುಡುಕಿಕೊಂಡು ಅವರು ಹೊರಡುವರು. ಗೃಹಸ್ಥಧರ್ಮದ ಹೊಣೆಗಾರಿಕೆಯನ್ನು ತಪ್ಪಿಸಿಕೊಂಡು ಕಾಷಾಯದಂಡಮಾತ್ರದಿಂದ ಶಿಷ್ಯರ ಪೂಜೆಯು ಸಿಕ್ಕುವದೆಂಬ ನಿರೀಕ್ಷಣೆಯಿಂದ ಬಂದಿರುವ ಅವಿವೇಕಿಗಳ ಅಂತಃಕರಣದಲ್ಲಿ ಮೇಲೆ ವಿವರಿಸಿರುವ ಸಾಧನಚತುಷ್ಟಯವು ಸ್ವಪ್ನದಲ್ಲಿಯೂ ಹೊಳೆದಿರುವದಿಲ್ಲವಷ್ಟೆ. ಅವರಿಗೆ ಸಿಕ್ಕುವ ಗುರುವಾದರೂ ಎಂಥವನು? ಇಷ್ಟು ಜನ ಸಂನ್ಯಾಸಿಗಳು ನನ್ನ ಶಿಷ್ಯರುಗಳಾಗಿರುತ್ತಾರೆ ಎಂದು ದಂಡಿಗಳ ದಂಡನ್ನು ಕೂಡಿಹಾಕಿದ ಮಾತ್ರದಿಂದ ತೃಪ್ತನಾಗಿರುವವನೇ ಅವರಿಗೆ ತಕ್ಕ ಗುರು. ಖ್ಯಾತಿಲಾಭಪೂಜೆಗಳಿಗಾಗಿ ಅಲೆದಾಡುವ ಇಂಥ ಸಂನ್ಯಾಸಿಗಳಿಗೆ ಯಾವದು ಕಾರ್ಯ, ಯಾವದು ಅಕಾರ್ಯ–ಎಂಬ ಅರಿವೇ ಇರುವದಿಲ್ಲ. ಉದಾರ ಹೃದಯರೆಂದು ಸಾಮಾನ್ಯಜನರಿಂದ ಹೆಸರು ಬಂದರೆ ಸಾಕೆಂದು ಸಾಮಾಜಿಕ, ರಾಜಕೀಯ–ಮುಂತಾದ ಮಿಕ್ಕ ಎಲ್ಲಾ ಬಗೆಯ ಚಟುವಟಿಕೆಗಳಲ್ಲಿಯೂ ಕೈಹಾಕುತ್ತಾ ಪರಮಾರ್ಥತತ್ತ್ವದ ಸುದ್ದಿಯನ್ನು ಕೂಡ ಮನಸ್ಸಿಗೆ ಹತ್ತಿಸಿಕೊಳ್ಳದಿರುವ ಸಂನ್ಯಾಸಿಗಳು ಈಗೀಗ ಹೆಚ್ಚುತ್ತಿರುವರು. ಆದರೆ ವೇದವಿಹಿತವಾದ ಪರಮಹಂಸಸಂನ್ಯಾಸಿಗೆ ಮುಖ್ಯವಾಗಿ ಪರಮಾರ್ಥವೇ ಗುರಿಯಾಗಿರುತ್ತದೆ ಎಂಬುದನ್ನು ನಾವು ಲಕ್ಷ್ಯದಲ್ಲಿಡಬೇಕು.

ಪರಮಾರ್ಥದ ತಿಳಿವಳಿಕೆಯನ್ನು 'ಸದ್ವಿದ್ಯೆ' ಎಂದು ಕರೆಯಬಹುದು. ಸತ್ತೆಂದರೆ ತನ್ನ ಸ್ವರೂಪವನ್ನು ಎಂದಿಗೂ ಮಾರ್ಪಡಿಸದೆ ಇದ್ದಂತೆಯೇ ಇದ್ದು ಕೊಂಡಿರುವ ಬರಿಯಿರವಾದ ಬ್ರಹ್ಮವು. ಆ ಬ್ರಹ್ಮವು ಅರಿವುಮರಹುಗಳೆಂಬ ಭೇದವನ್ನರಿಯದ ಬರಿಯ ಅರಿವೂ ಆಗಿರುವದರಿಂದ ಅದರ ತಿಳಿವಳಿಕೆಯನ್ನು ಚಿದ್ವಿದ್ಯೆಯೆಂದೂ ಕರೆಯಬಹುದು. ಹೀಗೆಯೇ ಆಗುಹೋಗುಗಳಿಲ್ಲದ ಆನಂದದ ಸ್ವರೂಪವಾದ ಅದರ ತಿಳಿವಳಿಕೆಯನ್ನು ಆನಂದವಿದ್ಯೆಯೆಂದೂ ಕರೆಯ ಬಹುದಾಗಿರುವದು. ಈ ಸಚ್ಚಿದಾನಂದಸ್ವರೂಪವಾದ ಬ್ರಹ್ಮವನ್ನು ತನ್ನ ಸ್ವರೂಪವೆಂದೇ ಅರಿತು ಅದರಲ್ಲಿಯೇ ನೆಲೆನಿಂತಿರುವ ಜ್ಞಾನಿಗೆ ಬ್ರಹ್ಮನಿಷ್ಠನೆಂದು ಹೆಸರು. ಪರಮಾರ್ಥವಾದ

ಬ್ರಹ್ಮವನ್ನು ತಿಳಿಪಡಿಸುವ ಶ್ರುತಿಯ ತಾತ್ಪರ್ಯವನ್ನು ಬಲ್ಲವನಾಗಿಯೂ ಆ ಬ್ರಹ್ಮಸ್ವರೂಪದಿಂದಲೇ ಇದ್ದುಕೊಂಡಿರುವವನಾಗಿಯೂ ಇರುವಾತನೇ ಸದ್ಗುರುವು. ಅಂಥವನ ಉಪದೇಶದಿಂದಲೇ ತತ್ತ್ವವು ಮುಮುಕ್ಷು ವಿಗೆ ಮನದಟ್ಟಾಗುವದು. ಅಂಥವನನ್ನೇ ಬ್ರಹ್ಮವಿದ್ಯೆಯನ್ನು ಸಂಪಾದಿಸಿಕೊಳ್ಳ ಬೇಕೆನ್ನುವವನು ಶರಣುಹೊಕ್ಕು ಬ್ರಹ್ಮಚರ್ಯೆಯನ್ನು ಅನುಷ್ಠಾನಮಾಡಬೇಕು.

ಸಾಮಾನ್ಯವಾಗಿ ಸಾತ್ತ್ವಿಕವರ್ತನೆಯಲ್ಲಿರುವ ಭಗವದ್ಭಕ್ತರಾದ ಸಾಧು ಜನರಿಗೂ ಇಂಥ ಸದ್ಗುರುವಿಗೂ ಒಂದು ಮುಖ್ಯವಾದ ಭೇದವಿರುತ್ತದೆ. ಸದ್ರೂಪನಾದ ಪರಮಾತ್ಮನನ್ನು ಶಾಸ್ತ್ರಗಳಿಂದ ಮಾತ್ರ ತಿಳಿದುಕೊಂಡವನಾಗಿರದೆ ಸ್ವಾನುಭವ ದಿಂದಲೂ ಪರಮಾತ್ಮತತ್ತ್ವವನ್ನು ಕಂಡುಕೊಂಡು ಅದರಲ್ಲಿಯೇ ನಿಷ್ಠನಾಗಿರು ವವನು ಮಾತ್ರ ಸದ್ಗುರುವಾಗಬಲ್ಲನು. ಯಾವನಿಗೆ ಶಾಸ್ತ್ರದ ಮರ್ಮಗಳೆಲ್ಲ ಗೊತ್ತಿರುವವೋ, ಯಾವನಿಗೆ ಅನುಭವಿಗಳಾದ ಆಚಾರ್ಯರಿಂದ ಬ್ರಹ್ಮತತ್ತ್ವವು ಉಪದಿಷ್ಟವಾಗಿರುವದೋ, ಯಾವನು ತರ್ಕವನ್ನೂ ಲೋಕಾನುಭವವನ್ನೂ ತತ್ತ್ವಾ ನುಭವಕ್ಕೆ ಅಂಗವಾಗಿ ಉಪಯೋಗಿಸಬಲ್ಲನೋ, ಯಾವನು ಯಾವದೊಂದರ ಆಶೆಯೂ ಇಲ್ಲದೆ ತನಗಾಗಿ ಮಾಡಿಕೊಳ್ಳಬೇಕೆನ್ನುವದು ಯಾವದೊಂದೂ ಇಲ್ಲ ದವನಾಗಿರುವನೋ, ಯಾವನು ಕೃತಕೃತ್ಯರಾಗಿರುವ ಬ್ರಹ್ಮನಿಷ್ಠರ ಅಸಾಧಾರಣಗುಣ ಗಳಾದ ಶಮದಮಾದಿಗಳಿಂದ ನಿತ್ಯಸಂಪನ್ನನಾಗಿರುವನೋ, ಯಾವನು ಮರೆ ಹೊಕ್ಕ ಶಿಷ್ಯರ ಅಜ್ಞಾನವನ್ನು ಕಳೆದು ಸಂಸಾರಸಾಗರದಿಂದ ಕಡೆಹಾಯಿಸುವ ಶಕ್ತಿಯೂ ಅನುಗ್ರಹಸಾಮರ್ಥ್ಯವೂ ದಯೆಯೂ ಇರುವ ಆಚಾರ್ಯನಾಗಿರುವನೋ ಅಂಥವನೇ ಬ್ರಹ್ಮವಿದ್ಯೆಯನ್ನು ತಿಳಿಸಿಕೊಡಬಲ್ಲ ಸದ್ಗುರುವಾಗುವದಕ್ಕೆ ಅರ್ಹನು.

ಇಂಥ ಸದ್ಗುರುವನ್ನು ಬಳಿಸಾರಿ ಮುಮುಕ್ಷುವಾದವನು ಪ್ರತಿದಿನವೂ ಆತನ ಪಾದಗಳಿಗೆ ನಮಸ್ಕರಿಸುತ್ತಲೂ ಸಮಯೋಚಿತವಾಗಿ ಆತನ ಸೇವೆಯನ್ನು ಮಾಡುತ್ತಲೂ ಇರಬೇಕು. ಆತನು ಪ್ರಸನ್ನನಾಗಿರುವ ಕಾಲದಲ್ಲಿ ಆತನಿಂದ ತತ್ತ್ವವಿಷಯವಾಗಿ ತನಗೆ ಉಂಟಾಗಿರುವ ಸಂಶಯವನ್ನು ಪರಿಹಾರಮಾಡುವ ಸದುತ್ತರವನ್ನು ಪಡೆಯುವ ಉದ್ದೇಶದಿಂದ ಪ್ರಶ್ನೆಮಾಡಬೇಕು. ಅಂಥ ಸದ್ಗುರುವಿನ ಉಪದೇಶ ದಿಂದಲೇ ಪರಮಾರ್ಥವು ಅನುಭವಪರ್ಯಂತವಾಗಿ ತಿಳಿದು ಸಂಸಾರಾನರ್ಥಕ್ಕೆ ಕಾರಣವಾಗಿರುವ ಅಜ್ಞಾನವನ್ನು ಸಂಪೂರ್ಣವಾಗಿ ನಾಶಮಾಡುವದು.

ನಾವು ಈವರೆಗೆ ವರ್ಣಿಸಿರುವದು ವೇದಾಧ್ಯಯನವನ್ನು ಮಾಡಿ ಕರ್ಮಾ ಚರಣೆಯಿಂದ ಸತ್ತ್ವಶುದ್ಧಿಯನ್ನೂ ವಿರಕ್ತಿಯನ್ನೂ ಮತ್ತು ಜ್ಞಾನಕ್ಕೆ ಬೇಕಾದ ಮಿಕ್ಕ ಅಧಿಕಾರಿಗುಣಗಳನ್ನೂ ಸಂಪಾದಿಸಿಕೊಂಡಿರುವ ಮುಮುಕ್ಷುವಿನ ಸಾಧನ

ಗಳನ್ನು. ಯಾವ ಕಾಲದಲ್ಲಿಯೂ ಎಲ್ಲರೂ ವೇದವನ್ನು ಅಧ್ಯಯನಮಾಡಿರುವದಿಲ್ಲ. ಅದರಲ್ಲಿಯೂ ಈಗ್ಗೆ ವೇದಾಧ್ಯಯನವು ಬ್ರಾಹ್ಮಣರಲ್ಲಿ ಕೂಡ ಲುಪ್ತಪ್ರಾಯವಾಗಿರುತ್ತದೆ. ವೇದಾಧ್ಯಯನವನ್ನು ಮಾಡದೆ ಇರುವ ಮುಮುಕ್ಷುಗಳಿದ್ದರೆ ಅವರು ಯಾವ ಸಾಧನವನ್ನು ಮಾಡಬೇಕು? ವೇದಾಧ್ಯಯನಕ್ಕೆ ಅಧಿಕಾರವಿಲ್ಲದ ಮುಮುಕ್ಷುಗಳು ಜ್ಞಾನವನ್ನು ಹೇಗೆ ಸಂಪಾದಿಸಿಕೊಳ್ಳಬೇಕು?- ಎಂಬುದು ಈಗಿನ ಕಾಲಕ್ಕೆ ಅವಶ್ಯವಾಗಿ ಉತ್ತರವನ್ನು ಹೇಳಬೇಕಾದ ಪ್ರಶ್ನೆಯಾಗಿರುತ್ತದೆ. "ನಮಗೆ ವೇದಾಧಿಕಾರವಿರುತ್ತದೆ. ನಾವೂ ವೇದವನ್ನು ಪುಸ್ತಕಗಳ ಮೂಲಕ ಅಥವಾ ಭಾಷಾಂತರದ ಮೂಲಕ ಪಠಿಸಿರುತ್ತೇವೆ; ಆದ್ದರಿಂದ ನಮಗೂ ವೇದಾಂತ ವಿಚಾರದಲ್ಲಿ ಅಧಿಕಾರವಿದೆ" ಎಂದು ವಾದಿಸುವವರನ್ನು ನಾವು ಇಲ್ಲಿ ವಿಚಾರಕ್ಕೆ ತೆಗೆದುಕೊಳ್ಳಬೇಕಾದದ್ದಿಲ್ಲ. "ನಮಗೆ ವೇದದ ಪರಿಚಯವಿಲ್ಲ; ಸಾಂಗವಾದ ವೇದವನ್ನು ಅಧ್ಯಯನಮಾಡುವ ಅಧಿಕಾರವಿಲ್ಲ, ಅಥವಾ ಅಧಿಕಾರವಿದ್ದರೂ ನಾವು ಹಾಗೆ ಅಧ್ಯಯನ ಮಾಡಲಿಲ್ಲ. ಆದ್ದರಿಂದ ನಮಗೆ ತತ್ತ್ವಜ್ಞಾನವು ಹೇಗೆ ಆದೀತು?" ಎಂದು ಸಾದರವಾಗಿ ಕೇಳುವವರ ವಿಷಯವನ್ನು ಮಾತ್ರ ಲೆಕ್ಕಕ್ಕೆ ತೆಗೆದುಕೊಂಡರೆ ಸಾಕಾಗಿದೆ.

ಇಂಥ ಅಧಿಕಾರಿಗಳಿಗೆ ಭಗವಂತನ ನಾಮಕೀರ್ತನೆಯೇ ಮುಂತಾದ ಭಕ್ತಿ ಮಾರ್ಗದ ಸಾಧನಗಳಿರುತ್ತವೆ. "ಕಲೌ ಕಲ್ಮಷಚಿತ್ತಾನಾಂ ಪಾಪದ್ರವ್ಯೋಪ ಜೀವಿನಾಮ್ । ವಿಧಿಕ್ರಿಯಾವಿಹೀನಾನಾಂ ಗತಿರ್ಗೋವಿನ್ದಕೀರ್ತನಮ್" ಎಂದಿರುವಂತೆ ಕಲಿಯುಗದಲ್ಲಿ ಚಿತ್ತಕಾಲುಷ್ಯವಿರುವವರೇ ಬಹಳ ಜನ; ಜೀವನಕ್ಕೆ ಧರ್ಮದಿಂದ ಸಂಪಾದಿಸಿದ ದ್ರವ್ಯವಿರುವವರೂ ಕಡಿಮೆ; ಶಾಸ್ತ್ರದಲ್ಲಿ ವಿಧಿಸಿರುವಂತೆ ಕರ್ಮವನ್ನು ಮಾಡುವವರು ತೀರ ವಿರಳ. ಆದರೂ ಶ್ರದ್ಧಾಭಕ್ತಿಗಳಿಂದ ಭಗವನ್ನಾಮವನ್ನು ಸ್ಮರಿಸುವದು, ಕೀರ್ತನಮಾಡುವದು-ಮುಂತಾದ ರೀತಿಗಳಿಂದ ಚಿತ್ತಶುದ್ಧಿಯನ್ನು ಮಾಡಿಕೊಂಡು ಸತ್ಸಂಗದಿಂದ ಸಾಧನಸಂಪತ್ತನ್ನು ಸಂಪಾದಿಸಿಕೊಳ್ಳುವದಕ್ಕೆ ಅಂಥವರಿಗೂ ಅವಕಾಶವಿದೆ. ಬ್ರಹ್ಮನಿಷ್ಠರಾಗಿರುವ ಮಹಾತ್ಮರ ಸೇವೆಯನ್ನು ಯಥಾಶಕ್ತಿಯಾಗಿ ನಿರ್ವಂಚನೆಯಿಂದ ಮಾಡಿ ಅವರ ಉಪದೇಶದ ಮೂಲಕವಾಗಿ ಕೃತಾರ್ಥರಾಗುವದಕ್ಕೆ ಅಂಥವರಿಗೂ ಅವಕಾಶವಿದೆ. ವೇದಾರ್ಥವನ್ನು ವಿಸ್ತರಿಸುವದಕ್ಕೆಂದು ಹೊರಟಿರುವ ಇತಿಹಾಸ ಪುರಾಣಗಳನ್ನು ಅನುಭವಿಗಳಾದವರ ಮುಖದಿಂದ ಶ್ರವಣಮಾಡಿದರೆ ಅಂಥವರಿಗೂ ಅವಶ್ಯವಾಗಿ ಜ್ಞಾನವಾಗುತ್ತದೆ. "ಶ್ರಾವಯೇಚ್ಚತುರೋ ವರ್ಣಾನ್ ಕೃತ್ವಾ ಬ್ರಾಹ್ಮಣಮಗ್ರತಃ" ಬ್ರಾಹ್ಮಣನನ್ನು ಮುಂದುಮಾಡಿಕೊಂಡು ನಾಲ್ಕು ವರ್ಣದವರಿಗೂ ಇತಿಹಾಸ ಶ್ರವಣವನ್ನು ಮಾಡಿಸಬೇಕು ಎಂದು ವ್ಯಾಸರೇ ಅಪ್ಪಣೆಕೊಡಿಸಿರುತ್ತಾರೆ. ಆದ್ದರಿಂದ

ವೇದಾಧಿಕಾರವಿಲ್ಲದ ಮಾತ್ರದಿಂದ ತತ್ತ್ವವಿಚಾರವನ್ನು ಮಾಡುವದಕ್ಕೆ ಅವಕಾಶ ವಿಲ್ಲವೆಂದು ನಿಜವಾದ ಮುಮುಕ್ಷುಗಳು ಯಾರೂ ವ್ಯಥೆಪಡಬೇಕಾಗಿಲ್ಲ.

ಇಷ್ಟೇ ಅಲ್ಲ. ಸಂಸ್ಕೃತಭಾಷೆಯೇ ಬಾರದವರು ಹೆಚ್ಚಿನ ಸಂಖ್ಯೆಯಲ್ಲಿರುವ ಈ ಕಾಲಕ್ಕೆ ಮುಮುಕ್ಷುಗಳಿಗೆ ಸಮಾಧಾನವನ್ನು ಕೊಡುವ ಸ್ಕಾಂದಪುರಾಣ ವಚನವೊಂದೂ ಇದೆ. ಯಾರಿಗೆ ನೇರಾಗಿ ಸಂಸ್ಕೃತಪರಿಚಯವಿಲ್ಲವೋ ಅಂಥವರು ಭಾಷಾಂತರದ ಮೂಲಕವೂ ವಿಷಯವನ್ನು ತಿಳಿದುಕೊಳ್ಳಬಹುದೆಂದು ಸೂತ ಸಂಹಿತೆಯಲ್ಲಿ ಸ್ಪಷ್ಟವಾಗಿ ಹೇಳಿರುತ್ತದೆ. ಆದರೆ ತತ್ತ್ವಜ್ಞಾನವು ಗ್ರಂಥದ ಮೂಲಕ ಬರುವದಲ್ಲ; ಸದ್ಗುರುವಿನ ಉಪದೇಶದಿಂದಲೇ ಸಂಪಾದಿಸಿಕೊಳ್ಳತಕ್ಕದ್ದಾಗಿರುತ್ತದೆ. ಆದ್ದರಿಂದ ಮುಮುಕ್ಷುಗಳಾದವರು ಶ್ರದ್ಧಾಭಕ್ತಿಯಿಂದ ಸದ್ಗುರುವನ್ನು ಸೇರಿ, ದಿನ ದಿನವೂ ಅವನ ಪಾದಕಮಲಗಳನ್ನು ಸೇವಿಸುತ್ತಾ ಆತನ ಅನುಗ್ರಹಕ್ಕೆ ಪಾತ್ರರಾಗ ಬೇಕು. ಸದ್ಗುರುವು ಅನುಗ್ರಹಿಸಿಕೊಡುವ ತಿಳಿವಳಿಕೆಯು ಸಂಸಾರಬಂಧದ ಕತ್ತಲೆ ಯನ್ನು ಕಳೆಯುವದಕ್ಕೆ ಸೂರ್ಯೋದಯವಾಗಿ ಪರಿಣಮಿಸುವದೆಂಬದು ನಿಶ್ಚಯವು.

## 35. ಓಂಕಾರ-ಪರಮಸಾರ

ಪರಮೇಶ್ವರನು ಯಾವ ವಿಕಾರವೂ ಇಲ್ಲದ ಕೂಟಸ್ಥಸಚ್ಚಿದಾನಂದ ಸ್ವರೂಪನು. ಆತನೇ ನಮ್ಮೆಲ್ಲರಿಗೂ ಆತ್ಮನಾಗಿರುವದರಿಂದ ನಮ್ಮ ನಿಜವಾದ ಸ್ವರೂಪದಲ್ಲಿ ಯಾವದೊಂದು ಕ್ರಿಯೆಯೂ ಇಲ್ಲವೆಂಬುದು ಸ್ಪಷ್ಟವಾಗಿದೆ. ಆದರೂ ನಾವು ಈಗ ನಮ್ಮ ಆತ್ಮನೆಂದು ಭಾವಿಸಿಕೊಂಡಿರುವ ಜೀವರೂಪದಲ್ಲಿ ಅಂತಃಕರಣದ ಅಂಟಿನಿಂದ ವಿವಿಧವಾದ ವ್ಯಾಪಾರಗಳು ಕಾಣಬರುತ್ತಿವೆ. ನಮ್ಮ ನಿಜವಾದ ಸ್ವರೂಪವು ನಿಷ್ಕ್ರಿಯಾತ್ಮಕವೇ ಆಗಿರುತ್ತಿದ್ದರೂ ವ್ಯವಹಾರದಲ್ಲಿ ನಮಗೆ ಇದು ಮನಸ್ಸಿಗೆ ಹೊಳೆಯದೆ ನಾವು ಸಕ್ರಿಯಾತ್ಮರೇ ಎಂಬ ಗಟ್ಟಿಯಾದ ಭಾವನೆಯು ನಮ್ಮೆಲ್ಲರಿಗೂ ಉಂಟಾಗಿರುತ್ತದೆ.

ಸರಿಯಾದ ಹಾದಿಯಲ್ಲಿ ನಡೆಯದವನು ತನ್ನ ಗುರಿಯಿರುವ ಸ್ಥಾನವನ್ನು ಎಂದಿಗೂ ಮುಟ್ಟಲಾರನು. ಇದರಂತೆ ನಿಷ್ಕ್ರಿಯವಾಗಿರುವ ನಮ್ಮ ಸ್ವರೂಪವನ್ನು ನಾವು ಯಾವ ಕ್ರಿಯೆಯಿಂದಲೂ ಮುಟ್ಟಲಾರೆವೆಂಬುದು ಸ್ವಾಭಾವಿಕವಷ್ಟೆ. ಆದರೂ ತಪ್ಪುಹಾದಿಯಲ್ಲಿ ನಡೆಯುತ್ತಿರುವೆನೆಂಬ ತಿಳಿವಳಿಕೆಯುಂಟಾದವನು ಇನ್ನು ಮುಂದೆ ಆ ಹಾದಿಯಲ್ಲಿ ಮುನ್ನಡೆಯನ್ನು ಅನುಸರಿಸದೆ ಹಿಂದಕ್ಕೇ ಹೋಗುವಂತೆ, ಸಕ್ರಿಯಾತ್ಮಸ್ವರೂಪವು ನಿಜವಾಗಿ ನಮ್ಮದಲ್ಲವೆಂಬ ತಿಳಿವಳಿಕೆಯು ದೊಡ್ಡವರ ಉಪದೇಶದಿಂದಲೂ ಶಾಸ್ತ್ರದ ಉಪದೇಶದಿಂದಲೂ ನಮಗೆ ಆದ ಬಳಿಕ ಇನ್ನೂ

ಕರ್ಮಗಳನ್ನು ಮಾಡಿಯೇ ಪರಮಪುರುಷಾರ್ಥವನ್ನು ಪಡೆಯುವೆನೆಂಬ ಪಟ್ಟು ಹಿಡಿಯುವದನ್ನು ಬಿಟ್ಟು ಕರ್ಮಗಳ ತ್ಯಾಗವನ್ನು ಮಾಡುವದೇ ಯುಕ್ತವಷ್ಟೆ. ಈ ಕಾರಣದಿಂದ ಯಾವನಿಗೆ ಸರ್ವಕ್ರಿಯಾರಹಿತವಾದ ಕೂಟಸ್ಥಸಚ್ಚಿದಾನಂದ ಸ್ವರೂಪ ವನ್ನೇ ಕಂಡುಕೊಳ್ಳಬೇಕೆಂಬ ತೀವ್ರವಾದ ಹಂಬಲು ಉಂಟಾಗಿರುವದೋ ಅವನು ಇನ್ನು ಮುಂದೆ ಇಹಲೋಕದ ವ್ಯವಹಾರವನ್ನಾಗಲಿ ಪರಲೋಕಪ್ರಾಪ್ತಿಯ ಸಾಧನ ವನ್ನಾಗಲಿ ಅವಲಂಬಿಸುವದು ಸಾಧ್ಯವಿರುವದಿಲ್ಲ. ಅವನು ಈವರೆಗೆ ಅನುಸರಿಸಿದ ಕರ್ಮಮಾರ್ಗವು ತನ್ನ ಗುರಿಯನ್ನು ಮುಟ್ಟಿಸಲಾರದೆಂದು ಮನಗಂಡಿರು ವದರಿಂದ ಕರ್ಮತ್ಯಾಗಮಾರ್ಗವನ್ನೇ ಅನುಸರಿಸುವದಕ್ಕೆ ಮೊದಲುಮಾಡುವನು.

ಆದರೆ ಕರ್ಮತ್ಯಾಗವೆಂದರೇನು? ಏನೂ ಕೆಲಸವನ್ನು ಮಾಡದೆ ಅಲಸನಾಗಿ ಕುಳಿತಿರುವದನ್ನು ಕರ್ಮತ್ಯಾಗವೆಂದು ಯಾರೂ ಕರೆಯುವದಿಲ್ಲ. ಮರಗಳೂ ಬೆಟ್ಟಗಳೂ ಸುಮ್ಮನೆ ಇದ್ದಲ್ಲಿರುತ್ತವೆಯಷ್ಟೆ; ಆದರೆ ಅವು ಕರ್ಮತ್ಯಾಗವನ್ನು ಮಾಡಿವೆ ಎಂದು ಯಾರೂ ತಿಳಿಯುವದಿಲ್ಲ. ಸ್ಥಾವರಪ್ರಾಣಿಗಳಿಗೆ ಚಲನೆಯೇ ಇಲ್ಲದ್ದರಿಂದ ಅವು ಚಲನತ್ಯಾಗವನ್ನು ಮಾಡಿರುವವೆಂದು ಭಾವಿಸುವದು ಹೇಗೆ ತಪ್ಪಾಗುವದೋ ಹಾಗೆಯೇ ನಿದ್ರೆ, ಆಲಸ್ಯ, ರೋಗ, ಇವುಗಳಲ್ಲೊಂದರಿಂದ ಅಥವಾ ಮರಣದಿಂದ ಸುಮ್ಮನೆ ಇದ್ದಲ್ಲಿರುವ ಮನುಷ್ಯನನ್ನು ನಾವು ಕರ್ಮತ್ಯಾಗಿ ಎಂದು ಭಾವಿಸುವದು ತಪ್ಪಾಗುವದು. ಕರ್ಮಕ್ಕೆಲ್ಲ ಕಾಮವೇ ಕಾರಣವಾಗಿರುತ್ತದೆ; ಕಾಮಕ್ಕೆ ಅಜ್ಞಾನವೇ ಕಾರಣವಾಗಿರುತ್ತದೆ-ಎಂದು ವೇದಾಂತಿಗಳು ನಿಶ್ಚಯಿಸಿರು ತ್ತಾರೆ. ಆದ್ದರಿಂದ ನಿಜವಾದ ಕರ್ಮತ್ಯಾಗವೆಂದರೆ ಕಾಮವನ್ನೂ ಅದರ ಕಾರಣ ವಾದ ಅಜ್ಞಾನವನ್ನೂ ಕಳೆದುಕೊಳ್ಳುವದೇ ಆಗಿರುತ್ತದೆ. ಜನರು ಸುಮ್ಮನೆ ಕುಳಿತಿರು ವಾಗಲೂ ಅವರ ಶರೀರದಲ್ಲಿಯೂ ಮನಸ್ಸಿನಲ್ಲಿಯೂ ಎಷ್ಟೋ ವ್ಯಾಪಾರಗಳು ಅನಿವಾರ್ಯವಾಗಿ ನಡೆಯುತ್ತಲೇ ಇರುವವು. ಆದ್ದರಿಂದ ಸುಮ್ಮನೆ ಕುಳಿತಿದ್ದೇನೆ ಎಂಬುದು ಬರಿಯ ಉಪಚಾರದ ಮಾತಾಯಿತು. ಸುಮ್ಮನೆ ಕುಳಿತಿರುವದೆಂಬ ಸಂಕಲ್ಪವೂ ಕಾಮವೂ ಇರುವವನಿಗೆ ಹಾಗೆ ಸುಮ್ಮನೆ ಕುಳಿತಿರುವದೆಂಬುದೂ ಒಂದು ಬಗೆಯ ಕರ್ಮವೇ ಎಂಬ ಗುಟ್ಟು ತಿಳಿದಿರುವದೇ ಇಲ್ಲ.

ಆದ್ದರಿಂದ ನಿಜವಾದ ಕರ್ಮತ್ಯಾಗವೆಂದರೆ ಸಂಕಲ್ಪಪೂರ್ವಕವಾಗಿ ಈ ಸಾಧನ ದಿಂದ ಈ ಸಾಧ್ಯವನ್ನು ಸಂಪಾದಿಸುವೆನೆಂಬ ಅಭಿಮಾನವನ್ನು ಬಿಡುವದೇ ಆಗಿರುತ್ತದೆ. ಈ ಸಂಕಲ್ಪವನ್ನು ಪೂರ್ಣವಾಗಿ ಬಿಡುವದಕ್ಕೆ ಆಗದೆ ಇರುವವರು ಅದಕ್ಕೋಸ್ಕರ ಮಾಡುವ ಪ್ರಯತ್ನವನ್ನು ಕರ್ಮತ್ಯಾಗ, ಅಥವಾ ಕರ್ಮಸಂನ್ಯಾಸ ಎಂದೇ ಕರೆಯು ತ್ತಾರೆ. ಈ ರೀತಿಯಲ್ಲಿ ಗೌಣಸಂನ್ಯಾಸವನ್ನು ಮಾಡಿರುವವರನ್ನು ನಿವೃತ್ತಿನಿಷ್ಠರು

ಎಂದು ಕರೆಯುತ್ತಾರೆ. ಲೌಕಿಕ ಜನರೂ ಶಾಸ್ತ್ರೀಯಕರ್ಮಗಳನ್ನು ಮಾಡುವವರೂ ಪ್ರವೃತ್ತಿನಿಷ್ಠರು; ಏಕೆಂದರೆ ಅವರು ಯಾವದಾದರೊಂದು ಫಲಕ್ಕಾಗಿ ಕರ್ಮವನ್ನು ಮಾಡುತ್ತಿರುತ್ತಾರೆ. ಆದರೆ ಯಾವ ಫಲವನ್ನೂ ಕೋರದೆ ಈಶ್ವರಾರ್ಪಣಬುದ್ಧಿ ಯಿಂದ ಕರ್ಮವನ್ನು ಮಾಡುವ ಕರ್ಮಯೋಗಿಗಳೂ ಕರ್ಮಸಂನ್ಯಾಸವನ್ನು ಮಾಡಿ ಯಾವ ಶಾಸ್ತ್ರೀಯಕರ್ಮಗಳನ್ನೂ ಇಹಪರಲೋಕಗಳಲ್ಲಾಗಬಹುದಾದ ಫಲಗಳಿ ಗಾಗಿ ಮಾಡದೆ ತತ್ತ್ವಜ್ಞಾನಕ್ಕಾಗಿ ಹವಣಿಸುವ ಪರಿವ್ರಾಜಕರೂ ಈ ಅರ್ಥದಲ್ಲಿ ನಿವೃತ್ತಿನಿಷ್ಠರೆನಿಸುವರು; ಏಕೆಂದರೆ ಅವರು ಕರ್ಮದ ಕಟ್ಟನ್ನು ಕಳಚುವ ಜ್ಞಾನಕ್ಕಾಗಿ ಪ್ರಯತ್ನಿಸುತ್ತಿರುತ್ತಾರೆ. ಕರ್ಮದ ಬಂಧದಿಂದ ಬಿಡುಗಡೆಯನ್ನು ಹೊಂದುವದಕ್ಕಾಗಿ ಪ್ರಯತ್ನಿಸುತ್ತಿರುವದರಿಂದ ಅವರನ್ನು **ಮುಮುಕ್ಷುಗಳು** ಎಂದು ಕರೆಯುವರು.

ಮುಮುಕ್ಷುಗಳಾಗಿರುವ ಪರಿವ್ರಾಜಕರು ಇತರಕರ್ಮಗಳನ್ನು ತ್ಯಾಗಮಾಡಿದ ಬಳಿಕ ಅನುಸರಿಸಬೇಕಾದ ಸಾಧನಚತುಷ್ಟಯವನ್ನು ಕಳೆದ ಸಂದೇಶದಲ್ಲಿ ಆಗಲೆ ತಿಳಿಸಿರುತ್ತೇನೆ. ಈ ನಾಲ್ಕು ಸಾಧನಗಳನ್ನು ಅಳವಡಿಸಿಕೊಂಡಿರುವ ಮುಮುಕ್ಷುವು ಸದ್ಗುರುವಿನ ಬಳಿಗೆ ಹೋಗಿ ತತ್ತ್ವಜ್ಞಾನವನ್ನು ಸಂಪಾದಿಸಿಕೊಳ್ಳುವದಕ್ಕೆ ಪ್ರಯತ್ನಿಸು ವನೆಂದೂ ಅಲ್ಲಿ ತಿಳಿಸಿರುತ್ತೇನೆ. ಸಚ್ಚಿದಾನಂದಸ್ವರೂಪವಾದ ಬ್ರಹ್ಮವನ್ನು ತನ್ನ ಸ್ವರೂಪವೆಂದೇ ಮನಗಂಡು ಅದರಲ್ಲಿಯೇ ವಿಶ್ರಾಂತಿಯನ್ನು ಹೊಂದಿರುವ ಬ್ರಹ್ಮನಿಷ್ಠನೇ ಸದ್ಗುರುವು. ಆತನ ಉಪದೇಶದಿಂದಲೇ ನಿಷ್ಕ್ರಿಯಾತ್ಮ ಸ್ವರೂಪವಾದ ಬ್ರಹ್ಮಜ್ಞಾನವು ಮುಮುಕ್ಷುವಿಗೆ ಆಗಬೇಕಾಗಿರುತ್ತದೆ.

ಸಂನ್ಯಾಸವೆಂದರೆ ಸಕಲವೇದಗಳನ್ನೂ ಸಕಲವೈದಿಕಕರ್ಮಗಳನ್ನೂ ಸಾಧ್ಯಸಾಧನ ಗಳಲ್ಲಿ ವಿರಕ್ತನಾಗಿ ತ್ಯಜಿಸುವದು ಎಂದು ಮತ್ತೆಮತ್ತೆ ಹೇಳಿಕೊಂಡು ಬಂದಿರುವೆ ನಷ್ಟೆ. ಇಲ್ಲಿ ವೇದತ್ಯಾಗವೆಂದರೆ ವೇದಾಧ್ಯಯನರೂಪವಾದ ಕರ್ಮದ ತ್ಯಾಗವೆಂದು ಅರ್ಥವೇ ಹೊರತು ಪರಮಾರ್ಥವಾಗಿರುವ ಬ್ರಹ್ಮವನ್ನು ತಿಳಿಸುವ ವೇದದ ಅರ್ಥವನ್ನೂ ವಿಚಾರಮಾಡುವದನ್ನೂ ತ್ಯಾಗಮಾಡಬೇಕೆಂದಿಲ್ಲ. ವೈದಿಕ ಕರ್ಮ ತ್ಯಾಗವನ್ನು ಮಾಡುವ ಮುಮುಕ್ಷುವು ಅದರ ಗುರುತಾಗಿ-ಉಪವೀತ, ನಿವೀತ, ಪ್ರಾಚೀನಾವೀತ ಎಂಬ ರೂಪದಿಂದ ಜನಿವಾರವನ್ನು ಧರಿಸಿಯೇ ಕರ್ಮಗಳನ್ನು ಮಾಡಬೇಕಾಗಿರುವದರಿಂದ-ಜುಟ್ಟು, ಜನಿವಾರ ಎರಡನ್ನೂ ತೆಗೆದುಹಾಕಿಬಿಟ್ಟಿರು ತ್ತಾನೆ. ಗೃಹಸ್ಥನಂತೆ ಉಡುಪನ್ನು ಧರಿಸದೆ ಕಾಷಾಯಾದಿಗಳನ್ನು ಧರಿಸಿರುತ್ತಾನೆ. ಇದೆಲ್ಲ ವೈದಿಕಕರ್ಮವನ್ನು ಬಿಟ್ಟಿದ್ದಕ್ಕೇ ಹೊರಗುರುತಾಗಿರುವದರಿಂದ, ಯಾರಿಗೆ ವೇದಾಭ್ಯಾಸವಾಗಲಿ ವೈದಿಕಕರ್ಮವಾಗಲಿ ಇರುವದಿಲ್ಲವೋ ಅವರಿಗೆ ವೈದಿಕವಾದ ಈ ಸಂನ್ಯಾಸದಲ್ಲಿಯೂ ಅಧಿಕಾರವಿಲ್ಲವೆಂಬುದು ಸ್ಪಷ್ಟವಾಗಿರುತ್ತದೆ. ವೇದಾಧಿಕಾರವಿಲ್ಲದ

ಮುಮುಕ್ಷುಗಳೂ ಸಾಧ್ಯಸಾಧನಗಳ ಸಂಕಲ್ಪವನ್ನು ಬಿಡುವ ರೂಪದ ಮಾನಸ ಸಂನ್ಯಾಸವನ್ನು ಅವಶ್ಯವಾಗಿ ಮಾಡಬಹುದು. ಆದರೆ ಪ್ರಕೃತದಲ್ಲಿ ನಾವು ಅವರ ವಿಷಯವನ್ನು ಕುರಿತು ಮಾತಾಡುತ್ತಿಲ್ಲವೆಂಬುದನ್ನು ಇಲ್ಲಿ ಲಕ್ಷ್ಯವಿಡಬೇಕು.

ಕೆಲವು ಸ್ಮೃತಿಗಳಲ್ಲಿ ವೇದವನ್ನು ಸಂನ್ಯಾಸಮಾಡಿದವನು ಶೂದ್ರನಾಗುವನೆಂದು ಹೇಳಿದೆ; ಆದರೆ ಯತಿಯು ವೇದ, ಯಜ್ಞೋಪವೀತ-ಮುಂತಾದವುಗಳನ್ನೆಲ್ಲ ಬಿಟ್ಟುಬಿಡಬೇಕೆಂದು ಸ್ಪಷ್ಟವಾಗಿ ಹೇಳುವ ಶಾಸ್ತ್ರವಚನಗಳೂ ಬೇರೆ ಇವೆ. ಇವೆರಡಕ್ಕೂ ಏಕವಾಕ್ಯತೆ ಹೇಗೆಂದರೆ, ವೇದದಿಂದಲೇ ಸಕಲಪುರುಷಾರ್ಥಗಳೂ ದೊರೆಯುವದರಿಂದ ಶ್ರೇಯಸ್ಸನ್ನು ಬಯಸುವವನು ಅದನ್ನು ಬಿಟ್ಟು ನಡೆಯ ಬಾರದು-ಎಂಬುದು ಸಂನ್ಯಾಸಮಾಡಬಾರದೆಂಬ ವಚನದ ಅಭಿಪ್ರಾಯವು. ಸಾಧ್ಯ ಸಾಧನಗಳನ್ನು ಬಯಸದೆ ಇರುವ ಪರಿವ್ರಾಜಕನು ಕರ್ಮಪರವಾದ ವೇದವನ್ನೂ ಕರ್ಮಸಾಧನವಾದ ಯಜ್ಞೋಪವೀತಾದಿಗಳನ್ನೂ ಬಿಟ್ಟು ವೇದದ ಮುಖ್ಯಗುರಿ ಯಾದ ಬ್ರಹ್ಮವನ್ನೇ ಅರಿತುಕೊಳ್ಳುವದಕ್ಕೆ ಬಯಸಬೇಕು-ಎಂಬುದು ಸಂನ್ಯಾಸ ಮಾಡಬೇಕೆಂಬ ವಚನದ ಅಭಿಪ್ರಾಯವು. ಪ್ರಕೃತದಲ್ಲಿ ನಾವು ಹೇಳುತ್ತಿರುವ ಪರಿವ್ರಾಜಕರು ಕರ್ಮಪರವಾದ ವೇದವನ್ನು ಬಿಟ್ಟರೂ ಬ್ರಹ್ಮವನ್ನು ತಿಳಿಸುವ ವೇದಾಂತಗಳ ವಿಚಾರಕ್ಕಾಗಿಯೇ ಅದನ್ನು ಬಿಟ್ಟಿರುತ್ತಾರೆಂಬುದನ್ನು ಮನಸ್ಸಿಗೆ ತಂದುಕೊಂಡರೆ ಇಲ್ಲಿ ಶಾಸ್ತ್ರವಚನಗಳಿಗೆ ಯಾವ ವಿರೋಧವೂ ಉಂಟಾಗುವದಿಲ್ಲ.

ವೇದದಲ್ಲಿ ಬ್ರಹ್ಮವನ್ನು ತಿಳಿಸಿರುವದರಿಂದ ವೇದಕ್ಕೂ ಬ್ರಹ್ಮವೆಂದೇ ಹೆಸರು. ಬ್ರಹ್ಮವೆಂದರೆ ಎಲ್ಲಕ್ಕೂ ಮಿಗಿಲಾದದ್ದು. ಪರಮಾರ್ಥವಾಗಿರುವ ಪರಮಾತ್ಮನು ಎಲ್ಲಕ್ಕಿಂತಲೂ ಮಿಗಿಲಾದವನಾದ್ದರಿಂದ ಅವನನ್ನು ಬ್ರಹ್ಮ ಎಂದು ಉಪನಿಷತ್ತು ಗಳಲ್ಲಿ ಕರೆದಿರುತ್ತದೆ. ಆ ಬ್ರಹ್ಮವನ್ನು ಪ್ರತಿಪಾದಿಸುತ್ತಿರುವದರಿಂದ ವೇದವೂ ಬ್ರಹ್ಮವಾಯಿತು. ಪೂರ್ವದಲ್ಲಿ ಪ್ರಜಾಪತಿಯು ಎಲ್ಲಾ ಲೋಕಗಳ ಸಾರವು ಯಾವದೆಂದು ಆಲೋಚನೆಮಾಡುತ್ತಿರುವಲ್ಲಿ ಮೂರು ವೇದಗಳೇ ಎಲ್ಲದರ ಸಾರವಾಗಿ ಕಂಡುಬಂದವಂತೆ; ಮತ್ತೆ ಆ ವೇದಗಳ ಸಾರವನ್ನು ಕುರಿತು ಆಲೋಚಿಸಲಾಗಿ ಭೂರ್ಭುವಃಸುವಃ ಎಂಬ ವ್ಯಾಹೃತಿಗಳು ಸಾರವಾಗಿ ಕಂಡು ಬಂದವಂತೆ. ಆ ವ್ಯಾಹೃತಿಗಳಿಗೆ ಸಾರವು ಯಾವದೆಂದು ಆಲೋಚಿಸಲಾಗಿ ಓಂಕಾರವು ಅವುಗಳ ಸಾರವಾಗಿ ಕಂಡುಬಂದಿತಂತೆ. ಹೀಗೆಂದು ಒಂದು ಉಪ ನಿಷತ್ತಿನಲ್ಲಿ ಹೇಳಿದೆ. ಸರ್ವವೇದಗಳನ್ನೂ ಸರ್ವಕರ್ಮಗಳನ್ನೂ ಸಂನ್ಯಾಸ ಮಾಡಿರುವ ಪರಿವ್ರಾಜಕರು ಸಕಲಸಾರವಾದ ಓಂಕಾರವನ್ನು ಜಪಕ್ಕಾಗಿಯೂ ಉಪಾಸನೆಗಾಗಿಯೂ ಇಟ್ಟುಕೊಂಡಿರುತ್ತಾರೆ. ಈ ದೃಷ್ಟಿಯಿಂದ ನೋಡಿದರೆ ಅವರು ಲೋಕವೇದಗಳ ಸಾರವನ್ನೇ ಇಟ್ಟುಕೊಂಡಿರುತ್ತಾರೆ ಎಂದು ಹೇಳಬಹುದಾಗುತ್ತದೆ.

ಓಂಕಾರವು ಪರಮಾತ್ಮನಿಗೆ ಅತ್ಯಂತಪ್ರಿಯವಾದ ನಾಮವು; ಹೇಗೆ ದೊಡ್ಡವರು ಅವರಿಗೆ ಪ್ರಿಯವಾದ ನಾಮದಿಂದ ತಮ್ಮನ್ನು ಸಂಬೋಧಿಸಿದಾಗ ಪ್ರಸನ್ನರಾಗುತ್ತಾರೋ ಹಾಗೆಯೇ ಪರಮಾತ್ಮನು ಓಂಕಾರನಾಮದಿಂದ ಕರೆದಾಗ ಉಪಾಸಕರಲ್ಲಿ ಅತ್ಯಂತಪ್ರಸನ್ನನಾಗುವನು. ಪರಮಹಂಸ ಸಂನ್ಯಾಸವನ್ನು ಸ್ವೀಕರಿಸಿದ ಮುಮುಕ್ಷುಗಳು ಮಿಕ್ಕೆಲ್ಲವನ್ನೂ ಬಿಟ್ಟು ಪರಮಾತ್ಮನನ್ನೇ ಅನನ್ಯಭಕ್ತಿಯಿಂದ ಭಜಿಸುತ್ತಾರೆ. ಆದ್ದರಿಂದ ಈ ಓಂಕಾರವನ್ನು ಎಡೆಬಿಡದೆ ಜಪಿಸುವ ಪರಮಹಂಸರ ವಿಷಯದಲ್ಲಿ ಪರಮಾತ್ಮನು ಪ್ರಸನ್ನನಾಗಿ ಅವರಿಗೆ ತನ್ನ ಸ್ವರೂಪದ ತತ್ತ್ವವನ್ನು ತಿಳಿಯುವಂತೆ ಅನುಗ್ರಹಿಸುತ್ತಾನೆ.

ಕೆಲವರು ಯತಿಗಳು ಓಂಕಾರವನ್ನು ಪರಮಾತ್ಮನ ನಾಮವೆಂದು ತಿಳಿಯುವದರ ಬದಲು ಅದೇ ಆತನ ಪ್ರತೀಕವೆಂದು ಭಾವಿಸಿ ಉಪಾಸನೆಮಾಡುತ್ತಿರುತ್ತಾರೆ. ಸಾಲಗ್ರಾಮಶಿಲೆಯನ್ನು ವಿಷ್ಣುವೆಂದೂ ಆಯಾ ಪ್ರತಿಮೆಯನ್ನು ಆಯಾ ದೇವತೆಗಳೆಂದೂ ಭಾವಿಸುತ್ತಾ ಅರ್ಚನಾದಿಗಳಿಂದ ಧ್ಯಾನಮಾಡುವವರಿಗೆ ಆಯಾ ದೇವತೆಯು ಪ್ರಸನ್ನವಾಗುವಂತೆಯೇ ಓಂಕಾರವೆಂಬ ಶಬ್ದವನ್ನೇ ಬ್ರಹ್ಮವೆಂದು ಭಾವಿಸಿ ಉಪಾಸನೆಮಾಡುವವರಿಗೂ ಪರಮಾತ್ಮನು ಪ್ರಸನ್ನನಾಗುವನು; ತನ್ನ ತತ್ತ್ವದ ಅರಿವನ್ನೂ ಅವರಿಗೆ ಅನುಗ್ರಹಿಸುವನು. ಹೀಗೆಂದು ವೇದದಲ್ಲಿಯೇ ಹೇಳಿರುತ್ತದೆ.

ಇಲ್ಲಿಯೂ ಓಂಕಾರದ ಜಪವೂ ಉಪಾಸನೆಯೂ ವೇದಾಧಿಕಾರವುಳ್ಳವರೇ ಮಾಡತಕ್ಕವುಗಳೆಂಬುದನ್ನು ಮರೆಯಬಾರದು. ಏಕೆಂದರೆ ಓಂಕಾರವು ವೇದದ ಆದಿಯಲ್ಲಿಯೂ ಅಂತದಲ್ಲಿಯೂ ಉಚ್ಚರಿಸತಕ್ಕ ಶಬ್ದವಾಗಿರುತ್ತದೆ. ಅದು ವೇದದ ಸಾರವಾಗಿದೆ, ಪರಮಾತ್ಮನ ನಾಮವೂ ಪ್ರತೀಕವೂ ಆಗಿರುತ್ತದೆ-ಎಂಬುದನ್ನು ವೇದದಲ್ಲಿ ಮಾತ್ರವೇ ಹೇಳಿರುವದರಿಂದ ವೇದೋಕ್ತವಾದ ರೀತಿಯಿಂದ ಉಪನೀತರಾಗಿ ಸಂನ್ಯಾಸವನ್ನು ಸ್ವೀಕರಿಸಿದವರಿಗೇ ಈ ಉಪಾಸನೆಯಲ್ಲಿ ಅಧಿಕಾರವಿರುತ್ತದೆ ಎಂಬುದು ಸ್ಪಷ್ಟವಾಗಿರುತ್ತದೆ. ಆದರೆ ಇಷ್ಟು ಮಾತ್ರದಿಂದ ವೇದದಲ್ಲಿ ಅಧಿಕಾರವಿಲ್ಲವೆಂದು ಎಂದಿಗೂ ತಿಳಿಯಬಾರದು. ಪರಮಾತ್ಮನು ಧರ್ಮವನ್ನು ಉದ್ಧಾರಮಾಡುವದಕ್ಕೆಂದು ಮತ್ತೆಮತ್ತೆ ಅವತರಿಸಿ ಬೇರೆಬೇರೆಯ ಲೀಲಾರೂಪಗಳನ್ನೂ ನಾಮಗಳನ್ನೂ ಪ್ರಕಟಿಸಿರುತ್ತಾನೆ. ಅರೂಪನೂ ಅನಾಮಕನೂ ಆಗಿರುವ ಪರಮಾತ್ಮನಿಗೆ ಓಂಕಾರವೆಂಬ ನಾಮವೂ ಓಂಕಾರವೆಂಬ ಶಬ್ದದ ರೂಪವೂ ಇರುವಂತೆಯೇ ರಾಮ, ಕೃಷ್ಣ, ಶಿವ, ಗೌರಿ, ಲಕ್ಷ್ಮಿ-ಮುಂತಾದ ನಾಮರೂಪಗಳೂ ಇರುತ್ತವೆ. ವೇದಾಧಿಕಾರಿಗಳಲ್ಲದವರೂ ಭಗವಂತನ ಈ ನಾಮರೂಪಗಳನ್ನು ಉಪಾಸನೆಮಾಡಿ ಧನ್ಯರಾಗಬಹುದೆಂದು ಪುರಾಣಗಳಲ್ಲಿ ವರ್ಣಿತವಾಗಿರುತ್ತದೆ.

ಭಾವನಾಬಲದಿಂದ ಆಯಾ ನಾಮವನ್ನೇ ಓಂಕಾರವಾಗಿ ಮಾಡಿಕೊಳ್ಳುವದಕ್ಕೂ ಶಕ್ಯವಿದೆ. ಉದಾಹರಣೆಗೆ ರಾಮನಾಮವನ್ನು ರಾಮನಿಗಿಂತ ಅಭಿನ್ನವೆಂದೂ ಅದೇ ಎಲ್ಲವೂ ಆಗಿರುತ್ತದೆಯೆಂದೂ ವರ್ಣಿಸಿರುವ ಈ ಪದವನ್ನು ಮನನಮಾಡಿರಿ:

**ರಾಗ : ಮೋಹನ**

**ರಾಮನ ನಾಮವೆ ಎಲ್ಲವಿದು । ರಾಮನ ಬಿಟ್ಟರೆ ಜಗವಿರದು ॥ಪ॥**

**ರಾಮನಾಮಗಳ ಭೇದವನುಡುಗಿಸೆ । ರಾಮತತ್ತ್ವವೇ ಉಳಿಯುವದು ॥ಅನು॥**

**1.** **ರಾಮನಾಮವೇ ಓಂಕಾರ । ರಾಮನೆ ಬ್ರಹ್ಮವು ಸಾಕಾರ ।**
**ರಾಮನೆ ನಾಮವು ನಾಮವೆ ರಾಮನು । ರಾಮತತ್ತ್ವ ವಿಗತಾಕಾರ ॥**

**2.** **ರಾಮನಾಮದೀ ಗಾತ್ರಗಳು । ಓಮೆಂಬುದರಾ ಮಾತ್ರೆಗಳು ।**
**ನಾಮವಮಾತ್ರವು ರಾಮತತ್ತ್ವವೆಂದೇ ಮುನಿಗಳ ಸೂತ್ರಗಳು ॥**

**3.** **ರಾಮರಾಮಾನುಜಭೇದಗಳು । ರಾಮನ ನಾಲ್ಕೂ ಪಾದಗಳು ।**
**ರಾಮನ ಪಾದಗಳ್ನಾಮದ ಮಾತ್ರೆಗಳೇ ಮೊರೆಯುತ್ತಿವೆ ವೇದಗಳು ॥**

**4.** **ರಾಮನು ತುರ್ಯನು ಪರಮಾತ್ಮ । ನಾಮವಮಾತ್ರವು ಅವನಾತ್ಮ ।**
**ಈ ಮಹಿಯೊಳಗಿದನರಿದವ ಪರತರರಾಮನ ಹೊಗುವನು ರಾಮಾತ್ಮ ॥**

**5.** **ರಾಮನ ನಾಮವನುಚ್ಚರಿಸಿ । ರಾಮಬುದ್ಧಿಯನು ಎಚ್ಚರಿಸಿ ।**
**ನಾಮಪ್ರಣವದ ಪಾರಾಯಣಕೀ ರಾಮಾಯಣದಲಿ ಸಂಚರಿಸಿ ॥**

**6.** **ರಾಮನೆ ಗುರು ರಾಮನೆ ಶಿಷ್ಯ । ರಾಮನ ನಾಮವು ಅವಿನಾಶ್ಯ ।**
**ರಾಮನೆ ಅದ್ವಯಸಚ್ಚಿದಾನಂದನು ರಾಮನ ನಾಮವೇ ಅನ್ವೇಷ್ಯ ॥**

ಮೇಲಿನ ಪದದಲ್ಲಿ ರಾಮನೆಂಬ ನಾಮವೂ ರಾಮನೂ ಒಂದೇ ಎಂದು ಅರಿತು ರಾಮಾತ್ಮನೇ ಆಗಬಹುದೆಂಬ ಉಪನಿಷತ್ತಿನ ಪರಮಸಿದ್ಧಾಂತವನ್ನೇ ಹೇಳಿರುತ್ತದೆ.

ಇರಲಿ. ಓಂಕಾರವು ಹೀಗೆ ಬ್ರಹ್ಮದ ನಾಮವೂ ಪ್ರತೀಕವೂ ಆಗಿರುವದರಿಂದ ಅದನ್ನು ಏಕಾಕ್ಷರದ ಬ್ರಹ್ಮ ಎಂದು ಶ್ರುತಿಸ್ಮೃತಿಗಳಲ್ಲಿ ಕರೆದಿರುತ್ತದೆ. ಬ್ರಹ್ಮತತ್ತ್ವವನ್ನು ಅರಿತುಕೊಳ್ಳಬೇಕೆನ್ನುವ ಸಂನ್ಯಾಸಿಮುಮುಕ್ಷುಗಳು ಓಂಕಾರವೆಂಬ ಶಬ್ದರೂಪವನ್ನೇ ಬ್ರಹ್ಮವೆಂದು ಪೂಜ್ಯಬುದ್ಧಿಯಿಂದ ಕಾಣಬೇಕು; ಅಥವಾ ಓಂಕಾರವೆಂಬ ನಾಮವೇ ಸರ್ವವೂ ಆಗಿರುವ ಪರಬ್ರಹ್ಮದ ಹೆಸರೆಂದು ತಿಳಿದು ಅದನ್ನು ಪೂಜ್ಯಬುದ್ಧಿಯಿಂದ ಜಪಿಸುತ್ತಿರಬೇಕು. ಪರಮಾತ್ಮನಲ್ಲಿ ನಿಜವಾಗಿ ಯಾವ ನಾಮವೂ ಇಲ್ಲ, ಯಾವ ರೂಪವೂ ಇಲ್ಲ; ಆದ್ದರಿಂದಲೇ ಅವನ ತತ್ತ್ವವನ್ನು

ನೇತಿ ನೇತಿ (ಹೀಗಲ್ಲ, ಹೀಗಲ್ಲ)–ಎಂದು ವಿಶೇಷನಿರಾಕರಣಪೂರ್ವಕವಾಗಿಯೇ ವೇದದಲ್ಲಿ ಹೇಳಿರುತ್ತದೆ. ಆದರೂ ಬ್ರಹ್ಮವು ಸರ್ವಾತ್ಮಕವಾಗಿರುವಂತೆ ಅಕ್ಷರ ರೂಪವಾದ ಓಂಕಾರಬ್ರಹ್ಮವು ಸರ್ವಶಬ್ದಗಳ ರೂಪದಲ್ಲಿಯೂ ತೋರುತ್ತಿದೆ ಎಂಬ ಉತ್ತಮಭಾವನೆಯಿಂದ ಅದನ್ನು ಜಪಿಸುತ್ತಿರುವ ಮುಮುಕ್ಷುಗಳಿಗೆ ಸದ್ಗುರುವಿನ ಬೋಧೆಯಿಂದ ನಾಮರೂಪರಹಿತವಾದ ಪರಬ್ರಹ್ಮವೆಂಬ ಅಕ್ಷರದ ಅಥವಾ ನಾಶರಹಿತತತ್ತ್ವದ ಅರಿವಾಗುವದು.

## 36. ಜ್ಞಾನಾರ್ಜನೆ–ಸದ್ಯೋಮುಕ್ತಿ

ಪರಮಹಂಸಪಾರಿವ್ರಾಜ್ಯವನ್ನು ಪಡೆಯುವವರನ್ನು ಎರಡು ವರ್ಗಗಳಾಗಿ ವಿಂಗಡಿಸಬಹುದು. ಯಾವನಿಗೆ ಗೃಹಸ್ಥನಾಗಿರುವಾಗಲೇ ಪೂರ್ವಪುಣ್ಯಪರಿಪಾಕದಿಂದ ಚಿತ್ತಶುದ್ಧಿಯೂ ಜ್ಞಾನವೂ ಉಂಟಾದದ್ದರಿಂದ ಮುಂದೆ ಯಾವ ಕರ್ಮದಿಂದಲೂ ಯಾವ ಪ್ರಯೋಜನವೂ ತನಗೆ ಆಗಬೇಕಾದದ್ದಿಲ್ಲವೆಂದು ತೋರಿಬಂದಿರುವದೋ ಅವನು ಗೃಹಸ್ಥನಿಗೆ ವಿಹಿತವಾಗಿರುವ ಎಲ್ಲಾ ಕರ್ಮಗಳನ್ನು ಅವಕ್ಕೆ ಸಾಧನವಾಗಿರುವ ಯಜ್ಞೋಪವೀತಾದಿಗಳನ್ನೂ ಪರಿತ್ಯಾಗ ಮಾಡುವನೆಂಬುದು ಸ್ವಾಭಾವಿಕವಾಗಿದೆ. ವೇದಕಾಲದಲ್ಲಿ ಸುಪ್ರಸಿದ್ಧರಾದ ಯಾಜ್ಞವಲ್ಕ್ಯರು ಇದಕ್ಕೆ ಉದಾಹರಣೆ; ಅವರಿಗೆ ಗಾರ್ಹಸ್ಥ್ಯದಲ್ಲಿಯೇ ಸಮ್ಯಗ್ದರ್ಶನವುಂಟಾಗಿತ್ತಾದರೂ ಅವರು ಬ್ರಹ್ಮದಲ್ಲಿಯೇ ವಿಶ್ರಾಂತಿಯನ್ನು ಪಡೆದುಕೊಳ್ಳುವದಕ್ಕೆಂದು ಸರ್ವಕರ್ಮಸಂನ್ಯಾಸವನ್ನು ಮಾಡಿದರು. ಆದರೆ ಯಾವನಿಗೆ ತತ್ತ್ವಜ್ಞಾನವು ಉಂಟಾಗದಿದ್ದರೂ ಈ ಲೋಕದ ಮತ್ತು ಪರಲೋಕದ ಭೋಗಗಳಲ್ಲಿ ಸಂಪೂರ್ಣವಾಗಿ ವಿರಕ್ತಿಯುಂಟಾಗಿರುವದೋ ಮತ್ತು ಯಾವನಿಗೆ ಮೋಕ್ಷವು ನಿತ್ಯಾನಂದರೂಪವಾಗಿರುವದರಿಂದ ಯಾವ ಸಾಧನದಿಂದಲೂ ಪಡೆದುಕೊಳ್ಳತಕ್ಕದ್ದಲ್ಲ ಎಂಬ ಮನೋನಿಶ್ಚಯವುಂಟಾಗಿರುವದೋ ಅಂಥ ಮುಮುಕ್ಷುವು ತತ್ತ್ವಜ್ಞಾನವನ್ನು ಸಂಪಾದಿಸಿಕೊಳ್ಳುವದಕ್ಕೆಂದೇ ಸರ್ವಕರ್ಮಸಂನ್ಯಾಸವನ್ನು ಮಾಡಿ, ತನಗೆ ಜ್ಞಾನವನ್ನು ಉಪದೇಶಿಸಬಲ್ಲ ಸದ್ಗುರುವನ್ನು ಹುಡುಕಿಕೊಂಡು ಹೊರಡುತ್ತಾನೆ–ಎಂದು ಹಿಂದೆ ಕೆಲವು ಲೇಖನಗಳಲ್ಲಿ ತಿಳಿಸಿದೆ.

ಇಂಥ ಉತ್ತಮಾಧಿಕಾರಿಗಳು ಈ ಕಾಲದಲ್ಲಿ ಸಿಕ್ಕುವದು ಕಷ್ಟವೇ ಸರಿ. ವೇದವನ್ನು ಸರಿಯಾಗಿ ಅಧ್ಯಯನವನ್ನು ಮಾಡಿ ವೇದೋಕ್ತಕರ್ಮಗಳನ್ನೂ ಅನುಷ್ಠಾನಮಾಡಿ ಚಿತ್ತಶುದ್ಧಿಯನ್ನೂ ವೈರಾಗ್ಯವನ್ನೂ ಪಡೆದುಕೊಂಡಿರುವ ಮುಮುಕ್ಷುಗಳು ಬಹುವಿರಳವೆಂಬುದು ನಿಶ್ಚಯ. ಆದರೆ ಅಂಥ ಮುಮುಕ್ಷುಗಳು ಸದ್ಗುರುವಿನ ಸೇವೆಯಿಂದ ತತ್ತ್ವಜ್ಞಾನವನ್ನು ಪಡೆಯುವದಕ್ಕೆ ಏನು ಮಾಡುವ

ರೆಂಬುದನ್ನು ಅರಿತುಕೊಳ್ಳುವದರಿಂದ ಮಂದಮಧ್ಯಮಾಧಿಕಾರಿಗಳಿಗೂ ಪ್ರಯೋಜನವಿದೆ. ಸಂನ್ಯಾಸದ ಉದ್ದೇಶವೇನೆಂಬುದನ್ನು ಕೂಡ ವಿಚಾರಿಸದೆ ಈಗಿನ ಕಾಲದಲ್ಲಿ ಎಷ್ಟೋ ಜನರು ಆಶ್ರಮಸ್ವೀಕಾರವನ್ನು ಮಾಡಿರುತ್ತಾರೆ. ಅಂಥವರು ಸಂನ್ಯಾಸಿಗಳ ಧರ್ಮವೇನು?– ಎಂಬುದನ್ನು ತಿಳಿದುಕೊಂಡು ಇನ್ನು ಮುಂದಾದರೂ ಸರಿಯಾದ ಹಾದಿಯನ್ನು ತಿಳಿಯಬಹುದಾಗುವದು.

ಸಂನ್ಯಾಸವೆಂದರೆ ಸರ್ವಸಾಧನಗಳನ್ನೂ ಬಿಟ್ಟು ಪರಮಾತ್ಮನ ತತ್ತ್ವದ ಜ್ಞಾನಕ್ಕಾಗಿಯೇ ಹವಣಿಸುವದಾದ್ದರಿಂದ ಪರಮಹಂಸರಿಗೆ ಕೆಲವು ಕರ್ಮಗಳನ್ನೂ ಆಚಾರಗಳನ್ನೂ ವಿಧಿಸಿ ಅಷ್ಟರಿಂದಲೇ ಸಂನ್ಯಾಸದ ಉದ್ದೇಶವು ನೆರವೇರಿತೆಂದು ಭಾವಿಸುವವರ ಮತವು ಸರಿಯಲ್ಲವೆಂದು ತಾನೇ ಸಿದ್ಧವಾಗುತ್ತದೆ. ಈಗಿನ ಕೆಲವರು ತ್ರಿಕಾಲಸ್ನಾನ, ದಂಡಸ್ನಾನತರ್ಪಣಗಳು, ಭಿಕ್ಷಾವಂದನೆ, ಯಮನಿಯಮಗಳ ಪಾಲನೆ, ದಿನಕ್ಕೆ ಇಂತಿಷ್ಟುಸಾವಿರ ಓಂಕಾರಜಪ ಇಂತಿಷ್ಟು ಮಹಾವಾಕ್ಯಜಪ–ಇವುಗಳನ್ನು ಅನುಸರಿಸುವದೇ ಸಂನ್ಯಾಸಿಗಳ ಧರ್ಮವೆಂದು ಭಾವಿಸಿರುತ್ತಾರೆ. ವಾದಗ್ರಸ್ತವಾಗಿರುವ ಈ ವಿಷಯಗಳನ್ನು ಕುರಿತು ಚರ್ಚಿಸುವದು ಈ ಲೇಖನದ ಉದ್ದೇಶವಲ್ಲವಾದ್ದರಿಂದ ಅದನ್ನು ಇಲ್ಲಿ ನಾನು ವಿಚಾರಕ್ಕೆ ತೆಗೆದುಕೊಳ್ಳುವದಿಲ್ಲ. ಆದರೆ ಓಂಕಾರಮಹಾವಾಕ್ಯಗಳನ್ನು ಕುರಿತು ಸ್ವಲ್ಪ ಬರೆಯಲೇಬೇಕಾಗಿರುವದರಿಂದ ಅದಕ್ಕಾಗಿ ಮಾತ್ರ ಈ ಆಚಾರವನ್ನು ಪರಾಮರ್ಶಿಸಿರುತ್ತೇನೆ.

ಓಂಕಾರವನ್ನು ಕುರಿತು ಹಿಂದಿನ ಸಂದೇಶದಲ್ಲಿ ಆಗಲೆ ಬರೆದಿರುತ್ತೇನೆ. ಓಂಕಾರವು ಸರ್ವವೇದಗಳ ಸಾರವಾಗಿರುವದರಿಂದ ಪರಮಹಂಸರು ಅವಶ್ಯವಾಗಿ ಅದನ್ನು ಜಪಿಸಬೇಕು. ಆದರೆ ಈ ಜಪವನ್ನು ಒಂದು ಬಗೆಯ ಕರ್ಮವೆಂದು ಭಾವಿಸಬಾರದು; ಇದು ಪರಮಾತ್ಮನ ಉಪಾಸನೆ ಎಂಬ ಭಾವನೆಯಿಂದಲೇ ಜಪವನ್ನು ಮಾಡಿದರೆ ಅದರಿಂದ ಉತ್ತಮವಾದ ಫಲವುಂಟಾಗುವದು. ಓಂಕಾರವು ಪರಮಾತ್ಮನ ಪ್ರತೀಕವೆಂದು ಉಪಾಸನೆ ಮಾಡಿದರೂ ಸತ್ಫಲವುಂಟೆಂದು ಹಿಂದೆಯೇ ಹೇಳಿರುತ್ತೇನೆ. ಅದನ್ನು ಪರಮಾತ್ಮನ ನಾಮವೆಂದು ಭಾವಿಸುವವರು ನಾಮದ ಅರ್ಥವನ್ನು ತಿಳಿದುಕೊಂಡು ಜಪಿಸಿದರೆ ಉತ್ತಮಫಲವುಂಟೆಂಬುದನ್ನು ಪ್ರಸ್ತಾಪಿಸುವದಕ್ಕೆಂದು ಮತ್ತೊಂದು ಸಲ ಅದರ ವಿಚಾರವನ್ನು ಇಲ್ಲಿ ತೆಗೆದುಕೊಂಡಿರುತ್ತೇನೆ.

ಓಂಕಾರದ ಮೂರೂ ಮಾತ್ರೆಗಳ ಅರ್ಥವನ್ನು ಅರಿತುಕೊಂಡು ಸತ್ಯ, ಬ್ರಹ್ಮಚರ್ಯ, ಅಹಿಂಸೆ, ಅಪರಿಗ್ರಹ, ಶೌಚ, ಸಂತೋಷ, ಅಮಾಯಾವಿತ್ವ– ಇವೇ ಮುಂತಾದ ಯಮನಿಯಮಗಳಿಂದೊಡಗೂಡಿ ಎಡೆಬಿಡದೆ ಈ ಓಂಕಾರವೇ ಬ್ರಹ್ಮವೆಂಬ ಭಾವನೆಯಿಂದ ಯಾವಜ್ಜೀವವೂ ಧ್ಯಾನಮಾಡುತ್ತಿರುವಾತನಿಗೆ ಕ್ರಮ

ಕ್ರಮವಾಗಿ ಮೂರು ಲೋಕಗಳನ್ನೂ ಮೀರಿದ ನಿರ್ವಿಶೇಷವಾದ ಬ್ರಹ್ಮವೆಂಬ ಅಕ್ಷರದ ಪ್ರಾಪ್ತಿಯೇ ಆಗುವದೆಂದು ಪ್ರಶ್ನೋಪನಿಷತ್ತಿನಲ್ಲಿ ಹೇಳಿರುತ್ತದೆ. ಓಂಕಾರವನ್ನು ಹೀಗೆ ಪರಬ್ರಹ್ಮದ ಪ್ರತೀಕವಾಗಿ ಅಥವಾ ವಾಚಕವಾಗಿ ಭಾವಿಸಿಕೊಂಡು ನಿರಂತರವಾಗಿ ಆದರಸತ್ಕಾರಪೂರ್ವಕವಾಗಿ ಉಪಾಸನೆಮಾಡುವವರಿಗೆ ಆಗುವ ಕಾಲಾಂತರಮುಕ್ತಿಯನ್ನು ಭಗವದ್ಗೀತೆಯ ಎಂಟನೆಯ ಅಧ್ಯಾಯದಲ್ಲಿಯೂ ಹೇಳಿರುತ್ತದೆ. ಆದ್ದರಿಂದ ಮುಮುಕ್ಷುಗಳಾದ ಸಂನ್ಯಾಸಿಗಳು ಸದ್ಗುರುವನ್ನು ಸೇರಿ ಈ ಪ್ರಣವೋಪಾಸನೆಯ ರಹಸ್ಯವನ್ನು ಅರಿತುಕೊಂಡು ಅದರಿಂದ ತಮ್ಮ ಜೀವನವನ್ನು ಆನಂದಮಯವಾಗಿ ಮಾಡಿಕೊಂಡು ಕ್ರಮಮುಕ್ತಿಯನ್ನಾದರೂ ಪಡೆಯುವದಕ್ಕೆ ಯತ್ನಿಸಬೇಕು.

ಈವರೆಗೆ ಹೇಳಿರುವದು ಮಂದಮಧ್ಯಮಾಧಿಕಾರಿಗಳಾದ ಸಂನ್ಯಾಸಿ ಮುಮುಕ್ಷುಗಳ ವಿಷಯವು. ಗೃಹಸ್ಥರಾದವರೂ ಹೀಗೆಯೇ ತಮ್ಮತಮ್ಮ ವರ್ಣಾಶ್ರಮಗಳಿಗೆ ಉಚಿತವಾದ ಕರ್ಮಗಳನ್ನು ಯಥಾಶಕ್ತಿಯಾಗಿ ಆಚರಿಸುತ್ತಾ ಪರಮೇಶ್ವರನ ಯಾವದಾದರೊಂದು ನಾಮವನ್ನು ಸರಹಸ್ಯವಾಗಿ ಗುರುಗಳಿಂದ ಉಪದೇಶವನ್ನು ಪಡೆದು ಎಡೆಬಿಡದೆ ಜಪಿಸಿ ಆ ಉಪಾಸನೆಯಿಂದ ಕೃತಕೃತ್ಯರಾಗಬೇಕು. ಭಗವಂತನ ನಾಮವು ಮನುಷ್ಯನನ್ನು ಸಂಸಾರಸಾಗರವನ್ನು ದಾಟಿಸಿ ನಿತ್ಯಸುಖವೆಂಬ ದಡವನ್ನು ಮುಟ್ಟಿಸುವ ನಾವೆಯಾಗಿರುತ್ತದೆ ಎಂಬುದನ್ನು ಅನೇಕ ಋಷಿಗಳು ಹೇಳಿರುತ್ತಾರೆ. ಕಲಿಯುಗದಲ್ಲಿಯೂ ಸಾಧುಸಂತರುಗಳು ಹೀಗೆಂದೇ ತಮ್ಮ ಅನುಭವವನ್ನು ಪ್ರಕಟಿಸಿ ತಿಳಿಸಿರುತ್ತಾರೆ.

ಆದರೆ ಉತ್ತಮಾಧಿಕಾರಿಗಳಾಗಿ, ಈ ಜನ್ಮದಲ್ಲಿಯೇ ಇಲ್ಲಿಯೇ ಆಗಬಹುದಾದ ಸದ್ಯೋಮುಕ್ತಿಗೆ ಬೇಕಾದ ತತ್ತ್ವಜ್ಞಾನವನ್ನು ಬಯಸುವವರು ಆ ಜ್ಞಾನಾರ್ಜನೆಗೆ ಬೇಕಾದ ಪ್ರಯತ್ನವನ್ನೇ ಮಾಡಬೇಕಾಗಿರುತ್ತದೆ. ದ್ವಾದಶಮಂಜರಿಯಲ್ಲಿ ಹೇಳಿರುವಂತೆ ಕಾಶಿಗೆ ಹೋಗಿ ಗಂಗೆಯಲ್ಲಿ ಮಿಂದರೂ ಸಕಲ ತೀರ್ಥಾಟನೆಗಳನ್ನೂ ಮಾಡಿ ಸಾಗರದಲ್ಲಿಯೇ ಸ್ನಾನಮಾಡಿದರೂ ಯಾವ ವ್ರತವನ್ನೇ ನಿಯಮದಿಂದ ಪರಿಪಾಲನೆಮಾಡಿಕೊಂಡುಬಂದರೂ ಅಪರಿಮಿತವಾದ ಗೋಭೂಹಿರಣ್ಯಾದಿದಾನಗಳನ್ನು ದಾನಮಾಡಿದರೂ ಜ್ಞಾನವೊಂದಿಲ್ಲದಿದ್ದರೆ ನೂರು ಜನ್ಮಗಳಾದರೂ ಮುಕ್ತಿಯು ದೊರೆಯಲಾರದು. ಆದ್ದರಿಂದ ತತ್ತ್ವಜ್ಞಾನಕ್ಕಾಗಿಯೇ ಹವಣಿಸುವ ಮುಮುಕ್ಷುಗಳು ಗುರುಗಳ ಸಮೀಪದಲ್ಲಿದ್ದು ಮಾಡಬೇಕಾದದ್ದೇನು?- ಎಂಬ ವಿಷಯವನ್ನು ಕುರಿತು ಹೇಳಿದಲ್ಲದೆ ಪ್ರಕೃತಸಂದೇಶವು ಪೂರ್ತಿಯಾಗಲಾರದು.

ಸದ್ಯೋಮುಕ್ತಿಯ ವಿಚಾರವು ಶ್ರುತಿಯ ಶಿರಸ್ಸೆಂದು ಪ್ರಖ್ಯಾತವಾಗಿರುವ ವೇದಾಂತಗಳಲ್ಲಿ ಮಾತ್ರ ಉಕ್ತವಾಗಿರುತ್ತದೆ. ವೇದಗಳ ಕೊನೆಯ ಭಾಗವಾದ

ಆರಣ್ಯಕಗಳಲ್ಲಿಯೇ ಬಹಳ ಉಪನಿಷತ್ತುಗಳಿರುವದರಿಂದ ಉಪನಿಷತ್ತುಗಳಿಗೆ ವೇದಾಂತಗಳೆಂದೇ ಹೆಸರು ಬಂದಿರುತ್ತದೆ. ಉಪನಿಷತ್ತುಗಳ ತಾತ್ಪರ್ಯವನ್ನು ಅರಿತುಕೊಂಡರೆ ವೇದದಿಂದ ಅರಿತುಕೊಳ್ಳಬೇಕಾದದ್ದೆಲ್ಲವೂ ಜ್ಞಾತವಾಗುವದರಿಂದ, ಅಲ್ಲಿಗೆ ವೇದವಿಚಾರವೇ ಕೊನೆಗಾಣುವದೆಂಬ ಅರ್ಥವೂ 'ವೇದಾಂತ'ವೆಂಬ ಮಾತಿನಲ್ಲಿ ಅಡಕವಾಗಿರಬಹುದು. ಏನೇ ಆಗಲಿ, ಈ ಶ್ರುತಿಶಿರಸ್ಸಿನ ವಾಕ್ಯವನ್ನು ಶ್ರವಣಮಾಡುವದೇ ಉತ್ತಮಾಧಿಕಾರಿಗಳಾದ ಮುಮುಕ್ಷುಗಳ ಪ್ರಥಮ ಕರ್ತವ್ಯವಾಗಿರಬೇಕು. ವಾಕ್ಯಶ್ರವಣವಿಲ್ಲದೆ, ಬರಿಯ ಮಹಾವಾಕ್ಯಜಪದಿಂದ ಯಾವ ಸಂನ್ಯಾಸಿಯೂ ಎಂದಿಗೂ ಕೃತಕೃತ್ಯನಾಗಲಾರನೆಂಬುದು ಸುನಿಶ್ಚಿತವಾಗಿರುತ್ತದೆ.

ಮಹಾವಾಕ್ಯವೆಂಬ ಶಬ್ದ ಅರ್ಥವನ್ನು ಅರಿಯದೆ ಮಹಾವಾಕ್ಯಜಪದ ಸಂಪ್ರದಾಯವು ಪ್ರವರ್ತಿತವಾಗಿರುತ್ತದೆ ಎಂದು ನನ್ನ ಸ್ವಂತ ಅಭಿಪ್ರಾಯವು. ಏಕೆಂದರೆ ಮಹಾವಾಕ್ಯವೆಂಬ ಪದದ ಪ್ರಯೋಗವು ಶ್ರೀಶಂಕರ ಭಗವತ್ಪಾದರವರ ಪ್ರಸ್ಥಾನತ್ರಯಭಾಷ್ಯದಲ್ಲಿ ಎಲ್ಲಿಯೂ ಕಾಣಬರುವದಿಲ್ಲ; ಉಪನಿಷತ್ತುಗಳ ಪರಮ ತಾತ್ಪರ್ಯವನ್ನು ತಿಳಿಸುವ 'ತತ್ತ್ವಮಸಿ' 'ಅಹಂ ಬ್ರಹ್ಮಾಸ್ಮಿ' ಮುಂತಾದ ವಾಕ್ಯಗಳನ್ನು ಮಹಾವಾಕ್ಯಗಳೆಂದೂ ಆ ತಾತ್ಪರ್ಯಕ್ಕೆ ಬೇಕಾಗಿರುವ ವಿಷಯಗಳನ್ನು ತಿಳಿಸುವದರಲ್ಲಿ ತಾತ್ಪರ್ಯವುಳ್ಳ ವಾಕ್ಯಗಳನ್ನು ಅವಾಂತರವಾಕ್ಯಗಳೆಂದೂ ಭಾವಿಸಬಹುದು. ನಿಜ. ಆದರೆ ಈ ಅರ್ಥದಲ್ಲಿ **ಮಹಾವಾಕ್ಯಗಳೆಂದರೆ ಬ್ರಹ್ಮಾತ್ಮೈಕ್ಯವನ್ನು ತಿಳಿಸುವ ವಾಕ್ಯಗಳೇ ಆಗಿರುತ್ತವೆ.** ಈ ದೃಷ್ಟಿಯಿಂದ ನೋಡುವಾಗ ಪರಮಾತ್ಮನೇ ಶ್ರೋತೃವಿಗೆ ಪರಮಾರ್ಥವಾಗಿ ಆತ್ಮನು ಎಂಬುದನ್ನು ತಿಳಿಸುವ ವಾಕ್ಯಗಳು ಎಲ್ಲೆಲ್ಲಿ ಕಂಡುಬಂದರೂ ಅವೆಲ್ಲ ಮಹಾವಾಕ್ಯಗಳೇ ಆಗುವದರಿಂದ ಮಹಾವಾಕ್ಯಗಳು ನಾಲ್ಕೇ ಎಂಬ ಕೆಲವರ ಮೂಢಭಾವನೆಗೆ ಅವಕಾಶವೇ ಇಲ್ಲವಾಗುವದು. ಇಷ್ಟೇ ಅಲ್ಲ; ವೇದಾಂತಗಳು, ಅಥವಾ ಉಪನಿಷತ್ತುಗಳು, ಈ ಬ್ರಹ್ಮಾತ್ಮೈಕತ್ವವನ್ನು ತಿಳಿಸುವದರಲ್ಲಿಯೇ ತಾತ್ಪರ್ಯವುಳ್ಳವಾಗಿ ಕಂಡುಬರುತ್ತವೆ. ಯಾವ ಉಪನಿಷತ್ತಿನಲ್ಲಿಯೂ ಪ್ರಧಾನವಾಕ್ಯಗಳಿಗೆ ಈ ತಾತ್ಪರ್ಯವಿಲ್ಲವೆಂದು ತೋರಿಸುವದಕ್ಕೆ ಬರುವಂತಿಲ್ಲವಾದ್ದರಿಂದಲೂ ಅಂಥ ವಾಕ್ಯಗಳಲ್ಲಿರುವ ಪದಗಳು ಬ್ರಹ್ಮಸ್ವರೂಪದ ವಿಷಯದಲ್ಲಿಯೇ ನಿಶ್ಚಿತವಾದ ಸಮನ್ವಯವುಳ್ಳವಾಗಿರುವದರಿಂದಲೂ ಆ ವಾಕ್ಯಗಳಿಗೆ ಯಾವ ಕರ್ಮಕ್ಕಾಗಲಿ ಉಪಾಸನೆಗಾಗಲಿ ಅಂಗವಾಗಿರುವ ವಸ್ತುವನ್ನು ಹೇಳುವಂತೆ ಅರ್ಥವನ್ನು ಕಲ್ಪಿಸುವದು ಯುಕ್ತವಲ್ಲ ಎಂದು ಶ್ರೀಶಂಕರಭಗವತ್ಪಾದರವರು ಬ್ರಹ್ಮಸೂತ್ರಭಾಷ್ಯದ ಸಮನ್ವಯಸೂತ್ರದ ವ್ಯಾಖ್ಯಾನದಲ್ಲಿ ಅಪ್ಪಣೆಕೊಡಿಸಿರುತ್ತಾರೆ. ಹೀಗಿರುವಲ್ಲಿ ತತ್ತ್ವಮಸ್ಯಾದಿವಾಕ್ಯಗಳ ಜಪವೇ ಪರಮ

ಹಂಸರಿಗೆ ವಿಹಿತವೆಂದು ಭಾವಿಸುವವರು ಆ ಆಚಾರ್ಯರ ಅಭಿಪ್ರಾಯಕ್ಕೆ ವಿರುದ್ಧವಾಗಿ ವೇದಾಂತಗಳಿಗೆ ಅರ್ಥವನ್ನು ಮಾಡಿದವರಾಗುವದಿಲ್ಲವೆ? ಶಾಂಕರ ವೇದಾಂತದಲ್ಲಿ ಬದ್ಧಾದರರಾಗಿರುವ ವಿದ್ವಾಂಸರುಗಳು ಇದನ್ನು ಸಮಾಲೋಚನೆ ಮಾಡಬೇಕಾಗಿರುತ್ತದೆ.

ಇದು ಹೇಗಾದರೂ ಇರಲಿ. ಅಮೃತತ್ವವನ್ನು, ಎಂದರೆ ಎಂದಿಗೂ ನಾಶ ವಿಲ್ಲದ ಪರಮಾತ್ಮನ ತತ್ತ್ವವನ್ನು ಅರಿತುಕೊಂಡು ಆನಂದದಿಂದಿರುವ ಸದ್ಯೋ ಮುಕ್ತಿಯನ್ನು, ಬಯಸುವ ಮುಮುಕ್ಷುಗಳು ಪರಮಾತ್ಮನ ವಿಷಯದ ಶ್ರವಣಮನನ ನಿದಿಧ್ಯಾಸನಗಳನ್ನೇ ಮಾಡಬೇಕು; ಈ ಶ್ರವಣಾದಿಗಳೇ ಆತ್ಮದರ್ಶನಕ್ಕೆ ಅಂತರಂಗ ಸಾಧನಗಳು ಎಂಬುದಕ್ಕೆ ಶ್ರೀಶಂಕರಭಗವತ್ಪಾದರವರೇ ಅಲ್ಲದೆ ಅವರು ಪ್ರಮಾಣ ವೆಂದು ಉದಾಹರಿಸಿರುವ ಉಪನಿಷದ್ವಾಕ್ಯವೂ ಪ್ರಮಾಣವಾಗಿರುತ್ತದೆ. ಹೀಗೆಂದೇ ಬೃಹದಾರಣ್ಯಕದಲ್ಲಿ ಯಾಜ್ಞವಲ್ಕ್ಯರು ತಮ್ಮ ಪ್ರಿಯಪತ್ನಿಯಾದ ಮೈತ್ರೇಯಿಗೆ ತಾವು ಪಾರಿವ್ರಾಜ್ಯವನ್ನು ವಹಿಸುವ ಪೂರ್ವದಲ್ಲಿ ಉಪದೇಶಿಸಿರುತ್ತಾರೆ. ಆದ್ದರಿಂದ ಮುಮುಕ್ಷುಗಳಾದ ಯತಿಗಳು ಮತ್ತೆ ಯಾವ ಕರ್ಮದಿಂದಲೂ ತೃಪ್ತರಾಗದೆ ವೇದಾಂತವಾಕ್ಯಶ್ರವಣವನ್ನೇ ಆದರದಿಂದಮಾಡಬೇಕು ಎಂಬುದು ನಿರ್ವಿವಾದವು.

ಆದರೆ ಶ್ರವಣವೆಂದರೇನು? ವೇದಾಂತವಾಕ್ಯಗಳನ್ನು-ತತ್ತ್ವಮಸಿ, ಸತ್ಯಂ ಜ್ಞಾನಮನನ್ತಂ ಬ್ರಹ್ಮ, ತತ್ಸೃಷ್ಟ್ವಾ ತದೇವಾನುಪ್ರಾವಿಶತ್ ಈ ಮುಂತಾದ ಸಂಸ್ಕೃತ ವಾಕ್ಯಗಳನ್ನು-ಕಿವಿಯಿಂದ ಕೇಳಿ ಗಟ್ಟಿಮಾಡಿಕೊಳ್ಳುವದೇನೂ ವಾಕ್ಯ ಶ್ರವಣವಲ್ಲ. ಉಪನಿಷದ್ವಾಕ್ಯಗಳನ್ನು ಗಟ್ಟಿಮಾಡಿಕೊಂಡಿರುವ ಎಷ್ಟೋ ವೈದಿಕರು ನಮಗೆ ಕಾಣಬರುತ್ತಿದ್ದಾರೆ; ಉಪನಿಷತ್ತುಗಳ ಕಂಠಪಾಠದಿಂದಲೇ ಮುಕ್ತಿಯಾಗುವದೆಂದು ಎಲ್ಲಿಯೂ ಹೇಳಿಯೂ ಇಲ್ಲ. ವೇದಾಂತಗಳಲ್ಲಿ ಹೇಳಿರುವ **ಆತ್ಮನ ವಿಷಯವನ್ನು ಮನಮುಟ್ಟಿ ಕೇಳುವದೇ ವಾಕ್ಯ ಶ್ರವಣವು.** ಯಾವ ಮಹನೀಯನಿಗೆ ಈ ವಿಷಯನ್ನು ಕೇಳುತ್ತಾಕೇಳುತ್ತಾ ಅಮೃತಪಾನವನ್ನು ಮಾಡಿದಂತೆ ಸಂತೋಷವು ಉಕ್ಕುತ್ತಿರುವದೋ, ಯಾವ ಮಹನೀಯನಿಗೆ ಆತ್ಮನ ವಿಷಯವನ್ನು ಕೇಳಿದಂತೆಲ್ಲ 'ಇನ್ನೂ ಕೇಳಬೇಕು, ಇನ್ನೂ ಆನಂದಪಡಬೇಕು' ಎಂದು ಮನಸ್ಸು ಹಾತುವರಿಯುತ್ತಿರುವದೋ, ಅವನೇ ನಿಜವಾದ ಶ್ರೋತೃವು.

ವೇದಾಂತದಲ್ಲಿ ಉಪದಿಷ್ಟವಾದ ಅರ್ಥವನ್ನು ಸಂಪೂರ್ಣವಾಗಿ ಮನದಟ್ಟು ಮಾಡಿಕೊಂಡು ಅದರಲ್ಲಿಯೇ ನಿಷ್ಠರಾಗಿರುವದು ಎಲ್ಲರಿಗೂ ಸಾಧ್ಯವಾಗದೆ ಇರಬಹುದು. ಆದರೆ ವೇದಾಂತಶ್ರವಣದಿಂದ ಆನಂದವನ್ನು ಸಂಪಾದಿಸಿಕೊಳ್ಳು ವದಕ್ಕೆ ನಾವೆಲ್ಲರೂ ಪ್ರಯತ್ನಿಸಬಹುದಾಗಿದೆ. ಸಂಗೀತವಿದ್ವಾಂಸರಾಗುವದಕ್ಕೆ

ಎಲ್ಲರಿಗೂ ಯೋಗ್ಯತೆಯಿರುವದಿಲ್ಲವಾದರೂ ಸಂಗೀತವನ್ನು ಕೇಳಿ ಸುಖಿಸುವದಕ್ಕೆ ಅನೇಕರಿಗೆ ಯೋಗ್ಯತೆಯಿರುತ್ತದೆಯಲ್ಲವೆ? ಆದರೂ, ಅದೇನು ಮಾಯೆಯೊ, ಈ ಆತ್ಮವಿಚಾರವು ಶ್ರವಣಕ್ಕೂ ಅನೇಕರಿಗೆ ಲಭ್ಯವಲ್ಲದೆ ಇರುತ್ತದೆ. ಎಷ್ಟೋ ಜನರಿಗೆ ವೇದಾಂತವಿಚಾರವೇ ಬೇಡ; ಅದು ಬೇಕು ಎನ್ನುವವರಲ್ಲಿಯೂ ಅನೇಕರಿಗೆ ತಮಗೆ ತಿಳಿಸಿರುವದನ್ನು ಮತ್ತೊಬ್ಬರಿಗೆ ಹೇಳಬೇಕೆಂಬ ಹಂಬಲಿಕೆ ಯಿರುವದೇ ಹೊರತು ಬಲ್ಲವರಿಂದ ಶ್ರವಣಮಾಡಿ ತತ್ತ್ವವನ್ನು ಅರಿತುಕೊಳ್ಳ ಬೇಕೆಂಬ ಆಶೆಯಿರುವದಿಲ್ಲ.

ಜನರಿಗೆ ಮಾತಾಡದೆ ಸುಮ್ಮನೆ ಇರುವದಕ್ಕೇ ಆಗುವದಿಲ್ಲ. ಅವರು ಯಾವ ದಾದರೊಂದು ವಿಷಯಕ್ಕೆ ಏನಾದರೂ ಮಾತಾಡಬೇಕೆಂದೇ ಹವಣಿಸುತ್ತಿರುವರು. ಆದರೆ ಎಲ್ಲರಿಗೂ ಸರಿಯಾಗಿ ಮಾತಾಡುವದಕ್ಕೆ ಬರುತ್ತಿರುವದಿಲ್ಲ; ಅಥವಾ ಮಾತಾಡುವದನ್ನು ಹೇಗೋ ಅಭ್ಯಾಸಮಾಡಿಕೊಂಡಿದ್ದರೂ ಬಹುಜನಕ್ಕೆ ಮಾತಿಗೆ ವಿಷಯವೇ ಇರುವದಿಲ್ಲ. ಆದ್ದರಿಂದಲೇ ಮಾತಾಡಬೇಕೆಂಬ ಹವ್ಯಾಸಕ್ಕೆ ಪಕ್ಕಾಗಿರುವ ಸಾಮಾನ್ಯರು ಸುಮ್ಮನೆ ಆಡಿದಮಾತನ್ನೇ ಆಡುತ್ತಾ ಕಾಲವನ್ನು ಹಾಕುವರು; ಇಲ್ಲದಿದ್ದರೆ ಮತ್ತೊಬ್ಬರ ವಿಷಯಕ್ಕೆ ಅಲ್ಲದ ಸಲ್ಲದ ಮಾತುಗಳನ್ನು ಆಡುತ್ತಾ ತಮ್ಮ ನಾಲಗೆಯ ತೀಟೆಯನ್ನು ಕಳೆದುಕೊಳ್ಳುತ್ತಿರುವರು. ಆದರೆ ಉತ್ತಮವಾದ ವಿಷಯಗಳನ್ನು ಕುರಿತು ಅಮೋಘವಾದ ವಾಗ್ವೈಖರಿಯಿಂದ ಮಾತನಾಡುವದು ಕೂಡ ಕೊನೆಗೆ ನಿಜವಾದ ಪುರುಷಾರ್ಥವನ್ನು ಕೊಡಲಾರದೆಂದು ಗೊತ್ತಾದ ಬಳಿಕ ತಮಗಿಂತಲೂ ಹೆಚ್ಚು ತಿಳಿದವರು ಉತ್ತಮವಿಷಯಗಳನ್ನು ಕುರಿತು ಹೇಳುವದನ್ನು ಕೇಳಬೇಕಷ್ಟೆ. ಹೀಗಿರುವದರಿಂದಲೇ ಹೊರಗಿನ ಯಾವ ವಿಷಯದ ಶ್ರವಣ ದಿಂದಲೂ ಆತ್ಯಂತಿಕ ಪುರುಷಾರ್ಥವು ಸಿಕ್ಕಲಾರದೆಂದು ಮನಗಂಡು, ತಮಗೆ ಆತ್ಯಂತಿಕಪುರುಷಾರ್ಥವೇ ಬೇಕೆಂದು ಬಯಸುತ್ತಿರುವ ಮುಮುಕ್ಷುಗಳಿಗೆ ವೇದಾಂತವು 'ಆತ್ಮನನ್ನೇ ಕುರಿತು ಕೇಳಬೇಕು' ಎಂಬ ಉಪದೇಶವನ್ನು ಮಾಡುತ್ತದೆ. ಅಂಥವರು ಆತ್ಮನ ವಿಷಯವನ್ನು ಕೇಳುವದಕ್ಕೇ ಹವಣಿಸುತ್ತಾರೆ. ಆತ್ಮತತ್ತ್ವವನ್ನು ತಿಳಿಸುವ ವೇದಾಂತವಾಕ್ಯಗಳನ್ನೇ ಹೀಗೆ ಆದರದಿಂದ ಕಿವಿಗೊಟ್ಟು ಕೇಳುವದೇ ಶ್ರವಣವೆಂಬ ಸಾಧನವು.

ವೇದಾಂತವಾಕ್ಯವನ್ನು ಆದರದಿಂದ ಶ್ರವಣಮಾಡುವವರಿಗೇ ಉಪನಿಷತ್ತುಗಳಲ್ಲಿ ಏನು ಹೇಳಿದೆ ಎಂಬುದು ಮನಸ್ಸಿಗೆ ತಟ್ಟುತ್ತದೆ. "ಎಷ್ಟೋ ಜನರಿಗೆ ಆತ್ಮಶ್ರವಣವೇ ಲಭ್ಯವಾಗಿರುವದಿಲ್ಲ, ಎಷ್ಟೋ ಜನರು ಶ್ರವಣಮಾಡಿದ ಮೇಲೂ ಆತ್ಮನನ್ನು ಅರಿತುಕೊಳ್ಳದೆ ಇರುವರು" ಎಂದು ಒಂದು ಶ್ರುತಿವಚನವು ಸಾರುತ್ತಿದೆ. ಆತ್ಮನು

ಶ್ರವಣಕ್ಕೆ ಲಭ್ಯನಾಗದಿರುವದಕ್ಕೆ ಕಾರಣವೇನೆಂದರೆ ಅನಾತ್ಮ ವಿಷಯಗಳನ್ನು ಕುರಿತ ಮಾತುಗಳಿಗೇ ಕಿವಿಗೊಡುತ್ತಾ, ಆ ಶ್ರವಣದಿಂದಲೇ ಇಷ್ಟಾರ್ಥವೆಲ್ಲ ದೊರಕುವದೆಂದು ನಂಬಿರುವದು. ಹೀಗೆ ವೇದಾಂತಶ್ರವಣಕ್ಕೆ ಮನಸ್ಸು ಒಲಿಯ ದವರೇ ಬಹಳ. ಆದರೆ ಅದಕ್ಕೆ ಮನಸ್ಸು ಒಲಿದರೂ ವೇದಾಂತದಲ್ಲಿ ಹೇಳಿರುವದು ನಮ್ಮ ಪರಮಪುರುಷಾರ್ಥಕ್ಕೆ ಕಾರಣವಾಗಿರುತ್ತದೆ-ಎಂದು ಅದನ್ನೇ ಆದರದಿಂದ ಸತತವೂ ಚಿತ್ತವಿಟ್ಟು ಆಲಿಸಿ ಕೇಳುವ ಶ್ರದ್ಧಾದರಗಳು ಇಲ್ಲದ್ದರಿಂದ ಎಷ್ಟೋ ಜನರಿಗೆ ಶ್ರವಣದಿಂದಾಗಬೇಕಾದ ಲಾಭವು ಆಗದೆ ಇರುತ್ತದೆ.

ಸರ್ವಕರ್ಮವನ್ನು ಸಂನ್ಯಾಸಮಾಡಿದರೂ ವೇದಾಂತವಾಕ್ಯಶ್ರವಣದಲ್ಲಿ ಆದರ ವುಂಟಾಗುವದು ಕಷ್ಟವೆಂದಮೇಲೆ, ವ್ಯವಹಾರದಲ್ಲಿಯೇ ಹಗಲೂ ಇರುಳೂ ಮುಳುಗಿ ಅದರ ಮಾತನ್ನೇ ಆಡುತ್ತಲೂ ಕೇಳುತ್ತಲೂ ಇರುವ ಸಾಮಾನ್ಯಜನರಿಗೆ ಪರಮಾರ್ಥವಿಚಾರವನ್ನು ಕೇಳುವ ಯೋಗವು ಹೇಗೆ ದೊರಕಬೇಕು? ಊರಿನಲ್ಲಿ ದೊಡ್ಡದೊಡ್ಡ ವಿದ್ವಾಂಸರೂ ಸಾಧುಸಂತರೂ ಒಂದು ಪುರಾಣ, ಪುಣ್ಯಕಥೆ, ಉಪದೇಶ-ಮುಂತಾದವುಗಳನ್ನು ಮಾಡುತ್ತಿದ್ದರೂ ಅತ್ತಕಡೆಗೇ ತಿರುಗದೆ ಇರು ವವರು ಎಷ್ಟು ಮಂದಿ ಇಲ್ಲ? ಒಂದು ವೇಳೆ ಎಂದಾದರೊಂದು ದಿನ ಒಂದು ಘಂಟೆಯ ಹೊತ್ತು ಇಂಥ ಸತ್ಕಥಾಲಾಪವನ್ನು ಕೇಳಿದಮಾತ್ರದಿಂದ ಅಂಥವರಿಗೆ ಪ್ರಯೋಜನವಾದೀತೆಂಬ ಪ್ರತ್ಯಾಶೆಯಾದರೂ ಎಲ್ಲಿಯದು?

ಹೀಗಿರುವದರಿಂದ ಯಾವದಾದರೂ ಪೂರ್ವಪುಣ್ಯದಿಂದ ಅಧ್ಯಾತ್ಮ ವಿಚಾರವನ್ನು ಶ್ರವಣಮಾಡುವ ಯೋಗವು ನಮಗೆ ದೊರಕಿದರೆ ಅದನ್ನು ಕಳೆದುಕೊಳ್ಳಬಾರದು. ಮಿಕ್ಕ ಎಲ್ಲಾ ಕೆಲಸಗಳನ್ನೂ ಒತ್ತರಿಸಿ ಮೊದಲು ಈ ಶ್ರವಣಕ್ಕೆ ನಮ್ಮ ಕಿವಿಗಳನ್ನು ಉಪಯೋಗಿಸಬೇಕು. ಅದರಲ್ಲಿಯೂ ಮೇಲಿಂದ ಮೇಲೆ ಪುರಾಣಶ್ರವಣ, ಹರಿಕಥಾಲಾಪ, ತತ್ತ್ವವಿಚಾರ-ಇಂಥವುಗಳನ್ನು ಕೇಳುವ ಅವಕಾಶವು ದೊರಕಿದರೆ ಖಂಡಿತವಾಗಿಯೂ ಅದನ್ನು ಕಳೆದುಕೊಳ್ಳಬಾರದು. ಮಿಕ್ಕ ಎಲ್ಲಾ ವ್ಯಾಪಾರ ಗಳನ್ನೂ ಬಿಟ್ಟು, ಶಾಸ್ತ್ರೀಯಕರ್ಮಗಳನ್ನು ಕೂಡ ಪರಿತ್ಯಾಗಮಾಡಿ, ಮೋಕ್ಷಕ್ಕಾಗಿಯೇ ದುಡಿಯುವ ಪಾರಿವ್ರಾಜ್ಯವನ್ನು ಹೊಂದಿದ ಪುಣ್ಯಾತ್ಮರಂತೂ ಅವಶ್ಯವಾಗಿ ವೇದಾಂತಶ್ರವಣವನ್ನು ಬಿಡದೆ ಮಾಡಬೇಕು, ಸತತವಾಗಿ ಮಾಡಬೇಕು, ಆದರದಿಂದ ಮನಮುಟ್ಟಿಮಾಡಬೇಕು.

ಜೇನುಹುಳುಗಳು ಹೂವಿನ ರಸವನ್ನು ಕುಡಿಯುವಾಗ ಹೇಗೆ ಕಣ್ಣುಮುಚ್ಚಿ ಕೊಂಡು ಅತ್ತಿತ್ತನೋಡದೆ ಆ ಮಕರಂದವನ್ನು ಪಾನಮಾಡುವದರಲ್ಲಿಯೇ ಹೆಚ್ಚು ಹೆಚ್ಚಿನ ಆನಂದವನ್ನು ಪಡೆಯುತ್ತಿರುವವೋ ಹಾಗೆ ವೇದಾಂತ ವಾಕ್ಯಗಳನ್ನು

ಕೇಳಿಕೇಳಿ ಉಪನಿಷತ್ತುಗಳು ಪರಮಾತ್ಮನ ವಿಷಯದಲ್ಲಿ ಏನು ಹೇಳುತ್ತಿವೆ? ಎಂಬುದನ್ನು ತತ್ಪರನಾಗಿ ಕೇಳುವದೇ ಶ್ರವಣವು. ಆ ಶ್ರವಣವು ಯಾವ ಪುಣ್ಯಾತ್ಮರಿಗೆ ದೊರಕಿರುವದೋ ಅವರು ಧನ್ಯರು. ಅಂಥವರ ಹೃದಯದಲ್ಲಿಯೇ ಪರಮಾತ್ಮನು ನಿತ್ಯವಾಗಿ ನೆಲಸಿರುವನು. ನಿಜವಾಗಿ ನೋಡಿದರೆ ಎಲ್ಲಾ ಪ್ರಾಣಿಗಳ ಹೃದಯದಲ್ಲಿಯೂ ಪರಮಾತ್ಮನು ಇದ್ದುಕೊಂಡಿರುವನೆಂದೇ ಶಾಸ್ತ್ರಗಳು ಮೊಳಗುತ್ತಿವೆ. ಆದರೆ ವೇದಾಂತವಾಕ್ಯವನ್ನು ಶ್ರವಣ ಮಾಡುತ್ತಿರುವವರಿಗೇ ಈ ವಿಷಯದ ಅರಿವು ಚೆನ್ನಾಗಿ ಆಗುವದು. ವೇದಾಂತ ವಾಕ್ಯದಲ್ಲಿ ಆದರವು ಹೆಚ್ಚುಹೆಚ್ಚಿದಂತೆಲ್ಲ, ಇಂಥ ಶ್ರೋತೃಗಳಿಗೆ ಪರಮಾತ್ಮನೇ ತಮ್ಮತಮ್ಮ ಹೃದಯದಲ್ಲಿದ್ದುಕೊಂಡು ಈ ವಾಕ್ಯಗಳನ್ನು ತಮಗೆ ಇಂಪಾದ ರೀತಿಯಿಂದ ಉಪದೇಶಿಸುತ್ತಿರುವನೆಂಬ ಭಾವನೆಯು ಬರುತ್ತಿರುವದು. ಹೃದಯದಲ್ಲಿಯೇ ಇದ್ದು ತಮಗೆ ಬುದ್ಧಿವಾದವನ್ನು ಮಾಡುತ್ತಿರುವ ಆ ಭಗವಂತನ ವಾಣಿಯನ್ನು ಆಲೈಸುವದಕ್ಕಿಂತ ಹೆಚ್ಚಿನ ಸಾಧನವು ಮತ್ತೆ ಯಾವದು ತಾನೆ ಇದ್ದೀತು?

ವೇದಾಂತವಾಕ್ಯಶ್ರವಣವೆಂದರೆ ಉಪನಿಷತ್ತುಗಳಲ್ಲಿರುವಂತೆ ಅದೇ ಅನುಕ್ರಮದಲ್ಲಿ ಯಾರಾದರೊಬ್ಬರು ಉಚ್ಚರಿಸುತ್ತಿರುವ ಸಂಸ್ಕೃತವಾಕ್ಯಗಳನ್ನು ಕಿವಿಗೆ ಹಾಕಿಕೊಳ್ಳುವದೆಂದು ಅಕ್ಷರಾರ್ಥವನ್ನು ಮಾಡಬಾರದು. ವೇದವು ಹೇಳಿದ್ದು ಅರ್ಥವಾಗದಿದ್ದರೆ ಅದೇ ಅಭಿಪ್ರಾಯವನ್ನೇ ವಿವರಿಸುವ ಇತಿಹಾಸಪುರಾಣಾದಿಗಳ ವಾಕ್ಯಗಳನ್ನು ಕಿವಿಯಿಂದ ಗ್ರಹಿಸುವದೂ ಶ್ರವಣವೇ. ಇಷ್ಟೇ ಅಲ್ಲ, ಶಾಸ್ತ್ರಾಭಿಪ್ರಾಯವನ್ನು ಮನದಟ್ಟುವಂತೆ ಉಪದೇಶಿಸಬಲ್ಲ ತತ್ತ್ವದರ್ಶಿಯಾದ ಸದ್ಗುರುವಿನ ನುಡಿಯನ್ನು ಶ್ರದ್ಧಾದರಗಳಿಂದ ಕೇಳುವದೂ ಶ್ರವಣವೇ. ಸಂಗೀತರಸಿಕನಾದವನು ವಿದ್ವಾಂಸನೊಬ್ಬನು ಹಾಡುವದನ್ನು ಮೈಮರೆತು ಕೇಳುವಂತೆ ಶಾಸ್ತ್ರಾಚಾರ್ಯರ ಉಪದೇಶವನ್ನೂ ಆದರಪೂರ್ವಕವಾಗಿ ಕಿವಿಯಿಂದ ಹೀರಿಕೊಳ್ಳುವದೇ ನಿಜವಾದ ಶ್ರವಣವು.

****

# 4. ಸಾಧನೆಗಳಿಂದ ಪರಮಾತ್ಮನ ಆನಂದ

## 37. ಅನುಭವಿ ಆಚಾರ್ಯರಿಂದ ಶ್ರವಣ

ವಾಚಕಮಹಾಶಯರಿಗೆಲ್ಲ ನಾರಾಯಣಸ್ಮರಣೆಗಳು. ಅಧ್ಯಾತ್ಮಪ್ರಕಾಶ ಪತ್ರಿಕೆಯಲ್ಲಿ ಪ್ರತಿಸಂಚಿಕೆಯಲ್ಲಿಯೂ "ಈ ತಿಂಗಳ ಸಂದೇಶ" ಎಂಬ ಹೆಸರಿನಿಂದ ಬರುವ ಲೇಖನಗಳು ಕಾಲವನ್ನೆಲ್ಲ ಮೀರಿರುವ ಶಾಶ್ವತವಾದ ಪರಮಾರ್ಥತತ್ತ್ವವನ್ನು ಕುರಿತದ್ದಾಗಿರುತ್ತದೆ. ವೇದದಲ್ಲಿಯೂ ವೇದಾರ್ಥವನ್ನು ವಿವರಿಸುವ ಸಂಸ್ಕೃತದ ಮತ್ತು ದೇಶ ಭಾಷೆಯ ಗ್ರಂಥಗಳಲ್ಲಿಯೂ ಇರುವ ಉಪದೇಶವು ಈ ಕಾಲಾತೀತವಾದ ವಸ್ತುವಿನ ವಿಷಯದಲ್ಲಿಯೇ ಆಗಿರುವದರಿಂದ ಅದನ್ನು ಯಾವ ದೇಶದವರು ಯಾವ ಕಾಲದವರು ಓದಿದರೂ ಅವರಿಗೆ ಆಯಾ ಕಾಲಕ್ಕೆ ಅನ್ವಯಿಸುವಂಥ ಸಂದೇಶವೇ ಅದರಲ್ಲಿರುತ್ತದೆ.

ವೃತ್ತಾಂತಪತ್ರಿಕೆಗಳಲ್ಲಿ ವೃತ್ತವಾದ-ನಡೆದುಹೋಗಿರುವ-ಘಟನೆಗಳ ಸುದ್ದಿಯೇ ಮುಖ್ಯ. ಕಾಲದಲ್ಲಿ ವೃತ್ತವಾದದ್ದು, ಭೂತಕಾಲದ್ದು, ಆಗಿಹೋಗಿರುತ್ತದೆ; ಗತ ವಾದದ್ದನ್ನು ಹಿಂದಕ್ಕೆಳೆತರುವದು ಯಾರಿಂದಲೂ ಆಗುವದಿಲ್ಲ. ಆದ್ದರಿಂದ ಆಗಿ ಹೋಗಿರುವ ಘಟನೆಗಳನ್ನು ಎಷ್ಟರಮಟ್ಟಿಗೆ ಈಗಿನ ನಡೆಗೆ ಆಧಾರವಾಗಿಟ್ಟುಕೊಳ್ಳ ಬಹುದೋ ಅಷ್ಟರಮಟ್ಟಿಗೆ ಮಾತ್ರ ಅವುಗಳ ವಿಚಾರವನ್ನು ನೆನಪಿಡುವದು ಯೋಗ್ಯ ವಾಗಿದೆ. ಇಲ್ಲದಿದ್ದರೆ ಭೂತಕಾಲದ ಸ್ಮರಣೆಯು ವ್ಯರ್ಥವೇ ಸರಿ. ಇನ್ನು ಭವಿಷ್ಯ ತ್ಕಾಲದ ಘಟನೆಗಳಂತೂ ಹುಟ್ಟಿಯೇ ಇರುವದಿಲ್ಲ; ಅವುಗಳನ್ನು ಕುರಿತು ಹಾಗಾ ಯಿತು, ಹೀಗಾದೀತು-ಎಂದು ವಿಕಲ್ಪಿಸುತ್ತಾ ಕೂತುಕೊಂಡರೆ ಆಗುವ ಪ್ರಯೋಜನ ವಾದರೂ ಏನು? ಇಂಥ ಬರಿಯ ಮನೋರಥಗಳ ರಾಜ್ಯದಲ್ಲಿ ಓಡಾಡುತ್ತಿರುವ ಮನಸ್ಸು ಯಾವ ಪುರುಷಾರ್ಥವನ್ನೂ ಸಂಪಾದಿಸಲಾರದೆಂಬುದು ಸ್ಪಷ್ಟವಾಗಿದೆ. ಆದ್ದರಿಂದಲೇ ಒಬ್ಬ ಆಂಗ್ಲಕವಿಯು "ಜೀವಂತವಾದ ವರ್ತಮಾನ ಕಾಲದಲ್ಲಿ ಕೆಲಸವನ್ನು ಮಾಡಿರಿ, ಕೆಲಸವನ್ನು ಮಾಡುತ್ತಲೇ ಇರಿ!" ಎಂದು ಬೋಧಿಸಿರುತ್ತಾನೆ.

ಆದರೆ ನಿಜವಾದ ಜೀವಂತವರ್ತಮಾನವೆಂದರೆ ನಿತ್ಯವರ್ತಮಾನಸ್ವರೂಪವಾದ ಅಧ್ಯಾತ್ಮತತ್ತ್ವವೇ ಸರಿ. ಏಕೆಂದರೆ ಭೂತಭವಿಷ್ಯದ್ವರ್ತಮಾನಗಳಲ್ಲಿ ಯಾರು ಯಾವಾಗ ಅದನ್ನು ನೆನಸಿಕೊಂಡರೂ ಅದು 'ಈಗ' ಎಂಬ ಭಾವನೆಗೇ ತಕ್ಕದ್ದಾಗಿರುತ್ತದೆ. ನಮ್ಮೆಲ್ಲರ ಆತ್ಮನಾಗಿರುವ ಏಕದೇವರು ಎಂದೆಂದಿಗೂ **'ಈಗ'** ಎನ್ನಿಸಿಕೊಳ್ಳುವದಕ್ಕೆ ತಕ್ಕವನು; ಅವನನ್ನು 'ಆಗ', ಅಥವಾ 'ಮುಂದೆ' ಎಂಬ ಕಾಲಕ್ಕೆ ತಳ್ಳುವದು ಯಾರಿಂದಲೂ ಸಾಧ್ಯವಿಲ್ಲ. ಇಂಥ ನಿತ್ಯವರ್ತಮಾನಸ್ವರೂಪದ

ಪರಮೇಶ್ವರನ ವಿಚಾರವನ್ನು "ಈ ತಿಂಗಳಿನ ಸಂದೇಶ" ಎಂದೇಕೆ, "ಈ ಕ್ಷಣದ ಸಂದೇಶ" ಎಂದೂ ಬೇಕಾದರೆ ಕರೆಯಬಹುದಾಗಿರುತ್ತದೆ. ಈ ಸಂದೇಶವು ಅತೀಂದ್ರಿಯಾರ್ಥವನ್ನು ತಿಳಿಸಬಲ್ಲ ವೇದದಲ್ಲಿರುತ್ತದೆ; ಆ ವೇದವು ಹೇಳುವ ಅರ್ಥವನ್ನು ಒಡೆದು ಬಿಡಿಸಿ ಹೇಳುವ ಸ್ಮೃತಿಪುರಾಣೇತಿಹಾಸಗಳೂ ದೇಶಭಾಷೆಯ ಗ್ರಂಥಗಳೂ ಸಾಧುಸಂತರ ಸೂಕ್ತಿಗಳೂ ಇದೇ ಅಮರವಾಣಿಯ ಸಂದೇಶವಾಗಿರುತ್ತದೆ.

ವೇದದಲ್ಲಿ ಈ ಶಾಶ್ವತತತ್ತ್ವವನ್ನು ತಿಳಿಯಿಸುವದಕ್ಕೆ ಸಹಾಯವಾಗಿರುವ ಅರ್ಥವಾದಗಳಿರುತ್ತವೆ; ಇದರಂತೆ ಪುರಾಣಾದಿಗಳಲ್ಲಿ ಕೆಲವು ರಾಜರ ವಂಶಗಳ ಮತ್ತು ವಂಶಾನುಚರಿತೆಗಳ ವಿವರವಿರುತ್ತದೆ. ಹೀಗೆಯೇ ದೇಶಭಾಷೆಯ ಗ್ರಂಥಗಳಲ್ಲಿಯೂ ಸಾಧುಗಳ ಉಪದೇಶಗಳಲ್ಲಿಯೂ ಸಮಯೋಚಿತವಾದ ಕಾಲ್ಪನಿಕ ಕಥೆಗಳೂ ದೃಷ್ಟಾಂತಗಳೂ ಇರುತ್ತವೆ. ಅವೆಲ್ಲ ಈ ನಿತ್ಯತತ್ತ್ವವನ್ನು ಚಿತ್ತಕ್ಕೆ ಹಿಡಿಯುವದಕ್ಕೆ ಉಪಯೋಗಿಸಿಕೊಂಡಿರುವ ಉಪಾಯಗಳೇ ಹೊರತು, ಅವನ್ನೇ ಪ್ರಧಾನವಾಗಿ ಆ ಗ್ರಂಥಗಳಾಗಲಿ ಸಾಧುಗಳಾಗಲಿ ಹೇಳಿರುವದಿಲ್ಲ. ಮುಖ್ಯವಾದದ್ದು ಎಂದೆಂದಿಗೂ ಎಲ್ಲೆಲ್ಲಿಯೂ ಎಲ್ಲಾ ಪ್ರಾಣಿಗಳಲ್ಲಿಯೂ ಎಲ್ಲಕ್ಕೂ ಆತ್ಮನಾಗಿರುವ ನಿತ್ಯವರ್ತಮಾನಸ್ವರೂಪವಾದ ತತ್ತ್ವವು. ಅದನ್ನು ತಿಳಿಯಿಸುವದರಿಂದಲೇ ಈ ಸಂದೇಶಗಳಿಗೆಲ್ಲ ಬೆಲೆ.

ಯಾರು ಈ ಪರಮಾತ್ಮನ ವಿಷಯವನ್ನು ಯಾವಾಗ ಎಲ್ಲಿ ಕೇಳಿದರೂ ಅದು ಅವರಿಗೆ ಚಿರಪರಿಚಿತವಾಗಿದ್ದು ಮರೆತಿದ್ದು ಈಗ ಸ್ಮೃತಿಗೆ ಬಂದ ಅಮೋಘವಾದ ಒಂದು ಆನಂದಸಾಧನವಾಗುವದರಲ್ಲಿ ಸಂಶಯವಿಲ್ಲ. ಕಡುಬಡವನಾದವನಿಗೆ ಹಳೆಯ ಕಾಗದಗಳಲ್ಲಿ ಸಿಕ್ಕಿದ-ತನ್ನ ಮನೆತನಕ್ಕೆಂದೇ ಶಾಶ್ವತವಾಗಿ ಉಪಯೋಗಕ್ಕೆಂದು ರಾಜರು ಬರೆಯಿಸಿಕೊಟ್ಟಿದ್ದ-ಉಂಬಳಿಯ ನಿರೂಪದಂತೆಯೂ ತನಗಿರುವ ಒಂದು ಸಣ್ಣ ಬಂಜರು ಜಮೀನನ್ನು ಆಳವಾಗಿ ಉಳುತ್ತಿರುವಲ್ಲಿ ಅನಿರೀಕ್ಷಿತವಾಗಿ ಸಿಕ್ಕಿದ ಒಂದು ವಜ್ರದ ಗನಿಯಂತೆಯೂ ಈ ಶ್ರವಣವು ಅಪರಿಮಿತವಾದ ಆನಂದವನ್ನು ತಂದುಕೊಡುವದು.

ಅಧ್ಯಾತ್ಮಸಂದೇಶಗಳಲ್ಲಿರುವ ಮತ್ತೊಂದು ಅಸಾಧಾರಣಧರ್ಮವೇನೆಂದರೆ, ಅವು ದ್ವೀಪಾಂತರಗಳಲ್ಲಿರುವ ವಿಚಿತ್ರಸಸ್ಯಗಳ ಅಥವಾ ಪ್ರಾಣಿಗಳ ಅಥವಾ ಬೆಲೆಯುಳ್ಳ ಪದಾರ್ಥಗಳ ವಿವರಣೆಯಂತಾಗಲಿ ಅತಿದೂರದ ಯುಗಾಂತರದಲ್ಲಿ ಆಗಬಹುದಾದ ವಿಚಿತ್ರಘಟನೆಗಳ ವರ್ಣನೆಯಂತಾಗಲಿ ಪರೋಕ್ಷವಾಗಿರುವ ವಿಷಯವನ್ನು ತಿಳಿಸುವದಿಲ್ಲ. ಇಲ್ಲಿಯೇ ಈಗಲೇ ನಮ್ಮಲ್ಲಿಯೇ ಇರುವ ಒಂದು ಅಮೋಘತತ್ತ್ವವನ್ನೂ ಅದರ ವಿಜ್ಞಾನದಿಂದ ಆಗುವ ಪರಮಪುರುಷಾರ್ಥವನ್ನೂ

ಆ ಸಂದೇಶಗಳು ವರ್ಣಿಸುತ್ತಿರುವವು. "ಆಹಾ ! ನನ್ನೊಳಗೇ ಇರುವ ಈ ನಿತ್ಯಪ್ರವಾಹಿಯಾದ ಆನಂದಾಮೃತದ ಬುಗ್ಗೆಯನ್ನರಿಯದೆ ಇದ್ದೆನಲ್ಲ! ಇಂಥ ಆನಂದದ ಸುದ್ದಿಯನ್ನು ತಿಳಿಸಿಕೊಟ್ಟ ಗುರುಶಾಸ್ತ್ರಗಳ ಉಪದೇಶಕ್ಕೆ ನಾನು ಎಷ್ಟು ಕೃತಜ್ಞನಾಗಿದ್ದರೆ ತಾನೆ ಋಣಮುಕ್ತನಾದೇನು ?"-ಎಂಬ ಭಾವವು ಮನಸ್ಸಿನಲ್ಲಿ ಮೊಳೆಯುವದು. ಉದಾಹರಣೆಗೆ ಒಂದು ಉಪನಿಷತ್ತಿನಲ್ಲಿರುವ ಈ ವಾಕ್ಯಗಳನ್ನು ಆಲಿಸಿರಿ :

**"ಬ್ರಹ್ಮವನ್ನು ಅರಿತುಕೊಂಡವನು ಪರಮಪುರುಷಾರ್ಥವನ್ನು ಹೊಂದುವನು. ಸತ್ಯವೂ ಜ್ಞಾನವೂ ಅನಂತವೂ ಆದ ಬ್ರಹ್ಮವು ತನ್ನ ಹೃದಯಗುಹೆಯಲ್ಲಿಯೇ ಇರುವ ಪರಮಾಕಾಶದಲ್ಲಿರುವದೆಂಬುದನ್ನು ಯಾವನು ಅರಿತುಕೊಳ್ಳುವನೋ ಅವನು ಸರ್ವಕಾಮಗಳನ್ನೂ ಏಕಕಾಲದಲ್ಲಿಯೇ ಸರ್ವಜ್ಞವಾದ ಬ್ರಹ್ಮರೂಪದಿಂದ ಪಡೆದುಕೊಳ್ಳುವನು.** ತೈತ್ತಿರೀಯೋಪನಿಷತ್ತು, 2-1.

ಆಹಾ ! ಎಂಥ ಒಸಗೆ ! ಬ್ರಹ್ಮವು ಅಥವಾ ಪರಮಾತ್ಮನು ಎಲ್ಲಿಯೋ ಯಾವಾಗಲೋ ಒಬ್ಬ ಮಹಾವೀರ್ಯನಿಗೆ ಕಾಣಿಸಿಕೊಳ್ಳುವನೆಂದು ಈ ವೇದವಾಕ್ಯವು ಹೇಳುತ್ತಿಲ್ಲ. ನಮ್ಮೆಲ್ಲರ ಹೃದಯಗುಹೆಯಲ್ಲಿಯೇ ಆ ಪರಮಾತ್ಮನು ಇರುತ್ತಾನೆ; ಅವನನ್ನು ಯಾರುಬೇಕಾದರೂ ಈಗಲೇ ಇಲ್ಲಿಯೇ ಇರುತ್ತಾನೆಂಬುದನ್ನು ಕಂಡುಕೊಳ್ಳಬಹುದು. ಆ ಪರಮಾತ್ಮನು ಪರಮಾರ್ಥಸತ್ಯಸ್ವರೂಪನು, ದೇಶಕಾಲಗಳಿಂದ ಮಾರ್ಪಡುವ ಸ್ವಭಾವದವನಲ್ಲ; ನಿತ್ಯಚೈತನ್ಯಸ್ವರೂಪನು, ಅವನನ್ನು ಕಾಣುವದಕ್ಕೆ ಮತ್ತೊಂದು ಸಾಧನದ ಬೆಳಕು ಬೇಕಿರುವದಿಲ್ಲ; ಅವನು ಅನಂತನು, ಯಾವ ಅಳತೆಗೂ ಸಿಕ್ಕದ ಅನಂತಪ್ರಕಾಶವನ್ನು ಬೀರುತ್ತಿರುವ ಜ್ಞಾನಸೂರ್ಯನಾಗಿ ನಮ್ಮ ಹೃದಯಾಕಾಶದಲ್ಲಿ ಯಾವಾಗಲೂ ಬೆಳಗುತ್ತಿರುತ್ತಾನೆ! ಈ ದಿವ್ಯಸಂದೇಶವು ಈಗಲೂ ನಮಗೂ ಅನ್ವಯಿಸುತ್ತದೆ ಎಂಬುದನ್ನು ಕೇಳಿದರೆ ಯಾರಿಗೆ ತಾನೆ ರೋಮಾಂಚನವಾಗುವದಿಲ್ಲ ?

ಈಗ ಅದೇ ಉಪನಿಷತ್ತಿನಲ್ಲಿರುವ ಮತ್ತೊಂದು ವಾಕ್ಯವನ್ನು ಕೇಳಿರಿ :

**"ಯಾವದನ್ನು ಬಣ್ಣಿಸಲಾರದೆ ವಾಕ್ಕುಗಳೆಲ್ಲವೂ ಹಿಂತಿರುಗುವವೋ ಯಾವದನ್ನು ವಿಷಯೀಕರಿಸಲಾರದೆ ಮನಸ್ಸೂ ಹಿಂತಿರುಗುವದೋ-ಹೀಗೆ ಮನೋವಾಕ್ಕುಗಳು ಮುಟ್ಟಲಾರದೆ ಹಿಂತಿರುಗಬೇಕಾಗಿರುವಂಥ-ಆ ಬ್ರಹ್ಮದ ಆನಂದವನ್ನು ಅರಿತುಕೊಂಡವನು ಏತಕ್ಕೂ ಅಂಜುವದಿಲ್ಲ. ಅಂಥವನನ್ನು 'ನಾನು ಏತಕ್ಕೆ ಪುಣ್ಯವನ್ನು ಮಾಡಲಿಲ್ಲ ? ಪಾಪವನ್ನೇಕೆ ಮಾಡಿದೆನು ?' ಎಂಬ ಯೋಚನೆಯು ಸಂತಾಪಗೊಳಿಸುವದಿಲ್ಲ."** -ತೈತ್ತಿರೀಯೋಪನಿಷತ್ತು, 2-9.

ಎಂಥ ಆನಂದಸಂದೇಶವಿದು! ಬ್ರಹ್ಮವು ನಮ್ಮ ಹೃದಯದಲ್ಲಿಯೇ ಇದೆ; ಅದು ಸತ್ಯಜ್ಞಾನಾನಂತಸ್ವರೂಪವಾಗಿರುತ್ತದೆ. ಇಷ್ಟೇ ಅಲ್ಲ, ಅದರ ಆನಂದಸ್ವರೂಪವನ್ನು

ಕಂಡುಕೊಂಡು ನಾವು ಎಂದೆಂದಿಗೂ ಯಾವ ಅಂಜಿಕೆಯೂ ಇಲ್ಲದೆ ಸುಖದಿಂದಿರಬಹುದು !

ಯಾರು ಇಂಥ ಸಂದೇಶವನ್ನು ಆಲೈಸುವದಕ್ಕೆ ಯೋಗ್ಯವಾದ ಕಿವಿಗಳನ್ನು ಸಂಪಾದಿಸಿಕೊಂಡಿರುವರೋ ಅವರೇ ಧನ್ಯರು. ಆದರೆ ಯಾರು ಈ ಸಂದೇಶ ವನ್ನು ಕೇಳಿದ ಬಳಿಕ, ಅಷ್ಟರಿಂದಲೇ ಸಂತುಷ್ಟರಾಗದೆ "ಈ ವಾಕ್ಯದ ಅರ್ಥವೇನು? ನಮ್ಮ ಹೃದಯದಲ್ಲಿಯೇ ನಿತ್ಯಾನಂದರೂಪನಾದ ಪರಮಾತ್ಮನಿರುವನೆ? ಹಾಗಾದರೆ ನಮಗೇಕೆ ಈ ಸುಖದುಃಖಗಳ ಅಲೆಗಳು ಬಡಿಯುತ್ತಿರುವವು? ನಾವೇಕೆ, ಈ ಏರಿಳಿತಗಳಿಂದ ಹೀಗೆ ಸಂಸಾರದಲ್ಲಿ ಅಲೆದಾಡುತ್ತಿರುವೆವು? ನಾವು ಪುಣ್ಯಪಾಪ ಗಳಿಗೆ ಅಂಜಬೇಕಾದದ್ದೇ ಇಲ್ಲವೆ? ಪುಣ್ಯಪಾಪಗಳನ್ನು ಮಾಡಿದರೆ ಅವುಗಳ ಫಲಗಳು ಆಗದೆ ಇದ್ದಾವೆ? ಆದರೆ ಸುಖದುಃಖಗಳು ತಪ್ಪದೆ ಉಂಟಾಗಲೇ ಬೇಕಲ್ಲವೆ? ಅವೂ ಆಗುವದಾದರೆ ಹರ್ಷವಿಷಾದಗಳ ಉಬ್ಬರವಿಳಿತಗಳು ಅವಶ್ಯ ವಾಗಿ ಆಗಬೇಕಲ್ಲ ! ಎಂದು ಮನಸ್ಸಿನಲ್ಲಿ ಚಿಂತಿಸುವದಕ್ಕೆ ಹೊರಡುತ್ತಾರೋ ಅವರೇ ಅಧ್ಯಾತ್ಮದ ಹಾದಿಯಲ್ಲಿ ಮುಂದೆಮುಂದೆ ನಡೆಯುವ ಧೀರರು; ಅವರಿಗೇ ಅಧ್ಯಾತ್ಮಶಾಸ್ತ್ರಗಳಲ್ಲಿ ಹೇಳಿರುವ ಪರಮಪುರುಷಾರ್ಥವು ದೊರಕತಕ್ಕದ್ದು.

ವೇದಾಂತಗಳೂ ಇತಿಹಾಸಪುರಾಣಗಳೂ ಎಂದೆಂದಿಗೂ ಇರುವ ಶಾಶ್ವತ ತತ್ತ್ವವನ್ನು ತಿಳಿಸುವವೆಂತಲೂ ಅದನ್ನು ಸರಿಯಾದ ರೀತಿಯಿಂದ ಅರಿತು ಕೊಂಡರೆ, ಅದನ್ನು ಅನುಭವಕ್ಕೆ ತಂದುಕೊಂಡರೆ, ಈಗಲೇ ಇಲ್ಲಿಯೇ ಕೃತಾರ್ಥ ರಾಗಿ ಆನಂದಿಸಬಹುದೆಂತಲೂ ಬಲ್ಲವರ ಉಪದೇಶದಿಂದ ಅರಿತುಕೊಂಡು ಆ ಉಪದೇಶದಲ್ಲಿ ಶ್ರದ್ಧಾತಾತ್ಪರ್ಯವುಳ್ಳವರು ಕೂಡಲೆ, "ಛೇ ! ಈ ಮೂರು ದಿನದ ಬಾಳಿನಲ್ಲಿ ಹಂದಿಯಂತೆ ಹೊರಳಾಡಿ ಫಲವೇನು? ಆ ಪರಮ ಪುರುಷಾರ್ಥವನ್ನೇ ನಾನು ಸಾಧಿಸಿಕೊಳ್ಳುವೆನು. ಅದು ಈ ಜನ್ಮದಲ್ಲಿ ನನಗೆ ಸಿಕ್ಕಿದರೆ ಸರಿ; ಇಲ್ಲದಿದ್ದರೆ ಅದನ್ನು ದೊರಕಿಸಿಕೊಳ್ಳುವ ಪ್ರಯತ್ನದಲ್ಲಿಯೇ ಈ ಜೀವನವನ್ನು ಕಳೆದು ಮುಂದಿನ ಜನ್ಮಕ್ಕಾದರೂ ಅದನ್ನು ಪಡೆಯುವೆನು!" ಎಂದು ದೃಢಸಂಕಲ್ಪವನ್ನು ಮಾಡುವರು. ಅಂಥ ಮಹನೀಯರಾದ ವಿವೇಕಿಗಳು ಈ ಇಂದ್ರಿಯಗಳ ಆಟದ ಬಯಲಿನಿಂದ ಕೂಡಲೆ ಹಿಂತಿರುಗುವರು; ಇದೇ ವೈರಾಗ್ಯವು. ಈ ಉತ್ಕಟವೈರಾಗ್ಯವು ನಿಜವಾಗಿ ಬಂದ ಧೀರರೇ ವೇದಾಂತ ವಾಕ್ಯಗಳ ಶ್ರವಣಕ್ಕೆ ಅಧಿಕಾರಿಗಳು.

ವೇದಾಂತವಾಕ್ಯಶ್ರವಣಕ್ಕೆ ವಿರಕ್ತಶಿಖಾಮಣಿಗಳಾದ ಪರಮಹಂಸಪರಿವ್ರಾಜಕರೇ ಮುಖ್ಯಾಧಿಕಾರಿಗಳೆಂಬುದನ್ನು ಆಗಾಗ್ಗೆ ತಿಳಿಸುತ್ತಾಬಂದಿದ್ದೇವೆ. ಆದರೆ ಮಿಕ್ಕವರು

ಯಾರೂ ವೇದಾಂತವಾಕ್ಯವನ್ನು ಕಿವಿಗೆ ಹಾಕಿಕೊಳ್ಳುವದು ನಿಷಿದ್ಧವೆಂದು ಯಾರೂ ತಿಳಿಯಬಾರದು. ಅಷ್ಟೇ ಅಲ್ಲ, ಮಂಗಲಗಳಿಗೆಲ್ಲ ಮಂಗಲಕರವಾದ ಆತ್ಮಸಂದೇಶವನ್ನು ತಿಳಿಸುವ ವೇದಾಂತವಾಕ್ಯಗಳು ಆಗಿಂದಾಗ್ಗೆ ಕಿವಿಗೆ ಬಿದ್ದರೇ ತಾಪತ್ರಯಗಳಿಂದ ಪೀಡಿತರಾದ ಸಂಸಾರಿಗಳಿಗೆ ವ್ಯವಹಾರದಲ್ಲಿ ಧೈರ್ಯವು ಬರುತ್ತದೆ; ನೀತಿಧರ್ಮಗಳ ಹಾದಿಯಲ್ಲಿಯೇ ಸುಖಜೀವನವನ್ನು ಸಾಗಿಸುತ್ತಿದ್ದು ತಮ್ಮ ನೆರೆಹೊರೆಯವರಿಗೂ ತಮ್ಮ ಸುಖಸಂನಿವೇಶದ ಲಾಭವನ್ನು ಹಂಚುವದಕ್ಕೆ ಸಹಾಯವಾಗುತ್ತದೆ.

ಇದಂತಿರಲಿ, ವಾಕ್ಯವನ್ನು ಸುಮ್ಮನೆ ಕೇಳಿದರೆ ಸಾಲದು; ವಾಕ್ಯಶ್ರವಣ ಮಾತ್ರದಿಂದಲೇ ತತ್ತ್ವವನ್ನು ಮನಗಂಡು ಕೃತಕೃತ್ಯರಾಗುವ ಮೇಧಾವಿಗಳು ಈ ಲೋಕದಲ್ಲಿ ಅತ್ಯಲ್ಪರಾಗಿರುತ್ತಾರೆ. ಸಾಮಾನ್ಯವಾಗಿ ವೇದಾಂತವಾಕ್ಯವನ್ನು ಕೇಳಿದ ಅನೇಕರಿಗೆ ವಾಕ್ಯಾರ್ಥದ ವಿಷಯದಲ್ಲಿ ಹಲವು ಸಂಶಯಗಳು ಉಂಟಾಗುತ್ತವೆ. ನೀನು ಅಸಂಸಾರಿಯಾದ ಪರಮಾತ್ಮನೇ-ಎಂಬುದೇ ಮುಖ್ಯವಾಗಿ ವೇದಾಂತಗಳ ಉಪದೇಶವು. ಆದರೆ ನಿತ್ಯದುಃಖಿಯಾಗಿ ಸಂಕಟಪಡುತ್ತಿರುವ ನಾನು ನಿತ್ಯಾನಂದ ಸ್ವರೂಪನಾದ ಪರಮಾತ್ಮನು ಹೇಗಾದೇನು? ಅಲ್ಪಜ್ಞನಾದ ನಾನು ಸರ್ವಜ್ಞನಾದ ಪರಮಾತ್ಮನೆಂದರೆ ಒಪ್ಪಬಹುದೆ? ಎಲ್ಲಿಯೋ ಕೆಲವು ವರ್ಷಗಳು ಭೂಮಿಯ ಮೇಲೆ ಬಾಳಿದ್ದು ಆಮೇಲೆ ಈ ದೇಹವನ್ನು ಬಿಟ್ಟು ಎಲ್ಲಿಯೋ ಹೋಗುವ ನಾನು ನಿತ್ಯಸಿದ್ಧನೂ ಶಾಶ್ವತನೂ ಆದ ಪರಮೇಶ್ವರನೆಂದು ಹೇಗೆತಾನೆ ನಂಬಲಾದೀತು? ಹೀಗೆಲ್ಲ ಜಿಜ್ಞಾಸುಗಳಿಗೆ ಸಂಶಯವುಂಟಾಗುವದು ಸ್ವಾಭಾವಿಕವಾಗಿರುತ್ತದೆ. ಆದ್ದರಿಂದ ವೇದಾಂತವಾಕ್ಯವನ್ನು ಕೇಳಿದಮಾತ್ರದಿಂದ ಸಂತುಷ್ಟರಾಗದೆ **ವಾಕ್ಯದ ಅರ್ಥವೇನೆಂಬುದನ್ನು ಮನಗೊಟ್ಟು ವಿಚಾರಮಾಡಬೇಕು.** ಈ ವಿಚಾರವನ್ನೇ ಮನನ ಎಂದು ಕರೆಯುತ್ತಾರೆ.

ಕರ್ಮ, ಉಪಾಸನೆ-ಇವುಗಳನ್ನು ತಿಳಿಸುವ ವಾಕ್ಯಗಳ ಶ್ರವಣಕ್ಕೂ ಪರಮಾರ್ಥತತ್ತ್ವವನ್ನು ಉಪದೇಶಿಸುವ ವಾಕ್ಯಗಳ ಶ್ರವಣಕ್ಕೂ ಒಂದು ಮುಖ್ಯವಾದ ಭೇದವಿದೆ. ಕರ್ಮವಾಕ್ಯವನ್ನು ಕೇಳಿದಮೇಲೆ "ಈ ವಾಕ್ಯವು ಏನನ್ನು ತಿಳಿಸುತ್ತದೆ; ನಾನು ಏನುಮಾಡಬೇಕು. ಏನುಮಾಡಬಾರದು? ಕರ್ಮವನ್ನು ಅಥವಾ ಉಪಾಸನೆಯನ್ನು ಯಾವಯಾವ ಕಾರಕಗಳನ್ನುಪಯೋಗಿಸಿಕೊಂಡು ಮಾಡಬೇಕು? ಅದನ್ನು ಹೇಗೆಹೇಗೆ ಮಾಡಬೇಕು?" ಎಂಬೀ ಬಗೆಯ ಸಂಶಯಗಳು ಉಂಟಾಗುತ್ತವೆ. ಆದರೆ ಈ ಸಂಶಯಗಳು ಬಗೆಹರಿಯುವದಕ್ಕೆ ನಮ್ಮ ಯಾವ ಅನುಭವವೂ ಉಪಯೋಗಕ್ಕೆ ಬರುವದಿಲ್ಲ. ಶಾಸ್ತ್ರವಾಕ್ಯವನ್ನೇ ಹಿಂದುಮುಂದಿನ ಸಂದರ್ಭ, ವಾಕ್ಯದಲ್ಲಿರುವ ಮಾತುಗಳ ಅರ್ಥ, ವಾಕ್ಯದ

ಅಭಿಪ್ರಾಯಕ್ಕೆ ಕಾಣಬರುವ ಶ್ರುತಿಲಿಂಗಾದಿಗಳು-ಇಷ್ಟನ್ನು ಮಾತ್ರ ನೋಡಿ ವಾಕ್ಯಾರ್ಥವನ್ನು ನಿರ್ಣಯಿಸಿಕೊಳ್ಳಬೇಕಾಗುವದು. ಉದಾಹರಣೆಗೆ ಸ್ವರ್ಗವನ್ನು ಬಯಸುವವನು ಜ್ಯೋತಿಷ್ಟೋಮವನ್ನು ಮಾಡಬೇಕು-ಎಂಬ ಒಂದು ವೇದ ವಾಕ್ಯವನ್ನು ತೆಗೆದುಕೊಳ್ಳಿರಿ. ಈ ವಾಕ್ಯದಲ್ಲಿ ಜ್ಯೋತಿಷ್ಟೋಮವೆಂಬ ಯಾಗವನ್ನು ಮಾಡಿದವನಿಗೆ ಸ್ವರ್ಗವು ಸಿಕ್ಕುತ್ತದೆ-ಎಂಬುದಿಷ್ಟನ್ನು ತಿಳಿದುಕೊಂಡರೆ ಸಾಕು, ಅಧಿಕಾರಿಯಾದವನು ಕೂಡಲೆ ಆ ಯಾಗವನ್ನು ಮಾಡುವ ಬಗೆಯನ್ನು ತಿಳಿದು ಕೊಂಡು ಅದಕ್ಕೆ ಬೇಕಾದ ಸಾಮಗ್ರಿಗಳನ್ನು ಸೇರಿಸಿಕೊಂಡು ಕರ್ಮಾನುಷ್ಠಾನಕ್ಕೆ ಪ್ರಾರಂಭಿಸಿಬಿಡಬಹುದು. ಇಲ್ಲಿ ಸ್ವರ್ಗದ ಸ್ವರೂಪವೇನು? ಜ್ಯೋತಿಷ್ಟೋಮವು ಅದಕ್ಕೆ ಹೇಗೆ ಸಾಧನವಾಗುತ್ತದೆ? ಸತ್ತಮೇಲೆ ಆಗುವ ಸ್ವರ್ಗದ ಫಲವು ಜ್ಯೋತಿಷ್ಟೋಮ ದಿಂದಲೇ ಆಗುವದೆಂದಾಗಲಿ, ಆ ಸ್ವರ್ಗಸುಖವನ್ನು ಅನುಭವಿಸುವದಕ್ಕೆ ನಾನು ಸತ್ತಬಳಿಕವೂ ಇರುವೆನೆಂದಾಗಲಿ, ಹೇಗೆ ಗೊತ್ತು?-ಎಂದು ಹೀಗೆ ಪ್ರಶ್ನೆಗಳನ್ನು ಎಬ್ಬಿಸಿ ಅನುಭವಕ್ಕೆ ಹೊಂದಿಕೆಯಾಗುವಂತೆ ತರ್ಕವನ್ನು ಮಾಡುವದಕ್ಕಾಗಲಿ ಸ್ವರ್ಗಾದಿಗಳನ್ನು ಈಗಲೆ ಅನುಭವಕ್ಕೆ ತಂದುಕೊಳ್ಳುವದಕ್ಕಾಗಲಿ ಆಗುವ ಹಾಗಿರುವದಿಲ್ಲ. ಆದ್ದರಿಂದ ಇಲ್ಲಿ ವಾಕ್ಯಾರ್ಥವನ್ನು ತಿಳಿದುಕೊಳ್ಳುವಮಟ್ಟಿಗೆ ವಿಚಾರವು ಅವಶ್ಯವಾದರೂ ಅನುಭವಾವಸಾನವಾದ ತರ್ಕವು ಬೇಕಿರುವದಿಲ್ಲ.

ಆದರೆ 'ಇದೆಲ್ಲವೂ ಬ್ರಹ್ಮವೇ' 'ಒಬ್ಬ ದೇವನೇ ಎಲ್ಲಾ ಪ್ರಾಣಿಗಳ ಹೃದಯ ದಲ್ಲಿಯೂ ಅಡಗಿರುತ್ತಾನೆ' 'ನಮ್ಮ ಆತ್ಮನು ಜನ್ಮಮರಣಾದಿಗಳಿಲ್ಲದವನು' ಇಂಥ ವೇದಾಂತವಾಕ್ಯಗಳನ್ನು ಕೇಳಿದರೆ ಕರ್ಮಾದಿವಾಕ್ಯಗಳಂತೆ ಅಷ್ಟರಿಂದಲೇ ತೃಪ್ತನಾಗಿರುವದಕ್ಕೂ ಬರುವದಿಲ್ಲ; ಈ ವಾಕ್ಯಗಳ ಅರ್ಥವನ್ನು ತಿಳಿದ ಬಳಿಕ ಮತ್ತೆ ಯಾವದನ್ನಾದರೂ ಮಾಡಬೇಕೆಂಬ ಅಪೇಕ್ಷೆಯೂ ಇರುವ ಹಾಗಿಲ್ಲ. ಈ ವಾಕ್ಯಗಳು ಇಲ್ಲಿಯೇ ಈಗಲೇ ಅನುಭವಕ್ಕೆ ಬರುವ ವಿಷಯವನ್ನು ತಿಳಿಸುತ್ತವೆ; ಆ ವಿಷಯವನ್ನು ನಾವು ಅರಿತುಕೊಂಡರೆ ಮಾಡಬೇಕಾದದ್ದಾಗಲಿ ಪಡೆಯಬೇಕಾದ ದ್ದಾಗಲಿ ಏನೂ ಉಳಿಯುವಂತೆಯೂ ಇಲ್ಲ. ವೇದಾಂತವಾಕ್ಯಗಳು ಹೀಗೆ ವಾಕ್ಯಜ್ಞಾನಮಾತ್ರದಿಂದಲೇ ಅನುಭವಗಮ್ಯವಾದ ತತ್ತ್ವವನ್ನು ತಿಳಿಸಿ ಆ ಅನುಭವ ಮಾತ್ರದಿಂದಲೇ ನಮ್ಮನ್ನು ಕೃತಕೃತ್ಯವಾಗಿ ಮಾಡುವದರಿಂದ ಈ ವಾಕ್ಯಗಳನ್ನು ಬರಿಯ ವಾಕ್ಯಗಳು ಎಂಬ ಕಾರಣದಿಂದ ಅವುಗಳಲ್ಲಿರುವ ಅಭಿಪ್ರಾಯಗಳಿಗೆ ನಾವು ಒಪ್ಪಿಗೆಕೊಡುವ ಹಾಗಿಲ್ಲ. ಅವುಗಳನ್ನು ತರ್ಕದ ಒರೆಗಲ್ಲಿನಿಂದ ತಿಕ್ಕಿ ಪರೀಕ್ಷಿಸಿ ಈ ವಾಕ್ಯಗಳು ಹೇಳುವ ಅರ್ಥವು ಅನುಭವಕ್ಕೆ ಹೊಂದುತ್ತದೆಯೆ, ಇಲ್ಲವೆ?-ಎಂಬುದನ್ನು ನೋಡಿಕೊಳ್ಳಬೇಕಾಗುವದು. ಇದೇ ಮನನವು.

ವೇದಾಂತವಾಕ್ಯಗಳ ಬೋಧೆಯನ್ನು ಅನುಭವಕ್ಕೆ ತಂದುಕೊಳ್ಳುವದಕ್ಕೆ ಮನನವೂ ಬೇಕೆನ್ನುವದಕ್ಕೆ ಉಪನಿಷತ್ತಿನಲ್ಲಿ ಒಂದು ನಿದರ್ಶನವನ್ನು ಕೊಟ್ಟಿದೆ. ಗಂಧಾರದೇಶದಿಂದ ಒಬ್ಬ ಸಾಹುಕಾರನನ್ನು ಕಳ್ಳರು ಅವನ ಕಣ್ಣನ್ನೂ ಕೈಗಳನ್ನೂ ಕಟ್ಟಿ ದೂರದಲ್ಲಿದ್ದ ಒಂದು ನಿರ್ಜನವಾದ ಕಾಡಿಗೆ ತಂದುಬಿಟ್ಟು ಹೊರಟು ಹೋದರಂತೆ. ಅವನು ದಿಕ್ಕುಗಾಣದೆ ಗಟ್ಟಿಯಾಗಿ ಅಳುತ್ತಾ ಅತ್ತಿತ್ತ ಅಡ್ಡಾಡುತ್ತಾ ಕಷ್ಟಪಡುತ್ತಿದ್ದನಂತೆ. ದೈವವಶದಿಂದ ಯಾವನೋ ಒಬ್ಬ ಹಾದಿಹೋಕನು ಕರುಣೆ ಯಿಂದ ಅವನ ಕಣ್ಣಿಗೆ ಕಟ್ಟಿದ್ದ ಬಟ್ಟೆಯನ್ನು ಬಿಚ್ಚಿ "ಈ ದಿಕ್ಕಿನಲ್ಲಿ ಗಂಧಾರ ದೇಶವಿದೆ; ಈ ದಿಕ್ಕಿಗೆ ಹೋಗು" ಎಂದು ತಿಳಿಸಿಕೊಟ್ಟನಂತೆ. ಆ ಸಾಹುಕಾರನು ದಾರಿಯ ಜನರನ್ನು ಕೇಳುತ್ತಾ ಊರಿಂದೂರಿಗೆ ಹೋಗಿ ತನ್ನ ಬುದ್ಧಿಯನ್ನೂ ಉಪಯೋಗಿಸಿಕೊಂಡು ಗಂಧಾರದೇಶದ ಮಾರ್ಗವನ್ನು ಗೊತ್ತುಹಿಡಿದುಕೊಂಡು ತನ್ನ ಊರನ್ನು ಸೇರಿದನಂತೆ.

ಇದರಂತೆಯೇ ವೇದಾಂತದಲ್ಲಿ ಉಪದೇಶಿಸಿರುವ ಬ್ರಹ್ಮಾತ್ಮತತ್ತ್ವವನ್ನು ಮನಗಾಣ ಬೇಕೆಂದು ಬಯಸುವವರು ಅನುಭವಿಗಳಾದ ಆಚಾರ್ಯರಿಂದಲೇ ವೇದಾಂತ ಶ್ರವಣವನ್ನು ಮಾಡಬೇಕು. ಆ ಆಚಾರ್ಯರ ಸದುಕ್ತಿಯನ್ನು ಗ್ರಹಣ ಮಾಡುವ ಯೋಗ್ಯತೆ ಯುಳ್ಳವನಾಗಬೇಕಲ್ಲದೆ, ಆ ಉಪದೇಶವನ್ನು ತರ್ಕಕ್ಕೆ ವಿರುದ್ಧವಾಗದಂತೆ ವಿಚಾರ ಮಾಡಿಯೇ ಅನುಭವಕ್ಕೆ ಕೂಡಿಸಿಕೊಳ್ಳಬೇಕು. ಹಾಗಾದರೇ ಶ್ರೋತೃಗಳ ಅಜ್ಞಾನವೆಂಬ ಕಣ್ಣುಬಟ್ಟೆಯು ಬಿಚ್ಚಿಹೋಗುವದು, ಪರಮಾರ್ಥತತ್ತ್ವದ ಅನುಭವವೂ ಆಗುವದು.

## 38. ಅನುಭವಪ್ರಧಾನ ವೇದಾಂತ ವಾಕ್ಯಗಳು

ಜಗತ್ತಿನ ಆಧ್ಯಾತ್ಮಿಕವಾಙ್ಮಯರಾಶಿಯಲ್ಲೆಲ್ಲ ವೇದಾಂತಗಳಲ್ಲಿ, ಎಂದರೆ ಉಪ ನಿಷತ್ತುಗಳಲ್ಲಿ ಒಂದು ವಿಶೇಷವಿರುತ್ತದೆ. ಅವುಗಳಲ್ಲಿ ಪ್ರತಿಪಾದಿಸಿರುವದೇನೆಂದರೆ, ಪರಮಾರ್ಥತತ್ತ್ವವು ಈ ಬ್ರಹ್ಮಾಂಡದಲ್ಲಿರುವ ಪ್ರಾಣಿಗಳಿಗೆಲ್ಲ ಆತ್ಮಭೂತವಾಗಿರು ತ್ತದೆ ಎಂಬುದು. ಪರಮೇಶ್ವರನು ಜಗತ್ತನ್ನು ಸೃಷ್ಟಿಮಾಡಿ ಅದನ್ನು ಬಿಟ್ಟು ಎಲ್ಲಿಯೋ ಇರುತ್ತಾನೆಂಬ ಭಾವನೆಯುಂಟಾಗುವ ಹಾಗೆ ಅವನನ್ನು ವರ್ಣಿಸಿರುವ ಧರ್ಮ ಗ್ರಂಥಗಳು ಅನೇಕವಾಗಿರುತ್ತವೆ. ಆದರೆ ಅವನು ಇಡಿಯ ಜಗತ್ತನ್ನೆಲ್ಲ ಈಗಲೂ ವ್ಯಾಪಿಸಿಕೊಂಡಿರುತ್ತಾನೆಂಬುದನ್ನು ಅತ್ಯಂತವಿಸ್ಪಷ್ಟವಾದ ಪ್ರಕಾರದಿಂದ ಮತ್ತೆಮತ್ತೆ ಸಾರಿರುವದು ಉಪನಿಷತ್ತುಗಳಲ್ಲಿ ಮಾತ್ರವೇ ಆಗಿರುತ್ತದೆ. ಪರಮೇಶ್ವರನು ನಮ್ಮನ್ನು ಸೃಷ್ಟಿಸಿದವನು, ಸರ್ವಜ್ಞನು, ಸರ್ವಶಕ್ತನು, ನಮಗೆ ತಂದೆ, ದಯಾದಾಕ್ಷಿಣ್ಯಾದಿ ಗುಣಗಳುಳ್ಳವನು-ಎಂದು ಮುಂತಾಗಿ ಬಣ್ಣಿಸಿರುವ ಗ್ರಂಥಗಳೂ ಉಂಟು. ಆದರೆ ಆತನು ನಮ್ಮ ಹೃದಯದಲ್ಲಿಯೇ ನೆಲಸಿರುವ ನಮ್ಮೆಲ್ಲರ ಆತ್ಮನೇ ಆಗಿರುತ್ತಾನೆ ಎಂದು ತಿಳಿಸಿಕೊಟ್ಟಿರುವದು ಮಾತ್ರ ವೇದಾಂತಗಳಲ್ಲಿಯೇ ಕಂಡುಬರುತ್ತಿದೆ.

ಹೀಗಿರುವದರಿಂದ ನಾವು ವೇದಾಂತವಾಕ್ಯಗಳನ್ನು ಆಗಾಗ್ಗೆ ಶ್ರವಣ ಮಾಡು ವದು ನಮಗೂ ಪರಮೇಶ್ವರನಿಗೂ ಇರುವ ಈ ನಿಕಟಸಂಬಂಧವನ್ನು ಮತ್ತೆಮತ್ತೆ ನೆನಪಿಗೆ ಕೊಡುತ್ತದೆ. ಅಮಂಗಲಕರವಾಗಿರುವ ವ್ಯವಹಾರದ ಸುದ್ದಿಗಳನ್ನು ಕೇಳಿ ಕೇಳಿ ಅಂತಃಕರಣವನ್ನು ಹೊಲೆಗೆಡಿಸಿಕೊಂಡು ಶೋಕಮೋಹಗಳಿಂದ ವ್ಯಥೆ ಪಡುತ್ತಿರುವ ಮಾನವರಿಗೆ ವೇದಾಂತದ ಈ ದಿವ್ಯಸಂದೇಶಗಳು ಕಿವಿಗೆ ಇಂಪನ್ನೂ ಹೃದಯಕ್ಕೆ ತಂಪನ್ನೂ ತಂದುಕೊಟ್ಟು ಸುಖಸಮಾಧಾನಗಳಲ್ಲಿ ಅದ್ದುತ್ತಿರುತ್ತವೆ. ಆದ್ದರಿಂದ ವಿವೇಕಿಗಳಾದವರು ಸಂಸ್ಕೃತದಲ್ಲಿ ಉಪನಿಷತ್ತುಗಳಲ್ಲಿ ಅಥವಾ ಅವುಗಳ ಅಭಿಪ್ರಾಯಗಳನ್ನು ತಿಳಿಸುವ ದೇಶಭಾಷೆಗಳಲ್ಲಿ ಬಲ್ಲ ಅನುಭವಿಗಳು ರಚಿಸಿರುವ ಪ್ರಾಸಾದಿಕಗ್ರಂಥಗಳಲ್ಲಿ ಕಂಡುಬರುವ ಆಧ್ಯಾತ್ಮಿಕಸಂದೇಶಗಳನ್ನು ಮತ್ತೆಮತ್ತೆ ಶ್ರವಣ ಮಾಡುತ್ತಿರಬೇಕು. ಆದರೆ ಬರಿಯ ಶ್ರವಣದಿಂದಲೇ ವೇದಾಂತಾರ್ಥವನ್ನು ನಿರ್ಣಯಿಸಿಕೊಳ್ಳುವ ಸಾಮರ್ಥ್ಯವುಳ್ಳವರು ಬಹುಕಡಿಮೆಯ ಸಂಖ್ಯೆಯಲ್ಲಿರು ವದರಿಂದ ಆ ವಾಕ್ಯಾರ್ಥಗಳ ವಿಚಾರವೂ ಅವಶ್ಯವಾಗಿರುತ್ತದೆ. ವೇದಾಂತ ವಾಕ್ಯಗಳನ್ನು ಸಂದರ್ಭಕ್ಕೂ ಹಿಂದುಮುಂದಿನ ಪ್ರತಿಪಾದನೆಗೂ ಹೊಂದುಗಡೆ ಯಾಗುವಂತೆ ಅರ್ಥವನ್ನು ಮಾಡಿಕೊಳ್ಳಬೇಕಲ್ಲದೆ ಅವುಗಳು ಯುಕ್ತಿಶುದ್ಧವೂ ಆಗಿರುತ್ತವೆ ಎಂಬುದನ್ನು ನಾವು ಮನಗಾಣುವದಕ್ಕೆ ಪ್ರಯತ್ನಿಸುವದು ಅವಶ್ಯ ವಾಗಿರುತ್ತದೆ. ಏಕೆಂದರೆ ಪರಮಾತ್ಮನು ನಾವು ಸತ್ತಬಳಿಕ ಲೋಕಾಂತರದಲ್ಲಿ ಕಾಲಾಂತರದಲ್ಲಿ ಕಂಡುಕೊಳ್ಳಬೇಕಾಗಿರುವ ವಸ್ತುವಿಶೇಷವಲ್ಲ. ಈಗಲೇ ಇಲ್ಲಿಯೇ ಅರಿತು ಆನಂದವನ್ನು ಅನುಭವಿಸುವದಕ್ಕೆ ಆನುಕೂಲ್ಯವನ್ನು ಕಲ್ಪಿಸಿಕೊಡುವಂಥ ಅನಾಯಾಸ ಪ್ರಾಪ್ಯವಾದ ವಸ್ತುವದು.

ವೇದಾಂತವಾಕ್ಯವನ್ನು ಮನನಮಾಡಬೇಕು ಎಂದು ಹೇಳುವದರ ಅರ್ಥವನ್ನು ಮುಮುಕ್ಷುಗಳು ಮನವರಿಕೆಮಾಡಿಕೊಳ್ಳುವದು ಅವಶ್ಯವಾಗಿರುತ್ತದೆ. ಮನನವೆಂದರೆ ತರ್ಕಿಸುವದಷ್ಟೆ; ಉನಿಷತ್ತುಗಳೇ ಹೀಗೆ ತರ್ಕದ ಸಹಾಯವನ್ನು ಬಯಸುವದರಿಂದ ಅವಕ್ಕೆ ಲೌಕಿಕತರ್ಕವನ್ನೂ ಉಪಯೋಗಿಸುವದು ಕರ್ತವ್ಯವಾಗಿದೆ ಎಂದು ಅನೇಕರು ತಿಳಿದುಕೊಂಡಿರುತ್ತಾರೆ. ಆದರೆ ತರ್ಕವು ಬೇಕೆಂದಮಾತ್ರಕ್ಕೆ ಮನಸ್ಸನ್ನು ಕಡಿವಾಣ ವಿಲ್ಲದ ಕುದುರೆಯಂತೆ ಕಂಡಕಡೆಗೆ ಹರಿಯಗೊಡಬೇಕು ಎಂದು ಬಗೆಯುವದು ಸರಿಯಾಗಲಾರದು. ಏಕೆಂದರೆ ಲೋಕದಲ್ಲಿ ಜನರು ಉಪಯೋಗಿಸುವ ತರ್ಕವು ನಿಲುಗಡೆಯಿಲ್ಲದ್ದಾಗಿರುತ್ತದೆ. ವ್ಯವಹಾರದಲ್ಲಿ ಜನರು ಇದು ಹೀಗಿರಬೇಕು, ಅದು ಹಾಗಿರಬೇಕು-ಎಂದು ಊಹಿಸುವ ತರ್ಕವು ತಪ್ಪಾಗಿತ್ತೆಂಬುದು ಅವರವರಿಗೇ ಬೇಗನೆ ಗೊತ್ತಾಗಿಬಿಡುತ್ತದೆ. 'ಈ ಪದಾರ್ಥವು ಪಥ್ಯವೆಂದು ತಿಳಿದು ತಿಂದೆನು;

ಆದರೆ ಅದರಿಂದ ನಾನು ಪಡಬಾರದ ವ್ಯಥೆಯನ್ನು ಅನುಭವಿಸುತ್ತಿದ್ದೇನೆ, 'ಆ ಮನುಷ್ಯನು ಆಪ್ತನೆಂದು ಬಗೆದು ಅವನ ಮಾತನ್ನು ನಂಬಿದೆನು; ಈಗ ಆ ನಂಬಿಕೆಯ ದುಷ್ಫಲವನ್ನು ಅನುಭವಿಸುತ್ತಿದ್ದೇನೆ 'ಈ ಕೆಲಸವನ್ನು ಮಾಡಿದರೆ ನನ್ನ ಇಷ್ಟಾರ್ಥವು ನೆರವೇರುವದೆಂದು ತಿಳಿದಿದ್ದೆನು; ಈ ಮಾಡಿದ್ದುಣ್ಣೋ ಮಹಾರಾಯ ಎಂಬಂತೆ ಅದರ ಅನಿಷ್ಟಪರಿಣಾಮವನ್ನು ನಾನು ಸಹಿಸಿಕೊಳ್ಳ ಬೇಕಾಗಿದೆ'-ಎಂದು ಮುಂತಾಗಿ ಜನರು ಆಡಿಕೊಳ್ಳುವದು ಪ್ರತಿದಿನವೂ ನಮ್ಮ ಕಿವಿಗೆ ಬೀಳುತ್ತಲೇ ಇದೆಯಲ್ಲವೆ? ತಪ್ಪುತರ್ಕದಿಂದ ಮಾಡಿದ ನಿಶ್ಚಯದ ಆಧಾರದ ಮೇಲೆ ಮನುಷ್ಯನು ಮಾಡುವ ವ್ಯವಹಾರವೇ ಅವನು ಅನುಭವಿಸುತ್ತಿರುವ ಅನರ್ಥಗಳಿಗೆಲ್ಲ ಮೂಲವು ಎಂಬಿದು ದಿನದಿನವೂ ಕ್ಷಣಕ್ಷಣಕೂ ನಮಗೆ ಮನ ದಟ್ಟಾಗುತ್ತಿರುತ್ತದೆ. ಆದ್ದರಿಂದ ಯಾವದಾದರೊಂದು ತರ್ಕವನ್ನು ಉಪಯೋಗಿಸು ವದೆಂದರೆ, ಆಸ್ಪತ್ರೆಯಲ್ಲಿ ಯಾವದೋ ಒಂದು ಸೀಸೆಯಲ್ಲಿದ್ದದ್ದನ್ನು ಔಷಧಿಯೆಂದು ಸೇವಿಸುವ ಮೂರ್ಖರೋಗಿಯ ಅನುಕರಣವಾದೀತೆಂಬುದು ಸ್ಪಷ್ಟವಾಗಿರುತ್ತದೆ.

ಈ ಕಾರಣದಿಂದ ದುಸ್ತರ್ಕವನ್ನು ಎಂದಿಗೂ ಅನುಸರಿಸಬಾರದು. ಇಂಥ ತರ್ಕವನ್ನು ಅವಲಂಬಿಸುವವನು ಲೋಕವ್ಯವಹಾರದಲ್ಲಿಯೇ ತಪ್ಪುಹೆಜ್ಜೆಹಾಕುತ್ತಾ ಬಾರಿಬಾರಿಗೂ ಅನರ್ಥದ ಗುಂಡಿಗಳಲ್ಲಿ ಬಿದ್ದು ಸಂಕಟಪಡುತ್ತಾನೆ. ಆದರೆ ಇದು ದುಸ್ತರ್ಕವೆಂಬುದನ್ನು ನಿರ್ಣಯಿಸಿಕೊಳ್ಳುವದು ಹೇಗೆ? ಒಂದೆರಡು ಸಲ ಬುದ್ಧಿಯನ್ನು ಹೊರಳಾಡಿಸಿ ಅದು ಸರಿಯಲ್ಲ, ಇದೇ ಸರಿ-ಎಂದು ನಿಶ್ಚಯಿಸುವದೇನೂ ಸತ್ತರ್ಕವಾಗಲಾರದು. ಒಮ್ಮೆ ಒಬ್ಬ ಸಾಧುವೇಷಧಾರಿಯು ಒಂದು ಪುಸ್ತಕವನ್ನು ಓದುತ್ತಿದ್ದಾಗ 'ಉದ್ದನೆಯ ಗಡ್ಡವು ಮೂರ್ಖತನದ ಗುರುತು' ಎಂಬ ವಾಕ್ಯವೊಂದು ಅವನ ಕಣ್ಣಿಗೆ ಬಿದ್ದಿತಂತೆ. ಅವನು ಕೂಡಲೆ ತನ್ನ ಗಡ್ಡದ ಉದ್ದವನ್ನು ಕಡಿಮೆಮಾಡಿ ಕೊಂಡುಬಿಡಬೇಕೆಂದು ಯೋಚಿಸಿ ಎಡಗೈಯಲ್ಲಿ ಗಡ್ಡವನ್ನು ಹಿಡಿದುಕೊಂಡು 'ಇಷ್ಟುದ್ದವಿದ್ದರೆ ಸಾಕು' ಎಂದು ನಿಶ್ಚಯಿಸಿ ಅದರ ಕೆಳಗಿದ್ದ ಭಾಗಕ್ಕೆ ಬಲಗೈಯಿಂದ ದೀಪದ ಕುಡಿಯನ್ನು ಜೋಡಿಸಿಕೊಂಡನಂತೆ! ಗಡ್ಡವು ಹೊತ್ತಿಕೊಂಡು ಕೈಯನ್ನೂ ಸುಟ್ಟು ಅವನ ಮೌರ್ಖ್ಯವನ್ನೂ ದೃಢಗೊಳಿಸಿತೆಂಬುದನ್ನು ಹೇಳುವದೇನೂ ಅವಶ್ಯವಿಲ್ಲವಷ್ಟೆ? ಅಲ್ಪಜ್ಞರಾದ ನಮ್ಮಂಥವರು ಶ್ರುತಿಯ ಅರ್ಥವನ್ನು ನಿಶ್ಚಯಿಸು ವದಕ್ಕೆಂದು ನಮ್ಮ ಕ್ಷುದ್ರಬುದ್ಧಿಗೆ ತೋರಬಹುದಾದ ತರ್ಕವನ್ನು ಉಪಯೋಗಿಸಿ ಮಾಡುವ ತೀರ್ಮಾನವೂ ಹೀಗೆ ಅನರ್ಥಕಾರಿಯೇ ಆಗುವ ಸಂಭವವಿದೆ.

ಶ್ರುತ್ಯರ್ಥಕ್ಕೆ ಶಾಸ್ತ್ರಜ್ಞರ ತರ್ಕವನ್ನು ಉಪಯೋಗಿಸಿಕೊಳ್ಳುವದೇ ಉತ್ತಮ ಎಂದು ಕೆಲವರಿಗೆ ತೋರಬಹುದು. ಏಕೆಂದರೆ ಶಾಸ್ತ್ರಜ್ಞರು ಆಳವಾಗಿ ವಿಷಯ

ವಿವೇಚನೆಯನ್ನು ಮಾಡಿರುತ್ತಾರೆ. ಸಾಮಾನ್ಯಜನರನೇಕರು ಅವರ ಅನುಯಾಯಿಗಳಾಗಿ ಪುರುಷಾರ್ಥವನ್ನು ಪಡೆದುಕೊಂಡಿರುವೆವೆಂದು ಹೇಳುತ್ತಾರೆ. ಅವರಲ್ಲಿ ಕೆಲವರನ್ನು ಸರ್ವಜ್ಞರೆಂದೂ ಸಿದ್ಧಪುರುಷರೆಂದೂ ಸಂಭಾವಿಸಿರುತ್ತಾರೆ. ಆದರೆ ಈ ಹೀಗೆ ಶಾಸ್ತ್ರಜ್ಞರ ತರ್ಕವನ್ನು ಅನುಸರಿಸುವದರಲ್ಲಿಯೂ ತೊಡಕುಗಳಿಲ್ಲದೆ ಇಲ್ಲ. ಏಕೆಂದರೆ ಶಾಸ್ತ್ರಜ್ಞರೆಲ್ಲರೂ ಒಂದೇ ಬಗೆಯ ತರ್ಕವನ್ನು ಅನುಸರಿಸಿಲ್ಲ. ಸಾಂಖ್ಯರ ತರ್ಕ, ವೈಶೇಷಿಕರ ತರ್ಕ–ಇವುಗಳು ಪರಸ್ಪರವಾಗಿ ಅತ್ಯಂತವಿರುದ್ಧವಾಗಿರುತ್ತವೆ. ಇದರಂತೆ ಹಿಂದಿನವರ ತರ್ಕಕ್ಕೂ ಈಗಿನ ಕಾಲದವರ ತರ್ಕಕ್ಕೂ ತಾರತಮ್ಯವಿದೆ. ಭೌತಿಕಶಾಸ್ತ್ರಜ್ಞರ ತರ್ಕ ಸರಣಿಯೇ ಒಂದು ಹೊಸದಾರಿಯನ್ನು ಹಿಡಿದಿರುತ್ತದೆ. ಹೀಗಿರುವದರಿಂದ ಯಾವ ತರ್ಕವು ಸರಿಯಾದದ್ದೆಂಬುದನ್ನು ಸಾಮಾನ್ಯಪ್ರಜ್ಞರಾದ ನಾವುಗಳು ಹೇಗೆ ನಿರ್ಣಯಿಸೋಣ? ಅವರವರ ಶಾಸ್ತ್ರಪ್ರವರ್ತಕರನ್ನು ಅವರವರು ಸರ್ವಜ್ಞರೆಂದೂ ಸಿದ್ಧಪುರುಷರೆಂದೂ ಬಗೆಯುತ್ತಿದ್ದಾರೆ; ಕಿಂಚಿಜ್ಜ್ಞರೂ ಯಾವ ಸಿದ್ಧಿಯೂ ಇಲ್ಲದವರ ಆದ ನಾವು ಯಾರನ್ನು ಅನುಸರಿಸುವದು? ತರ್ಕವು ನಿಲುಗಡೆಯಿಲ್ಲದ್ದಾಗಿದೆ; ದರ್ಶನಗಳು ಭಿನ್ನಭಿನ್ನವಾಗಿವೆ; ಇಂಥವನೊಬ್ಬ ಋಷಿಯ ಮತವನ್ನೇ ನಾವು ಪ್ರಮಾಣವೆಂದು ಗಣಿಸಬೇಕು–ಎಂಬುದಕ್ಕೆ ಯಾವ ನಿರ್ಣಾಯಕಸಾಧನವೂ ದೊರಕಿಲ್ಲ. ಹೀಗಿರುವಲ್ಲಿ ಯಾವ ತರ್ಕವನ್ನು ಅವಲಂಬಿಸೋಣ? ಎಂಬ ಪ್ರಶ್ನೆಯು ಆಪ್ತವಚನವನ್ನು ಅವಲಂಬಿಸಿದವರಿಗೂ ಹಾಗೆಯೇ ಉಳಿದುಕೊಳ್ಳುತ್ತದೆ.

ಆದರೆ ಶ್ರುತಿಯ ಅರ್ಥವನ್ನು ಮನಗಾಣುವದಕ್ಕೆ ಬೇಕಾದ ತರ್ಕವನ್ನು ನಾವೇ ಈಗ ಹೊಸದಾಗಿ ಗೊತ್ತುಪಡಿಸಬೇಕಾಗಿರುವದಿಲ್ಲ, ಏಕೆಂದರೆ ಶ್ರುತಿಯೇ ತನ್ನ ಅಭಿಪ್ರಾಯವನ್ನು ವಿಶದಗೊಳಿಸುವದಕ್ಕಾಗಿ ಕೆಲವು ತರ್ಕಗಳನ್ನು ಉದಾಹರಿಸಿರುತ್ತದೆ. ಶ್ರುತಿಯು ಹೇಳುವದರ ತತ್ತ್ವವನ್ನು ನಿರ್ಣಯಿಸುವದಕ್ಕೆ ಶ್ರುತಿಯು ನಮ್ಮ ಮುಂದಿಟ್ಟಿರುವ ಜಾತಿಯ ತರ್ಕವನ್ನು ಅನುಸರಿಸಬೇಕೆಂಬುದು ಸರ್ವಗ್ರಾಹ್ಯವಾಗಿರಬೇಕಲ್ಲವೆ? ಆ ತರ್ಕದ ವೈಶಿಷ್ಟ್ಯವು ಯಾವದು? ಇದನ್ನು ನಾವು ಮೊದಲು ಕಂಡುಕೊಳ್ಳುವದಕ್ಕೆ ಯತ್ನಿಸಬೇಕು. ಶ್ರುತಿಯು ಹೇಳುವ ವಿಷಯವು ನಮ್ಮೆಲ್ಲರ ಆತ್ಮನೇ ಆಗಿ ಇಲ್ಲಿಯೇ ಈಗಲೇ ಅನುಭವಕ್ಕೆ ಬರತಕ್ಕದ್ದಾಗಿದೆಯೆಂದು ಆಗಲೆ ಹೇಳಿರುತ್ತೇನಷ್ಟೆ. ಈ ಕಾರಣದಿಂದ ಶ್ರುತಿಸಮ್ಮತವಾದ ತರ್ಕವೆಂದರೆ ಆ ಅನುಭವಕ್ಕೆ ಅಂಗವಾಗಿರುವ ತರ್ಕವಾಗಿರಬೇಕೆಂದು ತಾನೇ ಏರ್ಪಡುತ್ತದೆ.

ಶ್ರುತಿಯಲ್ಲಿ ಕೊಟ್ಟಿರುವ ತರ್ಕ, ದೃಷ್ಟಾಂತ–ಇವುಗಳ ಸ್ವಭಾವವನ್ನು ತಿಳಿಸುವದಕ್ಕೆ ಇಲ್ಲಿ ಒಂದೆರಡು ಉದಾಹರಣೆಗಳನ್ನು ಕೊಡಬಹುದು. ಯಾವದೊಂದನ್ನು

ತಿಳಿದರೆ ಮಿಕ್ಕದ್ದೆಲ್ಲವನ್ನೂ ತಿಳಿದಂತೆ ಆಗುವದೋ ಅದೇ ಪರಮಾರ್ಥವು ಎಂಬುದನ್ನು ಸ್ಫುಟಗೊಳಿಸುವದಕ್ಕೆ ಶ್ರುತಿಯಲ್ಲಿ ಕೆಲವು ದೃಷ್ಟಾಂತಗಳನ್ನು ಕೊಟ್ಟಿರುತ್ತದೆ. ಮಣ್ಣನ್ನು ಅರಿತುಕೊಂಡರೆ ಮಣ್ಣಿನಿಂದಾಗಿರುವ ಮಡಕೆ, ಕುಡಿಕೆ, ಶ್ರಾವೆ-ಮುಂತಾದವುಗಳೆಲ್ಲವನ್ನೂ ಅರಿತಂತೆ ಆಗುವದು; ಚಿನ್ನವನ್ನು ಅರಿತುಕೊಂಡರೆ ಚಿನ್ನದಿಂದಾಗಿರುವ ಕಡಗ, ಕಿರೀಟ-ಮುಂತಾದದ್ದೆಲ್ಲವನ್ನೂ ಅರಿತಂತೆ ಆಗುವದು; ಕಬ್ಬಿಣವನ್ನು ಅರಿತುಕೊಂಡರೆ ಅದರಿಂದಾಗಿರುವ ಉಳಿ, ಬಾಚಿ, ಕುಡುಗೋಲು-ಮುಂತಾದದ್ದೆಲ್ಲವನ್ನೂ ಅರಿತಂತೆ ಆಗುವದು. ಅಲ್ಲವೆ? ಇದರಂತೆ ಪರಮಾತ್ಮನನ್ನು ಅರಿತುಕೊಂಡರೆ ಆಕಾಶಾದಿ ಸಕಲಜಗತ್ತನ್ನೂ ಅರಿತಂತೆ ಆಗುವದು-ಎಂದು ಅಲ್ಲಿ ಹೇಳಿರುತ್ತದೆ. ಯಾವದನ್ನು ಯಾವದರ ಕಾರ್ಯವೆಂದು ವ್ಯವಹರಿಸುವೆವೋ ಆ ಕಾರ್ಯವು ಆ ಕಾರಣವಸ್ತುವಿಗಿಂತ ಬೇರೆಯಾಗಿರುವ ಸ್ವತಂತ್ರವಸ್ತುವಾಗಿರುವದಿಲ್ಲ ಎಂಬುದು ಈ ದೃಷ್ಟಾಂತದಲ್ಲಿ ವಿವಕ್ಷಿತವಾಗಿರುವ ವಿಷಯವು. ಈ ದೃಷ್ಟಾಂತದಿಂದ ಪರಮಾತ್ಮನಿಂದಲೇ ಆಕಾಶ, ಕಾಲ, ವಾಯು, ತೇಜಸ್ಸು-ಮುಂತಾದ ರೂಪದಲ್ಲಿರುವ ಜಗತ್ತೆಲ್ಲವೂ ಆಯಿತೆಂದು ಶ್ರುತಿಯಲ್ಲಿ ಹೇಳಿರುವದರ ಅಭಿಪ್ರಾಯವು ಈ ಜಗತ್ತು ಆ ಪರಮಾತ್ಮನಿಗಿಂತ ಬೇರೆಯಾಗಿ ಸ್ವತಂತ್ರವಾಗಿರುವದಿಲ್ಲ ಎಂದು ಏರ್ಪಡುವದು. ಈ ಶ್ರುತಿಯನ್ನು ನಾವು ಆಶ್ರಯಿಸಿದರೆ ಇಂಥ ಬೇರೆಯ ಲೌಕಿಕದೃಷ್ಟಾಂತಗಳನ್ನೂ ಉದಾಹರಿಸಿಕೊಂಡು ಕಾರ್ಯವು ತನ್ನ ಕಾರಣಕ್ಕಿಂತ ಬೇರೆಯಲ್ಲ ಎಂಬ ತರ್ಕವನ್ನು ಏರ್ಪಡಿಸಿಕೊಳ್ಳುವದಕ್ಕೆ ಬರುತ್ತದೆ. ಇಷ್ಟೇ ಅಲ್ಲ. ಜಗತ್ತು ಬ್ರಹ್ಮಕ್ಕಿಂತ ಅತ್ಯಂತ ವಿಲಕ್ಷಣಸ್ವಭಾವವುಳ್ಳದ್ದೆಂದು ತೋರಿದರೂ ಪರಮಾತ್ಮನಿಗಿಂತ ಎಂದಿಗೂ ಬೇರೆಯಾಗಿರುವ ಸ್ವತಂತ್ರತತ್ತ್ವವಲ್ಲ; ಆಮ್ಲಜನಕ, ಜಲಜನಕ-ಎಂಬ ಎರಡು ಅನಿಲಗಳಿಂದಾಗಿರುವ ನೀರು ತನ್ನ ಮೂಲಕಾರಣವಾಗಿರುವ ಆ ಅನಿಲಗಳಿಗಿಂತ ರೂಪ, ಕಾರ್ಯ, ಹೆಸರು-ಈ ಮೂರರಲ್ಲಿಯೂ ಅತ್ಯಂತವಿಲಕ್ಷಣವಾಗಿದ್ದರೂ ತತ್ತ್ವತಃ ಅವುಗಳಿಗಿಂತ ಬೇರೆಯಾದ ಸ್ವತಂತ್ರವಸ್ತುವಲ್ಲವಷ್ಟೆ?-ಎಂಬ ತರ್ಕವನ್ನು ನಾವು ಒಡ್ಡುವದಕ್ಕೆ ಅಡ್ಡಿಯಿರುವದಿಲ್ಲ. ಈ ತರ್ಕವು ಲೋಕಾನುಭವಸಿದ್ಧವಾದ ದೃಷ್ಟಾಂತಗಳ ಆಧಾರದಮೇಲೆ ಹುಟ್ಟಿರುವದರಿಂದ ಜಗತ್ತು ಪರಮಾತ್ಮನಿಗಿಂತ ಅನ್ಯವಲ್ಲ ಎಂಬಿದನ್ನು ಅನುಭವಕ್ಕೆ ತಂದುಕೊಳ್ಳಬೇಕೆಂಬ ಜಿಜ್ಞಾಸುಗಳಿಗೆ ಉತ್ತಮವಾದ ಸಹಾಯಕತರ್ಕವಾಗಿರುತ್ತದೆ. ಆದ್ದರಿಂದ ಇದು ಲೌಕಿಕವಾದರೂ ಶ್ರುತಿಸಮ್ಮತವಾದ ತರ್ಕವು ಎಂದು ನಾವು ಒಪ್ಪಬಹುದು. ಈಗ ಇನ್ನೊಂದು ಉದಾಹರಣೆಯನ್ನು ಮನದಂದುಕೊಳ್ಳಿರಿ. ಕನಸು, ಎಚ್ಚರ-ಎಂಬೀ ಎರಡವಸ್ಥೆಗಳಲ್ಲಿಯೂ ಆತ್ಮನು ಒಬ್ಬನೇ ಇದ್ದುಕೊಂಡಿರುವದರಿಂದಲೂ ಈ ಅವಸ್ಥೆಗಳೂ ಒಂದಿರುವಾಗ

ಮತ್ತೊಂದು ಇಲ್ಲದೆ ಇರುವದರಿಂದಲೂ ಆತ್ಮನಿಗೆ ಅವುಗಳ ಸಂಬಂಧವು ಇಲ್ಲವೆಂತಲೂ ತನಿನಿದ್ರೆಯಲ್ಲಿ ಪ್ರಪಂಚವನ್ನೆಲ್ಲ ಬಿಟ್ಟು ಸದ್ರೂಪನಾದ ಪರಮಾತ್ಮನಲ್ಲಿಯೇ ಒಂದಾಗಿಬಿಡುವದರಿಂದ ನಮ್ಮ ಆತ್ಮನು ಯಾವ ಪ್ರಪಂಚವೂ ಇಲ್ಲದ ಸದ್ರೂಪನೇ ಎಂತಲೂ ಶ್ರುತಿಯಲ್ಲಿ ಹೇಳಿರುತ್ತದೆ. ಈ ಶ್ರುತಿಯನ್ನು ಆಶ್ರಯಿಸಿ ನಾವು ಅವಸ್ಥೆಗಳು ಮೂರಕ್ಕೂ ಯಾವ ಸಂಬಂಧವೂ ಇಲ್ಲವೆಂತಲೂ ಸ್ವಪ್ನಜಾಗರಿತಗಳಲ್ಲಿ ಆಯಾ ದೇಶಕಾಲನಿಮಿತ್ತಗಳು ಅಲ್ಲಲ್ಲಿಯೇ ಇರುವವೆಂತಲೂ, ಆದ್ದರಿಂದ ಆತ್ಮನು ಕಾಲದೇಶನಿಮಿತ್ತಗಳ ಹಂಗಿಲ್ಲದ ನಿರ್ವಿಕಾರನೆಂತಲೂ ತರ್ಕಿಸುವದಕ್ಕೆ ಬರುತ್ತದೆ. ಇದೂ ಶ್ರುತಿಸಮ್ಮತವಾದ ತರ್ಕವೇ ಎಂಬುದು ಸ್ಪಷ್ಟವಾಗಿದೆ.

ಹೀಗೆ ಶ್ರುತಿಯಲ್ಲಿ ಆತ್ಮನ ಅನುಭವಕ್ಕೆ ಅಂಗವಾಗಿ ಬಗೆಬಗೆಯ ಯುಕ್ತಿಗಳನ್ನು ಉಪಯೋಗಿಸಿರುವದು ಕಂಡುಬರುತ್ತದೆ. ಈ ಯುಕ್ತಿಗಳ ಬಲದಿಂದಲೂ ಇವುಗಳ ಬೆನ್ನುಹಿಡಿದು ನಾವು ಕಲ್ಪಿಸಬಹುದಾದ ಹೊಸ ಯುಕ್ತಿಗಳೂ ಶ್ರುತಿಸಮ್ಮತವಾದ ಸತ್ತರ್ಕಗಳೆನಿಸುವವು. ಆ ತರ್ಕಗಳನ್ನು ಅವಲಂಬಿಸಿ ಶ್ರುತಿಗೆ ಸಮ್ಮತವಾದ ಅರ್ಥವನ್ನೇ ಸ್ವೀಕರಿಸುವದು ಶ್ರವಣಮನನಗಳೆಂಬ ಉಪಾಯಗಳಿಗೆ ಫಲವು. ವಾಕ್ಯಾರ್ಥಗಳನ್ನು ನಿರ್ಧರಿಸುವದು, ಶ್ರುತಿಸಮ್ಮತವಾದ ಪಕ್ಷವನ್ನೇ ಆಶ್ರಯಿಸುವದು–ಇವುಗಳೇ ನಮ್ಮನ್ನು ಸಂಸಾರದ ಕತ್ತಲೆಯಿಂದ ಮುಕ್ತಿಯ ನಿತ್ಯಪ್ರಕಾಶಕ್ಕೆ ಒಯ್ಯುವ ಸಾಧನಗಳಾಗಿರುವವು.

ಶ್ರುತಿಯ ಪಕ್ಷವನ್ನೇ ಅವಲಂಬಿಸುವೆವೆಂಬುದು ತಮ್ಮತಮ್ಮ ಮತಗ್ರಂಥಗಳನ್ನು ಅವಲಂಬಿಸುವ ಇತರ ಮತಾಂಧರ ಅನುಕರಣವಲ್ಲವೆ? ಸತ್ಯವು ಎಲ್ಲಿದ್ದರೂ ಸ್ವೀಕರಿಸುತ್ತೇನೆಂಬ ಸಂಕಲ್ಪವು ಜಿಜ್ಞಾಸುವಿಗೆ ಇರಬೇಕೇಹೊರತು ಒಂದಾನೊಂದು ಗ್ರಂಥದ ವಿಚಾರಸರಣಿಯನ್ನು ಅನುಸರಿಸುತ್ತೇನೆಂಬ ದೃಢಾಗ್ರಹವು ಕೇವಲ ಮತಾಂಧತೆಯಲ್ಲವೆ?– ಎಂದು ಕೆಲವರಿಗೆ ಶಂಕೆಯುಂಟಾಗಬಹುದು. ಆದರೆ ಶ್ರುತಿಯನ್ನು ಅವಲಂಬಿಸುವದೆಂಬುದು ಬರಿಯ ಗ್ರಂಥಾನುಸರಣವಲ್ಲ. ಶ್ರುತಿಯೆಂದರೆ ಏನು? ಯಾವ ವಿಚಾರವು ಅಬಾಧಿತವಾದ ಅರ್ಥವನ್ನು ಅನುಭವಕ್ಕೆ ತಂದುಕೊಡುವದೋ, ಯಾವ ವಿಚಾರಕ್ರಮದಿಂದ ಪಡೆದುಕೊಂಡ ಅನುಭವವು ಕಾಲದೇಶಗಳ ಎಲ್ಲೆಕಟ್ಟಿಲ್ಲದೆ ಎಲ್ಲರಿಗೂ ಸಮ್ಮತವಾಗಿರುವದೋ ಅದನ್ನು ತಿಳಿಸಿಕೊಡುವ ವಾಕ್ಯವೇ ಶ್ರುತಿಯು. ವಸಿಷ್ಠರು ಹೇಳಿದ ವಾಕ್ಯವಿದು, ಅಥವಾ ವಾಮದೇವರು ಹೇಳಿದ ವಾಕ್ಯವಿದು; ಆದ್ದರಿಂದ ಇದನ್ನು ನಂಬಬೇಕು, ಇಲ್ಲದಿದ್ದರೆ ನಿಮಗೆ ನರಕವಾಗುವದು–ಎಂದೇನೂ ಶ್ರುತಿಯಲ್ಲಿಲ್ಲ. ನಿಮ್ಮನಿಮ್ಮ ಪೂರ್ಣಾನುಭವವನ್ನು ನೋಡಿರಿ, ನಿಮ್ಮ ಆತ್ಮನು ಯಾವದೊಂದು ಶರೀರೇಂದ್ರಿಯಸಂಘಾತಕ್ಕೆ ಕಟ್ಟುಬೀಳದ ಪರಮಾತ್ಮನೇ ಆಗಿರುತ್ತಾನೆ ಎಂಬುದನ್ನು ಉಪಪಾದನೆಯ ಸಹಿತವಾಗಿ

ತೋರಿಸಿಕೊಡುವಂಥ ದಿವ್ಯವಾಣಿಯೇ ಶ್ರುತಿಯು. ಇಂಥ ವೇದವಾಕ್ಯವನ್ನು ಅನುಸರಿಸುವವರು ಮತಾಂಧರೆಂದು ಯಾರುತಾನೆ ಹೇಳಲಾಪರು? ವೇದವೆಂದರೆ ತತ್ತ್ವವನ್ನು ಅನುಭವಕ್ಕೆ ಕೊಡುವ ಸಾಧನವನ್ನು ಒದಗಿಸುವ ವಾಕ್ಯವು; ಆದ್ದರಿಂದ ಅದನ್ನು ಬಿಟ್ಟು ತಮ್ಮ ತಮ್ಮ ಮೂಗಿನ ನೇರಕ್ಕೆ ನೋಡಿ ಕಲ್ಪಿಸುವ ದರ್ಶನಗಳೇ ಕುದರ್ಶನಗಳು ಎನ್ನಬೇಕು. ಹೀಗಿರುವದರಿಂದಲೇ ಮನುವು "ಯಾವ ಸ್ಮೃತಿಗಳು ವೇದ ಬಾಹ್ಯಗಳಾಗಿರುವವೋ, ಮತ್ತು ಯಾವಯಾವವು ಕುದೃಷ್ಟಿಯಿಂದ ಕಲ್ಪಿತವಾಗಿರುವ ತಾರ್ಕಿಕದರ್ಶನಗಳೋ ಅವುಗಳೆಲ್ಲವೂ ಪರಲೋಕವಿಚಾರಕ್ಕೆ ನಿಷ್ಫಲವಾಗಿರುವವು, ಏಕೆಂದರೆ ಅವೆಲ್ಲವೂ ತಮಸ್ಸಿಗೇ ನಮ್ಮನ್ನು ಒಯ್ದು ನಿಲ್ಲಿಸುವವು" ಎಂದಿರುತ್ತಾನೆ.

ತಾರ್ಕಿಕರ ಕುತರ್ಕಕ್ಕೂ ಶ್ರುತ್ಯನುಗೃಹೀತವಾದ ಅಥವಾ ಶ್ರುತಿಸಮ್ಮತವಾದ ತರ್ಕಕ್ಕೂ ಇರುವ ಮುಖ್ಯ ತಾರತಮ್ಯವೇನೆಂಬುದು ಈಗ ನಿಮಗೆ ತಿಳಿದಿರ ಬಹುದು. ತರ್ಕವು ಮೊದಲು ಅನುಭವಕ್ಕೆ ಅಂಗವಾಗಿಯೇ ಹುಟ್ಟಿರುತ್ತದೆ; ಅನುಭವದ ಆಧಾರದಿಂದಲೇ ಅದು ಹುಟ್ಟಿ ಜೀವಿಸಿಕೊಂಡಿರುತ್ತದೆ. ಆದರೆ ತಾರ್ಕಿಕರು ತರ್ಕವನ್ನು ತರ್ಕಕ್ಕಾಗಿಯೇ ಉಪಯೋಗಿಸುತ್ತಿರುತ್ತಾರೆ. ಅವರೂ ಯಾವದಾದ ರೊಂದು ಅನುಭವವನ್ನು ಅನುಸರಿಸುತ್ತಾರೆ, ನಿಜ. ಆದರೆ ಅವರ ತರ್ಕಕ್ಕೆ ಆಧಾರವಾಗಿರುವ ಅನುಭವವು ಅನುಭವಾಭಾಸವಾಗಿರುತ್ತದೆ, ಎಂದರೆ ಭ್ರಾಂತಿಯ ಅನುಭವವಾಗಿರುತ್ತದೆ; ಇಲ್ಲವೆ ಅಪೂರ್ಣವಾದ ಯಾವದೋ ಒಂದು ಪರಿಸ್ಥಿತಿ ಯಲ್ಲಿ ಮಾತ್ರ ಕಾಣುವ ಅನುಭವವಾಗಿರುತ್ತದೆ. ಇದಲ್ಲದೆ ಅವರು ತರ್ಕವನ್ನು ತಮ್ಮತಮ್ಮ ಪಕ್ಷದ ಸಾಧನೆಗೆಂದೇ ಉಪಯೋಗಿಸುತ್ತಿರುತ್ತಾರೆ. ಆದ್ದರಿಂದಲೇ ಅವರು ತ್ವಾಚ್ಛಿರಸ್ಕವಾದ (ಹೀಗಿರುವದರಿಂದ ಎಂಬರ್ಥದ ಪಂಚಮೀವಿಭಕ್ತಿಯ) ಶಬ್ದಗಳಿಂದ ಒಬ್ಬರನ್ನೊಬ್ಬರು ಮರುಳು ಮಾಡುತ್ತಿರುತ್ತಾರೆಂದು ಸುರೇಶ್ವರಾ ಚಾರ್ಯರು ಹೇಳಿರುತ್ತಾರೆ. ಶ್ರುತಿಯಲ್ಲಿ ಕಾಣುವ ಅಥವಾ ಶ್ರುತಿಸಮ್ಮತವಾದ ತರ್ಕವು ಹಾಗಲ್ಲ; ಅದು ಎಲ್ಲರಿಗೂ ಸಮ್ಮತವಾಗುವ ಪೂರ್ಣಾನುಭವದ ಆಧಾರದ ಮೇಲೆಯೇ ಹುಟ್ಟಿ ಅನುಭವವನ್ನುಂಟುಮಾಡುವದರಲ್ಲಿಯೇ ಕೊನೆಗಾಣುತ್ತಿರುತ್ತದೆ.

ಆದ್ದರಿಂದ ತನಗೆ ನಿಃಶ್ರೇಯಸವೇ ಆಗಬೇಕೆಂದು ಬಯಸುವ ಮುಮುಕ್ಷುಗಳು ಅನುಭವಪ್ರಧಾನವಾಗಿರುವ ವೇದಾಂತವಾಕ್ಯಗಳನ್ನೇ ಮತ್ತೆಮತ್ತೆ ಶ್ರವಣಮಾಡಬೇಕು; ಅವುಗಳಲ್ಲಿ ಪ್ರತಿಪಾದಿಸಿರುವ ಯುಕ್ತಿಗಳ ಹಾದಿಯನ್ನೇ ಹಿಡಿದು ಸತ್ತರ್ಕವನ್ನು ಅವಲಂಬಿಸುವ ಮನನವನ್ನು ಮಾಡಬೇಕು. ಇವೆರಡನ್ನೂ ಮತ್ತೆಮತ್ತೆ ಮಾಡು ವದರಿಂದ ತತ್ತ್ವದ ವಿಷಯಕ್ಕೆ ಆಗಿದ್ದ ಕುಕಲ್ಪನೆಗಳು ಒಂದೊಂದಾಗಿ ತೊಲಗುವವು; ಎಲ್ಲಾ ಸಂಶಯಗಳೂ ಕತ್ತರಿಸಿಹೋಗುವವು; ಇವುಗಳಿಂದಾದ ಅನುಭವದಿಂದಾಗಿ

ಮನಸ್ಸಿನಲ್ಲಿ ಶಾಂತಿಸಮಾಧಾನಗಳು ನೆಲಸುವವು. ಇದೇ ನಮಗೆ ದೊರಕಬಹುದಾದ ಪರಮಪುರುಷಾರ್ಥವು. ನಿಮಗೆ ಎಂದೆಂದಿಗೂ ಬಾಧಿತವಾಗದ ತತ್ತ್ವವನ್ನರಿತುಕೊಂಡು ಆನಂದದಿಂದ ವಿಹರಿಸಬೇಕೆಂಬ ಆಶೆಯು ಇದೆಯೇನು? ಹಾಗಾದರೆ ವೇದಾಂತವಾಕ್ಯಗಳ ಶ್ರವಣವನ್ನೇ ಮಾಡಿರಿ, ಅವುಗಳು ಬೋಧಿಸುವ ಅರ್ಥವನ್ನು ತಿಳಿದುಕೊಳ್ಳುವದಕ್ಕೆ ಸಹಾಯಕವಾದ ಸತ್ತರ್ಕವನ್ನೇ ಅವಲಂಬಿಸಿರಿ; ಆ ಬಳಿಕ ನೀವು ಬಂದು ಮುಟ್ಟುವ ತೀನರ್ಮಾನದ ಅನುಭವವೇ ನಿಮ್ಮ ಇಷ್ಟಾರ್ಥವಾದ ನಿತ್ಯ ತೃಪ್ತಿಯನ್ನು ತಂದುಕೊಡುವದು.

## 39. ಪ್ರಧಾನವಾದ ಸಾಧನಗಳು

ವೇದಾಂತಾರ್ಥವು ಚೆನ್ನಾಗಿ ಮನದಟ್ಟಾಗುವದಕ್ಕೆ ವೇದಾಂತವಾಕ್ಯಗಳ ಶ್ರವಣ, ಅವುಗಳ ಅರ್ಥದ ಮನನ-ಇವುಗಳು ಅತ್ಯವಶ್ಯವಾಗಿವೆಯಷ್ಟೆ. ಇದರಷ್ಟೇ, ಅಥವಾ ಇದಕ್ಕಿಂತಲೂ ಹೆಚ್ಚಾಗಿ, ನಮ್ಮ ಮನಸ್ಸಿನ ದೃಷ್ಟಿಕೋನವು ಮಾರ್ಪಡುವದು ಅವಶ್ಯವಾಗಿರುತ್ತದೆ. ಏಕೆಂದರೆ ವೇದಾಂತದಲ್ಲಿ ಹೇಳಿರುವದು ಒಂದಾನೊಂದು ತರ್ಕಬದ್ಧಸಿದ್ಧಾಂತವಲ್ಲ; ಅದು ದೇಶಕಾಲಾದಿಗಳ ಕಟ್ಟಿಲ್ಲದೆ ಎಂದೆಂದಿಗೂ ಇದ್ದಂತೆ ಇರುವ ಪರಮಾರ್ಥವಾಗಿರುತ್ತದೆ. ಈ ಪರಮಾರ್ಥವು ನಮಗೆ ತಿಳಿಯದೆ ಇರುವದಕ್ಕೆ ಬರಿಯ ಬುದ್ಧಿಶಕ್ತಿಯ ನ್ಯೂನತೆಯು ಕಾರಣವಾಗಿರುವದಿಲ್ಲ; ಮತ್ತೇನೆಂದರೆ ನಮ್ಮ ಅಂತಃಕರಣದಲ್ಲಿ ಪರಮಾರ್ಥವನ್ನು ಸರಿಯಾಗಿ ಪ್ರತಿಬಿಂಬಿಸುವ ಸಂಸ್ಕಾರವಿಲ್ಲದಿರುವದೇ ಕಾರಣವಾಗಿದೆ. ಈಗಿನ ಸ್ಥಿತಿಯಲ್ಲಿ ನಮ್ಮ ಅಂತಃಕರಣದಲ್ಲಿ ಪರಮಾರ್ಥಗ್ರಹಣಕ್ಕೆ ಅಡ್ಡಿಯಾಗಿರುವ ಹಲವು ದೋಷಗಳು ತುಂಬಿಕೊಂಡಿರುತ್ತವೆ; ಅದನ್ನು ಗ್ರಹಿಸುವದಕ್ಕೆ ಬೇಕಾದ ಕೆಲವು ಗುಣಗಳೂ ಇರುವದಿಲ್ಲ.

ಮಾನವನ ಸ್ವಭಾವಕ್ಕೆ ಸೇರಿಕೊಂಡಂತೆ ಒಂದಾನೊಂದು ದೃಷ್ಟಿಕೋಣವಿರುತ್ತದೆ. ಅದೇನೆಂದರೆ ದೇಹವನ್ನು ತಾನು ಎಂದು ಯಾವ ವಿಚಾರವೂ ಇಲ್ಲದೆ ಇಟ್ಟುಕೊಂಡುಬಿಟ್ಟಿರುವದು. ಯಾವ ದೇಶದಲ್ಲಿ, ಯಾವ ಕಾಲದಲ್ಲಿ, ಯಾವ ಕುಲದಲ್ಲಿ ಹುಟ್ಟಿರಲಿ, ಮನುಷ್ಯನು ಮನುಷ್ಯನೇ. ಅವನಿಗೆ 'ನಾನು ಈ ದೇಹವು' ಎಂಬ ಬುದ್ಧಿಯು ಸಹಜವಾಗಿದ್ದುಕೊಂಡಿರುತ್ತದೆ. ಇದನ್ನು ಯಾರೂ ಅವನಿಗೆ ಕಲಿಸಿಕೊಟ್ಟಿಲ್ಲ, ಕಲಿಸಿಕೊಡಬೇಕಾದ ಆವಶ್ಯಕತೆಯೂ ಇಲ್ಲ. ಕ್ರಕಚಾಯತ (Prism) ದ ರೂಪದ ಗಾಜಿನ ಕಡ್ಡಿಯ ಮೂಲಕವಾಗಿ ಬೆಳಕು ಬಂದ ಕೂಡಲೆ ಬಗೆಬಗೆಯ ಬಣ್ಣಗಳಾಗಿ ತೋರುವದು ಸ್ವಾಭಾವಿಕವಾಗಿರುವಂತೆ ಮಾನವನ ಸದ್ಯದ ಅಂತಃಕರಣದ ಮೂಲಕ ನೋಡಿದಾಗ ನಾನು ದೇಹೇಂದ್ರಿಯ

ಗಳ ಸಂಘಾತವು ಎಂಬ ಬುದ್ಧಿಯು ಅತ್ಯಂತಸ್ವಾಭಾವಿಕವಾಗಿ ಉಂಟಾಗಿಬಿಡುತ್ತದೆ. ದೇಹೇಂದ್ರಿಯಗಳಲ್ಲಿ ನಾನು ನನ್ನದೆಂಬ ಬುದ್ಧಿಯು ಯಾವದಾದರೊಂದು ಕಾರಣದಿಂದ ತಪ್ಪಿದರೆ 'ಅವನಿಗೆ ಜ್ಞಾನವಿಲ್ಲ' ಎನ್ನುವರು. ದೇಹೇಂದ್ರಿಯಗಳ ಗುಂಪಿಗೆ ಆಗುವ ಹೆಚ್ಚು ಕುಂದುಗಳೇ ತನ್ನವು ಎಂದು ನಂಬುವದು ಮನುಷ್ಯನಿಗೆ ಸ್ವಭಾವವಾಗಿಬಿಟ್ಟಿರುತ್ತದೆ. ಈ ನಂಬಿಗೆಯ ಪಶುಪಕ್ಷ್ಯಾದಿಪ್ರಾಣಿಗಳಲ್ಲಿರುವಂತೆ ಮನುಷ್ಯನಲ್ಲಿಯೂ ಸಹಜವಾಗಿದ್ದುಕೊಂಡಿರುತ್ತದೆ.

ಪಶ್ವಾದಿಗಳಿಗೂ ಮನುಷ್ಯನಿಗೂ ಒಂದು ಮುಖ್ಯಭೇದವೆಂದರೆ, ಬರಿಯ ವೇದನೆಯನ್ನು ಪ್ರಧಾನವಾಗಿಟ್ಟುಕೊಂಡು ಪಶ್ವಾದಿಗಳು ವ್ಯವಹರಿಸುವವು; ಮನುಷ್ಯನು ವೇದನೆಯಲ್ಲದೆ ಬುದ್ಧಿಯನ್ನೂ ತನ್ನ ವ್ಯವಹಾರಕ್ಕೆ ಉಪಯೋಗಿಸುವನು. ಉದಾಹರಣೆಗೆ ಯಾರಾದರೂ ಕೈಯಲ್ಲಿ ಒಂದು ದೊಣ್ಣೆಯನ್ನು ಹಿಡಿದು ಕಣ್ಣುಕೆಂಪಗೆ ಮಾಡಿಕೊಂಡು ತಮ್ಮ ಕಡೆಗೆ ಓಡಿಬರುತ್ತಿರುವದನ್ನು ಕಂಡು ಪಶ್ವಾದಿಗಳು ಕೂಡಲೆ ಆ ಕಡೆಯಿಂದ ಹಿಂದಕ್ಕೆ ಸರಿಯುವವು; ತಮಗೆ ಪ್ರಿಯವಾಗಿರುವ ಆಹಾರವೇ ಮುಂತಾದವುಗಳನ್ನು ಕೈಯಲ್ಲಿ ಹಿಡಿದು ಪ್ರಸನ್ನಮುಖಮುದ್ರೆಯಿಂದ ತಮ್ಮ ಕಡೆಗೆ ಬರುತ್ತಿರುವವರನ್ನು ಕಂಡರೆ ಸಂತೋಷದಿಂದ ಅವರ ಕಡೆಗೆ ಮುನ್ನುಗ್ಗುವವು. ಮನುಷ್ಯನೂ ವ್ಯವಹಾರದಲ್ಲಿ ಹೀಗೆಯೇ ನಡೆಯುತ್ತಿರುವನು. ತಮಗೆ ಪ್ರಿಯವೆಂದು ತೋರುವ ವಸ್ತುಗಳ ಕಡೆಗೆ ಮುನ್ನುಗ್ಗುವದೂ ಅಪ್ರಿಯವೆಂದು ಕಂಡುಬಂದ ವಸ್ತುಗಳನ್ನು ದೂರವಿರಿಸುವದಕ್ಕೆ ಪ್ರಯತ್ನಿಸುವದೂ ಪಶುಗಳಿಗೂ ಮನುಷ್ಯನಿಗೂ ಸಮಾನವೇ ಆಗಿರುತ್ತದೆ. ಆದರೆ ಮನುಷ್ಯನು ವಸ್ತುಗಳ ವಿಷಯಕ್ಕೆ ಒಂದೊಂದು ಪ್ರತ್ಯಯವನ್ನು ಮಾಡಿಕೊಂಡು ಇಷ್ಟವಸ್ತುಗಳ ಪ್ರತ್ಯಯವಾದರೆ ಸಂತೋಷಪಡುವದು, ಅನಿಷ್ಟ ವಸ್ತುಗಳ ಪ್ರತ್ಯಯವಾದರೆ ವಿಷಾದಿಸುವದು-ಇವುಗಳನ್ನೂ ಇಟ್ಟುಕೊಂಡಿರುತ್ತಾನೆ. ನಾನು ಮನುಷ್ಯನು, ಬುದ್ಧಿಜೀವಿಯು, ಪಶ್ವಾದಿಗಳಿಗಿಂತ ಮೇಲುಮಟ್ಟದವನು-ಎಂಬ ಹೆಮ್ಮೆಯೊಂದೂ ಅವನ ಸ್ವಭಾವಕ್ಕೆ ಸೇರಿಬಿಟ್ಟಿರುತ್ತದೆ. ಹಿಂದೆ ತಾನು ಮಾಡಿದ್ದನ್ನು ಅಥವಾ ತನಗೆ ಆದ ಸುಖದುಃಖಗಳನ್ನು ನೆನಪಿಗೆ ತಂದುಕೊಂಡು ಹರ್ಷದಿಂದ ಉಬ್ಬುವದು ಅಥವಾ ವಿಷಾದದಿಂದ ಕುಗ್ಗುವದು ಮನುಷ್ಯನಿಗೆ ಮೀಸಲು. ಹೀಗೆಯೇ ಮುಂದೆ ತಾನು ಮಾಡಬಹುದಾದದ್ದನ್ನು ಅಥವಾ ತನಗೆ ಉಂಟಾಗಬಹುದಾಗಿರುವ ಸುಖದುಃಖಗಳನ್ನು ಈಗಲೆ ಪ್ರತೀಕ್ಷೆಯಿಂದ ಮನದಂದುಕೊಂಡು ಹರ್ಷವಿಷಾದಗಳಿಗೆ ವಶನಾಗುವದೂ ಮನುಷ್ಯನಿಗೇ ಮೀಸಲು. ಕೀಳುಪ್ರಾಣಿಗಳಿಗೆ ಇಂಥ ಪ್ರತ್ಯಯದ ಜೀವನದ ಸೋಂಕೇ ಇರುವದಿಲ್ಲ.

ಈ ಪ್ರತ್ಯಯಜೀವನವನ್ನು ಬಗೆಬಗೆಯಿಂದ ಉಪಯೋಗಿಸಿಕೊಂಡು ಮನುಷ್ಯನು ಪಶ್ವಾದಿಗಳಿಗೆ ಸಾಧ್ಯವಲ್ಲದ ಅನೇಕ ಸೌಕರ್ಯಗಳನ್ನು ಕಲ್ಪಿಸಿಕೊಂಡಿರುತ್ತಾನೆ. ಉದಾಹರಣೆಗೆ ಮನೆಮಠಗಳನ್ನು ಕಟ್ಟಿಕೊಳ್ಳುವದು, ಅನ್ನವಸ್ತ್ರಪುಷ್ಪಗಂಧಾದಿ ಭೋಗಸಾಮಗ್ರಿಗಳನ್ನು ನಿರ್ವಹಿಸಿಕೊಳ್ಳುವದು ಮತ್ತು ಕೂಡಿಹಾಕಿಕೊಳ್ಳುವದು, ಸಮಾಜಜೀವಿಯಾಗಿ ಬಾಳುವದು, ತನ್ನ ಅಭಿಪ್ರಾಯವನ್ನು ಮತ್ತೊಬ್ಬರಿಗೆ ತಿಳಿಸುವದು, ಮತ್ತೊಬ್ಬರ ಅಭಿಪ್ರಾಯವನ್ನು ತಾನು ಗ್ರಹಿಸುವದು, ಅಭಿಪ್ರಾಯಗಳ ಸಂಗ್ರಹಕ್ಕಾಗಿಯೂ ಪ್ರಚಾರಕ್ಕಾಗಿಯೂ ಭಾಷಣ, ಪುಸ್ತಕಲೇಖನ, ಮುದ್ರಣ, ರೇಡಿಯೊ–ಮುಂತಾದ ಸಾಧನಗಳ ನಿರ್ಮಾಣ, ಸಾಮಾಜಿಕ ರಾಜಕೀಯ ಮುಂತಾದ ವ್ಯವಹಾರಗಳ ಕಲ್ಪನೆ, ನೀತಿಮತಗಳ ಉಪದೇಶಕ್ರಮ–ಇವೇ ಮುಂತಾದವುಗಳೆಲ್ಲವೂ ಮನುಷ್ಯನಿಗೆ ಮಾತ್ರವೇ ಸಾಧ್ಯವಾಗಿರುವ ಜೀವನಸಾಧನಗಳು.

ಆದರೆ ಈ ಸಾಧನಗಳು ಹೆಚ್ಚಿದಂತೆಲ್ಲ, ಇವು ಸುಖಕ್ಕೆ ಕಾರಣವಾಗಿರುವಷ್ಟೇ ದುಃಖಕ್ಕೂ ಕಾರಣವಾಗಿರುತ್ತವೆ. ಮನುಷ್ಯನಿಗೆ ಪ್ರತ್ಯಯಜೀವನದಿಂದ ವಾಸನಾ ಪ್ರಪಂಚ ಎಂಬ ಅಧ್ಯಾತ್ಮಪ್ರಪಂಚವೊಂದು ಹೊಸದಾಗಿ ನಿರ್ಮಾಣವಾಗಿಬಿಟ್ಟಿರುತ್ತದೆ. ರಾಗ, ದ್ವೇಷ, ಲೋಭ, ಮೋಹ, ಮದ, ಮಾತ್ಸರ್ಯ–ಮುಂತಾದ ಹಲವು ವಾಸನೆಗಳು ಅಂತಃಕರಣದಲ್ಲಿ ಮೆತ್ತಿಕೊಂಡುಬಿಟ್ಟಿರುವವು. ಇದರಂತೆಯೇ ಪ್ರೇಮ, ದಾನಧರ್ಮಪರೋಪಕಾರ ಬುದ್ಧಿ, ದಯಾದಾಕ್ಷಿಣ್ಯಾದಿಗಳು–ಇವುಗಳ ವಾಸನೆಗಳೂ ಅಂತಃಕರಣದಲ್ಲಿರುವದು ನಿಜ. ಆದರೆ ದುಷ್ಟವಾಸನೆಗಳು ಪ್ರಬಲವಾಗುವಷ್ಟು ಸುಲಭವಾಗಿ ಶುಭವಾಸನೆಗಳು ಎದ್ದುಕೊಳ್ಳುವದಿಲ್ಲ. ಶುಭವಾಸನೆಗಳು ಎದ್ದುಕೊಳ್ಳುವದಕ್ಕೂ ಅವು ಚಿರಕಾಲನಿಂತುಕೊಂಡು ಮನುಷ್ಯನ ಸ್ವಭಾವವನ್ನು ಮಾರ್ಪಡಿಸುವದಕ್ಕೂ ಬಹಳ ಪ್ರಯತ್ನವು ಬೇಕಾಗುವದು. ವ್ಯಕ್ತಿಗಳಾಗಿಯೂ ಜನಾಂಗಗಳಾಗಿಯೂ ಮನುಷ್ಯರು ಬಗೆಬಗೆಯ ಅನರ್ಥವನ್ನು ಅನುಭವಿಸುತ್ತಿರುವದಕ್ಕೆ ಈ ಅಶುಭವಾಸನಾಪ್ರಪಂಚವೇ ಮುಖ್ಯಕಾರಣವಾಗಿರುತ್ತದೆ.

ಪ್ರತಿಯೊಬ್ಬನ ವಾಸನೆಗಳ ರಾಶಿಯನ್ನು 'ಸ್ವಾರ್ಥತೆ' ಎಂಬ ಹೆಸರಿನಲ್ಲಿ ಅಡಕಮಾಡಿಬಿಡಬಹುದು. ಸ್ವಾರ್ಥವೆಂದರೆ ತನಗೆ ಆಗುವ ಪ್ರಯೋಜನವು. ಮನುಷ್ಯನು ಸಾಮಾನ್ಯವಾಗಿ 'ನಾನು' ಎಂದು ತಿಳಿದುಕೊಂಡಿರುವ ದೇಹೇಂದ್ರಿಯ ಸಂಘಾತಕ್ಕೆ ಪ್ರಿಯವೂ ಇಷ್ಟವೂ ಆಗಿರುವದನ್ನು ಹೇಗಾದರೂ ಮಾಡಿ–ಮತ್ತೊಬ್ಬರಿಗೆ ಅದರಿಂದ ನೋವಾದರೂ ಚಿಂತೆಯಿಲ್ಲ–ಸಂಪಾದನೆಮಾಡಿಕೊಂಡುಬಿಡಬೇಕು, ಅನಿಷ್ಟವಾದದ್ದನ್ನು ಹೇಗಾದರೂ ಮಾಡಿತೊಲಗಿಸಿಕೊಂಡುಬಿಡಬೇಕು–ಎಂಬುದೇ ಸ್ವಾರ್ಥತೆ. ಈ ಸ್ವಾರ್ಥತೆಯಿಂದಲೇ ಮನುಷ್ಯನು ಧರ್ಮಾ

ಧರ್ಮಗಳನ್ನು ಮಾಡುತ್ತಲೂ ಇಷ್ಟಾನಿಷ್ಟಫಲಗಳನ್ನು ಅನುಭವಿಸುತ್ತಲೂ ಇರುವನು. ಇದಕ್ಕೇ 'ಸಂಸಾರ' ಎಂದು ಹೆಸರು.

ಈ ಸಂಸಾರವನ್ನು ತಪ್ಪಿಸಿಕೊಳ್ಳುವದಕ್ಕೆ ದೇಹೇಂದ್ರಿಯಗಳಲ್ಲಿರುವ ನಾನು ನನ್ನದೆಂಬ ಅಭಿಮಾನವನ್ನು ತೊಲಗಿಸಿಕೊಳ್ಳುವದೇ ಉಪಾಯವು. ದೇಹೇಂದ್ರಿಯ ಗಳನ್ನು ನಾನೆಂದು ಭಾವಿಸುತ್ತಿರುವ ತಪ್ಪುತಿಳಿವಳಿಕೆಯ ವಾಸನಾಪ್ರವಾಹವೇ ಅವಿದ್ಯೆಯೆನಿಸುವದು. ಈ ಅವಿದ್ಯೆಯನ್ನು ಪರಮಾರ್ಥದ ತಿಳಿವಳಿಕೆಯೆಂಬ ವಿದ್ಯೆಯಿಂದ ಮಾತ್ರವೇ ಬಾಧಿಸುವದಕ್ಕೆ ಸಾಧ್ಯವಾಗುತ್ತದೆ. ಅನಾದಿಕಾಲದಿಂದಲೂ ಒಂದು ಬೆಟ್ಟದ ಗವಿಯಲ್ಲಿದ್ದುಕೊಂಡಿರುವ ಕಗ್ಗತ್ತಲೆಯನ್ನು ಒಂದು ಬೆಂಕಿ ಕಡ್ಡಿಯನ್ನು ಗೀಚಿದಮಾತ್ರದಿಂದ ತೊಲಗಿಸಿಕೊಳ್ಳಬಹುದಲ್ಲವೆ? ಇದರಂತೆ ಅನಾದಿಕಾಲದಿಂದಲೂ ಮನುಷ್ಯನಿಗೆ ಸ್ವಭಾವವಾಗಿರುವ ಈ ಅವಿದ್ಯೆಯನ್ನೂ ವೇದಾಂತದಲ್ಲಿ ತಿಳಿಸಿಕೊಟ್ಟಿರುವ ಪರಮಾರ್ಥಜ್ಞಾನದಿಂದ ಕ್ಷಣಮಾತ್ರದಲ್ಲಿ ತೊಲಗಿಸಿಕೊಳ್ಳುವದಕ್ಕಾಗುತ್ತದೆ. ಅವಿದ್ಯೆಯು ಹೋದರೆ ಅವಿದ್ಯೆ ಯಿಂದಾಗಿದ್ದ ವಾಸನೆಗಳ ಕಟ್ಟು ಕಳಚಿಕೊಳ್ಳುವದು. ದೇಹೇಂದ್ರಿಯಗಳಲ್ಲಿರುವ ದುರಭಿಮಾನದ ಫಲವು ಹೋಗಿ ಮನುಷ್ಯನು ತನ್ನನ್ನೇ ತಾನು ಹೆಚ್ಚೆಂದು ತಿಳಿದುಕೊಂಡಿರುವ ಹಮ್ಮು ಮುರಿದುಹೋಗುವದು. ಇದರಿಂದ ಮತ್ತೊಬ್ಬರನ್ನು ತನಗಿಂತ ಕೀಳೆಂದು ಬಗೆಯುವ ಹವ್ಯಾಸವು ತಪ್ಪುವದು; ಬಲ್ಲವರಾದ ಗುರು ಹಿರಿಯರೊಡನೆ ಕಾರಣವಿಲ್ಲದೆ ವಾದಮಾಡುವ ದಿಟ್ಟತನವೂ ಬಿಟ್ಟುಹೋಗುವದು.

ವೇದಾಂತದಲ್ಲಿ ಹೇಳಿರುವ ಈ ತತ್ತ್ವವು ಯಾವದು? ಇದೇ 'ತತ್ತ್ವಮಸಿ' 'ಅಹಂ ಬ್ರಹ್ಮಾಸ್ಮಿ' ಮುಂತಾದ ವಾಕ್ಯಗಳಲ್ಲಿ ಅಡಕವಾಗಿರುವ ನಿಗೂಢವಾದ ಪರಮಾರ್ಥವು. ಬ್ರಹ್ಮ, ಪರಮೇಶ್ವರ, ಪರಮಾತ್ಮ, ಸಚ್ಚಿದಾನಂದ-ಮುಂತಾದ ಹೆಸರುಗಳಿಂದ ಪ್ರಸಿದ್ಧವಾಗಿರುವ ತತ್ತ್ವವು ಎಲ್ಲಾ ಜೀವರುಗಳ-ಬ್ರಹ್ಮಾದಿಸ್ತಂಬ ಪರ್ಯಂತವಾಗಿರುವ ಪ್ರಾಣಿಗಳ-ಆತ್ಮನಾಗಿರುತ್ತದೆ. ನನ್ನ ಆತ್ಮವು ಅಥವಾ ಸ್ವರೂಪವು ಈ ಬ್ರಹ್ಮವೇ ಆಗಿರುತ್ತದೆ ಎಂಬ ಅನರ್ಘವಾದ ವಿಷಯವು ವೇದಾಂತವಾಕ್ಯಗಳ ಶ್ರವಣಮನನಗಳಿಂದ ಅವಶ್ಯವಾಗಿ ಗೊತ್ತಾಗುವದೆಂದು ಬಲ್ಲವರು ಹೇಳುವರು. ಎಲ್ಲರಿಗೂ ಆತ್ಮನಾಗಿರುವವನೇ ನನ್ನ ಆತ್ಮನು ಎಂಬ ತತ್ತ್ವವು ಯಾವನ ಮನದಲ್ಲಿ ಮಿಂಚುವದೋ ಅವನಲ್ಲಿ ಯಾವ ಸ್ವಾರ್ಥವೂ ಇರುವದಕ್ಕೆ ಕಾರಣವಿಲ್ಲ. 'ಈ ಕಾರ್ಯಕರಣಸಂಘಾತಕ್ಕೆ ಈ ದೇಹಕ್ಕೆ ಮತ್ತು ಈ ದೇಹಕ್ಕೆ ಸಂಬಂಧಪಟ್ಟಿರುವ ಇಂದ್ರಿಯಕಲಾಪಕ್ಕೆ ಮಾತ್ರ-ಆತ್ಮನು ನಾನು, ಈ ದೇಹಾದಿಗಳನ್ನು ಕಾಪಾಡಿ ಕೊಳ್ಳುವದಕ್ಕೇ ನಾನು ಈ ಜೀವನಸಂಗ್ರಾಮವನ್ನು ನಡೆಯಿಸುತ್ತಿರುವೆನು' ಎಂಬ

ತಪ್ಪುತಿಳಿವಳಿಕೆಯು ಯಾವನನ್ನು ಗೋಳಾಡಿಸುತ್ತಿರುವದೋ ಅವನು ಅವಶ್ಯವಾಗಿ ತನ್ನ ಯೋಗಕ್ಷೇಮಗಳನ್ನು ಪ್ರಧಾನವಾಗಿ ಎಣಿಸುವದು ಖಂಡಿತ. ಅವನು ಈ ಸ್ವಾರ್ಥದ ಸಾಧನೆಗಾಗಿ ಮತ್ತೊಬ್ಬರ ಯೋಗಕ್ಷೇಮಗಳನ್ನು ಅವಶ್ಯವೆಂದು ಕಂಡರೆ, ಬಾಧಿಸುವದಕ್ಕೆ ಹಿಂಜರಿಯುವದಿಲ್ಲವೆಂಬುದೂ ಖಂಡಿತ. ಆದರೆ ಈ ಎಲ್ಲಾ ಮಾನವರ, ಅಷ್ಟೇ ಏಕೆ, ಈ ಎಲ್ಲಾ ಪ್ರಾಣಿಗಳ ಆತ್ಮನಾಗಿರುವ ಪರಮಾತ್ಮನೇ ನನ್ನ ಆತ್ಮನು ಎಂದು ಅರಿತವನಿಗೆ ಸ್ವಾರ್ಥವೂ ಪರಾರ್ಥವೂ ಒಂದೇ ಆಗುವದು. ಎಲ್ಲರಿಗೂ ಸಂತೋಷವನ್ನುಂಟುಮಾಡುವದೇ ತನ್ನ ಸಂತೋಷಕ್ಕೆ ಕಾರಣವಾಗುವದು.

ಆದರೆ ಈ ಪರಮಾತ್ಮಜ್ಞಾನವು ಎಲ್ಲರಿಗೂ ಅಷ್ಟು ಸುಲಭವಾಗಿ ದಕ್ಕತಕ್ಕದ್ದಲ್ಲ. ಆದ್ದರಿಂದ ಈ ಜ್ಞಾನವನ್ನು ಲಕ್ಷ್ಯದಲ್ಲಿಟ್ಟು ತತ್ತ್ವವಿಚಾರವನ್ನು ಮಾಡುವದನ್ನೂ ವೇದಾಂತವಾಕ್ಯಗಳರ್ಥದ ಮನನವನ್ನು ಮಾಡುವದನ್ನೂ ಮುಮುಕ್ಷುಗಳಾದವರು ಅಭ್ಯಾಸಮಾಡಬೇಕು. ಪರಮಾತ್ಮನನ್ನು ಎಲ್ಲಾ ಕಡೆಯಲ್ಲಿಯೂ ಕಾಣುವ ಪೂರ್ಣ ಜ್ಞಾನವಿಲ್ಲದಿದ್ದರೂ ಸರ್ವತ್ರ ಭಗವದ್ಭಾವನೆಯನ್ನು ಮಾಡುವದನ್ನಾದರೂ ಅಭ್ಯಾಸ ಮಾಡಬೇಕು. ಇದಕ್ಕೆ ಮೊಟ್ಟಮೊದಲು ಮಾಡಬೇಕಾದದ್ದೇನೆಂದರೆ ದೇಹದಲ್ಲಿ ನಾನು ಎಂಬ ಬುದ್ಧಿಯನ್ನು ತಪ್ಪಿಸುವ ಪರೋಪಕಾರದ ಕಾರ್ಯಗಳನ್ನು ಮಾಡು ವದು, ಮತ್ತು ದೇಹೇಂದ್ರಿಯ ಮನಸ್ಸುಗಳನ್ನು ಮೀರಿರುವ ಪರಮಾತ್ಮನನ್ನು ಅರಿತುಕೊಳ್ಳುವದಕ್ಕೆ ಅತ್ಯವಶ್ಯವಾದ ಸಾಧನಗಳನ್ನು ಅಭ್ಯಾಸಮಾಡುವದು. ಭಗವದ್ಗೀತೆಯಲ್ಲಿ ಹೇಳಿರುವಂತೆ ಅಮಾನಿತ್ವ, ಅದಂಭಿತ್ವ, ಅಹಿಂಸೆ, ಕ್ಷಾಂತಿ-ಮುಂತಾದ ಸದ್ಗುಣಗಳನ್ನು ಅವಲಂಬಿಸಬೇಕು. ಈ ಗುಣಗಳಿದ್ದವರೇ ಜ್ಞಾನನಿಷ್ಠ ರಾಗಿರುತ್ತಾರೆಂದೂ ಇದಿಲ್ಲದವರು ಅಜ್ಞಾನದಲ್ಲಿ ಸಿಕ್ಕಿಬಿದ್ದು ನರಳುತ್ತಿರುವರೆಂದೂ ಗೀತಾಚಾರ್ಯನ ಉಪದೇಶವು. ಆದ್ದರಿಂದ ಈ ಸಾಧನಗಳನ್ನು ಅವಲಂಬಿಸು ವವರೇ ಜ್ಞಾನಕ್ಕೆ ಹತ್ತಿರವಿರುತ್ತಾರೆಂದಾಗುತ್ತದೆ. ಒಂದೊಂದು ದೇಹೇಂದ್ರಿಯಗಳ ಗುಂಪಿನಲ್ಲಿಯೇ ವಿಶೇಷಾಭಿಮಾನವಿರುವವರೆಗೆ ಎಲ್ಲಾ ಭೂತಗಳಲ್ಲಿಯೂ ಒಬ್ಬನೇ ಪರಮಾತ್ಮನಿದಾನೆಂಬ ಜ್ಞಾನವು ಉಂಟಾಗಲಾರದೆಂಬುದು ಸ್ವಾಭಾವಿಕವಷ್ಟೆ ?

ಈ ಸಾಧನಗಳೊಳಗೆ ಆಚಾರ್ಯೋಪಾಸನೆ, ಪರಮಾತ್ಮನಲ್ಲಿ ಅವ್ಯಭಿಚಾರಿಣೀ ಭಕ್ತಿ, ಅಧ್ಯಾತ್ಮಜ್ಞಾನನಿತ್ಯತ್ವ-ಎಂಬ ಮೂರನ್ನು ಇಲ್ಲಿ ಎತ್ತಿಹಿಡಿಯುವದು ಅವಶ್ಯ ವಾಗಿರುತ್ತದೆ. ಏಕೆಂದರೆ ನಾನು ದೊಡ್ಡವನು, ನಾನೇ ತಿಳಿದವನು-ಎಂಬ ಹೆಮ್ಮೆಯ ಅವಿದ್ಯೆಯನ್ನು ಕಳೆಯುವದಕ್ಕೆ ಮೊಟ್ಟಮೊದಲು ದೊಡ್ಡವರಲ್ಲಿ ಗೌರವ ವುಂಟಾಗುವದು ಅವಶ್ಯವಾಗಿರುತ್ತದೆ. ತತ್ತ್ವವನ್ನು ಬಲ್ಲ ಸದ್ಗುರುವನ್ನು ಸೇರಿ ಅವನಿಂದಲೇ ಪರಮಾರ್ಥದ ಅರಿವು ತನಗೆ ಆಗಬೇಕೆಂಬ ಆಶೆಯನ್ನು ಸಂಪಾದಿಸಿ

ಕೊಳ್ಳುವದಕ್ಕೆ ತನ್ನ ಅಲ್ಪವಾದ ಜ್ಞಾನದಲ್ಲಿ ಅನಾದರವೂ ತತ್ತ್ವಜ್ಞಾನಿಗಳಲ್ಲಿ ಶ್ರದ್ಧಾದರಗಳೂ ಭಕ್ತಿಯೂ ಇರಬೇಕಾದದ್ದು ಅವಶ್ಯವಲ್ಲವೆ? ಇದರಂತೆ ನಾನು ಎಂಬ ಅಹಂಕಾರವು ಮಟ್ಟಾಗುವದಕ್ಕೆ ಸರ್ವರಿಗೂ ಆತ್ಮನಾಗಿರುವ ಪರಮಾತ್ಮನಲ್ಲಿ ಎಂದಿಗೂ ತಪ್ಪದಿರುವ ಭಕ್ತಿಯು ಉಂಟಾಗಬೇಕಾದದ್ದು ಅತ್ಯವಶ್ಯವೆಂಬುದು ಸ್ಪಷ್ಟವಾಗಿರುತ್ತದೆ. ಇನ್ನು ಯಾವನು ಏನನ್ನು ಬಯಸುತ್ತಾನೋ ಅವನಿಗೆ ಅದೇ ದೊರಕೀತು ಎಂಬ ನ್ಯಾಯವನ್ನು ಅನುಸರಿಸಿ ಅಧ್ಯಾತ್ಮವಿಚಾರದಲ್ಲಿಯೇ ಮುಳುಗಿ ರುವವನಿಗೆ ಮಾತ್ರ ಅಧ್ಯಾತ್ಮಜ್ಞಾನವು ದಕ್ಕೀತೆಂದು ಹೇಳುವದು ಸಯುಕ್ತಿಕವೇ ಆಗಿರುತ್ತದೆ. ಆದ್ದರಿಂದ ಮುಮುಕ್ಷುಗಳಾದವರು ಈ ಮೂರು ಸಾಧನಗಳನ್ನು ಅತ್ಯವಶ್ಯವಾಗಿ ತಾತ್ಪರ್ಯಪೂರ್ವಕವಾಗಿ ಅಭ್ಯಾಸಮಾಡುತ್ತಿರಬೇಕು.

ವೇದಾಂತದಲ್ಲಿ ಹೇಳಿರುವ ಪರಮಾರ್ಥಜ್ಞಾನವು ಉಂಟಾಗುವವರೆಗೆ ಮುಖ್ಯ ವಾಗಿ ಶಾಸ್ತ್ರದೃಷ್ಟಿಯಿಂದ ನಾನು ಬ್ರಹ್ಮವೇ ಆಗಿರುತ್ತೇನೆ; ನನ್ನ ಆತ್ಮನು ಸರ್ವ ಭೂತಗಳಿಗೂ ಆತ್ಮನೇ ಆಗಿರುತ್ತಾನೆ ಎಂಬ ದೃಢಭಾವನೆಯು ಇರಬೇಕು. ಈ ಭಾವನೆಯು ವಸ್ತುತಂತ್ರವಾದ ಜ್ಞಾನವಾಗಿ ಪರಿಣಮಿಸುವದಕ್ಕೆ ಬೇಕಾದ ಶ್ರವಣ ಮನನನಿದಿಧ್ಯಾಸನಗಳು ಸತತವಾಗಿ ನಡೆಯಬೇಕು. ಈ ಶ್ರವಣಾದಿಗಳನ್ನು ನಿರಾತಂಕವಾಗಿ ಮಾಡುವದಕ್ಕೆ ತಕ್ಕ ಅಮಾನಿತ್ವಾದಿ ಸಾಧನಗಳಿಂದ ಅಂತಃಕರಣಕ್ಕೆ ಉತ್ತಮವಾದ ಸಂಸ್ಕಾರವನ್ನು ಉಂಟುಮಾಡಿಕೊಳ್ಳುತ್ತಿರಬೇಕು. ಈ ಸಂಸ್ಕಾರವು ಸರಿಯಾಗಿ ಉಂಟಾಗಬೇಕಾದರೆ ದೇಹದ ರೂಪು, ಜಾತಿ, ಕುಲ, ವಯಸ್ಸು, ಬಲ, ಜನಧನಾದಿಗಳು-ಇವುಗಳ ನಿಮಿತ್ತದಿಂದಾಗಬಹುದಾದ ಗರ್ವವು ಮೊದಲು ಜಗುಳಬೇಕು. ದೇಹನಿಮಿತ್ತವಾದ ಗರ್ವವು ಹೋಗಬೇಕಾದರೆ ದೇಹವು ನಾನು ಎಂಬ ಅಭಿಮಾನವು ತಪ್ಪಬೇಕು; ದೇಹಾತೀತನಾದ ಆತ್ಮನೊಬ್ಬನಿದಾನೆಂಬ ಅರಿವು ಮೊದಲು ದೃಢವಾಗಬೇಕು. ಹೀಗೆ ಮೆಟ್ಟಲುಮೆಟ್ಟಿಲಾಗಿ ಯಾರು ಸರ್ವಾತ್ಮ ಭಾವನೆಯನ್ನು ಸಂಪಾದಿಸಿಕೊಂಡಿರುವರೋ ಅಂಥವರೇ ಶ್ರವಣಾದಿಗಳಿಂದ ಅದ್ವಿತೀಯಸಚ್ಚಿದಾನಂದ ಪರಮಾತ್ಮನೇ ನಾನು ಎಂಬ ಪರಮಾರ್ಥ ಜ್ಞಾನವನ್ನು ಸಂಪಾದಿಸಿಕೊಂಡು ಜೀವನ್ಮುಕ್ತರಾಗುವದಕ್ಕೆ ಅರ್ಹರಾಗುವರು.

****

## 40. ಮಹಾತ್ಮರ ಆಹಾರ ವಿಹಾರಗಳು

ಪರಮಾತ್ಮನನ್ನು ಕಂಡುಕೊಂಡು ಸರ್ವಭೂತಗಳಲ್ಲಿಯೂ ಪ್ರೇಮದಿಂದ ವರ್ತಿಸುತ್ತಿರುವ ಆನಂದಾತ್ಮರೇ ಜೀವನ್ಮುಕ್ತರೆನಿಸುವರು. ಇಂಥ ಮಹಾತ್ಮರುಗಳು ಎಲ್ಲೆಂದರಲ್ಲಿ ಸಿಕ್ಕುವದಿಲ್ಲ. ಬೀದಿಯಲ್ಲಿ ಬೆಣಚುಕಲ್ಲುಗಳು ಎಷ್ಟೋ ಬಿದ್ದಿರುವವು; ಆದರೆ ಮಹಾರ್ಘವಾದ ರತ್ನಗಳು ಹಾಗೆ ಸಿಕ್ಕುವವೇನು? ಆದರೆ ರತ್ನಗಳೂ ಈ ಭೂಮಿಯಲ್ಲಿಯೇ ಸಿಕ್ಕುತ್ತವೆ; ಸ್ವಲ್ಪ ಶ್ರಮವನ್ನು ವಹಿಸಿ ಗನಿಗಳಿಂದ ಅವನ್ನು ತೆಗೆಯಬೇಕಾದೀತು, ಅಷ್ಟೆ. ಇದರಂತೆ ಜೀವನ್ಮುಕ್ತರಾದ ಮಹನೀಯರೂ ಈ ಭೂಮಂಡಲದಲ್ಲಿಯೇ ಸಿಕುವರು. ಆದರೆ ಅವರನ್ನು ಅದೇ ಬೇಕಾಗಿ ಹುಡುಕಿಕೊಂಡು ಹೋಗುವ ಮುಮುಕ್ಷುಗಳು ಮಾತ್ರ ಸಂದರ್ಶಿಸಬಲ್ಲರು.

ಪರಮಾತ್ಮನೇ ಈ ಜಗತ್ತಿನ ಸಾರವೆಂದು ಕಂಡುಕೊಂಡಿರುವ ಮಹಾತ್ಮರು ಅಲ್ಪವಾದ ವಿಷಯಸುಖಗಳಿಗಾಗಿ ಹಾತುವರಿಯುವದಿಲ್ಲ ಎಂಬುದು ಸ್ವಾಭಾವಿಕ ವಾಗಿದೆ. ಅವರು ಲೋಕದ ವ್ಯವಹಾರಗಳನ್ನೆಲ್ಲ ದ್ವೇಷಿಸುವರೆಂದೇನೂ ಇದರ ಅರ್ಥವಲ್ಲ. ಜೀವನ್ಮುಕ್ತರಾದವರು ರಾಜ್ಯವನ್ನೇ ಆಳುವಷ್ಟರಮಟ್ಟಿಗೂ ವ್ಯವಹಾರ ವನ್ನು ಕೈಕೊಳ್ಳಬಹುದು. ಅವರ ಪರಮಾತ್ಮಜ್ಞಾನಕ್ಕೆ ಯಾವ ವ್ಯವಹಾರವೂ ಅಡ್ಡಬರುವಂತಿರುವದಿಲ್ಲ. ಆದರೂ ಮುಮುಕ್ಷುಗಳಾಗಿರುವವರಿಗೆ ಪರಮಾತ್ಮನೇ ಬೇಕಾಗಿರುತ್ತಾನೆ; ಅವನ ದರ್ಶನಕ್ಕಾಗಿ ಅವರು ಮಿಕ್ಕೆಲ್ಲವನ್ನೂ ಬಿಟ್ಟುಕೊಡುವದಕ್ಕೂ ಸಿದ್ಧರಾಗಿರುತ್ತಾರೆ. ಅವರಿಗೆ ಹೆಂಡಿರು, ಮಕ್ಕಳು, ಹೊಲ, ಮನೆ, ಹಣ, ಅಧಿಕಾರ, ಲೌಕಿಕವಿದ್ಯೆ–ಇವು ಯಾವವೂ ತಮಗೆತಾನೇ ಪ್ರಿಯವಾಗಿರುವದಿಲ್ಲ; ಈ ಲೋಕದಲ್ಲಿ ಯಾವದೊಂದು ವಸ್ತುವಿರಲಿ, ಅದರ ಪ್ರಾಪ್ತಿಯೂ ಜ್ಞಾನವೂ ಭೋಗವೂ ಅದಕ್ಕಾಗಿ ಸುಳ್ಳು. ಪರಮಾತ್ಮನ ಪ್ರಾಪ್ತಿಗಾಗಿಯೇ ಮಿಕ್ಕೆಲ್ಲದ್ದೂ ಬೆಲೆಯುಳ್ಳದ್ದೆನಿಸುವದು. ಪರಮಾತ್ಮಲಾಭಕ್ಕಿಂತ ಹೆಚ್ಚಿನ ಲಾಭವು ಯಾವದೊಂದೂ ಇರುವದೇ ಇಲ್ಲ. ಹೀಗೆಂಬುದು ತೀವ್ರ ಮುಮುಕ್ಷುತೆಯಿರುವವರ ಮನೋಭಾವವು.

ಹೀಗೆ ತಮ್ಮ ಧ್ಯೇಯದ ಪ್ರಾಪ್ತಿಗಾಗಿ ಮಿಕ್ಕೆಲ್ಲವನ್ನೂ ಕೈಬಿಡುವದೂ, ಕಡೆಗಣಿಸುವದೂ ಮುಮುಕ್ಷುಗಳಿಗೆ ಮಾತ್ರ ಮೀಸಲಲ್ಲ. ಈ ಲೋಕದಲ್ಲಿ ಯಾರು ಯಾರು ಯಾವಯಾವದನ್ನು ಪಡೆಯುವದಕ್ಕೆ ಉತ್ಕಟವಾದ ಇಚ್ಛೆಯುಳ್ಳವ ರಾಗಿರುವರೋ ಅವರು ಅದರ ಪ್ರಾಪ್ತಿಗಾಗಿ ಎಂಥ ಕಷ್ಟವನ್ನಾದರೂ ಸಹಿಸಿಕೊಳ್ಳು ವದಕ್ಕೆ ಸಿದ್ಧರಾಗುವರು; ಅದಕ್ಕೆ ಅಡ್ಡಿಯಾದ ಯಾವದನ್ನಾದರೂ ಬಿಟ್ಟು ಕೊಡು ವದಕ್ಕೆ ಹಿಂಜರಿಯುವದಿಲ್ಲ. ವಿದ್ಯಾರ್ಥಿಗಳು ವಿದ್ಯಾರ್ಜನೆಗಾಗಿ ನಿದ್ರೆ, ಶರೀರಸುಖ ಮುಂತಾದವುಗಳನ್ನೆಲ್ಲ ತ್ಯಜಿಸುವದಿಲ್ಲವೆ? ಗೃಹಸ್ಥರು ಧನಾರ್ಜನೆಗಾಗಿ ಎಷ್ಟೆಲ್ಲ

ಶ್ರಮವನ್ನು ಅಪ್ಪಿಕೊಳ್ಳುವದಿಲ್ಲ ! ಒಂದಾನೊಂದು ಹೆಚ್ಚಿನ ಅಧಿಕಾರಸ್ಥಾನವನ್ನು ಬಯಸುವವರು ಅದಕ್ಕಾಗಿ ಎಷ್ಟು ಹಣವನ್ನು ವೆಚ್ಚಮಾಡುವರು ! ಕೀರ್ತಿಯನ್ನು ಸಂಪಾದಿಸಬೇಕೆಂದು ಹಂಬಲಿಸುತ್ತಿರುವವರು ಅದಕ್ಕಾಗಿ ತಮ್ಮ ಶಕ್ತಿಯನ್ನು ಮೀರಿದ ದಾನಧರ್ಮಗಳನ್ನು, ಅಥವ ಅವಶ್ಯವೆಂದು ಕಂಡರೆ ಮಾಡಬಾರದ ಪರಸೇವೆಯನ್ನು ಕೂಡ, ಮಾಡುವರಲ್ಲವೆ? ಪರರಾಷ್ಟ್ರವನ್ನು ಆಕ್ರಮಿಸಿಕೊಳ್ಳ ಬೇಕೆಂಬ ಒಂದು ರಾಷ್ಟ್ರದವರು ಅದಕ್ಕಾಗಿ ಎಷ್ಟು ಸಾಹಸವನ್ನೆಲ್ಲ ಮಾಡುವರು ! ಇದರಂತೆಯೇ ಉತ್ಕಟವಾದ ಮೋಕ್ಷೇಚ್ಛೆಯುಳ್ಳವರು ಪರಮಾತ್ಮಪ್ರಾಪ್ತಿಗಾಗಿ ಈ ಲೋಕದ ಮತ್ತು ಪರಲೋಕದ ಸಕಲಭೋಗಗಳನ್ನೂ ತ್ಯಜಿಸುವದಕ್ಕೆ ಸಿದ್ಧರಾದರೆ ಆಶ್ಚರ್ಯವೇನು? ಈ ಕಾರಣದಿಂದಲೇ ಉಪನಿಷತ್ತು ಹೀಗೆಂದು ಸಾರುತ್ತಿದೆ:

**ಈ ಪರಮಾತ್ಮಲೋಕವನ್ನೇ ಇಚ್ಛಿಸುವವರು ಪಾರಿವ್ರಾಜ್ಯವನ್ನು ವಹಿಸುವರು. ಅವರು ಪ್ರಜಾಸಂತತಿಯನ್ನು ಬಯಸುವದಿಲ್ಲ; ನಾವು ಪ್ರಜೆಯಿಂದ ಏನು ಮಾಡಿಕೊಳ್ಳೋಣ? ನಮಗೆ ಇವನೇ ಆತ್ಮನು, ಇವನೇ ಲೋಕವು-ಎನ್ನುವರು. ಅವರು ಪುತ್ರೈಷಣೆ, ವಿತ್ತೈಷಣೆ, ಲೋಕೈಷಣೆ- ಎಲ್ಲವನ್ನೂ ಬಿಟ್ಟೆದ್ದು ಭಿಕ್ಷಾಚರ್ಯವನ್ನೇ ಮಾಡುವರು ಬೃ. 4-4-22**

ಮನುಷ್ಯಲೋಕದ ಜಯಕ್ಕಾಗಿ ಪ್ರಜೆ ಬೇಕು, ಪಿತೃಲೋಕಕ್ಕಾಗಿ ಕರ್ಮವು ಬೇಕು, ದೇವಲೋಕಕ್ಕಾಗಿ ಉಪಾಸನೆಯು ಬೇಕು; ಆದರೆ ಯಾರಿಗೆ ಈ ಲೋಕ ತ್ರಯದ ಆಶೆಯೂ ಇರುವದಿಲ್ಲವೋ ಅವರು ಯಾವದರಲ್ಲಾದರೂ ಏತಕ್ಕೆ ನಾನುನನ್ನದೆಂಬ ಭಾವವನ್ನು ಮಾಡಿಕೊಳ್ಳುವರು? ಇಂಥವರಿಗೆ ಯಾವದೊಂದ ರಲ್ಲಿಯೂ ಅಭಿಮಾನವಿರುವದಿಲ್ಲವೆಂಬುದು ಸ್ವಾಭಾವಿಕವಷ್ಟೆ. ಈ ಸ್ಥಿತಿಯಲ್ಲಿರು ವವರಿಗೆ ತಮ್ಮದೆಂಬುದೇ ಇರುವದಿಲ್ಲವಾಗಿ ಅವರ ನಿತ್ಯಜೀವನವು ಹೇಗೆ ಆಗಬೇಕು?-ಎಂಬುದೊಂದು ಪ್ರಶ್ನೆಯು ಏಳುತ್ತದೆ. ನಮ್ಮ ಪೂರ್ವಿಕರ ಸಮಾಜವು ಇವರಿಗೆ ಭಿಕ್ಷಾಚರ್ಯವೇ ಉಪಾಯವು ಎಂದು ಹೇಳಿತ್ತು. ಅದನ್ನೇ ಪರಮಹಂಸರುಗಳು ಇಂದಿನವರೆಗೂ ನಡೆಯಿಸಿಕೊಂಡುಬಂದಿರುತ್ತಾರೆ.

ಈಗಿನಕಾಲದಲ್ಲಿ ಪ್ರತಿಯೊಬ್ಬನೂ ತನ್ನ ಅನ್ನಕ್ಕಾಗಿ ದುಡಿಯಬೇಕಾಗಿರುತ್ತದೆ. ಆದ್ದರಿಂದ ಭಿಕ್ಷಾಚರ್ಯೆ ಎಂಬುದು ಅಲಸರ ವೃತ್ತಿ ಎಂಬ ಮನೋಭಾವವು ನಮ್ಮಲ್ಲಿ ಅನೇಕರಿಗೆ ಮೂಡಿರುತ್ತದೆ. ಕೈಕಾಲುಗಳು ಗಟ್ಟಿಯಾಗಿರುವವರು ಏನನ್ನೂ ಮಾಡದೆ ತಮ್ಮ ಅನ್ನಬಟ್ಟೆಗಳಿಗೆ ಹೆರರನ್ನೇ ನಂಬಿಕೊಂಡು ಸಮಾಜಕ್ಕೆ ಭಾರ ವಾಗಿರುವದು ತಪ್ಪೇ ಸರಿ. ಪರಾನ್ನಭೋಜನದಲ್ಲಿಯೇ ಆಯುಸ್ಸನ್ನು ಕಳೆಯುವದೂ ತಿರುಪೆಮಾಡಿಕೊಂಡೇ ಜೀವಿಸುವದೂ ಅತ್ಯಂತ ನಿಂದ್ಯಾಚಾರವೆಂಬುದನ್ನು ನಮ್ಮ ಹಿಂದಿನವರೂ ಸುಸ್ಪಷ್ಟವಾಗಿ ಪ್ರತಿಪಾದಿಸಿಯೇ ಇರುತ್ತಾರೆ. ಆದರೆ ಬಾಹ್ಯಜೀವನದ

ಉದ್ಯೋಗವೇ ಜನಾಂಗದ ಮುಖ್ಯಕರ್ತವ್ಯವೆಂದು ಎಣಿಸಿರುವ ಈ ಕಾಲದ ದೇಹಾತ್ಮವಾದಿಗಳಿಗೆ-ಮನುಷ್ಯನ ನಿರುದ್ಯೋಗ ಸಮಸ್ಯೆಯನ್ನು ಹೇಗೆ ಬಿಡಿಸ ಬೇಕೆಂಬುದೂ ತಿಳಿಯದಿದ್ದರೂ-ಸಾಮಾನ್ಯರ ಭಿಕ್ಷಾವೃತ್ತಿಗೂ ಪರಮವೈರಾಗ್ಯದಿಂದ ಜ್ಞಾನನಿಷ್ಠರಾಗಿರುವ ಪರಮಹಂಸರ ಭಿಕ್ಷಾಚರ್ಯೆಗೂ ಯಾವ ಹೆಚ್ಚುಕಡಿಮೆಯೂ ಕಾಣಿಸುತ್ತಿಲ್ಲ. ಆದ್ದರಿಂದ ಅವರು ಸೋಮಾರಿತನದಿಂದ ತಿರುಪೆಗಾಗಿ ಅಲೆಯು ತ್ತಿರುವ ಜನರ ಗುಂಪಿನಲ್ಲಿ ಸಾಧಕರೂ ಸಿದ್ಧರೂ ಆದ ವಿರಕ್ತಸಂನ್ಯಾಸಿಗಳನ್ನೂ ಸೇರಿಸಿ ಮಾತನಾಡುತ್ತಿರುವದು ಅಲ್ಲಲ್ಲಿ ಕಂಡುಬರುತ್ತಿದೆ.

ಇದಕ್ಕೆ ಅವಕಾಶವನ್ನು ಕೊಡುವ ಸಂನ್ಯಾಸಿಗಳೇನೂ ಸಂಖ್ಯೆಯಲ್ಲಿ ಕಡಿಮೆ ಇರುವದಿಲ್ಲ. ಯತ್ಯಾಶ್ರಮದ ಉದ್ದೇಶವೇನು?- ಎಂಬುದನ್ನೇ ಅರಿಯದೆ ಕಾಷಾಯ ದಂಡಾದಿಗಳ ವೇಷಮಾತ್ರದಿಂದಲೇ ತಾವು ಕೃತಾರ್ಥರೆಂದೂ ತಮಗೆ ಭಿಕ್ಷೆಯನ್ನು ಕಾಲಕಾಲಕ್ಕೆ ಒದಗಿಸುವದು ಸಮಾಜದ ಕರ್ತವ್ಯವೆಂದೂ ಭಾವಿಸಿರುವ ಸಂನ್ಯಾಸಿಗಳೂ ಹಲವರುಂಟು. ವರ್ಣಾಶ್ರಮಧರ್ಮದ ಅಗ್ಗಳಿಕೆಯು ನಮ್ಮ ದೇಶದಲ್ಲಿದ್ದಾಗ ಯಾವನೆಂದರೆ ಅವನು, ಯಾವಾಗಲೆಂದರೆ ಆಗ, ಚತುರ್ಥಾಶ್ರಮವನ್ನು ಸ್ವೀಕರಿಸು ವದಕ್ಕೆ ಅವಕಾಶವಿರಲಿಲ್ಲ. ಆಗ ಕೆಲಸಮಾಡಬಲ್ಲ ಅವಿರಕ್ತರು ಕರ್ಮಸಂನ್ಯಾಸ ಮಾಡುವದನ್ನು ಅಡ್ಡಿಮಾಡುವ ಸರಕಾರವೂ ಇತ್ತು; ಅಯೋಗ್ಯರಾದವರನ್ನು ಸಂನ್ಯಾಸಿಗಳ ಗುಂಪಿಗೆ ಬಿಟ್ಟುಕೊಳ್ಳದ ಸಮಾಜದ ನಿಯಮವೂ ಆಚಾರದಲ್ಲಿತ್ತು. ಆದ್ದರಿಂದ ಆ ಕಾಲದಲ್ಲಿ "ಕಾಷಾಯದಂಡ-ಮಾತ್ರೇಣ ಯತಿಃ ಪೂಜ್ಯೋ ನ ಸಂಶಯಃ" ಕಾಷಾಯ, ದಂಡ-ಇವೆರಡಿದ್ದರೂ ಸಾಕು, ಯತಿಯು ಪೂಜ್ಯನೇ ಎಂಬುದಕ್ಕೆ ಸಂಶಯವಿಲ್ಲ ಎಂಬ ಅರ್ಥವಾದ ನ್ಯಾಯವು ಸಾರ್ಥಕವಾಗುತ್ತಿತ್ತು. ಆದರೆ ಆಗಲೂ ಕಾಷಾಯದಂಡಧಾರಣೆಯು ಯತಿಗಳು ಆಚರಿಸುವ ಯಮ ನಿಯಮಾದಿಗಳಿಗೆ ಹೊರಗಿನ ಚಿಹ್ನವೆಂದು ಮಾತ್ರ ಎಣಿಸಲ್ಪಟ್ಟಿತ್ತೇ ಹೊರತು ಅದೇ ಯತಿಗಳ ಹೆಗ್ಗುರುತು ಎಂದು ಯಾರೂ ಭಾವಿಸಿರಲಿಲ್ಲವೆಂಬುದನ್ನು ನೆನಪಿಡಬೇಕು.

ಇದಂತಿರಲಿ. ಪರಮಹಂಸರಿಗೆ ಭಿಕ್ಷಾಚರ್ಯವು ಹೇಗೆ ಪ್ರಾಪ್ತವಾಗಿದೆ ಎಂಬುದನ್ನು ನಾವು ಇಲ್ಲಿ ವಿಚಾರಮಾಡತಕ್ಕದ್ದು ಅವಶ್ಯವಾಗಿದೆ. ಏಷಣಾತ್ರಯವನ್ನೂ ಬಿಟ್ಟವರು, ನನ್ನದು ಎಂದು ಯಾವದೊಂದನ್ನೂ ಇಟ್ಟುಕೊಳ್ಳುವದಕ್ಕಿಲ್ಲವಷ್ಟೆ? ಆದ್ದರಿಂದ ಅವರು ಸಾಮಾನ್ಯಗೃಹಸ್ಥರಂತೆ ಧನಧಾನ್ಯಸಂಗ್ರಹವನ್ನು ಮಾಡುವ ಸಂಭವವಿಲ್ಲ. ಅಂಥವರು ತಮ್ಮ ಶರೀರಸ್ಥಿತಿಗೆ ಬೇಕಾದ ಆಹಾರಾದಿಗಳನ್ನು ಹೇಗೆ ಸಂಪಾದಿಸಬೇಕು?- ಎಂಬ ಪ್ರಶ್ನೆಯು ತಲೆ ಎತ್ತುವದಷ್ಟೆ. ಇದಕ್ಕೆ ಉತ್ತರವಾಗಿ ಭಗವದ್ಗೀತೆಯಲ್ಲಿರುವ ಎರಡು ಶ್ಲೋಕಗಳನ್ನು ಇಲ್ಲಿ ಉದಾಹರಿಸುವದು ಉಚಿತವಾಗಿದೆ :

**ನಿರಾಶೀರ್ಯತಚಿತ್ತಾತ್ಮಾ ತ್ಯಕ್ತಸರ್ವಪರಿಗ್ರಹಃ ।**
**ಶಾರೀರಂ ಕೇವಲಂ ಕರ್ಮ ಕುರ್ವನ್ನಾಪ್ನೋತಿ ಕಿಲ್ಬಿಷಮ್ ॥**
**ಯದೃಚ್ಛಾಲಾಭಸಂತುಷ್ಟೋ ದ್ವಂದ್ವಾತೀತೋ ವಿಮತ್ಸರಃ ।**
**ಸಮಃ ಸಿದ್ಧಾವಸಿದ್ಧೌ ಚ ಕೃತ್ವಾಪಿ ನ ನಿಬಧ್ಯತೇ ॥** ಗೀ. 4-21, 22

ಯಾವನಿಗೆ ಯಾವದೊಂದರ ಆಶೆಯೂ ಇರುವದಿಲ್ಲವೋ, ಯಾವನು ತನ್ನ ಅಂತಃಕರಣವನ್ನೂ ಶರೀರೇಂದ್ರಿಯಗಳನ್ನೂ ಬಿಗಿಹಿಡಿದುಕೊಂಡಿರುವನೋ, ಯಾವನಿಗೆ ಯಾವದೊಂದೂ ತನ್ನದೆಂಬುದಿಲ್ಲವೋ, ಅಂಥ ಯತಿಯು ಬರಿಯ ಶರೀರಸ್ಥಿತಿಗೆ ಮಾತ್ರ ತಕ್ಕಷ್ಟು ಕರ್ಮವನ್ನು ಮಾಡಿದರೆ ಅದರಿಂದ ಅವನಿಗೆ ಧರ್ಮವಾಗಲಿ ಅಧರ್ಮವಾಗಲಿ ಅಂಟಿಕೊಳ್ಳುವದಿಲ್ಲ-ಎಂಬುದು ಮೊದಲನೆಯ ಶ್ಲೋಕದ ಅರ್ಥವು. ಈ ಶ್ಲೋಕದಲ್ಲಿ ಜ್ಞಾನನಿಷ್ಠನಾದ ಸಂನ್ಯಾಸಿಯು ನಿಜವಾಗಿ ಯಾವ ಕರ್ಮವನ್ನೂ ಮಾಡದೆ ಪರಮಾತ್ಮನಲ್ಲಿಯೇ ನೆಲೆನಿಂತಿರುವದರಿಂದ ಅವನಿಗೆ ನಾಳೆಗೇನು ಎಂಬ ಚಿಂತೆಯೇ ಇರುವದಿಲ್ಲವಾಗಿ ಅವನು ಶರೀರ ಯಾತ್ರೆಗಾಗಿ ಯಾವ ಕಾಳುಕಡ್ಡಿಯನ್ನೂ ಕೂಡಿಹಾಕಿಕೊಳ್ಳಲಾರನೆಂದೂ ಹೀಗಿರುವದರಿಂದ ಅವನಿಗೆ ಭಿಕ್ಷೆಯೊಂದೇ ಜೀವನೋಪಾಯವಾಗಿ ಪ್ರಾಪ್ತವಾಗುತ್ತದೆಯಾಗಿ ಅವನು ಭಿಕ್ಷಾಚರಣೆಯಲ್ಲಿ ಪ್ರವೃತ್ತನಾಗಬೇಕಾಗುವದು; ಅಂಥವನಿಗೆ ಆ ಭಿಕ್ಷಾಚರಣೆಯಲ್ಲಿಯೂ ಯಾವ ಅಭಿಮಾನವೂ ಇರುವದಿಲ್ಲವಾದ್ದರಿಂದ ಅದನ್ನು ಮಾಡುವದರಿಂದ ಅವನಿಗೆ, ಗೃಹಸ್ಥನ ಕರ್ಮದಿಂದ ಪುಣ್ಯಪಾಪಗಳುಂಟಾಗುವಂತೆ, ಯಾವ ಕಿಲ್ಬಿಷವೂ ಆಗುವದಿಲ್ಲ ಎಂದು ಹೇಳಿರುತ್ತದೆ. ಈ ಶ್ಲೋಕದಲ್ಲಿ ಹೇಳಿರುವದು 'ಶಾರೀರಕರ್ಮ'ವಾದ್ದರಿಂದ ಶರೀರದಿಂದ ಮಾಡುವಷ್ಟು ಕರ್ಮವೆಂದು ಅರ್ಥಮಾಡುವದಕ್ಕೆ ಬರುವದಿಲ್ಲ, ಏಕೆಂದರೆ ಆಗ ಕೆಟ್ಟ ಕರ್ಮಗಳನ್ನು ಮಾಡಿದರೂ ಕಿಲ್ಬಿಷವುಂಟಾಗುವದಿಲ್ಲ ಎಂಬ ಅನಿಷ್ಟಾರ್ಥವು ಬಂದೊದಗುವದು. ಶಾರೀರಕರ್ಮವೆಂದರೆ ಶರೀರದಿಂದಾಗುವ ಒಳ್ಳೆಯ ಕರ್ಮವು ಎಂಬರ್ಥವನ್ನು ಮಾಡಿದರೂ ಒಳ್ಳೆಯ ಕರ್ಮವನ್ನು ಮಾಡಿದರೂ ಕಿಲ್ಬಿಷವುಂಟಾಗುವದಿಲ್ಲ ಎಂದು ಅಪ್ರಸಕ್ತವಾದದ್ದನ್ನು ಹೇಳಿದಂತೆ ಆಗುವದು. ಆದ್ದರಿಂದ ಶರೀರಸ್ಥಿತಿಗಾಗಿ ಮಾಡುವ ಬರಿಯ ಕರ್ಮವನ್ನು, ಎಂದರೆ, ಯಾವ ಅಭಿಮಾನವೂ ಇಲ್ಲದ ಕರ್ಮವನ್ನು, ಮಾಡಿದರೆ ಅದರಿಂದ ಯಾವ ಕಿಲ್ಬಿಷವೂ ಅವನಿಗೆ ಅಂಟುವದಿಲ್ಲವೆಂದೇ ಅರ್ಥವನ್ನು ಮಾಡಬೇಕು ಎಂದು ಶ್ರೀಶಂಕರಭಗವತ್ಪಾದರವರು ಬರೆದಿರುತ್ತಾರೆ.

ಈ ಶ್ಲೋಕದಲ್ಲಿ ಶರೀರಸ್ಥಿತಿಗಾಗಿ ಮಾಡುವ ಕೇವಲಕರ್ಮವೆಂದರೆ ಭಿಕ್ಷಾಚರ್ಯೆಯೇ ಎಂಬುದು ಸ್ಪಷ್ಟವಾಗಿ ಅಕ್ಷರಾರ್ಥವೆಂದು ಕಾಣುವದಿಲ್ಲ. ಆದ್ದರಿಂದ

ಗೃಹಸ್ಥನಾದ ಬ್ರಾಹ್ಮಣನು ಯಾಚನೆಯಿಂದಲೋ ಯಾಜನಾದಿಗಳಿಂದಲೋ ಸಂಪಾದಿಸುವಂತೆ ಇವನೂ ತನ್ನ ಅನ್ನವನ್ನು ಸಂಪಾದಿಸಿಕೊಳ್ಳಬಹುದು ಎಂಬ ಅರ್ಥವನ್ನು ಶ್ಲೋಕಕ್ಕೆ ತೆಗೆಯುವದಕ್ಕೆ ಬರುತ್ತದೆ. ಆದರೆ ಇದಕ್ಕೆ ಅವಕಾಶವಿಲ್ಲ ದಂತೆ ಮುಂದಿನ ಶ್ಲೋಕದಲ್ಲಿ 'ಯದೃಚ್ಛಾಲಾಭ ಸಂತುಷ್ಟಃ' ಎಂಬ ಪದವನ್ನಿಟ್ಟಿದೆ. ಮೋಕ್ಷಧರ್ಮದಲ್ಲಿ ಯತಿಗೆ ಅನ್ನಾದಿಗಳು ಹೇಗೆ ಪ್ರಾಪ್ತವಾಗಬೇಕೆಂಬ ಬಗ್ಗೆ ಇರುವ ಒಂದು ಶ್ಲೋಕವನ್ನು ಇದಕ್ಕೆ ಬೆಂಬಲವಾಗಿ ಆಚಾರ್ಯರು ಉದಾಹರಿಸಿಕೊಂಡಿರುತ್ತಾರೆ:

**ಅಯಾಚಿತಮಸಂಕ್ಲಿಪ್ತಮುಪಪನ್ನಂ ಯದೃಚ್ಛಯಾ ।**
**ಕೃತ್ವಾ ಪ್ರಾಹ್ಣೇ ಚರೇದ್ ಭೈಕ್ಷ್ಯಂ ವಿಧೂಮೇ ಭುಕ್ತವಜ್ಜನೇ ॥** ಅಶ್ವ. 47-16

ಇದು ಅಶ್ವಮೇಧಪರ್ವದಲ್ಲಿರುವ ಶ್ಲೋಕವು. ಮತ್ತೊಬ್ಬರನ್ನು ಬೇಡದೆ, ಮೊದಲೇ ಗೊತ್ತುಮಾಡಿಕೊಂಡಿರದೆ, ತನಗೆತಾನೇ ಪ್ರಾಪ್ತವಾದಷ್ಟನ್ನು ಭಿಕ್ಷೆಯಿಂದ ಸಂಪಾದಿಸಿಕೊಳ್ಳಬೇಕು-ಎಂದು ಆ ಶ್ಲೋಕದ ಅಭಿಪ್ರಾಯವು. ಈ ಗೀತಾಶ್ಲೋಕ ದಲ್ಲಿಯೂ ತಾನೇ ಸಿಕ್ಕಿದಷ್ಟರಿಂದಲೇ ಸಂತುಷ್ಟನಾಗಿ, ದ್ವಂದ್ವಗಳನ್ನೆಲ್ಲ ಸಹಿಸಿಕೊಂಡು ಯಾರೊಬ್ಬರಲ್ಲಿಯೂ ಮಾತ್ಸರ್ಯವನ್ನು ಮಾಡದೆ ತನಗೆ ಭಿಕ್ಷಾನ್ನವು ಸಿಕ್ಕಲಿ ಸಿಕ್ಕದಿರಲಿ ಮನಸ್ಸಿನಲ್ಲಿ ಏರುಪೇರಿಲ್ಲದೆ ಸಮತೆಯನ್ನು ಕಾಯ್ದುಕೊಂಡು ಇರುವ ವನಿಗೆ ಬಂಧವಿಲ್ಲವೆಂದು ಹೇಳಿದೆ. ಸಂನ್ಯಾಸಿಗಳ ಭಿಕ್ಷೆಗೆ ಬಹಳ ನಿಯಮವಿದೆ. ಜನರು ಊಟಮಾಡಿ ಮಿಕ್ಕಷ್ಟು ಹಾಕಿದರೂ ಸಾಕು ಎನ್ನುತ್ತಿರಬೇಕು; ಹೆಚ್ಚು ಭಿಕ್ಷೆಯನ್ನು ಸಂಗ್ರಹಿಸಬಾರದು; ನನಗೆ ಹೀಗೆಯೇ ಅನ್ನವು ಸಿಕ್ಕಬೇಕು, ನನಗೆ ಗೌರವವೇ ದೊರೆಯಬೇಕು-ಎಂದು ಹವಣಿಸಬಾರದು. ಯಾರೊಬ್ಬರಿಗೂ ಹಿಂಸೆಯಾಗಬಾರದು, ತನಗೂ ಅಭಿಮಾನವುಂಟಾಗಬಾರದು-ಎಂಬುದು ಈ ಭಿಕ್ಷಾಚರಣೆಯಲ್ಲಿ ಅತಿಮುಖ್ಯವಾಗಿರುತ್ತದೆ.

ನಾವು ಮೇಲೆ ಉದಾಹರಿಸಿರುವ ಶ್ಲೋಕಗಳೆರಡೂ ಜ್ಞಾನನಿಷ್ಠನಾದ ಸಂನ್ಯಾಸಿಯ ವಿಷಯವಾದರೂ ಇವುಗಳ ಅಭಿಪ್ರಾಯವು ಜ್ಞಾನಾರ್ಥವಾಗಿ ಭಿಕ್ಷಾಟನೆಮಾಡುವವನಿಗೂ ಅನ್ವಯಿಸುತ್ತದೆ. ಏಕೆಂದರೆ ಆತ್ಮಜ್ಞಾನಪ್ರಾಪ್ತಿಯನ್ನು ಬಯಸುವವರು ಪ್ರಯತ್ನಪೂರ್ವಕವಾಗಿ ಏಷಣಾತ್ರಯವನ್ನು ಬಿಟ್ಟು ಭಿಕ್ಷಾಚರಣೆ ಯನ್ನು ಮಾಡುತ್ತಾರೆ-ಎಂಬರ್ಥದ ಶ್ರುತಿಯನ್ನೇ ಆಗಲೆ ಉದಾಹರಿಸಿದ್ದಾಗಿದೆ. ಆದ್ದರಿಂದ ಪರಮಹಂಸರ ಭಿಕ್ಷಾಚರ್ಯಕ್ಕೂ ತಿರುಪೆಯಿಂದಲೇ ತಮ್ಮ ಹೊಟ್ಟೆ ಯನ್ನು ತುಂಬಿಕೊಳ್ಳುವ ಜನರ ವೃತ್ತಿಗೂ ಅಜಗಜಾಂತರವಿದೆ. ಸಂನ್ಯಾಸಿಗಳು ಮಾಡುವ ಪರಮಾತ್ಮಚಿಂತನೆಯಿಂದಲೂ ಅವರ ಜ್ಞಾನದಿಂದಲೂ ಅವರಿಗೂ ಕಲ್ಯಾಣವಿದೆ, ಲೋಕಕ್ಕೂ ಕಲ್ಯಾಣವಿದೆ. ಆದರೆ ಮೈಕೈಗಟ್ಟಿಯಾಗಿದ್ದರೂ

ಅಲಸರಾಗಿ ಧಗಡಿಭಿಕ್ಷದಿಂದಲೇ ಹೊಟ್ಟೆಯನ್ನು ಹೊರೆಯುವೆವು ಎಂಬ ಪ್ರತಿಜ್ಞೆಯಿಂದ ಕಾಲವನ್ನು ಕಳೆಯುವ ಮೈಗಳ್ಳರಿಂದ ದೇಶಾಭಿವೃದ್ಧಿಗೂ ಆತಂಕವಿದೆ; ಅವರು ತಾವಂತೂ ಪಾಪದ ಕೂಪದಲ್ಲಿ ಬಿದ್ದೇ ಇರುತ್ತಾರೆ.

ಹಸಿವೆಂಬುದು ಮನುಷ್ಯನಿಗೆ ಬರುವ ಒಂದು ನಿತ್ಯರೋಗವು. ರೋಗಕ್ಕೆ ಯಾವಯಾವ ಚಿಹ್ನೆಗಳಿರುತ್ತವೆಯೋ ಅವೆಲ್ಲ ಇದಕ್ಕೂ ಇದೆ. ಆದರೆ ಇದು ನಿತ್ಯವಾಗಿ ಗೊತ್ತಾದ ಕಾಲದಲ್ಲಿ ಎಲ್ಲರಿಗೂ ಉಂಟಾಗುತ್ತಿರುವದರಿಂದಲೋ ಏನೊ, ಅದನ್ನು ರೋಗವೆಂದು ನಾವು ಕರೆಯುವದಿಲ್ಲ. ಹಸಿವು ಆಗದೆ ಇದ್ದರೆ ಶರೀರದ ಆರೋಗ್ಯವು ಕೆಡುವದೆಂಬ ಅಂಜಿಕೆಯಿಂದ ನಾವು ಹಸಿವು ಸರಿಯಾಗಿ ಉಂಟಾಗುವ ಔಷಧಗಳನ್ನು ತೆಗೆದುಕೊಳ್ಳುವದು ನಿಜ. ಆದರೆ ಆ ಔಷಧದ ಉದ್ದೇಶವೇನು? ಅನ್ನವನ್ನುಂಡು ಬಲವನ್ನು ಸಂಪಾದಿಸಿಕೊಳ್ಳುವದಕ್ಕೆ ಎಂದು ನೀವು ಹೇಳಬಹುದು. ಆದರೆ ಆ ಬಲವು ಏತಕ್ಕೆ? ಅದರಿಂದ ಆಹಾರವನ್ನು ಸಂಪಾದಿಸಿಕೊಂಡು ಹಸಿವನ್ನು ಅಡಿಗಿಸಿಕೊಳ್ಳುವದಕ್ಕೇ ಅಲ್ಲವೆ? ಆದ್ದರಿಂದ ನಮಗೆ ಹಸಿವು ಇಷ್ಟವಲ್ಲ; ಅದು ಅನಿವಾರ್ಯವಾದ ಒಂದು ರೋಗವಾಗಿರುತ್ತದೆ, ಅಷ್ಟೆ. ಈ ರೋಗಕ್ಕೆ ತತ್ತತ್ಕಾಲಕ್ಕೆ ಒಂದು ಔಷಧವು ಬೇಕಾಗಿರುತ್ತದೆ. ತಲೆನೋವಿಗೆ ಅಮೃತಾಂಜನವೇ ಮುಂತಾದವುಗಳಂತೆ, ಹಸಿವಿನ ಬಾಧೆಯನ್ನು ತತ್ತತ್ಕಾಲಕ್ಕೆ ತಡೆಯುವದಕ್ಕೆ ಆಹಾರವು ಬೇಕು, ಅಷ್ಟೆ. ಆಹಾರಸಂಪಾದನೆಯೇ ಮನುಷ್ಯನ ಜೀವನವಲ್ಲ. ಆಹಾರಸೇವನೆಯೇ ಜೀವನದ ಉದ್ದೇಶವೂ ಅಲ್ಲ; ಆಹಾರವು ಒಂದು ಔಷಧಮಾತ್ರವು, ಅದರಿಂದ ಹಸಿವೆಂಬ ರೋಗವನ್ನು ಅಡಗಿಸಿಕೊಳ್ಳ ಬೇಕಾಗಿದೆ ಎಂಬುದು ಸಂನ್ಯಾಸಿಗಳ ಭಿಕ್ಷಾಟನೆಯ ತತ್ತ್ವವು. ಆದ್ದರಿಂದ ಅವರು ಹಸಿವನ್ನು ಪರಿಹರಿಸಿಕೊಳ್ಳುವದಕ್ಕೆ ತಕ್ಕಷ್ಟೇ ಆಹಾರವನ್ನು ತೆಗೆದುಕೊಳ್ಳುವರು. ಹಸಿವನ್ನು ಪರಿಹರಿಸುವದಕ್ಕೆ ಯೋಗ್ಯತೆಯುಳ್ಳ ಆಹಾರವನ್ನೇ ತೆಗೆದುಕೊಳ್ಳುವರು.

ಹೀಗಿರುವದರಿಂದ ಅವರಿಗೆ ಆಹಾರದ ಸವಿಯು ಅಷ್ಟು ಮುಖ್ಯವಲ್ಲ. ಹಸಿವನ್ನು ಅಡಗಿಸುವ ಗುಣವು ಮುಖ್ಯ. ಜ್ವರದಿಂದ ಪೀಡಿತರಾದವರಿಗೆ ಕಟುಕ ರೋಹಿಣಿ, ಕಾಳುಜೀರಿಗೆ, ಕ್ವಿನೈನ್-ಮುಂತಾದ ಔಷಧಿಗಳು ಕಹಿಯಾಗಿ ಕಂಡರೂ ಅವುಗಳಿಂದ ಜ್ವರವು ಪರಿಹಾರವಾಗುವದೆಂದು ತಿಳಿದಿರುವದರಿಂದ ಅವನ್ನು ಹೇಗೆ ತಾವೇ ಸೇವಿಸುವರೋ, ಅವುಗಳ ಕಹಿಯನ್ನು ಹೇಗೆ ಲೆಕ್ಕಿಸದಿರುವರೋ ಹಾಗೆ ಈ ಭಿಕ್ಷುಗಳು, ತಮಗೆ ದೈವವಶದಿಂದ ಸಿಕ್ಕಿದ ಭಿಕ್ಷಾನ್ನವನ್ನು ಹಸಿವೆಂಬ ರೋಗಕ್ಕೆ ಮದ್ದು ಎಂಬ ದೃಷ್ಟಿಯಿಂದಲೇ ಭುಂಜಿಸುವರು. ಅದರ ರುಚಿಯು ಅವರಿಗೆ ಮುಖ್ಯವಾಗಿರುವದೇ ಇಲ್ಲ. ಈಗಿನ ಕಾಲದಲ್ಲಿ ಕೆಲವರು ಸಂನ್ಯಾಸಿ

ಗಳೆಂಬವರು ಹಗಲೂ ಇರುಳೂ ಭಿಕ್ಷದ ಚಿಂತೆಯನ್ನೇ ಮಾಡುತ್ತಿರುವರು; ಯಾವ ಊರಿನಲ್ಲಿ ಸುಭಿಕ್ಷವಾಗಿದೆ? ಎಲ್ಲಿ ಸಂನ್ಯಾಸಿಗಳಿಗೆ ಗೌರವವಿದೆ? ಯಾವ ಗೃಹಸ್ಥನ ಮನೆಯಲ್ಲಿ ಉತ್ತಮವಾದ ಭಿಕ್ಷ್ಯಭೋಜ್ಯಾದಿಗಳನ್ನು ಮಾಡಿಸುವ ಪದ್ಧತಿಯಿದೆ? ಎಂದು ಮುಂತಾಗಿ ಚಿಂತಿಸುವರಲ್ಲದೆ ಸಾಯಂಕಾಲಕ್ಕೆ ಅಥವಾ ನಾಳೆಗೆ ಎಂದು ಅವರು ಆಹಾರವನ್ನು ಕೂಡಿಡುವದೂ ಉಂಟು. ಭಿಕ್ಷವನ್ನು ಕೊಡುವ ಗೃಹಸ್ಥರು ತಮ್ಮನ್ನು ಗೌರವದಿಂದ ಕಂಡು 'ಭಿಕ್ಷಾವಂದನೆ' ಮಾಡಬೇಕು; ತಮಗೆ ಇಷ್ಟವಾದದ್ದನ್ನು ತಿಳಿದುಕೊಂಡೇ ಅವರು ಭಿಕ್ಷಕ್ಕೆ ಹೇಳಬೇಕು-ಎಂಬುದು ಈ ಸಂನ್ಯಾಸಿಗಳ ಇಚ್ಛೆ. ಆದರೆ ಇದೆಲ್ಲ ಸಂನ್ಯಾಸಿಗಳ ಧ್ಯೇಯಕ್ಕೆ ಕುಂದುತರತಕ್ಕದ್ದು. ಆಹಾರವಸ್ತ್ರಾದಿಗಳನ್ನು ಜೀವನದ ಗುರಿಯಾಗಿಟ್ಟುಕೊಳ್ಳದೆ ನಿರಂತರವಾಗಿ ಪರಮಾತ್ಮನ ದರ್ಶನಕ್ಕೆಂದು ಶ್ರವಣಮನನಾದಿಗಳನ್ನು ಅಭ್ಯಾಸಮಾಡುತ್ರಿರುವವರೇ ನಿಜವಾದ ಸಂನ್ಯಾಸಿಗಳು. ಅವರ ಮನಸ್ಸು ಎಂದಿಗೂ ಈ ದೇಹದ ಪೋಷಣೆಯಲ್ಲಿ ನಿರತವಾಗಿರುವದಿಲ್ಲ. ಅವರು ಶರೀರವನ್ನು ಅನಾದರಮಾಡುವರೆಂದಾಗಲಿ, ಕೃಚ್ಛ್ರಚಾಂದ್ರಾಯಣಾದಿಗಳಿಂದ ವಾನಪ್ರಸ್ಥರಂತೆ ಶರೀರವನ್ನು ದಂಡಿಸುತ್ತಿರುವರೆಂದಾಗಲಿ, ಅಭಿಪ್ರಾಯವಲ್ಲ. ಏಕೆಂದರೆ ಸಂನ್ಯಾಸಿಗಳು ಬಹುಕಾಲ ಬದುಕಿಕೊಂಡಿರಬೇಕೆಂದು ಶರೀರವನ್ನು ಪೋಷಿಸುವ ದೇಹಾತ್ಮವಾದಿಗಳೂ ಅಲ್ಲ; ಅಥವಾ ಈ ಜೀವಿತವು ದುಃಖಮಯವಾದ್ದರಿಂದ ಎಷ್ಟುಬೇಗನೆ ಈ ಲೋಕವನ್ನು ಬಿಟ್ಟುಹೊರಟರೆ ಅಷ್ಟು ಒಳ್ಳೆಯದೆಂಬ ನಿರಾಶೆಯ ಭಾವನೆಯಿಂದ ಆತ್ಮಹತ್ಯೆಯನ್ನು ಆಕಾಂಕ್ಷಿಸುವವರೂ ಅಲ್ಲ. ಅವರ ದೃಷ್ಟಿಯಲ್ಲಿ ದೇಹವೆಂಬುದು ಒಂದು ಸಾಧನವು. ದೇಹವನ್ನು ಧರಿಸಿದ್ದಕ್ಕೆ ಅದರ ಸದುಪಯೋಗಮಾಡಿಕೊಂಡು ಸದ್ಗುರುವನ್ನು ಸೇವಿಸಬೇಕು, ಶಾಂತ್ಯಾದಿಗುಣಗಳನ್ನೂ ಆತ್ಮಜ್ಞಾನದ ಸಾಧನಗಳನ್ನೂ ಆತನಿಂದ ತಿಳಿದುಕೊಳ್ಳಬೇಕು; ಸಾಧ್ಯವಾದರೆ ಈ ಜನ್ಮದಲ್ಲಿಯೇ ನಿತ್ಯಾನಂದರೂಪನಾದ ಪರಮಾತ್ಮನ ದರ್ಶನವನ್ನು ಮಾಡಿಕೊಳ್ಳಬೇಕು ಎಂಬುದೇ ಅವರ ಗುರಿಯಾಗಿರುತ್ತದೆ.

ಆದ್ದರಿಂದ ನಿಜವಾದ ಸಂನ್ಯಾಸಿಗಳು ಆಹಾರವಿಹಾರಾದಿಗಳನ್ನು ಕಿತ್ತು ಬಿಸುಡುವೆವೆಂಬ ವೀರಪ್ರತಿಜ್ಞೆಯ ತಪಃಪ್ರಧಾನರಲ್ಲ, ನಿರಾಶಾವಾದಿಗಳೂ ಅಲ್ಲ; ಅಥವಾ ಉಂಡುಉಟ್ಟು ಜೀವನವನ್ನು ಸುಖದಲ್ಲಿ ಅದ್ದುವೆವೆಂಬ ವಿಷಯಸುಖ ಲೋಲುಪರೂ ಅಲ್ಲ.

ಆದ್ದರಿಂದ ಮುಮುಕ್ಷುಗಳಾದ ಸಂನ್ಯಾಸಿಗಳ ಆಹಾರವಿಹಾರಗಳು ಯಾವ ದೃಷ್ಟಿಯಿಂದಲೂ ಮಿತಿಮೀರಬಾರದು. ಅವರು ಶರೀರವನ್ನು ಸುಮ್ಮನೆ ಕಷ್ಟಸಾಧ್ಯವಾದ ಕೆಲಸಗಳಲ್ಲಿ ತೊಡಗಿಸಲೂಬಾರದು; ಮೈಗಳ್ಳರಾಗಿ ಕುಳಿತಲ್ಲಿಯೇ ಕುಳಿತು ಇರಬಾರದು. ಯಾವಾಗಲೂ ನಿದ್ರಿಸುತ್ತಿರುವ ಅಜಗರವೃತ್ತಿಯೂ ಅವರಿಗೆ ತಕ್ಕದ್ದಲ್ಲ;

ಯಾವಾಗಲೂ ಜಾಗರಣೆಯಲ್ಲಿದ್ದು, ಏನಾದರೊಂದು ಶರೀರಪ್ರಧಾನವಾದ ಉದ್ಯೋಗವನ್ನು ಮಾಡುವ ದುಡಿಮೆಯೂ ಅವರಿಗೆ ಸಲ್ಲದು. ಅಂತರ್ಮುಖರಾಗಿ ಪರಮಾತ್ಮನ ಚಿಂತನೆಯಲ್ಲಿ ಮುಳುಗಿರುವದಕ್ಕೆ ಬೇಕಾದ ಬಾಹ್ಯವ್ಯಾಪಾರಗಳನ್ನೇ ಹಿತಮಿತವಾಗಿ ಅವರು ಸೇವಿಸುತ್ತಿರಬೇಕು. ಅಂಥ ಸಂನ್ಯಾಸಿಗಳನ್ನು ಸೇವಿಸುವ ಗೃಹಸ್ಥರೂ ಇಹಪರಸುಖಗಳನ್ನು ಪಡೆದುಕೊಳ್ಳುವರು, ಅಧ್ಯಾತ್ಮಸಾಧನೆಯ ಮಾರ್ಗ ವನ್ನು ಬಲುಬೇಗನೆ ಕಂಡುಕೊಳ್ಳುವರು.

ಮುಮುಕ್ಷುಗಳಾದವರು ಗೃಹಸ್ಥರೂ ಆಗಿರಬಹುದಷ್ಟೆ. ಅಂಥವರು ತಾವು ಮಾಡುತ್ತಿರುವ ಕರ್ಮಗಳನ್ನು ಭಗವಂತನ ಆರಾಧನೆಯೆಂದೇ ಮಾಡುತ್ತಾ ಭಗವತ್ಪರರಾಗಿ ಜೀವಿಸುತ್ತಿರಬೇಕು. ತಾವು ಕಷ್ಟಪಟ್ಟು ದುಡಿದ ಅನ್ನವು ಎಷ್ಟು ಕೆಳಮಟ್ಟದ್ದಾಗಿರಲಿ, ಅದು ಆಯುಸ್ಸು, ಸತ್ತ್ವ, ಆರೋಗ್ಯ, ಬಲ-ಮುಂತಾದವು ಗಳನ್ನು ಕೊಟ್ಟು ಭಗವಂತನ ಕಡೆಗೆ ತಿರುಗಿಸುವದಾಗಿರಬೇಕೆಂಬುದೇ ಅವರ ದೃಷ್ಟಿಯಾಗಿರಬೇಕು. ಅವರು ಸಂಪಾದಿಸಿರುವ ಅನ್ನವನ್ನು ಭಗವಂತನಿಗೆ ನಿವೇದನೆಮಾಡಿಯೇ ಆತನ ಪ್ರಸಾದವನ್ನಾಗಿ ಆಹಾರವನ್ನು ಭುಂಜಿಸಬೇಕೇ ಹೊರತು ನಾಲಗೆಯ ತೃಪ್ತಿಗಾಗಿ ರುಚಿರುಚಿಯಾದ ಪದಾರ್ಥಗಳನ್ನು ಹುಡುಕಿ ಕೊಂಡು ಹೋಗಬಾರದು ಎಂಬ ತತ್ತ್ವವು ಮೇಲಿನ ವಿವರದಿಂದ ಏರ್ಪಡುತ್ತದೆ.

## 41. ತಿತಿಕ್ಷೆ - ದ್ವಂದ್ವತ್ಯಾಗ

ಮುಮುಕ್ಷುಗಳಾದವರು ಆಹಾರವಿಹಾರನಿದ್ರಾದಿಗಳಲ್ಲಿ ಯಾವ ರೀತಿಯಿಂದ ಅತಿಯನ್ನು ಅನುಸರಿಸದೆ ಇರಬೇಕು ಎಂಬುದನ್ನು ಶಾಸ್ತ್ರದಲ್ಲಿ ಉಪದೇಶಿಸಿರುತ್ತದೆ. ಮುಮುಕ್ಷುಗಳು ಸಾಧನಕ್ಕೆ ಅನುಕೂಲವಾಗಿರುವ ವರ್ತನೆಯನ್ನು ಕೈಕೊಳ್ಳಬೇಕೆಂಬ ಉದ್ದೇಶದಿಂದಲೇ ಈ ಉಪದೇಶವು ಉಂಟಾದದ್ದೆಂಬುದು ಸ್ಪಷ್ಟವಾಗಿದೆ. ಆದರೆ ಮುಮುಕ್ಷುಗಳಾದ ಸಂನ್ಯಾಸಿಗಳೂ ಗೃಹಸ್ಥರೂ ಇಂಥ ಹೊರಗಿನ ನಿಯಮಗಳಿ ಗಿಂತಲೂ ಮನಸ್ಸಿನಲ್ಲಿ ಮಾಡುವ ಸಾಧನಕ್ಕೇ ಹೆಚ್ಚಿನ ಬೆಲೆಯನ್ನು ಕೊಡಬೇಕು. ಬಂಧವೂ ಮೋಕ್ಷವೂ ಮನಸ್ಸಿಗೆ ಸಂಬಂಧಪಟ್ಟದ್ದೇ ಹೊರತು ದೇಹಕ್ಕೆ ಸಂಬಂಧ ಪಟ್ಟದ್ದಲ್ಲ. ಅದರಲ್ಲಿಯೂ ಸಂನ್ಯಾಸಿಗಳಿಗಂತೂ ಹೊರಗಿನ ಕರ್ಮಗಳು ಯಾವವೂ ಇರುವದೇ ಇಲ್ಲವಾದ್ದರಿಂದ ಅವರು ಮನಸ್ಸಿನ ಸಾಧನಕ್ಕೇ ಪ್ರಾಮುಖ್ಯವನ್ನು ಕೊಡಬೇಕೆಂಬುದು ತಾನೇ ಏರ್ಪಡುತ್ತದೆ.

ಮನಸ್ಸಿನಿಂದ ಮಾಡುವ ಅಧ್ಯಾತ್ಮಸಾಧನೆಯು ಎರಡು ಬಗೆಯದಾಗಿರುವದು. ಹೊರಗಿನ ಪ್ರಪಂಚದ ವಿಷಯಕ್ಕೆ ಮನಸ್ಸನ್ನು ಹೇಗೆ ಇಟ್ಟುಕೊಳ್ಳಬೇಕೆಂಬುದನ್ನು

ಲಕ್ಷ್ಯವಿಟ್ಟು ಮಾಡುವ ಸಾಧನಗಳು ಒಂದು ವರ್ಗಕ್ಕೆ ಸೇರಿರುತ್ತವೆ; ಮನಸ್ಸಿನಲ್ಲಿ ತತ್ತ್ವವನ್ನು ನಿಶ್ಚಯಿಸಿಕೊಳ್ಳುವದಕ್ಕಾಗಲಿ ಉತ್ತಮವಾದ ಭಾವನೆಯನ್ನು ಅಳವಡಿಸಿಕೊಳ್ಳುವದಕ್ಕಾಗಲಿ ಮಾಡುವ ಸಾಧನಗಳು ಮತ್ತೊಂದು ವರ್ಗಕ್ಕೆ ಸೇರಿರುತ್ತವೆ. ಮೊದಲನೆಯ ಪಂಗಡದಲ್ಲಿ ತಿತಿಕ್ಷೆ ಅಥವಾ ದ್ವಂದ್ವಸಹಿಷ್ಣುತೆ ಎಂಬುದು ಬಹಳ ಮುಖ್ಯವಾದದ್ದು.

ದ್ವಂದ್ವಗಳೆಂದರೇನು? ಹೊರಗಿನ ಪದಾರ್ಥಗಳು ಕೆಲವು ಒಂದಕ್ಕೊಂದು ವಿರುದ್ಧವಾಗಿದ್ದು ನಮ್ಮ ಮನಸ್ಸಿನಲ್ಲಿ ಕೆಲಕೆಲವು ಇಷ್ಟವಾದ ಅಥವಾ ಅನಿಷ್ಟವಾದ ವೇದನೆಗಳನ್ನುಂಟುಮಾಡುವವು. ಇಷ್ಟವಾದ ವೇದನೆಗಳಿಂದ ಸುಖವಾಗುವದು, ಅನಿಷ್ಟವಾದ ವೇದನೆಗಳಿಂದ ದುಃಖವಾಗುವದು. ಈ ಸುಖದುಃಖಗಳಿಂದ ನಮಗೆ ಮನಸ್ಸಿನಲ್ಲಿ ಹರ್ಷವೂ ವಿಷಾದವೂ ಉಂಟಾಗುತ್ತಿರುವವು. ಇದು ಲೋಕ ಸ್ವಭಾವವು. ಉದಾಹರಣೆಗೆ ಸಂಗೀತ, ಕೋಗಿಲೆಯೇ ಮುಂತಾದ ಪಕ್ಷಿಗಳ ಕಲನಾದ, ತಮ್ಮನ್ನು ಹೊಗಳುವವರ ಮಾತುಗಳು ಇವೇ ಮುಂತಾದ ಶಬ್ದಗಳು ಕಿವಿಗೆ ಬಿದ್ದರೆ ಜನರಿಗೆ ಸಾಮಾನ್ಯವಾಗಿ ಮನಸ್ಸಿನಲ್ಲಿ ಒಳ್ಳೆಯ ವೇದನೆಗಳುಂಟಾಗುವವು; ಜನರ ಕೋಲಾಹಲ, ಕತ್ತೆಯೇ ಮುಂತಾದವುಗಳು ಕಿರಿಚುವ ಧ್ವನಿ, ತಮ್ಮನ್ನು ಬಯ್ಯುವವರ ಮಾತುಗಳು–ಇವೇ ಮುಂತಾದವುಗಳಿಂದ ಮನಸ್ಸಿನಲ್ಲಿ ಕೆಟ್ಟ ವೇದನೆಗಳುಂಟಾಗುವವು. ತಮಗೆ ಇಷ್ಟವಾಗಿರುವ ವೇದನೆಗಳನ್ನುಂಟುಮಾಡುವ ಸಂಗೀತವೇ ಮುಂತಾದವುಗಳನ್ನು ಕೇಳುತ್ತಲೂ ಸುಖವಾಗಿ ಉಬ್ಬುವದೂ ಅನಿಷ್ಟವಾದ ವೇದನೆಗಳನ್ನುಂಟುಮಾಡುವ ಕೋಲಾಹಲವೇ ಮುಂತಾದವುಗಳನ್ನು ಕೇಳುತ್ತಲೂ ದುಃಖವಾಗಿ ಕುಸಿಯುವದೂ ಜನರ ಮನಸ್ಸಿಗೆ ಸ್ವಭಾವವಾಗಿರುತ್ತದೆ. ಇದರಂತೆ ಇಷ್ಟವಾದ ಸುಂದರವಾದ ರೂಪಗಳನ್ನು ಕಂಡರೆ ಉಬ್ಬುವದೂ ಅನಿಷ್ಟವಾದ ಅಸಹ್ಯಕರವಾದ ರೂಪಗಳನ್ನು ಕಂಡರೆ ಕುಗ್ಗುವದೂ ಮನಸ್ಸಿಗೆ ಸ್ವಭಾವವಾಗಿರುತ್ತದೆ. ಮಿತ್ರರನ್ನು ಕಂಡ ಮಾತ್ರದಿಂದ ಹರ್ಷದಿಂದ ಉಬ್ಬುವದೂ ಶತ್ರುಗಳನ್ನು ಕಂಡಮಾತ್ರದಿಂದ ಕಿಡಿಕಿಡಿಯಾಗುವದೂ ಈ ಕಾರಣದಿಂದಲೇ ಆಗಿರುತ್ತದೆ. ಹೀಗೆಯೇ ಸ್ಪರ್ಶ, ರಸ, ಗಂಧ–ಇವುಗಳಿಗೂ ದೃಷ್ಟಾಂತಗಳನ್ನು ಊಹಿಸಿಕೊಳ್ಳಬಹುದು.

ಆದರೆ ಪದಾರ್ಥಗಳಲ್ಲಿ ಒಳ್ಳೆಯದು, ಕೆಟ್ಟದ್ದು–ಎಂಬ ಸ್ವಭಾವವು ನಿಯತವಾಗಿರುವದಿಲ್ಲ. ಏಕೆಂದರೆ ತಮಗೆ ಇಷ್ಟವಾದದ್ದನ್ನು ಒಳ್ಳೆಯದೆಂದೂ ಅನಿಷ್ಟವಾದದ್ದನ್ನು ಕೆಟ್ಟದ್ದೆಂದೂ ಭಾವಿಸುವದು ಮನಸ್ಸಿನ ಸ್ವಭಾವವಾಗಿರುತ್ತದೆ. ಅದೇ ವಸ್ತುವು ಒಬ್ಬನಿಗೆ ಇಷ್ಟವಾಗಿದ್ದರೆ, ಮತ್ತೊಬ್ಬರಿಗೆ ಅನಿಷ್ಟವಾಗಿರಬಹುದು; ಉದಾಹರಣೆಗೆ

ಒಬ್ಬನಿಗೆ ಸಕ್ಕರೆಯು ಇಷ್ಟವಾಗಿರುವದು, ಮೆಣಸಿನಕಾಯಿ ಅನಿಷ್ಟವಾಗಿರುವದು ಎಂದು ಇಟ್ಟುಕೊಳ್ಳೋಣ; ಆದರೆ ಅದೇ ಸಕ್ಕರೆಯು ಇನ್ನೊಬ್ಬನಿಗೆ ಅನಿಷ್ಟ ವಾಗಿ ಮೆಣಸಿನಕಾಯಿಯೇ ಇಷ್ಟವಾಗಿರಬಹುದು. ಈಗ ಸಕ್ಕರೆ ಒಳ್ಳೆಯದೊ, ಕೆಟ್ಟದ್ದೊ? ಮೆಣಸಿನಕಾಯಿ ಒಳ್ಳೆಯದೊ, ಕೆಟ್ಟದ್ದೊ?-ಎಂಬ ಪ್ರಶ್ನೆಗೆ ಒಬ್ಬನಿಗೆ ಒಳ್ಳೆಯದು, ಇನ್ನೊಬ್ಬನಿಗೆ ಕೆಟ್ಟದ್ದು-ಎಂದು ಉತ್ತರವನ್ನು ಕೊಡಬೇಕಾಗು ವದಲ್ಲವೆ? ಆದರೆ ಇದೂ ನಿಯತವಾಗಿ ಹೇಳತಕ್ಕ ಉತ್ತರವಾಗಿರುವದಿಲ್ಲ. ಏಕೆಂದರೆ ಒಬ್ಬನಿಗೆ ಒಂದು ಕಾಲದಲ್ಲಿ ಇಷ್ಟವಾಗಿದ್ದ ವಸ್ತುವು ಮತ್ತೊಂದು ಕಾಲದಲ್ಲಿ ಅನಿಷ್ಟವಾಗಿಬಿಡಬಹುದು. ಬೇಸಗೆಯಲ್ಲಿ ಹಿತವೆಂದು ತೋರುವ ಪನ್ನೀರು ಚಳಿಗಾಲದಲ್ಲಿ ಅಹಿತವಾಗಿ ತೋರುವದು-ಎಲ್ಲರಿಗೂ ಗೊತ್ತಿದೆ. ಒಬ್ಬನ ಶರೀರಪ್ರಕೃತಿಯು ಬದಲಾಯಿಸಿದರೆ ಮೊದಲು ಉಷ್ಣವಾಗಿರುವ ಆಹಾರ ಪದಾರ್ಥಗಳು ಅವನಿಗೆ ಹಿತವಾಗಿದ್ದು ಕೊನೆಗೆ ತಂಪಾಗಿರುವ ಪದಾರ್ಥಗಳೇ ಹಿತವೆಂಬ ಭಾವನೆಬರಬಹುದು. ಅಲ್ಲವೆ? ಹೀಗೆ ನೋಡಿದರೆ ಪದಾರ್ಥಗಳ ಜ್ಞಾನವು ನಮಗೆ ಪದಾರ್ಥಗಳ ಸ್ವಭಾವದಿಂದ ಆಗದೆ, ನಮ್ಮ ಇಚ್ಛೆ, ದ್ವೇಷ- ಇವುಗಳಿಂದ ಅವುಗಳನ್ನು ನಾವು ಒಳ್ಳೆಯವೆಂದೂ ಕೆಟ್ಟವೆಂದೂ ಭಾವಿಸು ತ್ತೇವೆಂದೇ ಆಗುವದು. ನಮಗೆ ಸದ್ಯದಲ್ಲಿ ಪ್ರಿಯವಾಗಿದ್ದು ಪರಿಣಾಮದಲ್ಲಿ ಕೆಟ್ಟ ಪರಿಣಾಮವನ್ನುಂಟುಮಾಡುವ ಎಷ್ಟೋ ಪದಾರ್ಥಗಳುಂಟು; ನಮ್ಮ ಇಚ್ಛಾದ್ವೇಷ ಗಳೇ ಅವುಗಳ ತತ್ತ್ವವನ್ನು ನಿರ್ಣಯಿಸುವಹಾಗಿದ್ದರೆ ಈಗ ಅವು ಒಳ್ಳೆಯವೆಂದೂ ಆಮೇಲೆ ಅವು ಕೆಟ್ಟವಾಗುವವೆಂದೂ ಹೇಳಬೇಕಾದೀತು. ಆದರೆ ಪದಾರ್ಥಗಳ ತತ್ತ್ವವು ಎಂದಿಗೂ ಮಾರ್ಪಡಲಾರದಾದ್ದರಿಂದ ಇಲ್ಲಿ ಇಚ್ಛಾದ್ವೇಷಗಳಿಂದಾದ ಭಾವನೆಗಳೇ ನಮಗೆ ತತ್ತ್ವಜ್ಞಾನಕ್ಕೆ ಅಡ್ಡಿಯಾಗಿರಬೇಕೆಂದು ಸ್ಪಷ್ಟವಾಗಿದೆ. ಈ ಕಾರಣದಿಂದ ಪರಮಾರ್ಥಜ್ಞಾನವನ್ನು ಬಯಸುವ ಮುಮುಕ್ಷುಗಳು ಈ ಇಚ್ಛಾ ದ್ವೇಷಗಳಿಗೆ ವಶರಾಗಬಾರದೆಂದು ಏರ್ಪಡುತ್ತದೆ. ಆದ್ದರಿಂದಲೇ ಭಗವಂತನು ಅರ್ಜುನನಿಗೆ ಹೀಗೆಂದು ಉಪದೇಶಿಸಿರುತ್ತಾನೆ :

**ಎಲೈ ಭರತವಂಶೋತ್ಪನ್ನನೆ, ಸಮಸ್ತಪ್ರಾಣಿಗಳೂ ಇಚ್ಛಾದ್ವೇಷಗಳಿಂದುಂಟಾಗುವ ದ್ವಂದ್ವಮೋಹಕ್ಕೆ ವಶವಾಗಿಯೇ ಹುಟ್ಟುವವು. ಆದರೆ ಯಾವ ಪುಣ್ಯವಂತರಿಗೆ ಪಾಪವೆಲ್ಲವೂ ನಾಶವಾಗಿರುವದೋ ಅವರು ದ್ವಂದ್ವಮೋಹದಿಂದ ಬಿಡುಗಡೆಯನ್ನು ಹೊಂದಿ ನನ್ನನ್ನು ದೃಢವ್ರತರಾಗಿ ಭಜಿಸುವರು.**

-ಗೀತೆ 7-27, 28

ಹೊರಗಿನ ಪ್ರಪಂಚದಲ್ಲಿ ನಮಗೆ ಶೀತ, ಉಷ್ಣ-ಮುಂತಾದ ಪರಸ್ಪರ ವಿರುದ್ಧ ವೇದನೆಗಳುಂಟುಮಾಡುವ ಪ್ರಾಕೃತಿಕದೃಶ್ಯಗಳು ಆಗಿಂದಾಗ್ಗೆ ತೋರುತ್ತಿರುವವು.

ಕುತೂಹಲ, ಔದಾಸೀನ್ಯ, ಭಯ, ಅಭಯ; ಲಾಭ, ನಷ್ಟ; ಮಾನ, ಅಪಮಾನ; ನಿಂದೆ, ಸ್ತುತಿ; ಕೀರ್ತಿ, ಅಕೀರ್ತಿ–ಮುಂತಾದ ವಿರುದ್ಧ ವೇದನೆಗಳಿಗೆ ಕಾರಣವಾದ ಘಟನೆಗಳೂ ಆಗಿಂದಾಗ್ಗೆ ಹೊರಗಿನ ಪ್ರಾಣಿಗಳಿಂದಲೂ ಮನುಷ್ಯರಿಂದಲೂ ಒದಗುತ್ತಿರುವವು. ಹೀಗೆ ಒಂದಕ್ಕೊಂದಾಗದೆ ಇರುವ ಹೊರಗಿನ ಪದಾರ್ಥಗಳಿಂದಾಗುವ ವೇದನೆಗಳು ನಮಗೆ ಸುಖದುಃಖಗಳನ್ನುಂಟುಮಾಡುತ್ತಿರುವದೂ ಅವುಗಳು ನಮಗೆ ಬೇಕು ಅಥವಾ ಬೇಡ ಎಂಬ ತಪ್ಪುತಿಳಿವಳಿಕೆಯನ್ನು ಮನಸ್ಸಿನಲ್ಲಿ ಬೇರೂರಿಸುತ್ತಿರುವದೂ ದ್ವಂದ್ವ ಮೋಹವು. ವಸ್ತುಗಳ ನಿಜವಾದ ಸ್ವಭಾವವನ್ನು ವಿಚಾರಿಸದೆ ಅನಾದಿಕಾಲದಿಂದ ಕೆಲವನ್ನು ಬೇಕು, ಮತ್ತೆ ಕೆಲವನ್ನು ಬೇಡ–ಎಂದು ಇಚ್ಛಾದ್ವೇಷಗಳಿಗೆ ವಿಷಯವಾಗಿಸಿಕೊಂಡಿರುವದರಿಂದಲೇ ನಮಗೆ ಪ್ರಪಂಚದ ವಿಷಯಕ್ಕೆ ಬಗೆಬಗೆಯ ಭಾವನೆಗಳು ಉಂಟಾಗುತ್ತಿರುವವು; ಅವುಗಳಿಂದ ಬಗೆಬಗೆಯಾದ ವೇದನೆಗಳುಂಟಾಗುತ್ತಿರುವವು. ಆ ವೇದನೆಗಳಿಂದುಂಟಾದ ಸುಖದುಃಖಗಳು ನಮ್ಮ ಮನಸ್ಸನ್ನು ಏರಿಸುತ್ತಲೂ ಇಳಿಸುತ್ತಲೂ ಇರುವವು. ಈ ಏರುಪೇರುಗಳಿಂದ ನಮಗೆ ಹೊರಗಿನ ವಸ್ತುಗಳ ಜ್ಞಾನವೇ ಸರಿಯಾಗಿ ಆಗದೆ ಇರುವಲ್ಲಿ. ಅತ್ಯಂತಸೂಕ್ಷ್ಮವಾದ ನಮ್ಮ ಆತ್ಮಸ್ವರೂಪದ ವಿಷಯದಲ್ಲಿ ಜ್ಞಾನವುಂಟಾಗಲಾರದೆಂಬುದನ್ನು ಹೇಳಬೇಕಾದದ್ದೇನು? ಹೀಗಿರುವದರಿಂದ ದ್ವಂದ್ವಮೋಹವು ತತ್ತ್ವಜ್ಞಾನಕ್ಕೆ ಒಂದು ಭಾರಿಯ ಅಡಚಣೆಯಾಗಿರುವದು.

ಅವಿವೇಕಿಗಳಾದವರು ಈ ಗುಟ್ಟನ್ನು ಅರಿಯದೆ ವಸ್ತುಗಳಲ್ಲಿಯೇ ಗುಣದೋಷಗಳು ಸ್ವಭಾವವಾಗಿ ಇದ್ದುಕೊಂಡಿರುವವೆಂದು ಬಗೆದು ಕೆಲವು ವಸ್ತುಗಳಲ್ಲಿ ರಾಗವನ್ನೂ ಮತ್ತೆ ಕೆಲವು ವಸ್ತುಗಳಲ್ಲಿ ದ್ವೇಷವನ್ನೂ ಬೆಳೆಯಿಸಿಕೊಳ್ಳುತ್ತಿರುವರು. ಯಾವದು ತಮಗೆ ಇಷ್ಟವಾಗಿರುವದೋ ಅದನ್ನು ಮಾಡಬಾರದ್ದನ್ನು ಮಾಡಿಯಾದರೂ ಪಡೆದುಕೊಳ್ಳುವದಕ್ಕೆ ಪ್ರಯತ್ನಿಸುವರು; ಹೀಗೆಯೇ ತಮಗೆ ಅನಿಷ್ಟವಾದದ್ದನ್ನು ಸರ್ವಪ್ರಯತ್ನದಿಂದಲೂ ಪರಿಹರಿಸಿಕೊಳ್ಳುವದಕ್ಕೆ ಯತ್ನಿಸುವರು. ಆದರೆ ತತ್ತ್ವಜ್ಞಾನವಿರುವ ಮಹಾತ್ಮರಿಗೆ, ಹೊರಗಿನ ವಸ್ತುಗಳಾಗಲಿ ಪ್ರಾಣಿಗಳಾಗಲಿ ಜನರಾಗಲಿ ಯಾರೊಬ್ಬರೂ ಇದ್ದಂತೆ ಇರುವದಿಲ್ಲವೆಂದೂ ದೃಶ್ಯಗಳೆಲ್ಲವೂ ಮಾರ್ಪಡುತ್ತಲೇ ಇರುವವೆಂದೂ ತಿಳಿದಿರುತ್ತದೆ. ಇದರಂತೆ ತಮ್ಮ ಶರೀರೇಂದ್ರಿಯ ಸಂಘಾತವೂ ಇದ್ದಂತೆ ಇರದೆ ಬಗೆಬಗೆಯ ಮಾರ್ಪಾಡುಗಳನ್ನು ಪಡೆಯುತ್ತಲೇ ಇರುವದೆಂಬುದನ್ನು ಅವರು ಅರಿತಿರುತ್ತಾರೆ. ಹೀಗಿರುವದರಿಂದ ಇಂದ್ರಿಯವಿಷಯ ಸಂಪರ್ಕದಿಂದಾಗುವ ವೇದನೆಗಳು ಯಾವವುತಾನೆ ನಿಯತವಾಗಿ ಸುಖವನ್ನೇ ಅಥವಾ ದುಃಖವನ್ನೇ ಕೊಟ್ಟಾವು? ಇದೂ ಅಲ್ಲದೆ ಈ ಫಲರೂಪವಾದ ಸುಖ

ದುಃಖಗಳಾದರೂ ಶಾಶ್ವತವಾಗಿರುವವೆ? ವೇದನೆಗಳಂತೆಯೇ ಅವೂ ಬಂದು ಹೋಗುತ್ತಿರುವ ಸ್ವಭಾವದವಾಗಿರುತ್ತವೆ. ಸುಖವಾಗುತ್ತಲೂ ದುಃಖವೂ ದುಃಖ ವಾಗುತ್ತಲೂ ಸುಖವೂ ಬಂದುಹೋಗುತ್ತಿರುವದು ಸರ್ವವಿದಿತವಾಗಿರುವಲ್ಲಿ ನನಗೆ ಇಂಥ ವಸ್ತುವಿನಿಂದ, ಇಂಥ ಪ್ರಾಣಿಯಿಂದ, ಅಥವಾ ಇಂಥ ಮನುಷ್ಯನಿಂದ ಎಂದೆಂದಿಗೂ ಸುಖವೇ ಅಥವಾ ದುಃಖವೇ ಆಗುತ್ತಿರುವದೆಂದು ಭಾವಿಸುವದು ಎಂಥ ಮೂರ್ಖ ತನವು! ಇದೆಲ್ಲವೂ ನಮ್ಮ ಇಚ್ಛಾದ್ವೇಷಗಳಿಂದಾಗಿರುವ ದ್ವಂದ್ವಮೋಹವೇ ಎಂಬುದನ್ನು ಜ್ಞಾನಿಗಳು ತಿಳಿದಿರುತ್ತಾರೆ. ಅತ್ಯಂತವಾಗಿ ನಿರ್ವಿಕಾರವಾಗಿರುವದೆಂದರೆ ಪರಮಾತ್ಮವಸ್ತುವೊಂದೇ ಎಂಬ ನಿಜವು ಅವರಿಗೆ ಮನದಟ್ಟಾಗಿಬಿಟ್ಟಿರುತ್ತದೆ. ಆದ್ದರಿಂದ ಈ ದ್ವಂದ್ವಮೋಹವು ಅವರನ್ನು ಎಂದಿಗೂ ಮರುಳುಮಾಡುವದಿಲ್ಲ.

ಆದ್ದರಿಂದ ಸುಖದುಃಖಗಳ ಕೋಟಲೆಯಿಂದ ಪಾರಾಗಬೇಕೆಂಬ ಮುಮುಕ್ಷುಗಳು ಹೇಗೆ ನಡೆದುಕೊಳ್ಳಬೇಕೆಂದಾಯಿತು? ಅವರೂ ಜ್ಞಾನಿಗಳ ದೃಷ್ಟಿಯನ್ನು ಅವಲಂಬಿಸಿ ಅವರ ಉಪದೇಶಕ್ಕೆ ಕಿವಿಗೊಟ್ಟು ಶೀತೋಷ್ಣಾದಿದ್ವಂದ್ವ ರೂಪ ವಾಗಿರುವ ವೇದನೆಗಳನ್ನು ಸಹಿಸಿಕೊಳ್ಳುವದನ್ನು ಅಭ್ಯಾಸಮಾಡಬೇಕು. 'ಇವೆಲ್ಲವೂ ಬಂದುಹೋಗತಕ್ಕವು, ಇಷ್ಟಕ್ಕೇಕೆ ನನ್ನ ಮನಸ್ಸಿನ ಶಾಂತತೆಯನ್ನು ಕಳೆದುಕೊಳ್ಳಲಿ? ಎಂದು ಅಡಿಗಡಿಗೂ ತಮಗೆ ತಾವೇ ಬುದ್ಧಿಯನ್ನು ಹೇಳಿಕೊಳ್ಳುತ್ತಿರಬೇಕು. ಇವರು ಮಿತ್ರರು, ಇವರು ಶತ್ರುಗಳು, ಇವರು ಉದಾಸೀನರು-ಎಂಬ ಮಿಥ್ಯಾ ಭಾವನೆಯನ್ನು ಎಂದಿಗೂ ಮನಸ್ಸಿಗೆ ತಂದುಕೊಳ್ಳಬಾರದು. ಇವನು ನನಗೆ ಉಪಕಾರವನ್ನು ಮಾಡಿದವನು, ಇವನು ನನಗೆ ಅಪಕಾರಿಯು, ಇವರನ್ನು ಮನಸ್ಸಿಗೆ ತಂದುಕೊಳ್ಳಬೇಕಾದದ್ದಿಲ್ಲ-ಎಂಬ ಭೇದಬುದ್ಧಿಯಿಂದ ಮನಸ್ಸನ್ನು ಬಗ್ಗಡ ಮಾಡಿಕೊಳ್ಳಬಾರದು, ಅದನ್ನು ಚಂಚಲಗೊಳಿಸಿಕೊಳ್ಳಲೂಬಾರದು. ದ್ವಂದ್ವಮೋಹಕ್ಕೆ ವಶವಾದ ಬುದ್ಧಿಗೆ ಎಂದಿಗೂ ಪರಮಾರ್ಥತತ್ತ್ವವು ನಿಲುಕುವದಿಲ್ಲ. ಅಂಥ ಬುದ್ಧಿಯವರು ಮಾಡುವ ವೇದಾಂತಶ್ರವಣಮನನನಿದಿಧ್ಯಾಸನಗಳು ನಿಜವಾದ ಸಾಧನವೇ ಆಗುವದಿಲ್ಲ; ಅವು ಬರಿಯ ತೋರಿಕೆಯ ಶ್ರವಣಾದಿಗಳಾಗಿರುತ್ತವೆ ಎಂಬುದನ್ನು ನೆನಪಿಡಬೇಕು.

ಆದರೆ ಹೀಗೆ 'ದ್ವಂದ್ವಮೋಹಕ್ಕೆ ವಶರಾಗಬಾರದು' ಎಂದು ಒಮ್ಮೆ ಮನಸ್ಸಿಗೆ ತಂದುಕೊಂಡಮಾತ್ರದಿಂದ ಈ ಮೋಹವು ನಮ್ಮನ್ನು ಬಿಟ್ಟುಹೋಗುವದಿಲ್ಲ. ಏಕೆಂದರೆ ಈ ಮೋಹವು ಈಗ ಹೊಸದಾಗಿ ನಮಗೆ ಬಂದಿರುವದಿಲ್ಲ. ಹುಟ್ಟಿ ದಂದಿನಿಂದಲೂ ಈ ಸಂಮೋಹವು ನಮ್ಮ ಅಂತಃಕರಣದಲ್ಲಿ ನೆಲಸಿಕೊಂಡೇ ಇರುತ್ತದೆ. ಹುಟ್ಟುವಾಗಲೇ ನಮಗೆ ದ್ವಂದ್ವಮೋಹವು ಏತಕ್ಕೆ ಬರಬೇಕು? ಮಕ್ಕಳು

ಇನ್ನೂ ಚಿಕ್ಕವರಾಗಿರುವಾಗಲೇ ಕೆಲವು ಪದಾರ್ಥಗಳನ್ನು ಇಚ್ಛೈಸುತ್ತವೆ, ಮತ್ತೆ ಕೆಲವನ್ನು ದ್ವೇಷಿಸುತ್ತವೆ. ಅವಕ್ಕೆ ಕೆಲವರ ಮುಖವನ್ನು ಕಂಡರೆ ಹರ್ಷವಾಗುತ್ತದೆ, ಆದ್ದರಿಂದ ಅವು ನಗೆಮುಖದಿಂದ ಅವರು ಎತ್ತಿಕೊಂಡರೆ ಉಲ್ಲಾಸವನ್ನು ತೋರಿಸುತ್ತವೆ; ಆದರೆ ಮತ್ತೆ ಕೆಲವರನ್ನು ಕಂಡಮಾತ್ರದಿಂದ ಚಿಟ್ಟನೆ ಚೀರಿ ಅಳುತ್ತವೆ. ಈ ಇಚ್ಛಾದ್ವೇಷಗಳು ಅವಕ್ಕೆ ಹೇಗೆ ಬಂದವು? ಜೀವನು ಅನಾದಿ ಕಾಲದಿಂದ ಪಾಪಪುಣ್ಯಗಳನ್ನು ಮಾಡುತ್ತಾಬಂದಿರುತ್ತಾನೆ. ಪಾಪವು ಹೆಚ್ಚಾಗಿರುವ ಅಂತಃಕರಣದಲ್ಲಿ ದ್ವಂದ್ವಮೋಹದ ವಾಸನೆಯು ಪ್ರಬಲವಾಗಿರುತ್ತದೆ. ಅದು ಜನ್ಮದಿಂದ ಜನ್ಮಕ್ಕೆ ಹೋದರೂ ತಪ್ಪುವದಿಲ್ಲ. ಎಷ್ಟೋ ಜನ್ಮಗಳಲ್ಲಿ ಮಾಡಿದ ಪಾಪದ ಫಲವಾಗಿ ದುಃಖವನ್ನು ಅನುಭವಿಸಿ ಅನುಭವಿಸಿ ಸಾಕಾಗಿ ಕೊನೆಗೆ ಎಲ್ಲಿಯೋ ಹಿಂದೆಮಾಡಿದ್ದ ಒಂದಿಷ್ಟು ಪುಣ್ಯದ ಫಲವಾಗಿ ಸತ್ಸಂಗವನ್ನು ದೊರಕಿಸಿಕೊಂಡು ದ್ವಂದ್ವಮೋಹದ ಮೂಲವನ್ನು ತಿಳಿದುಕೊಳ್ಳುತ್ತಾನೆ. ಇಚ್ಛಾ ದ್ವೇಷಗಳೇ ದ್ವಂದ್ವಮೋಹಕ್ಕೆ ಮೂಲವು; ವಸ್ತುಗಳಲ್ಲಿಯೂ ಪ್ರಾಣಿಗಳಲ್ಲಿಯೂ ಮನುಷ್ಯರಲ್ಲಿಯೂ ಈ ಒಳ್ಳೆಯದುಕೆಟ್ಟದೆಂಬ ಭೇದವು ಸ್ವಭಾವದಿಂದ ನಿಯತ ವಾಗಿರುವದಿಲ್ಲ–ಎಂಬ ತತ್ತ್ವವು ಯಾವ ಪುಣ್ಯಾತ್ಮನಿಗೆ ಹೊಳೆಯುತ್ತದೆಯೋ ಅವನು ಅಂದಿನಿಂದ ಹೊರಗಿನ ಪದಾರ್ಥಗಳನ್ನು ಸರಿಪಡಿಸುವದಕ್ಕೆ ಹೋಗು ವದಿಲ್ಲ. ಹೊರಗಿನ ಜನರನ್ನು ಸರಿಪಡಿಸುವದಕ್ಕೆ ಪ್ರಯತ್ನಿಸುವದಿಲ್ಲ. ಮೊಟ್ಟ ಮೊದಲು ತನ್ನ ಇಚ್ಛಾದ್ವೇಷಗಳನ್ನು ವಶಪಡಿಸಿಕೊಳ್ಳುವದಕ್ಕೆ ಪ್ರಯತ್ನಿಸುತ್ತಾನೆ; ಆ ಇಚ್ಛಾದ್ವೇಷಗಳ ಪಟ್ಟಿಗೆ ಸಿಕ್ಕದಂತೆ ಇರುವದನ್ನು ಅಭ್ಯಾಸಮಾಡುತ್ತಾನೆ.

ಮನುಷ್ಯನು ಸ್ವಭಾವದಿಂದಲೇ ಇಚ್ಛಾದ್ವೇಷಗಳ ಪ್ರಾಣಿಯಾಗಿರುವದರಿಂದ ಸ್ವಪ್ರಯತ್ನದಿಂದಲೇ ಅವನ್ನು ಗೆದ್ದುಕೊಳ್ಳುವದು ಆಗಲಾರದು. ಯಾವನಾದರೂ ಅವನ್ನು ಜಯಿಸುವೆನೆಂದು ಪ್ರಯತ್ನಪಟ್ಟರೆ ಇಚ್ಛಾದ್ವೇಷಗಳೇ ತನಗೆ ವ್ಯವಹಾರದಲ್ಲಿ ಶತ್ರುಗಳು ಎಂದು ಬಗೆದು ಅವನ್ನೇ ದ್ವೇಷಿಸುವದಕ್ಕೆ ಪ್ರಯತ್ನಿಸುತ್ತಾನೆ! ಆಗ ಪದಾರ್ಥಗಳ ಇಚ್ಛಾದ್ವೇಷಗಳಿಗೆ ಸಿಕ್ಕಿಕೊಳ್ಳುವ ಬದಲು ಇಚ್ಛಾದ್ವೇಷಗಳ ದ್ವೇಷಕ್ಕೆ ಸಿಕ್ಕಿಕೊಂಡಂತೆ ಆಗುವದು ! ಶಾಸ್ತ್ರೀಯ ಕರ್ಮಗಳನ್ನು ಮಾಡಿದರೆ ಒಳ್ಳೆಯ ದಾದೀತೆಂದು ಒಬ್ಬನಿಗೆ ಯಾರಿಂದಲಾದರೂ ತಿಳಿದರೆ ಅವನು ಶಾಸ್ತ್ರದಲ್ಲಿ ಹೇಳಿರುವ ಕಾಮ್ಯಕರ್ಮಗಳನ್ನೇ ಮಾಡುವದಕ್ಕೆ ಮೊದಲುಮಾಡುತ್ತಾನೆ. ಆಗ ಅವನಿಗೆ ಇಚ್ಛಾದ್ವೇಷಗಳೇನೂ ಹೋದಂತೆ ಆಗಲಿಲ್ಲ. ಲೌಕಿಕಕರ್ಮಗಳಲ್ಲಿದ್ದ ಇಚ್ಛಾದ್ವೇಷಗಳು ಶಾಸ್ತ್ರೀಯಕರ್ಮಗಳಲ್ಲಿ ಕೂತುಕೊಂಡಂತೆ ಆಯಿತು. ಅಷ್ಟೆ

ಈ ಕಾರಣದಿಂದ ಮುಮುಕ್ಷುಗಳಾದವರಿಗೆ ಬಲ್ಲವರು ಉಪದೇಶಿಸಿರು ವದೇನೆಂದರೆ, ವೇದಗಳಲ್ಲಿ ಹೇಳಿರುವ ಕಾಮ್ಯಕರ್ಮಗಳು ರಜೋಗುಣದಿಂದ

ಕೂಡಿದ ಕಾಮಿಗಳಿಗೆ, ಆ ರಜೋಗುಣವನ್ನು ಮೀರಿ ಬರಿಯ ಸತ್ತ್ವಗುಣದಲ್ಲಿಯೇ ನಿಲ್ಲುವದಕ್ಕೆ ಪ್ರಯತ್ನಿಸಬೇಕು. "ನಿರ್ದ್ವಂದ್ವೋ ನಿತ್ಯಸತ್ತ್ವಸ್ಥೋ ನಿರ್ಯೋಗಕ್ಷೇಮ ಆತ್ಮವಾನ್" (ಗೀ. 2–45) ಎಂದಿರುವಂತೆ, 'ಕರ್ಮವನ್ನು ಮಾಡಿ ಇಂಥದ್ದನ್ನು ಪಡೆದುಕೊಳ್ಳಬೇಕು, ಆ ಕರ್ಮಫಲವು ಯಾವಾಗಲೂ ಇದ್ದುಕೊಂಡಿರುವಂತೆ ಪ್ರಯತ್ನಿಸಬೇಕು'–ಎಂಬ ಯೋಗಕ್ಷೇಮಬುದ್ಧಿಯನ್ನು ಬಿಟ್ಟುಬಿಡಬೇಕು. ಹಾಗಾದರೆ ದ್ವಂದ್ವಗಳನ್ನು ಮೀರಬಹುದು. ಇದಕ್ಕೆ ಈಶ್ವರಾರ್ಪಣಬುದ್ಧಿಯಿಂದ ನಿತ್ಯಕರ್ಮ ವನ್ನು ಮಾಡುವದೇ ಉಪಾಯವು. ತನ್ನ ತನ್ನ ವರ್ಣಾಶ್ರಮದ ಕರ್ಮವನ್ನು ಮಾಡಿ ಅದನ್ನೇ ಪರಮೇಶ್ವರನ ಅರ್ಚನೆಯಾಗಿ ಮಾಡಿಕೊಳ್ಳುವವನಿಗೆ ಮಾತ್ರವೇ ಈ ದ್ವಂದ್ವವನ್ನು ಮೀರುವದು ಸಾಧ್ಯವು. ಹೀಗೆ ಮಾಡುವ ಕರ್ಮಯೋಗದಿಂದ ಈಶ್ವರನ ಕೃಪೆಯಾಗುವದು; ಅದರಿಂದ ಕ್ರಮಕ್ರಮವಾಗಿ ಸುಖದುಃಖಗಳಿಗೆ ಕಾರಣವಾಗಿರುವ ಪುಣ್ಯಪಾಪಗಳನ್ನು ಮೀರುವ ಶಕ್ತಿಯು ಮೈಗೂಡಿಕೊಳ್ಳುವದು.

ಯಾವ ಮಹನೀಯನಿಗೆ ಪರಮೇಶ್ವರನ ಕೃಪೆಯಾಗಿರುವದೋ ಅವನೇ ವೈರಾಗ್ಯದಿಂದ ಆತ್ಮತತ್ತ್ವವನ್ನು ತಿಳಿಯುವದಕ್ಕೆಂದು ಸರ್ವಕರ್ಮಗಳನ್ನೂ ಸಂನ್ಯಾಸಮಾಡಿ ವೇದಾಂತದ ಶ್ರವಣಮನನಾದಿಗಳಲ್ಲಿ ನಿರತರಾಗಿರುತ್ತಾನೆ. ಅವನಿಗೆ ಆತ್ಮತತ್ತ್ವವೊಂದಲ್ಲದೆ ಮತ್ತೇನೂ ಬೇಕಿರುವದಿಲ್ಲವಾದ್ದರಿಂದ ಅವನು ಶೀತೋಷ್ಣಾದಿದ್ವಂದ್ವಗಳನ್ನು ತತ್ಕಾಲಕ್ಕೆ ಬಂದೊದಗಿದಂತೆ ಸಹಿಸಿಕೊಂಡು ತನ್ನ ಶ್ರವಣಾದಿಗಳಲ್ಲಿಯೇ ಮುನ್ನಡೆಯುವದಕ್ಕೆ ಯೋಗ್ಯನಾಗುವನು.

ದ್ವಂದ್ವಗಳನ್ನು ಸಹಿಸುವದನ್ನು ಮುಮುಕ್ಷುಗಳು ನಿಯಮದಿಂದ ಅಭ್ಯಾಸಮಾಡು ತ್ತಿರಬೇಕು. ಪರಮಾತ್ಮನ ಶ್ರವಣಮನನಗಳಲ್ಲಿಯೇ ನಿರತನಾಗಿರುವ ಯತಿಯು ಹೊರಗಿನ ದ್ವಂದ್ವಗಳಿಂದ ಒಂದಿಷ್ಟೂ ಏರುಪೇರನ್ನು ಪಡೆಯದೆ ಹೇಗೆ ಇರುವ ನೆಂಬುದನ್ನು ಒಂದು ಸ್ಮೃತಿಯಲ್ಲಿ ಹೀಗೆಂದು ವರ್ಣಿಸಿದೆ :

**ಅಜಿಹ್ವಃ ಷಣ್ಡಕಃ ಪಙ್ಗುರನ್ಧೋ ಬಧಿರ ಏವ ಚ ।**
**ಮುಗ್ಧಶ್ಚ ಮುಚ್ಯತೇ ಭಿಕ್ಷುಃ ಷಡ್ಭಿರೇತೈರ್ನ ಸಂಶಯ ॥**

ಊಟದ ವಿಷಯಕ್ಕೆ ನಾಲಗೆಯಿಲ್ಲದವನಂತೆ ಇರಬೇಕು; ಮಾತಿನ ವಿಷಯಕ್ಕೆ ಮೂಕನಾಗಿರಬೇಕು, ಅವನು ಅಜಿಹ್ವನು. ಯಾವ ಆಹಾರವು ತನ್ನ ಶರೀರ ಧಾರಣೆಗೆ ಮಾತ್ರವೆಂದೇ ಸ್ವೀಕೃತವಾಗಿರುವದೋ ಅದು ಭಿಕ್ಷುವನ್ನು ಎಂದಿಗೂ ಏರುಪೇರುಮಾಡುವದಿಲ್ಲ. ಇದು ಸರಿಯಾಗಿದೆ, ಇದು ಸರಿಯಾಗಿಲ್ಲ–ಎನ್ನುತ್ತಾ ರುಚಿರುಚಿಯಾದ ಆಹಾರಗಳನ್ನು ಬಯಸುತ್ತಿರುವವನು ನಾಲಗೆಗೆ ಪರವಶನಾಗಿ ಕೆಲವು ಆಹಾರಗಳಲ್ಲಿ ರಾಗವನ್ನೂ ಮತ್ತೆ ಕೆಲವು ಆಹಾರಗಳಲ್ಲಿ ದ್ವೇಷವನ್ನೂ

ಬೆಳೆಯಿಸಿಕೊಳ್ಳುತ್ತಿರುತ್ತಾನೆ. ಆದರೆ ಯಾವನು ಔಷಧದಂತೆ ಆಹಾರವನ್ನು ತೆಗೆದುಕೊಳ್ಳುತ್ತಿರುವನೋ, ಅವನಿಗೆ ನಾಲಗೆ ಇದ್ದರೂ ಅವನು ಅಜಿಹ್ವನೇ.

ಯಾವನು ಕಾಮೋದ್ದೀಪಕವಾದ ವಸ್ತುಗಳನ್ನು ಕಂಡು ರೋಮಾಂಚನವಾಗದೆ ಇರುವನೋ ಅವನು ಯೌವನವಂತನಾಗಿದ್ದರೂ ಷಂಡನೇ ಸರಿ. ಈಗತಾನೆ ಹುಟ್ಟಿದ ಕೂಸು, ಪ್ರಾಯದ ಸುಂದರಳಾದ ಸ್ತ್ರೀ, ನೂರು ವರ್ಷದ ಹಣ್ಣು ಮುದುಕಿ ಯಾರನ್ನು ನೋಡಿದರೂ ಯಾವನು ಮನಸ್ಸು ಏರುಪೇರಿಲ್ಲದಿರುವದೋ ಅವನು ಷಂಡನಾದ ಭಿಕ್ಷುವು. ಕಾಮೋದ್ದೀಪನವಾಗದಂತೆ ಔಷಧಿಗಳನ್ನು ತೆಗೆದುಕೊಂಡು ಇರುವವನನ್ನು ರೋಗಿ ಎನ್ನಬೇಕೇ ಹೊರತು ಜೀತೇಂದ್ರಿಯನೆನ್ನಲಾಗದು. ಆದರೆ ಪರಮಾತ್ಮ ವಿಚಾರದಲ್ಲಿಯೇ ನಿರಂತರವಾಗಿ ವ್ಯಾಪೃತನಾಗಿರುವದರಿಂದ ಯಾವನ ಮನಸ್ಸು ಸರ್ವದಾ ನಿರ್ವಿಕಾರವಾಗಿರುವದೋ ಅವನೇ ಪರಮಾರ್ಥಮುಮುಕ್ಷುವು.

ಯಾವನು ಅವಶ್ಯವಾಗಿರುವ ಭಿಕ್ಷಾದಿಗಳಿಗೆ, ಮೂತ್ರಪುರೀಷತ್ಯಾಗವೇ ಮುಂತಾದ ಕಾರ್ಯಕ್ಕೆ ಹೊರತು ಅನವಶ್ಯವಾಗಿ ಹೊರಗೆ ತಿರುಗಾಡುತ್ತಿರುವದಿಲ್ಲವೋ ಅವನು ಪಂಗು, ಕಾಲಿದ್ದರೂ ಹೆಳವನೇ ಸರಿ. ಹೀಗೆಯೇ ನಿಂತಿರುವಾಗ, ಕುಳಿತಿರುವಾಗ, ಅಥವಾ ಓಡಾಡುತ್ತಿರುವಾಗ ಅನವಶ್ಯವಾಗಿ ಯಾವನ ಕಣ್ಣುಗಳು ದೂರಕ್ಕೆ ಚಲಿಸುವದಿಲ್ಲವೋ, ಯಾವನ ಕಣ್ಣು ಸುಂದರವಾದ ನೋಟಗಳಿಂದ ಆಕೃಷ್ಟವಾಗದೆ ಅಸಹ್ಯವಾದ ನೋಟಗಳನ್ನು ಕಂಡು ಬೇಸರಿಕೆಯಿಂದ ಹಿಂತಿರುಗದೆ ಇರುವದೋ ಅವನು ಕಣ್ಣಿದ್ದರೂ ಕುರುಡನೇ. ಯಾವನು ಹಿತಮಿತಮನೋಹರವಾದ ವಾಕ್ಕುಗಳನ್ನು ಕೇಳಿದ್ದರಿಂದ ಹೃಷ್ಟನಾಗುವದಿಲ್ಲವೋ; ಪರುಷವಾದ ತೀಕ್ಷ್ಣೋಕ್ತಿಗಳಿಂದ ಉದ್ವಿಗ್ನನಾಗುವದಿಲ್ಲವೋ, ಅವನು ಕಿವಿಯಿದ್ದರೂ ಕಿವುಡನೇ. ಮನಸ್ಸನ್ನೆಳೆಯುವ ವಿಷಯಗಳು ಹತ್ತಿರವಿದ್ದರೂ ಯಾವನ ಮನಸ್ಸನ್ನು ಏರುಪೇರುಮಾಡುವದಿಲ್ಲವೋ ಅವನು ಬಾಹ್ಯದ್ವಂದ್ವಗಳ ವಿಷಯದಲ್ಲಿ ಮುಗ್ಧನೆನಿಸುವನು.

ಅಂತೂ ಯಾವನು ತನ್ನ ಮನಸ್ಸನ್ನು ಎಂದೆಂದಿಗೂ ಆತ್ಮವಿಚಾರಕ್ಕೆ ಧಾರೆಯೆರೆದುಕೊಂಡಿರುವನೋ, ಹೊರಗಿನ ವ್ಯಾಪಾರಗಳನ್ನು ಅನಿವಾರ್ಯವಾದಷ್ಟು ಮಟ್ಟಿಗೆ ಮಾಡುತ್ತಾ ಆಯಾ ಶಬ್ದಸ್ಪರ್ಶರೂಪರಸಗಂಧಗಳನ್ನು ಅವರ್ಜನೀಯವಾಗಿ ಅವಶ್ಯವಾಗಿರುವಮಟ್ಟಿಗೆ ಸೇವಿಸುತ್ತಿದ್ದರೂ ಮನಸ್ಸಿನಲ್ಲಿ ಯಾವ ಇಚ್ಛಾದ್ವೇಷಗಳಿಂದಲೂ ಪ್ರೇರಿತನಾಗದೆ ಇರುವನೋ ಅವನೇ ಆತ್ಮಜ್ಞಾನಕ್ಕೆ ತಕ್ಕವನೆನಿಸುವನು. ಸರ್ವಕರ್ಮಗಳನ್ನೂ ಬಿಟ್ಟು ತತ್ತ್ವವಿಚಾರದಲ್ಲಿಯೇ ನಿರತರಾಗಿರುವ ಸಂನ್ಯಾಸಿ ಮುಮುಕ್ಷುಗಳು ಈ ದ್ವಂದ್ವತ್ಯಾಗವನ್ನು ಕಡ್ಡಾಯವಾಗಿ ಅಭ್ಯಾಸಮಾಡಬೇಕು. ಗೃಹಸ್ಥರಾದ ಮುಮುಕ್ಷುಗಳು ತಮ್ಮ ತಮ್ಮ ಕರ್ಮಗಳನ್ನು ಪರಮೇಶ್ವರಪ್ರೀತ್ಯರ್ಥವಾಗಿ ಮಾಡುತ್ತಾ ದ್ವಂದ್ವಗಳ ಹೊಡೆತವನ್ನು ತಪ್ಪಿಸಿಕೊಳ್ಳುವದಕ್ಕೆ ಪ್ರಯತ್ನಿಸುತ್ತಿರಬೇಕು.

## 42. ಇಂದ್ರಿಯಗಳ ಸರ್ವಥಾ ಹಿಡಿತ

ಮುಮುಕ್ಷುಗಳಾದವರು ಹೊರಗಿನ ದ್ವಂದ್ವಗಳಿಂದಾಗುವ ವೇದನೆಗಳಿಂದ ಏರುಪೇರುಗಳಾಗದಂತೆ ಮನಸ್ಸನ್ನಿಟ್ಟುಕೊಳ್ಳಬೇಕೆಂಬುದರಷ್ಟೇ ಮತ್ತೊಬ್ಬರಿಗೆ ದ್ವಂದ್ವ ಗಳಿಂದ ವಿರುದ್ಧವೇದನೆಗಳು ಮನಸ್ಸಿನಲ್ಲುಂಟಾಗಿ ಅವರನ್ನು ವ್ಯಥೆಗೊಳಿಸದಂತೆ ನೋಡಿಕೊಳ್ಳುವದೂ ಅವಶ್ಯವಾಗಿರುತ್ತದೆ. ಜ್ಞಾನೇಂದ್ರಿಯಗಳಿಂದ ವಿಷಯಗಳನ್ನು ಗ್ರಹಿಸುವಾಗ ಹೇಗೆ ರಾಗದ್ವೇಷಗಳಿಂದ ಅವುಗಳನ್ನು ಹತ್ತಿರಕ್ಕೆ ಬರಮಾಡಿಕೊಳ್ಳು ವದಕ್ಕೆ ಅಥವಾ ದೂರ ಸರಿಯಿಸುವದಕ್ಕೆ ಪ್ರಯತ್ನಿಸಬೇಕಾಗುವದೋ ಹಾಗೆಯೇ ಕರ್ಮೇಂದ್ರಿಯಗಳಿಂದ ಕ್ರಿಯೆಗಳನ್ನು ಮಾಡುವಾಗಲೂ ರಾಗದ್ವೇಷಗಳಿಂದ ಪ್ರೇರಿತರಾಗಿ ಕೆಲಕೆಲವು ವಸ್ತುಗಳನ್ನು ಸಂಗ್ರಹಿಸಿಕೊಳ್ಳುವದಕ್ಕೂ ಮತ್ತೆ ಕೆಲವನ್ನು ದೂರವಿರಿಸುವದಕ್ಕೂ ಪ್ರಯತ್ನಿಸಬೇಕಾಗುತ್ತದೆ. ಈ ಸ್ವಭಾವಕ್ಕೆ ದ್ವಂದ್ವಮೋಹವೇ ಕಾರಣವೆಂದು ಆಗಲೆ ಹೇಳಿರುತ್ತೇನೆ.

ಆದ್ದರಿಂದ ಕರ್ಮೇಂದ್ರಿಯಗಳು ರಾಗದ್ವೇಷದಿಂದ ವರ್ತಿಸದಂತೆ ನೋಡಿಕೊಳ್ಳು ವದು ಮುಮುಕ್ಷುಗಳಿಗೆ ಅತ್ಯವಶ್ಯವಾಗಿರುತ್ತದೆ. ಇದಕ್ಕಾಗಿ ಶೀತೋಷ್ಣಾದಿ ವೇದನೆ ಗಳು ಆಗಮಾಪಾಯಿಗಳೆಂದೂ ಅವು ನಿಜವಾಗಿ ನಮ್ಮ ಸ್ವರೂಪಕ್ಕೆ ಸೇರಿರುವದಿಲ್ಲ ವೆಂದೂ ಶಾಸ್ತ್ರದೃಷ್ಟಿಯನ್ನವಲಂಬಿಸಿ ಮತ್ತೆಮತ್ತೆ ಮನದಲ್ಲಿ ಹೊರಳಾಡಿಸುತ್ತಿರುವದು ಅತ್ಯವಶ್ಯವು. ರಾಗದ್ವೇಷಗಳಿಂದೊಡಗೂಡಿದವನಿಗೆ ಸಕಲೇಂದ್ರಿಯಗಳೂ ವೇಗದಿಂದ ವರ್ತಿಸುತ್ತಿರುವವು. ಆದ್ದರಿಂದಲೇ ಮಹಾಭಾರತದಲ್ಲಿ ಹೀಗೆಂದು ಹೇಳಿದೆ :

**ವಾಚೋ ವೇಗಂ ಮನಸಃ ಕ್ರೋಧವೇಗಂ ವಿಧಿತ್ಸಾವೇಗಮುದರೋಪಸ್ಥ ವೇಗಮ್ ।**
**ಏತಾನ್ ವೇಗಾನ್ ಯೋ ವಿಷಹೇದುದೀರ್ಣಾಂ ಸ್ತಂ ಮನ್ಯೇऽಹಂ ಬ್ರಾಹ್ಮಣಂ ವೈ ಮುನಿಂ ಚ ॥**

ವಾಕ್ಕಿನ ವೇಗವನ್ನೂ ಮನಸ್ಸಿನಲ್ಲಾಗುವ ಕಾಮಕ್ರೋಧಗಳ ವೇಗವನ್ನೂ ಮತ್ತೊಬ್ಬರಿಗೆ ಏನನ್ನಾದರೂ ಮಾಡಬೇಕೆಂಬ ಇಚ್ಛೆಯ ವೇಗವನ್ನೂ, ಹೊಟ್ಟೆಯ ಹಸಿವುಬಾಯಾರಿಕೆಗಳ ವೇಗವನ್ನೂ, ಜನನೇಂದ್ರಿಯದ ಕಾಮವೇಗವನ್ನೂ ಯಾವನು ತಡೆದುಕೊಳ್ಳಬಲ್ಲನೋ ಅವನೇ ಬ್ರಾಹ್ಮಣನು, ಅವನೇ ಮುನಿಯು ಎಂಬುದು ಈ ವಾಕ್ಯದ ಅರ್ಥ. ಮತ್ತೊಬ್ಬರು ನಮಗೆ ಆಡಿದ ಬಿರುನುಡಿಗಳನ್ನು ತಡೆದುಕೊಳ್ಳುವದು ಹೇಗೆ ಅವಶ್ಯವೋ ಹಾಗೆಯೇ ನಮ್ಮ ಬಿರುನುಡಿಯು ಮತ್ತೊಬ್ಬರನ್ನು ನೋಯಿಸದಂತೆ ನೋಡಿಕೊಳ್ಳುವದೂ ಅವಶ್ಯವಾಗಿದೆ. ಮತ್ತೊಬ್ಬರ ಹೊಗಳಿಕೆಯಿಂದ ನಾವು ಹಿಗ್ಗದೆ ಇರುವದಕ್ಕೆ ಪ್ರಯತ್ನಿಸುವದು ಹೇಗೆ ಅವಶ್ಯವೋ ಹಾಗೆಯೇ ಮತ್ತೊಬ್ಬರನ್ನೂ ಮೃಷಾಸ್ತುತಿಯೇ ಮುಂತಾದವುಗಳಿಂದ ಮನಸ್ಸಿನಲ್ಲಿ ಹಿಗ್ಗದಂತೆ ಮಾಡುವದೂ ಅವಶ್ಯವು. ಹೇಗೆ ಮತ್ತೊಬ್ಬರ ಕೈ, ಕಾಲು-ಮುಂತಾದ

ಕರ್ಮೇಂದ್ರಿಯಗಳ ವ್ಯಾಪಾರದಿಂದ ನಮ್ಮ ಮನಸ್ಸಿನಲ್ಲಿ ಕಾಮಕ್ರೋಧಾದಿಗಳು ಉಂಟಾಗದಂತೆ ನೋಡಿಕೊಳ್ಳಬೇಕೋ ಹಾಗೆಯೇ ಮತ್ತೊಬ್ಬರಿಗೂ ನಮ್ಮ ಕರ್ಮೇಂದ್ರಿಯಗಳ ವ್ಯಾಪಾರದಿಂದ ಅಂಥ ವೇದನೆಗಳು ಆಗದಂತೆ ನೋಡಿ ಕೊಳ್ಳಬೇಕು. ಒಬ್ಬರು ನಮ್ಮನ್ನು ಪ್ರೇಮದ ಕಣ್ಣಿನಿಂದ ನೋಡಿದರೆ ಹರ್ಷವನ್ನೂ ದ್ವೇಷದ ಕಣ್ಣಿನಿಂದ ದುರುದುರನೆ ನೋಡುವದರಿಂದ ವಿಷಾದವನ್ನೂ ಪಡೆಯಬಾರದಷ್ಟೆ ಇದರಂತೆಯೇ ನಮ್ಮ ಕಣ್ಣು ಮತ್ತೊಬ್ಬರಿಗೆ ಹರ್ಷವಿಷಾದವನ್ನು ಮಾಡದೆ ಇರಬೇಕು. ಹೆಚ್ಚೇನು? ರಾಗದ್ವೇಷಗಳ ಸೆಳೆತಕ್ಕೆ ಸಿಕ್ಕದೆ ಸ್ವಾಭಾವಿಕವಾಗಿಯೇ ಹಿತಮಿತವಾಗಿ ಸರ್ವೇಂದ್ರಿಯಗಳನ್ನೂ ಉಪಯೋಗಿಸುವದಕ್ಕೂ ಅವುಗಳಿಂದಾಗುವ ಮತ್ತೊಬ್ಬರ ವ್ಯಾಪಾರದಿಂದ ನಾವೂ ಶಾಂತಿಸಮಾಧಾನಗಳನ್ನು ಕೆಡಿಸಿಕೊಳ್ಳದೆ ನಮ್ಮ ವ್ಯಾಪಾರದಿಂದ ಮತ್ತೊಬ್ಬರ ಶಾಂತಿಸಮಾಧಾನಗಳನ್ನೂ ಕೆಡಿಸದೆ ಇರುವದೇ ಮುಮುಕ್ಷುಗಳ ಪರಮಕರ್ತವ್ಯವಾಗಿರುತ್ತದೆ. ಇದು ಯಾವ ಮಹನೀಯರಲ್ಲಿ ಸ್ವಭಾವಸಿದ್ಧ ವಾಗಿರುವದೋ ಅವರೇ ದ್ವಂದ್ವಗಳನ್ನು ಸರ್ವಥಾ ಜಯಿಸಿದ ಮಹಾತಿತಿಕ್ಷುಗಳು.

ಮತ್ತೊಬ್ಬರ ನಡೆನುಡಿಗಳಿಂದ ತಾನೂ ಮನಸ್ಸಿನಲ್ಲಿ ಏರುಪೇರುಗಳನ್ನು ಹೊಂದದೆ ತನ್ನ ನಡೆನುಡಿಗಳಿಂದ ಮತ್ತೊಬ್ಬರಿಗೂ ಮನಸ್ಸಿನ ಏರುಪೇರುಗಳನ್ನು ಮಾಡದೆ ಇರುವದು ಹೇಗೆಂಬುದು ಸಾಧಕರಿಗೆ ತಿಳಿಯುವದು ಕಷ್ಟ. ವ್ಯವಹಾರ ದಲ್ಲಿ ಮಾತಿಗೆ ಪ್ರತಿಮಾತು, ಕ್ರಿಯೆಗೆ ಪ್ರತಿಕ್ರಿಯೆ–ಹೀಗೆ ಮಾಡಿಮಾಡಿ ಜನರಿಗೆ ಅಭ್ಯಾಸವಾಗಿಬಿಟ್ಟಿರುತ್ತದೆ. ಒಳ್ಳೆಯ ನಡೆನುಡಿಗಳನ್ನು ಕಂಡಾಗ ನಮ್ಮಲ್ಲಿಯೂ ಒಳ್ಳೆಯ ನಡೆನುಡಿಗಳು ಎದ್ದುಕೊಳ್ಳುವದು ಮಧ್ಯಮ ಲಕ್ಷಣವು; ಒಳ್ಳೆಯ ನಡೆನುಡಿಗಳಿಗೆ ಪ್ರತಿಯಾಗಿ ಕೆಟ್ಟ ನಡೆನುಡಿಗಳನ್ನೇ ಪ್ರಕಟಿಸುವದು ಅಧಮ ಲಕ್ಷಣವು. ಆದರೆ ಸಾತ್ತ್ವಿಕರಾದ ಉತ್ತಮರು ವ್ಯವಹಾರದಲ್ಲಿಯೂ ತಮಗೆ ಮತ್ತೊಬ್ಬರಿಂದಾದ ಉದ್ವೇಗಕಾರಕವಾದ ನಡೆನುಡಿಗಳಿಗೆ ಪ್ರತಿಯಾಗಿ ಪ್ರಿಯಕರ ವಾದ ನಡೆನುಡಿಗಳನ್ನೇ ಪ್ರಕಟಿಸುವರು. "ಉಪಕಾರಿಗಳಿಗೆ ಉಪಕಾರವನ್ನು ಮಾಡುವ ಸಾಧುತ್ವದಲ್ಲಿ ಹೆಚ್ಚಿನ ಗುಣವೇನಿರುವದು? ಯಾರು ತಮಗೆ ಅಪಕಾರಿಗಳೋ ಅವರ ವಿಷಯದಲ್ಲಿಯೂ ಉಪಕಾರದಿಂದಲೇ ವರ್ತಿಸುವದೇ ನಿಜವಾದ ಸಾಧುತನವು"–ಎಂಬುದು ಅಂಥ ಮಹಾತ್ಮರ ಜೀವನಸೂತ್ರ ವಾಗಿರುತ್ತದೆ. ಯಾವ ಸಾಧಕರಿಗೆ ಇಂದ್ರಿಯಗಳನ್ನು ಸರ್ವಥಾ ಹಿಡಿತದಲ್ಲಿಟ್ಟು ಕೊಂಡಿರುವದು ಶಕ್ಯವಿಲ್ಲವೋ, ಅವರು ತಾವು ಮತ್ತೊಬ್ಬರ ವ್ಯಾಪಾರದಿಂದ ಮನಸ್ಸಿನಲ್ಲಿ ಏರುಪೇರಿಲ್ಲದೆ ಇರುವದಕ್ಕೆ ಮೊದಲು ಪ್ರಯತ್ನಿಸಬೇಕು. ಹೀಗೆ ತಮ್ಮ ಶಾಂತಿಸಮಾಧಾನಗಳನ್ನು ಕಾಯ್ದುಕೊಳ್ಳುವದಕ್ಕೆ ಮತ್ತೊಬ್ಬರ ಅಪಕಾರಕ್ಕೆ ಪ್ರತಿ ಯಾಗಿಯೂ ಉಪಕಾರವನ್ನೇ ಮಾಡುವ ಅಭ್ಯಾಸವನ್ನು ಮಾಡುತ್ತಾಹೋಗು

ವದನ್ನು ಸಹಾಯಕವಾಗಿ ಮಾಡಿಕೊಳ್ಳಬೇಕು. ಪರಮೇಶ್ವರನು ಎಲ್ಲರನ್ನೂ ಸುಖ ಶಾಂತಿಗಳಿಂದ ಕೂಡಿರಲೆಂದೇ ನಿರ್ಮಿಸಿರುತ್ತಾನೆ; ಆದ್ದರಿಂದ ನಾನೂ ಸುಖಶಾಂತಿ ಗಳನ್ನು ಸಂಪಾದಿಸುವದಕ್ಕೆ ಪ್ರಯತ್ನಿಸುವೆನು, ಮತ್ತೊಬ್ಬರಿಗೂ ಸುಖಶಾಂತಿಗಳನ್ನು ಸಂಪಾದಿಸಿಕೊಳ್ಳುವದಕ್ಕೆ ನೆರವಾಗುವೆನು. ಹೀಗೆ ನಡೆಯುವ ನನ್ನ ವ್ಯವಹಾರವು ಈಶ್ವರನ ಅಭ್ಯರ್ಚನೆಯಾಗಲಿ !-ಎಂದು ಮತ್ತೆಮತ್ತೆ ಮನಸ್ಸಿಗೆ ತಂದುಕೊಳ್ಳುತ್ತಿರಬೇಕು.

ಯಾರು ಲೋಕದಲ್ಲಿ ಖ್ಯಾತಿ, ಲಾಭ, ಪೂಜೆ-ಮುಂತಾದವುಗಳನ್ನು ಬಯಸಿ ವ್ಯವಹರಿಸುತ್ತಿರುವರೋ ಅವರೂ ಮತ್ತೊಬ್ಬರಿಗೆ ಉಪಕಾರವನ್ನು ಮಾಡುವ ಕೆಲಸದಲ್ಲಿಯೇ ನಿರತರಾಗಿರುವ ವ್ಯವಹಾರವನ್ನು ಕೈಕೊಳ್ಳಬಹುದು. ಆದರೆ ಅಂಥವರಿಗೆ ಬಲುಬೇಗನೆ ಖ್ಯಾತಿಯ ಜೊತೆಗೆ ಅಪಖ್ಯಾತಿಯೂ, ಲಾಭದ ಜೊತೆಗೆ ನಷ್ಟವೂ, ಪೂಜೆಯ ಜೊತೆಗೆ ಅಪಮಾನವೂ ತಪ್ಪದೆ ಬಂದೊದಗುವವು. ಲೋಕದಲ್ಲಿ ಯಾವದೊಂದು ವ್ಯವಹಾರದ ಫಲವೂ ತನ್ನ ಪ್ರತಿದ್ವಂದ್ವಿಯನ್ನು ಬಿಟ್ಟು ತಾನೊಂದೇ ದೊರಕುವ ಸಂಭವವಿಲ್ಲ. ಆದ್ದರಿಂದ ದ್ವಂದ್ವಸಹಿಷ್ಣುಗಳಾಗಿ ದ್ವಂದ್ವ ಗಳನ್ನೇ ಮೀರಬೇಕೆಂದು ಬಯಸುವ ಮುಮುಕ್ಷುಗಳು ಪರೋಪಕಾರವನ್ನೇ ಮಾಡುವೆನೆಂಬ ಪಣವನ್ನು ತೊಡುವದಕ್ಕೆ ಹೋಗಬಾರದು. ಯಾವದಾದರೂ ಕಾರಣದಿಂದ ತಮಗೆ ಮತ್ತೊಬ್ಬರಿಂದ ಒದಗಬಹುದಾದ ಉದ್ವೇಗಕಾರಕವಾದ ಕಾರ್ಯಗಳನ್ನು ಸಹಿಸುವ ತಿತಿಕ್ಷೆಯನ್ನು ಪ್ರಯತ್ನಪೂರ್ವಕವಾಗಿ ಸಾಧಿಸಬೇಕು; ಮನಸ್ಸಿನ ಶಾಂತಿ ಸಮಾಧಾನಗಳನ್ನು ಎಂದಿಗೂ ಕಳೆದುಕೊಳ್ಳದೆ ಬಂದದ್ದೆಲ್ಲ ತಮ್ಮನ್ನು ಪರೀಕ್ಷಿಸುವ ಘಟನೆಯೆಂದೂ ಈಶ್ವರನ ಚಿತ್ತದಂತೆಯೇ ತಮಗೆ ಆಗುವದೆಲ್ಲ ಆಗುವದೆಂದೂ ಅದು ತಮ್ಮ ಹಿತಕ್ಕೇ ಎಂದೂ ಭಾವಿಸಬೇಕು. ತಾವುಮಾತ್ರ ಎಂದೆಂದಿಗೂ ಯಾರೊಬ್ಬರ ವಿಷಯದಲ್ಲಿಯೂ ಕೃಪೆಯನ್ನಾಗಲಿ ನೈಷ್ಠುರ್ಯವನ್ನಾಗಲಿ ವಹಿಸದೆ ಉದಾಸೀನವೃತ್ತಿಯನ್ನೇ ಅವಲಂಬಿಸಬೇಕು. ತಾವು ಮತ್ತೊಬ್ಬರಿಗೆ ಒಳ್ಳೆಯದನ್ನಾಗಲಿ ಕೆಟ್ಟದ್ದನ್ನಾಗಲಿ ಮಾಡುವೆವೆಂಬ ಹಠವನ್ನು ಸೇಡುತೀರಿಸಿಕೊಳ್ಳುವ ಬುದ್ಧಿಯು ಎಂದಿಗೂ ಮನಸ್ಸಿನಲ್ಲಿ ಹೋಗದಂತೆ ಎಚ್ಚರಿಕೆ ಯಿಂದಿರಬೇಕು. ತಮ್ಮ ಮನಸ್ಸಿನಲ್ಲಿ ಮತ್ತೊಬ್ಬರಿಂದಾದ ಕೇಡಿನ ವಾಸನೆಯು ಉಳಿಯದಂತೆ ಉತ್ತಮವಿಚಾರದ ಚಿಂತನೆಯಿಂದ ಮನಸ್ಸನ್ನು ಶುದ್ಧಿಗೊಳಿಸಿ ಕೊಳ್ಳಬೇಕು; ಅಥವಾ ಅಷ್ಟು ಮೇಲಿನ ಮಟ್ಟಕ್ಕೆ ತಾವು ಇನ್ನೂ ಏರದಿದ್ದರೆ ಎದುರಾಳಿಗೆ ಸಂತೋಷವೇ ಆಗುವಂತೆ ನಡೆಯುವದಕ್ಕಾದರೂ ಪ್ರಯತ್ನಿಸಬೇಕು.

ಹೊರಗಿನ ವ್ಯವಹಾರಕ್ಕೆ ನುಡಿಯೇ ಮೊದಲು, ನಡೆಯು ಅದನ್ನೇ ಹಿಂಬಾಲಿಸುತ್ತಿರುತ್ತದೆ. ಆದ್ದರಿಂದ ನಾಲಗೆಯಿಂದ ಉತ್ತಮವಾದ ವಾಕ್ಯಗಳೇ ಹೊರಕ್ಕೆ ಬರುವಂತೆ ಎಚ್ಚರಿಕೆಯನ್ನು ವಹಿಸಬೇಕು. ಮತ್ತೊಬ್ಬರು ಆಡುವ

ಮಾತುಗಳು ನಮ್ಮಲ್ಲಿ ಬಗೆಬಗೆಯ ಚಿತ್ತವೃತ್ತಿಗಳನ್ನು ಎಬ್ಬಿಸುವಂತೆ ನಾವೂ ಮತ್ತೊಬ್ಬರಲ್ಲಿ ಬಗೆಬಗೆಯ ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಾದಿ ದೋಷಗಳನ್ನು ಅಂತಃಕರಣದ ವಾಸನಾಶಯದಿಂದ ಎಬ್ಬಿಸುವ ಮಾತುಗಳನ್ನು ಎಂದಿಗೂ ಆಡಬಾರದು; ಅಂಥ ಮಾತುಗಳು ಮತ್ತೊಬ್ಬರ ಮನಸ್ಸನ್ನೇ ಅಲ್ಲದೆ ನಮ್ಮ ಮನಸ್ಸನ್ನೂ ಕದಡುವವು. ಯಾವ ಮಾತು ಮನಸ್ಸಿನ ಚಾಂಚಲ್ಯವನ್ನು ಕಳೆಯುವದಕ್ಕೆ ಸಹಾಯಕವಾಗಿರುವದೋ, ಯಾವ ಮಾತು ಮನಸ್ಸಿಗೆ ಬಲವನ್ನೂ ಉತ್ಸಾಹವನ್ನೂ ಕೊಡುವದೋ, ಯಾವ ಮಾತು ಉತ್ತಮವಾದ ಸಂಸ್ಕಾರವನ್ನು ಮೇಲಕ್ಕೆಬ್ಬಿಸುವದೋ, ಅಂಥದ್ದನ್ನೇ ಆಡುವದನ್ನು ಕಲಿಯಬೇಕು. ಮತ್ತೊಬ್ಬರಿಗೆ ಉದ್ವೇಗ ವನ್ನುಂಟುಮಾಡದ, ಸತ್ಯವಾಗಿರುವ, ಪ್ರಿಯವಾಗಿರುವ, ಹಿತವೂ ಆಗಿರುವ ವಾಕ್ಯವನ್ನೇ ನಿಯಮದಿಂದ ಆಡುವದು ವಾಙ್ಮಯತಪಸ್ಸು ಎಂದು ಭಗವದ್ಗೀತೆಯಲ್ಲಿ ಹೇಳಿರುತ್ತದೆ.

ಮುಮುಕ್ಷುಗಳಾದವರು ಅಧ್ಯಾತ್ಮಚಿಂತನೆಯನ್ನೇ ಮಾಡುತಾ ಅಧ್ಯಾತ್ಮಸಂಬಂಧ ವಾದ ಮಾತುಗಳನ್ನೇ ಆಡುತ್ತಾ ಅಧ್ಯಾತ್ಮರತರಾದವರ ಸಂಗದಲ್ಲಿಯೇ ಇದ್ದು ಕೊಂಡಿರಬೇಕು. ಇದರಿಂದ ಅವರ ವಾಙ್ಮನಃಕಾಯಗಳು ದಿನದಿನಕ್ಕೂ ತತ್ತ್ವ ಜ್ಞಾನವನ್ನು ಪಡೆದುಕೊಳ್ಳುವದಕ್ಕೆ ಅಣಿಯಾಗುತ್ತಿರುವವು; ಅವರ ಸನಿಹ ದಲ್ಲಿರುವವರಿಗೂ ಇದೇ ಪ್ರಯೋಜನವೇ ಅದರಿಂದ ಆಗುತ್ತಿರುವದು. ಯಾವದಾದ ರೊಂದು ಕಾರಣದಿಂದ ಮತ್ತೊಬ್ಬರು ತಮಗೆ ಬಿರುನುಡಿಗಳನ್ನಾಡಿದರೆ, ತಾವು ಅದನ್ನು ಸಹಿಸಿಕೊಂಡು ಪ್ರತಿಯಾಗಿ ಪ್ರಿಯವಾದ ವಾಕ್ಯವನ್ನೇ ನುಡಿಯಬೇಕು. ಯಾರಾದರೂ ಸುಳ್ಳನ್ನು ನುಡಿದರೂ ಅದನ್ನು ಮನಸ್ಸಿಗೆ ತಂದುಕೊಳ್ಳದೆ ತಾವು ಮಾತ್ರ ಎಂದೆಂದಿಗೂ ನಿಜವನ್ನೇ ಆಡುತ್ತಿರಬೇಕು. ತಮ್ಮನ್ನು ಯಾರಾದರೂ ಬಯ್ದರೂ ತಾವು ಅವರಿಗೆ ಒಳ್ಳೆಯ ಮರುಮಾತನ್ನೇ ಆಡುತ್ತಿರಬೇಕು. ಯಾರಾ ದರೂ ತಮ್ಮಲ್ಲಿ ಬುದ್ಧಿಯಮಾತನ್ನು ಕೇಳಿದರೆ ಹಿತವಾದ ವಾಕ್ಯವನ್ನೇ ಅವರಿಗೆ ಮನಮೆಚ್ಚಾಗುವ ರೀತಿಯಲ್ಲಿ ನುಡಿಯಬೇಕು, ಇದು ಮನಸ್ಸಿನ ಶಾಂತಿಸಮಾಧಾನ ಗಳನ್ನು ಹೆಚ್ಚಿಸುವದು, ಪ್ರತ್ಯಗಾತ್ಮನ ಚಿಂತನೆಗೆ ಮನಸ್ಸನ್ನು ಅಣಿಮಾಡುವದು.

ಇಂದ್ರಿಯಗಳನ್ನು ದುರುಪಯೋಗಮಾಡಬಾರದು; ರಾಗದ್ವೇಷಗಳಿಂದ ತುಂಬಿದವರಾಗಿ ಹೊರಗಿನ ವಸ್ತುಗಳಿಂದಾದ ವೇದನೆಗಳಿಂದ ಉಬ್ಬದೆ ತಗ್ಗದೆ, ಮತ್ತೊಬ್ಬರ ಮನಸ್ಸನ್ನು ಹರ್ಷವಿಷಾದಗಳಿಗೆ ಈಡುಮಾಡದೆ ಇರಬೇಕು–ಎಂದು ಈವರೆಗೆ ಹೇಳಿದ್ದಾಯಿತಷ್ಟೆ. ಈ ಸಾಧನೆಯು ಅಳವಡಬೇಕಾದರೆ ಮೊದಲು ಇಂದ್ರಿಯಗಳ ಚಾಪಲ್ಯಕ್ಕೆ ಸಿಕ್ಕಿಕೊಳ್ಳದಂತೆ ಎಚ್ಚರಿಕೆಯನ್ನು ತೆಗೆದುಕೊಳ್ಳಬೇಕಾಗು ವದು. ಈ ವಿಷಯದಲ್ಲಿ ಮನುಸ್ಮೃತಿಯಲ್ಲಿ ಹೀಗೆಂದು ಉಪದೇಶಿಸಿರುತ್ತದೆ :

**ನ ಪಾಣಿಪಾದಚಪಲೋ ನ ನೇತ್ರಚಪಲೋಽನೃಜುಃ।**
**ನ ಸ್ಯಾದ್ ವಾಕ್ಚಪಲಶ್ಚೈವ ನ ಪರದ್ರೋಹಕರ್ಮಧೀಃ॥**

ಇದು ಮುಮುಕ್ಷುಗಳಿಗೆ ಮಾತ್ರವೇ ಅಲ್ಲ, ಸದ್ಗೃಹಸ್ಥರಿಗೆಲ್ಲ ಧರ್ಮವಾಗಿರುತ್ತದೆ. ಕೈಕಾಲುಗಳನ್ನು ಚಾಪಲ್ಯಕ್ಕೆ ಬಿಡಬಾರದು; ಅವುಗಳನ್ನು ವ್ಯರ್ಥವಾಗಿ ಆಡಿಸುತ್ತಿದ್ದರೆ ಅವು ಮಾಡಬಾರದ ಕೆಲಸಗಳನ್ನೂ ಮಾಡಿ ನಮ್ಮನ್ನು ಅನರ್ಥದ ಗುಂಡಿಗೆ ಎಳೆದುಬಿಡುತ್ತದೆ. ಕರ್ಮೇಂದ್ರಿಯಗಳನ್ನೆಲ್ಲ ಶಾಸ್ತ್ರೋಕ್ತವಾದ ಪುಣ್ಯಕಾರ್ಯಗಳನ್ನು ಮಾಡುವದಕ್ಕೂ ಪರಮೇಶ್ವರನ ಅರ್ಚನೆಗೂ ಉಪಯೋಗಿಸುತ್ತಾ ಇರುವವರಿಗೆ ಅವುಗಳನ್ನು ಸ್ವಾಧೀನದಲ್ಲಿಟ್ಟುಕೊಳ್ಳುವದು ಸುಲಭವಾಗುವದು. ಹೀಗೆಯೇ ನೇತ್ರಾದಿಜ್ಞಾನೇಂದ್ರಿಯಗಳನ್ನು ಕಂಡಕಡೆಗೆ ಹರಿಯದಂತೆ ತಡೆದುಕೊಳ್ಳಬೇಕು; ಅದಕ್ಕಾಗಿ ಅವುಗಳನ್ನು ಶಾಸ್ತ್ರೋಕ್ತವಾದ ಸಾತ್ತ್ವಿಕಕರ್ಮಗಳನ್ನು ಮಾಡುವದಕ್ಕೇ ಉಪಯೋಗಿಸಬೇಕು. ಹಾಗಾದರೆ ಅವುಗಳು ನಮ್ಮನ್ನು ಎತ್ತಲೋ ಎಳೆದುಕೊಂಡು ಹೋಗದೆ ಇರುವದಕ್ಕೆ ಕಾರಣವಾಗುವದು. ವಿಶೇಷವಾಗಿ ಮಾತನ್ನಂತೂ ವ್ಯರ್ಥ ವಾಗಿ ಎಂದಿಗೂ ಉಪಯೋಗಿಸಬಾರದು. 'ಮಾತು ಮನೆಕೆಡಿಸಿತು' ಎಂಬಂತೆ ಗೃಹಸ್ಥನಾದವನು ವೃಥಾವಾಕ್ಯದಿಂದ ತನ್ನ ಕುಟುಂಬಕ್ಕೇ ಹಾನಿಯನ್ನು ಮಾಡಿ ಕೊಳ್ಳುತ್ತಾನೆ. ಮುಮುಕ್ಷುಗಳಂತೂ ಬಹಳ ಎಚ್ಚರಿಕೆಯಿಂದ ಮಾತಾಡುವದನ್ನು ಕಲಿಯಬೇಕು. ಅವರ ಬಾಯಲ್ಲಿ ಎಂದಿಗೂ ವ್ಯರ್ಥಾಲಾಪಗಳು ಬರಬಾರದು. "ಅನಾತ್ಮವಿಷಯಕವಾದ ಬಹಳ ಶಬ್ದಗಳನ್ನು ಆಡುತ್ತಿರಬಾರದು; ಅದು ವಾಗಿಂದ್ರಿ ಯಕ್ಕೆ ಬರಿಯ ಆಯಾಸವನ್ನುಂಟುಮಾಡುತ್ತದೆ" ಎಂದು ಶ್ರುತಿವಚನವಿದೆ. ಬಹಳ ಮಾತಿನಿಂದ ಆಯಾಸವೊಂದೇ ಅಲ್ಲ; ಮನಸ್ಸೂ ಕೆಡುತ್ತದೆ, ಇಂದ್ರಿಯಗಳು ಹೋದತ್ತ ಮನಸ್ಸು ಹರಿಯುತ್ತದೆ, ಕಡಲಮೇಲಿನ ದೋಣಿಯು ಬಿರುಗಾಳಿಗೆ ಸಿಕ್ಕಿದರೆ ಹೇಗೋ ಹಾಗೆ ಎಲ್ಲಿಯೋ ಹೋಗಿ ಅನರ್ಥದಲ್ಲಿ ಬಿದ್ದು ಕೆಡುತ್ತದೆ.

ಇಂದ್ರಿಯಗಳ ಚಾಪಲ್ಯವನ್ನು ಕೈಕೊಳ್ಳಬಾರದು, ಮಾತನ್ನು ವ್ಯರ್ಥವಾಗಿ ಆಡಬಾರದು-ಎಂದರೆ ಚಂದನದ ಗೊಂಬೆಯಂತೆ ಇಟ್ಟಲ್ಲಿದ್ದುಕೊಂಡಿರಬೇಕೆಂಬ ಅಭಿಪ್ರಾಯವೇನೂ ಇಲ್ಲ; ಇವುಗಳನ್ನೆಲ್ಲ ಸ್ವಾಧೀನಕ್ಕೆ ತಂದುಕೊಳ್ಳಬೇಕು; ಅದಕ್ಕಾಗಿ ಕರ್ಮೇಂದ್ರಿಯಗಳನ್ನು ಸತ್ಕರ್ಮಕ್ಕೂ ಜ್ಞಾನೇಂದ್ರಿಯಗಳನ್ನು ಸದ್ವಿಷಯಗಳ ತಿಳಿವಳಿಕೆಗೂ ಉಪಯೋಗಿಸಬೇಕು. ಇವೆಲ್ಲವನ್ನೂ ಪರಮಾತ್ಮನ ಭಕ್ತಿಜ್ಞಾನಗಳ ಸಂಪಾದನೆಗೆ ವಿನಿಯೋಗಿಸಿಕೊಳ್ಳಬೇಕು-ಎಂಬುದೇ ಇಲ್ಲಿ ತಿಳಿಯಬೇಕಾದದ್ದು.

ಉತ್ತಮವಾದ ಆಧ್ಯಾತ್ಮಿಕಗ್ರಂಥಗಳನ್ನು ಓದುವದು, ಪರಮಾತ್ಮನ ನಾಮಗ್ರಹಣ, ನಾಮಕೀರ್ತನ, ಮಂತ್ರಜಪ, ಸಜ್ಜನರೊಡನೆ ಸಂಭಾಷಣೆ-ಇವುಗಳೆಲ್ಲ ಅವಶ್ಯವಾಗಿ

ಮಾಡತಕ್ಕವುಗಳು. ಇವುಗಳಿಂದ ಪರಮಾತ್ಮನ ಕಡೆಗೆ ಮನಸ್ಸು ತಿರುಗುವದು. ಕ್ರಮಕ್ರಮವಾಗಿ ಇಂದ್ರಿಯಗಳು ತಮ್ಮ ವ್ಯಾಪಾರವನ್ನೆಲ್ಲ ಉಡುಗಿಸಿಕೊಂಡು ಅಂತಃ ಕರಣದಲ್ಲಿ ಬೆರೆತುಬಿಡುವವು. ಅಂತಃಕರಣವು ಪರಮಾತ್ಮನ ಚಿಂತನೆಗೇ ಒಲಿಯು ವದಕ್ಕೆ ಹತ್ತುವದು. ಬರಿಯ ವಾಙ್ಮೌನವು ಯಾವ ಪುರುಷಾರ್ಥಕ್ಕೂ ಸಾಧನ ವಾಗದು; ಯಾವ ಇಂದ್ರಿಯವೂ ಬಹಿರ್ವಿಷಯವಾಗದೆ ಹಿಂತಿರುಗಿ ಮನಸ್ಸನ್ನು ಪರಮಾತ್ಮನಲ್ಲಿಯೇ ನೆಲೆನಿಲ್ಲುವಂತೆ ಮಾಡಿಕೊಳ್ಳುವ ಪರಮಾರ್ಥಮೌನವನ್ನು ಸಂಪಾದಿಸಿಕೊಂಡು ಮುಮುಕ್ಷುಗಳು ಕೃತಾರ್ಥರಾಗಬೇಕು. ಇಂಥ ಸಾಧಕರಿಗೆ ಸಕಲ ವ್ಯವಹಾರಗಳೂ ಪರಮೇಶ್ವರನ ಅರ್ಚನೆ, ಸ್ತೋತ್ರ, ಧ್ಯಾನ–ಎಂದಾಗುವದು.

## 43. ಏಕಾಂತವಾಸ

ಮುಮುಕ್ಷುಗಳಾದವರು ಏಕಾಂತವಾಸವನ್ನು ಮಾಡಬೇಕೆಂದು ಶಾಸ್ತ್ರಗಳಲ್ಲಿ ಮತ್ತೆಮತ್ತೆ ಉಪದೇಶಿಸಿರುತ್ತದೆ. ಏಕಾಂತವಾಸವೆಂಬುದು ಈಗಿನ ಕಾಲದಲ್ಲಿ ದೊರೆಯುವದು ಬಹಳ ಕಷ್ಟ; ಏಕೆಂದರೆ ಜನರ ಸಂದಣಿಯಿಲ್ಲದ ಸ್ಥಲವು ದೊರೆಯುವದೇ ಈಗ ದುರ್ಲಭವಾಗಿರುತ್ತದೆ. ವ್ಯವಹಾರದಲ್ಲಿರುವವರಂತೂ ಜನರನ್ನು ಕೂಡಿಹಾಕಿಕೊಳ್ಳದೆ ಜೀವನಮಾಡುವದು ಅಸಾಧ್ಯವೇ ಎನ್ನಬಹುದು. ಏಕಾಂತವಾಸದಲ್ಲಿ ಸುಖವಿದೆ ಎಂಬುದನ್ನು ಮನಸ್ಸಿಗೆ ತಟ್ಟುವಂತೆ ಮಾಡಿಕೊಳ್ಳುವದೂ ಅದರ ಲಾಭವನ್ನು ಪಡೆಯುವದೂ ಹೇಗೆ?– ಎಂದು ಸಾಧಕರಾದವರೂ ಕೇಳುತ್ತಿರುತ್ತಾರೆ. ಆದ್ದರಿಂದ ಇದರ ವಿಷಯವಾಗಿ ಕೆಲವು ಸೂಚನೆಗಳನ್ನು ಕೊಡುವದು ಅವಶ್ಯವಾಗಿರುತ್ತದೆ.

ಏಕಾಂತವಾಸವೆಂದರೇನು? ಅಕ್ಷರಾರ್ಥವನ್ನು ಹಿಡಿದರೆ ತಾನೊಬ್ಬನೇ ಇರುವ ಸ್ಥಲದಲ್ಲಿ ಇದ್ದುಕೊಂಡಿರುವದು ಎಂದು ಈ ಶಬ್ದಕ್ಕೆ ಅರ್ಥವಾಗುತ್ತದೆ. ಆದರೆ ಮನುಷ್ಯನು ತಾನೊಬ್ಬನೇ ಇರುವದರಲ್ಲಿ ಕಾಡುಮೃಗಗಳ ಮಟ್ಟಕ್ಕೆ ಇಳಿಯುವ ಸಂಭವವು ಹೆಚ್ಚಾಗಿದೆಯೇ ಹೊರತು ಮತ್ತೆಯಾವ ಪ್ರಯೋಜನವೂ ಕಾಣಿಸುವದಿಲ್ಲ. ಮನುಷ್ಯನೆಂದರೇ ಸಮಾಜದಲ್ಲಿರುವ ಪ್ರಾಣಿಯು. ಮನುಷ್ಯರು ಒಬ್ಬರೊಡನೊಬ್ಬರು ಇರುವಾಗ ಮತ್ತೊಬ್ಬರ ನಡೆನುಡಿಗಳನ್ನು ನೋಡಿ ಅವರ ಗುಣಗಳನ್ನು ಅನುಕರಿಸುವದು, ತಮ್ಮ ದೋಷಗಳನ್ನು ತಿದ್ದಿಕೊಳ್ಳುವದು–ಹೀಗೆ ಮುಂದುವರಿಯು ವದಕ್ಕೆ ಸಹಾಯವಾಗಿರುತ್ತದೆ ಎಂಬುದು ಎಲ್ಲರಿಗೂ ತಿಳಿದಿರುವ ವಿಷಯವಾಗಿದೆ. ಶಾಸ್ತ್ರದಲ್ಲಿ ಸತ್ಸಂಗವನ್ನು ಪ್ರಶಂಸಿಸಿರುವದೂ ಈ ದೃಷ್ಟಿಯಿಂದಲೇ ಆಗಿರುತ್ತದೆ. ಆದ್ದರಿಂದ ಸಾಧಕರಿಗೆ ಯಾವ ಪ್ರಯೋಜನವನ್ನು ಮಾಡಿಕೊಡುವದಕ್ಕಾಗಿ ಶಾಸ್ತ್ರದಲ್ಲಿ ಏಕಾಂತವಾಸವನ್ನು ಉಪದೇಶಿಸಿದೆ? ಎಂಬುದು ವಿಮರ್ಶನೀಯವಾಗಿರುತ್ತದೆ.

ಸಾಮಾನ್ಯಜನರ ಮನಸ್ಸಿಗೆ ಒಂದು ಸ್ವಭಾವವಿದೆ. ಅದು ಇಂದ್ರಿಯಗಳ ಮೂಲಕವಾಗಿ ಆಗಾಗ್ಗೆ ಹೊರಗೆ ಇಣಿಕಿನೋಡುತ್ತದೆ; ಹೊರಗೆ ಕಂಡ ವಿಷಯಗಳ ಪ್ರತಿಮುದ್ರೆಯನ್ನು ಒತ್ತಿಕೊಂಡು ಒಳಕ್ಕೆ ಬರುತ್ತದೆ; ಆಮೇಲೆ ವಿಷಯಗಳಿಲ್ಲದಾಗಲೂ ಅವುಗಳನ್ನೇ ಮತ್ತಮತ್ತೆ ನೆನಪಿಗೆ ತಂದುಕೊಂಡು ಅವುಗಳ ಗುಣದೋಷಗಳನ್ನು ತನ್ನಲ್ಲಿಯೇ ಹೊರಳಾಡಿಸಿ ಹರ್ಷಿಸುತ್ತದೆ, ಅಥವಾ ಕ್ಲೇಶಪಡುತ್ತದೆ. ವಸ್ತುಗಳ ಗುಣವನ್ನು ಚಿಂತಿಸುತ್ತಿರುವದರಿಂದ ಮನಸ್ಸು ಮತ್ತೆ ಅವುಗಳಿಂದಾಗುವ ಸುಖವನ್ನು ಪಡೆಯಬೇಕೆಂದು ಹಂಬಲಿಸುವದಕ್ಕೂ ಆ ವಸ್ತುಗಳನ್ನು ದೊರಕಿಸಿಕೊಳ್ಳುವದಕ್ಕಾಗಿ ಪ್ರಯತ್ನಮಾಡುವದಕ್ಕೂ ಸಜ್ಜಾಗುತ್ತದೆ; ವಸ್ತುಗಳ ದೋಷವನ್ನು ಚಿಂತಿಸುತ್ತಿರುವದರಿಂದ ಅವುಗಳನ್ನು ಹಗೆಮಾಡುವದಕ್ಕೂ ಇನ್ನು ಮುಂದೆ ತನಗೆ ಅವುಗಳ ಸಂಯೋಗವಾಗದಂತೆ ನೋಡಿಕೊಳ್ಳುವದಕ್ಕೂ ಸಜ್ಜಾಗುತ್ತದೆ. ವ್ಯವಹಾರದಲ್ಲಿ ತನಗೆ ಆಗಬೇಕಾಗಿರುವ ಸೌಕರ್ಯಗಳನ್ನು ನೆನೆನೆನೆದು ಗಾಳಿಯ ಗೋಪುರವನ್ನು ಕಟ್ಟುತ್ತಿರುತ್ತದೆ; ತನಗೆ ಒದಗಬಹುದಾದ ಆತಂಕಗಳನ್ನು ನೆನೆನೆನೆದು ಚಿಂತೆಯಲ್ಲಿ ಮುಳುಗುತ್ತಿರುತ್ತದೆ. ಈ ಸ್ವಭಾವದ ಮನಸ್ಸಿನ ಜನರಿಗೆ ಪ್ರಾಕೃತರು, ಪ್ರಕೃತಿಗೆ ವಶರಾದವರು, ಎಂಬ ಹೆಸರನ್ನು ಶಾಸ್ತ್ರಕಾರರು ಕೊಟ್ಟಿರುತ್ತಾರೆ.

ಪ್ರಾಕೃತರಾದವರನ್ನು ಪ್ರಕೃತಿಯು ತನ್ನ ವಶಕ್ಕೆ ತೆಗೆದುಕೊಂಡಿರುತ್ತದೆ. ಪ್ರಾಕೃತರ ಶರೀರವು ಕೆಲಕೆಲವು ಬಾಹ್ಯವಿಷಯಗಳನ್ನು ಮಾತ್ರ ಒಗ್ಗಿಸಿಕೊಂಡು ಅವುಗಳ ಸೇವೆಯಿಂದಲೇ ಬೆಳೆಯುತ್ತಿರುತ್ತದೆ. ಅವರ ಮೈಮೇಲಿನ ಚರ್ಮವೂ ಒಳಗಿರುವ ರಕ್ತಮಾಂಸಮಜ್ಜಾದಿಗಳೂ ಆಯಾ ಗೊತ್ತಾದ ಆಹಾರದ ಸೇವನೆಯಿಂದಲೇ ಬೆಳೆದುಕೊಳ್ಳುವವು; ಅವುಗಳನ್ನು ಮಾತ್ರವೇ ಅವು ಒಳಕ್ಕೆಳೆದುಕೊಂಡು ತಮ್ಮ ರೂಪಕ್ಕೆ ತಿರುಗಿಸಿಕೊಳ್ಳಬಲ್ಲವು. ಶರೀರಕ್ಕೆ ಇಂಥ ವಾಯುಗುಣವು, ಇಂಥ ಬಟ್ಟೆಯು, ಇಂಥ ಆಹಾರವು, ಇಂಥ ವಿಲಾಸಸಾಮಗ್ರಿಗಳು ಇದ್ದರೇ ಅದು ಸೊಂಪಾಗಿ ಬೆಳೆಯುವ ಸಸ್ಯದಂತೆ ನಳನಳಿಸುವದು; ಇಲ್ಲದಿದ್ದರೆ ಅದು ಸೊರಗಿಹೋಗುವದು–ಎಂದು ಪ್ರಾಕೃತರ ನಂಬಿಕೆ. ಆದ್ದರಿಂದಲೇ ಬೇರೆಬೇರೆಯ ಜನರಿಗೆ ಬೇರೆಬೇರೆಯ ಬಗೆಯ ಆಹಾರವಿಹಾರಾದಿಗಳು ಒಗ್ಗುವವು, ಮಿಕ್ಕವು ಒಗ್ಗವು. ಇದರಂತೆಯೇ ಅವರ ಇಂದ್ರಿಯಗಳೂ ಮನಸ್ಸೂ ಆಯಾ ವಿಷಯಗಳ ಆಲೋಚನೆ, ಸಂಕಲ್ಪ, ವಿಚಾರ–ಮುಂತಾದವುಗಳಿಂದಲೇ ಜೀವಿಸಿಕೊಂಡಿರುವವು. ಈ ಪ್ರಕೃತಿನಿಯಮವನ್ನು ಅನುಸರಿಸಿಯೇ ವೈದ್ಯರೂ ಮನಃಶಾಸ್ತ್ರಜ್ಞರೂ ಜನರಿಗೆ ಶಾರೀರಕ ಮಾನಸಿಕಚಿಕಿತ್ಸೆಗಳನ್ನೇರ್ಪಡಿಸಬೇಕಾಗಿರುತ್ತದೆ. ಯಾವ ಆಹಾರವು, ಯಾವ ವಿಹಾರವು, ಯಾವ ಸಂನಿವೇಶವು, ಯಾವ ವಿಚಾರಮಾರ್ಗವು ಇಂಥಿಂಥವರಿಗೆ ಒಗ್ಗುವವು? ಎಂಬುದನ್ನು ಕಂಡುಹಿಡಿಯುವದೇ ಈ ವೈದ್ಯರುಗಳ ಕೌಶಲವಾಗಿರುತ್ತದೆ.

ಪ್ರಾಕೃತರಾದವರು ತಾವು ಸ್ವಂತಂತ್ರರಾಗಿಯೇ ವ್ಯವಹಾರವನ್ನು ಮಾಡುತ್ತಿರುವೆವೆಂದು ಭಾವಿಸಿಕೊಂಡಿರುತ್ತಾರೆ. ಆದರೆ ನಿಜವಾಗಿ ಅವರಿಗೆ ಯಾವ ಸ್ವಾತಂತ್ರ್ಯವೂ ಇರುವದೇ ಇಲ್ಲ. ಅವರ ಶರೀರವೂ ಇಂದ್ರಿಯಗಳೂ ಮನಸ್ಸೂ ಒಂದಾನೊಂದು ಪ್ರಕೃತಿನಿಯಮಕ್ಕೆ ಒಳಪಟ್ಟಿರುತ್ತದೆ. ಅವರ ಜ್ಞಾನೇಚ್ಛಾಕ್ರಿಯೆಗಳು ಒಂದೊಂದು ಗೊತ್ತಾದ ಹಾದಿಯ ಗುರುತನ್ನು ಮಾಡಿಕೊಂಡು ಆ ಹಾದಿಯಲ್ಲಿಯೇ-ಸಂತೆಗೆ ಬಂಡಿಯನ್ನೆಳೆದುಕೊಂಡುಹೋಗುವ ಎತ್ತುಗಳಂತೆ-ಅಭ್ಯಾಸವಶದಿಂದ ನಡೆಯುವ ಪದ್ಧತಿಯನ್ನು ಮಾಡಿಕೊಂಡುಬಿಟ್ಟಿರುತ್ತವೆ. ಇಂಥಿಂಥ ಕರ್ಮವನ್ನು ಮಾಡಿ ಇಂಥಿಂಥ ಫಲವನ್ನು ಪಡೆಯುವದೆಂಬುದು ಅವರಿಗೆ ಹವ್ಯಾಸವಾಗಿಬಿಟ್ಟಿರುತ್ತದೆ. ನಿಜವಾದ ಸ್ವಾತಂತ್ರ್ಯವನ್ನು ಪಡೆದುಕೊಳ್ಳಬೇಕೆಂಬ ಔತ್ಸುಕ್ಯವೇನೋ ಕೆಲವರಿಗೆ ಆಗಾಗ್ಗೆ ಮೊಳೆತುಕೊಳ್ಳುತ್ತಿರುತ್ತದೆ; ಆದರೆ ಅಭ್ಯಾಸವು ಆ ಔತ್ಸುಕ್ಯವನ್ನು ಚಿವುಟಿಹಾಕಿ ಅವರನ್ನು ಮತ್ತೂ ತನ್ನ ಕಡೆಗೇ ಎಳೆದುಕೊಳ್ಳುತ್ತಿರುತ್ತದೆ.

ಮನಸ್ಸು ಇಂದ್ರಿಯಗಳಿಗೆ ಅಡಿಯಾಳು, ಇಂದ್ರಿಯಗಳು ವಿಷಯಗಳಿಗೆ ಅಡಿಯಾಳುಗಳು-ಹೀಗಿರುವದೇ ಪ್ರಾಕೃತರ ಸ್ವಭಾವವು. ಆದ್ದರಿಂದ ನಿಜವಾದ ಸ್ವಾತಂತ್ರ್ಯವನ್ನು ಪಡೆದುಕೊಳ್ಳಬೇಕೆಂಬ ಇಚ್ಛೆಯು ಪ್ರಬಲವಾಗಿದ್ದರೆ ಇಂದ್ರಿಯಗಳು ವಿಷಯಗಳಿಗೆ ವಶವಾಗದಂತೆಯೂ ಮನಸ್ಸು ಇಂದ್ರಿಯಗಳ ವಶವಾಗದಂತೆಯೂ ನೋಡಿಕೊಳ್ಳುವದು ಮೊದಲನೆಯ ಕರ್ತವ್ಯವಾಗುತ್ತದೆ. ಭಗವಂತನು ಅರ್ಜುನನಿಗೆ ಹೇಳಿರುವ ಉಪದೇಶದಲ್ಲಿ "ಇಂದ್ರಿಯಗಳು ತಮ್ಮ ತಮ್ಮ ವಿಷಯಗಳಲ್ಲಿ ಸಂಚರಿಸುತ್ತಿರುವಾಗ ಅವುಗಳನ್ನೇ ಬೆಂಬಿಡಿದು ಮನಸ್ಸುಹೋಗುವಂತೆ ಹರಿಯಬಿಡುವದೇ ನಿಜವಾದ ತಿಳಿವಳಿಕೆಯನ್ನು ಕಳೆದುಕೊಳ್ಳುವದಕ್ಕೆ ಕಾರಣವು; ಕಡಲಿನಲ್ಲಿರುವ ದೋಣಿಯನ್ನು ಬಿರುಗಾಳಿಯು ಕಂಡಕಡೆಗೆ ಒಯ್ಯುವಂತೆ ಸಾಧಕನ ತಿಳಿವಳಿಕೆಯನ್ನು ಇದೇ ಚದರಿಸುವದು" ಎಂದಿರುತ್ತಾನೆ. ಆದ್ದರಿಂದ ಸಾಧಕನು ಇಂದ್ರಿಯಗಳನ್ನು ಹರಿಯಬಿಡದಂತೆ ನೋಡಿಕೊಳ್ಳಬೇಕು; ಮನಸ್ಸು ಅವುಗಳನ್ನು ಹಿಂಬಾಲಿಸದಂತೆ ನೋಡಿಕೊಳ್ಳಬೇಕು. ಈ ವಿಷಯದಲ್ಲಿ ಭಗವಂತನ ಉಪದೇಶವೇನೆಂದರೆ :

**ಯತತೋ ಹ್ಯಪಿ ಕೌನ್ತೇಯ ಪುರುಷಸ್ಯ ವಿಪಶ್ಚಿತಃ ।**
**ಇನ್ದ್ರಿಯಾಣಿ ಪ್ರಮಾಥೀನಿ ಹರನ್ತಿ ಪ್ರಸಭಂ ಮನಃ ॥**
**ತಾನಿ ಸರ್ವಾಣಿ ಸಂಯಮ್ಯ ಯುಕ್ತ ಆಸೀತ ಮತ್ಪರಃ ॥** – ಗೀ. 2-60, 61

"ಎಂಥ ವಿವೇಕಿಗಾದರೂ ಇಂದ್ರಿಯಗಳು ವಿಷಯದ ಕಡೆಗೇ ಒಲಿಯುತ್ತಿರುವವು; ಅವನು ಪ್ರಯತ್ನಪೂರ್ವಕವಾಗಿ ಅವನ್ನು ಹಿಂಜಗ್ಗಿಸಿದರೂ ಅವು ಕೊಸರಿಕೊಂಡು ಅವನ ಮನಸ್ಸನ್ನು ಕಡೆದು ಕಲಕಿ ಅವನು ನೋಡುತ್ತಿರು

ವಂತೆಯೇ ಬಲಾತ್ಕಾರದಿಂದ ಅದನ್ನು ಎಳೆದುಕೊಂಡು ಹೋಗಿಬಿಡುವವು; ಅವನ್ನೆಲ್ಲ ಬಿಗಿಹಿಡಿದುಕೊಂಡು ಚಿತ್ತವನ್ನು ಸಮಾಧಾನಸ್ಥಿತಿಗೆ ತಂದುಕೊಂಡು ಭಗವಂತನಾದ ನನ್ನಲ್ಲಿಯೇ ತಾತ್ಪರ್ಯವುಳ್ಳವನಾಗಿರಬೇಕು".

ಮನುಷ್ಯನಿಗೆ ಏಕಾಂತವಾಸದ ಸುಖವು ದೊರಕುವ ರೀತಿಯನ್ನು ಈ ಶ್ಲೋಕಗಳಲ್ಲಿ ತಿಳಿಯಿಸಿಕೊಟ್ಟಿರುತ್ತದೆ. ಸಾಮಾನ್ಯವಾಗಿ ಜನರು ಏಕಾಂತವಾಸ ವೆಂದರೆ ಅಂಜುತ್ತಾರೆ. ಅವರಿಗೆ ಜೊತೆಯಲ್ಲಿ ಯಾರಾದರೂ ಒಬ್ಬರಿದ್ದರೇ ಧೈರ್ಯ, ಉಲ್ಲಾಸ, ಸುಖ. ನಿಜವಾದ ಧೈರ್ಯವೂ ಉಲ್ಲಾಸವೂ ಸುಖವೂ ಏಕಾಂತವಾಗಿರುವದರಲ್ಲಿದೆ ಎಂಬುದನ್ನು ಅರಿತುಕೊಂಡಿರುವವರ ಸಂಖ್ಯೆ ಬಹಳ ಕಡಿಮೆ. ಮನಸ್ಸಿಗೆ ಧೈರ್ಯವೂ ಉಲ್ಲಾಸವೂ ಸುಖವೂ ಬರಬೇಕಾದರೆ ಅದಕ್ಕೆ ಎರಡನೆಯ ಜನರಿಂದಲೂ ಪ್ರಾಣಿಗಳಿಂದಲೂ ವಸ್ತುಗಳಿಂದಲೂ ಆಗುವ ಅಂಜಿಕೆಯೂ ವಿಕ್ಷೇಪವೂ ದುಃಖವೂ ಮೊದಲು ತೊಲಗಬೇಕು. ಎರಡನೆಯ ವಸ್ತುವಿನಿಂದ ನಮಗೆ ಸಹಜವಾಗಿಯೇ ಅಂಜಿಕೆಯಾಗುತ್ತದೆ; ಯಾರನ್ನು ಹೊಸಬರೆಂದೂ ಅಪರಿಚಿತರೆಂದೂ ನಾವು ಎಣಿಸುವೆವೋ ಅವರ ಸಹವಾಸದಲ್ಲಿ ನಮಗೆ ಎಂದಿಗೂ ಧೈರ್ಯವುಂಟಾಗಲಾರದು. ಆದರೆ ಯಾರು ನಮಗೆ ಚಿರಪರಿಚಿತರೋ ಯಾರ ಹೃದಯವು ನಮ್ಮ ಹೃದಯದೊಡನೆ ಸಮರಸವಾಗಿ ಬೆರೆಯಬಲ್ಲದೋ ಅವರ ಜೊತೆಯಲ್ಲಿರುವಾಗ ನಮಗೆ ಧೈರ್ಯವುಂಟಾಗುತ್ತದೆ. ಅಲ್ಲವೆ? ಏಕತ್ವವೇ ಧೈರ್ಯಕ್ಕೆ ಹೇತು, ಸದ್ವಿತೀಯತ್ವವೇ ಭಯಕ್ಕೆ ಹೇತು– ಎಂಬುದು ಈ ಅನುಭವದಿಂದ ಏರ್ಪಡುತ್ತದೆ. ಮನುಷ್ಯನು ಹೊರಮುಖವಾಗಿರುವ ಅರಿವಿನಿಂದ ಕೂಡಿರುವವರೆಗೂ ಅವನಿಗೆ ಅನೇಕರ ಸಂಬಂಧವು ತಪ್ಪಿದ್ದಲ್ಲ. ಯಾರೂ ಇಲ್ಲದ ಒಂದು ನದಿಯ ದಂಡೆಯಮೇಲೆ, ಅಥವಾ ಒಂದು ಹಸಲೆಯಮೇಲೆ ಕುಳಿತು ಅನಂತವಾದ ಆಕಾಶವನ್ನೂ ಸುತ್ತಲೂ ಇರುವ ವನಸೌಂದರ್ಯವೇ ಮುಂತಾದ ದೃಶ್ಯವನ್ನೂ ನೋಡುತ್ತಿದ್ದರೆ ನಮ್ಮ ಮನಸ್ಸು ತನ್ನಲ್ಲಿ ತಾನು ನಿಲ್ಲುವದು; ಹೊರಗಿನ ಹಲವು ದೃಶ್ಯಗಳಿಂದ ಹರಿದಾಡುವ ಇಂದ್ರಿಯಗಳೂ ಆಗ ನೆಮ್ಮದಿಯಿಂದ ನೆಲೆನಿಲ್ಲುವವು; ಆಗ ನಮಗೆ ಏಕಾಂತದ ಬೆಲೆಯು ಒಂದಿಷ್ಟು ಗೊತ್ತಾಗುವದು. ನಿಜವಾದ ಧೈರ್ಯ, ನಿಜವಾದ ಉಲ್ಲಾಸ, ನಿಜವಾದ ಸುಖ–ಎಂದರೇನು? ಎಂಬುದರ ಕಲ್ಪನೆಯು ಒಂದಿಷ್ಟು ನಮ್ಮ ಮುಂದೆ ಮಿಂಚುವದು ಆಗಲೇ.

ಮನಸ್ಸು ಇಂದ್ರಿಯಗಳ ಸ್ನೇಹದಲ್ಲಿರುವವರೆಗೆ ಹೊರಮುಖವಾಗಿ ಹರಿದಾಡು ವದು ಅದಕ್ಕೆ ಎಂದಿಗೂ ತಪ್ಪದು. ಇಂದ್ರಿಯಗಳು ಅನೇಕವಾಗಿರುತ್ತವೆ, ಅವುಗಳಿಗೆ ವಿಷಯವಾಗಿರುವ ವಸ್ತುಗಳ ಒಳಭೇದಗಳಂತೂ ಅನಂತವಾಗಿರುತ್ತವೆ. ಆದ್ದರಿಂದ

ಇಂದ್ರಿಯಾನುಸಾರಿಯಾದ ಮನಸ್ಸೆಂದರೆ ಕ್ಷಣಕ್ಕೆ ಸಾವಿರಾರು ಬಗೆಯ ಅಲೆಗಳೇ ರುವ ಒಂದು ಮಹಾಸಾಗರವೆಂದು ಭಾವಿಸಬೇಕು. ಆ ಅಮಿತಸಂಖ್ಯೆಯ ತರಂಗ ಗಳೇ ಮನಸ್ಸಿನ ವೃತ್ತಿಗಳು. ಈ ವೃತ್ತಿಗಳಿಂದಾಗುವ ವಿಚಿತ್ರವಿಕ್ಷೇಪದಿಂದ ಪ್ರಾಕೃತರಿಗೆ ಎಂದಿಗೂ ಬಿಡುಗಡೆಯಿಲ್ಲ; ಆದ್ದರಿಂದ ಅವರಿಗೆ ಏಕಾಂತದಿಂದಾಗುವ ಸುಖವು ಸ್ವಪ್ನದಲ್ಲಿಯೂ ದೊರಕುವಂತಿರುವದಿಲ್ಲ. ನಿಜವಾದ ಏಕಾಂತವಾಸದ ಸುಖವನ್ನು ಕಾಣಬೇಕಾದರೆ ಪ್ರತಿಯೊಬ್ಬನೂ ತನ್ನೊಳಕ್ಕೆ ತಾನು ಹಿಂಜರಿಯಬೇಕು ಎಂಬುದರ ತತ್ತ್ವವು ಈ ಅನುಭವವನ್ನು ಅವಲಂಬಿಸಿರುತ್ತದೆ. ಯೋಗಿಗಳೆಲ್ಲರೂ ಈ ತತ್ತ್ವವನ್ನೇ ಅವಲಂಬಿಸಿ ಆಧ್ಯಾತ್ಮಿಕಸಾಧನವನ್ನು ಅಭ್ಯಾಸಮಾಡುತ್ತಿರುತ್ತಾರೆ. ಪ್ರಕೃತಿಯು ನಾನಾತ್ವದ ನಂದನವನವು; ಪ್ರಕೃತಿಯಲ್ಲಿ ವೈಚಿತ್ರ್ಯವೇ ಸುಖದಾಯಕವು. ವೈಚಿತ್ರ್ಯವನ್ನು ಮೆಚ್ಚುವದಕ್ಕೆ ಇಂದ್ರಿಯಗಳ ಸಹಾಯವೇ ಬೇಕು. ಆದರೆ ಏಕತ್ವಕ್ಕೆ ಪುರುಷನೇ ಮೂಲವು; ಪುರುಷನಲ್ಲಿ ಏಕಾಂತವೇ ಸುಖದಾಯಕವು. ಏಕಾಂತವನ್ನು ಮೆಚ್ಚುವದಕ್ಕೆ ಇಂದ್ರಿಯಗಳನ್ನೂ ಸಂಕಲ್ಪ ವಿಕಲ್ಪಾತ್ಮಕಮನಸ್ಸನ್ನೂ ಮೀರಿದ ಬುದ್ಧಿಯೇ ಬೇಕು. ಆದ್ದರಿಂದ ಯೋಗಿಗಳಾದವರು ಏಕಾಗ್ರವಾದ ಬುದ್ಧಿಯನ್ನು ಉಪಯೋಗಿಸಿ ಕೊಂಡು ಏಕಾಂತದ ಅತೀಂದ್ರಿಯಸುಖವನ್ನು ಸಂಪಾದಿಸಿಕೊಳ್ಳುವರು.

ಪ್ರಕೃತಿಯು ನಾನಾತ್ವವನ್ನು ಪ್ರದರ್ಶಿಸುವದಾದರೂ ಏಕತ್ವಕ್ಕೆ ವಿರೋಧಿಯಲ್ಲ. ಯಾರು ನಾನಾತ್ವವನ್ನೇ ಬಯಸುವರೋ ಅಂಥ ಪ್ರಾಕೃತರಿಗೆ ಬೇಸರವಿಲ್ಲದೆ ನಾನಾತ್ವವನ್ನು ಸೃಷ್ಟಿಸಿ ಅವರನ್ನು ಬೆರಗುಗೊಳಿಸುವದಕ್ಕೆ ಪ್ರಕೃತಿಗೆ ಯಾವ ಆಯಾಸವೂ ಆಗುವದಿಲ್ಲ. ಆದರೆ ಯಾರಿಗೆ ಏಕಾಂತದ ಸುಖವೇ ಬೇಕೋ ಅವರಿಗೆ ಅದೇ ಪ್ರಕೃತಿಯಲ್ಲಿಯೇ ಸಾಧನವು ದೊರಕುತ್ತದೆ. ಪ್ರಕೃತಿಯಲ್ಲಿ ಕಾಣಬರುವ ವಿಶಾಲವಾದ ಹಸಲೆಯ ಮೈದಾನಗಳೂ ಬಗೆಬಗೆಯ ವನಸ್ಪತಿ ಗಳಿಂದ ಕಂಗೊಳಿಸುವ ವನಗಳೂ ಉನ್ನತವಾಗಿರುವ ಪರ್ವತಶಿಖರಗಳೂ ನಿಶ್ಶಬ್ದ ವಾಗಿರುವ ಗುಹಾಲಯಗಳೂ ಮಂಜುಲವಾದ ಕಮಲಾದಿಗಳಿಂದ ಕಂಗೊಳಿಸುವ ಪುಷ್ಕರಣಿಗಳೂ, ನದಿಗಳಲ್ಲಿ ಅಲ್ಲಲ್ಲಿ ಕಾಣಬರುವ ತಂಪಾದ ಮಳಲೊಟ್ಟಿಲುಗಳೂ ಇಂಥ ಸಹಾಯಕಸಾಮಗ್ರಿಗಳಲ್ಲಿ ಕೆಲವು. ಸಾತ್ತ್ವಿಕಚಿತ್ತದವರಾದ ಯೋಗಿಗಳು ಇಂಥ ಸಾಧನಸಂಪತ್ತಿಯನ್ನು ಉಪಯೋಗಿಸಿಕೊಂಡು ಏಕಾಂತಸುಖವನ್ನು ಅನುಭವಿಸುವರು. ಶರೀರ, ಪ್ರಾಣ, ಇಂದ್ರಿಯಗಳು, ಮನಸ್ಸು–ಇವು ಹೊರಕ್ಕೆ ಇಣಿಕಿನೋಡಿ ಪ್ರಕೃತಿಯ ನಾನಾತ್ವದ ವೈಭವವನ್ನು ಕಾಣುವದಕ್ಕೆ ಸಾಧನಗಳಾಗಿರು ವಂತೆಯೇ ತನ್ನೊಳಕ್ಕೆ ತಾನು ಇಳಿದು ಪರಿಪೂರ್ಣವಾದ ಏಕತ್ವವನ್ನು ಕಂಡುಕೊಂಡು ಆನಂದಿಸುವದಕ್ಕೂ ದ್ವಾರವಾಗಿರುತ್ತವೆ. ನಮಗೆ ವಾಯುವು ಬೇಕಾದರೆ, ಅಥವಾ ಹೊರಗಿನ ದೃಶ್ಯದ ನೋಟವು ಬೇಕಾದರೆ, ಮನೆಯ ಕಿಟಕಿಗಳನ್ನು ನಾವು

ಹಾರುಹೊಡೆಯುವೆವು; ಅದಕ್ಕೆ ಬದಲು ಹೊರಗಿನ ಚಳಿಮಳೆಗಳ ಕಾಟವು ತಪ್ಪಬೇಕೆಂಬ ಇಚ್ಛೆಯು ನಮಗೆ ಬೇಕಾದರೆ ಅದೇ ಕಿಟಕಿಗಳನ್ನೇ ಮುಚ್ಚಿಬಿಡುವೆವು. ಅಲ್ಲವೆ? ಇದರಂತೆ ನಮಗೆ ಬಾಹ್ಯದೃಶ್ಯಗಳ ವಿಲಾಸವು ಬೇಕಿಲ್ಲವಾದರೆ ನಾವು ನಮ್ಮ ಶರೀರವನ್ನು ಅಲುಗಾಡದಂತೆ ಸ್ಥಿರ ಸುಖವಾದ ಆಸನದಲ್ಲಿ ನಿಲ್ಲಿಸಿ ಕೊಳ್ಳಬೇಕು, ಇಂದ್ರಿಯಗಳನ್ನು ಹೊರಕ್ಕೆ ಹರಿಯ ದಂತೆ ಅವುಗಳ ದ್ವಾರವನ್ನು ಮುಚ್ಚಿಬಿಡಬೇಕು, ಮನಸ್ಸು ಅವುಗಳ ಕಡೆಗೆ ಓಡದಂತೆ ತಡೆದುಕೊಂಡು ಬಿಡಬೇಕು. ಶರೀರದ ಬಗೆಬಗೆಯ ವ್ಯಾಪಾರಗಳಿಗೆ ಸಹಾಯಕವಾಗಿರುವ ಪ್ರಾಣ ವಾಯುವನ್ನು ನಮ್ಮೊಳಗೇ ಬಿಗಿಹಿಡಿದು ನಿಲ್ಲಿಸಿಕೊಂಡುಬಿಡಬೇಕು. ಮಟ್ಟವು ಒಂದೇ ಸಮನಾಗಿರುವ ಶುಭ್ರವಾದ ಸ್ಥಲದಲ್ಲಿ ಕುಳಿತು, ತನ್ನ ಇಂದ್ರಿಯಗಳನ್ನೂ ಮನಸ್ಸನ್ನೂ ಹಿಂತಿರುಗಿಸಿಕೊಂಡು ತನ್ನೊಳಕ್ಕೆ ತಾನು ಹಿಂಜರಿಯುವ ವಿದ್ಯೆಯು ಸ್ವಲ್ಪಕಠಿನವೇ ಆದರೂ ಅದರ ಶ್ರಮಕ್ಕೆ ಪ್ರತಿಫಲವಿಲ್ಲದೆ ಇಲ್ಲ. ಪ್ರಕೃತಿಯನ್ನೆಲ್ಲ ತನ್ನ ವಶಕ್ಕೆ ತಂದುಕೊಂಡ ಹರ್ಷ, ಆನಂದರೂಪವಾದ ತನ್ನ ನಿಜವಾದ ಸ್ವರೂಪದಲ್ಲಿ ನಿಲ್ಲುವ ಆನಂದ-ಇವುಗಳ ಪ್ರಾಪ್ತಿಯು ಜಗಜ್ಜೇತೃಗಳೆಂದು ಪ್ರಖ್ಯಾತರಾಗಿರುವ ವೀರರು ಪೌರರ ಸ್ವಾಗತಜಯಘೋಷದಿಂದ ತಮ್ಮತಮ್ಮ ಅರಮನೆಯನ್ನು ಸೇರುವ ಸಂತೋಷದ ನೂರರಷ್ಟು, ಸಾವಿರದಷ್ಟು, ಬೆಲೆಯುಳ್ಳದ್ದಾಗಿರುವದು.

ಏಕಾಂತವೆಂದರೆ ಗಣಿತಶಾಸ್ತ್ರದ ಒಂದೇ ಒಂದು ತತ್ತ್ವವು ಇರುವ ಸಂನಿವೇಶವೆಂದು ತಿಳಿಯಬಾರದು. ತನ್ನೊಳಗೆ ತನ್ನ ನಿಜಸ್ವರೂಪವನ್ನು ತಿಳಿದುಕೊಂಡಾಗ ಇಡಿಯ ಜಗತ್ತನ್ನೇ ತನ್ನೊಳಗೆ ಅಡಕಮಾಡಿಕೊಂಡಿರುವ ಸರ್ವವ್ಯಾಪಕವಾದ ಅದ್ವಿತೀಯ ಸಚ್ಚಿದಾನಂದತತ್ತ್ವವೇ ತನ್ನ ಪರಮಾರ್ಥಸ್ವರೂಪವೆಂಬುದು ಮನದಟ್ಟಾಗುವದು. ಆಗ ಎಲ್ಲೆಲ್ಲಿಯೂ ತಾನೇತಾನಾಗಿರುವ ಅನಂತಪರತತ್ತ್ವವೊಂದೇ ನಿಂತಿರುವದರಿಂದ ಅಲ್ಲಿ ಅಂಜಿಕೆಗೆ ಎಡೆಯಿಲ್ಲ. ದುಮ್ಮಾನಕ್ಕೆ ಕಾರಣ ವಿಲ್ಲ, ದುಃಖಕ್ಕೆ ಅವಕಾಶವಿಲ್ಲ. ಎಲ್ಲಾ ನಾನಾತ್ವವನ್ನೂ ತನ್ನೊಳಗೆ ಅಂತರ್ಭೂತ ವಾಗಿಸಿಕೊಂಡಿರುವ ಅಚಿಂತ್ಯವಾದ ಮೌನದ ಪರಮಾವಧಿಯೇ ಅದಾಗಿರುತ್ತದೆ.

## 44. ಒಳಗಿನ ಏಕಾಂತ-ಮನಸ್ಸಿನ ಸುಸ್ಥಿತಿ

ಮುಮುಕ್ಷುವಾದವನು ಏಕಾಂತದಲ್ಲಿ ಸುಖವಾಗಿ ಕುಳ್ಳಿರುವ ಅಭ್ಯಾಸವನ್ನು ಮಾಡಬೇಕು, ವಿವಿಕ್ತವಾದ ಅರಣ್ಯದಲ್ಲಿ, ನದಿಯ ಮಳಲೊಟ್ಟಿನಲ್ಲಿ, ವಿಶಾಲವಾದ ಬಯಲಿನಲ್ಲಿ, ಬೆಟ್ಟದ ತಪ್ಪಲಲ್ಲಿ, ಯಾರೊಬ್ಬರೂ ಬರುವ ಸಂಭವವಿಲ್ಲದ ಗುಹೆ ಯಲ್ಲಿ, ಗದ್ದಲವಿಲ್ಲದ ದೇವಾಲಯದ ಭಾಗದಲ್ಲಿ-ಇಂಥ ಯಾವದಾದರೊಂದು ವಿಜನದೇಶದಲ್ಲಿ ತಾನೊಬ್ಬನೇ ಸುಖವಾಗಿ ಕುಳಿತು ತನ್ನ ಮನಸ್ಸನ್ನು ತಾನು

ಪರೀಕ್ಷಿಸಿಕೊಳ್ಳಬೇಕು. ಸಂನ್ಯಾಸಿಗಳಾದವರು ಸಹಜವಾಗಿ ಇಂಥ ಸ್ಥಲಗಳಲ್ಲಿ ವಾಸಿಸುತ್ತಾರೆ. ಗೃಹಸ್ಥರಾದವರು ತಮ್ಮತಮ್ಮ ಮನೆಯಲ್ಲಿಯೇ ಒಂದೊಂದು ಧ್ಯಾನದ ಕೋಣೆಯನ್ನು ಗೊತ್ತುಮಾಡಿಕೊಂಡು ಪ್ರತಿದಿನವೂ ಸ್ವಲ್ಪಹೊತ್ತು ಏಕಾಂತ ವಾಗಿರಬಹುದು. ಈ ಕಾಲದಲ್ಲಿ ಜನ ಸಮ್ಮರ್ದವಿಲ್ಲದ, ಗದ್ದಲವಿಲ್ಲದ, ಮನಸ್ಸಿಗೆ ವಿಕ್ಷೇಪವನ್ನು ಕೊಡದಿರುವ, ಸ್ಥಲವನ್ನು ಕಂಡುಕೊಳ್ಳುವದು ಬಹಳ ಕಷ್ಟವಾಗಿರು ತ್ತದೆ. ಆದ್ದರಿಂದ ಇಂಥ ಏಕಾಂತವಾಸವು ಸಿಕ್ಕದವರು ತಾವುತಾವು ಇದ್ದಲ್ಲಿಯೇ ಹೇಗೋ ಏಕಾಂತಪ್ರದೇಶವನ್ನು ಕಲ್ಪಿಸಿಕೊಳ್ಳಬೇಕಾಗುತ್ತದೆ. ಮತ್ತೆ ಯಾವ ಸ್ಥಲವೂ ಸಿಕ್ಕದಿದ್ದರೆ ತಮ್ಮ ಸುತ್ತಲೂ ಒಂದು ಬಟ್ಟೆಯ ತೆರೆಯನ್ನು ಏರ್ಪಡಿಸಿಕೊಂಡು ಏಕಾಂತಸ್ಥಲವನ್ನು ಮಾಡಿಕೊಳ್ಳಬಹುದು.

ಆದರೆ ಹೊರಗಿನ ಏಕಾಂತವಾಸವನ್ನು ಕಂಡುಕೊಂಡರೂ ನಮ್ಮನಮ್ಮ ಒಳಗೆ ಏಕಾಂತವಿರುವದಿಲ್ಲ. ಇಂದ್ರಿಯಗಳು ಅತ್ತಿತ್ತ ಹರಿದಾಡುತ್ತಿರುವವು; ಮನಸ್ಸು ಅವುಗಳನ್ನು ಬೆನ್ನುಹಿಡಿದು ಹೊರಕ್ಕೆ ಹರಿಯುತ್ತಿರುವದು. ಇಂದ್ರಿಯಗಳನ್ನು ಹಿಂದಕ್ಕೆಳೆದು ಕೊಂಡರೂ ಮನಸ್ಸಿನಲ್ಲಿ ಸ್ವಲ್ಪ ಕಾಲದವರೆಗೆ ಬಗೆಬಗೆಯ ವೃತ್ತಿಗಳು ಎದ್ದು ಕೊಳ್ಳುತ್ತಲೇ ಇರುವವು. ಹೀಗೆ ಮನಸ್ಸಿನಲ್ಲಿ ಹಲವು ವೃತ್ತಿಗಳು ಎದ್ದುಕೊಳ್ಳುತ್ತಿರು ವವರೆಗೆ ನಮಗೆ ನಿಜವಾದ ಏಕಾಂತವು ಎಂದಿಗೂ ದೊರೆಯಲಾರದು. ಆದ್ದರಿಂದ ಹೊರಗಿನ ಏಕಾಂತವಾಸಕ್ಕಿಂತಲೂ ನಮ್ಮೊಳಗೆ ಏಕಾಂತವಾಸವನ್ನು ಕಂಡುಕೊಳ್ಳುವದು ಕಷ್ಟತರವಾಗಿರುತ್ತದೆ. ಈ ಏಕಾಂತವಾಸವು ದಕ್ಕುವದು ಹೇಗೆ? ಆ ಏಕಾಂತದಲ್ಲಿ ಸುಖವಾಗಿ ಕುಳ್ಳಿರುವದು ಹೇಗೆ?–ಎಂಬ ಪ್ರಶ್ನೆಯು ಸ್ವಾಭಾವಿಕವಾಗಿ ಎದ್ದುಕೊಳ್ಳುತ್ತದೆ.

ಇದಕ್ಕೆ ಉತ್ತರವನ್ನು ಹಿಂದಿನ ಲೇಖನದಲ್ಲಿ ಆಗಲೆ ಸೂಚಿಸಿರುತ್ತೇನೆ. ಏಕಾಂತ ವೆಂದರೆ ತಾನೊಬ್ಬನೇ ಒಂಟಿಯಾಗಿರುವದು ಎಂದರ್ಥವಲ್ಲ. ನಾವು 'ನಾನು', 'ನಾನು' ಎಂದುಕೊಳ್ಳುತ್ತಿರುವ ವಸ್ತುವನ್ನು ಶಾಸ್ತ್ರಕಾರರು "ಅಹಂ ಪ್ರತ್ಯಯ ಗೋಚರನಾದ ಆತ್ಮನು" ಎಂದು ಕರೆಯುತ್ತಾರೆ. ಈ ನಾನು ಎಂಬ ಆತ್ಮರೂಪಕ್ಕೆ ಅಂತಃಕರಣವೇ ಪ್ರಧಾನವಾದದ್ದು. ಅಂತಃಕರಣವು ಪಡೆಯುತ್ತಿರುವ ಬಗೆಬಗೆಯ ವೃತ್ತಿಗಳಿಂದ ಬಗೆಬಗೆಯ ವಿಕಾರಗಳನ್ನು ಹೊಂದುತ್ತಿರುವದೇ ಈ ಅಹಂಪ್ರತ್ಯಯ ಗೋಚರನ ಸ್ವಭಾವವು. ನಾನು ಎಂಬ ಪ್ರತ್ಯಯವು ನನಗೇ ಆಗುತ್ತದೆ, ಆ ಪ್ರತ್ಯಯಕ್ಕೆ ನಾನೇ ವಿಷಯನು ಎಂಬಿದು ನಮ್ಮೆಲ್ಲರ ಅನುಭವದಲ್ಲಿಯೂ ಇರುತ್ತದೆ. ಅಹಂಪ್ರತ್ಯಯಿಯೂ ಅಹಂಪ್ರತ್ಯಯ ಗೋಚರನೂ ಆಗಿರುವ ಈ ನಮ್ಮ ರೂಪವೇ ನಮಗೆ "ಅನೇಕರ ನಡುವೆ ನಾನೊಬ್ಬನು ಇರುತ್ತೇನೆ; ನನ್ನ ಸುತ್ತಲೂ ಮಿತ್ರ, ಶತ್ರು, ಉದಾಸೀನರು, ಬಂಧುಗಳು–ಮುಂತಾದ ಭಾವದ ಅನೇಕರು ಇರುತ್ತಾರೆ; ಅವರಿಂದ ನನಗೆ ಒಳ್ಳೆಯದೂ ಕೆಡುಕೂ ಆಗುತ್ತಿವೆ"–ಎಂಬ ಭಾವನೆಯನ್ನು

ತಂದೊಡ್ಡಿರುತ್ತದೆ. ಆದ್ದರಿಂದ ಈ ನಾನು ಎಂದಿಗೂ ಮತ್ತೊಬ್ಬರ ಹಂಗಿಲ್ಲದೆ ಇರುವ ಹಾಗಿಲ್ಲ; ಇದಕ್ಕೆ ಅನೇಕರ ಗದ್ದಲವು ಎಂದಿಗೂ ತಪ್ಪಿದ್ದಲ್ಲ. ಅದು ಹೊರಗೆ ಮತ್ತೊಬ್ಬರೊಡನೆ ವ್ಯವಹರಿಸುತ್ತಿದ್ದರೂ ಒಳಗೆ ತನ್ನಮಟ್ಟಿಗೆ ತಾನು ಇದ್ದರೂ ಅದಕ್ಕೆ ನಿಜವಾದ ಏಕಾಂತವಾಸವು ಎಂದಿಗೂ ದಕ್ಕುವಂತಿಲ್ಲ. ಈ ನಾನು ಸುಖವಾಗಿ ಒಂದು ಕಡೆ ಕುಳ್ಳಿರಲೂ ಆರದು. ಏಕೆಂದರೆ ಚಿತ್ತದಲ್ಲಿ ಉಂಟಾಗುತ್ತಿರುವ ಹಲವು ವೃತ್ತಿಗಳು ಇದನ್ನು ಕಂಡಕಡೆಗೆ ಎಳೆದುಕೊಂಡು ಒಯ್ಯುತ್ತಿರುವವು. ಯಾವಲ್ಲಿದ್ದರೂಬ ಹಲವು ವಸ್ತುಗಳ ಸಂಬಂಧವನ್ನು ಮಿಂಚಿನ ವೇಗದಲ್ಲಿ ಪಡೆಯುತ್ತಿರುವದು ಈ ರೂಪದ ಸ್ವಭಾವವು. ಸ್ವಲ್ಪಮಟ್ಟಿಗೆ ವಿಚಾರ ಮಾಡಿದವರಿಗೂ ಇದು ಅನುಭವಕ್ಕೆ ಬಂದಿರುತ್ತದೆ.

ಆದ್ದರಿಂದ ನಿಜವಾದ ಏಕಾಂತವಾಸವು ಬೇಕಾದರೆ, ನಿಜವಾಗಿ ಸುಖದಿಂದ ಒಂದು ಕಡೆ ಕುಳ್ಳಿರಬೇಕೆಂದಿದ್ದರೆ, ಇದಕ್ಕಿಂತ ಹೆಚ್ಚಿನ ಒಂದು ತತ್ತ್ವವನ್ನು ಕಂಡುಕೊಳ್ಳಬೇಕು. ಇದನ್ನೇ 'ಪರಮಾತ್ಮನು' ಎಂದು ವೇದಾಂತಿಗಳು ಕರೆಯುವರು. ದೇಹವೇ ಮುಂತಾದವುಗಳನ್ನು ಅಜ್ಞರು ನಾನು ಎಂದು ಭಾವಿಸಿಕೊಂಡಿರುವದರಿಂದ ಅವೂ ಆಯಾ ದೃಷ್ಟಿಯಿಂದ ಆತ್ಮನೇ ಆಗಿದ್ದರೂ ನಿಜವಾಗಿ ಎಲ್ಲರಿಗೂ ಭಗವಂತನೇ ಆತ್ಮನು; ಅವನು ಲೋಕತ್ರಯವನ್ನು ಪ್ರವೇಶಿಸಿ ಎಲ್ಲದರ ಒಳಗೂ ಇದ್ದುಕೊಂಡು ಎಲ್ಲಕ್ಕೂ ಆಧಾರನಾಗಿರುತ್ತಾನೆ, ಎಲ್ಲವೂ ಆತನ ಆಳ್ವಿಕೆಗೇ ಒಳಪಟ್ಟಿರುತ್ತದೆ ಎಂದು ಉಪನಿಷತ್ತುಗಳಲ್ಲಿ ಹೇಳಿರುತ್ತದೆ. ಆ ಪರಮಾತ್ಮನಲ್ಲಿ ಮನಸ್ಸು ಕುಳಿತರೆ ಅದು ಏಕಾಂತದಲ್ಲಿ ಸುಖವಾಗಿ ಕುಳಿತುಕೊಂಡಂತಾಯಿತು.

ನಾವು ತಿಳಿದಿರಲಿ, ನಾವೆಲ್ಲರೂ ಈ ಪರಮಾತ್ಮನ ಆಧಾರದಿಂದಲೇ ಜೀವಿಸಿಕೊಂಡಿರುವೆವು; ಆತನೇ ನಮಗೆ ಧಾರಕನೂ ಪೋಷಕನೂ ಆಗಿರುತ್ತಾನೆ. ನಮ್ಮ ದೇಹಪ್ರಾಣೇಂದ್ರಿಯಮನಸ್ಸುಗಳಿಗೆ ಬೇಕಾಗಿರುವ ಪೋಷಣಸಾಮಗ್ರಿಯೆಲ್ಲವೂ ಆತನಿಂದಲೇ ಅವಕ್ಕೆ ದೊರೆಯುತ್ತಿರುವದು; ಅವುಗಳ ಸ್ವರೂಪ, ಸ್ಥಿತಿ, ವ್ಯಾಪಾರ–ಎಲ್ಲವೂ ಆತನ ಅನುಗ್ರಹದಿಂದಲೇ ನಡೆಯುತ್ತಿರುವವು. ಆದರೆ ನಾವು ನಾನು ಎಂದು ಕರೆದುಕೊಳ್ಳುತ್ತಿರುವ ರೂಪದಲ್ಲಿ ನಮಗೆ ಅಭಿಮಾನವು ಮಿತಿಮೀರಿ ಇರುವದರಿಂದ ನಮ್ಮನಮ್ಮ ಪ್ರಯತ್ನದಿಂದಲೇ, ನಮ್ಮನಮ್ಮಲ್ಲಿರುವ ಸಾಮರ್ಥ್ಯದಿಂದಲೇ, ನಾವು ಎಲ್ಲಾ ವ್ಯವಹಾರವನ್ನೂ ಸಾಗಿಸಿಕೊಂಡಿರುವೆವೆಂಬ ಹೆಮ್ಮೆಯು ನಮ್ಮನ್ನು ಆವರಿಸಿಕೊಂಡಿರುತ್ತದೆ. ಆದ್ದರಿಂದ ನಮ್ಮ ಪ್ರಯತ್ನಗಳು ಸಫಲವಾಗದೆ ಇರುವಾಗಲೂ ನಮಗೆ ಯಾವದಾದರೂ ಸಂಕಷ್ಟಗಳು ಒದಗಿದಾಗಲೂ ನಾವು ನಮಗೆ ಕೆಲವು ಹೊರಗಿನ ಅಡ್ಡಿಗಳುಂಟಾದವೆಂದೋ, ನಮ್ಮ ಪ್ರಯತ್ನವು ಸಾಕಾದಷ್ಟು ಬಲವಾಗಿ ಆಗಲಿಲ್ಲವೆಂದೋ ಬಗೆಯುವೆವು. ಕಾಲ, ದೇಶ, ನಿಮಿತ್ತ, ಪೌರುಷ,

ಪ್ರತಿಬಂಧಾಭಾವ-ಮುಂತಾದವುಗಳು ಕ್ರಿಯೆಗಳ ಫಲದ ಪ್ರಾಪ್ತಿಗೆ ಅವಶ್ಯವೆಂಬುದು ಸಾಮಾನ್ಯನಿಯಮವೇ ಸರಿ. ಆದರೆ ಈ ಕಾಲಾದಿಗಳು ಸುಮುಖವಾಗುವದಕ್ಕೆ ಅವಕ್ಕೆಲ್ಲಕ್ಕೂ ಜೀವಕಳೆಯನ್ನು ಕೊಡುವ ಪರತರವಾದ ಒಂದಾನೊಂದು ತತ್ತ್ವವಿದೆ ಎಂಬುದನ್ನು ಮಾತ್ರ ನಾವು ಮರೆತಿರುತ್ತೇವೆ. ಅದರ ನೆನಪನ್ನು ತಂದುಕೊಳ್ಳುವದಕ್ಕೆ ನಾವು ಬಾರಿಬಾರಿಗೂ ಏಕಾಂತವಾಸವನ್ನು ಮಾಡುವದು-ಎಂದರೆ ವಿವಿಕ್ತವಾದ ವಾತಾವರಣದಲ್ಲಿದ್ದುಕೊಂಡು ನಮ್ಮ ಇಂದ್ರಿಯಗಳನ್ನು, ಮೆಲ್ಲಮೆಲ್ಲಗೆ ಹಿಂಜಗ್ಗಿ ಮನಸ್ಸನ್ನು ಪರಮಾತ್ಮನಲ್ಲಿಟ್ಟು ಕೊಳ್ಳುವದು-ಬಹಳವಾಗಿ ಸಹಾಯವನ್ನು ಮಾಡುತ್ತದೆ.

ಸಿಕ್ಕಿದಷ್ಟು ವಿವಿಕ್ತವಾಗಿರುವ ಪ್ರದೇಶದಲ್ಲಿ ಕುಳಿತುಕೊಳ್ಳಬೇಕು. ಆ ಪ್ರದೇಶವು ಮಟ್ಟಸವಾಗಿದ್ದು, ಸ್ವಭಾವದಿಂದಲೇ ಆಗಲಿ ನಮ್ಮ ಪ್ರಯತ್ನದಿಂದಲೇ ಆಗಲಿ ಶುಚಿಯಾಗಿರುವಂತೆ ನೋಡಿಕೊಳ್ಳಬೇಕು. ಅಲ್ಲಿ ಸುಖದಿಂದ ಆದಷ್ಟು ಹೊತ್ತು ಒಂದೇ ಆಸನದಲ್ಲಿ ಕುಳಿತುಕೊಳ್ಳುವದಕ್ಕೆ ಅನುಕೂಲವಾಗಿರುವಂತೆ ಬಹಳ ಗಟ್ಟಿಯೂ ಅಲ್ಲದ ಬಹಳ ಮೆದುವೂ ಅಲ್ಲದ, ಬಹಳ ಎತ್ತರವೂ ಅಲ್ಲದ ಬಹಳ ತಗ್ಗೂ ಅಲ್ಲದ, ಆಸನವನ್ನು ಮಾಡಿಕೊಳ್ಳಬೇಕು. ಸುತ್ತುಮುತ್ತಲಿನ ದೃಶ್ಯಗಳು ನಮ್ಮ ಮನಸ್ಸಿಗೆ ಚಾಂಚಲ್ಯ, ಅಂಜಿಕೆ, ಅನವಶ್ಯವಾದ ಕುತೂಹಲ-ಮುಂತಾದ ಅನಿಷ್ಟಭಾವನೆಗಳನ್ನು ಎಬ್ಬಿಸದಂತೆ ಇರಬೇಕು. ಹೀಗೆ ದೊರಕಿದಷ್ಟುಮಟ್ಟಿಗೆ ಬಾಹ್ಯೋಪಕರಣಗಳನ್ನು ದೊರಕಿಸಿಕೊಂಡ ಬಳಿಕ, ಮನಸ್ಸನ್ನು ಪರಮಾತ್ಮನ ಕಡೆಗೆ ತಿರುಗಿಸಿ, ಅವನಲ್ಲಿಯೇ ನಿಲ್ಲಿಸಿಕೊಳ್ಳುವದಕ್ಕೆ ಪ್ರಯತ್ನಮಾಡಬೇಕು.

ಶರೀರವನ್ನು ನೆಟ್ಟಗೆ ಅಲುಗಾಡದಂತೆ ನಿಲ್ಲಿಸಿಕೊಂಡು, ದೃಷ್ಟಿಯು ಚದುರದಂತೆ ಮಾಡಿಕೊಂಡು ಪ್ರಾಣಾಯಾಮಾದಿಗಳಿಂದ ಮನಸ್ಸನ್ನು ವಶಕ್ಕೆ ತಂದುಕೊಳ್ಳಬೇಕು ಎಂದು ಬಲ್ಲವರು ಬೋಧಿಸಿರುತ್ತಾರೆ. ಆದರೆ ಗೀತೆಯಲ್ಲಿ ಹೇಳಿರುವ ಕೆಲವು ಅಂತರಂಗಸಾಧನಗಳು ಇಲ್ಲಿ ಲಕ್ಷ್ಯದಲ್ಲಿಡತಕ್ಕವಾಗಿರುತ್ತವೆ.

**ಪ್ರಶಾನ್ತಾತ್ಮಾ ವಿಗತಭೀರ್ಬ್ರಹ್ಮಚಾರಿವ್ರತೇ ಸ್ಥಿತಃ ।**
**ಮನಃ ಸಂಯಮ್ಯ ಮಚ್ಚಿತ್ತೋ ಯುಕ್ತ ಆಸೀತ ಮತ್ಪರಃ ॥**

ಮನಸ್ಸು ಹರಿದಾಡದಂತೆ ಶಾಂತಿಯನ್ನು ಕಾಪಾಡಿಕೊಂಡು ಏತರ ಅಂಜಿಕೆಯೂ ಇಲ್ಲದಂತಿರಬೇಕು. ಬ್ರಹ್ಮಚರ್ಯೆಯಿಂದ ಇಂದ್ರಿಯಗಳನ್ನು ಸ್ವಾಧೀನಕ್ಕೆ ತಂದು ಕೊಂಡಿರಬೇಕು. ಮನಸ್ಸಿನ ವೃತ್ತಿಗಳನ್ನೆಲ್ಲ ಹಿಂದಕ್ಕೆಳೆದುಕೊಳ್ಳಬೇಕು. ಪರಮಾತ್ಮ ನಲ್ಲಿಯೇ ಚಿತ್ತವನ್ನಿಟ್ಟುಕೊಂಡಿರಬೇಕು. ಪರಮಾತ್ಮನೇ ಎಲ್ಲಕ್ಕಿಂತಲೂ ಪರಗತಿ ಎಂಬ ಭಾವವನ್ನು ಅಳವಡಿಸಿಕೊಳ್ಳಬೇಕು. ಹೀಗೆ ಮಾಡುತ್ತಿದ್ದರೆ ಕೊನೆಗೆ ಬ್ರಹ್ಮಾನಂದವನ್ನು ಕೊಡುವ ಪರಮೋಪರತಿಯು ದೊರಕುವದು.

ಮನಸ್ಸನ್ನು ಸುಸ್ಥವಾಗಿರಿಸಿಕೊಳ್ಳುವದಕ್ಕೆ ಪರಮಾತ್ಮನೊಬ್ಬನೇ ಸ್ಥಾನವು; ಆ ಪರಮಾತ್ಮನಲ್ಲಿಯೇ ಪರತರಶಾಂತಿಯು ದೊರಕತಕ್ಕದ್ದು, ಅವನಲ್ಲಿಯೇ ಅತೀಂದ್ರಿಯವಾದ ಪರಮಸುಖವೂ ದೊರಕತಕ್ಕದ್ದು ಎಂಬಿದು ಗೀತೋಪದೇಶದ ಸಾರವು. ಇದರ ಅಭಿಪ್ರಾಯವನ್ನು ಮುಮುಕ್ಷುಗಳಾದವರು ಮನದಂದುಕೊಳ್ಳಬೇಕು. ಮನಸ್ಸನ್ನು ಸಮಾಧಾನವಾಗಿರಿಸಿಕೊಳ್ಳುವದಕ್ಕೆ ನಾನು ಪ್ರಯತ್ನಿಸಿದಷ್ಟೂ ಅದು ಹರಿದಾಡುತ್ತಿರುತ್ತದೆ; ಅದನ್ನು ಚದರಿಸುವ ವೃತ್ತಿಗಳನ್ನು ಹಿಡಿತಕ್ಕೆ ತಂದುಕೊಳ್ಳುವದಕ್ಕೆ ಪ್ರಯತ್ನಮಾಡಿದಷ್ಟೂ ಆ ವೃತ್ತಿಗಳ ವೇಗವು ಹೆಚ್ಚುತ್ತಿರುತ್ತದೆ. ಹಾಗಾದರೆ ನಾವು ಮನಸ್ಸನ್ನು ಹೇಗೆ ನಿಲ್ಲಿಸಿಕೊಳ್ಳಬೇಕು?–ಎಂದು ಸಾಧಕರು ಆಗಾಗ್ಗೆ ಕೇಳುವರು. ಇದಕ್ಕೆ ಉತ್ತರವು ಒಂದೇ ಒಂದು. ಪರಮಾತ್ಮನೇ ಎಲ್ಲಕ್ಕೂ ಆಧಾರವಾಗಿ, ಎಲ್ಲಕ್ಕೂ ಸತ್ತ್ವವನ್ನೂ ಸ್ಥಿತಿಯನ್ನೂ ಪ್ರವೃತ್ತಿಯನ್ನೂ ಕೊಡುವದಕ್ಕೆ ಕಾರಣವಾಗಿರುವವನು, ನಾವು ಇಂದ್ರಿಯಗಳ ಅಥವಾ ಮನಸ್ಸಿನ ವೃತ್ತಿಗಳಲ್ಲಿ ತಾದಾತ್ಮ್ಯವನ್ನು ಹೊಂದಿದಷ್ಟೂ ನಮಗೆ ಹರಿದಾಟವು ಹೆಚ್ಚುವದು. ಆದರೆ ಈ ವ್ಯಾಪಾರಗಳನ್ನು ನೋಡುತ್ತಾ ಪ್ರೇಕ್ಷಕರಾಗಿರುವದನ್ನು ಅಭ್ಯಾಸಮಾಡಬೇಕು. ನಾಟಕರಂಗಸ್ಥಲಗಳಲ್ಲಿ ಥರದೆಗಳು ಬೀಳುವದು ಏಳುವದು; ಪಾತ್ರಗಳು ಬರುವದು, ಅಭಿನಯಿಸುವದು, ಮತ್ತೆ ಥರದೆಯ ಹಿಂದಕ್ಕೆ ಹೋಗುವದು–ಇವುಗಳನ್ನು ತಟಸ್ಥನಾಗಿ ನೋಡುತ್ತಿರುವವನು ತಾನು ನಿಜವಾಗಿ ಹೇಗೆ ಈ ಯಾವ ಆಗುಹೋಗುಗಳಿಗೂ ಆಶ್ರಯನಾಗದೆ ಇರುವನೋ ಹಾಗೆ ನಾವೂ ಇಂದ್ರಿಯಗಳ ಮತ್ತು ಮನಸ್ಸಿನ ಕುಣಿತಗಳನ್ನೂ ಬರವುಹೋಗುಗಳನ್ನೂ ನೋಡುತ್ತಿರುವದರಿಂದ ನಮಗೆ ಅವುಗಳ ಯಾವ ವ್ಯಾಪಾರವೂ ಅಂಟುವದಿಲ್ಲವೆಂಬ ಅರಿವು ಮೆಲ್ಲಮೆಲ್ಲಗೆ ಆಗುವದು. ಅಥವಾ ನಾಟಕವನ್ನು ನೋಡುವ ಪ್ರೇಕ್ಷಕನ ದೃಷ್ಟಾಂತಕ್ಕಿಂತಲೂ ನಾಟಕರಂಗದಲ್ಲಿ ಬೆಳಗುತ್ತಿರುವ ದೀಪದ ದೃಷ್ಟಾಂತವನ್ನು ಇಲ್ಲಿ ಉದಾಹರಿಸುವದು ವಿಷಯವನ್ನು ಇನ್ನಷ್ಟು ವಿಶದೀಕರಿಸಬಹುದು. ಏಕೆಂದರೆ ಪ್ರೇಕ್ಷಕನು ರಸಿಕನಾಗಿದ್ದರೆ ಆಯಾ ಪಾತ್ರಗಳ ಮಾತು, ಗೀತ, ನರ್ತನ, ಅಭಿನಯ–ಮುಂತಾದವುಗಳನ್ನು ತನ್ನ ಹೃದಯದಲ್ಲಿಯೂ ಅನುಭವಿಸುತ್ತಿರುವದರಿಂದ ಅದಷ್ಟುಮಟ್ಟಿಗೆ ಅವನೂ ಏರುಪೇರುಗಳನ್ನು ಹೊಂದುತ್ತಲೇ ಇರುತ್ತಾನೆ; ಆದರೆ ದೀಪವು ಹಾಗಲ್ಲ; ಆಡುವ ಪಾತ್ರಗಳು, ಏಳುತ್ತಿರುವ ಬೀಳುತ್ತಿರುವ ಥರದೆಗಳು, ಅವುಗಳಲ್ಲಿ ಚಿತ್ರಿಸಿರುವ ವಿವಿಧದೃಶ್ಯಗಳು, ಇವೆಲ್ಲವನ್ನೂ ನೋಡಿ ರಸವನ್ನನುಭವಿಸುವ ಪ್ರೇಕ್ಷಕವೃಂದ–ಇವುಗಳೆಲ್ಲವನ್ನೂ ತನ್ನ ಪ್ರಕಾಶದಿಂದ ಒಂದೇ ಸಮನೆ ಬೆಳಗುತ್ತಿದ್ದರೂ ತಾನು ಮಾತ್ರ ತನ್ನ ಬೆಳಕಿನ ಸ್ವಭಾವದಿಂದಲೇ ಇರುವದೇ ಹೊರತು ಯಾವದೊಂದರ ವಿಕಾರಗಳನ್ನೂ ತಾನು ಹೊಂದುತ್ತಿರುವದಿಲ್ಲ. ಇಂಥ ಬೆಳಕು ತನ್ನ ಆತ್ಮನೇ ಆಗಿದ್ದು

ಹೊರಗಿನ ವಿಷಯಗಳು ಅವುಗಳನ್ನು ವಿಶೇಷರೂಪದಿಂದ ಅರಿಯುತ್ತಿರುವ ಇಂದ್ರಿಯಗಳು, ಆ ಇಂದ್ರಿಯಗಳ ಮೂಲಕ ಹರಿಯುತ್ತಿರುವ ಮನೋವೃತ್ತಿಗಳು-ಇವೆಲ್ಲವನ್ನೂ ಒಂದೇ ಸಮನೆ ಪ್ರಕಾಶಿಸುತ್ತಿರುವ ಕೂಟಸ್ಥಸಾಕ್ಷಿಯಾಗಿರುತ್ತದೆ ಎಂಬುದನ್ನು ಮನಸ್ಸಿಗೆ ತಂದುಕೊಳ್ಳಬೇಕು. ಆಗ ಮನಸ್ಸು ಅನಾಯಾಸದಿಂದ ಸಮಾಧಾನವನ್ನು ಪಡೆದು ಏಕಾಂತವಾಸದ ಸುಖವನ್ನೂ ಪರಮಶಾಂತಿಯನ್ನೂ ಅನಾಯಾಸವಾಗಿ ಕಂಡುಕೊಳ್ಳುತ್ತದೆ.

ಭಗವಚ್ಚಿತ್ತನಾಗಿಯೂ ಭಗವತ್ಪರನಾಗಿಯೂ ಇರುವದೇ ಮನಃಸಮಾಧಾನವನ್ನು ಪಡೆಯುವದಕ್ಕೂ ಏಕಾಂತವಾಸದ ಸುಖವನ್ನು ಪಡೆಯುವದಕ್ಕೂ ಮುಖ್ಯಸಾಧನವು ಎಂಬುದೇ ಅಧ್ಯಾತ್ಮವಿಜ್ಞಾನಿಗಳ ಉಪದೇಶವು. ಕೆಲವರಿಗೆ ಭಗವಂತನಲ್ಲಿ ಆಗಾಗ್ಗೆ ಚಿತ್ತವು ನಿಲ್ಲುವದುಂಟು; ಆದರೆ ಅವರಿಗೆ ಭಗವಂತನೇ ಪರಮಗತಿ ಎಂಬ ಮನೋದಾರ್ಢ್ಯವು ಬಂದಿರುವದಿಲ್ಲ. ಯಾವಾಗಲೂ ಈಶ್ವರನನ್ನು ನಂಬಿ ಕುಳಿತು ಕೊಂಡರೆ ವ್ಯವಹಾರವು ಸಾಗುವದು ಹೇಗೆ? ತನ್ನ ವ್ಯವಹಾರಕ್ಕಾಗಿ ಮತ್ತೊಬ್ಬರನ್ನು ಅವಲಂಬಿಸುವದು ಸೋಮಾರಿತನದ ಗುರುತಲ್ಲವೆ?- ಎಂಬ ಶಂಕೆಯು ಅವರ ಮನಸ್ಸಿನಲ್ಲಿ ಆಗಾಗ್ಗೆ ಮಿಂಚುತ್ತಿರುವದು. ಮತ್ತೊಬ್ಬರ ಅವಲಂಬನೆಯು ಸರಿಯಲ್ಲ ಎಂಬುದು ನಿಜ; ಆದರೆ ನಾವು ಈಗ ಅವಲಂಬಿಸಿರುವದು ಮತ್ತೊಬ್ಬರನ್ನೇ ಎಂಬಿದು ಅನೇಕರಿಗೆ ಮನದಟ್ಟಾಗಿರುವದಿಲ್ಲ. ಅವರನ್ನು ಕೇಳಿ, ಇವರನ್ನು ಕೇಳಿ, ಅವರಿವರ ಸೇವೆಯನ್ನು ಮಾಡಿ, ಅವರಿವರ ಶಿಫಾರಸಿನಿಂದಲೋ ಅವರಿವರ ಸಹಾಯದಿಂದಲೋ ಜೀವನವೃತ್ತಿಯನ್ನು ಸಂಪಾದಿಸಿಕೊಳ್ಳುವೆನೆಂಬುದಕ್ಕಿಂತ ಬೇರೆಯಾದ ಪರಾವಲಂಬನೆಯೆಲ್ಲಿರುವದು? ನಮ್ಮಲ್ಲಿಯೇ ಇರುವ ಸುಖವನ್ನೂ ಸಮಾಧಾನವನ್ನೂ ಹೊರಗಿನ ಭೋಗಸಾಮಗ್ರಿಗಳಿಂದಲೂ ಸಂನಿವೇಶದಿಂದಲೂ ಪಡೆದುಕೊಳ್ಳುವೆನೆಂದು ಕಾತರಪಡುವದು ಪರಾವಲಂಬನೆಯಲ್ಲವೆ? ನಮ್ಮ ಶರೀರ, ಇಂದ್ರಿಯಗಳು, ಮನಸ್ಸು-ಇವೆಲ್ಲಕ್ಕೂ ಆತ್ಮನಾಗಿ, ನಮ್ಮ ಸ್ವರೂಪದ ತಿರುಳೇ ಆಗಿರುವ ಪರಮಾತ್ಮನ ಅವಲಂಬನೆಯು ಪರಾವಲಂಬನೆ; ಆದರೆ ನಮ್ಮ ಸ್ವರೂಪ ಕ್ಕಿಂತ ಬೇರೆಯಾಗಿರುವ ಅನಾತ್ಮಗಳಿಂದ ನಮ್ಮ ಸುಖಸಮಾಧಾನಗಳನ್ನು ಪಡೆದುಕೊಳ್ಳುವೆವೆಂಬುದು ಆತ್ಮಾವಲಂಬನೆ-ಎಂಬುದು ಎಂಥ ಕುತರ್ಕ!

ನಿಜವಾಗಿ ನೋಡಿದರೆ ಪರಮಾತ್ಮನೇ ನಮ್ಮ ಆತ್ಮನು; ಆತನನ್ನು ಅವಲಂಬಿಸಿದರೇ ಸ್ವಾವಲಂಬನೆಯಾಗುವದು. ಆತನ ಬಲದಿಂದಲೇ ಈ ಶರೀರೇಂದ್ರಿಯಮನಸ್ಸು ಗಳನ್ನು ನಾವು ಸದುಪಯೋಗಮಾಡಿಕೊಂಡು ವ್ಯವಹಾರದಲ್ಲಿಯೂ ಪರಮಾರ್ಥ ದಲ್ಲಿಯೂ ಸುಖಸಮಾಧಾನಗಳನ್ನು ಪಡೆಯಬಹುದು. ಇದಕ್ಕೆ ಮತ್ತೇತರ ಸಹಾಯವೂ ಆಗುವಂತಿಲ್ಲ ಎಂದು ದೃಢವಾದ ಶ್ರದ್ಧಾದರಗಳಿಂದ ಎಲ್ಲಕ್ಕೂ

ಪರತರವಾಗಿರುವ ಪರಮಾತ್ಮನಲ್ಲಿ ಚಿತ್ತವನ್ನು ಸಮಾಧಾನಗೊಳಿಸಿಕೊಳ್ಳಬೇಕು. ಈ ಪರಮಾತ್ಮನೆಂಬ ಹೆಸರಿನ ಪರಾತ್ಪರ ಜ್ಯೋತಿಯನ್ನು ಏಕಾಂತದಲ್ಲಿ ಕಂಡು ಕೊಳ್ಳುವ ಮಹಾತ್ಮರೇ ಈ ಲೋಕದಲ್ಲಿ ಧನ್ಯರು.

## 45. ಆತ್ಮನಲ್ಲಿ ಏಕಾಗ್ರ ಮನಸ್ಸು

ಏಕಾಂತವಾಸವೆಂದರೆ ಪರಮಾತ್ಮನಲ್ಲಿಯೇ ವಾಸಮಾಡಿಕೊಂಡಿರುವದು, ಸಮಾಧಿಯೆಂದರೆ ಪರಾತ್ಪರನಾದ ಆತನಲ್ಲಿಯೇ ಚಿತ್ತವನ್ನು ಇಟ್ಟುಕೊಂಡು ಏರು ಪೇರಿಲ್ಲದ ಶಾಂತಿಸುಖಗಳನ್ನು ಪಡೆದುಕೊಳ್ಳುವದು. ಈ ಎರಡು ಅಭ್ಯಾಸಗಳುಳ್ಳ ಮುಮುಕ್ಷುಗಳಿಗೆ ಮತ್ತೇತರ ಭಯವೂ ಇರುವದಿಲ್ಲ, ಅವರೇ ಈ ಲೋಕದಲ್ಲಿ ಧನ್ಯರು ಎಂದು ಈವರೆಗೆ ತಿಳಿಸಿಕೊಟ್ಟದ್ದಾಗಿದೆ. ಪರಮಾತ್ಮನಲ್ಲಿ ಚಿತ್ತಸಮಾಧಿಯನ್ನು ಹೊಂದಿದರೆ ಆಗುವ ಫಲವೇನು? ಅಂಥವರ ತಿಳಿವಳಿಕೆಯೂ ವ್ಯವಹಾರವೂ ಹೇಗಿರುವದು? ಎಂಬುದನ್ನು ಈ ಲೇಖನದಲ್ಲಿ ಒಂದಿಷ್ಟು ವಿವರಿಸುವೆನು.

ಸಾಮಾನ್ಯಸ್ಥಿತಿಯಲ್ಲಿ ನಮಗೆ ಮನಸ್ಸೆಂಬ ಒಂದು ಅಂತಃಕರಣವೂ ಇಂದ್ರಿಯ ಗಳೆಂಬ ಅನೇಕ ಬಹಿಃಕರಣಗಳೂ ಸೇರಿಕೊಂಡಿರುವವೆಂದೂ ಈ ಕರಣಗಳ ಮೂಲಕ ಹೊರಗಿನ ಪ್ರಪಂಚವನ್ನು ನಾವು ಅರಿತುಕೊಂಡು ಅದರಿಂದಾಗುವ ಶೀತೋಷ್ಣಾದಿವೇದನೆಗಳನ್ನೂ ಆ ವೇದನೆಗಳಿಂದಾಗುವ ಸುಖದುಃಖಗಳನ್ನೂ ಅನುಭವಿಸುತ್ತಿರುವೆವೆಂದೂ ಭಾವನೆಯಿರುತ್ತದೆ. ಈ ಭಾವನೆಯಿರುವವರೆಲ್ಲರೂ ಹೊರಗಿನ ಪ್ರಪಂಚದಲ್ಲಿ ಸುಖಪ್ರದವೆಂದು ತೋರುವ ಒಳ್ಳೆಯ ವಸ್ತುಗಳನ್ನು ಸಂಪಾದಿಸಿಕೊಳ್ಳುವದಕ್ಕೂ ದುಃಖಪ್ರದವೆಂದು ತೋರುವ ವಸ್ತುಗಳನ್ನು ದೂರವಿರಿಸು ವದಕ್ಕೂ ಹವಣಿಸುತ್ತಿರುವೆವು. ಇದೇ ಲೋಕವ್ಯವಹಾರದ ರೂಪವು. ಆದರೆ ವಿಚಾರಪರರಾದವರಿಗೆ ಹೊರಗಿನ ವಿಷಯಗಳು ನಿಯತವಾಗಿ ಸುಖವನ್ನಾಗಲಿ ದುಃಖವನ್ನಾಗಲಿ ಕೊಡುವವಲ್ಲ ಎಂಬುದು ಹೊಳೆಯುತ್ತದೆ. ಅದೇ ವಸ್ತುಗಳು ಒಬ್ಬರಿಗೆ ಸುಖವನ್ನೂ ಮತ್ತೊಬ್ಬರಿಗೆ ದುಃಖವನ್ನೂ ಕೊಡುತ್ತಿರುವದರಿಂದಲೂ ಒಬ್ಬನಿಗೇ ಒಂದು ಕಾಲದಲ್ಲಿ ಸುಖವನ್ನೂ ಮತ್ತೊಂದು ಕಾಲದಲ್ಲಿ ದುಃಖವನ್ನೂ ಉಂಟುಮಾಡುತ್ತಿರುವದರಿಂದಲೂ ಮನುಷ್ಯನ ಮನಸ್ಸಿನಲ್ಲಿ ಆಗುವ ಸುಖದುಃಖ ಗಳಿಗೆ ವಿಷಯಗಳೇನೂ ಕಾರಣವಲ್ಲವೆಂದು ಸಿದ್ಧವಾಗುತ್ತದೆ. ಮನಸ್ಸಿಗೆ ವಿಷಯಗಳ ವಾಸನೆಯಿರುವದೂ ಅವುಗಳಿಂದಲೇ ನಮಗೆ ಹರ್ಷಶೋಕಗಳಿಗೆ ಕಾರಣ ವಾಗಿರುವ ವೇದನೆಗಳು ಉಂಟಾಗಿರುವವೆಂಬ ದೃಢವಿಶ್ವಾಸವಿರುವದೂ ಈ ಸುಖದುಃಖಗಳಿಗೂ ಅವುಗಳ ನಿಮಿತ್ತದಿಂದಾಗುವ ಹರ್ಷವಿಷಾದಗಳಿಗೂ ಕಾರಣ ವೆಂಬುದು ವಿಚಾರಪರರಿಗೆ ಗೊತ್ತಾಗುತ್ತದೆ. ಹೀಗಿರುವದರಿಂದ ಮನಸ್ಸಿನಲ್ಲಿರುವ ಸಂಸ್ಕಾರವೇ ಸುಖದುಃಖಗಳ ಹೊಡೆತಕ್ಕೂ ಅವುಗಳ ಅಭಾವಕ್ಕೂ ಕಾರಣ

ವಾಗಿರುತ್ತದೆ ಎಂದು ಹೇಳಬೇಕಾಗುತ್ತದೆ. ಮನಸ್ಸಿಗೆ ಬಾಹ್ಯವಿಷಯಗಳ ವಾಸನೆಯು ಅಂಟಿಕೊಳ್ಳದಂತೆ ಮಾಡುವದಕ್ಕೆ ಆತ್ಮವಿಷಯಕವಾದ ಶ್ರವಣಮನನನಿದಿಧ್ಯಾಸನಗಳೇ ಕಾರಣ ಎಂದು ಶ್ರುತಿಯು ಹೇಳುತ್ತಿರುವದು, ಅನುಭವಿಗಳಾದ ಜ್ಞಾನಿಗಳೂ ಹೇಳುತ್ತಿರುವರು. ಆದ್ದರಿಂದ ಶರೀರೇಂದ್ರಿಯಗಳ ಸಂಘಾತದ ಅಭಿಮಾನದಿಂದ ಆಗುತ್ತಿರುವ ಸುಖದುಃಖಗಳ ಹೊಡೆತವು ತಪ್ಪಬೇಕಾದರೆ ಮುಮುಕ್ಷುಗಳು ಈ ಆತ್ಮತತ್ತ್ವದ ಶ್ರವಣವನ್ನು ಮಾಡಿ, ಅದರ ವಿಚಾರವನ್ನೇ ಮನಸ್ಸಿಗೆ ತಂದುಕೊಂಡು ಕೊನೆಗೆ ಆತ್ಮನ ಕಡೆಗೇ ಮನಸ್ಸನ್ನು ತಿರುಗಿಸಿಕೊಳ್ಳಬೇಕಾಗುತ್ತದೆ. ಆತ್ಮನಲ್ಲಿಯೇ ಏಕಾಗ್ರತೆಯಿಂದ ಮನಸ್ಸನ್ನು ಇಟ್ಟುಕೊಂಡು ಮತ್ತೇನನ್ನೂ ಚಿಂತಿಸದೆ ಇರುವದನ್ನು ಅಭ್ಯಾಸಮಾಡಿದವರಿಗೆ ಅತೀಂದ್ರಯವಾದ ಸುಖಶಾಂತಿಗಳು ದೊರೆಯುತ್ತದೆ, ಪ್ರಾಪಂಚಿಕವಾದ ದುಃಖವೂ ವಿಕ್ಷೇಪವೂ ತಪ್ಪುತ್ತವೆ ಎಂಬುದೂ ಸ್ವಾಭಾವಿಕವಾಗಿದೆ.

ಆದರೆ ಹೀಗೆ ಮನಸ್ಸನ್ನು ಆತ್ಮನಲ್ಲಿಯೇ ನಿಲ್ಲಿಸಿಕೊಂಡಾಗ ಹೊರಗಿನ ಪ್ರಪಂಚವು ಏನಾಗಿರುವದು? ಅದು ಆಗ ಎಲ್ಲಿ ಇದ್ದುಕೊಂಡಿರುವದು? ಪ್ರಪಂಚ ದೊಳಗೆ ಇರುವ ನಮ್ಮ ಕಾರ್ಯಕರಣಸಂಘಾತದ ಒಳಕ್ಕೆ ಮನಸ್ಸನ್ನು ತಿರುಗಿಸಿದ ಮಾತ್ರದಿಂದ ಗುರುತರವಾದ ಪ್ರಪಂಚದುಃಖವು ತೊಲಗುವದಕ್ಕೂ ಈ ವಿಲಕ್ಷಣ ವಾದ ಸುಖಶಾಂತಿಗಳು ತಲೆದೋರುವದಕ್ಕೂ ಕಾರಣವೇನು?–ಎಂಬುದೊಂದು ಪ್ರಶ್ನೆಯು ಎದ್ದುಕೊಳ್ಳುತ್ತದೆ. ಅದಕ್ಕೆ ಈಗ ಉತ್ತರವನ್ನು ಕಂಡುಕೊಳ್ಳಬೇಕಾಗಿದೆ.

ಮನಸ್ಸಿಗೆ ಹೆಚ್ಚಿನ ಶಾಂತಿಯೂ ಸುಖವೂ ದೊರೆಯುವದಕ್ಕೆ ನಮ್ಮ ಒಳಕ್ಕೇ ಸರಿಯಬೇಕೆನ್ನುವದು ನಿಜ. ಆದರೆ ತತ್ತ್ವವನ್ನು ಮನಮುಟ್ಟಿ ನೋಡಿದರೆ ಅದು ಈ ಕಾರ್ಯಕರಣಸಂಘಾತದ ಒಳಗೇ ಹುದುಗಿಕೊಂಡಿದೆ ಎಂದು ಭಾವಿಸುವದು ತಪ್ಪಾಗುವದು. ಇದಕ್ಕೊಂದು ದೃಷ್ಟಾಂತವನ್ನು ಕೊಡಬಹುದು. ನನ್ನ ಕೈಯಲ್ಲಿರುವ ಕಮಂಡಲುವಿನಲ್ಲಿ ನೀರನ್ನಾಗಲಿ ಮಜ್ಜಿಗೆಯನ್ನಾಗಲಿ ಪಾನಕವನ್ನಾಗಲಿ ಅಥವಾ ಮತ್ತೆ ಯಾವ ದ್ರವವಸ್ತುವನ್ನಾಗಲಿ ತುಂಬಿಕೊಳ್ಳಬಹುದು; ಹೀಗೆಯೇ ಅದರಲ್ಲಿ ಹಿಟ್ಟು, ಸಕ್ಕರೆ, ಅಕ್ಕಿ, ಗೋಧಿ–ಮುಂತಾದ ಜಿನಸಿಗಳನ್ನಾಗಲಿ ಮಣ್ಣು, ಮರಳು ಮುಂತಾದ ಮತ್ತೆ ಯಾವ ವಸ್ತುವನ್ನಾಗಲಿ ತುಂಬಿಕೊಳ್ಳಬಹುದು. ಆ ವಸ್ತುಗಳು ಹೊರಗೆ ಎಷ್ಟೇ ಇರಲಿ, ಕಮಂಡಲು ಹಿಡಿಸುವಷ್ಟು ಪ್ರಮಾಣದ ವಸ್ತುವನ್ನು ಮಾತ್ರ ಅದರ ಒಳಗೆ ಹಾಕಿಕೊಳ್ಳಬಹುದು; ಅಥವಾ ನನಗೆ ಬೇಡವಾದಾಗ ಅದನ್ನು ಹೊರಕ್ಕೆ ಸುರಿಯಬಹುದು. ಈ ದೃಷ್ಟಿಯಿಂದ ನೋಡಿದರೆ ಆಯಾ ವಸ್ತುವು ಈಗ ಕಮಂಡಲುವಿನ ಒಳಗೇ ಇದೆ, ಅಥವಾ ಹೊರಗೆ ಇದೆ ಎಂದು ಹೇಳುವದಕ್ಕೆ ಬರುತ್ತದೆ. ಅಲ್ಲವೆ? ಆದರೆ ನಾನು ಕಮಂಡಲುವಿನಲ್ಲಿ ಈ ಯಾವ ವಸ್ತುವನ್ನೂ ತುಂಬಿಕೊಳ್ಳದೆ ಇರುವಾದ ಅದರೊಳಗೆ ಏನು ಇರುತ್ತದೆ? ಮತ್ತೆ

ಯಾವ ವಸ್ತುವೂ ಅದರಲ್ಲಿಲ್ಲದಿದ್ದರೂ ಅದರೊಳಗೆ ವಾಯು ತುಂಬಿಕೊಂಡಿರುತ್ತದೆ; ಅದರ ಹೊರಗೂ ವಾಯುವು ಸುತ್ತಿಕೊಂಡಿರುತ್ತದೆ. ಅಲ್ಲವೆ? ಹೀಗೆ ನೋಡಿದರೆ ವಾಯುವು ಕಮಂಡಲುವಿನ ಒಳಗೂ ಇದೆ, ಹೊರಗೂ ಇದೆ ಎನ್ನಬೇಕಾಗುವದು. ಅಥವಾ ಮತ್ತೊಂದು ದೃಷ್ಟಿಯಿಂದ ನೋಡಿದರೆ ಈ ಕಮಂಡಲುವೇ ವಾಯುವಿನ ಸಾಗರದಲ್ಲಿ ಮುಳುಗಿರುತ್ತದೆ; ಆದ್ದರಿಂದ ಅದರ ಒಳಗೂ ಸುತ್ತಲೂ ಮೇಲೂ ಕೆಳಗೂ ವಾಯುವೇ ಇರುತ್ತದೆ ಎನ್ನಬಹುದಾಗುವದು. ಆತ್ಮನೂ ನಮ್ಮ ಶರೀರದೊಳಗೆ ಇದಾನೆಂದರೆ ಹೀಗೆಯೇ ಎಂದು ತಿಳಿಯಬೇಕು.

ಈ ವಾಯುವು ಕೂಡ ಸಾವಯವವಸ್ತುವಾಗಿರುತ್ತದೆ. ವಾಯುಮಂಡಲವು ಭೂಮಿಯಮೇಲೆ ಇಂತಿಷ್ಟು ಮೈಲಿಗಳವರೆಗೆ ಮಾತ್ರವೇ ಇದೆ ಎಂದು ಭೌತಿಕಜ್ಞರು ನಿರ್ಧರಿಸಿರುತ್ತಾರೆ. ತಕ್ಕಸಾಧನಗಳಿಂದ ವಾಯುರಹಿತವಾದ ಒಂದು ಪ್ರದೇಶ ದಲ್ಲಿಯೇ ಈ ಕಮಂಡಲುವನ್ನು ಇಡುವದಕ್ಕೂ ಬರುತ್ತದೆ. ಆದರೆ ಆಗಲೂ ಆಕಾಶವು ಮಾತ್ರ ಕಮಂಡಲುವಿನ ಒಳಗೂ ಹೊರಗೂ ಇರುತ್ತದೆ; ಅದನ್ನೂ ಕಮಂಡಲುವಿನಿಂದ ಬೇರ್ಪಡಿಸುವದಕ್ಕೆ ನಮಗೆ ಯಾವ ಸಾಧನವೂ ಇಲ್ಲ. ಅಥವಾ ಯಾವದಾದರೊಂದು ಸಾಧನವಿದೆಯೆಂದರೂ ಅದೆಲ್ಲ ಆಕಾಶದ ರೂಪಾಂತರವೇ ಆಗಿರುತ್ತದೆ; ಕಮಂಡಲುವೂ ಆ ದೃಷ್ಟಿಯಿಂದ ಆಕಾಶವೇ ಆಗಿರುತ್ತದೆ. ಹೀಗೆ ನೋಡಿದರೆ ಆಕಾಶವೊಂದೇ ಇರುತ್ತದೆ; ಅದನ್ನೇ ನಾವು ಕಮಂಡಲು, ಮನೆ, ಬೆಟ್ಟದಗವಿ, ಗುಂಡಿ ಎಂದು ಮುಂತಾಗಿ ವ್ಯವಹರಿಸುತ್ತಿದ್ದೇವೆ; ಆಕಾಶಕ್ಕಿಂತ ಬೇರೆ ಮತ್ತೆ ಯಾವದೂ ಇರುವದೇ ಇಲ್ಲ ! ಈ ಭೌತಿಕ ಪ್ರಪಂಚ ವೆಲ್ಲವೂ ಆಕಾಶದ ವಿಲಾಸವೇ ಆಗಿರುತ್ತದೆ. ಆದ್ದರಿಂದ ಆತ್ಮನು ನಮ್ಮೊಳಗೆ ಇದಾನೆ ಎಂಬುದಕ್ಕೆ ಈ ಆಕಾಶದೃಷ್ಟಾಂತವು ವಾಯುವಿನ ದೃಷ್ಟಾಂತಕ್ಕಿಂತ ಇನ್ನೂ ಹೆಚ್ಚಿನ ಮಟ್ಟದಲ್ಲಿ ಒಪ್ಪುತ್ತದೆಯಲ್ಲವೆ ? ಆದ್ದರಿಂದಲೇ ಶ್ರುತಿಯು ಆತ್ಮನು 'ಆಕಾಶವತ್ಸರ್ವಗತಶ್ಚ ನಿತ್ಯಃ' ಆಕಾಶದಂತೆ ಸರ್ವಗತನೂ ನಿತ್ಯನೂ ಆಗಿರುತ್ತಾನೆ ಎಂದು ಹೇಳುತ್ತಿದೆ.

ಈಗ ನಮ್ಮ ವಿಚಾರವನ್ನು ಇನ್ನೂ ಸ್ವಲ್ಪ ಮುಂದಕ್ಕೆ ಸಾಗಿಸಬಹುದು. ಏಕೆಂದರೆ ಆಕಾಶವೆಂಬುದು ಮಿಕ್ಕ ಎಲ್ಲಾ ಭೂತಗಳನ್ನೂ ಭೌತಿಕವಸ್ತುಗಳನ್ನೂ ವ್ಯಾಪಿಸಿ ಕೊಂಡಿದೆ, ಅಥವಾ ಸೂಕ್ಷ್ಮದೃಷ್ಟಿಯಿಂದ ನೋಡಿದಾಗ ತಾನೇ ಇವುಗಳೆಲ್ಲದರ ರೂಪವನ್ನು ಧರಿಸಿಕೊಂಡಿದೆ ಎಂಬುದು ನಿಜ. ಆದರೆ ಆಕಾಶವು ಆತ್ಮನನ್ನು ಬಿಟ್ಟು, ಆತ್ಮಚೈತನ್ಯಕ್ಕಿಂತ ಬೇರೆಯಾದ ಸ್ವತಂತ್ರತತ್ತ್ವವಾಗಿ, ಇರಬಲ್ಲದೆ? ಆಕಾಶಕ್ಕೆ ಗಡಿಮಿತಿಗಳಿಲ್ಲ; ಆಕಾಶವು ಎಲ್ಲಿಂದ ಪ್ರಾರಂಭವಾಗಿ ಎಲ್ಲಿಯವರೆಗೆ ಹರಡಿ

ಕೊಂಡಿದೆ ಎಂದು ಹೇಳುವದಕ್ಕೂ ಬರುವದಿಲ್ಲ. ಏಕೆಂದರೆ ಇಲ್ಲಿ, ಅಲ್ಲಿ, ಎಲ್ಲಿ ಎಂಬ ವ್ಯವಹಾರಕ್ಕೆ ಅವಕಾಶವನ್ನು ಕೊಟ್ಟಿರುವದೇ ಆಕಾಶವು. ಆದ್ದರಿಂದ ಆಕಾಶವೇ ಎಲ್ಲವೂ ಆಗಿದೆ ಎಂಬುದು ನಿಜ. ಆದರೆ ಆತ್ಮಚೈತನ್ಯಕ್ಕೆ ವಿಷಯವಲ್ಲದ, ಆತ್ಮ ಚೈತನ್ಯವನ್ನವಲಂಬಿಸದ, ಆಕಾಶ ಎಂದರೆ ಅರ್ಥವೇ ಇಲ್ಲ, ಆ ಆತ್ಮಚೈತನ್ಯವು ಆಕಾಶದಲ್ಲಿದೆ ಎಂಬ ಮಾತಿಗೂ ಅರ್ಥವೇ ಇಲ್ಲ. ಆತ್ಮಚೈತನ್ಯವನ್ನು ಇದೆ, ಇಲ್ಲ ಎಂದು ಹೇಳುವದಕ್ಕೂ ಆಗುವಂತಿಲ್ಲ. ಏಕೆಂದರೆ ರೂಢಿಯಲ್ಲಿ ಕಾಲದೇಶಗಳ ಆಧಾರದಲ್ಲಿರುವದನ್ನೇ ನಾವು ಇದೆ ಎನ್ನುತ್ತೇವೆ; ಯಾವ ಕಾಲದಲ್ಲಿಯೂ ಯಾವ ದೇಶದಲ್ಲಿಯೂ ಪ್ರಮಾಣವೇದ್ಯವಾಗದಿರುವ ವಸ್ತುವನ್ನು ಇಲ್ಲ ಎನ್ನುತ್ತೇವೆ. ಆದರೆ ಈ ಕಾಲಾಕಾಶಗಳೇ ಆತ್ಮನ ಅವಲಂಬನೆಯಿಂದ ಜೀವಿಸಿಕೊಂಡಿರುತ್ತವೆ, ಆತ್ಮನ ಆಶ್ರಯವನ್ನು ಕೈಬಿಟ್ಟರೆ ನಮಗೆ ಕಾಲಾಕಾಶಗಳ ಕಲ್ಪನೆಯೇ ಆಗುವಂತಿಲ್ಲ. ಆದ್ದರಿಂದ ಲೋಕದಲ್ಲಿ ನಾವು ಇದೆ, ಇಲ್ಲ-ಎಂದು ವ್ಯವಹರಿಸುವ ವಸ್ತುಗಳೂ ಅವುಗಳಿಗೆ ಭಾವವನ್ನೂ ಅಭಾವವನ್ನೂ ಕೊಡಬಲ್ಲ ಕಾಲಾಕಾಶಗಳೂ ತಮ್ಮ ಇರವನ್ನು ಈ ಆತ್ಮನಿಂದಲೇ ಪಡೆದುಕೊಂಡಿರುತ್ತವೆಯಾಗಿ ಆತ್ಮನಿಗೆ ಈ ಅರ್ಥ ದಲ್ಲಿ ಕಾಲಾಕಾಶಗಳಿಗಿಂತಲೂ ಹೆಚ್ಚಿನ ಇರವು ಒಂದುಂಟೆನ್ನಬೇಕಾಯಿತು. ನಮ್ಮ ಭಾಷೆಯಲ್ಲಿ ಆ ಇರವಿಗೆ ತಕ್ಕ ಯಾವ ಹೆಸರೂ ಇಲ್ಲದ್ದರಿಂದ ಅದನ್ನು **ಪರಮಾರ್ಥಸತ್ತೆ,** ನಿಜವಾದ ಇರವು, ಎಂದು ಕರೆಯಬೇಕಾಗಿದೆ.

ಶರೀರದ ಒಳಗಿನ ಪ್ರಪಂಚಭಾಗವನ್ನು ಆಧ್ಯಾತ್ಮಿಕಭಾಗವೆಂದೂ ಹೊರಗಿನ ಭಾಗವನ್ನು ಆಧಿಭೌತಿಕಭಾಗವೆಂದೂ ಕರೆಯುವದುಂಟು. ಈ ಎರಡಕ್ಕೂ ಅನುಗ್ರಾಹಕವಾಗಿರುವ ದೇವತೆಗಳ ಪ್ರಪಂಚಭಾಗವನ್ನು ಆಧಿದೈವಿಕ ಎನ್ನುತ್ತಾರೆ. ಈ ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕ-ಎಂಬ ಮೂರು ಮಹಾವಿಭಾಗ ಗಳಾಗಿರುವ ಇಡಿಯ ಪ್ರಪಂಚವೇ ಆತ್ಮನ ಅವಲಂಬನೆಯಿಂದ ಇದ್ದುಕೊಂಡಿರುತ್ತದೆ ಎಂದು ಮೇಲಿನ ವಿಚಾರಣಾಪ್ರಕಾರದಿಂದ ನಮಗೆ ಮನದಟ್ಟಾಗುತ್ತದೆ. ಏಕೆಂದರೆ ಆತ್ಮಚೈತನ್ಯವು ಕಾಲಾಕಾಶಾದಿಗಳಿಂದೊಡಗೂಡಿದ ಈ ಯಾವ ಪ್ರಪಂಚಭಾಗದ ಹಂಗೂ ಇಲ್ಲದೆ ತಾನೇತಾನಾಗಿ ಇದ್ದುಕೊಂಡು ಈ ಎಲ್ಲಾ ಪ್ರಪಂಚವನ್ನೂ ತನ್ನ ಚೈತನ್ಯಜ್ಯೋತಿಯಿಂದ ವ್ಯಾಪಿಸಿಕೊಂಡಿರುತ್ತದೆ. ಆಕಾಶವು ತುಂಬಿಕೊಳ್ಳದಿರುವ ಭೌತಿಕಪ್ರಪಂಚವೇ ಹೇಗೆ ಇಲ್ಲವೋ ಹಾಗೆಯೇ ಆತ್ಮಚೈತನ್ಯವು ತುಂಬಿಕೊಳ್ಳದಿರುವ ಪ್ರಪಂಚವೆಂಬುದೇ ಇಲ್ಲ. ನಾವು ಆಕಾಶ, ವಾಯು-ಎಂದುಮುಂತಾಗಿ ಚಿತ್ರ ವಿಚಿತ್ರವಾಗಿ ಕಲ್ಪಿಸಿಕೊಂಡಿರುವ ಈ ಪ್ರಪಂಚವೆಂಬುದು ಬರಿಯ ನಾಮ ರೂಪ ಗಳು ಮಾತ್ರ; ಭೌತಿಕಪ್ರಪಂಚವೆಲ್ಲ ಆಕಾಶವೇ ಎಂದು ನಾವು ದೃಷ್ಟಾಂತ ದೃಷ್ಟಿಯಿಂದ ಹೇಳುವಂತೆ ಇಡಿಯ ಪ್ರಪಂಚವೇ ಆತ್ಮಚೈತನ್ಯವು-ಎಂದು ಹೇಳಬೇಕಾಗುತ್ತದೆ. ಆದ್ದರಿಂದಲೇ ಶ್ರುತಿಯು ಹೀಗೆನ್ನುತ್ತಿದೆ :

**"ಆತ್ಮನೇ ಕೆಳಗಡೆ, ಆತ್ಮನೇ ಮೇಲುಗಡೆ, ಆತ್ಮನೇ ಹಿಂಗಡೆ, ಆತ್ಮನೇ ಮುಂಗಡೆ, ಆತ್ಮನೇ ಬಲಗಡೆ, ಎಡಗಡೆ; ಇದೆಲ್ಲವೂ, ಆತ್ಮನೇ."** ಛಾಂದೋಗ್ಯ 7-25-2

ಕೆಳಗಡೆ, ಮೇಲುಗಡೆ ಮುಂತಾದವು ಆಕಾಶಕ್ಕೆ ಸಂಬಂಧಪಟ್ಟ ಮಾತುಗಳು; ಆಕಾಶವೇ ಯಾವ ತತ್ತ್ವವನ್ನು ಅವಲಂಬಿಸಿದೆಯೋ ಅದನ್ನು ಈ ಕಡೆ, ಆಕಡೆ ಎಂದು ಹೇಳುವದುತಾನೆ ಹೇಗೆ? ಆದ್ದರಿಂದ ಈ ಶ್ರುತಿಯಲ್ಲಿ ಆತ್ಮನು ಎಲ್ಲಾ ಕಡೆಯಲ್ಲಿಯೂ ಇದಾನೆಂದು ಹೇಳಿದೆ ಎಂತ ತಿಳಿಯಬಾರದು. ಕೆಳಗಡೆ, ಮೇಲುಗಡೆ ಎಂದು ಮುಂತಾಗಿ ನಾವು ವ್ಯವಹರಿಸುವದೆಲ್ಲವೂ ಆತ್ಮನೇ ಎಂದು ಈ ವಾಕ್ಯಕ್ಕೆ ಅರ್ಥವನ್ನು ಮಾಡಿಕೊಳ್ಳಬೇಕು.

ಆತ್ಮ ಎಂಬ ಶಬ್ದಕ್ಕೆ ಅರ್ಥವೇನು? ಎಂದು ನೀವು ಕೇಳಬಹುದು. ಸಂಸ್ಕೃತ ದಲ್ಲಿ ಆತ್ಮಶಬ್ದಕ್ಕೆ ತಾನು (Self) ಎಂದು ಸಾಮಾನ್ಯವಾಗಿ ಅರ್ಥವಾಗುತ್ತದೆ. ಯಾವದನ್ನು ಮನುಷ್ಯನು ತಾನು ಎಂದು ಎಣಿಸಬೇಕೋ ಅದನ್ನು ಆತ್ಮನೆಂದು ತಿಳಿಯಬೇಕು. ಸಾಮಾನ್ಯರಾದವರು ದೇಹ, ಇಂದ್ರಿಯ, ಪ್ರಾಣ, ಮನಸ್ಸು, ಬುದ್ಧಿ, ಅಹಂಕಾರ-ಇವುಗಳಲ್ಲಿ ಒಂದನ್ನು ತಮ್ಮ ಸ್ವರೂಪವೆಂದು ಎಣಿಸಿಕೊಳ್ಳುತ್ತಾರೆ. ಆದ್ದರಿಂದ ಅವರ ದೃಷ್ಟಿಯಲ್ಲಿ ಈ ದೇಹಾದಿಗಳೇ ಆತ್ಮನಾಗಿರುತ್ತವೆ. ಆದರೆ ವಿವೇಕಿ ಗಳಾದವರು ಅಚೇತನಗಳಾಗಿ, ಚೈತನ್ಯಕ್ಕೆ ವಿಷಯವಾಗಿರುವ ಈ ಯಾವದನ್ನೂ ತಮ್ಮ ಸ್ವರೂಪ ಎಂದು ಒಡಂಬಡಲಾರರು. ಅವರು ತಮಗೆ ವಿಷಯವಾಗಿ ತೋರುತ್ತಿರುವ ಈ ಶರೀರೇಂದ್ರಿಯಾದಿಗಳ ಒಳಗೆ, ಇವುಗಳೆಲ್ಲಕ್ಕಿಂತಲೂ ಸೂಕ್ಷ್ಮವಾಗಿ, ಇವೆಲ್ಲವನ್ನೂ ಇದು, ಇದು-ಎಂದು ಬೆಳಗುತ್ತಿರುವ ಸರ್ವಾಂತರವಾದ ಚೈತನ್ಯ ಸ್ವರೂಪವೇ ತಮ್ಮ ಆತ್ಮನು ಎಂದು ನಿಶ್ಚಯಿಸಿರುತ್ತಾರೆ. ಅವರ ದೃಷ್ಟಿಯಲ್ಲಿ ಈ ಚೈತನ್ಯವೇ ನಿಜವಾದ ಆತ್ಮನಾದ್ದರಿಂದ ಇದನ್ನು ಪರಮಾತ್ಮ ಎಂದು ಅವರು ಕರೆದಿರುತ್ತಾರೆ.

ಆತ್ಮಶಬ್ದಕ್ಕೆ ನಿರ್ವಚನವನ್ನು ಪುರಾಣದಲ್ಲಿ ಹೀಗೆ ಬರೆದಿರುತ್ತದೆ : **"ಯಚ್ಚಾಪ್ನೋತಿ ಯದಾದತ್ತೇ ಯಚ್ಚಾತ್ತಿ ವಿಷಯಾನಿಹ । ಯಚ್ಚಾಸ್ಯ ಸನ್ತತೋ ಭಾವಸ್ತಸ್ಮಾದಾತ್ಮೇತಿ ಕೀರ್ತ್ಯತೇ ॥"** ಎಲ್ಲವನ್ನೂ ವ್ಯಾಪಿಸಿಕೊಂಡಿರುತ್ತಾನೆ, ಎಲ್ಲವನ್ನೂ ತನ್ನ ಕಡೆಗೆ ತೆಗೆದುಕೊಳ್ಳುತ್ತಾನೆ, ಎಲ್ಲಾ ವಿಷಯಗಳನ್ನೂ ತನ್ನ ಚೈತನ್ಯದಿಂದ ಅನುಭವಿಸುತ್ತಾನೆ, ಎಲ್ಲೆಲ್ಲಿಯೂ ಕಡಿವಡೆಯದೆ ಹರಡಿಕೊಂಡಿರುತ್ತಾನೆ. ಆದ್ದರಿಂದ ಇವನನ್ನು ಆತ್ಮನೆನ್ನುವರು. ಈ ದೃಷ್ಟಿಯಿಂದ ಆತ್ಮನೇ ಎಲ್ಲೆಲ್ಲಿಯೂ ವ್ಯಾಪಿಸಿಕೊಂಡು ಎಲ್ಲವೂ ಆಗಿರುತ್ತಾನಾದ್ದರಿಂದ ಇವನನ್ನು **ಪೂರ್ಣಾತ್ಮ**ನೆಂದು ಕರೆಯಬಹುದು.

ನನ್ನ ಆತ್ಮನು ಎಂದು ನಾವು ಕರೆಯುತ್ತಿರುವದು ನಮ್ಮನಮ್ಮ ಕಾರ್ಯಕರಣ ಸಂಘಾತದ ದೃಷ್ಟಿಯಿಂದ. ಆದರೆ ಈವರೆಗೆ ವರ್ಣಿಸಿರುವ ರೀತಿಯನ್ನು ಮನ ದಂದರೆ ಶರೀರವಾಗಲಿ, ಪ್ರಾಣವಾಗಲಿ, ಇಂದ್ರಿಯಗಳಾಗಲಿ-ಆತ್ಮನಿಂದ ವ್ಯಾಪ್ತ

ವಾಗದೆ ಇಲ್ಲವೇ ಇಲ್ಲ; ಆತ್ಮನಿಗಿಂತ ವ್ಯತಿರಿಕ್ತವಾಗಿ ಇಲ್ಲವೇ ಇಲ್ಲ. ಹೀಗಿರುವಲ್ಲಿ ಪರಮಾತ್ಮನಲ್ಲಿ ಚಿತ್ತವನ್ನು ಸಮಾಧಾನಗೊಳಿಸಿಕೊಳ್ಳಬೇಕು ಎಂಬ ಉಪದೇಶಕ್ಕೆ ಅರ್ಥವೇನು? ಚಿತ್ತವೆಂಬುದು ಆತ್ಮನಿಗಿಂತ ಬೇರೆಯಾಗಿದೆ ಎಂದು ನಾವು ವ್ಯವಹಾರದಲ್ಲಿ ಭಾವಿಸಿಕೊಂಡಿರುವೆವಷ್ಟೆ. ಅದನ್ನು ಅನುವಾದಮಾಡಿಕೊಂಡು ಹೇಳಿದ ಮಾತಿದು. ಆದರೆ ಸರಿಯಾಗಿ ನೋಡಿದರೆ ಉಪ್ಪಿನ ಬೊಂಬೆಯು ಸಮುದ್ರದ ಆಳವನ್ನು ಕಂಡುಹಿಡಿಯುವದಕ್ಕೆ ಹೋಗುವ ಪ್ರಯತ್ನವು ಹೇಗೋ ಹಾಗೆಯೇ ಚಿತ್ತವನ್ನು ಆತ್ಮನಲ್ಲಿಡುವ ಈ ಪ್ರಯತ್ನವೂ ಆಗಿರುತ್ತದೆ. ಚಿತ್ತವು ಆತ್ಮನ ಸಮೀಪಕ್ಕೆ ಹೋದಂತೆಲ್ಲ ಅದು ಬಿಂಬದಲ್ಲಿ ಒಂದಾಗುವ ಪ್ರತಿಬಿಂಬದಂತೆ ತಾನೇ ಚಿದ್ರೂಪವಾಗಿ ಪರಿಣಮಿಸಿಬಿಡುತ್ತದೆ. ಆತ್ಮನಲ್ಲಿಯೇ ಮನಸ್ಸಿಟ್ಟರೆ ಆ ಮನಸ್ಸು ಅಮನಸ್ಸಾಗಿಬಿಡುತ್ತದೆ; ಆತ್ಮನಿಗಿಂತ ವ್ಯತಿರಿಕ್ತವಾಗಿ ಮನಸ್ಸೂ ಇಲ್ಲ, ಮನೋವಿಷಯವೂ ಇಲ್ಲ ಎಂಬುದು ಅನುಭವಕ್ಕೆ ಬಂದುಬಿಡುತ್ತದೆ. ಅದೇ ಅಮನಸ್ಕ ಯೋಗವು, ಆತ್ಮಸಮಾಧಿಯು, ಸಹಜಸಮಾಧಿಯು.

ಈವರೆಗೆ ವರ್ಣಿಸಿರುವ ಅನುಭವವು ಯಾವ ಪುರುಷಧೌರೇಯನಿಗೆ ಬಂದಿರುವದೋ ಅವನು ಶರೀರದಲ್ಲಿದ್ದರೂ ಅಶರೀರಿಯೇ; ಅವನಿಗೆ ಪ್ರಾಣೇಂದ್ರಿಯ ಮನೋಬುದ್ಧಿಗಳು ಇತರರ ದೃಷ್ಟಿಯಿಂದ ಇದ್ದರೂ ತನ್ನ ದೃಷ್ಟಿಯಿಂದ ಅದೆಲ್ಲವೂ ಆತ್ಮನೇ ಆಗಿಬಿಟ್ಟಿರುತ್ತದೆ. ಆದ್ದರಿಂದ ಶ್ರುತಿಸ್ಮೃತಿಗಳಲ್ಲಿ ಉಪದಿಷ್ಟವಾಗಿರುವ ರೀತಿಯಿಂದ ಧ್ಯಾನಯೋಗವನ್ನು ಅನುಷ್ಠಾನಮಾಡಿ ಸಮ್ಯಗ್ದರ್ಶನ ಮಾಡಿದವನು ಪರಮಾತ್ಮನಲ್ಲಿಯೇ ಒಂದಾಗಿಬಿಟ್ಟಿರುತ್ತಾನೆ.

ಇಷ್ಟೇ ಅಲ್ಲ. ಇಂಥ ಮಹಾತ್ಮನ ದೃಷ್ಟಿಯಲ್ಲಿ ಈ ಪರಮಾತ್ಮನನ್ನು ಬಿಟ್ಟು ಮತ್ತೆ ಯಾವ ಪ್ರಪಂಚವೂ ಇರುವದೇ ಇಲ್ಲ. ಏಕೆಂದರೆ ನಾಮರೂಪಗಳ ಪ್ರಪಂಚವೆಂಬುದು ಇಂದ್ರಿಯಗಳಿಂದಲೇ ನಮಗೆ ತಿಳಿಯಬರುತ್ತಿರುವದು. ಆ ಇಂದ್ರಿಯವೂ ಮನೋಬುದ್ಧಿಗಳೂ ಸಶರೀರವಾಗಿ–ಕಲ್ಪಿತವಾದ ಹಾವು ಹಗ್ಗದಲ್ಲಿ ಲಯವಾಗುವಂತೆ–ಪರಮಾತ್ಮನಲ್ಲಿಯೇ ಲಯವಾಗಿರುವಾಗ ಅಂಥವನಿಗೆ 'ನಾನೂ ಇಲ್ಲ, ನೀನೂ ಇಲ್ಲ, ಈ ಪ್ರಪಂಚವೂ ಇಲ್ಲ' ಎಂಬ ಸೂಕ್ತಿಯು ಸ್ವಾನುಭವಸಿದ್ಧವಾಗಿರುತ್ತದೆ. ಈ ಅನುಭವವನ್ನು ಶ್ರುತಿಯಲ್ಲಿ ಹೀಗೆಂದು ವರ್ಣಿಸಿರುತ್ತದೆ :

**"ಯಾವನು ಸಕಲಭೂತಗಳನ್ನೂ ಆತ್ಮನಲ್ಲಿಯೇ ಅನುದರ್ಶನಮಾಡಿಕೊಂಡಿರುವನೋ, ಸರ್ವಭೂತಗಳಲ್ಲಿಯೂ ಆತ್ಮನನ್ನೇ ಅನುದರ್ಶನಮಾಡಿಕೊಂಡಿರುವನೋ, ಅವನಿಗೆ ಆ ಜ್ಞಾನವಾದಬಳಿಕ ಯಾವದೊಂದೂ ನಿಂದ್ಯವಾಗಿರುವದಿಲ್ಲ."** **–ಈಶ, 6**

ಜ್ಞಾನಿಯಾದವನಿಗೆ "ನನ್ನ ದೇಹೇಂದ್ರಿಯಾದಿಗಳ ಸಂಘಾತಕ್ಕೆ ಹೇಗೆ ಸರ್ವ ಸಾಕ್ಷಿಯಾದ ಚೈತನ್ಯವೇ ನಿಜವಾಗಿ ಆತ್ಮನೋ, ಹಾಗೆಯೇ ಪ್ರಪಂಚದಲ್ಲಿರುವ ಸಕಲ ದೇಹೇಂದ್ರಿಯಸಂಘಾತಗಳಿಗೂ ಈ ನನ್ನ ಆತ್ಮನೇ ನಿಜವಾದ ಆತ್ಮನು. 'ನಾನು', 'ನಾನು' ಎಂದು ಬೇರೆಯಾಗಿ ಕಾಣುತ್ತಿರುವ ಅಹಂ ಪ್ರತ್ಯಯಗೋಚರ ರಾದ ವಿಶೇಷರೂಪರಾದ ಆತ್ಮರುಗಳಿಗೆಲ್ಲ ಅವನೇ ಆತ್ಮನು" ಎಂಬ ನಿಶ್ಚಯವಾಗಿ ಬಿಟ್ಟಿರುತ್ತದೆ. ಮತ್ತು ನನ್ನ ಕಾರ್ಯಕರಣಸಂಘಾತವೆಂದು ನಾನು ಈವರೆಗೆ ಎಣಿಸಿದ್ದದ್ದು ಹೇಗೆ ಈ ಪರಮಾತ್ಮನಿಗಿಂತ ಬೇರೆಯಾಗಿ ನಿಜವಾಗಿಲ್ಲವೇ ಇಲ್ಲವೋ ಹಾಗೆಯೇ ಪ್ರಪಂಚದಲ್ಲಿ ಕಾಣುವ ಯಾವ ಕಾರ್ಯಕರಣಸಂಘಾತವೂ ಈ ನನ್ನ ಆತ್ಮನಿಗಿಂತ ಬೇರೆಯಾಗಿ ಇರುವದೇ ಇಲ್ಲ ಎಂಬ ನಿಶ್ಚಯವೂ ಆಗಿಬಿಟ್ಟಿರು ತ್ತದೆ. ಆದ್ದರಿಂದ ಅವನು ಅದ್ವಿತೀಯವಾದ ನಿತ್ಯಶುದ್ಧಮುಕ್ತ ಸ್ವರೂಪನಾಗಿರುತ್ತಾನೆ.

## 46. ಪೂರ್ಣಾತ್ಮಾನುಭವ

ಪರಮಾತ್ಮನಲ್ಲಿಯೇ ಶಾಸ್ತ್ರೋಕ್ತಪ್ರಕಾರದಿಂದ ಚಿತ್ತಸಮಾಧಾನವನ್ನು ಪಡೆದು ಕೊಂಡವರಿಗೆ ತಮ್ಮ ಕಾರ್ಯಕರಣಸಂಘಾತಕ್ಕಿಂತಲೂ, ಆ ಸಂಘಾತದಲ್ಲಿ 'ನಾನು' ಎಂದು ಅಭಿಮಾನಪಡುತ್ತಿರುವ ಅಹಂಪ್ರತ್ಯಯಗಮ್ಯನಾದ ಆತ್ಮನಿ ಗಿಂತಲೂ ವಿಲಕ್ಷಣನಾಗಿ ಅಂತಃಕರಣದಲ್ಲಿರುವ ಸರ್ವಪ್ರತ್ಯಯಗಳಿಗೂ ಸಾಕ್ಷಿ ಯಾಗಿರುವ ಆತ್ಮನು ಅನುಭವಕ್ಕೆ ಬರುವನೆಂದು ತಿಳಿದುಕೊಂಡದ್ದಾಯಿತು. ಈ ಸರ್ವಸಾಕ್ಷಿಯಾದ ಆತ್ಮನು ತನಗೊಬ್ಬನಿಗೆ ಮಾತ್ರವೇ ಅಲ್ಲ ಬ್ರಹ್ಮಾದಿಸ್ತಂಬಪರ್ಯಂತ ವಾಗಿರುವ ಸಕಲಭೂತಗಳಿಗೂ ಸಾಧಾರಣನಾಗಿರುವ ಪರಮಾತ್ಮನು ಎಂದೂ ತಿಳಿದುಕೊಂಡದ್ದಾಯಿತು. ಆ ಪರಮಾತ್ಮನ ದೃಷ್ಟಿಯಿಂದ ನೋಡಿದಾಗ ಅವನಿಗಿಂತ ವ್ಯತಿರಿಕ್ತವಾಗಿರುವ ತನ್ನ ಕಾರ್ಯಕರಣಸಂಘಾತವೆಂಬುದೇ ಇರುವದಿಲ್ಲ; ಆದ್ದರಿಂದ ಪ್ರತ್ಯಕ್ಷಾದಿಗಳಿಗೆ ಗೋಚರವಾಗುವ ಪ್ರಪಂಚವೆಂಬುದೂ ಆಗ ಇರುವದೇ ಇಲ್ಲ ಎಂದೂ ತಿಳಿದುಕೊಂಡದ್ದಾಯಿತು. ಇದೇ ಪೂರ್ಣಾತ್ಮಾನುಭವವೆಂಬುದು.

ಆತ್ಮನು ಪೂರ್ಣನೆಂದರೆ ಏನರ್ಥ? ಪೂರ್ಣಾತ್ಮನ ಅನುಭವವು ಧ್ಯಾನ ಯೋಗದಿಂದ ದೊರೆಯುತ್ತದೆ-ಎಂಬುದರ ಅಭಿಪ್ರಾಯವೇನು? ಹುಡುಗನಿಗೆ ಯೌವನವೂ ತರುಣನಿಗೆ ವಾರ್ಧಕವೂ ಬರುವಂತೆ ಅದು ಒಂದಾನೊಂದು ಹೊಸ ಅನುಭವವೆ? ಪೂರ್ಣಾತ್ಮಪ್ರಾಪ್ತಿಯು ಹೀಗೆ ಯಾವದಾದರೊಂದು ಸಾಧನದಿಂದ ಪಡೆದುಕೊಳ್ಳುವದೆಂದಾದರೆ ಬ್ರಹ್ಮವು ಕಾಲಕೃತವಾದ ವಿಶೇಷವುಳ್ಳದ್ದು ಎಂದಾಗುತ್ತದೆ; "ಆತ್ಮನು ಜನ್ಮರಹಿತನು, ಮುಪ್ಪುಸಾವುಗಳಿಲ್ಲದವನು ಅಮೃತ ಸ್ವಭಾವನು, ಅಭಯರೂಪನು" ಎಂದುಮುಂತಾಗಿ ಶ್ರುತಿಗಳು ಸಾರುತ್ತಿರುವದು

ಪ್ರಮಾಣವಲ್ಲವೆಂದಾಗುತ್ತದೆ. ಪೂರ್ಣಾತ್ಮನು ಪೂರ್ಣಾತ್ಮನಲ್ಲದೆಯೂ ಹೋಗುತ್ತಾನೆ. ಏಕೆಂದರೆ ಆತ್ಮನು ಪೂರ್ಣ ಎಂದರೆ ಪೂರ್ಣಕುಂಭದಂತೆ ಏತರಿಂದಲಾದರೂ ತುಂಬಿಕೊಂಡು ಇರುವವನು ಎಂದೇನೂ ಅರ್ಥವಲ್ಲ. ಆತ್ಮನೇ ಎಲ್ಲಾ ಕಡೆಯಲ್ಲಿಯೂ ತುಂಬಿರುತ್ತಾನೆ. ಅವನು ಕುಂಭಾದಿಗಳಂತೆ ಸಾವಯವನಲ್ಲ; ಅವನಿಗಿಂತ ಬೇರೆಯಾದ ಮತ್ತೊಂದು ಪರತತ್ತ್ವವೂ ಇರುವದಿಲ್ಲ. ಆದ್ದರಿಂದ ಪೂರ್ಣಶಬ್ದಕ್ಕೆ ಮತ್ತೊಂದರಿಂದ ತುಂಬಲ್ಪಟ್ಟ ಎಂಬರ್ಥವು ಹೊಂದುವದಿಲ್ಲ. ಇನ್ನು ಪೂರ್ಣ ಎಂದರೆ ತಾನೇ ತುಂಬಿಕೊಂಡಿರುವ ಎಂಬರ್ಥವೂ ಮುಖ್ಯಾರ್ಥದಲ್ಲಿ ಸಮಂಜಸವಾಗುವದಿಲ್ಲ. ಏಕೆಂದರೆ 'ಪರಮಾತ್ಮನು ಪೂರ್ಣನಾಗಿರುತ್ತಾನೆ, ಎಲ್ಲೆಲ್ಲಿಯೂ ತುಂಬಿಕೊಂಡಿರುತ್ತಾನೆ' ಎನ್ನುವಾಗ ಅವನಿಗಿಂತ ವ್ಯತಿರಿಕ್ತವಾದ ಉಪಾಧಿಯೊಂದನ್ನು ಕಲ್ಪಿಸಬೇಕಾಗುವದು. ನೀರು ಗಡಿಗೆಯನ್ನು ಎಲ್ಲೆಲ್ಲಿಯೂ ತುಂಬಿಕೊಂಡಿದೆ, ವಾಯುವು ಈ ಕೋಣೆಯನ್ನು ತುಂಬಿಕೊಂಡಿದೆ-ಎಂದು ಉಪಾಧಿವಶದಿಂದ ಹೇಳುವದು ಸರಿ; ಏಕೆಂದರೆ ನೀರಿಗಿಂತ ಬೇರೆಯಾದ ಗಡಿಗೆಯೂ ವಾಯುವಿಗಿಂತ ಬೇರೆಯಾದ ಕೋಣೆಯೂ ನಿಜವಾಗಿ ಇರುತ್ತವೆ. ಆತ್ಮನು ಪ್ರಪಂಚವನ್ನು ತುಂಬಿಕೊಂಡಿರುತ್ತಾನೆ ಎಂದರೆ ಹೀಗೆ ಹೊಂದುವದಿಲ್ಲ; ಏಕೆಂದರೆ ಆತ್ಮನಿಗಿಂತ ವ್ಯತಿರಿಕ್ತವಾದ ಸ್ವತಂತ್ರವಾದ ಪ್ರಪಂಚವು ಇರುವದೇ ಇಲ್ಲ. ಪ್ರಪಂಚವೆಂದರೆ ನಾಮರೂಪಾತ್ಮಕವಾಗಿರುತ್ತದೆ; ಆದರೆ ನಾಮರೂಪಗಳು ಸ್ವತಂತ್ರವಾಗಿ ತಾವುತಾವೇ ಇದ್ದುಕೊಂಡಿರುವದನ್ನು ಯಾರೂ ಕಂಡಿರುವದಿಲ್ಲ. ಸ್ವಯಂಪ್ರಕಾಶವಾದ ಆತ್ಮಚೈತನ್ಯಕ್ಕೆ ವಿಷಯವಾಗದೆ ಇರುವ, ಆತ್ಮಚೈತನ್ಯಕ್ಕಿಂತ ಬೇರೆಯಾದ ಸತ್ತೆಯುಳ್ಳ ನಾಮರೂಪಗಳೇ ಇರುವದಿಲ್ಲ. ಆದ್ದರಿಂದ ಕಲ್ಪಿತೋಪಾಧಿಯನ್ನು ಲೆಕ್ಕಕ್ಕೆ ತಂದುಕೊಂಡಾಗ ಜಗತ್ತೆಲ್ಲವನ್ನೂ ತುಂಬಿಕೊಂಡವನು ಎಂದು ಅರ್ಥವನ್ನು ಮಾಡಬಹುದಾದರೂ ಪರಮಾರ್ಥವನ್ನೇ ದೃಷ್ಟಿಯಲ್ಲಿಟ್ಟುಕೊಂಡಿರುವಾಗ ಈ ಅರ್ಥವೂ ಸಮಂಜಸವಾಗುವದಿಲ್ಲ ಎಂದೇ ಹೇಳಬೇಕಾಗುವದು.

ಆದ್ದರಿಂದ ಪೂರ್ಣ, ಸರ್ವ, ಕೃತ್ಸ್ನ-ಎಂಬಿವೇ ಮುಂತಾದ ಶಬ್ದಗಳನ್ನು ಪರಮಾತ್ಮನಿಗೆ ಹೊಂದಿಸುವಾಗ ವ್ಯವಹಾರದಲ್ಲಿ ಈ ಶಬ್ದಗಳಿಗಿರುವ ವಾಚ್ಯಾರ್ಥವನ್ನು ಗ್ರಹಿಸುವದಕ್ಕೆ ಆಗುವದಿಲ್ಲ. ಪೂರ್ಣ ಎಂದರೆ ತುಂಬಿಕೊಂಡಿರುವದಲ್ಲ; ಸರ್ವ ಎಂದರೆ ಎಲ್ಲಾ ಸಂಖ್ಯೆಯ ಅಥವಾ ಎಲ್ಲಾ ಪರಿಮಾಣದ ಎಂದರ್ಥವಲ್ಲ; ಕೃತ್ಸ್ನ ಎಂದರೆ ಮುಕ್ಕಿಲ್ಲದ ಇಡಿಯದು, ಅವಯವಕ್ಕಿಂತ ಬೇರೆಯಾದ ಅವಯವಿ ಎಂದೂ ಅರ್ಥವಲ್ಲ. ಈ ಶಬ್ದಗಳಿಗೆಲ್ಲ ಅನಂತ, ಅಪರಿಚ್ಛಿನ್ನ ಎಂದೇ ಅರ್ಥ ಈ ಅಭಿಪ್ರಾಯವನ್ನು ಶ್ರುತಿಯು ಹೀಗೆಂದು ತಿಳಿಸುತ್ತಿದೆ :

**"ಅದು ಪೂರ್ಣವು, ಇದು ಪೂರ್ಣವು. ಪೂರ್ಣದಿದ ಪೂರ್ಣವೇ ಎದ್ದುಕೊಂಡಿದೆ. ಪೂರ್ಣದ ಪೂರ್ಣವನ್ನು ತೆಗೆದುಕೊಂಡರೆ ಪೂರ್ಣವೇ ಉಳಿದುಕೊಳ್ಳುತ್ತದೆ."** ಬೃ. 5-1-1

ಶ್ರುತಿಯಲ್ಲಿ ಕೆಲವು ವಾಕ್ಯಗಳು ಒಗಟುಗಳಂತೆ ಇರುತ್ತವೆ. ಅವುಗಳು ಪರಮ ಪುರುಷಾರ್ಥವನ್ನು ಕೊಡುವ ಪರಮಾರ್ಥವನ್ನು ತಿಳಿಯಿಸುವ ಅಮೋಘ ವಾಕ್ಯಗಳಾದ್ದರಿಂದ ಜಿಜ್ಞಾಸುಗಳು ಅವುಗಳ ಅಭಿಪ್ರಾಯವನ್ನು ಮನದಟ್ಟುಮಾಡಿಕೊಂಡು ನಲಿಯಲಿ!- ಎಂಬ ಉದ್ದೇಶದಿಂದ ಶ್ರುತಿಯು ಹೀಗೆ ಪರಮಾರ್ಥವನ್ನು ಗೋಪ್ಯವಾಗಿಟ್ಟು ತಿಳಿಸಿರುತ್ತದೆ. ಆದ್ದರಿಂದ ಅವುಗಳ ಅರ್ಥವನ್ನು, ಉಪದೇಶ ಸಂಪ್ರದಾಯವನ್ನು ಬಲ್ಲ ಸದ್ಗುರುಗಳಿಂದಲೇ ತಿಳಿದುಕೊಳ್ಳಬೇಕು. ಇಲ್ಲದಿದ್ದರೆ ತಮ್ಮತಮ್ಮ ಬುದ್ಧಿಕೌಶಲದಿಂದ ಯಾವದಾದರೊಂದು ಅರ್ಥವನ್ನು ಈ ವಾಕ್ಯಗಳಿಗೆ ಕಲ್ಪಿಸಿಕೊಂಡು ಪರಮಾರ್ಥದಿಂದ ವಂಚಿತರಾಗುವ ಸಂಭವವಿದೆ. ಈಮೇಲೆ ಉದಾಹರಿಸಿರುವ ಮಂತ್ರಕ್ಕೆ ಕೆಲವರು 'ಇಡಿ' (ಪೂರ್ಣ)ದಿಂದ ಇಡಿಯೇ ಉಂಟಾಗಿದೆ; ಇಡಿಯಿಂದ ಇಡಿಯನ್ನು ಕಳೆದರೆ ಇಡಿಯೇ ಉಳಿದುಕೊಳ್ಳುತ್ತದೆ ಎಂದು ಅರ್ಥಶೂನ್ಯವಾದ ಅನುವಾದವನ್ನು ಮಾಡಿರುತ್ತಾರೆ. ಮತ್ತೆ ಕೆಲವರು ಪೂರ್ಣವೆಂದರೆ ಇಡಿಯಲ್ಲ, ಅನಂತವಾದದ್ದೇ ಎಂದು ವಿವರಿಸಿ ಗಣಿತಶಾಸ್ತ್ರದ ಅನಂತಪರಿಮಾಣ (Infinity) ಎಂಬರ್ಥವನ್ನೂ ಅನಂತಸೂಕ್ಷ್ಮ ಪರಿಮಾಣ (Infinitesimal) ಎಂಬರ್ಥವನ್ನೂ ಆ ಶಬ್ದಕ್ಕೆ ಜೋಡಿಸಿ ವಿವರಿಸುವದಕ್ಕೆ ಪ್ರಾರಂಭಿಸಿರುತ್ತಾರೆ. 1+2+3+4...ಈ ಅನಂತಶ್ರೇಣಿಯನ್ನು 2+3+4+5...ಈ ಅನಂತಶ್ರೇಣಿಯಿಂದ ಕಳೆದರೆ 1+2+3+4+...ಈ ಅನಂತಶ್ರೇಣಿಯೇ ಉಳಿಯುವದೆಂಬುದು ಈ ಶ್ರುತಿಗೆ ಉದಾಹರಣೆ ಎಂದು ಅವರ ವಾದ ! ಆದರೆ ಪರಮಾತ್ಮತತ್ತ್ವವು ದ್ರವ್ಯ, ಗುಣ, ಕರ್ಮ, ಸಂಬಂಧ-ಮುಂತಾದ ಯಾವ ಅನಾತ್ಮಧರ್ಮವೂ ಇಲ್ಲದ್ದು ಎಂಬಿದನ್ನು ಅವರು ಮರೆತಿರುತ್ತಾರೆ. ಆ ತತ್ತ್ವಕ್ಕೆ ಸಂಖ್ಯೆಯಾಗಲಿ ಪರಿಮಾಣವಾಗಲಿ ಹತ್ತುವದೇ ಇಲ್ಲ. ಗಣಿತವೆಂಬುದು ಕಾಲದೇಶಗಳಿಂದ ಅಳೆಯುವ ಸಂಖ್ಯಾಪರಿಮಾಣಗಳಿಗೆ ಅನ್ವಯಿಸುತ್ತದೆ; ಆತ್ಮತತ್ತ್ವವು ಕಾಲದೇಶಗಳ ಪರಿಚ್ಛೇದವೇ ಇಲ್ಲದ್ದು. ಆದ್ದರಿಂದ ಹೀಗೆ ಪುರುಷಮತಿಯಿಂದ ಕಲ್ಪಿತವಾಗುವ ಅರ್ಥವನ್ನು ಪರಮಾರ್ಥವೆಂದು ಶ್ರುತಿಯು ಎಂದಿಗೂ ಪ್ರತಿಪಾದಿಸಲಾರದು.

ಈ ಶ್ರುತಿಯಲ್ಲಿ ಇಡಿಯ ವಿಚಾರವೂ ಇಲ್ಲ, ಬಿಡಿಯ ವಿಚಾರವೂ ಇಲ್ಲ; ಸಂಖ್ಯೆಯ ವಿಚಾರವೂ ಇಲ್ಲ, ಪರಿಮಾಣದ ವಿಚಾರವೂ ಇಲ್ಲ. ನಿಜವಾಗಿ ಇಲ್ಲಿ ಹೇಳಿರುವದೇನೆಂದರೆ ಅದು, ಎಂದರೆ ಸಾಮಾನ್ಯರಿಗೆ ಪರೋಕ್ಷವಾಗಿರುವ ಆ ಪರಬ್ರಹ್ಮವು ಪೂರ್ಣವು, ಆಕಾಶದಂತೆ ವ್ಯಾಪಿಯೂ ಕಡಿವಡೆಯದೆ ಇರುವದೂ ಆಗಿರುವ ಅನಂತತತ್ತ್ವವಾಗಿದೆ. ಇದು, ಎಂದರೆ ನಾಮರೂಪ ಪ್ರಪಂಚದಲ್ಲಿ ತೋರುತ್ತಿರುವ ಈ ಸೋಪಾಧಿಕಬ್ರಹ್ಮವೂ ತನ್ನ ರೂಪದಿಂದ ಪೂರ್ಣವೇ ಆಗಿದೆ.

ನಿರುಪಾಧಿಕವಾದ ಬ್ರಹ್ಮದಿಂದಲೇ ಈ ಸೋಪಾಧಿಕರೂಪವೂ ಬಂದಿದೆ, ಎಂದರೆ ಅದನ್ನೇ ಜನರು ಸೋಪಾಧಿಕವೆಂದು ವ್ಯವಹಾರದೃಷ್ಟಿಯಿಂದ ವ್ಯವಹರಿಸುತ್ತಿರುವರು ಎಂದರ್ಥ. ಹೀಗೆ ಪ್ರಪಂಚೋಪಹಿತವಾದ ಈ ಕಾರ್ಯರೂಪದಿಂದ ಕಾಣಿಸಿ ಕೊಳ್ಳುತ್ತಿದ್ದರೂ ಅದು ಈಗಲೂ ನಿಜವಾಗಿಯೂ ಪೂರ್ಣವೇ ಆಗಿರುತ್ತದೆ, ಅದರ ಪರಮಾತ್ಮಭಾವವು ಈಗಲೂ ಹೋಗಿರುವದಿಲ್ಲ. ಕಾರಣಾತ್ಮವಾದ ಬ್ರಹ್ಮವೂ ಕಾರ್ಯಾತ್ಮವಾದ ಬ್ರಹ್ಮವೂ ಅನಂತವಾದ ತನ್ನ ಸ್ವರೂಪದಲ್ಲಿರುವ ಒಂದೇ ತತ್ತ್ವವೇ ಹೊರತು ಇವೆರಡೂ ಬೇರೆಬೇರೆಯಲ್ಲ ಎಂದು ಅಭಿಪ್ರಾಯ. ಪೂರ್ಣದ ಪೂರ್ಣವನ್ನು ತೆಗೆದುಕೊಂಡಾಗ, ಎಂದರೆ ಈ ಕಾರ್ಯರೂಪದಿಂದ ಸವಿಶೇಷ ರೂಪದಿಂದ ಕಾಣುತ್ತಿರುವದನ್ನೇ, ಅವಿದ್ಯೆಯನ್ನು ವಿದ್ಯೆಯಿಂದ ನೀಗಿಕೊಂಡು ಇದರ ನಿಜದ ರೂಪದಿಂದ ಇದರ ಪೂರ್ಣತ್ವವನ್ನು ಮನದಂದುಕೊಂಡು ಅರಿತು ಕೊಂಡಾಗ ಪೂರ್ಣವೇ ಉಳಿದುಕೊಳ್ಳುತ್ತದೆ. ಇದು ಬೇರೆಯೆಂದು ತೋರು ತ್ತಿದ್ದರೂ ಇದರ ನಿಜವಾದ ಒಳಗಿಲ್ಲದ, ಹೊರಗಿಲ್ಲದ, ಅರಿವಿನ ಗಟ್ಟಿಯಾದ, ಚೈತನ್ಯರೂಪದ, ಬರಿಯ ಬ್ರಹ್ಮವೊಂದೇ ಉಳಿದುಕೊಂಡುಬಿಡುತ್ತದೆ ಎಂದರ್ಥ.

ನಾವು ಒಬ್ಬೊಬ್ಬರೂ ಭೂತಮಾತ್ರೆಗಳಿಂದಾಗಿರುವ ಕಾರ್ಯಕಾರಣ ಸಂಘಾತದ ಸಂಬಂಧದಿಂದ ಸಂಸಾರಿಗಳಾಗಿರುವಂತೆ ಅವಿದ್ಯೆಯಿಂದ ಕಾಣಿಸುತ್ತಿರುತ್ತೇವೆ. ಆದರೆ ಶ್ರುತಿಯಲ್ಲಿ ಹೇಳಿರುವ ಪರಮಾರ್ಥರೂಪವನ್ನು ಶ್ರವಣಮಾಡಿ ಗುರೂಪದೇಶ ವನ್ನನುಸರಿಸಿ ನಮ್ಮ ನಿಜವಾದ ಸ್ವರೂಪವನ್ನು ಮನದಂದುಕೊಂಡು, ಇಂದ್ರಿಯ ಗಳಿಂದಾಗಿರುವ ಪರಿಚ್ಛಿನ್ನದೃಷ್ಟಿಯನ್ನು ಬಿಟ್ಟು, ನಮ್ಮ ಸ್ವರೂಪವನ್ನು ನಾವು ಏಕಾಗ್ರತೆಯಿಂದ ನೋಡಿ ಕಂಡುಕೊಂಡಾಗ ನಾವು ಎಂದೆಂದಿಗೂ ಪೂರ್ಣರೇ, ಅಪರಿಚ್ಛಿನ್ನವಾದ ಚೈತನ್ಯೈಕರಸಸ್ವರೂಪರೇ, ಎಂಬುದು ಸ್ಫುಟವಾಗಿ ತಿಳಿದು ಬರುವದು. ಇದೇ ಸರ್ವಾತ್ಮಭಾವ, ಇದೇ ಕೃತ್ಸ್ನಭಾವ.

ಹೀಗೆ ನಮ್ಮ ಪೂರ್ಣಾತ್ಮಸ್ವರೂಪವನ್ನು ಕಂಡುಕೊಂಡಾಗ ಈಗ ನಮಗೆ ಅವಿದ್ಯಾದೃಷ್ಟಿಯಲ್ಲಿ ಕಾಣಬರುತ್ತಿರುವ ಪ್ರಪಂಚದ ಅರಿವು–ಹಗ್ಗದ ಅರಿವಿನಿಂದ ಬಾಧಿತವಾಗುವ ಹಾವಿನ ಅರಿವಿನಂತೆ–ಸಂಪೂರ್ಣವಾಗಿ ಬಾಧಿತವಾಗಿಬಿಡುವದು. ಈಗ ನಾಮರೂಪಾತ್ಮಕವಾದ ಪ್ರಪಂಚವು ನಿಜವಾಗಿ ಇರುವದೆಂದೂ ಈ ಪ್ರಪಂಚದಲ್ಲಿ ನಾವು ಬಿಡಿಬಿಡಿಯಾಗಿದ್ದುಕೊಂಡು ಬಗೆಬಗೆಯ ಸಂಸಾರವನ್ನು ಅನುಭವಿಸುತ್ತಿರುವೆವೆಂದೂ, ಶಾಸ್ತ್ರಾಚಾರ್ಯರ ಉಪದೇಶದಿಂದ ಪರಮಾರ್ಥ ತತ್ತ್ವವನ್ನು ಅರಿತುಕೊಂಡು, ಶ್ರವಣಮನನನಿದಿಧ್ಯಾಸನಗಳಿಂದ ಸಾಕ್ಷಾತ್ಕಾರಪಡಿಸಿ ಕೊಂಡು, ಆ ಬಳಿಕ ಪರಬ್ರಹ್ಮದಲ್ಲಿ ಮುಳುಗಿ, ಸಮುದ್ರದಲ್ಲಿ ಉಪ್ಪಿನ ಹರಳು

ಕರಗುವಂತೆ ಕರಗಿ, ಅದರಲ್ಲಿ ಒಂದಾಗಿಬಿಡುವೆವೆಂದೂ ತಿಳಿಯಬಾರದು. ಈ ನಮ್ಮ ವ್ಯವಹಾರದ ದೃಷ್ಟಿಯಿಂದ ನೋಡಿದರೆ ಹೀಗೆಯೇ ತೋರುವದು ನಿಜ. ಆದರೆ ಶಾಸ್ತ್ರದೃಷ್ಟಿಯನ್ನು ಅವಲಂಬಿಸಿ ನೋಡಿದಾಗ ಈ ದೃಷ್ಟಿಯು ಮಿಥ್ಯಾದೃಷ್ಟಿಯೆಂಬುದು ಸ್ಫುಟವಾಗುವದು. ಈ ನಾಮರೂಪಪ್ರಪಂಚವು, ಈಗ ತೋರುವ ರೂಪದಿಂದ ಯಾವಾಗಲೂ ಇರಲೇ ಇಲ್ಲ; ವ್ಯವಹಾರದಶೆಯಲ್ಲಿಯೂ ನಾವು ನಿಜವಾಗಿ ಸಂಸಾರಿಗಳಾಗಿರಲೇ ಇಲ್ಲ, ಎಲ್ಲವೂ ಸಚ್ಚಿದಾನಂದಾದ್ವಯರೂಪವಾದ ಪರಿಪೂರ್ಣರೂಪವಾದ ಬ್ರಹ್ಮವೇ ಆಗಿತ್ತು. ನಾವೂ ನಮ್ಮ ಸುತ್ತುಮುತ್ತಲಿನ ಭೇದಪ್ರಪಂಚವೂ ನಿಜವಾಗಿ ಎಲ್ಲವೂ ಆ ಪೂರ್ಣಬ್ರಹ್ಮದ ಮಹಿಮೆಯೇ, ಆ ಪೂರ್ಣಾತ್ಮನ ವಿಭೂತಿಯೇ, ಪರಿಪೂರ್ಣವಾದ ಆ ತತ್ತ್ವದಲ್ಲಿ ಯಾವ ಹೆಚ್ಚು ಕಡಿಮೆಯೂ ಹಿಂದೆಯೂ ಆಗಿರಲಿಲ್ಲ, ಈಗಲೂ ಆಗಿಲ್ಲ, ಮುಂದೆಯೂ ಆಗು ವದಿಲ್ಲ-ಎಂಬ ಅರಿವು ಆಗಿಬಿಡುವದು. ಇದೇ ಈ ಜಗತ್ತಿನ ಅರಿವಿನ ಬಾಧವು, ಇದೇ ಪೂರ್ಣಾತ್ಮಾನುಭವವು.

ಶಾಸ್ತ್ರದೃಷ್ಟಿಯಿಂದ ನೋಡಿದಾಗ ಮೇಲೆ ವರ್ಣಿಸಿರುವ ಅನುಭವಕ್ಕೆ ಎರಡಿಲ್ಲ, ಅದಕ್ಕೆ ಎದುರಾಗುವ ಅಡ್ಡಿಯೇ ಇರುವದಿಲ್ಲ. ಆ ದೃಷ್ಟಿಯಲ್ಲಿ ಪ್ರಪಂಚವು ಬಾಧಿತವಾದ ಮೇಲೆ ನಿಷ್ಪ್ರಪಂಚಾತ್ಮತತ್ತ್ವದ ಅನುಭವವಾಗುವದು, ಆಗ ಅದ್ವೈತವು ತಿಳಿಯಬರುವದು-ಎಂಬ ಮಾತಿಗೆ ಅರ್ಥವೇ ಇಲ್ಲ. ಆದ್ದರಿಂದಲೇ ಗೌಡಪಾದಾಚಾರ್ಯರು, "ಪ್ರಪಞ್ಚೋ ಯದಿ ವಿದ್ಯೇತ ನಿವರ್ತೇತ ನ ಸಂಶಯಃ" ಪ್ರಪಂಚವು ನಿಜವಾಗಿ ಇದ್ದಿದ್ದರೆ ಅದು ನಿವೃತ್ತವಾದ ಮೇಲೆ ಅದ್ವೈತದ ಅರಿವು ಬರುವದು ಎಂಬುದು ಸರಿಯಾದೀತು ಎಂದಿರುತ್ತಾರೆ. ಹಗ್ಗದಲ್ಲಿ ಹಾವು ತೋರುವಾಗ ಒಂದು ಹಾವು ನಿಜವಾಗಿ ಅಲ್ಲಿ ಇದ್ದುಕೊಂಡಿರುವದೆಂದೂ ಹಗ್ಗದ ತತ್ತ್ವವನ್ನು ವಿವೇಚನೆ ಮಾಡಿಕೊಂಡ ಮೇಲೆ ಅದು ಎಲ್ಲಿಗೋ ಹೋಗಿಬಿಡುವದೆಂದೂ ಯಾರೂ ಎಣಿಸುವದಿಲ್ಲ. ನಿಜವಾಗಿ ನೋಡಿದರೆ ಅದು ಹಗ್ಗದಲ್ಲಿ ಇರಲೇ ಇಲ್ಲ; ಇದನ್ನೇ ಹಗ್ಗದ ಅರಿವು ತಿಳಿಸಿಕೊಡುತ್ತದೆ. ಅಲ್ಲವೆ? 'ಹಗ್ಗವೇ ಹಾವಾಗಿ ತೋರುತ್ತಿತ್ತು' ಎಂದಲ್ಲವೆ, ನಮಗೆ ಸರಿಯಾದ ತಿಳಿವಳಿಕೆಯಾಗುವದು? ಇಷ್ಟೇ ಅಲ್ಲ. ಇದು ಹಗ್ಗವೇ ಎಂಬ ಅರಿವು ಆದಮೇಲೂ ದೂರಕ್ಕೆ ನಮಗೆ ಅದು ಮತ್ತೂ ಹಾವಿನಂತೆ ತೋರುತ್ತಲೇ ಇರಬಹುದು. ಆಗ 'ಆಹಾ ! ಈಗಲೂ ಈ ಹಗ್ಗವು ಹಾವಿನಂತೆಯೇ ತೋರುತ್ತಿದೆಯಲ್ಲ ! ಎಂಬ ಭಾವವು ನಮ್ಮ ಅಂತಃಕರಣದಲ್ಲಿ ಎದ್ದುಕೊಳ್ಳುತ್ತದೆ. ಅಲ್ಲವೆ? ಇದರಂತೆ ಪೂರ್ಣಾತ್ಮನನ್ನು ನಾವು ಕಂಡುಕೊಂಡಾಗ, "ಆಹ ! ಈ ಪ್ರಪಂಚವೆಂದು ತೋರುತ್ತಿರುವದೆಲ್ಲ ಬ್ರಹ್ಮವೇ ಅಲ್ಲವೆ?" ಎಂಬ ಭಾವವು ಕಾಣುವದು. ಶ್ರುತಿಯಲ್ಲಿ 'ಬ್ರಹ್ಮೈವೇದಂ ವಿಶ್ವಮ್' 'ಆತ್ಮೈವೇದಂ ಸರ್ವಮ್', ಇದೆಲ್ಲವೂ ಬ್ರಹ್ಮವೇ, ಇದೆಲ್ಲವೂ ಆತ್ಮನೇ-ಎಂದು ಬೋಧಿಸಿರುವದು ಈ ದೃಷ್ಟಿಯಿಂದಲೇ.

ಆದರೂ ಸಾಧಕನ ವ್ಯವಹಾರದ ದೃಷ್ಟಿಯಿಂದ ನೋಡುವಾಗ, ಅವನು ಈ ಪ್ರಪಂಚವನ್ನು ಕ್ರಿಯಾಕಾರಕಫಲಾತ್ಮಕವಾಗಿ ಕಾಣುತ್ತಿರುತ್ತಾನೆ. ಸಾಮಾನ್ಯ ಜ್ಞಾನಕರ್ಮಗಳಿಂದ ಭಾವಿತವಾದ ಅಂತಃಕರಣದಿಂದ ತಾನು ಮಾಡುತ್ತಿದ್ದ ಕ್ರಿಯೆಗಳ ದುಷ್ಫಲವನ್ನು ಕಂಡು ಶಾಸ್ತ್ರೀಯಜ್ಞಾನಕರ್ಮಗಳಿಂದ ಬಿಡಿಸಿಕೊಳ್ಳುತ್ತಾನೆ. ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ತನಗೆ ಇಷ್ಟವಾದ ಫಲಗಳನ್ನು ಪಡೆಯುವದಕ್ಕಾಗಿ ಕರ್ಮೋಪಾಸನೆಗಳನ್ನು ಮಾಡುತ್ತಿರುತ್ತಾನೆ. ಆಮೇಲೆ ಸಾಧ್ಯ ಸಾಧನರೂಪವಾದ ಈ ಜಗತ್ತಿನಲ್ಲಿ ತಾನು ಮಾಡುವ ಯಾವದೊಂದು ಸಾಧನವೂ ನಿತ್ಯವಾದ ಫಲವನ್ನು ಕೊಡಲಾರದು ಎಂಬ ಜ್ಞಾನವನ್ನು ಸಂಪಾದಿಸಿಕೊಂಡು ಈ ಎಲ್ಲಾ ಸಾಧ್ಯಸಾಧನಗಳಲ್ಲಿಯೂ ವಿರಕ್ತನಾಗುತ್ತಾನೆ. ಎಂದೆಂದಿಗೂ ಅಚ್ಚಳಿಯದೆ ನಿತ್ಯವಾಗಿ, ದುಃಖಮಿಶ್ರವಿಲ್ಲದೆ ಸುಖರೂಪವೇ ಆಗಿರುವ ಪರಮಾರ್ಥತತ್ತ್ವವೊಂದು ಉಂಟು–ಎಂಬ ಶ್ರುತ್ಯುಕ್ತಿಯನ್ನೂ ಅದರ ಅಭಿಪ್ರಾಯವನ್ನೂ ಬಲ್ಲವರಿಂದ ಕೇಳಿ ಆ ತತ್ತ್ವವನ್ನು ಕಂಡುಕೊಳ್ಳುವದಕ್ಕಾಗಿ ಪ್ರಯತ್ನಮಾಡುತ್ತಾನೆ.

ಸದ್ಗುರುವಿನ ಉಪದೇಶ, ಮತ್ತು ಪರಮೇಶ್ವರನ ಅನುಗ್ರಹ–ಇವುಗಳ ನೆರವು ಸಿಕ್ಕಿ ಹೀಗೆ ಶ್ರವಣಮನನನಿದಿಧ್ಯಾಸನಗಳನ್ನು ಮಾಡಿದಬಳಿಕ ಅವನಿಗೆ ಸಚ್ಚಿದಾನಂದ ಸ್ವರೂಪವಾದ ಪೂರ್ಣವಾದ ಪರಮಾತ್ಮತತ್ತ್ವವೊಂದೇ ಪರಮಾರ್ಥವೆಂದೂ ಅದರಲ್ಲಿ ಕ್ರಿಯಾಕಾರಕಫಲರೂಪವಾದ ಪ್ರಪಂಚವು ಎಂದಿಗೂ ಇರಲೇ ಇಲ್ಲವೆಂದೂ ನಿಶ್ಚಯವಾಗಿಬಿಡುತ್ತದೆ. ಆಗ ಈಶ್ವರ, ಗುರು, ಸಾಧಕ, ಶಾಸ್ತ್ರ, ಬಂಧ, ಮೋಕ್ಷ–ಇವೆಲ್ಲವೂ ಆ ಪೂರ್ಣಾಂಬೋಧಿಯ ಅಲೆಗಳೇ ಎಂಬಿದು ನಿಃಸಂದಿಗ್ಧವಾಗಿ ಮನದಟ್ಟಾಗುವದು.

## 47. ಪೂರ್ಣಾತ್ಮನೇ ಪರಮಾತ್ಮನು

ವೇದಾಂತದಲ್ಲಿ ಹೇಳಿರುವ ಪರಮಾತ್ಮಸ್ವರೂಪವನ್ನು ಯಾರು ಶ್ರವಣಮನನನಿದಿಧ್ಯಾಸನಗಳಿಂದ ನೇರಾಗಿ ಅರಿತುಕೊಂಡಿರುವರೋ ಅವರ ದೃಷ್ಟಿಯಲ್ಲಿ ಕಾಣುವದೆಲ್ಲವೂ ಪೂರ್ಣವಾದ ಬ್ರಹ್ಮವೊಂದೇ. ಆ ಬ್ರಹ್ಮಕ್ಕಿಂತ ಬೇರೆಯಾಗಿರುವ ಜಗತ್ತೆಂಬುದೇ ಇಲ್ಲ. ಜಗತ್ತು ಈಗ ನಮ್ಮಗಳಿಗೆ ಜಗತ್ತಾಗಿ ತೋರುತ್ತಿದ್ದರೂ ಬ್ರಹ್ಮಜ್ಞಾನಿಗಳ ದೃಷ್ಟಿಯಲ್ಲಿ ಅದು ಜಗದ್ರೂಪದಿಂದ ತೋರುವದು ಬಾಧಿತವಾಗಿ ಪೂರ್ಣಾತ್ಮನೇ ಪರಮಾರ್ಥವೆಂಬ ನಿಶ್ಚಯವುಂಟಾಗಿಬಿಟ್ಟಿರುತ್ತದೆ.

ಸರ್ವವೂ ಪರಮಾತ್ಮನೇ ಎಂಬ ಜ್ಞಾನಿಗಳ ದೃಷ್ಟಿಯನ್ನು ಅನುಸರಿಸಲಾಗದ ಜನರು ಈ ಪೂರ್ಣಾತ್ಮಜ್ಞಾನದ ವಿಷಯಕ್ಕೆ ಬಗೆಬಗೆಯ ಸಂಶಯಗಳನ್ನು ತಾಳುತ್ತಿರುವರು. ಇದನ್ನು ಗ್ರಹಿಸಲಾರದ ಪ್ರತಿವಾದಿಗಳಂತೂ ಹಲವು ಶಂಕೆಗಳನ್ನು ಈ ವಾದದಮೇಲೆ ತಂದು ಹೇರುವರು. ಪೂರ್ಣಾತ್ಮನೊಬ್ಬನೇ ಪರಮಾರ್ಥವು

ಎಂದು ಕಂಡುಕೊಂಡವನಿಗೆ ಇನ್ನು ಮುಂದೆ ಈ ಜಗತ್ತು ಕಾಣಿಸುವದೇ ಇಲ್ಲ ವೇನು? ಕಾಣಿಸದೆ ಇದ್ದರೆ ಅಂಥ ಜ್ಞಾನಿಯು ದೇಹವನ್ನು ಧರಿಸಿಕೊಂಡಿದ್ದು ವ್ಯವಹಾರಮಾಡುವದು ಹೇಗಾದೀತು? ಅವನಿಗೆ ಈ ಜಗತ್ತಿನಲ್ಲಿ ಕಾಣುವ ಚೇತನ, ಅಚೇತನ; ಸಸ್ಯ, ತಿರ್ಯಕ್ಪ್ರಾಣಿ; ಕೀಳು ಪ್ರಾಣಿ, ಮನುಷ್ಯರು-ಮುಂತಾದ ಭೇದಗಳು ಗೋಚರಿಸುವದಿಲ್ಲವೋ, ಹೇಗೆ? ಅಂಥ ಜ್ಞಾನಿಯು ಹೇಗೆ ವ್ಯವಹರಿಸುವನು? ಅವನು ತನ್ನ ಅನುಭವಗಳನ್ನು ಯಾರೊಡನೆ ಹೇಗೆ ಹೇಳಿಕೊಳ್ಳುವನು? ಮತ್ತೊಬ್ಬರ ಅನುಭವಗಳನ್ನು ಅವನು ಹೇಗೆ ಅರಿತುಕೊಳ್ಳುವನು? ಜಗತ್ತನ್ನೇ ಕಾಣದಿರುವ ಆತ್ಮಜ್ಞಾನಿಯಿಂದ ಜಗತ್ತಿಗೆ ಯಾವ ಕಲ್ಯಾಣವಾದೀತು? ಜ್ಞಾನಿಯು ಜ್ಞಾನಮಾತ್ರದಿಂದ ಕೃತಕೃತ್ಯನಾದರೆ ಮುಂದೆ ಏನೂ ಮಾಡತಕ್ಕದ್ದೇ ಇರುವದಿಲ್ಲ ವಾದ್ದರಿಂದ ಅವನು ಜ್ಞಾನವಾದ ಕ್ಷಣವೇ ದೇಹವನ್ನು ಬಿಟ್ಟುಬಿಡುವನೇನು? ಅವನಿಗೆ ಜ್ಞಾನವಾಗುವ ಹಿಂದೆ ಅವನು ಮಾಡಿದ್ದ ಕರ್ಮಗಳು ಫಲವನ್ನು ಕೊಡದೆ ಅಳಿಯುವದು ಹೇಗೆ? ಅಳಿಯದಿದ್ದರೆ ಅವನಿಗೂ ಜನ್ಮಾಂತರವಾಗ ಬೇಕಲ್ಲವೆ? ಜ್ಞಾನವಾದಮೇಲೂ ಬದುಕಿದ್ದರೆ ಅಂಥ ಜ್ಞಾನಿಯು ಮತ್ತೆ ದೇಹ ಯಾತ್ರೆಗೂ ಲೋಕಸಂಗ್ರಹಕ್ಕೂ ಯಾವದಾದರೊಂದು ಕರ್ಮವನ್ನು ಮಾಡ ಬೇಕಲ್ಲವೆ? ಹಾಗೆ ಮಾಡಿದರೆ ಆ ಕರ್ಮಗಳಿಗೂ ಫಲವುಂಟಾಗಲೇಬೇಕಲ್ಲವೆ? ಹಾಗೆ ಫಲವುಂಟಾಗುವದಾದರೆ ಜ್ಞಾನಿಗೆ ಪುನರ್ಜನ್ಮವೇ ಇಲ್ಲವೆಂದು ಒಪ್ಪುವದು ಹೇಗಾದೀತು? ಇತ್ಯಾದಿ, ಇತ್ಯಾದಿ.

ಈ ಪ್ರಶ್ನೆಗಳೂ ಆಕ್ಷೇಪಗಳೂ 'ಇರುವದೆಲ್ಲವೂ ಬ್ರಹ್ಮವೇ' ಎಂಬ ಶಾಸ್ತ್ರದೃಷ್ಟಿ ಯನ್ನು ಅವಲಂಬಿಸಲಾರದವರಿಂದ ಆಗಾಗ್ಗೆ ಹೊರತೋರಿಕೊಳ್ಳುತ್ತಲೇ ಇರುವವು. ಇವುಗಳನ್ನು ಸುಮ್ಮನೆ ತರ್ಕದೃಷ್ಟಿಯಿಂದ ಪರಿಹರಿಸಿದ ಮಾತ್ರಕ್ಕೆ ಅಂಥ ಪೃಚ್ಛಕರಿಗೆ ಅಥವಾ ಆಕ್ಷೇಪಕರಿಗೆ ಎಂದಿಗೂ ಸಮಾಧಾನವಾಗುವಂತಿಲ್ಲ. ಆದರೂ ಜ್ಞಾನಿ ಯಾದವನು ತತ್ತ್ವದೃಷ್ಟಿಯನ್ನು ಅವಲಂಬಿಸುವದಕ್ಕೆ ಸಹಾಯಕವಾದ ಸೂಚನೆ ಗಳನ್ನೊಳಗೊಂಡ ಉಪದೇಶಗಳನ್ನು ಜಿಜ್ಞಾಸುಗಳಿಗೆ ಕೊಡುತ್ತಲೇ ಇರುತ್ತಾನೆ. ಅವನು ತರ್ಕವನ್ನು ಅವಲಂಬಿಸಿ ಉತ್ತರವನ್ನು ಕೊಡುವಾಗಲೂ ತತ್ತ್ವಾನುಭವದ ಕಡೆಗೆ ಲಕ್ಷ್ಯವಿಟ್ಟೇ ಉತ್ತರವನ್ನು ಕೊಡುತ್ತಿರುತ್ತಾನೆ. ಆದ್ದರಿಂದ ತತ್ತ್ವನಿರ್ಣಯಕ್ಕಾಗಿ ವೀತರಾಗರಾದವರು ಮಾಡುವ ಚರ್ಚೆಯೂ ನಿಷ್ಫಲವಲ್ಲ. ಜಿಜ್ಞಾಸುಗಳಾದವರು ತತ್ತ್ವವನ್ನು ತಿಳಿದುಕೊಳ್ಳಬೇಕೆಂಬ ಸದಿಚ್ಛೆಯಿಂದಲೇ ಪ್ರಶ್ನೆಯನ್ನು ಮಾಡಬೇಕು; ಅನುಭವಾನುಸಾರಿಯಾದ ಉತ್ತರವು ಸಿಕ್ಕಿದ ಕೂಡಲೆ ತರ್ಕವನ್ನು ನಿಲ್ಲಿಸಿ ಅನು ಭವವನ್ನೇ ಮೇಲುಗೈಯೆಂದು ಒಪ್ಪಲು ಸಿದ್ಧರಾಗಿರಬೇಕು. ಹಾಗಾದರೇ ವಾದವು ಸಫಲವಾಗುತ್ತದೆ. ಆದ್ದರಿಂದ ಈ ದೃಷ್ಟಿಯಿಂದ ಮೇಲೆ ನಾವು ಉದಾಹರಿಸಿರುವ ಪ್ರಶ್ನೆಗಳಿಗೆ ಸಂಕ್ಷೇಪವಾಗಿ ಇಲ್ಲಿ ಉತ್ತರವನ್ನು ಕೊಡುವದಕ್ಕೆ ಪ್ರಯತ್ನಿಸುವೆವು.

ಪೂರ್ಣಾತ್ಮನೇ ಪರಮಾರ್ಥವು ಎಂದು ಕಂಡುಕೊಂಡವನಿಗೆ ಜಗತ್ತು ಕಾಣಿಸುವದಿಲ್ಲವೆ?–ಎಂಬ ಪ್ರಶ್ನೆಗೆ ಆಗಲೆ ಉತ್ತರವನ್ನು ಹೇಳಿದ್ದಾಗಿದೆ. ಪೂರ್ಣಾತ್ಮನೆಂದರೆ ಜಗದ್ಭಿನ್ನವಾದ ಒಂದಾನೊಂದು ತತ್ತ್ವವಲ್ಲ. ಚೇತನಾಚೇತನರೂಪವಾದ ಜಗತ್ತೆಂದು ವ್ಯವಹಾರದೃಷ್ಟಿಯಿಂದ ನಾವು ಎಣಿಸಿರುವದೇ ನಿಜವಾಗಿ ಪೂರ್ಣಾತ್ಮನು ಎಂಬುದೇ ವೇದಾಂತದ ಉಪದೇಶವು. ಪೂರ್ಣಾತ್ಮನನ್ನು ಕಂಡಾಗ ಜಗತ್ತೆಂಬುದಿಲ್ಲ, ಜಗತ್ತನ್ನು ಕಾಣುವಾಗ ಪೂರ್ಣಾತ್ಮನ ಅರಿವಿಲ್ಲ. "ಪೂರ್ಣಾತ್ಮನೇ ಪರಮಾರ್ಥವು ಎಂದು ಕಂಡುಕೊಂಡವನು" ಎಂದರೆ ಒಬ್ಬ ವ್ಯಕ್ತಿಯೆಂದು ಈ ದೃಷ್ಟಿಯಿಂದ ಹೇಳುವದಕ್ಕೆ ಬರುವದಿಲ್ಲ. ಜಾತಿವ್ಯಕ್ತಿಗಳೆಂಬ ಭೇದವು ಇಲ್ಲದ ಅನಂತತತ್ತ್ವವಲ್ಲವೆ, ಪೂರ್ಣಾತ್ಮನೆಂಬುದು? ಆದರೆ ಲೋಕದಲ್ಲಿ ತತ್ತ್ವಜ್ಞಾನವಾದ ಬಳಿಕವೂ ಅಜ್ಞಾನಿಗಳ ವ್ಯವಹಾರವೇ ಪ್ರಚಲಿತವಾಗಿರುವದನ್ನು ಮನದಂದು ಜ್ಞಾನಿಗಳು ವ್ಯಾವಹಾರಿಕ ಭಾಷೆಯನ್ನು ಅನುಸರಿಸಿಯೂ ಮಾತನಾಡಬೇಕಾಗುತ್ತದೆ. ಸೂರ್ಯನ ಸುತ್ತಲೂ ಭೂಮ್ಯಾದಿಗಳು ಚಲಿಸುತ್ತಿವೆ ಎಂಬ ಸಿದ್ಧಾಂತವನ್ನು ಮನಗಂಡ ಖಗೋಳಜ್ಞನು ಕೂಡ "ಸೂರ್ಯನು ಹುಟ್ಟಿದನು, ತಲೆಯಮೇಲಕ್ಕೆ ಬಂದನು, ಪಶ್ಚಿಮದಲ್ಲಿ ಮುಳುಗಿದನು" ಎಂದೇ ವ್ಯವಹಾರಿಸುತ್ತಾನಲ್ಲವೆ? ಅಷ್ಟುಮಾತ್ರದಿಂದ ಅವನ ಖಗೋಳಸಿದ್ಧಾಂತಕ್ಕೇನೂ ಹಾನಿಯಿಲ್ಲವಷ್ಟೆ? ಇದರಂತೆ ಪೂರ್ಣಾತ್ಮ ಜ್ಞಾನಿಯು ಒಬ್ಬ ವ್ಯಕ್ತಿಯು ಎಂದು ತಿಳಿಯುವ ಲೋಕದ ಜನರ ದೃಷ್ಟಿಯಿಂದ, ಜ್ಞಾನಿಗೆ ಜಗತ್ತು ಕಾಣಿಸುತ್ತಲೇ ಇರುತ್ತದೆಯಾದರೂ ಅವನಿಗೆ ಅದು ಬ್ರಹ್ಮವೇ ಎಂಬ ಅರಿವೇ ಸುನಿಶ್ಚಿತವಾಗಿದ್ದು ಕೊಂಡಿರುತ್ತದೆ ಎಂದು ಹೇಳಬೇಕಾಗುವದು.

ಈ ವ್ಯವಹಾರದೃಷ್ಟಿಯನ್ನವಲಂಬಿಸಿ ಕೊಡುವ ಉತ್ತರದಲ್ಲಿ "ಜಗತ್ತು ಕಂಡರೂ ಬಾಧಿತವಾಗಿ ಅನುವೃತ್ತವಾಗಿರುತ್ತದೆ" ಎಂಬ ವೇದಾಂತದ ಅಭಿಪ್ರಾಯವು ಅಡಕವಾಗಿರುತ್ತದೆ. ಖಗೋಳಜ್ಞನ ವ್ಯವಹಾರದಲ್ಲಿ ಬಾಧಿತಾನು ವೃತ್ತಿಯಿಂದ ಸೂರ್ಯನು ಸಂಚರಿಸುತ್ತಿರುವಂತೆಯೇ ಇದನ್ನು ತಿಳಿಯಬೇಕು. ಜ್ಞಾನಿಯ ವ್ಯವಹಾರವೆಲ್ಲವೂ ಬಾಧಿತಾನುವೃತ್ತಿಯಿಂದಲೇ ಸಾಗುತ್ತಿರುವದು. ಜ್ಞಾನಿಯ ದೃಷ್ಟಿಯಿಂದ ಸ್ವತಂತ್ರವಾದ ಜಗತ್ತಾಗಲಿ ಜಗತ್ಕಲ್ಯಾಣವೆಂಬುದಾಗಲಿ ಇಲ್ಲವೇ ಇಲ್ಲವಾದರೂ ವ್ಯವಹಾರದೃಷ್ಟಿಯಿಂದ ಜಗತ್ಕಲ್ಯಾಣವೆಂಬುದು ಉಂಟೆಂದು ಹೇಳಲು ಯಾವ ಅಡ್ಡಿಯೂ ಇರುವದಿಲ್ಲ.

ಜ್ಞಾನಿಯು ಜ್ಞಾನಮಾತ್ರದಿಂದ ಕೃತಕೃತ್ಯನಾದರೂ ಲೋಕಸಂಗ್ರಹಕ್ಕಾಗಿ ಕೆಲಸವನ್ನು ಮಾಡುತ್ತಿರಬಹುದು ಎಂಬ ಉತ್ತರವನ್ನೂ ಹೀಗೆಯೇ ವ್ಯಾವಹಾರಿಕ ದೃಷ್ಟಿಯದೆಂದು ತಿಳಿಯಬೇಕು. ಜ್ಞಾನಿಗೆ ಪರಮಾರ್ಥದೃಷ್ಟಿಯಿಂದ ದೇಹವೇ ಇರುವದಿಲ್ಲ; ಆ ದೃಷ್ಟಿಯಲ್ಲಿ ಆತ್ಮನೊಬ್ಬನೇ ಇರುತ್ತಾನೆ, ಅವನು ಎಂದೆಂದಿಗೂ

ಅಶರೀರಿಯೇ ಆಗಿರುತ್ತಾನೆ. ಆದರ ವ್ಯವಹಾರದೃಷ್ಟಿಯಿಂದ ಎಲ್ಲರಿಗೂ ಶರೀರ ವಿರುವಂತೆ ಜ್ಞಾನಿಗೂ ಶರೀರವಿರಬಹುದಾಗಿದೆ; ಅದೂ ಬಾಧಿತಾನುವೃತ್ತಿಯಿಂದಲೇ ಎಂದು ತಿಳಿಯಬೇಕು. ಜ್ಞಾನವುಂಟಾದ ಮಾತ್ರದಿಂದ ಜ್ಞಾನಿಯ ಆ ಶರೀರವು ಬಿದ್ದುಹೋಗುವದಿಲ್ಲ. ಹಗ್ಗವು ಹಗ್ಗವೆಂದು ನಿಶ್ಚಯವಾದಮೇಲೂ ಹಾವಿನಂತೆಯೇ ತೋರುತ್ತಿರಬಹುದಲ್ಲವೆ? ಹಗ್ಗದ ಜ್ಞಾನವು ಹಾವನ್ನೇನೂ ಕೊಂದುಹಾಕುವದಿಲ್ಲ ವಷ್ಟೆ? ಇದರಂತೆ ತತ್ತ್ವಜ್ಞಾನವೇನೂ ಶರೀರವನ್ನು ನಾಶಮಾಡುವದಿಲ್ಲ, ಏಕೆಂದರೆ ಜ್ಞಾನವು ಇರುವ ವಸ್ತುವನ್ನು ತಿಳಿಸಿಕೊಡುವದೇ ಹೊರತು ಇದ್ದದ್ದನ್ನು ನಾಶಗೊಳಿಸುವ ಅಥವಾ ಇಲ್ಲದ್ದನ್ನು ಹೊಸದಾಗಿ ಉಂಟುಮಾಡುವ ಕಾರಕವಲ್ಲ.

"ಜ್ಞಾನವಾಗುವ ಮೊದಲೂ ಜ್ಞಾನವುಂಟಾದಮೇಲೂ ಮಾಡಿದ ಕರ್ಮಗಳು ತಮ್ಮತಮ್ಮ ಫಲವನ್ನು ಕೊಡಲೇಬೇಕಲ್ಲವೆ?" ಎಂಬ ಪ್ರಶ್ನೆಗೂ ಇದೇ ಬಗೆಯ ಉತ್ತರವನ್ನು ಊಹಿಸಿಕೊಳ್ಳಬೇಕು. ಪರಮಾರ್ಥದೃಷ್ಟಿಯಿಂದ ನೋಡಿದಾಗ ಆತ್ಮನಲ್ಲಿ ಯಾವ ಕರ್ಮವೂ ಇರುವದೇ ಇಲ್ಲ. ಕರ್ಮ, ಅಕರ್ಮ-ಎಂಬಿವು ಅನಾತ್ಮಕ್ಕೆ ಸೇರಿದವುಗಳಾಗಿವೆ. ಶರೀರೇಂದ್ರಿಯಮನ ಆದಿಗಳು ಯಾವವೂ ಪರಮಾರ್ಥವಲ್ಲ, ಅವುಗಳೆಲ್ಲವೂ ಆತ್ಮಮಾತ್ರವೇ-ಎಂಬ ಅರಿವು ಯಾವನಿಗೆ ಆಗಿರುತ್ತದೆಯೋ ಅವನಿಗೆ ಕರ್ಮದ ಸಂಬಂಧವು ಹೇಗೆ ಇದ್ದೀತು? ಅಜ್ಞಾನಿ ಯಾದವನಿಗೆ ನಾನು ಕರ್ತೃ, ಭೋಕ್ತೃ-ಎಂಬ ಬುದ್ಧಿಯು ಇರುವದು ಸ್ವಾಭಾವಿಕ; ಆದರೆ ಜ್ಞಾನಿಯ ದೃಷ್ಟಿಯಿಂದ ಅದು ಹೇಗೆತಾನೆ ನಿಂತೀತು? ಆದ್ದರಿಂದಲೇ ಶ್ರೀಶಂಕರಭಗವತ್ಪಾದರವರು ಸೂತ್ರ ಭಾಷ್ಯದಲ್ಲಿ ಹೀಗೆಂದಿರುತ್ತಾರೆ: **"ಪೂರ್ವಸಿದ್ಧ -ಕರ್ತೃತ್ವಭೋಕ್ತೃತ್ವ ವಿಪರೀತಂ ಹಿ ತ್ರಿಷ್ವಪಿ ಕಾಲೇಷು ಅಕರ್ತೃತ್ವಾಭೋಕ್ತೃತ್ವಸ್ವರೂಪಂ ಬ್ರಹ್ಮಾಹಮಸ್ಮಿ ನೇತಃ ಪೂರ್ವಮಪಿ ಕರ್ತಾ ಭೋಕ್ತಾ ವಾ ಅಹಮಾಸಮ್, ನೇದಾನೀಂ ನಾಪಿ ಭವಿಷ್ಯತ್ಕಾಲೇ ಇತಿ ಬ್ರಹ್ಮವಿದವಗಚ್ಛತಿ ।"** ಹಿಂದೆ ತಾನು ಕರ್ತೃವೆಂದೂ ಭೋಕ್ತೃವೆಂದೂ ಭಾವಿಸಿಕೊಂಡಿದ್ದದ್ದಕ್ಕೆ ವಿಪರೀತವಾಗಿ ಬ್ರಹ್ಮಜ್ಞಾನಿಯು "ಮೂರು ಕಾಲಗಳಲ್ಲಿಯೂ ಅಕರ್ತೃವೂ ಅಭೋಕ್ತೃವೂ ಆದ ಬ್ರಹ್ಮವೇ ನಾನು; ಇದಕ್ಕೆ ಹಿಂದೆಯೂ ಕರ್ತೃಭೋಕ್ತೃವಾಗಿರಲಿಲ್ಲ, ಈಗಲೂ ಇಲ್ಲ, ಇನ್ನು ಮುಂದೆಯೂ ಇರುವದಿಲ್ಲ ಎಂದೇ ನಿಶ್ಚಯಿಸಿಕೊಂಡಿರುತ್ತಾನೆ" ಎಂಬುದು ಈ ವಾಕ್ಯದ ಅರ್ಥ. ಆದ್ದರಿಂದ ಶರೀರೇಂದ್ರಿಯಗಳ ಸಂಬಂಧವು ಯಾವಾಗಲೂ ಇಲ್ಲದ, ಕರ್ತೃತ್ವ ಭೋಕ್ತೃತ್ವರಹಿತನಾದ ಜ್ಞಾನಿಗೆ ಕರ್ಮವು ಇದೆಯೆಂದಾಗಲಿ ಅದು ಕ್ರಮಕ್ರಮವಾಗಿ ನಾಶವಾಗ ಬೇಕೆಂದಾಗಲಿ ಶಾಸ್ತ್ರದೃಷ್ಟಿಯಿಂದ ಶಂಕಿಸುವದಕ್ಕೆ ಬರುವದೇ ಇಲ್ಲ.

ಆದರೂ ಬಾಧಿತಾನುವೃತ್ತಿಯಿಂದ ಶರೀರವೂ ಕರ್ಮವೂ ಜ್ಞಾನಿಗೆ ಇರಬಹು ದೆಂಬ ದೃಷ್ಟಿಯಿಂದ ಮೇಲಿನ ಪ್ರಶ್ನೆಗೆ ಮತ್ತೊಂದು ಉತ್ತರವನ್ನು ಕೊಡಬಹುದು.

ಹಿಂದಕ್ಕೆ ಕರ್ತೃಭೋಕ್ತೃತ್ವಬುದ್ಧಿಯಿಂದ ಇವನು ಅನೇಕ ಕರ್ಮಗಳನ್ನು ಮಾಡಿರುತ್ತಾನೆಂಬುದು ವ್ಯವಹಾರದೃಷ್ಟಿಯಿಂದ ನಿಜ; ಆದರೂ ಸ್ವಪ್ನಕಾಲದಲ್ಲಿ ಮಾಡಿದ ಕರ್ಮಗಳು ಎಚ್ಚತ್ತಕೂಡಲೆ ವಿಲಯವಾಗಿಬಿಡುವಂತೆ ಜ್ಞಾನವುಂಟಾದಕೂಡಲೆ ಹಿಂದಿನ ಸಂಚಿತಕರ್ಮಗಳೆಲ್ಲವೂ ವಿಲಯವಾಗಿಬಿಡುತ್ತವೆ. ಬಹಳವಾಗಿ ಸಾಲವನ್ನು ಮಾಡಿಕೊಂಡವನು ದಿವಾಳಿಯಾದಾಗ ಸಾಲಗಾರರ ಕಾಟ ಉಳಿಯುವದೆ? ಸರಕಾರದವರು ಪ್ರಜೆಗಳಿಂದ ಸಾಲವನ್ನು ತೆಗೆದುಕೊಂಡಿದ್ದು ಬರೆದುಕೊಟ್ಟಿರುವ ಪತ್ರಗಳು ಆ ಸರಕಾರವೇ ಅಳಿದಮೇಲೂ ಬೆಲೆಯುಳ್ಳವಾಗಿದ್ದಾವೆ? ಮಾಯೆಯಲ್ಲಿ ನಿರ್ಮಿತವಾದ ಭಕ್ಷ್ಯಭೋಜ್ಯಾದಿಗಳನ್ನು ಅರ್ಧಉಂಡಿರುವಲ್ಲಿ ಮಾಯಾವಿಯು ಆ ಮಾಯೆಯನ್ನು ಉಪಸಂಹಾರಮಾಡಿಕೊಂಡ ಮೇಲೂ ಅವು ಉಳಿದಿರುವವೆ? ಇಲ್ಲವಷ್ಟೆ. ಇದರಂತೆ ಜ್ಞಾನವಾದ ಬಳಿಕ ಹಿಂದಿನ ಕರ್ಮಗಳೆಲ್ಲವೂ ಕ್ಷಯವಾಗಿ ಹೋಗುವವು. ಅವುಗಳಿಗೆ ಮತ್ತೆ ಜನ್ಮಾಂತರವನ್ನು ಕೊಡುವ ಸಾಮರ್ಥ್ಯವಿರುವದಿಲ್ಲ. ಆದ್ದರಿಂದಲೇ ಶ್ರುತಿಯು **"ಕ್ಷೀಯನ್ತೇ ಚಾಸ್ಯ ಕರ್ಮಾಣಿ ತಸ್ಮಿನ್ ದೃಷ್ಟೇ ಪರಾವರೇ"** ಆ ಪರಾವರನಾದ ಪರಮಾತ್ಮನನ್ನು ಕಂಡುಕೊಂಡಾಗ ಜ್ಞಾನಿಯ ಕರ್ಮಗಳು ಕ್ಷಯವಾಗಿಬಿಡುವವು–ಎಂದು ಹೇಳುತ್ತಿದೆ. ಭಗವದ್ಗೀತೆಯಲ್ಲಿಯೂ 'ಜ್ಞಾನಾಗ್ನಿಯು ಸರ್ವಕರ್ಮಗಳನ್ನೂ ಬೂದಿಗೈಯುವದು' ಎಂದು ಹೇಳಿರುತ್ತದೆ.

ಇದರಂತೆ ಜ್ಞಾನವುಂಟಾದಮೇಲೆ ಲೋಕಸಂಗ್ರಹಾರ್ಥವಾಗಿ ಮಾಡಬಹುದಾದ ಕರ್ಮಗಳೂ ಫಲದಾಯಕವಾಗದೆ ಇರುತ್ತವೆ. ಅಜ್ಞಾನದಿಂದ ಕರ್ತೃತ್ವವಿದ್ದಾಗ ಮಾಡಿದ ಕರ್ಮಗಳೇ ಫಲವನ್ನು ಕೊಡಲಾಗದಿರುವಾಗ ಕರ್ತೃತ್ವಬುದ್ಧಿಯು ನಾಶವಾದ ಬಳಿಕ ಮಾಡುವ ಕರ್ಮಾಭಾಸಗಳು ಹೇಗೆ ತಾನೆ ಫಲವನ್ನು ಕೊಟ್ಟಾವು? ಸಾಲವನ್ನು ಮಾಡಿದ್ದರೂ ದಿವಾಳಿಯಾದವನಿಗೇ ಸಾಲದ ಕಾಟವಿಲ್ಲವೆನ್ನುವಾಗ, ಸಾಲವನ್ನೇ ಮಾಡದಿರುವವನಿಗೆ ಅದರ ಕಾಟವು ಹೇಗಿರಬೇಕು? ಆದ್ದರಿಂದ ಮಾಯಾವಿಯು ಮಿಕ್ಕವರೆಲ್ಲರನ್ನೂ ತನ್ನ ಮಾಯೆಯ ಬಲದಿಂದ ಮೋಹಗೊಳಿಸುತ್ತಿದ್ದರೂ ತಾನುಮಾತ್ರ ಅದರಿಂದ ಮೋಹಿತನಾಗದಿರುವಂತೆ ಜ್ಞಾನಿಯ ಕರ್ಮದಿಂದ ಲೋಕಸಂಗ್ರಹವಾಗುತ್ತಿದ್ದರೂ ಜ್ಞಾನಿಗೆ ಮಾತ್ರ ಅದರ ಲೇಪವು ಒಂದಿಷ್ಟೂ ಆಗಲಾರದೆಂಬುದು ಯುಕ್ತವೇ ಆಗಿರುತ್ತದೆ.

ಇನ್ನು ಈ ಶರೀರವನ್ನುಂಟುಮಾಡಿ ಫಲವನ್ನು ಕೊಡುವದಕ್ಕೆ ಆರಂಭಿಸಿರುವ ಕರ್ಮದ ವಿಚಾರವೊಂದು ಉಳಿದಿದೆಯಷ್ಟೆ. ಅದೂ ಬಾಧಿತಾನುವೃತ್ತಿಯಿಂದಲೇ ಉಳಿದಿರುತ್ತದೆ ಎಂಬುದನ್ನು ಮರೆಯಬಾರದು. ಜ್ಞಾನಿಯ ದೃಷ್ಟಿಯಿಂದ ನೋಡಿದಾಗ ಅವನು ಎಂದೆಂದಿಗೂ ಅಶರೀರಿಯೇ. "ಅಶರೀರನಾಗಿಯೇ ಇರುತ್ತಿರುವವನನ್ನು ಪ್ರಿಯಾಪ್ರಿಯಗಳು ಸೋಂಕಲಾರವು" ಎಂದು ಶ್ರುತಿಯು ಸಾರುತ್ತಿದೆ. ಆದ್ದರಿಂದ

ಈ ದೃಷ್ಟಿಯಿಂದ ನೋಡಿದಾಗ ಪ್ರಾರಬ್ಧಕರ್ಮವಾಗಲಿ ಅದರಿಂದಾಗುವ ಪ್ರಿಯಾ ಪ್ರಿಯಗಳಾಗಲಿ ನಿಜವಾಗಿ ಜ್ಞಾನಿಗೆ ಇರುವದೇ ಇಲ್ಲ. ಅವನು ಎಂದೆಂದಿಗೂ ನಿತ್ಯಶುದ್ಧಬುದ್ಧಮುಕ್ತಸ್ವಭಾವನೇ ಆಗಿರುತ್ತಾನೆ.

ಆದರೂ ವ್ಯವಹಾರದ ದೃಷ್ಟಿಯಿಂದ ಕಾಣುವ ಶರೀರ, ಇಂದ್ರಿಯಗಳು, ಅವುಗಳ ಕರ್ಮಗಳು–ಇವು ಆರಬ್ಧಕರ್ಮದ ವೇಗವು ಇರುವಷ್ಟು ಕಾಲದವರೆಗೂ ಭೋಗ ವನ್ನುಂಟುಮಾಡುತ್ತಿರುವವೆಂದು ಹೇಳಿದರೆ ತಪ್ಪಾಗುವದಿಲ್ಲ. ಕುಂಬಾರನು ಗಡಿಗೆ ಯನ್ನು ಮಾಡುವದಕ್ಕೆಂದು ತಿರುಗಿಸಿದ ಚಕ್ರವು ಗಡಿಗೆಯಾದ ಮೇಲೂ ಹಿಂದೆ ಕೋಲಿನಿಂದ ತಿರುಗಿಸಿದ ವೇಗವು ಇದ್ದುಕೊಂಡಿರುವವರೆಗೂ ತಿರುಗುತ್ತಲೇ ಇರುವದಷ್ಟೆ? ಆಗ ಚಕ್ರದ ತಿರುಗುವಿಕೆಯಿಂದ ಕುಂಬಾರನಿಗೆ ಮತ್ತೆ ಯಾವ ಹೊಸ ಪ್ರಯೋಜನವೂ ಆಗುವಂತಿಲ್ಲ, ಅಲ್ಲವೆ? ಇದರಂತೆ ಪ್ರಾರಬ್ಧಕರ್ಮವು ತನ್ನ ಫಲವನ್ನು ಕೊಡುತ್ತಲೇ ಇರಬಹುದು; ಅದನ್ನು ಜ್ಞಾನಿಯು ಅನುಭವಿಸುತ್ತಲೂ ಇರಬಹುದು; ಇದೆಲ್ಲವೂ ಆಭಾಸಮಾತ್ರವೆಂದೂ ಪರಮಾರ್ಥವಾಗಿ ಅದ್ವಿತೀಯಾತ್ಮನೊಬ್ಬನೇ ಪರಮಾರ್ಥ ವೆಂದೂ ಜ್ಞಾನವಿರಲೂಬಹುದು. ಇದರಲ್ಲಿ ಯಾವ ವಿರೋಧವೂ ಇರುವದೇ ಇಲ್ಲ.

ಈ ದೃಷ್ಟಿಯಿಂದ ನೋಡಿದರೆ ಜ್ಞಾನಿಯಾದವನು ತನ್ನ ಪ್ರಾರಬ್ಧಕರ್ಮದಿಂದ ಬೇರೆಬೇರೆಯ ವರ್ಣಾಶ್ರಮಗಳಲ್ಲಿರಬಹುದು; ಬಗೆಬಗೆಯ ಕರ್ಮಗಳನ್ನು ಮಾಡುತ್ತಿರಬಹುದು. ಈ ಕರ್ಮಗಳಿಂದ ಲೋಕಕ್ಕೆ ಕಲ್ಯಾಣವೇ ಆಗುತ್ತಿರುವದು. ಆದರೆ ಅದರಿಂದ ಜ್ಞಾನಿಯ ಅಂತಃಕರಣದಲ್ಲಿ ಯಾವ ಪ್ರತಿಕ್ರಿಯೆಯೂ ಆಗ ಲಾರದು. ಅವನು ಜೀವನ್ಮುಕ್ತನಾಗಿರುವನು, ಇನ್ನು ಮುಂದೆ ಅವನಿಗೆ ಅವಿದ್ಯಾ ಮೋಹವು ಎಂದಿಗೂ ಉಂಟಾಗಲಾರದು.

ಹೀಗೆ ಜ್ಞಾನಿಯು ಪ್ರಾರಬ್ಧಕರ್ಮದ ಫಲವನ್ನು ಪೂರ ಅನುಭವಿಸಿದ ಬಳಿಕ ಅವನಿಗೆ ಯಾವ ಗತಿಯಾಗುವದು?–ಎಂಬುದೊಂದು ಕುತೂಹಲದ ಪ್ರಶ್ನೆಯು ಎದ್ದುಕೊಳ್ಳಬಹುದು. ಜ್ಞಾನಿಯಾದವನು ಈ ಶರೀರವನ್ನು ಬಿಟ್ಟರೆ ಅವನಿಗೆ ಮತ್ತೊಂದು ಶರೀರವು ಬರುವದೊ, ಇಲ್ಲವೊ? ಇದು ಬರಿಯ ಕುತೂಹಲದ ಪ್ರಶ್ನೆಯೇ ಸರಿ. ಏಕೆಂದರೆ ಜ್ಞಾನಸಾಧನವನ್ನು ಅನುಷ್ಠಾನಮಾಡಿದರೂ ಜ್ಞಾನವು ಈ ಜನ್ಮದಲ್ಲಿಯೇ ಉಂಟಾಗಬಹುದು, ಅಥವಾ ಜ್ಞಾನೋತ್ಪತ್ತಿಗೆ ಯಾವದಾದರೂ ಪ್ರತಿಬಂಧಕವಿದ್ದರೆ ಆ ಪ್ರತಿಬಂಧಕವು ಮುಗಿಯದಿದ್ದರೆ–ಹಿಂದೆ ಮಾಡಿದುವ ಯಾವ ದಾದರೂ ಒಂದು ಪ್ರಬಲವಾದ ಕರ್ಮದ ವಿಪಾಕವು ಆಗದೆ ಉಳಿದುಕೊಂಡಿದ್ದರೆ– ಶ್ರವಣಾದಿಸಾಧನಗಳನ್ನು ಮಾಡಿದರೂ ಆ ಕೂಡಲೆ ಜ್ಞಾನವುಂಟಾಗದೆಯೂ ಇರಬಹುದಾಗಿದೆ; ಆದ್ದರಿಂದಲೇ 'ಅನೇಕಜನ್ಮಸಂಸಿದ್ಧಸ್ತತೋ ಯಾತಿ ಪರಾಂ ಗತಿಮ್' ಎಂದು ಭಗವಂತನು ಈ ಜನ್ಮದಲ್ಲಿ ಅನುಷ್ಠಾನಮಾಡಿದ ಜ್ಞಾನ ಸಾಧನಕ್ಕೆ

ಫಲವು ಸಿದ್ಧಿಸುವದಕ್ಕೆ ಮುಂದೆ ಅನೇಕಜನ್ಮಗಳೂ ಬೇಕಾಗಬಹುದೆಂದು ಹೇಳಿರುತ್ತಾನೆ. ಆದರೆ ಜ್ಞಾನವುಂಟಾದ ಬಳಿಕ ಅದರ ಫಲವಾದ ಮೋಕ್ಷವು ದೊರಕೀತೊ, ದೊರೆಯ ಲಾರದೊ?–ಎಂಬ ಶಂಕೆಯುಂಟಾಗುವದಕ್ಕೆ ಯಾವ ಕಾರಣವೂ ಇರುವದಿಲ್ಲ. ಬ್ರಹ್ಮಜ್ಞಾನವೆಂದರೆ 'ಇದೆಲ್ಲವೂ ನಿತ್ಯಶುದ್ಧಬುದ್ಧಮುಕ್ತ ಸ್ವಭಾವವಾದ ಬ್ರಹ್ಮವೇ; ಆ ಬ್ರಹ್ಮವೇ ನಮ್ಮೆಲ್ಲರ ಆತ್ಮನು' ಎಂಬ ಅರಿವು. ಈ ಅರಿವು ಉಂಟಾದಾಗ ಮುಕ್ತಿಯು ಸ್ವತಃಸಿದ್ಧವಾಗಿರುವ ಸಚ್ಚಿದಾನಂದಾತ್ಮಸ್ವರೂಪವೇ ಎಂದು ಗೊತ್ತಾಗಿಬಿಡುತ್ತದೆ. ಅದು ನಿತ್ಯಪ್ರಾಪ್ತವಾಗಿರುವದರಿಂದ ಅದು ಜ್ಞಾನಿಗೆ ಪ್ರಾಪ್ತವಾಗುವದೊ, ಇಲ್ಲವೊ?– ಎಂದು ಕೇಳುವದು ಊರಿನಲ್ಲಿಯೇ ಇದ್ದು ಕೊಂಡಿರುವವನು 'ಈವೂರನ್ನು ನಾನು ಸೇರಿಯೇನೊ, ಇಲ್ಲವೊ?' ಎಂದು ಕೇಳುವಂತೆ ಹಾಸ್ಯಾಸ್ಪದವಾಗಿರುತ್ತದೆ.

ಹೀಗಿದ್ದರೂ ವ್ಯವಹಾರದೃಷ್ಟಿಯಿಂದ ಜ್ಞಾನಿಗೆ ಶರೀರಾದಿಗಳು ಇರುವವೆಂದಿಟ್ಟು ಕೊಂಡೂ ಈ ಪ್ರಶ್ನೆಯನ್ನು ಕೇಳಬಹುದಾದ್ದರಿಂದ ಜ್ಞಾನಿಯು ದೇಹಪಾತವಾದ ಬಳಿಕ ಎಲ್ಲಿಗೆ ಹೋಗುವನು?–ಎಂದು ಕೇಳಬಹುದಾಗಿದೆ. ಬ್ರಹ್ಮಜ್ಞಾನಿಗಳಾದವರು ಕೂಡ ಕೆಲವರು ದೇಹಾಂತರವನ್ನು ಪಡೆದರೆಂದು ಇತಿಹಾಸ ಪುರಾಣಗಳಲ್ಲಿ ಹೇಳಿರುತ್ತದೆ. ಉದಾಹರಣೆಗೆ ವಸಿಷ್ಠ, ಭೃಗು, ಸನತ್ಕುಮಾರ, ನಾರದ–ಮುಂತಾದ ಮಹನೀಯರಾದ ಜ್ಞಾನಿಗಳಿಗೂ ಜನ್ಮಾಂತರಪ್ರಾಪ್ತಿಯಾಯಿತೆಂದು ಕಥೆಗಳಿವೆ. ಆದ್ದರಿಂದ ಜ್ಞಾನಿಗೆ ಈ ದೇಹವು ಬಿದ್ದ ಬಳಿಕ ಯಾವ ಗತಿಯಾಗುವದು? ಅವನಿಗೂ ದೇಹಾಂತರಪ್ರಾಪ್ತಿಯಾಗುವದಾದರೆ ಬ್ರಹ್ಮಜ್ಞಾನವು ವ್ಯರ್ಥವೆಂದಾಗು ವದಿಲ್ಲವೆ? ಎಂದು ಯಾರಾದರೂ ಕೇಳಬಹುದಾಗಿದೆ.

ಇದಕ್ಕೆ ಉತ್ತರವನ್ನು ಶ್ರುತಿಯಲ್ಲಿ ಹೀಗೆಂದು ಹೇಳಿದೆ :

**"ಯಾವಾಗ ಹೃದಯದಲ್ಲಿರುವ ಕಾಮಗಳೆಲ್ಲವೂ ಬಿಟ್ಟುಹೋಗಿಬಿಡುವವೋ ಆಗ ಮರ್ತ್ಯನು ಅಮೃತನಾಗುವನು; ಇಲ್ಲಿಯೇ ಬ್ರಹ್ಮವನ್ನು ಪಡೆದುಕೊಳ್ಳುವನು. ಹಾವಿನ ಪರೆಯು ಹೇಗೆ ಒಣಗಿ ಹುತ್ತದಲ್ಲಿ ಬಿದ್ದಿರುವದೋ ಹಾಗೆಯೇ ಆಗ ಈ ಶರೀರವಿದ್ದುಕೊಂಡಿರುವದು. ಇನ್ನು ಅವನು ಅಶರೀರನು, ಅಮೃತನು, ಸರ್ವಜ್ಞೂ ಪ್ರಾಣನು, ಬ್ರಹ್ಮವೇ, ಚೈತನ್ಯ ಜ್ಯೋತಿಯೇ".** –ಬೃಹ. 4–4–7

ಅಜ್ಞರಿಗೆ ಅಂತಃಕರಣದ ಅಧ್ಯಾಸದಿಂದ ಕಾಮ, ಕರ್ಮ, ಸಂಶಯ, ಭಯ, ಪುಣ್ಯಾಪಾಪಗಳು, ಜನ್ಮಾಂತರ–ಮುಂತಾದ ಅನರ್ಥಗಳು ಆಗುತ್ತಿರುವವು. ಆದರೆ ಜ್ಞಾನಿಯ ಲಿಂಗಶರೀರವಾಗಲಿ ಕರಣಗಳಾಗಲಿ ಶರೀರವನ್ನು ಬಿಟ್ಟು ಜನ್ಮಾಂತರ ಪ್ರಾಪ್ತಿಗೆಂದು ಉತ್ಕ್ರಾಂತವಾಗುವದಿಲ್ಲ; ಇಲ್ಲಿಯೇ ಜ್ಞಾನಿಯ ಸ್ವರೂಪವಾದ ಪರಮಾತ್ಮತತ್ತ್ವದಲ್ಲಿ ಬೆರೆತು ಒಂದಾಗಿಬಿಡುವವು. ಹಗ್ಗದಲ್ಲಿ ಕಲ್ಪಿತವಾಗಿದ್ದ ಹಾವು ಹಗ್ಗದ ತತ್ತ್ವಜ್ಞಾನದಿಂದ ಹೇಗೆ ಹಗ್ಗದಲ್ಲಿಯೇ ಸೇರಿಹೋಗುವದೋ ಹಾಗೆ ಅನಾತ್ಮವೆಲ್ಲವೂ ಆ ಜ್ಞಾನಿಯ ಸ್ವರೂಪದಲ್ಲಿ ಸೇರಿ ಒಂದಾಗಿಬಿಡುವದು. ಅವನಿಗೆ

ನಾನು ಎಂದೆಂದಿಗೂ ಬ್ರಹ್ಮವೇ ಎಂಬ ಅರಿವು ಉಂಟಾಗಿಬಿಟ್ಟಿರುತ್ತದೆ. ವ್ಯವಹಾರದೃಷ್ಟಿಯಿಂದ ಜ್ಞಾನಿಯ ಶರೀರವು ಇಲ್ಲಿಯೇ ಇದ್ದುಕೊಂಡಿರುವದಾದರೂ ಜ್ಞಾನದೃಷ್ಟಿಯಿಂದ ಆ ಶರೀರವು ಇಲ್ಲಿಯೇ ಇದ್ದುಕೊಂಡಿರುವದಾದರೂ ಜ್ಞಾನದೃಷ್ಟಿಯಿಂದ ಆ ಶರೀರವು ಬರಿಯ ಹುಸಿತೋರಿಕೆಯಾಗಿರುತ್ತದೆ. ಒಂದು ಹಾವು ಪೊರೆಯನ್ನು ಬಿಟ್ಟಮೇಲೆ ಅದಕ್ಕೆ ಆ ಪೊರೆಯಲ್ಲಿ ನಾನೆಂಬ ಅಭಿಮಾನವು ಎಂದಾದರೂ ಬಂದೀತೆಂದು ನಿರೀಕ್ಷಿಸಬಹುದೇನು? ಹಾವು ಹುತ್ತದೊಳಕ್ಕೆ ಹೋಗುವದು, ಅದರ ಬಿಲದಿಂದ ಹೊರಕ್ಕೆ ಬರುವದು-ಹೀಗೆ ಮಾಡುತ್ತಿರುವಲ್ಲಿ ಅದಕ್ಕೆ ಆ ಹಿಂದಿನ ಪೊರೆಯು ಕಾಣಿಸುತ್ತಲೇ ಇದ್ದರೂ ಆ ಒಣಗಿದ ಪೊರೆಯಲ್ಲಿ ಎಂದಿಗೂ ನಾನೆಂಬ ಬುದ್ಧಿಯು ಆ ಹಾವಿಗೆ ಉಂಟಾಗಲಾರದು. ಅಲ್ಲವೆ? ಇದರಂತೆಯೇ ಜ್ಞಾನಿಯಾದವನು ಜ್ಞಾನಸಮಕಾಲದಲ್ಲಿಯೇ ಶರೀರವನ್ನು ಹಾವು ಪೊರೆಯನ್ನು ಬಿಟ್ಟಂತೆ ಜ್ಞಾನಬಲದಿಂದ ತ್ಯಜಿಸಿಬಿಟ್ಟಿರುವನು. ಇನ್ನುಮೇಲೆ ಅವನಿಗೆ ಇಂದ್ರಿಯಗಳಾಗಲಿ, ಅಂತಃಕರಣವಾಗಲಿ, ಕಾಮಕರ್ಮಗಳಾಗಲಿ ಎಳ್ಳಷ್ಟೂ ಸಂಬದ್ಧವಾಗಿರುವದಿಲ್ಲ. ಈ ಶರೀರಾದಿಗಳು ವ್ಯವಹಾರದೃಷ್ಟಿಯಿಂದ ಕಾಣಿಸುತ್ತಿದ್ದರೂ ಅವುಗಳೆಲ್ಲ ಬರಿಯ ತೋರಿಕೆಯೇ ಆಗಿರುತ್ತದೆ. ಅವುಗಳ ತತ್ತ್ವವು ಬ್ರಹ್ಮ ಸ್ವರೂಪವಾದ ನನ್ನ ಆತ್ಮನೇ ಎಂಬದು ಜ್ಞಾನಿಯ ನಿಶ್ಚಯವಾಗಿಬಿಟ್ಟಿರುತ್ತದೆ.

ಆದ್ದರಿಂದ ಜ್ಞಾನಿಯ ಪ್ರಾಣಗಳಿಗೆ ಉತ್ಕ್ರಾಂತಿಯಿಲ್ಲ; ಅವನಿಗೆ ಯಾವ ಕರ್ಮಗಳೂ ಇಲ್ಲವಾದ್ದರಿಂದ ಅವನು ಎಲ್ಲಿಗಾದರೂ ಹೋಗಿ ದೇಹಾಂತರಪ್ರಾಪ್ತಿಯನ್ನು ಹೊಂದುವನೆಂಬ ಶಂಕೆಯೇ ಇಲ್ಲ. ಅವನು ಮೊದಲು ಬ್ರಹ್ಮವೇ ಆಗಿದ್ದು ಕೊಂಡು ಶರೀರವು ಬಿದ್ದಬಳಿಕವೂ ಬ್ರಹ್ಮದಲ್ಲಿಯೇ ಸೇರಿಹೋಗುತ್ತಾನೆ.

ವಸಿಷ್ಠಾದಿಜ್ಞಾನಿಗಳು ದೇಹಾಂತರವನ್ನು ಪಡೆದರೆಂದು ಇತಿಹಾಸಪುರಾಣ ಗಳಲ್ಲಿರುವದು ನಿಜ. ಆದರೆ ಅವರು ಅಧಿಕಾರಿಕಪುರುಷರು. ಪರಮೇಶ್ವರನು ಅವರನ್ನು ಆಯಾ ಅಧಿಕಾರದಲ್ಲಿ ನಿಯೋಜಿಸಿರುವದರಿಂದ ಅವರು ಅನೇಕ ದೇಹಗಳನ್ನು ತಮ್ಮ ಸಿದ್ಧಿಯ ಬಲದಿಂದ ಧರಿಸಿದರು. ಅವರಿಗೆ ಮತ್ತೊಂದು ಕರ್ಮವು ಹೊಸದಾಗಿ ಉಂಟಾಗಿ ದೇಹಾಂತರಫಲವನ್ನು ಕೊಡಲಿಲ್ಲ; ಅದೇ ಪ್ರಾರಬ್ಧಕರ್ಮದ ಬಲದಿಂದಲೇ ಅವರು ಅನೇಕ ದೇಹಗಳನ್ನು ಸ್ವಾತಂತ್ರ್ಯದಿಂದ ಪಡೆದು ತಮ್ಮತಮ್ಮ ಅಧಿಕಾರವು ಸಮಾಪ್ತಿಯಾದ ಬಳಿಕ ಪರಮಾತ್ಮನಲ್ಲಿ ಸೇರಿ ಹೋದರು. ಆದ್ದರಿಂದ ಸಾಮಾನ್ಯರಿಗೆ ಜ್ಞಾನವು ಮುಕ್ತಿಫಲವನ್ನು ಕೊಟ್ಟೀತೋ, ಇಲ್ಲವೊ?-ಎಂದು ಈ ಕಥೆಗಳ ಬಲದಿಂದ ಶಂಕಿಸುವದಕ್ಕೆ ಬರುವದಿಲ್ಲ.

ಜ್ಞಾನಿಯು ಬ್ರಹ್ಮವೇ ಆಗಿದ್ದು ಬ್ರಹ್ಮದಲ್ಲಿ ಸೇರುತ್ತಾನೆ ಎಂದು ಶ್ರುತಿಯಲ್ಲಿ ಹೇಳಿರುವದರ ಅಭಿಪ್ರಾಯವಿದು: ಜೀವರುಗಳೆಲ್ಲರೂ ನಿಜವಾಗಿ ಬ್ರಹ್ಮವೇ

ಆಗಿರುತ್ತಾರೆಂಬುದು ಶಾಸ್ತ್ರದೃಷ್ಟಿಯಿಂದ. ಆದರೆ ಶ್ರವಣಮನನನಿದಿಧ್ಯಾಸನಗಳಿಂದ ನಾನು ನಿತ್ಯಶುದ್ಧಬುದ್ಧಮುಕ್ತಸ್ವರೂಪನಾದ ಬ್ರಹ್ಮಾತ್ಮನೇ ಎಂಬ ನಿಶ್ಚಯವನ್ನು ಪಡೆದುಕೊಂಡ ಜ್ಞಾನಿಯು ಈ ಅನುಭವದ ಆಧಾರದಿಂದ ವಿಶೇಷಾರ್ಥದಲ್ಲಿ ಬ್ರಹ್ಮವಾಗಿರುತ್ತಾನೆ. ಅವನು ಬ್ರಹ್ಮದಲ್ಲಿ ಮತ್ತೆ ಸೇರಬೇಕಾದದ್ದೇನೂ ಇರುವದಿಲ್ಲ; ಏಕೆಂದರೆ ಬ್ರಹ್ಮವು ಬ್ರಹ್ಮವನ್ನು ಸೇರಬೇಕಾದದ್ದೇನೂ ಇರುವದಿಲ್ಲ. ಆದರೂ ವ್ಯವಹಾರದೃಷ್ಟಿಯಿಂದ ಜ್ಞಾನಿಗೂ ಶರೀರವಿರುವದರಿಂದ ಈ ಶರೀರವು ಬಿದ್ದು ಹೋದ ಬಳಿಕ ಮತ್ತೊಂದು ಶರೀರವು ಮಿಕ್ಕ ಜೀವರುಗಳಿಗೆ ಬರುವಂತೆ ಜ್ಞಾನಿಗೂ ಶರೀರಾಂತರವು ಬಂದೀತೆಂದು ಅಜ್ಞರು ಶಂಕಿಸಿಯಾರೆಂದು, ಅವನು ಬ್ರಹ್ಮದಲ್ಲಿಯೇ ಸೇರಿಹೋಗುವವನು–ಎಂದು ಶ್ರುತಿಯು ಜ್ಞಾನಿಗೆ ದೇಹಾಂತರ ಪ್ರಾಪ್ತಿಯನ್ನು ಅಲ್ಲಗಳೆದಿರುತ್ತದೆ. ಆದ್ದರಿಂದ ಜ್ಞಾನಿಯು ಸರ್ವಥಾ ಕೃತಕೃತ್ಯನು ಎಂದೇ ನಿಶ್ಚಯಿಸಬೇಕು.

ಈವರೆಗೆ ನಾವು ಹೇಳಿರುವದೆಲ್ಲವೂ ವ್ಯವಹಾರದೃಷ್ಟಿಯಿಂದಲೇ.ಜಿಜ್ಞಾಸುಗಳಿಗೆ ಕ್ರಮಕ್ರಮವಾಗಿಯಾದರೂ ಯಥಾರ್ಥಜ್ಞಾನವಾಗಲೆಂಬ ಉದ್ದೇಶದಿಂದ ಈ ಅಧ್ಯಾರೋಪದೃಷ್ಟಿಯನ್ನವಲಂಬಿಸಿ ತಿಳಿದವರು ಉಪದೇಶಿಸಿರುತ್ತಾರೆ. ಆದರೆ ಶಾಸ್ತ್ರವು ಹೇಳುವದು ಪರಮಾರ್ಥದೃಷ್ಟಿ, ಯಾವಾಗಲೂ ಇರುವದನ್ನು ಕಂಡು ಹೇಳುವ ದೃಷ್ಟಿ. ಅದು 'ತತ್ತ್ವಮಸಿ' ಆ ಪರಮಬ್ರಹ್ಮವೇ ನೀನಾಗಿದ್ದೀಯೆ ಎಂದು ಹೇಳುತ್ತಿದೆ; ನೀನು ಸತ್ತಬಳಿಕ ಬ್ರಹ್ಮನಾಗುವೆ–ಎಂದೇನೂ ಹೇಳುತ್ತಿಲ್ಲ. ಆ ಜ್ಞಾನವು ಬಂದವನೇ ಜ್ಞಾನಿ; ಅವನ ಅನುಭವವು 'ಅಹಂ ಬ್ರಹ್ಮಾಸ್ಮಿ' ನಾನು ಬ್ರಹ್ಮವೇ ಆಗಿರುತ್ತೇನೆ ಎಂದೇ ಇರುತ್ತದೆ. ಆ ಅನುಭವದಲ್ಲಿ ಜಗತ್ತಿಲ್ಲ, ಜೀವರುಗಳಿಲ್ಲ, ಸಂಚಿತಾಗಾಮಿಪ್ರಾರಬ್ಧಕರ್ಮಗಳೂ ಇಲ್ಲ. ಆದ್ದರಿಂದ ನಿತ್ಯಶುದ್ಧಬುದ್ಧಮುಕ್ತಸ್ವಭಾವನಾದ ಪರಮಾತ್ಮನೊಬ್ಬನೇ, ಅವನೇ ನಾನು–ಎಂಬ ಅನುಭವವಾದ ಬಳಿಕ ಯಾವ ಆಕ್ಷೇಪಪರಿಹಾರಗಳಿಗೂ ಅವಕಾಶವೇ ಇರುವದಿಲ್ಲ.

## 48. ಅಧ್ಯಾತ್ಮ ಸಾಧನೆಯಿಂದ ಅಂತಃಕರಣಶುದ್ಧಿ

ಪರಮಾರ್ಥದೃಷ್ಟಿಯಿಂದ ನೋಡಿದರೆ–ಇರುವದೆಲ್ಲ ಒಂದೇ ಒಂದು ತತ್ತ್ವವು. ಅದನ್ನೇ ಪರಬ್ರಹ್ಮವು, ಪರಮಾತ್ಮನು–ಎಂದು ವೇದಾಂತಿಗಳು ಕರೆದಿರುತ್ತಾರೆ. ಆದರೆ ನಮ್ಮ ಸ್ವಭಾವಸಿದ್ಧವಾಗಿರುವ ವ್ಯವಹಾರದ ದೃಷ್ಟಿಯಿಂದ ನೋಡಿದರೆ ಈ ಪ್ರಪಂಚವು ನಾಮರೂಪಕರ್ಮಾತ್ಮಕವಾಗಿರುತ್ತದೆ; ಇದರಲ್ಲಿ ಚೇತನಾಚೇತನ ರೂಪವಾದ ಪ್ರಾಣಿಗಳು ಇರುತ್ತವೆ. ಪ್ರಾಣಿಗಳಲ್ಲಿ ಅತ್ಯಂತಕೀಳಾಗಿರುವ ಸ್ಥಾವರಗಳೂ ಅವಕ್ಕಿಂತ ಸ್ವಲ್ಪ ಮೇಲುಮಟ್ಟದಲ್ಲಿರುವ ತಿರ್ಯಗ್ಜಂತುಗಳ, ಪಶುಪಕ್ಷಿಕ್ರಿಮಿಕೀಟಾದಿಗಳ, ರೂಪದಲ್ಲಿ ಕಾಣುವ ಜಂಗಮ ಪ್ರಾಣಿಗಳೂ ಇರುತ್ತವೆ. ಮನುಷ್ಯನೂ ಪ್ರಾಣಿಗಳೊಳಗೇ ಸೇರಿರುವನಾದರೂ ಅವನು ಬುದ್ಧಿಪ್ರಧಾನನಾಗಿರುವದರಿಂದಲೂ

ಪುರುಷಾರ್ಥಸಾಧನವನ್ನು ಮಾಡುವದಕ್ಕೆ ಅವನೇ ವಿಶೇಷರೂಪದಿಂದ ಅರ್ಹನಾಗಿರುವದರಿಂದಲೂ ಶಾಸ್ತ್ರಕಾರರು ಅವನನ್ನೇ ಉದ್ದೇಶಿಸಿ ಶಾಸ್ತ್ರರಚನೆಯನ್ನು ಮಾಡಿರುತ್ತಾರೆ. ಶ್ರುತಿಸ್ಮೃತಿಪುರಾಣಗಳೆಲ್ಲವೂ ಮನುಷ್ಯನಿಗಾಗಿಯೇ ಹುಟ್ಟಿರುತ್ತವೆ.

ಮನುಷ್ಯನಿಂದ ಮೇಲಿನ ಅಂತಸ್ತಿನವರು ದೇವತೆಗಳು. ಮನುಷ್ಯರು ತಾವು ಮಾಡಿದ ಪಾಪದಿಂದ ಕ್ಷುದ್ರಜನ್ಮವನ್ನೂ ಪುಣ್ಯದಿಂದ ದೇವಾದಿಗಳ ಉತ್ತಮ ಜನ್ಮವನ್ನೂ ಪಡೆಯುವರೆಂದು ಶಾಸ್ತ್ರದಲ್ಲಿ ಹೇಳಿರುತ್ತದೆ. ದೇವಾದಿಗಳಿಗೆ ಪುಣ್ಯದ ಫಲವನ್ನು ಅನುಭವಿಸುವದಕ್ಕೆ ತಕ್ಕ ಶರೀರೇಂದ್ರಿಯಗಳಿರುತ್ತವೆಯಾದರೂ ಅವರಿಗೂ ಪರಮಪುರುಷಾರ್ಥವಾದ ಮೋಕ್ಷವು ದೊರೆತಿರುವದಿಲ್ಲ. ಆ ಪರಮಪುರುಷಾರ್ಥವು ಯಾವ ಕರ್ಮದಿಂದಲಾಗಲಿ, ಯಾವ ಉಪಸನೆಯಿಂದಲಾಗಲಿ ದೊರೆಯುವದಲ್ಲ. ಕರ್ಮದಿಂದ ಪಿತೃಲೋಕವೂ ವಿದ್ಯೆಯಿಂದ ಎಂದರೆ ಉಪಾಸನೆಯಿಂದ ದೇವಲೋಕವೂ ದೊರೆಯುವದೆಂದು ಶ್ರುತಿಯಲ್ಲಿದೆ. ಅತ್ಯಂತ ಪುಣ್ಯಪ್ರದವಾದ ಕರ್ಮವನ್ನೂ ಅತ್ಯಂತ ಉತ್ಕೃಷ್ಟವಾದ ಉಪಾಸನೆಯನ್ನೂ ಮಾಡಿದರೆ ಬ್ರಹ್ಮಲೋಕವೆಂಬ ಹೆಚ್ಚಿನ ಲೋಕವು ದೊರಕುವದೆಂದು ಶ್ರುತಿಸ್ಮೃತಿಗಳಲ್ಲಿ ವರ್ಣಿಸಿರುತ್ತದೆ. ಬ್ರಹ್ಮ ಲೋಕವು ಅತ್ಯಂತಸಾತ್ತ್ವಿಕಲೋಕವು, ಅಲ್ಲಿ ವಾಸವಾಗಿರುವವರಿಗೆ ಸಂಕಲ್ಪ ಮಾತ್ರದಿಂದ ಬೇಕಾದ ಇಷ್ಟಾರ್ಥಗಳು ದೊರಕುವವಂತೆ. ಅಲ್ಲಿ ಬ್ರಹ್ಮನ ಒಂದು ಕಲ್ಪದವರೆಗೂ ಅಣಿಮಾದ್ಯೈಶ್ವರ್ಯಗಳನ್ನು ಪಡೆದು ಸುಖವಾಗಿ ಬಾಳಬಹುದಂತೆ. ಆದರೇನು? ಅಂಥ ಶಾಶ್ವತಬ್ರಹ್ಮಲೋಕವೂ ಕಲ್ಪಾಂತದಲ್ಲಿ ಕೊನೆಗಾಣುವದಂತೆ! ಆದ್ದರಿಂದಲೇ ಭಗವಂತನಾದ ಶ್ರೀಕೃಷ್ಣನು ಅರ್ಜುನನನ್ನು ಕುರಿತು "ಅರ್ಜುನನೆ, ಬ್ರಹ್ಮಲೋಕದವರೆಗಿನ ಎಲ್ಲಾ ಲೋಕಗಳೂ ಪುನರಾವೃತ್ತಿಯುಳ್ಳವೇ ಆಗಿರುತ್ತವೆ; ಆದರೆ ನನ್ನನ್ನು ಸೇರಿದರೆ ಮಾತ್ರ ಮರಳಿ ಸಂಸಾರಕ್ಕೆ ಬಾರನು" ಎಂದಿರುತ್ತಾನೆ.

ಪಾಪಪುಣ್ಯಗಳ ಫಲವಾಗಿ ಬಗೆಬಗೆಯ ಜನ್ಮಗಳನ್ನು ಹೊಂದಿ ಬಗೆಬಗೆಯ ಸುಖ ದುಃಖಗಳನ್ನು ಪಡೆಯುತ್ತಿರುವ ಸಂಸಾರವು ಯಾವ ಮಹನೀಯರಿಗೆ ಬೇಕಿರುವದಿಲ್ಲವೋ, ಅಂಥವರು 'ಇದರಿಂದ ಹೇಗಾದರೆ ಬಿಡುಗಡೆಯಾದೇವು?'-ಎಂದು ಅಡಿಗಡಿಗೂ ಚಿಂತಿಸುತ್ತಿರುವರು. ಅಂಥವರಿಗೆ ಮುಮುಕ್ಷುಗಳು ಎಂದು ಹೆಸರು.

ಮುಮುಕ್ಷುಗಳಾದವರಿಗೆ ಈ ಲೋಕದಲ್ಲಾಗುವ ಸುಖವಾಗಲಿ ಪರಲೋಕದಲ್ಲಾಗುವ ಸುಖವಾಗಲಿ ಮುಖ್ಯವಲ್ಲ. ಅವರಿಗೆ ಯಾವ ಸುಖವೂ ಬೇಡವೆಂದೂ ಅವರು ಯಾವಾಗಲೂ ದುಃಖವನ್ನೇ ಬಯಸುತ್ತಿರುವರೆಂದು ಇದಕ್ಕೆ ಅರ್ಥವಲ್ಲ. ಈ ಸಂಸಾರದಲ್ಲಿ ಸಿಕ್ಕುವ ಸುಖವು ದುಃಖಮಿಶ್ರವಲ್ಲದೆ ಇರುವದೇ ಇಲ್ಲ, ದುಃಖದಲ್ಲಿ ಪರ್ಯವಸಾನವಾಗದೆ ಇರುವದೇ ಇಲ್ಲ; ಆದ್ದರಿಂದ ಸುಖದ ಗರ್ಭದಲ್ಲಿಯೂ ದುಃಖವಿರುತ್ತದೆ ಎಂಬುದನ್ನು ಅವರು ಮನಗಂಡಿರುತ್ತಾರೆ.

ದುಃಖದ ಸೋಂಕೇ ಇಲ್ಲದ ನಿತ್ಯಸುಖವೇ ಅವರಿಗೆ ಬೇಕಾಗಿರುತ್ತದೆ. ಕರ್ಮದಿಂದ ಪಡೆದುಕೊಂಡ ಯಾವ ವಿಷಯಭೋಗವೂ ಇಂಥ ಸುಖವನ್ನು ಕೊಡಲಾರದು ಎಂಬುದನ್ನು ಅವರು ಅನುಭವದಿಂದಲೂ ತರ್ಕದಿಂದಲೂ ಮನಗಂಡಿರುತ್ತಾರೆ. ನಿತ್ಯಾನಂದವೊಂದು ಇದೆ, ಅದನ್ನು ಪಡೆದುಕೊಳ್ಳುವದಕ್ಕೆ ಬ್ರಹ್ಮಾತ್ಮಜ್ಞಾನವೆಂಬ ಉಪಾಯವೂ ಇದೆ-ಎಂಬ ಶಾಸ್ತ್ರಾಚಾರ್ಯರ ಉಪದೇಶದಲ್ಲಿ ಅವರಿಗೆ ಅಚಲವಾದ ಶ್ರದ್ಧೆಯಿರುತ್ತದೆ. ಆದ್ದರಿಂದ ಅವರು ಈ ಪರಮಾರ್ಥವಾದ ಪರಮಪುರುಷಾರ್ಥವನ್ನು ಪಡೆಯುವದಕ್ಕೆಂದೇ ಹವಣಿಸುತ್ತಿರುತ್ತಾರೆ.

ನಿತ್ಯಾನಂದಸ್ವರೂಪವಾದ ಪರಮಪುರುಷಾರ್ಥವು ದೊರಕುವದಕ್ಕೇನು ಮಾಡಬೇಕು?-ಎಂದು ಮುಮುಕ್ಷುಗಳು ಕೇಳುತ್ತಿರುತ್ತಾರೆ. ಅವರಿಗಾಗಿಯೇ ಶಾಸ್ತ್ರದಲ್ಲಿ ಬ್ರಹ್ಮವಿದ್ಯೆಯನ್ನು ಉಪದೇಶಿಸಿರುತ್ತದೆ. ಅಂಥವರಿಗೇ ಸದ್ಗುರುಗಳು ಆ ವಿದ್ಯೆಯ ಮರ್ಮವನ್ನು ಉಪದೇಶಿಸಿಕೊಡುತ್ತಾರೆ. ಸದ್ಗುರುಗಳಾದವರ ಉಪದೇಶದಿಂದ ಪಡೆದುಕೊಂಡ ಜ್ಞಾನವೇ ಅನುಭವಪರ್ಯಂತವಾಗುವದು.

ನಿತ್ಯಾನಂದವೆಂಬುದು ನಮ್ಮೆಲ್ಲರ ಸ್ವರೂಪವೇ ಆಗಿರುತ್ತದೆ. ಅದು ಹೊಸದಾಗಿ ಉಂಟಾಗತಕ್ಕದ್ದಲ್ಲ, ಹೊಸದಾಗಿ ಎಲ್ಲಿಗಾದರೂ ಹೋಗಿ ಪಡೆಯತಕ್ಕದ್ದೂ ಅಲ್ಲ. ಈಗ ನಾವು ದುಃಖಸ್ವರೂಪರಾಗಿರುತ್ತೇವೆ; ಈ ಸ್ವರೂಪವನ್ನು ಹೇಗೋ ಮಾಡಿ ಸುಖಸ್ವರೂಪಕ್ಕೆ ತಿರುಗಿಸಿಕೊಳ್ಳಬೇಕಾಗಿದೆ ಎಂಬುದೂ ಸರಿಯಲ್ಲ. ಅಥವಾ ನಮ್ಮ ಸ್ವರೂಪದಲ್ಲಿರುವ ದುಃಖವನ್ನು ತೆಗೆದುಹಾಕಿ ಸುಖವನ್ನು ತಂದುಕೊಳ್ಳಬೇಕು ಎಂಬುದೂ ಸರಿಯಾಗಲಾರದು. ಏಕೆಂದರೆ ಸಾಧನದಿಂದ ಹೊಸದಾಗಿ ಉಂಟು ಮಾಡಿಕೊಂಡದ್ದು ಮತ್ತೆ ಹೋಗಿಬಿಡಬಹುದಾಗಿದೆ. ಎಲ್ಲಿಗಾದರೂ ಹೋಗಿ ಪಡೆದದ್ದನ್ನು ನಾವು ಒಂದುಕಾಲಕ್ಕೆ ಬಿಟ್ಟು ಅಗಲಬೇಕಾಗಬಹುದು. ಆಗಾಗ್ಗೆ ಮಾರ್ಪಡುತ್ತಿರುವದು ಎಂದಿಗೂ ನಿತ್ಯವಾಗಿರಲಾರದು. ದೋಷವನ್ನು ತೆಗೆದು ಗುಣವನ್ನು ತುಂಬಿಕೊಂಡರೂ ಹೀಗೆಯೇ; ಮತ್ತೆ ದೋಷವು ಬಂದು ಸೇರಿಕೊಳ್ಳ ಲಾರದೆಂದಾಗಲಿ ಹೊಸದಾಗಿ ಬಂದುಸೇರಿರುವ ಗುಣವು ಹೋಗಲಾರದೆಂದಾಗಲಿ ಯಾರೂ ಭರವಸೆಯನ್ನು ಕೊಡಲಾರರು. ಆದ್ದರಿಂದ ನಿತ್ಯಾನಂದ ರೂಪವಾದ ಮೋಕ್ಷವು ಸಾಧನಗಳಿಂದ ಪಡೆದುಕೊಳ್ಳತಕ್ಕದ್ದಲ್ಲ; ಮತ್ತೇನೆಂದರೆ ಅಜ್ಞಾನದಿಂದ ನಾವು ಮರೆತಿರುವ ನಮ್ಮ ಸ್ವಭಾವವನ್ನು ಜ್ಞಾನದಿಂದ ಮತ್ತೆ ಅರಿತುಕೊಂಡು ಸುಖ ದಿಂದಿರುವದು ಮಾತ್ರವೇ ಅವಶ್ಯವಾಗಿದೆ-ಎಂದು ಬಲ್ಲವರು ಉಪದೇಶಿಸುತ್ತಿರುತ್ತಾರೆ.

ಹಾಗಾದರೆ ಮೋಕ್ಷಕ್ಕಾಗಿ ಸಾಧನಗಳನ್ನೇತಕ್ಕೆ ಶಾಸ್ತ್ರದಲ್ಲಿ ಉಪದೇಶಿಸಿದೆ?-ಎಂದು ನೀವು ಕೇಳಬಹುದು. ಅದಕ್ಕೆ ಉತ್ತರವು ಇಷ್ಟೇ. ನಿತ್ಯಾನಂದಸ್ವರೂಪನಾದ ಪರಮಾತ್ಮನೇ ನಮ್ಮೆಲ್ಲರಿಗೂ ಆತ್ಮನಾಗಿದ್ದರೂ ನಮಗೆ ಆ ಆತ್ಮನ ಅರಿವು ಇಲ್ಲ.

ನಾವು ಇರುವ ಈಗಿನ ಸ್ಥಿತಿಯಲ್ಲಿ ಆ ಆತ್ಮಸ್ವರೂಪದ ಕಡೆಗೆ ನಮ್ಮ ಮನಸ್ಸು ಒಲಿಯುವ ಹಾಗೆಯೇ ಇಲ್ಲ. ಏಕೆಂದರೆ ನಮ್ಮ ಮನಸ್ಸಿನಲ್ಲಿ ಈಗ್ಗೆ ಎರಡು ಬಗೆಯ ದೋಷಗಳಿರುವವು. ಈ ಮನಸ್ಸು ಇಂದ್ರಿಯಗಳ ಬಾಲವನ್ನು ಹಿಡಿದೇ ಹೊರಗಿನ ವಿಷಯಗಳನ್ನು ನೋಡುತ್ತಿರುವದು. ಇಂದ್ರಿಯಗಳಿಗೆ ವಿಷಯಗಳಲ್ಲಿ ರಾಗದ್ವೇಷಗಳು ನಿಯತವಾಗಿರುವದರಿಂದ ಅಂತಃಕರಣದಲ್ಲಿಯೂ ರಾಗದ್ವೇಷಗಳು ನಿಯತವಾಗಿರುವವು. ಹೀಗಿರುವದರಿಂದ ಮನಸ್ಸು ಹೊರಗಿನ ವಿಷಯಗಳ ಕಡೆಗೇ ಹರಿಯುತ್ತಿರುವದೆಂಬ ವಿಕ್ಷೇಪ, ಆತ್ಮನ ಕಡೆಗೆ ತಿರುಗಲಾರದೆ ಇರುವ ಅಥವಾ ತಿರುಗಿದರೂ ಆತ್ಮಸ್ವರೂಪವನ್ನು ಅರಿಯಲಾರದಿರುವದೆಂಬ ಮಲ–ಎಂಬ ಎರಡು ದೋಷಗಳಿಗೆ ವಶವಾಗಿರುತ್ತದೆ. ಆದ್ದರಿಂದ ನಮಗೆ ಪರಮಾರ್ಥವೇ ಆಗಿ ನಿತ್ಯಪ್ರಾಪ್ತವಾಗಿರುವ ಪರಮಾನಂದವುಕೂಡ ಗೋಚರವಾಗದೆ ಇರುತ್ತದೆ. ಇಷ್ಟೇ ಅಲ್ಲ, ಹೊರಗಿನ ವಿಷಯಗಳನ್ನು ರಾಗದ್ವೇಷದಿಂದ ಕಾಣುತ್ತಿರುವದರಿಂದಾದ ತಾಪತ್ರಯಗಳೂ ನಮ್ಮನ್ನು ಗೋಳಾಡಿಸುತ್ತಿರುವವು. ಕಾಡುಗಿಚ್ಚಿನಲ್ಲಿ ಬೇಯುತ್ತಿರುವವನಿಗೆ ಚಂದನಲೇಪದ ಸುಖದ ಅರಿವು ಆಗುವದು ಹೇಗೆ ಅಸಂಭವವೋ ಹಾಗೆ ಈ ಸಂಸಾರದಾವಾಗ್ನಿಯಿಂದ ಬೆಂದು ಬಳಲುತ್ತಿರುವ ಮನುಷ್ಯನಿಗೆ ಸಚ್ಚಿದಾನಂದಸ್ವರೂಪನಾದ ಪರಮಾತ್ಮನ ಸಂಸ್ಪರ್ಶದಿಂದಾಗುವ ಪರಮ ಪುರುಷಾರ್ಥದ ಅರಿವು ಸ್ವಪ್ನದಲ್ಲಿಕೂಡ ಆಗುವದು ಅಸಂಭವವಾಗಿರುತ್ತದೆ.

ಆದ್ದರಿಂದ ಮುಮುಕ್ಷುವಾಗಿರುವಾತನು ಬರಿಯ ಶಾಸ್ತ್ರವಾಕ್ಯವನ್ನು ಗಟ್ಟಿಮಾಡಿಕೊಂಡು 'ಸಂಸಾರವು ಮಿಥ್ಯೆಯಾಗಿದೆ, ಪರಮಾನಂದವು ನನ್ನ ಸ್ವರೂಪವಾಗಿದೆ; ಆದ್ದರಿಂದ ನಾನು ಕೃತಕೃತ್ಯನು' ಎಂದು ಕೂಗಿಕೊಂಡರೆ ಫಲವಿಲ್ಲ. ಈ ಹೇಳಿಕೆಯು ಪರಮಾರ್ಥವಿಷಯಕವೇ ಆಗಿದ್ದರೂ ಅದನ್ನು ಅನುಭವಕ್ಕೆ ತಂದುಕೊಳ್ಳುವದಕ್ಕೆ ಅಂತಃಕರಣವನ್ನು ಸಿದ್ಧಗೊಳಿಸಿಕೊಳ್ಳುವದು ಅತ್ಯವಶ್ಯವಾಗಿರುತ್ತದೆ. ನಿತ್ಯಾನಂದ ಸ್ವರೂಪನಾದ ಪರಮಾತ್ಮನು ನಮ್ಮ ಆತ್ಮನೇ ಎಂಬ ಸುದ್ದಿಯು ನಮಗೆ ಸಂತೋಷದ ಒಸಗೆಯೇ ಸರಿ; ಆದರೆ ಅದನ್ನು ಮನಗಂಡುಕೊಳ್ಳದಿದ್ದರೆ ನಮಗೆ ಅದರಿಂದಾಗುವ ಫಲವಾದರೂ ಏನು? ಊರಿನಲ್ಲಿ ಮೃಷ್ಟಾನ್ನವನ್ನು ಸಿದ್ಧಪಡಿಸಿದಾರೆ ಎಂಬ ತಿಳಿವಳಿಕೆಯು ಊರಿಗೆ ನೂರು ಮೈಲಿಗಳ ದೂರದಲ್ಲಿರುವವನಿಗೆ ತಿಳಿದರೆ, ಕೂಡಲೆ ಹೇಗೆ ಭೋಜನದ ತೃಪ್ತಿಯಾಗಲಾರದೋ ಹಾಗೆಯೇ ಸಾಧನಗಳಿಂದ ಅಂತಃಕರಣವನ್ನು ಸಂಸ್ಕಾರಗೊಳಿಸಿಕೊಳ್ಳದವನಿಗೆ ಆತ್ಮಜ್ಞಾನದಿಂದ ಪರಮಾನಂದಪ್ರಾಪ್ತಿಯಾಗುವದೆಂಬ ತಿಳಿವಳಿಕೆಯೂ ಸದ್ಯಃಫಲವನ್ನು ಕೊಡಲಾರದು.

ನಿತ್ಯಾನಂದವು ನಮಗೆ ನಿಜವಾಗಿ ಬೇಕಾಗಿದೆ ಎಂಬುದಕ್ಕೆ ಗುರುತೇನು? ಅದನ್ನು ಪಡೆದುಕೊಳ್ಳುವದಕ್ಕೆಂದು ಹಾತುವರಿಯುತ್ತಿರುವದೇ ಗುರುತು. ಆತ್ಮಜ್ಞಾನದ ಸ್ವರೂಪವನ್ನು ಕುರಿತ ಗ್ರಂಥಗಳನ್ನೂ ಆ ಜ್ಞಾನವನ್ನು ಸಂಪಾದಿಸಿಕೊಳ್ಳುವದಕ್ಕೆ

ಮಾಡಬೇಕಾಗಿರುವ ಸಾಧನಗಳನ್ನು ವಿವರಿಸುವ ಗ್ರಂಥಗಳನ್ನೂ ಮನಮುಟ್ಟಿ ಓದುತ್ತಿರಬೇಕು. ನಿಜವಾಗಿ ಮುಮುಕ್ಷುಗಳಾಗಿ ಜ್ಞಾನಕ್ಕಾಗಿ ಹವಣಿಸುತ್ತಿರುವ ಹಿರಿಯ ಸಾಧಕರ ಸ್ನೇಹವನ್ನು ಮಾಡಿಕೊಳ್ಳಬೇಕು. ಅವರ ನಡೆನುಡಿಗಳನ್ನು ಅನುಕರಿಸಬೇಕು. ಸತ್ಪುರುಷರನ್ನು ಸೇರಿ ಅವರ ಸೇವೆಯನ್ನು ಆದರದಿಂದ ಅನುದಿನವೂ ಮಾಡುತ್ತಿರಬೇಕು. ಸಾಧನಗಳ ಸೋಪಾನವನ್ನರಿತು ಈಗ ನಾವು ಯಾವ ಅಂತಸ್ತಿನಲ್ಲಿರುವೆವೋ, ಅದಕ್ಕಿಂತ ಮೇಲಿನ ಅಂತಸ್ತಿಗೆ ಏರುವದಕ್ಕೆ ಬೇಕಾದ ಸಾಧನವನ್ನು ಕೂಡಲೆ ಕೈಕೊಳ್ಳಬೇಕು. ಶರೀರ, ವಾಕ್ಕು, ಮನಸ್ಸು-ಈ ಮೂರನ್ನೂ ಪರಮಾರ್ಥಸಾಧನೆಗೆ ಮೀಸಲಾಗಿರಿಸಿಕೊಳ್ಳಬೇಕು. ಪ್ರತಿದಿನವೂ ತಪ್ಪದೆ ಶ್ರದ್ಧಾದರಗಳಿಂದ ಅಧ್ಯಾತ್ಮಸಾಧನವನ್ನು ಮಾಡುತ್ತಿರಬೇಕು.

ಅಧ್ಯಾತ್ಮಸಾಧನದಲ್ಲಿರುವ ಒಂದು ಮುಖ್ಯವಾದ ಗುಟ್ಟೆಂದರೆ ಭಗವದ್ಭಕ್ತಿ. ನಾವು ಎಷ್ಟೇ ಪ್ರಯತ್ನಪಟ್ಟು ಸಾಧನವನ್ನು ಮಾಡಿದರೂ ಭಗವಂತನ ಕೃಪೆಯಿಂದಲೇ ಸಾಧನವು ಸಫಲವಾಗಬೇಕಾಗಿದೆ ಎಂಬುದನ್ನು ಮರೆಯದೆ ಇರಬೇಕು. ನಮ್ಮ ಶರೀರ, ಇಂದ್ರಿಯಗಳು, ಮನಸ್ಸು-ಇವುಗಳ ವ್ಯಾಪಾರವು ಲೌಕಿಕವಿಷಯಗಳಲ್ಲಿಕೂಡ ನಮ್ಮ ಸ್ವಪ್ರಯತ್ನದಿಂದ ಸಫಲವಾಗುತ್ತಿಲ್ಲ. ಇಂಥ ಕಡೆಗೆ ನಮ್ಮ ಕಾರ್ಯಕರಣ ಸಂಘಾತವನ್ನು ಬಿಡಬೇಕು ಎಂದು ಸಂಕಲ್ಪಿಸುವಮಟ್ಟಿಗೆ ನಮ್ಮ ಪ್ರಯತ್ನವು ನಡೆಯುತ್ತದೆ ಎಂದು ಬೇಕಾದರೆ ಇಟ್ಟುಕೊಳ್ಳಬಹುದು. ಆದರೆ ಈ ಶರೀರಾದಿಗಳ ವ್ಯಾಪಾರವು ಸಲೀಸಾಗಿ ಸಾಗುವದೂ ಆ ವ್ಯಾಪಾರವು ಗುರಿಯನ್ನು ತಪ್ಪದೆ ಸ್ಥಿರವಾಗಿದ್ದುಕೊಂಡಿರುವದೂ ಕೊನೆಗೆ ನಮ್ಮ ಪ್ರಯತ್ನವು ಸಫಲವಾಗುವದೂ ನಮ್ಮ ವಶದಲ್ಲಿಲ್ಲ. ಅದೆಲ್ಲವೂ ಭಗವಂತನ ಅನುಗ್ರಹದಿಂದಲೇ ಆಗಬೇಕಾಗಿರುತ್ತದೆ. ಧಾನ್ಯವನ್ನು ತೂರುವದಕ್ಕೆ ಮೊರವನ್ನು ಎತ್ತಿಹಿಡಿಯುವದು ನಮ್ಮ ಕೆಲಸ, ಅದಕ್ಕೆ ಸಹಾಯವಾಗುವದು ಗಾಳಿಯೇ; ಒಲೆಯನ್ನು ಊದಿ ಹೊತ್ತಿಸುವದಕ್ಕೆ ಮಾಡುವ ಪ್ರಯತ್ನವು ನಮ್ಮದು, ಹೊತ್ತಿಕೊಂಡು ಉರಿಯುವದು ಬೆಂಕಿಯೇ. ಇದರಂತೆ ಸಾಧನಕ್ಕೆ ಸಜ್ಜಾಗುವದು ಮಾತ್ರ ನಮ್ಮ ಕೆಲಸ; ಅದನ್ನು ಸಫಲಗೊಳಿಸುವವನು ಸರ್ವಶಕ್ತನೂ ದಯಾಘನನೂ ಆದ ಭಗವಂತನೇ ಎಂಬುದನ್ನು ಮರೆಯಬಾರದು.

ಯಾವ ಸಾಧಕನು ಹೀಗೆ ಎಡೆಬಿಡದೆ ಅಧ್ಯಾತ್ಮಸಾಧನವನ್ನು ಮಾಡುತ್ತಿರುವನೋ ಅವನ ಅಂತಃಕರಣವು ಭಗವಂತನ ಅನುಗ್ರಹದಿಂದ ಪರಿಶುದ್ಧವಾಗುವದು; ಪರಮಾರ್ಥದ ಶ್ರವಣ, ಮನನ, ನಿದಿಧ್ಯಾಸನ-ಇವುಗಳು ಸಫಲವಾಗುವವು. ಭಗವಂತನ ಮಹಿಮೆಯನ್ನು ತಿಳಿಸುವ ಸದ್ಗ್ರಂಥಗಳನ್ನು ಓದಬೇಕು; ಭಗವಂತನ ಲೀಲೆಗಳನ್ನು ಕುರಿತ ಸದ್ಗುರುಬೋಧೆಗೆ ಶ್ರದ್ಧಾಭಕ್ತಿಪೂರ್ವಕವಾಗಿ ಕಿವಿಗೊಡಬೇಕು. ಇದರಿಂದ ಪರಮಾರ್ಥದ ನೆನಪು ನಮಗೆ ಬರುವದಕ್ಕೆ ಸಹಾಯವಾಗುವದು.

ಸಾಧಕಾವಸ್ಥೆಯಲ್ಲಿ ಯಾವನು ಸಕಲ ಕಲ್ಯಾಣಗುಣಾಕರನಾದ ಭಗವಂತ ನಾಗಿರುವನೋ ಅವನೇ ಪರಮಾರ್ಥವಾಗಿ ನಮ್ಮೆಲ್ಲರ ಆತ್ಮನಾಗಿರುವ ನಿರ್ಗುಣ ಪರಮಾತ್ಮನೂ ಆಗಿರುತ್ತಾನೆ. "ನನ್ನನ್ನೇ ಯಾವಾಗಲೂ ಪ್ರೀತಿಪೂರ್ವಕವಾಗಿ ಭಜಿಸುತ್ತಿರುವವರಿಗೆ ನನ್ನ ಕಡೆಗೆ ತಿರುಗುವ ಬುದ್ಧಿಯೋಗವನ್ನು ಕೊಡುವೆನು. ಅವರಿಗೇ ಅಜ್ಞಾನದ ಕಾರುಗತ್ತಲೆಯನ್ನು ಪರಿಹರಿಸುವ ಜ್ಞಾನದೀಪವನ್ನು ನಾನು-ಅವರ ಹೃದಯದಲ್ಲಿಯೇ ಇದ್ದುಕೊಂಡು-ಪ್ರಜ್ವಲಿಸುವಂತೆ ಮಾಡುವೆನು" ಎಂದು ಭಗವಂತನು ವಾಗ್ದಾನಮಾಡಿರುತ್ತಾನೆ.

ಆದ್ದರಿಂದ ಸಾಧನಗಳ ಮರ್ಮವನ್ನು ಶಾಸ್ತ್ರಾಚಾರ್ಯರಿಂದ ತಿಳಿದು ಕೊಳ್ಳುವದು, ಅವುಗಳ ವಿಷಯವಾಗಿ ಅನುದಿನವೂ ಮನದಲ್ಲಿ ವಿಚಾರಮಾಡುತ್ತಿರು ವದು, ಅವುಗಳನ್ನು ಯಥಾಶಕ್ತಿಯಾಗಿ ಅನುಷ್ಠಾನಮಾಡುವದಕ್ಕೆ ಪ್ರಯತ್ನಿಸುತ್ತಿರು ವದು, ಭಗವಂತನನ್ನು ಭಕ್ತಿಭರದಿಂದ ಉಪಾಸನೆಮಾಡುತ್ತಿರುವದು-ಈ ಉಪಾಯಗಳಿಂದ ತತ್ತ್ವಶ್ರವಣವನ್ನು ದಕ್ಕಿಸಿಕೊಳ್ಳಬೇಕು. ಪರಿಶುದ್ಧವಾದ ಅಂತಃ ಕರಣದಿಂದ ವಿಚಾರಮಾಡಿ ತತ್ತ್ವದ ಆಳವನ್ನು ಅರಿತುಕೊಳ್ಳಬೇಕು. ದಿನದಿನವೂ ಏಕಾಂತದಲ್ಲಿ ಕುಳಿತು ಆ ತತ್ತ್ವದಲ್ಲಿಯೇ ಮನಸ್ಸನ್ನಿಟ್ಟುಕೊಂಡು ಸಂಚಿಂತನೆ ಮಾಡಬೇಕು. ಇದನ್ನೇ ಸಾಧನದ ಸ್ಥೈರ್ಯವೆದು ಕರೆಯುವದು.

ಅಂತಃಕರಣವು ಎಷ್ಟೆಷ್ಟು ಶುದ್ಧವಾಗುವದೋ-ಅದರಲ್ಲಿ ಎಷ್ಟೆಷ್ಟು ಕಲ್ಮಷಗಳು ದೂರವಾಗುವವೋ, ಎಷ್ಟೆಷ್ಟುಮಟ್ಟಿಗೆ ಭಗವತ್ಸ್ವರೂಪದ ಚಿಂತನೆಯು ಹೆಚ್ಚಿಕೊಳ್ಳು ವದೋ-ಅಷ್ಟಷ್ಟು ಅದು ಪರಮಾರ್ಥಕ್ಕೆ ಹತ್ತಿರವಾಗುವದು; ಅಷ್ಟಷ್ಟು ಪರ ಮಾರ್ಥವೂ ಅದಕ್ಕೆ ಹತ್ತಿರವಾಗುವದು. ಹೀಗಾಗುತ್ತಾ ಆಗುತ್ತಾ ಬಲುಬೇಗನೆ ಸಾಧಕನಿಗೆ ಸಂಸಾರದ ತಾಪಗಳ ಬೇಗುದಿಯು ಕಡಿಮೆಯಾಗುವದು, ಪರಮಾತ್ಮನ ಆನಂದವೂ ಬೇಗನೆ ಅಂತಃಕರಣದಲ್ಲಿ ಸುಳಿದಾಡುವದಕ್ಕೆ ಮೊದಲಾಗುವದು. ಕೊನೆಗೆ ಸಾಧಕನಿಗೂ ಅರಿವಿಲ್ಲದೆಯೆ-ಅಕ್ಕಿಯು ಪಕ್ವವಾಗಿ ಅನ್ನವಾಗುವಂತೆಯೂ ನಾನಾರಸಗಳ ಸಂಕಲನವು ಹದವಾಗಿ ಪಾಕವಾಗಲು ನಾಲಗೆಯನ್ನು ವಶಪಡಿಸಿ ಕೊಳ್ಳುವ ಪಕ್ವಾನ್ನವಾಗುವಂತೆಯೂ-ಅವನಿಗೂ ಪರಮಾರ್ಥಕ್ಕೂ ಭೇದವಿಲ್ಲದ ಸ್ಥಿತಿಯು ಬಂದುಬಿಡುವದು. ಸಾಧಕ, ಸಾಧನ, ಸಿದ್ಧಿ-ಎಂಬ ತ್ರಿಪುಟಿಯು ಅಳಿದು ನಿತ್ಯಸಿದ್ಧನಾದ ಪೂರ್ಣಚಿದ್ಘನನೇ ತಾನೆಂಬ ನಿಶ್ಚಯವು ನೆಲೆನಿಂತುಬಿಡುವದು.

****

## ಪರಿಶಿಷ್ಟ-1. ಒಂದು ಟೀಕೆ-ಶ್ರೀಗಳವರ ಸಮಾಧಾನ

## ಧರ್ಮಸಂಸ್ಥೆಗಳೂ ಸಮತಾವಾದವೂ

ಲೇಖನ 13ರ ಮೇಲೆ ಮಿತ್ರರೊಬ್ಬರು ಟೀಕೆಯನ್ನು ಬರೆದು ಕಳುಹಿಸಿರುತ್ತಾರೆ. ಅವರು ಹೇಳಿರುವುದನ್ನು ಎರಡು ವಾಕ್ಯಗಳಲ್ಲಿ ತಿಳಿಸಿ ವಿಷಯವನ್ನು ವಿಂಗಡಿಸಬಹುದು: ಈಗಿನ ಧರ್ಮಸಂಸ್ಥೆಗಳು ಸಾರ್ವಜನಿಕ ಪ್ರೇಮವನ್ನು ಬೆಳೆಸುವದರ ಬದಲು ಅದಕ್ಕೆ ಅಡ್ಡಿಯಾಗಿರುವ ಧನಿಕರ ಬಾಲವನ್ನು ಹಿಡಿಯುತ್ತಿವೆ. ಸಮತಾವಾದವೂ ಸರ್ವಜನರಿಗೂ ಅನುಕೂಲವಾದ ಸಮಾಜರಚನೆಗೆ ಇರುವ ಒಂದೇ ಸಾಧನ. ಅದೇ, ಧರ್ಮ, ಸತ್ಯ, ಅದನ್ನು ಧರ್ಮದ್ವೇಷಿಯೆಂದು ಹಳಿಯಬಾರದು. ಈ ಎರಡು ಅಭಿಪ್ರಾಯಗಳು ಸರಿಯಾಗಿರಬಹುದು, ತಪ್ಪಾಗಿರಬಹುದು. ಆದರೆ ನನ್ನ ಸಂದೇಶದ ಮೇಲಿನ ಟೀಕೆಯೇನೂ ಇದಾಗುವದಿಲ್ಲ.

ಸಂದೇಶದಲ್ಲಿ ಹೇಳಿರುವದರ ಸಾರವು ಇಷ್ಟು: ವರ್ಣಾಶ್ರಮಗಳ ವಿಂಗಡವು ಧರ್ಮದ ಆಧಾರದ ಮೇಲೆ ಏರ್ಪಟ್ಟಿತ್ತು; ಈಗ ನಮ್ಮ ದೇಶದಲ್ಲಿರುವ ವರ್ಣಾಶ್ರಮಗಳ ವಿಂಗಡವು ಬರಿಯ ಆಭಾಸಮಾತ್ರವಾಗಿದೆ. ಬೇರೆಯ ದೇಶಗಳಲ್ಲಿ ವರ್ಣಾಶ್ರಮಗಳು ಯಾವಾಗಲೂ ಇರಲಿಲ್ಲ; ಆ ದೇಶಗಳಲ್ಲಿ ವರ್ಣಗಳ ಬದಲು ವರ್ಗಗಳು ಮಾತ್ರ ಇದ್ದವು. ವರ್ಣಾಶ್ರಮ ಪದ್ಧತಿಯಲ್ಲಿ ಧರ್ಮಗುರುಗಳಲ್ಲಿ ಭಕ್ತಿಗೆ ಅವಕಾಶವಿದೆ; ವರ್ಗಗಳಲ್ಲಿ ಪರಸ್ಪರ ದ್ವೇಷಕ್ಕೆ ಅವಕಾಶವಿದೆ. ಇದಿಷ್ಟು ನನ್ನ ಅಭಿಪ್ರಾಯ. ಭೂಲೋಕದ ಇತಿಹಾಸವನ್ನು ಬಲ್ಲವರು ಯಾರುತಾನೆ ಇದನ್ನು ಸುಳ್ಳೆಂದು ಹೇಳುವರು? ಕಮ್ಯೂನಿಸ್ಟರು ಅಥವಾ ಸಮತಾವಾದಿಗಳು ಹೇಳುವದೂ ಇದೇ. ವರ್ಗಗಳ ಪರಸ್ಪರವಿರೋಧವೇ ಈಗಿನ ಸಮಾಜದಲ್ಲಿರುವ ದೋಷವೆಂದೂ ಆ ದೋಷವನ್ನು ತಪ್ಪಿಸುವದಕ್ಕೆ ಮೊದಲು ಕೂಲಿಯ ವರ್ಗದವರು ರಾಜಕೀಯ ಕ್ರಾಂತಿಯ ಮೂಲಕ ಪ್ರಭುತ್ವವನ್ನು ವಶಪಡಿಸಿಕೊಂಡು ಬಲಾತ್ಕಾರದಿಂದ ಪದಾರ್ಥಗಳ ಉತ್ಪತ್ತಿಯ ಕ್ರಮವನ್ನು ಮಾರ್ಪಡಿಸಬೇಕು ಎನ್ನುತ್ತಾರೆ, ಅವರು. (The Communist Manifesto- Karl Marks, Selected Works- Eng. Ed. Mosco 1946 ನೋಡಿ)

ಜನರು "ಸರ್ವೇ ಜನಾಃ ಸುಖಿನೋ ಭವಂತು" ಎಂಬ "ಭೂತ ಪ್ರೇಮ"ದ ನುಡಿಯನ್ನು ಬಾಯಿಯಲ್ಲಿ ಮಾತ್ರ ನುಡಿಯುತ್ತಿರಬಹುದು; ಕಾರ್ಯದಲ್ಲಿ ಅದನ್ನು ನಡೆಯಿಸದೆ ಇರಬಹುದು. ಭೂತಪ್ರೇಮವೆಂದರೆ ಪ್ರಾಣಿಗಳ ಮೇಲೂ ಪ್ರೇಮವಿರುವದು. ಮಹಾವೀರ, ಬುದ್ಧ, ಸೇಂಟ್ ಫ್ರಾನ್ಸಿಸ್-ಇಂಥ ಮಹನೀಯರು ಅದನ್ನು ಆಚರಣೆಯಲ್ಲಿಯೂ ತೋರಿಸಿದರು. ಆದರೆ ಮನುಷ್ಯನನ್ನೇ ಮನುಷ್ಯರು ಹಿಂಸಿಸಿ ಕೊಲ್ಲುತ್ತಿರುವ ಈ ಕಾಲಕ್ಕೆ ಅದು ಯಾರ ಆಚರಣೆಯಲ್ಲಿದೆಯೋ ಅವರಿಗೆ ಗೊತ್ತು; ಈಶ್ವರನಿಗೆ ಗೊತ್ತು. ಇದಂತಿರಲಿ, ಜನರು ಸರ್ವಸೌಖ್ಯಕ್ಕೆ ದುಡಿಯದೆ ಇದ್ದರೆ, ಮತ್ತು ನಾಮಧಾರಿ ಧರ್ಮಸಂಸ್ಥೆಗಳು ಇದಕ್ಕೆ ವಿರುದ್ಧವಾಗಿ ನಡೆಯುತ್ತಿದ್ದರೆ, ಧರ್ಮದ ಅಭಿಮಾನವಿಲ್ಲದ ವ್ಯಕ್ತಿಗಳೂ ವರ್ಗಗಳೂ ಸಂಸ್ಥೆಗಳೂ ಸಮಾಜಕ್ಕೆ ಅಪಾಯವನ್ನೇ ತರುತ್ತವೆ-ಎಂಬ ನನ್ನ ಸಂದೇಶದ ಅಭಿಪ್ರಾಯಕ್ಕೆ

ಪುಷ್ಟಿಯೇ ದೊರಕಿದಂತೆ ಆಗುವದಷ್ಟೆ? ಜನರಿಗೆ ಧರ್ಮವನ್ನು ತಿಳಿಸುವದು ಅತ್ಯವಶ್ಯವೆಂದೂ ಆಗುವದಷ್ಟೆ? ಈ ದೋಷಗಳಿಲ್ಲದ ಒಂದು ಧರ್ಮಸಂಸ್ಥೆ ಏರ್ಪಟ್ಟರೆ ಒಳ್ಳೆಯದೆಂದೂ ಆಗುವದಷ್ಟೆ?

ಧರ್ಮಸಂಸ್ಥೆಗಳಲ್ಲಿ ಪುರಾಣ, ಉಪನ್ಯಾಸಗಳಿಂದ "ತತ್ಕಾಲಕ್ಕಾದರೂ ಪರವಶರಾಗುವ' ಜನರು ಇನ್ನೂ ಇದಾರೆಂದು ನಮ್ಮಮಿತ್ರರು ಒಪ್ಪಿರುತ್ತಾರೆ. ಅದು ಅಷ್ಟರಲ್ಲಿಯೇ ನಿಲ್ಲಬಾರದೆಂದು ಅವರ ಆಶೆ; ಜೀವನಕ್ಕೆ ಸಂಬಂಧವಿಲ್ಲದಿದ್ದರೆ ಏನೂ ಪ್ರಯೋಜನವಿಲ್ಲವೆಂದು ಅವರ ಅಭಿಪ್ರಾಯ. ಇದಕ್ಕೆ ನಮ್ಮ ಅನುಮೋದನವಿದೆ. ಆದಷ್ಟುಮಟ್ಟಿಗೂ ಧರ್ಮವನ್ನು ಜೀವನಕ್ಕೆ ಸಂಬಂಧಿಸಿಕೊಳ್ಳುವಂತೆ ಜನರನ್ನು ಪ್ರೇರಿಸುವದೇ ನಮ್ಮ ಗುರಿ. ಆದರೆ ರಾಜಕೀಯ ಕ್ರಾಂತಿಗಳಿಂದ ಆ ಕೆಲಸವಾಗುವದೆಂಬುದರಲ್ಲಿ ನಮ್ಮ ನಂಬಿಕೆಯಿಲ್ಲ. "ಧರ್ಮಸಂಸ್ಥೆಗಳ ಸುತ್ತಲೂ ಸಿನಿಮ, ನಾಟಕ-ಮೊದಲಾದವುಗಳಿಗೆ ವಾಡಿಕೆಯಾಗಿ ಹೋಗಿಬರುವಂತೆ ಸುಳಿದಾಡುವ ಜನವೇ ಹೆಚ್ಚು" ಎಂಬುದನ್ನು ನಾವುಗಳೂ ಒಪ್ಪುತ್ತೇವೆ. ಆದರೆ ಯಾವ ಕ್ಷೇತ್ರದಲ್ಲಿಯಾದರೂ ಹೀಗೆಯೇ ಇರುತ್ತದೆ. ರಾಜಕೀಯದ ಮಾತನ್ನಾಡುವವರೆಲ್ಲ ರಾಜಕಾರಣದಲ್ಲಿ ಇಳಿದಿರುವದಿಲ್ಲ; ಸಮಾಜಸುಧಾರಣೆಯ ಶಬ್ದಗಳನ್ನುಚ್ಚರಿಸುವವರೆಲ್ಲ ಸುಧಾರಕರಾಗಿರುವದಿಲ್ಲ; ರಾಗತೆಗೆಯುವವರೆಲ್ಲ ಸಂಗೀತಗಾರರಾಗಿರುವದಿಲ್ಲ. ಒಂದೊಂದು ಕ್ಷೇತ್ರದಲ್ಲಿಯೂ ಆಯಾ ವಿಷಯದಲ್ಲಿ ಮುಳುಗಿ ಅದಕ್ಕಾಗಿ ಜೀವನವನ್ನು ಮೀಸಲಾಗಿರಿಸುವವರು ಎಲ್ಲಿಯೋ ಕೆಲವರಿರುವರು. ಸಿನಿಮ, ನಾಟಕ-ಮುಂತಾದವುಗಳನ್ನು ನೋಡುವವರ ಮೇಲೆ ಕೂಡ ಯಾವ ಪರಿಣಾಮವೂ ಆಗದೆ ಇರುವದಿಲ್ಲ. ಅಲ್ಲಿ ಕಾಣುವ ಕಾಮೋತ್ತೇಜಕವಾದ, ಸಮಾಜದೋಷಗಳನ್ನೇ ಗುಣವೆಂದು ತೋರಿಸುವ, ಕೆಲವು ದೃಶ್ಯಗಳು ಕೆಲವರನ್ನು ಕೆಡಿಸಿವೆ, ಒಳ್ಳೆಯ ದೃಶ್ಯಗಳು ಕೆಲವರಿಗೆ ಮಾರ್ಗದರ್ಶಕವಾಗಿಯೂ ಪರಿಣಮಿಸಿವೆ. ಇದರಂತೆ ಧರ್ಮಸಂಸ್ಥೆಗಳಲ್ಲಿ ಆಗುವ ಪುರಾಣಾದಿಗಳಿಂದಲೂ ಕೆಲವು ಜನರ ಜೀವನದ ಮೇಲೂ ಒಳ್ಳೆಯ ಅಥವಾ ಕೆಟ್ಟ ಪರಿಣಾಮಗಳಾಗಿರುತ್ತವೆ. ಇದಕ್ಕೆ ಆ ಸಂಸ್ಥೆಗಳ ಗುಣದೋಷಗಳು ಕಾರಣವೆಂಬುದರಲ್ಲಿ ಏನು ಸಂದೇಹ?

ಸಮತಾವಾದವನ್ನು ಧರ್ಮದ್ವೇಷಿಯೆಂದು ನಾನು ಆರೋಪವನ್ನು ಹೊರಿಸಿಲ್ಲ. ಅದನ್ನು ಕಮ್ಯುನಿಸ್ಟರೇ ಒಪ್ಪಿಕೊಂಡಿರುತ್ತಾರೆ. "Religion- by V.I. Lenin" (ಧರ್ಮ-ವಿ.ಐ. ಲೆನಿನ್ ವಿರಚಿತ) ಎಂಬ ಗ್ರಂಥವನ್ನು ಇಂಗ್ಲಿಷುಬಲ್ಲವರೆಲ್ಲರೂ ಓದಬಹುದು. ಅದರಲ್ಲಿ ಈ ಅಭಿಪ್ರಾಯಗಳಿವೆ:

1. ಧರ್ಮವು ಜನರಿಗೆ ಅಫೀಮು, ಅದು ಕೂಲಿಯವರನ್ನು ಮಂಕುಗೊಳಿಸುತ್ತದೆ. (ಪು. 12)

2. ಧರ್ಮಕ್ಕೆ ವಿರುದ್ಧವಾಗಿರುವದು ಚಾರ್ವಾಕವಾದದ ಓನಾಮ, ಮಾರ್ಕ್ಸ್ ಮತದ (ಸಮತಾವಾದದ) ಓನಾಮ. (ಪು. 14)

3. ಕೂಲಿಯವರ ಕೇಳಿಕೆ ಏನೆಂದರೆ ಧರ್ಮವು ಅವರವರಿಗೆ ಸೇರಿದ್ದೆಂದು ಸರ್ಕಾರವು ಹೇಳಬೇಕು. ಆದರೆ ಧರ್ಮವಿರುದ್ಧವಾಗಿ ಹೋರಾಡುವದು ಅವರವರಿಗೆ ಸೇರಿದ್ದಲ್ಲ, ವರ್ಗಕ್ಕೆಲ್ಲ ಸೇರಿದ್ದು. (ಪು. 18)

**4. ನಮ್ಮ ನೀತಿ ಎಂಬುದು ಸಂಪೂರ್ಣವಾಗಿ ವರ್ಗದ ಹೋರಾಟಕ್ಕೆ ಅಧೀನವಾಗಿರುತ್ತದೆ. ಕೂಲಿಯವರ ಹೋರಾಟಕ್ಕೆ ಬೇಕಾದ ಸಂಗತಿಗಳಿಂದಲೇ ನೀತಿಯನ್ನು ಕಲ್ಪಿಸಬೇಕು. (ಪು. 48)**

ಕೊನೆಯದಾಗಿ "ತತ್ತ್ವಕ್ಕೆ ಎಲ್ಲೆ ಎಲ್ಲಿದೆ? ಹವಾಗುಣಕ್ಕೆ ಒಂಟುವದಿಲ್ಲವೆನ್ನುವದುಂಟೆ?" ಎಂಬ ಪ್ರಶ್ನೆಗೆ ಉತ್ತರವನ್ನು ಹೇಳಿ ಈ ಲೇಖನವನ್ನು ಮುಗಿಸುವೆನು. ನಾನು ಮೊದಲೇ ಹೇಳಿರುವಂತೆ "ಸಮತಾವಾದವೊಂದೇ ಸರ್ವಜನಸುಖಿಕ್ಕೆ ಬೇಕಾದ ಸಮಾಜರಚನೆಗೆ ಸಾಧನ"ವೆಂಬ ಅಭಿಪ್ರಾಯವು ಸರಿಯಾಗಿರಬಹುದು, ತಪ್ಪಾಗಿಯೂ ಇರಬಹುದು. ನಿಜವನ್ನು ಭವಿಷ್ಯತ್ಕಾಲದಲ್ಲಿ ಕಾಣಬೇಕಾಗಿದೆ. "ತತ್ತ್ವಕ್ಕೆ ಎಲ್ಲೆಯಿಲ್ಲ'ವೆನ್ನುವದು ನಿಜ, ನೀವು ಹೇಳುವದೇ ತತ್ತ್ವವೆಂದು ಮಾತ್ರ ಸರ್ವರೂ ಒಪ್ಪಿಲ್ಲ. "ಅದೇ ಧರ್ಮ" ಎನ್ನುವದೂ ಸರಿಯಲ್ಲ; ಧರ್ಮವೇ ತತ್ತ್ವ ಎನ್ನುವದು ನ್ಯಾಯ.

ಇದು ಹೇಗಾದರೂ ಇರಲಿ, ಹವಾಕ್ಕೆ ಒಂಟುವದಿಲ್ಲವೆಂದು ನಾನು ಹೇಳಿರುವದು ಇದನ್ನಲ್ಲ. ಸಂದೇಶ (ಪು. 86)ವನ್ನು ಇನ್ನೊಮ್ಮೆ ಓದಿ ನೋಡಿರಿ. ಮಿಕ್ಕ ದೇಶಗಳಲ್ಲಿ ಗ್ರೀಕ್‌ಚರ್ಚ್ ಮುಂತಾದ ಧರ್ಮಸಂಸ್ಥೆಗಳು ಆಸ್ತಿಪಾಸ್ತಿಗಳನ್ನು ಸಂಪಾದಿಸಿಕೊಂಡು ಧನಿಕ ವರ್ಗದವರ ಸಹಾಯಕರಾಗಿ ಅಥವಾ ಅವರನ್ನು ತಮ್ಮ ಬಲೆಗೆ ಕೆಡವಿಕೊಂಡು ಬಡಜನರಿಗೆ ತೊಂದರೆಯನ್ನು ಕೊಡುತ್ತಿದ್ದರು. ಆದರೆ ನಮ್ಮ ದೇಶದಲ್ಲಿ ಧರ್ಮವನ್ನುಪದೇಶಿಸುವ ಬ್ರಾಹ್ಮಣರಿಗೆ, ಅದರಲ್ಲಿಯೂ ಸಂನ್ಯಾಸಿಗೆ, ಯಾವ ಆಸ್ತಿಯೂ ಇರುವ ಹಾಗಿಲ್ಲ. ಧರ್ಮ ಬೋಧಕರು ಧನಿಕರಿಗೂ ಬಡವರಿಗೂ ಸಮಾನವಾಗಿಯೇ ಸಹಾನುಭೂತಿಯಿಂದ ಉಪದೇಶಿಸುತ್ತಾರೆ. ಧರ್ಮಬೋಧಕರಿಗೆ ಇಲ್ಲಿ ಯಾವ ಅಧಿಕಾರವೂ ಇಲ್ಲ. ಅವರು ಲೋಕಾಂತರದಲ್ಲಾಗುವ ಫಲಗಳನ್ನು ತೋರಿಸಿ ಬಡವರನ್ನು ಸಮಾಧಾನಮಾಡುವದಿಲ್ಲ; ಇದ್ದದ್ದನ್ನೇ ಒಪ್ಪಿಕೊಂಡು ಸದ್ಯಸ್ಥಿತಿಯಲ್ಲಿಯೇ ಜನ್ಮಾಂತರವಾದವನ್ನು ಕುಳಿತಿರುವದಕ್ಕೆ ಉಪಯೋಗಿಸುವದಿಲ್ಲ. ಪ್ರತಿಯೊಬ್ಬನೂ ಪ್ರಯತ್ನಪಟ್ಟರೆ ಈಗಲೇ ಇಲ್ಲಿಯೇ ಎಲ್ಲಾ ಕರ್ಮ ಬಂಧವನ್ನೂ ಕಡಿದುಹಾಕಬಹುದು ಎಂಬ ಪ್ರೋತ್ಸಾಹಕತತ್ತ್ವವನ್ನು ಮುಂದಿಡುವದಕ್ಕೆ ಅದು ಉಪಯೋಗವಾಗಿದೆ. ಆದ್ದರಿಂದ ವಿದೇಶೀಯರ ಪದ್ಧತಿಯನ್ನು ಅನುಸರಿಸಿ ನಾವೇಕೆ ಇಲ್ಲಿ ಧರ್ಮಬೋಧಕರ ಮೇಲೆ ತಿರುಗಿಬೀಳಬೇಕು? ಧರ್ಮದ ಮೇಲೆ ದಂಗೆಯೇಳುವದು ನಮ್ಮ ದೇಶದ ಹವೆಗೆ ಒಂಟುವದಿಲ್ಲ. ನಮ್ಮ ದೇಶದಲ್ಲಿ ಧರ್ಮವು ನಮ್ಮನ್ನು ಯಾರೊಬ್ಬರಿಗೂ ಅಡಿಯಾಳಾಗುವದನ್ನು ಹೇಳಿಕೊಡುವದಿಲ್ಲ; ಜೀವನ್ಮುಕ್ತಿಯನ್ನು ಬದುಕಿರುವಾಗಲೇ ಸ್ವಾತಂತ್ರ್ಯದಿಂದಿರುವ ಉಪಾಯವನ್ನು, ತಿಳಿಸಿಕೊಡುತ್ತದೆ. ಇಷ್ಟು ನನ್ನ ಸಂದೇಶದ ಸಾರವು "ವಿಶ್ವಪ್ರೇಮಿ"ಗಳು ಈಗ ನಾನು ಬರೆದಿರುವ ವಿವರಣದ ಸಮೇತವಾಗಿ ಇನ್ನೊಮ್ಮೆ ನನ್ನ (ಇಲ್ಲಿಯ 13ನೇ) ಲೇಖನವನ್ನು ಓದಿದರೆ ನಿಜವಾದ ಧರ್ಮವೆಂಬುದು ಹೇಗಾದರೂ ಕೆಡವಬೇಕಾದ ಹಳೆಯ ಕಟ್ಟಡವಲ್ಲವೆಂಬುದು ಅವರಿಗೆ ಮನವರಿಕೆಯಾಗುವದೆಂದು ನನ್ನ ನಂಬಿಕೆ.

**ಪರಿಶಿಷ್ಟ-2**

# ಅಧ್ಯಾತ್ಮ ಔನ್ನತ್ಯದೆಡೆಗೆ ಒಯ್ಯುವ ಸಾಧನ ಸೋಪಾನಗಳು

## (ಇಲ್ಲಿರುವ ಕ್ರಮಾಂಕಗಳು ಆಯಾ ಕ್ರಮಸಂಖ್ಯೆಯ ಲೇಖನಗಳಿಂದ ಆಯ್ದುಕೊಂಡ ಮೂಲ ವಾಕ್ಯಗಳು)

1. ಎಲ್ಲರಿಗೂ ಒಬ್ಬ ಪರಮಾತ್ಮನೇ ಆತ್ಮನು, ಪರಮಾತ್ಮತತ್ತ್ವವೊಂದೇ ಅರಿತುಕೊಳ್ಳುವದಕ್ಕೆ ತಕ್ಕದು, ಮತ್ತೆ ಬೇರೆ ಯಾವದೂ ಇಲ್ಲ.

2. ಭಗವಂತನ ಮಾಯೆಯಿಂದ ಮೋಹಿತರಾಗಿಯೇ ಜನರು ಅವನನ್ನು ಗುರುತಿಸಲಾರದೆ ಇರುತ್ತಾರೆ. ಆದರೆ ಅವನನ್ನೇ ಶರಣು ಹೋಗುವವರು ಮಾಯೆಯನ್ನು ದಾಟುತ್ತಾರೆ.

3. ಜ್ಞಾನೇಚ್ಛೆ, ಭಕ್ತಿ, ವೈರಾಗ್ಯಗಳು ಧರ್ಮದ ಹೆಗ್ಗುರುತುಗಳು.

4. ಆಧ್ಯಾತ್ಮಿಕವಾದ ಭಾವನಾಮಯವಾದ ಪ್ರಪಂಚದ ನಿಯಮಗಳನ್ನು ಅರಿತು ಆಧ್ಯಾತ್ಮಿಕ ಜೀವನದಲ್ಲೇ ನಿಲ್ಲುವುದಾದರೆ ಪ್ರಪಂಚವು ಸುಖಪ್ರದವಾಗುವುದು.

5. ಹಿಂದಿನ ಕಾಲದಲ್ಲಿ ಮಾಡಿದ ಉತ್ತಮಕಾರ್ಯ, ಕೆಟ್ಟಕರ್ಮಗಳನ್ನು ಮನಸ್ಸಿಗೆ ಹತ್ತಿಸಿಕೊಳ್ಳದೆ, ಮತ್ತೊಬ್ಬರ ಅಪಕಾರಗಳನ್ನು ನೆನೆಯದೆ, ಮುಂದಿನ ಕಾಲದ ನಿರೀಕ್ಷೆಯಲ್ಲಿರಬೇಡಿರಿ. ಇಂದಿನ ದಿನವೇ ಶುಭದಿನವು. ಈಗಲೇ ಭಗವಂತನನ್ನು ಶರಣುಹೋಗುವೆನು ಎಂಬ ಸತ್ಸಂಕಲ್ಪವನ್ನು ಮಾಡಿರಿ.

6. ಭಗವಂತನು ನನ್ನ ಹೃದಯದಲ್ಲಿಯೇ ಇದಾನೆ, ಅವನಿಗೆ ಶರಣಾಗಿರಿ. ನಮ್ಮೆಲ್ಲರ ಸುಖಶಾಂತಿಗಳಿಗೆ ಮೂಲವು ಆತನೇ, ಆತನೇ ನಮಗೆ ಶಾಶ್ವತಸ್ಥಾನವು.

7. 'ನಾನು'ವನ್ನು ಕಿತ್ತು ಹಾಕಿ, ಭಗವಂತನ ಸನ್ನಿಧಿಯ ಭಾವವನ್ನು ಬಲಪಡಿಸುವುದೆಲ್ಲವೂ ಭಗವತ್ಪ್ರಾಪ್ತಿಗೆ ಸಾಧನವು, ಸಾಧನೆಗಳಲ್ಲೆಲ್ಲ ಸತ್ಸಂಗವು ಸರ್ವಶ್ರೇಷ್ಠ.

8. ನಮ್ಮಗಳ ಹೃದಯದಲ್ಲಿರುವ ಭಗವಂತನ ಬಲವೇ ಗುಪ್ತ ಶಕ್ತಿಯು. ಸಹಾಯಕ್ಕೆ ಬರುವ ಪಾಶುಪತಾಸ್ತ್ರವಿದು.

9. ಅಂಜದಿರಿ, ನೀವೆಲ್ಲರೂ ಆನಂದದ ಉಕ್ಕಂದವಾಗಿರುವ ಪರಮಾತ್ಮನಿಂದಲೇ ಹರಿದುಬರುತ್ತಿರುವ ಝರಿಗಳು; ಆನಂದಮೂಲದಲ್ಲಿ ಚಿತ್ತವನ್ನು ಇಡಿರಿ, ಕೂಡಲೆ ನಿಮ್ಮ ದುಃಖಗಳು ಮಾಯವಾಗುವವು.

10. ಒಳಗಿರುವ ಪರಮಾರ್ಥವಾದ ಆನಂದವನ್ನು ಪಡೆಯುವುದಕ್ಕೆ ನಿಮ್ಮ ಆತ್ಮದ ಕಡೆಗೇ ತಿರುಗಬೇಕು.

11. ಒಬ್ಬನೇ ಪರಮಾತ್ಮನು ನಮ್ಮೆಲ್ಲರಿಗೂ (ಜನರು, ಪ್ರಾಣಿಗಳು...) ಆತ್ಮನು. ಅವನು ಸಚ್ಚಿದಾನಂದಾತ್ಮಕನು, ಅವನಲ್ಲಿ ಸಂಸಾರದ ಯಾವ ದುಃಖವೂ ಇಲ್ಲ.

12. ನಮ್ಮಲ್ಲಿರುವ ಸ್ವಲ್ಪವನ್ನೇ ಪರಮೇಶ್ವರನಿಗೆ ಅರ್ಪಣೆ ಮಾಡುವುದನ್ನು ಆಚರಣೆಗೆ ತರಬೇಕು. ಇದ್ದಷ್ಟು ತಿಳಿವಳಿಕೆಯನ್ನೂ, ಶಕ್ತಿಯನ್ನೂ, ಸಾಮಗ್ರಿಗಳನ್ನೂ ಈಶ್ವರನಿಗೆ ಅರ್ಪಿಸಿದರೆ, ಅವೆಲ್ಲವೂ ಅನಂತವಾಗುವುದು.

13. ಮನುಷ್ಯರು ಧರ್ಮಪ್ರಧಾನರಾಗಿರುವವರೆಗೆ ಸಮಾಜವೂ ಧರ್ಮದ ಆಧಾರದ ಮೇಲೆಯೇ ರಚಿತವಾಗಿರುತ್ತದೆ. ಅಂಥ ಸಮಾಜದಲ್ಲಿ ಸಹಜವಾಗಿ ಈಶ್ವರಭಕ್ತಿ, ಪಾಪಭೀತಿ, ಗುರುಹಿರಿಯರ ವಚನದಲ್ಲಿ ಶ್ರದ್ಧೆ-ಇವುಗಳೆಲ್ಲ ಜನರಲ್ಲಿ ನೆಲಸಿರುತ್ತವೆ. ಧರ್ಮಬುದ್ಧಿಯೂ, ಜ್ಞಾನಭಕ್ತಿವೈರಾಗ್ಯಗಳೂ ಎಲ್ಲಿ ಕಂಡರೆ, ಅಲ್ಲಿ ಗೌರವವನ್ನು ಕೊಡಬೇಕು. ಜನರನ್ನು ಕಲ್ಯಾಣಮಾರ್ಗಕ್ಕೆ ಒಯ್ಯುವ ಸಾಧುಸಂತರನ್ನು ಆದರದಿಂದ ಸೇವಿಸಬೇಕು.

14. ಸತ್ಯಸ್ವರೂಪನೂ ಜ್ಞಾನಸ್ವರೂಪನೂ ಅನಂತನೂ ಆದ ಪರಮಾತ್ಮನನ್ನು ತನ್ನ ಹೃದಯ ಗುಹೆಯಲ್ಲೇ ಅತ್ಯಂತ ಪವಿತ್ರವಾದ ಆಕಾಶಸ್ವರೂಪನೆಂದು ಕಂಡುಕೊಳ್ಳುವವನಿಗೆ ಸಕಲ ಕಾಮಗಳೂ ಕೈವಶವಾಗುವವು- "ಎಲ್ಲರನ್ನೂ ಪ್ರೇಮದಿಂದ ಕಾಣುವೆನು, ಯಾರನ್ನೂ ಅನಾದರದಿಂದ ಕಾಣುವುದಿಲ್ಲ, ಕಷ್ಟದಲ್ಲಿರುವ ಅಥವಾ ನನ್ನ ಸಹಾಯವು ಅವಶ್ಯವೆಂದು ತೋರುವ ಎಲ್ಲರಿಗೂ ನನ್ನ ಕೈಯಲ್ಲಾದ ಸೇವೆಯನ್ನು ಸಲ್ಲಿಸುವೆನು, ಅನಂತದೇವನೆ, ನಿನ್ನ ಅನುಗ್ರಹವು ನನ್ನ ಮೇಲೆ ಇರಲಿ, ನನ್ನಿಂದ ನಿನ್ನ ಸೇವೆಯನ್ನು ಮಾಡಿಸಿಕೊ" ಎಂದು ಮನಃಪೂರ್ವಕವಾಗಿ ಪ್ರಾರ್ಥಿಸಿಕೊಳ್ಳಿರಿ.

15. ಮನನವೆಂದರೆ ಅನುಭವಕ್ಕೆ ತಂದುಕೊಳ್ಳುವುದು. ಪರಮಾರ್ಥತತ್ತ್ವವನ್ನು ತಂದುಕೊಳ್ಳುವುದಕ್ಕೆ ಪ್ರೇಮಭಾವನೆ ಎಂಬ ಮತ್ತೊಂದು ಸಾಧನವು ಬೇಕಾಗುತ್ತದೆ.

16. ಪರಮಾತ್ಮನಲ್ಲಿ ಒಂದಾಗಿರುವೆವೆಂಬ ಅರಿವು ಬಂದರೆ ನಾವು ಯಾರೊಬ್ಬರನ್ನೂ ಹಿಂಸಿಸುವುದಕ್ಕೆ ಒಪ್ಪುವುದಿಲ್ಲ.

17. ಸರ್ವಭೂತಗಳಲ್ಲಿಯೂ ಅಂತರಾತ್ಮನೊಬ್ಬನು ಇದ್ದಾನೆ. ಪರಮಾತ್ಮನನ್ನು ಕಂಡುಕೊಳ್ಳುವುದಕ್ಕಿಂತ ಉತ್ತಮ ಧರ್ಮವಿಲ್ಲ.

18. ಅನಂತವಾದ ಸಮತೆಯ ಆನಂದವು ನಮ್ಮೆಲ್ಲರ ಜನ್ಮಸಿದ್ಧ ಹಕ್ಕು, ಅದನ್ನು ಅಂತಃಕರಣ ಶುದ್ಧಿಯಿಂದಲೇ ಸಂಪಾದಿಸಿಕೊಳ್ಳಬೇಕು.

19. ಅರುಣೋದಯವಾಗುತ್ತಲೂ ಕತ್ತಲುಹರಿಯುತ್ತ ಬರುವಂತೆ, ಭಗವಂತನ ಕಡೆಗೆ ತಿರುಗಿದ ಮಾತ್ರದಿಂದಲೇ ನಮ್ಮ ಬುದ್ಧಿಯ ಮಂಕು ಹರಿಯುವುದು.

20. ಹಿಮಗಾಲದಲ್ಲಿ ಹುಲ್ಲಿನಮೇಲೆ ಬಿದ್ದಿರುವ ನೀರಿನ ತೊಟ್ಟುಗಳಲ್ಲಿ ಒಂದೊಂದು ಸೂರ್ಯನ ಭಾವಚಿತ್ರವು ಪೂರ್ಣವಾಗಿ ಮೂಡಿಕೊಂಡಿರುವಂತೆ, ಸೂರ್ಯನ ಕಿರಣಗಳಂತೆ ಪ್ರತಿಬಿಂಬ ಸೂರ್ಯಕಿರಣಗಳು ಸುತ್ತಲೂ ಪಸರಿಸಿಕೊಂಡಿರುವಂತೆ, ಬೇರೆಬೇರೆಯ ಸನಾಮರೂಪಗಳ ಆಕಾರ ವಿಶೇಷವಾದ ಶರೀರಗಳಿಂದ ನಾವುಗಳು ಬೇರೆಬೇರೆಯಾಗಿ ಕಾಣುತ್ತಿದ್ದರೂ ನಾವೆಲ್ಲರೂ ಒಬ್ಬನೇ ಒಬ್ಬ ಪರಮಾರ್ಥಸ್ವರೂಪನಾದ ಭಗವಂತನಲ್ಲಿ ಒಂದಾಗಿರುವೆವು.

21. ಹೇಗೆ ಮೂಲವಾಗಿರುವ ಉರಿಯುತ್ತಿರುವ ಕೊಳ್ಳಿಯಲ್ಲಿ ಬಿಸಿ ಬೆಳಕು

ಮುಂತಾದವು ಸ್ವಭಾವದಿಂದಲೇ ಇದ್ದುಕೊಂಡಿರುವವೋ, ಹಾಗೆಯೇ ಕೊಳ್ಳಿಯಿಂದ ಸಿಡಿದು ಬಂದಿರುವ ಕಿಡಿಗಳಲ್ಲೂ ಅದೇ ಸ್ವಭಾವಗಳಿರುತ್ತವೆ. ಅದರಂತೆ ಹೇಗೆ ಪರಮಾತ್ಮನಲ್ಲಿ ಸತ್ಯಜ್ಞಾನಾನಂದ ಸ್ವಭಾವವು ಸ್ವರೂಪದಲ್ಲಿಯೇ ಇದ್ದುಕೊಂಡಿರುತ್ತದೆಯೋ ಹಾಗೆಯೇ ಪ್ರತಿಯೊಬ್ಬ ಜೀವನಲ್ಲಿಯೂ ಈ ಸ್ವಭಾವವು ಇದೆ.

22. ಪರಮಪುರುಷಾರ್ಥಪ್ರಾಪ್ತಿಗೆ, ಪ್ರೀತಿಪೂರ್ವಕವಾಗಿ ಸತತವಾಗಿ ಪರಮಾತ್ಮನಲ್ಲಿಯೇ ಮನಸ್ಸಿಟ್ಟು ಆತನ ಭಜನೆಯಲ್ಲಿ ನಿರತರಾಗಿರುವದೇ ಉಪಾಯವು. ಪರಮಾತ್ಮನ ನೆನಪು ಒಂದು ಸಾರಿಯಾದರೂ ಬರುವುದಕ್ಕೆ, ಅದು ಸ್ವಲ್ಪ ಹೊತ್ತಾದರೂ ಅಂತಃಕರಣದಲ್ಲಿ ನಿಲ್ಲುವುದಕ್ಕೆ ಅಂತಃಕರಣವು ಶುದ್ಧವಾಗಿರಬೇಕಾದದ್ದು ಅತ್ಯವಶ್ಯವು. ಅಂತಃಕರಣವು ನಿರ್ಮಲವಾಗುವುದಕ್ಕೆ ಆಹಾರಶುದ್ಧಿಯು ಉಪಾಯ.

23. ಮನಸ್ಸು ಶುದ್ಧವಾಯಿತೆಂದರೆ ಪರಮೇಶ್ವರನ ಅನುಗ್ರಹದಿಂದ ವೇದರಾಶಿಯೇ ವಶವಾಗಿಬಿಡುವುದು. ತತ್ತ್ವವೆಲ್ಲವೂ ತಿಳಿದುಬಿಡುವದು. ಪರಮೇಶ್ವರನನ್ನು, ನೀವು ಅನನ್ಯಭಕ್ತಿಯಿಂದ, ಮಕ್ಕಳು ತಾಯಿಯನ್ನೇ ಹುಡುಕುವಂತೆ ಅರಸುತ್ತಿರುವದಾದರೆ ನೀವು ಹುಟ್ಟಿರುವ ಮತದಲ್ಲಿಯೇ, ನಿಮ್ಮ ಆಚಾರವಿಚಾರ, ಧರ್ಮಗ್ರಂಥ, ಗುರು, ಮಂತ್ರಗಳ ಮೂಲಕವೇ ಆ ಪರಮಾತ್ಮನು ನಿಮಗೆ ಅನುಗ್ರಹವನ್ನು ಮಾಡುವನು.

24. ಮನುಷ್ಯನಿಗೆ ದಾರಿದ್ರ್ಯ, ಮನೋವ್ಯಥೆ, ಚಾಂಚಲ್ಯ, ಕೋಪತಾಪಗಳು.. ಮುಂತಾದ ಅನೇಕ ದುಃಖಕಾರಣಗಳಿರುತ್ತವೆ. ಇವುಗಳ ಚಿಂತೆಯನ್ನು ಮನಸ್ಸಿಗೆ ಸ್ವಲ್ಪವೂ ಹತ್ತಿಸಿಕೊಳ್ಳದೆ ಆನಂದಧಾಮನಾದ ಆ ಭಗವಂತನನ್ನು ಮಾತ್ರ ಹೃದಯದಲ್ಲಿಟ್ಟುಕೊಳ್ಳುವುದಕ್ಕೆ ಮಾತ್ರ ಯತ್ನಿಸಿದರೆ, ಆ ಕಷ್ಟಗಳು ಕಷ್ಟಗಳಲ್ಲದೆ ಹೋಗುವವು, ಅಷ್ಟೇ ಅಲ್ಲ, ಅವುಗಳೇ ಆನಂದದ ಅರಮನೆಗೆ ಹೋಗುವ ಹೆಬ್ಬಾಗಿಲುಗಳಾಗುವವು.

25. ಭಗವದ್ಗೀತೆಯ ಶ್ಲೋಕಗಳು ಕೇಳಿಬಂದಾಗ ಇಲ್ಲಿಯೇ ಶ್ರೀಕೃಷ್ಣಭಗವಂತನು ನಮ್ಮೆದುರಿಗಿದ್ದು ನಮಗೆ ಬೋಧಿಸುತ್ತಿದ್ದಾನೆಂಬ ಭಾವನೆಯು ಯಾರಿಗಿರುವುದೋ ಅವರಿಗೆ ವೇದಾಧ್ಯಯನದ ನಿಜವಾದ ಪ್ರಯೋಜನವು ಲಭಿಸುವುದು. ಅವರಿಗೆ ಗೀತೆಯ ಉಪದೇಶದಿಂದ ಜೀವನದಲ್ಲಿ ಇಂಪೂ ಸೊಂಪೂ ಕಾಣಿಸುವವು.

ಅಧ್ಯಾತ್ಮಗ್ರಂಥದಲ್ಲಿರುವ ನಿಮಗೆ ಮೆಚ್ಚಾದ ಯಾವದಾದರೂ ಭಾವವೊಂದರ ಸಾರವೆಲ್ಲ ಮನದಟ್ಟಾಗುವಂತೆ ಮತ್ತೆಮತ್ತೆ ನಿಮ್ಮ ಜ್ಞಾನ ಚಕ್ಷುಸ್ಸಿನ ಮುಂದೆ ನಿಲ್ಲಿಸಿಕೊಳ್ಳಿರಿ. ನಿಮ್ಮ ನಡೆನುಡಿಗಳೆಲ್ಲವೂ ಆ ಭಾವನೆಯಿಂದ ಪ್ರೇರಿತವಾಗುವವರೆಗೂ ಭಾವವನ್ನು ಸಂತತವಾಗಿ, ಮತ್ತೊಂದು ವಿಜಾತೀಯವಾದ ಭಾವಕ್ಕೆ ಎಡೆಗೊಡದಂತೆ, ಪ್ರವಾಹವಾಗಿ ಹರಿಸಿಕೊಳ್ಳಿರಿ, ಆಗ್ಗೆ ನಿಮಗೆ ಆ ಭಾವದ ಸಾಕ್ಷಾತ್ಕಾರವಾದಂತೆ ಆಯಿತು.

26. ಅಧ್ಯಾತ್ಮಗ್ರಂಥಗಳನ್ನು ಬಲ್ಲವರ ಉಪದೇಶದಿಂದ ಪಾರಾಯಣ ಮಾಡುವವರಿಗೆ

ಅದರಿಂದ ಕ್ರಮಕ್ರಮವಾಗಿ ಉತ್ತರೋತ್ತರವಾಗಿ ಬೆಲೆಯುಳ್ಳ ತತ್ತ್ವಗಳು ಮನಸ್ಸಿಗೆ ಹೊಳೆಯುವವು; ಅಧ್ಯಾತ್ಮ ಶಕ್ತಿಗಳು ತೋರಿಕೊಳ್ಳುವವು; ಧರ್ಮಮಾರ್ಗದಲ್ಲಿಯೇ ಮುನ್ನಡೆಯುವ ಉತ್ಸಾಹವು ಪುಟಗೊಳ್ಳುವದು, ...ಆದರ್ಶ ಜೀವನವನ್ನು ನಡೆಯಿಸುವ ಸುಯೋಗವು ಲಭಿಸುವದು, ಎಲ್ಲಕ್ಕೂ ಮೇಲಾಗಿ ವಿದ್ಯೆಗಳಲ್ಲೆಲ್ಲ ಶ್ರೇಷ್ಠವಾದ ಅಧ್ಯಾತ್ಮವಿದ್ಯೆಯ ಮರ್ಮವು ಮನದಟ್ಟಾಗಿ ಜಗತ್ತಿಗೆಲ್ಲ ಆತ್ಮನಾಗಿರುವ ಶ್ರೀಮನ್ನಾರಾಯಣನಲ್ಲಿಯೇ ನೆಲೆನಿಲ್ಲುವ ಮಹಾಸಿದ್ಧಿಯು ತಾನೇ ಅಳವಡುವದು. ಇದೇ ಪಾರಾಯಣದ ಪರಮ ಫಲವು.

27. ಗೀತೆ, ರಾಮಾಯಣ,...ಇವುಗಳನ್ನು ಕ್ರಮವರಿತು ಓದಿ, ವ್ಯವಹಾರವನ್ನು ಅದರಂತೆ ಮಾರ್ಪಡಿಸಿಕೊಳ್ಳುವ ಪ್ರಯತ್ನಿಸಬೇಕು. ಅಲ್ಲಿ ಹೇಳಿರುವ ಕರ್ಮಗಳನ್ನು ಸ್ವಾರ್ಥಬುದ್ಧಿಯಿಲ್ಲದೆ ಈಶ್ವರನ ಆರಾಧನೆ ಎಂಬ ಭಾವದಿಂದ ಮಾಡಿದಾಗ, ಗ್ರಂಥಗಳ ಪಠಣದ ಪರಮಫಲವು ದೊರಕಿದಂತಾಯಿತು.

28. ಶಾಸ್ತ್ರವಚನಗಳನ್ನು ಪಠನ ಮಾಡುತ್ತಾ ಬಂದಂತೆ, ಬಲ್ಲವರ ಬೋಧೆಯನ್ನು ಶ್ರವಣ ಮಾಡಿದಂತೆಲ್ಲ ಅಧ್ಯಾತ್ಮ ವಿಚಾರದ ಹಸಿವು ಹೆಚ್ಚಿ, ಕರ್ಮಫಲದ ಹಂಬಲವನ್ನು ತೊರೆದು ಬಿಡುತ್ತಾರೆ. ಪ್ರಾಕೃತ ಜನರ ಸಂಗವನ್ನು ಬಯಸದೆ, ಕೇವಲ ಲೌಕಿಕ ವಿಷಯಗಳ ಮಾತು ಮನಸ್ಸಿಗೆ ಬೇಕಾಗದವರು ಅಧ್ಯಾತ್ಮ ವಿಚಾರಕ್ಕೆ ಮುಖ್ಯಾಧಿಕಾರಿಗಳು, ಆತ್ಮಪರೀಕ್ಷೆಯೇ ಅಧ್ಯಾತ್ಮ ಮಾರ್ಗಕ್ಕೆ ಮೊದಲ ಹೆಜ್ಜೆ. ನಿಷ್ಕಾಮಕರ್ಮದ ಮರ್ಮವನ್ನರಿತು ಭಗವನ್ನಾಮ ಜಪ, ಧ್ಯಾನ, ಭಗವದ್ವಿಚಾರ ಶ್ರವಣ ಮನನ, ಅಧ್ಯಾತ್ಮಗ್ರಂಥಗಳಲ್ಲಿ ಅಭಿರುಚಿಯನ್ನು ಬೆಳೆಸಿಕೊಂಡು ಲೌಕಿಕ ಶಾಸ್ತ್ರೀಯ ಕರ್ಮಗಳನ್ನು ಈಶ್ವರಾರಾಧನೆಯೆಂದು ಆಚರಿಸುವದು ಮಹಾತಪಸ್ಸೇ ಸರಿ.

29. ಅಧ್ಯಾತ್ಮಭಾವನೆಯ ಕಿಡಿಯಿರುವ ಕೆಲವರು ತಕ್ಕಷ್ಟು ಮಟ್ಟಿಗೆ ಅಧ್ಯಾತ್ಮ ಗ್ರಂಥಗಳನ್ನು ಓದುವರು, ಆಹ್ನಿಕ, ಜಪ, ಪೂಜೆ, ಅರ್ಥಾನುಸಂಧಾನಪೂರ್ವಕ ಪಾರಾಯಣಗಳನ್ನು ಮಾಡಿ ಅಷ್ಟಕ್ಕೇ ತೃಪ್ತರಾಗಿರುವರು, ಇವರು ಅರ್ಧ ಬೆಳೆದ ಅಧ್ಯಾತ್ಮವಿದ್ಯಾರಸಿಕರು. ಅವರ ಸಾಧನ ವಿಚಾರಪರಿಪೂರ್ಣತೆಗೆ ಭಗವದ್ಭಕ್ತರ ಸಹವಾಸ ಮುಖ್ಯವಾಗಿ ಬೇಕು. ಸಾಧು ಸತ್ಪುರುಷಸಂತರು ಸದ್ರೂಪನಾದ ಪರಮಾತ್ಮನಲ್ಲಿ ನಿತ್ಯನಿಷ್ಠೆಯನ್ನು ಪಡೆದವರು. ಅವರ ಸಂಗವೇ ನಮಗೆ ಉಪದೇಶವು. ಪರಿಶುದ್ಧವಾದ ಅಂತಃಕರಣವುಳ್ಳ ಅವರ ಚಿತ್ತದಲ್ಲಿ ಏಳುವ ಸಂಕಲ್ಪಗಳು ಭಗವಂತನ ಸಂಕಲ್ಪಗಳೇ ! ಅಂತಹವರ ಸಂಗದಿಂದ ಸುಪ್ತವಾಗಿರುವ ಅಧ್ಯಾತ್ಮಶಕ್ತಿಗಳು ಉದ್ಬುದ್ಧವಾಗುವವು. ಸಚೇತನವಾಗುವವು, ಉಜ್ಜ್ವಲವಾಗುವವು, ಸಫಲಗಳು ಪರಿಣಮಿಸುವವು.

30. ಸಹನಶೀಲರು, ದಯಾಲುಗಳು, ಎಲ್ಲರಿಗೂ ಹಿತವನ್ನೇ ಮಾಡುತ್ತಿರುವರು, ಯಾರೊಬ್ಬರಲ್ಲಿಯೂ ವೈರವಿಲ್ಲದವರು, ಶಾಂತರು, ಸರಲಸ್ವಭಾವಿಗಳು, ಅನನ್ಯಭಾವದಿಂದ ಭಗವಂತನಲ್ಲಿ ಸದೃಢ ಪ್ರೇಮವುಳ್ಳವರು. ಅವನಲ್ಲೇ ಚಿತ್ತವಿಟ್ಟ ಮಹಾಪುರುಷರೇ ಸಾಧುಗಳು. ಇಂದ್ರಿಯ ಸುಖದಲ್ಲಿ ವೈರಾಗ್ಯ, ಸುಲಭಮಾರ್ಗದಿಂದ ಮನೋನಿಗ್ರಹಗಳನ್ನು ಪಡೆದು

ಭಗವಂತನಲ್ಲಿ ಕ್ರಮಕ್ರಮವಾಗಿ ಶ್ರದ್ಧೆ, ರತಿ, ಭಕ್ತಿ-ಗಳನ್ನು ಸಂಪಾದಿಸಿ ಮೋಕ್ಷಮಾರ್ಗವನ್ನು ಅರಿಯುವುದೇ ಮಹಾಪುರುಷರಿಂದ ಪಡೆಯುವ ವರ. ಅನಾಯಾಸವಾಗಿ ಭಗವಂತನಲ್ಲಿ ಭಕ್ತಿಯು ದೃಢವಾಗಿ ನಿಲ್ಲುವುದೇ ಸತ್ಸಂಗದ ಪರಮ ಫಲವು.

31. ಅಧ್ಯಾತ್ಮಮಾರ್ಗವು ಬಹುದೀರ್ಘವಾದದ್ದು. ಸಾಧುಸಂಗದಿಂದ ಶಾಂತ್ಯಾದಿಗಳನ್ನು-ಶಾಂತಿ, ದಾಂತಿ, ಉಪರತಿ, ತಿತಿಕ್ಷೆ, ಶ್ರದ್ಧೆ, ಸಮಾಧಾನ ಪರಿಚಯಿಸಿಕೊಂಡು ಉತ್ತಮ ಬುದ್ಧಿಯೂ ಮನಸ್ಸೂ ದೊರಕಿಸಿಕೊಂಡವರಿಗೆ ಅಧ್ಯಾತ್ಮ ಪ್ರಯಾಣವು ಸುಪಥವಾಗಿ ಬೇಗನೆ ದಾರಿಯ ಕೊನೆಯಾದ ವಿಷ್ಣುಪದವು ದೊರಕಿಬಿಡುವುದು.

32. ವೇದೋಕ್ತವಾದ ಕರ್ಮಗಳಿಂದ ಈಶ್ವರಾರಾಧನೆಯನ್ನು ಮಾಡಿ ಚಿತ್ತ ನೈರ್ಮಲ್ಯವನ್ನು ಹೊಂದಿ ಸತ್ಸಂಗದಿಂದ ಭಗವದ್ಭಕ್ತಿ ಶಾಂತ್ಯಾದಿಗಳನ್ನು ಸಂಪಾದಿಸಿ ಕೊಂಡಿರುವವರಿಗೆ ಪರಮಾರ್ಥತತ್ತ್ವದ ಸಾಕ್ಷಾತ್ಕಾರವೇ ಬೇಕಾಗಿರುತ್ತದೆ. ಅವರಿಗೆ ಕರ್ಮಗಳಿಂದ ಸಿಕ್ಕಬಹುದಾದ ಯಾವ ಅಲ್ಪಫಲವೂ ಬೇಕಾಗುವದಿಲ್ಲ-ಪರಮಾರ್ಥ ಚಿಂತನೆ ಯೊಂದಲ್ಲದೆ ಮತ್ತೆ ಯಾವ ಕರ್ತವ್ಯವೂ ಇಲ್ಲದಿರುವವನೇ ನಿಜವಾದ ಸಂನ್ಯಾಸಿಯು.

33. ಪುತ್ರೈಷಣೆ, ವಿತ್ತೈಷಣೆ, ಲೋಕೈಷಣೆಗಳ ತ್ಯಾಗವೇ ಪಾರಿವ್ರಾಜ್ಯವು ಅಥವಾ ಕರ್ಮ ಸಂನ್ಯಾಸವು-ಅಂದರೆ, ಸರ್ವಸ್ವವನ್ನೂ ತ್ಯಾಗಮಾಡಿ ಆತ್ಮಲಾಭಾನ್ವೇಷಣೆ ಮಾಡುವದು, ಇದರಲ್ಲಿ ಎರಡು ಬಗೆ-ಪರಮಾರ್ಥತತ್ತ್ವವನ್ನು ಅರಿತುಕೊಂಡ ಬಳಿಕ ಕರ್ಮಾನುಷ್ಠಾನದಿಂದ ಪ್ರಯೋಜನವಿಲ್ಲೆಂದು ಕರ್ಮತ್ಯಾಗ ಮಾಡುವುದು ವಿದ್ವತ್ಸಂನ್ಯಾಸವು; ಪರಮಾರ್ಥತತ್ತ್ವವನ್ನು ಅರಿಯುವ ಪ್ರಬಲ ಹಂಬಲದಿಂದ ಶಾಸ್ತ್ರೋಕ್ತ ಕರ್ಮಗಳನ್ನೆಲ್ಲ ಬಿಟ್ಟು ಪರಮಾರ್ಥವನ್ನರಿಯುವ ಪ್ರಯತ್ನವು ವಿವಿದಿಷಾಸಂನ್ಯಾಸವು. ಸಾಧ್ಯವೂ ಸಾಧನವೂ ಅಲ್ಲದ ಪರಮಾರ್ಥವನ್ನು ಅರಿಯುವುದೇ ಕರ್ತವ್ಯವೆಂಬ ತತ್ತ್ವವಿಚಾರ ದೃಷ್ಟಿಯಿಂದ ಕರ್ಮದೃಷ್ಟಿಯತ್ಯಾಗವೇ ನಿಜವಾದ ಸಂನ್ಯಾಸವು. ಪರಮಾತ್ಮನ ಚಿಂತನೆಯಲ್ಲಿ ಕಾಲಕಳೆಯುವದೊಂದೇ ಸಂನ್ಯಾಸಿಗೆ ನಿಜವಾದ ಕರ್ಮವೂ.

34. ವೇದದಲ್ಲಿ ಕರ್ಮಕಾಂಡವು ಪ್ರವೃತ್ತಿಧರ್ಮವನ್ನೂ, ಜ್ಞಾನಕಾಂಡವು. ನಿವೃತ್ತಿ ಧರ್ಮವನ್ನೂ ತಿಳಿಸುತ್ತದೆ. ಜ್ಞಾನದಲ್ಲಿ ಉಪಾಸನೆಯು ಧ್ಯಾನರೂಪವಾಗಿರುತ್ತದೆ. ಬ್ರಹ್ಮಲೋಕಫಲಕ್ಕಾಗಿ ಶಾಸ್ತ್ರೋಕ್ತವಾದ ಉಪಾಸನೆಗಳನ್ನು ಮಾಡಲು ಯತ್ಯಾಶ್ರಮ-ಸ್ಮಾರ್ತಸಂನ್ಯಾಸ-ತ್ರಿದಂಡ ಸಂನ್ಯಾಸವನ್ನು (ವಾಕ್ಕಾಯಮನಗಳ ಹತೋಟಿ) ಹೇಳಿದೆ. ಇದು ಕಷ್ಟಸಾಧ್ಯ, ಆದರೆ ಉತ್ತಮಾಧಿಕಾರಿಯಾದವನು ಈ ಜನ್ಮದಲ್ಲಿಯೇ ಪರಮಪುರುಷಾರ್ಥವನ್ನು ಸಾಧಿಸಲು ನಿತ್ಯಾನಿತ್ಯವಿವೇಕ, ಇಹಾಮುಕ್ತಫಲಭೋಗವಿರಾಗ, ಶಮದಮಾದಿ ಸಾಧನ ಸಂಪತ್ತು, ಮುಮುಕ್ಷುತ್ವಗಳನ್ನು ಎಡೆಬಿಡದೆ ಸಾಧಿಸಬೇಕು. ಇದಕ್ಕಾಗಿಯೇ ಪರಮಹಂಸ ಸಂನ್ಯಾಸವನ್ನು ವಿಧಿಸಿದೆ.

35. ಕರ್ಮಬಂಧನ ಬಿಡುಗಡೆಗಾಗಿ ಪ್ರಯತ್ನಿಸುವರು ಮುಮುಕ್ಷುಗಳು-ಪರಮಾತ್ಮನು ಎಲ್ಲಕ್ಕಿಂತಲೂ ಮಿಗಿಲಾದವನಾದ್ದರಿಂದ ಅವನು 'ಬ್ರಹ್ಮ'-ಬ್ರಹ್ಮವನ್ನು ಪ್ರತಿಪಾದಿಸುವ

ವೇದವೂ ಬ್ರಹ್ಮ. ಭೂರ್ಭುವಃಸುವಃ ಎಂಬ ವ್ಯಾಹೃತಿಗಳು ವೇದದ ಸಾರ. ಓಂಕಾರವು ಅವುಗಳಿಗೆ ಸಾರ. ಇದು ಪರಮಾತ್ಮನಿಗೆ ಅತ್ಯಂತ ಪ್ರಿಯವಾದ ನಾಮ. ಆದ್ದರಿಂದ ಓಂಕಾರವನ್ನು ಎಡೆಬಿಡದೆ ಜಪಿಸುವ ಪರಮಹಂಸರಿಗೆ ಪರಮಾತ್ಮನು ಪ್ರಸನ್ನನಾಗಿ ಅವರಿಗೆ ತತ್ತ್ವದ ಸ್ವರೂಪವು ತಿಳಿಯುವಂತೆ ಅನುಗ್ರಹಿಸುತ್ತಾನೆ.

36. ಓಂಕಾರಜಪವು ಒಂದು ಬಗೆಯ ಕರ್ಮವೆಂದು ಭಾವಿಸಬಾರದು. ಓಂಕಾರವನ್ನು ಪರಬ್ರಹ್ಮದ ಪ್ರತೀಕವಾಗಿ ಅಥವಾ ವಾಚಕವಾಗಿ ನಿರಂತರವೂ ಆದರ ಸತ್ಕಾರಪೂರ್ವಕವಾಗಿ ಉಪಾಸನೆಮಾಡುವವರಿಗೆ ಕ್ರಮ ಮುಕ್ತಿಯಾಗುವುದು. ಗೃಹಸ್ಥರೂ ತಮ್ಮ ವರ್ಣಾಶ್ರಮಗಳಿಗೆ ಉಚಿತವಾದ ಕರ್ಮಾಚರಣೆಯಿಂದ, ಪರಮೇಶ್ವರನ ಯಾವದಾದರೊಂದು ನಾಮವನ್ನು ಸರಹಸ್ಯವಾಗಿ ಗುರುಗಳಿಂದ ಉಪದೇಶ ಪಡೆದು ಎಡೆಬಿಡದೆ ಜಪಿಸಿ ಕೃತಕೃತ್ಯರಾಗಬೇಕು. ಉಪನಿಷತ್ತುಗಳ ಪರಮ ತಾತ್ಪರ್ಯವನ್ನು ತಿಳಿಸುವ 'ತತ್ತ್ವಮಸಿ', 'ಅಹಂ ಬ್ರಹ್ಮಾಸ್ಮಿ' ಮುಂತಾದ ಮಹಾವಾಕ್ಯಗಳು ಬ್ರಹ್ಮಾತ್ಮೈಕ್ಯವನ್ನು ತಿಳಿಸುತ್ತವೆ. ಆದರೆ ಈ ವಾಕ್ಯಗಳಿಗೆ ಯಾವ ಕರ್ಮ-ಉಪಾಸನೆಗಾಗಲೀ ಅಂಗವಾಗಿರುವ ವಸ್ತುವನ್ನು ಹೇಳುವದಿಲ್ಲ. ಅಮೃತತ್ತ್ವವನ್ನು ಎಂದಿಗೂ ನಾಶವಿಲ್ಲದ ಪರಮಾತ್ಮನ ತತ್ತ್ವವನ್ನು ಅರಿತು ಸದ್ಯೋಮುಕ್ತಿಯನ್ನು ಬಯಸುವವರು ಪರಮಾತ್ಮನ ವಿಷಯವಾದ ಶ್ರವಣಮನನ ನಿದಿಧ್ಯಾಸನಗಳನ್ನು ಮಾಡಬೇಕು.

37. ನಮ್ಮೆಲ್ಲರ ಹೃದಯ ಗುಹೆಯಲ್ಲಿಯೇ ಪರಮಾತ್ಮನು ಇರುತ್ತಾನೆ. ಅವನು ಪರಮಾರ್ಥಸತ್ಯಸ್ವರೂಪನು. ದೇಶಕಾಲಗಳಿಂದ ಮಾರ್ಪಡುವನಲ್ಲ. ನಿತ್ಯ ಚೈತನ್ಯಸ್ವರೂಪನು. ಅವನನ್ನು ಕಾಣುವುದಕ್ಕೆ ಮತ್ತೊಂದು ಸಾಧನದ ಬೆಳಕು ಬೇಕಿಲ್ಲ. ಅವನು ಅನಂತನು. ವೇದಾಂತ ಇತಿಹಾಸ ಪುರಾಣಗಳು ತಿಳಿಸುವ ಶಾಶ್ವತತತ್ತ್ವವನ್ನು ಸರಿಯಾಗಿ ಅರಿತ ವಿವೇಕಿಗಳು ಇಂದ್ರಿಯ ಆಟದ ಬಯಲಿನಿಂದ ಹಿಂದಿರುಗುವುದೇ ವೈರಾಗ್ಯವು. ನಿಜವಾಗಿ ವೈರಾಗ್ಯ ಬಂದ ಧೀರರೇ ವೇದಾಂತ ಶ್ರವಣಕ್ಕೆ ಅಧಿಕಾರಿಗಳು. ವಾಕ್ಯದ ಅರ್ಥವನ್ನು ಮನಗೊಟ್ಟು ವಿಚಾರಮಾಡುವದೇ ಮನನ. ಬ್ರಹ್ಮಾತ್ಮ ತತ್ತ್ವವನ್ನು ಬಯಸುವರು ಅನುಭವಿ ಆಚಾರ್ಯರಿಂದ ಶ್ರವಣಮಾಡಿ, ಗ್ರಹಣಮಾಡುವ ಯೋಗ್ಯತೆ ಹೊಂದಿ, ತರ್ಕಕ್ಕೆ ವಿರುದ್ಧವಾಗದಂತೆ ಅನುಭವಕ್ಕೆ ಕೂಡಿಸಿಕೊಂಡರೆ ಅಜ್ಞಾನ ಕಳೆದು ಪರಮಾರ್ಥತತ್ತ್ವದ ಅನುಭವವಾಗುವದು.

38. ಪರಮಾರ್ಥತತ್ತ್ವವು ಈ ಬ್ರಹ್ಮಾಂಡದಲ್ಲಿರುವ ಪ್ರಾಣಿಗಳಿಗೆಲ್ಲ ಆತ್ಮಭೂತ ವಾಗಿರುತ್ತದೆ, ಅವನು ಇಡಿಯ ಜಗತ್ತನ್ನೆಲ್ಲ ಈಗಲೂ ವ್ಯಾಪಿಸಿಕೊಂಡಿರುತ್ತಾನೆ. ಆತನು ನಮ್ಮ ಹೃದಯದಲ್ಲೇ ನೆಲಸಿರುವ ನಮ್ಮ ಆತ್ಮನೇ ಆಗಿರುತ್ತಾನೆ ಎಂದು ಪ್ರತಿಪಾದಿಸಿ ತಿಳಿಸಿಕೊಟ್ಟಿರುವುದು ಉಪನಿಷತ್ತುಗಳಲ್ಲಿ ಮಾತ್ರವೇ ಆಗಿರುತ್ತದೆ. ಅದರಿಂದ ನಾವು ವೇದಾಂತವಾಕ್ಯಗಳನ್ನು ಆಗಾಗ್ಗೆ ಶ್ರವಣಮಾಡುವದು ನಮಗೂ ಪರಮೇಶ್ವರನಿಗೂ ಇರುವ ನಿಕಟ ಸಂಬಂಧವನ್ನು ಮತ್ತೆಮತ್ತೆ ನೆನಪಿಗೆ ಕೊಡುತ್ತವೆ. ವ್ಯವಹಾರದ ಸುದ್ದಿಗಳನ್ನು

ಕೇಳಿಕೇಳಿ ಅಂತಃಕರಣವನ್ನು ಹೊಲೆಗೆಡಿಸಿಕೊಂಡು ಶೋಕಮೋಹಗಳಿಂದ ವ್ಯಥೆಪಡುತ್ತಿರುವರಿಗೆ ಈ ದಿವಸ ಸಂದೇಶಗಳು ಕಿವಿಗೆ ಇಂಪನ್ನೂ ಹೃದಯಕ್ಕೆ ತಂಪನ್ನೂ ತಂದುಕೊಟ್ಟು ಸುಖಸಮಾಧಾನಗಳಲ್ಲಿ ಅದ್ದುತ್ತಿರುತ್ತವೆ. ತನಗೆ ನಿಃಶ್ರೇಯಸವೇ ಆಗಬೇಕೆಂದು ಬಯಸುವವರು ಅನುಭವ ಪ್ರಧಾನವಾಗಿರುವ ವೇದಾಂತವಾಕ್ಯಗಳನ್ನೇ ಮತ್ತೆಮತ್ತೆ ಶ್ರವಣ ಮಾಡಬೇಕು. ಅವುಗಳಲ್ಲಿ ಪ್ರತಿಪಾದಿಸಿರುವ ಯುಕ್ತಿಗಳನ್ನೇ ಹಿಡಿದು ಸತ್ತರ್ಕದಿಂದ ಮನನ ಮಾಡಬೇಕು. ಆಗ ಎಲ್ಲ ಸಂಶಯಗಳೂ ಕತ್ತರಿಸಿ ಹೋಗುವವು. ಮನಸ್ಸಿನಲ್ಲಿ ಶಾಂತಿ ಸಮಾಧಾನಗಳು ನೆಲಸುವವು. ಇದೇ ನಮಗೆ ದೊರಕಬಹುದಾದ ಪರಮಪುರುಷಾರ್ಥವು.

39. ವೇದಾಂತಾರ್ಥವು ಮನದಟ್ಟಾಗುವುದಕ್ಕೆ ನಮ್ಮ ಮನಸ್ಸಿನ ದೃಷ್ಟಿಕೋನವು ಮಾರ್ಪಡುವುದು ಅವಶ್ಯ. ಸ್ವಾರ್ಥತೆಯಿಂದಲೇ ಮನುಷ್ಯನು ಧರ್ಮಾಧರ್ಮಗಳನ್ನು ಮಾಡುತ್ತಲೂ, ಇಷ್ಟಾನಿಷ್ಟಫಲಗಳನ್ನು ಅನುಭವಿಸುತ್ತಲೂ ಇರುವನು. ಇದೇ **'ಸಂಸಾರ'**. ಇದನ್ನು ತಪ್ಪಿಸಿಕೊಳ್ಳುವುದಕ್ಕೆ ದೇಹೇಂದ್ರಿಯಗಳಲ್ಲಿರುವ ನಾನು ನನ್ನದೆಂಬ ಅಭಿಮಾನವನ್ನು ತೊಲಗಿಸಿಕೊಳ್ಳಬೇಕು. ಇದಕ್ಕಾಗಿ ದೇಹದಲ್ಲಿ ನಾನು ಎಂಬ ಬುದ್ಧಿಯನ್ನು ತಪ್ಪಿಸುವ ಪರೋಪಕಾರದ ಕಾರ್ಯಗಳನ್ನು ಮಾಡುವದು, ಪರಮಾತ್ಮನನ್ನು ಅರಿತುಕೊಳ್ಳುವ ಅವಶ್ಯಸಾಧನಗಳನ್ನೂ, ಅಮಾನಿತ್ವ ಅದಂಭಿತ್ವ, ಅಹಿಂಸೆ, ಕ್ಷಾಂತಿ ಮುಂತಾದ ಸದ್ಗುಣಗಳನ್ನು ಅವಲಂಬಿಸುವುದು, ಆಚಾರ್ಯೋಪಾಸನೆ, ಪರಮಾತ್ಮನಲ್ಲಿ ಅವ್ಯಭಿಚಾರಿಣೀ ಭಕ್ತಿ, ಅಧ್ಯಾತ್ಮಜ್ಞಾನ ನಿತ್ಯತ್ವಗಳನ್ನು ಅಭ್ಯಾಸಮಾಡಬೇಕು.

40. ಪರಮಾತ್ಮಲಾಭಕ್ಕಿಂತ ಹೆಚ್ಚಿನ ಲಾಭವು ಯಾವದೊಂದೂ ಇರುವದಿಲ್ಲ ಎಂಬುದು ತೀವ್ರ ಮುಮುಕ್ಷತೆಯಿರುವವರ ಮನೋಭಾವವು. ಯಾವ ಆಶೆಯೂ ಇಲ್ಲದೆ, ಶರೀರೇಂದ್ರಿಯಗಳನ್ನು ಬಿಗಿಹಿಡಿದುಕೊಂಡು, ತನ್ನದೆಂಬುದಿಲ್ಲದ ಯತಿಯು ಬರಿಯ ಶರೀರಸ್ಥಿತಿಗೆ ಮಾತ್ರ ತಕ್ಕಷ್ಟು ಕರ್ಮವನ್ನು ಮಾಡಿದರೆ ಅವನಿಗೆ ಧರ್ಮಾಧರ್ಮಗಳ ಅಂಟಿಲ್ಲ. ಮತ್ತೊಬ್ಬರನ್ನು ಬೇಡದೆ, ಮೊದಲೇ ಗೊತ್ತುಮಾಡಿಕೊಂಡಿರದೆ ತನಗೆ ತಾನೇ ಪ್ರಾಪ್ತವಾದಷ್ಟನ್ನು ಭಿಕ್ಷೆಯಿಂದ ಸಂಪಾದಿಸಿಕೊಳ್ಳಬೇಕು, ಜನರು ಊಟಮಾಡಿಮಿಕ್ಕದ್ದು ಹಾಕಿದರೂ, ಹೀಗೆಯೇ ಅನ್ನವು ಸಿಗಬೇಕು, ಗೌರವವೇ ದೊರೆಯಬೇಕು ಎಂದು ಹವಣಿಸಬಾರದು, ಹೆಚ್ಚು ಭಿಕ್ಷೆಯನ್ನು ಸಂಗ್ರಹಿಸಬಾರದು.

41. ಸಂನ್ಯಾಸಿಗಳೂ ಮುಮುಕ್ಷುಗೃಹಸ್ಥರೂ ಹೊರಗಿನ ನಿಯಮಗಳಿಗಿಂತಲೂ ಮನಸ್ಸಿನಲ್ಲಿ ಮಾಡುವ ಸಾಧನಕ್ಕೆ ಹೆಚ್ಚಿನ ಬೆಲೆಯನ್ನು ಕೊಡಬೇಕು. ಪರಮಾರ್ಥ ಜ್ಞಾನವನ್ನು ಬಯಸುವ ಮುಮುಕ್ಷುಗಳು ಇಚ್ಛಾದ್ವೇಷಗಳಿಗೆ ವಶರಾಗಬಾರದು. ದ್ವಂದ್ವಮೋಹವು ತತ್ತ್ವಜ್ಞಾನಕ್ಕೆ ಭಾರಿ ಅಡಚಣೆಯಾಗಿರುವುದು. ಪಾಪವು ಹೆಚ್ಚಾಗಿರುವ ಅಂತಃಕರಣದಲ್ಲಿ ದ್ವಂದ್ವಮೋಹದ ವಾಸನೆಯು ಪ್ರಬಲವಾಗಿದ್ದು, ಜನ್ಮದಿಂದ ಜನ್ಮಕ್ಕೆ ಹೋದರೂ ತಪ್ಪದು.

42. ವಾಕ್ಕು, ಕಾಮಕ್ರೋಧಗಳು, ಮತ್ತೊಬ್ಬರಿಗೆ ಏನನ್ನಾದರೂ ಮಾಡುವ ಇಚ್ಛೆ, ಹಸಿವು ಬಾಯಾರಿಕೆ, ಜನನೇಂದ್ರಿಯದ ಕಾಮ ಇವುಗಳ ವೇಗವನ್ನು ತಡೆದುಕೊಳ್ಳಬಲ್ಲವನೇ ಬ್ರಾಹ್ಮಣನು, ಅವನೇ ಮುನಿಯು. ರಾಗದ್ವೇಷಗಳ ಸೆಳೆತಕ್ಕೆ ಸಿಕ್ಕದೆ ಸ್ವಾಭಾವಿಕವಾಗಿಯೇ ಹಿತಮಿತವಾಗಿ ಸರ್ವೇಂದ್ರಿಯಗಳನ್ನೂ ಉಪಯೋಗಿಸುವದಕ್ಕೂ ಇವುಗಳಿಂದಾಗುವ ಮತ್ತೊಬ್ಬರ ವ್ಯಾಪಾರದಿಂದ ನಾವೂ ಶಾಂತಿಸಮಾಧಾನಗಳನ್ನು ಕೆಡಿಸಿಕೊಳ್ಳದೆ ಮತ್ತೊಬ್ಬರ ಶಾಂತಿಸಮಾಧಾನಗಳನ್ನೂ ಕೆಡಿಸದೆ ಇರುವದೇ ಮುಮುಕ್ಷುಗಳ ಪರಮ ಕರ್ತವ್ಯ. ಹೊರಗಿನ ವ್ಯಾಪಾರಕ್ಕೆ ನುಡಿಯೇ ಮೊದಲು, ಆದ್ದರಿಂದ ನಾಲಗೆಯಿಂದ ಉತ್ತಮ ವಾಕ್ಯಗಳೇ ಬರುವಂತೆ ಎಚ್ಚರಿಕೆ ವಹಿಸಬೇಕು. ಅಧ್ಯಾತ್ಮಚಿಂತನೆ, ಅಧ್ಯಾತ್ಮ ಸಂಬಂಧ ಮಾತುಗಳು, ಅಧ್ಯಾತ್ಮರತರಾದವರ ಸಂಗದಲ್ಲಿಯೇ ಇದ್ದುಕೊಂಡಿರಬೇಕು. ಅಧ್ಯಾತ್ಮಕ ಗ್ರಂಥ ಪಠಣ, ಪರಮಾತ್ಮನ ನಾಮಗ್ರಹಣ, ನಾಮಕೀರ್ತನ, ಮಂತ್ರಜಪ, ಸಜ್ಜನಸಂಗಗಳು ಅವಶ್ಯಕತೆಗಳು, ಯಾವ ಇಂದ್ರಿಯವೂ ಬಹಿರ್ವಿಷಯವಾಗದೆ ಹಿಂತಿರುಗಿ ಮನಸ್ಸನ್ನು ಪರಮಾತ್ಮನಲ್ಲಿಯೇ ನೆಲೆನಿಲ್ಲುವಂತೆ ಮಾಡಿಕೊಳ್ಳುವ ಪರಮಾರ್ಥ ಮೌನವನ್ನು ಸಂಪಾದಿಸಿಕೊಳ್ಳಬೇಕು.

43. ತನ್ನೊಳಕ್ಕೆ ತಾನು ಇಳಿದು ಪರಿಪೂರ್ಣವಾದ ಏಕತ್ವವನ್ನು ಕಂಡು ಆನಂದಿಸಲು, ನಾವು ನಮ್ಮ ಶರೀರವನ್ನು ಅಲುಗಾಡದಂತೆ ಸ್ಥಿರ ಸುಖಾಸನದಲ್ಲಿಟ್ಟು, ಇಂದ್ರಿಯಗಳು ಹೊರಗೆ ಹರಿಯದಂತೆ, ಮನಸ್ಸು ಅವುಗಳ ಕಡೆ ಓಡದಂತೆ ತಡೆದುಕೊಂಡು, ಶರೀರದ ಬಗೆಬಗೆಯ ವ್ಯಾಪಾರಗಳಿಗೆ ಸಹಾಯಕವಾಗಿರುವ ಪ್ರಾಣವಾಯುವನ್ನು ನಮ್ಮೊಳಗೇ ಬಿಡಿಹಿಡಿದು ನಿಲ್ಲಿಸಿಕೊಂಡು ಬಿಡಬೇಕು.

44. ಪರಮಾತ್ಮನಲ್ಲಿ ಮನಸ್ಸು ಕುಳಿತರೆ ಅದೇ ಏಕಾಂತವಾಸ. ಸಿಕ್ಕಿದಷ್ಟು ವಿವಿಕ್ತವಾಗಿರುವ, ಶುಚಿಯಾದ ಮಟ್ಟಸ ಪ್ರದೇಶದಲ್ಲಿ, ಸುತ್ತಮುತ್ತಲಿನ ದೃಶ್ಯಗಳು ಮನಸ್ಸಿಗೆ ಕೊಡುವ ಚಾಂಚಲ್ಯ, ಅಂಜಿಕೆ, ಅನವಶ್ಯ ಕುತೂಹಲದಂತಹ ಅನಿಷ್ಟ ಭಾವನೆಗಳಿಂದ ದೂರವಿದ್ದು, ಒಂದೇ ಆಸನದಲ್ಲಿ ಕುಳಿತುಕೊಳ್ಳಬೇಕು. ಮನಸ್ಸು ಹರಿದಾಡದಂತೆ ಶಾಂತಿಯನ್ನು ಕಾಪಾಡಿಕೊಂಡು, ಬ್ರಹ್ಮಚರ್ಯೆಯಿಂದ ಇಂದ್ರಿಯಗಳನ್ನು ಸ್ವಾಧೀನಕ್ಕೆ ತಂದುಕೊಂಡು, ಮನಸ್ಸಿನ ವೃತ್ತಿಗಳನ್ನೆಲ್ಲ ಹಿಂದೆಳೆದು ಪರಮಾತ್ಮನಲ್ಲಿಯೇ ಚಿತ್ತವಿಟ್ಟು ಅವನೇ ಎಲ್ಲಕ್ಕಿಂತಲೂ ಪರಗತಿ ಎಂಬ ಭಾವವನ್ನು ಅಳವಡಿಸಿಕೊಂಡರೆ, ಕೊನೆಗೆ ಬ್ರಹ್ಮಾನಂದವನ್ನು ಕೊಡುವ ಪರಮೋಪರತಿಯು ದೊರಕುವದು.

45. ಜ್ಞಾನಿಯಾದವನಿಗೆ "ನನ್ನ ದೇಹೇಂದ್ರಿಯಗಳ ಸಂಘಾತಕ್ಕೆ ಹೇಗೆ ಸರ್ವಸಾಕ್ಷಿಯಾದ ಚೈತನ್ಯವೇ ನಿಜವಾಗಿ ಆತ್ಮನೋ, ಹಾಗೆಯೇ ಪ್ರಪಂಚದಲ್ಲಿರುವ ಸಕಲ ದೇಹೇಂದ್ರಿಯ ಸಂಘಾತಗಳಿಗೂ ಈ ನನ್ನ ಆತ್ಮನೇ ನಿಜವಾದ ಆತ್ಮನು. 'ನಾನು', 'ನಾನು' ಎಂದು ಬೇರೆಯಾಗಿ ಕಾಣುತ್ತಿರುವ ಅಹಂಪ್ರತ್ಯಯ ಗೋಚರರಾದ ವಿಶೇಷರೂಪರಾದ ಆತ್ಮರುಗಳಿಗೆಲ್ಲ ಅವನೇ ಆತ್ಮನು".

46. ಸಾಮಾನ್ಯರಿಗೆ ಪರೋಕ್ಷವಾಗಿರುವ ಆ ಪರಬ್ರಹ್ಮವು ಪೂರ್ಣವು. ಆಕಾಶದಂತೆ

ವ್ಯಾಪಿಯೂ ಕಡಿವಡೆಯದೆ ಇರುವದೂ ಆಗಿರುವ ಅನಂತತತ್ತ್ವವಾಗಿದೆ. ಶ್ರುತಿಯಲ್ಲಿ ಹೇಳಿರುವ ಪರಮಾರ್ಥರೂಪವನ್ನು ಶ್ರವಣಮಾಡಿ, ಗುರೂಪದೇಶವನ್ನನುಸರಿಸಿ ನಮ್ಮ ನಿಜವಾದ ಸ್ವರೂಪವನ್ನು ಮನದಂದುಕೊಂಡು ಇಂದ್ರಿಯಗಳಿಂದಾಗಿರುವ ಪರಿಚ್ಛಿನ್ನ ದೃಷ್ಟಿಯನ್ನು ಬಿಟ್ಟು ನಮ್ಮ ಸ್ವರೂಪವನ್ನು ಏಕಾಗ್ರತೆಯಿಂದ ನೋಡಿಕಂಡುಕೊಂಡಾಗ ನಾವು ಎಂದೆಂದಿಗೂ ಪೂರ್ಣರೇ. ಇದೇ ಸರ್ವಾತ್ಮಭಾವ.

47. ಜೀವರುಗಳೆಲ್ಲರೂ ನಿಜವಾಗಿ ಬ್ರಹ್ಮವೇ ಆಗಿರುತ್ತಾರೆಂಬುದು ಶಾಸ್ತ್ರ ದೃಷ್ಟಿಯಿಂದ. ಆದರೆ ಶ್ರವಣಮನನನಿದಿಧ್ಯಾಸನಗಳಿಂದ ನಾನು ನಿತ್ಯಶುದ್ಧಬುದ್ಧಮುಕ್ತಸ್ವರೂಪನಾದ ಬ್ರಹ್ಮಾತ್ಮನೇ ಎಂಬ ನಿಶ್ಚಯವನ್ನು ಪಡೆದುಕೊಂಡ ಜ್ಞಾನಿಯು ಈ ಅನುಭವದ ಆಧಾರದಿಂದ ವಿಶೇಷಾರ್ಥದಲ್ಲಿ ಬ್ರಹ್ಮವಾಗಿರುತ್ತಾನೆ. ಅವನು ಮತ್ತೆ ಬ್ರಹ್ಮದಲ್ಲಿ ಸೇರಬೇಕಾದದ್ದೇನೂ ಇರುವದಿಲ್ಲ.

48. ಅಧ್ಯಾತ್ಮ ಸಾಧನದಲ್ಲಿರುವ ಒಂದು ಮುಖ್ಯವಾದ ಗುಟ್ಟೆಂದರೆ ಭಗವದ್ಭಕ್ತಿ. ನಾವು ಎಷ್ಟೇ ಪ್ರಯತ್ನಪಟ್ಟು ಸಾಧನವನ್ನು ಮಾಡಿದರೂ ಭಗವಂತನ ಕೃಪೆಯಿಂದಲೇ ಸಾಧನವು ಸಫಲವಾಗಬೇಕಾಗಿದೆ. ಎಡೆಬಿಡದೆ ಅಧ್ಯಾತ್ಮಸಾಧನವನ್ನು ಮಾಡುತ್ತಿರುವ ಸಾಧಕನ ಅಂತಃಕರಣವು ಭಗವಂತನ ಅನುಗ್ರಹದಿಂದ ಪರಿಶುದ್ಧವಾಗುವುದು.

-- X --

**4. ವೇದಾಂತ ಸಂದೇಶಗಳು : ಸಂಪುಟ 3 (ಅಧ್ಯಾತ್ಮ ಬೆಳಕು ) :**

1923ರಿಂದ 1974ರವರೆಗೂ ಕೆಲವೊಮ್ಮೆ ಪ್ರತಿತಿಂಗಳೂ ಮತ್ತು ಕೆಲವು ಒಂದೆರಡು ವರ್ಷಗಳ ಅಂತರದಲ್ಲಿ ಬರೆದು ಪ್ರಕಟಿಸಿದ್ದ 210 ಲೇಖನಗಳ ಸಂಗ್ರಹ. ಸ್ಥೂಲವಾಗಿ (1) ಅಧ್ಯಾತ್ಮವಿದ್ಯೆ (2) ಅಧಾತ್ಮದ ಮೊದಲ ಸೋಪಾನ (3) ಅಧ್ಯಾತ್ಮ ಸಾಧನಗಳು (4) ಅಧಾತ್ಯತ್ಮ ಪ್ರಕಾಶ (5) ಅಧ್ಯಾತ್ಮ ಚಿಂತನೆ ಮತ್ತು (6) ಅಧ್ಯಾತ್ಮ ಜ್ಞಾನ ಎಂಬ ಆರು ಅಧ್ಯಾಯಗಳಲ್ಲಿ ಲೇಖನಗಳನ್ನು ಅಳವಡಿಸಿದೆ. ವೇದಾಂತ ಆರಂಭದಲ್ಲಿರುವವರಿಗೂ ಮತ್ತು ಜಿಜ್ಞಾಸುಗಳಿಗೂ ಉಪಯುಕ್ತವಾದ ಗ್ರಂಥ.

**(1ನೆಯ ಮು. 2010, ಪು. ಡೆಮ್ಮಿ 356 , ಬೆಲೆ 60 ರೂ. )**

**5. ವೇದಾಂತ ಸಂದೇಶಗಳು : ಸಂಪುಟ 4 (ಅಧ್ಯಾತ್ಮ ಔನ್ನತ್ಯದೆಡೆಗೆ ) :** 19, 20 22, 23 ಸಂಪುಟಗಳಲ್ಲಿ "ಈ ತಿಂಗಳ ಸಂದೇಶಗಳು" ಎಂಬ ಶೀರ್ಷಿಕೆಯಲ್ಲಿ ಕ್ರಮ ಕ್ರಮವಾಗಿ ಪ್ರಕಟಿಸಿದ್ದ 48 ಲೇಖನಗಳ ಸಂಗ್ರಹ. (1) ಮಾಯೆಯಿಂದ ಮಾಯಾತೀತನೆಡೆಗೆ (2) ಸತ್ಯಜ್ಞಾನಾನಂತನ ದರ್ಶನದದಾರಿ (3) ಅಧ್ಯಾತ್ಮ ಪ್ರಗತಿಯ ಮಾರ್ಗಗಳು (4) ಸಾಧನೆಗಳಿಂದ ಪರಮಾತ್ಮನ ಆನಂದ ಎಂಬ ನಾಲ್ಕು ಅಧ್ಯಾಯಗಳಲ್ಲಿ ಲೇಖನಗಳನ್ನು ಅಳವಡಿಸಿದೆ.

**(1ನೆಯ ಮು. 2011, ಪು. ಡೆಮ್ಮಿ 334 ,ಬೆಲೆ 60 ರೂ. )**

**6. ಮುಂದೆ ಬರಲಿರುವ 5ನೆಯ ಸಂಪುಟ : ಸಂಪುಟ 14 (ಜನವರಿ 1943– ಫೆಬ್ರವರಿ 1975) :** ರಿಂದ ಸಂ. 44ರವರೆಗೆ **"ಶಂಕರನ ಪತ್ರಗಳು"** ಎಂಬ ಶೀರ್ಷಿಕೆಯಲ್ಲಿ ಒಂದು ಮತ್ತು 2 ಪುಟಗಳಂತೆ ಜಿಜ್ಞಾಸುಗಳ ಪ್ರಶ್ನೆಗಳಿಗೆ ಉತ್ತರ ರೂಪವಾಗಿ ಬರೆದು ಪ್ರಕಟಿಸಿದ್ದ 337ಲೇಖನಗಳ ಸಂಗ್ರಹ. ಸುಮಾರು 600 ಪುಟಗಳು, 2 ಭಾಗಗಳಲ್ಲಿ ಪ್ರಕಾಶನವಾಗಲಿದೆ. ಬಹಳ ಉತ್ತಮ ಲೇಖನಗಳನ್ನೊಳಗೊಂಡಿರುವ ಉಪಯುಕ್ತವಾದ ಗ್ರಂಥ. ಅಕ್ಷರ ಜೋಡಣೆ ( ಡಿ.ಟಿ.ಪಿ.) ಕೆಲಸ ನಡೆಯುತ್ತಿದೆ.

ಮೇಲ್ಕಂಡ ಪುಸ್ತಕಗಳಲ್ಲದೆ ಇತರ ಪುಸ್ತಕಗಳು ಮತ್ತು ಸಿಡಿಗಳು (DVD-MP3 Formatನಲ್ಲಿ) ರಿಯಾಯಿತಿ ದರದಲ್ಲಿ ದೊರಕುತ್ತವೆ. ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ.

---

**ಅ.ಪ್ರ.ಕಾರ್ಯಾಲಯ**
**ಎ.ಪಿ.ಕೆ. ರಸ್ತೆ ತ್ಯಾಗರಾಜನಗರ 2ನೇ ಬ್ಲಾಕ್**
**ಬೆಂಗಳೂರು 28.**
**ದೂ. 26765548**

**ಅ.ಪ್ರ.ಕಾರ್ಯಾಲಯ**
**ಹೊಳೆನರಸೀಪುರ 573211**
**08175–273820**
**www.adhyatmaprakasha.Org.**

# ಸಂಸ್ಥಾಪಕರ ಸ್ಮರಣೆ

ಶ್ರೀ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳವರ ಜೀವನ ಮತ್ತು ಅವರ ಅಸಾಧಾರಣ ಶ್ರೇಷ್ಠ ಸಾಧನೆಯನ್ನು ಅವಲೋಕಿಸಿದಾಗ, ಅವರ ಜನ್ಮ ಮತ್ತು ಬಾಳು ಎಲ್ಲವೂ ವೇದಾಂತಾಧ್ಯಯನ ಮತ್ತು ವೇದಾಂತ ಪ್ರಸಾರಕ್ಕೆ ಮೀಸಲಾಗಿರಬೇಕೆಂಬುದು ಭಗವಂತನ ಇಚ್ಛೆ ಮತ್ತು ನಿಯಾಮಕವಾಗಿತ್ತೆಂದು ತೋರುತ್ತದೆ. ಇದೇನೂ ಉತ್ಪ್ರೇಕ್ಷೆಯಲ್ಲ, ಏಕೆಂದರೆ ಇನ್ನೂ ಅವರ ವಿದ್ಯಾರ್ಥಿದೆಶೆಯಲ್ಲಿಯೇ ತರಗತಿಯ ಸಂಸ್ಕೃತ ಪಾಠ ಪುಸ್ತಕವನ್ನು ಕೇಳಿದಾಗ ಅಂಗಡಿಯವನು ಕೊಟ್ಟದ್ದು "ಭಗವದ್ಗೀತಾ ಭಾಷ್ಯ" (ಅತ್ಯಂತ ಅನೀರಿಕ್ಷಿತವಾದ ಘಟನೆಯಿಂದ ನನಗೆ ಅರಿವಿಲ್ಲದೆಯೇ ಭಗವದ್ಗೀತಾ ಭಾಷ್ಯದಲ್ಲಿ ಪ್ರವೇಶವಾಯಿತು"- ಶ್ರೀಗಳು), ಮತ್ತೊಮ್ಮೆ ಅಗ್ಗದ ಸಣ್ಣ ಪುಸ್ತಕ ಕೋರಿದಾಗ ಕೈಗೆ ಬಂದದ್ದು "ವಿವೇಕ ಚೂಡಾಮಣಿ", ಸೆಂಟ್ರಲ್ ಕಾಲೇಜಿನ ಎಫ್‌ಎ ತರಗತಿಯಲ್ಲಿದ್ದಾಗ ಶ್ರೀಕೃಷ್ಣಸ್ವಾಮಿ ಅಯ್ಯರ್‌ರವರ ಮನೆಯಲ್ಲಿ ಅವರಿಂದ ಕೆಲವು ವೇದಾಂತ ಪಾಠಗಳು ಹಾಗೂ ಸೂತಸಂಹಿತೆಯನ್ನು ಓದಲು ಅವರ ಪ್ರೋತ್ಸಾಹ,... ಹೀಗೆ ಪ್ರವೃತ್ತಿ, ಉತ್ಸುಕತೆ, ಕ್ರಿಯಾಪ್ರಯತ್ನ ಹರಿದದ್ದೇ ವೇದಾಂತ ಮಾರ್ಗದಲ್ಲಿ.

"ಸಾಮಾನ್ಯವಾಗಿ ಒಬ್ಬ ಮನುಷ್ಯನ ಜೀವಿತದಲ್ಲಿ ಸಂಭವಿಸಬಹುದಾದ ಸಾಧಾರಣ... ಘಟನೆಗಳ ನಡುವೆ ಶ್ರೀ ಸುಬ್ಬರಾಯರು (ಶ್ರೀ ಗಳವರ ಪೂರ್ವಾಶ್ರಮದ ಹೆಸರು) ಸಾಧಿಸಿದ ಅಪೂರ್ವ ಸಿದ್ಧಿಗಳು ತೆರೆದು ನಿಲ್ಲುತ್ತವೆ. ಶ್ರೀ ಶ್ರೀ ಶಿವಾಭಿನವ ನೃಸಿಂಹ ಭಾರತೀ ಸ್ವಾಮಿಗಳಿಂದ ಶ್ರೀ ಶಾಂಕರಭಾಷ್ಯ, ಶಾಂತಿಪಾಠ, ವಿದ್ವದಗ್ರೇಸರರಾದ ಹಾನಗಲ್ಲು ವಿರೂಪಾಕ್ಷ ಶಾಸ್ತ್ರಿಗಳ (ಮಾರ್ಗದರ್ಶನ), ಕೃಷ್ಣಸ್ವಾಮಿ ಅಯ್ಯರ್, ಕುರ್ತುಕೋಟಿ ಮಹಾಭಾಗವತರು, ಹೊಸಕೆರೆ ಚಿದಂಬರಯ್ಯನವರು-ಮುಂತಾದವರ ಸಹವಾಸ ಸುಬ್ಬರಾಯರಿಗೆ ದೇವದತ್ತ ವರಗಳಾಗಿ ಪರಿಣಮಿಸಿದುವು... ಮನುಷ್ಯನಲ್ಲಿ ಪ್ರಬಲವಾದ ಉತ್ಸಾಹವೂ, ಕರ್ತೃತ್ವ ಶಕ್ತಿಯೂ ಇದ್ದಲ್ಲಿ ಆತನು ಯಾವ ಮಟ್ಟಕ್ಕೆ ಏರುತ್ತಾನೆ ಎಂಬುದಕ್ಕೆ ಶ್ರೀಗಳೇ ನಿದರ್ಶನ. ಕನ್ನಡ, ಇಂಗ್ಲೀಷ್, ಸಂಸ್ಕೃತ ಭಾಷೆಗಳಲ್ಲಿ ಅವರು ಗಳಿಸಿದ, ಬಳಸಿದ ಪ್ರೌಢಪಾಂಡಿತ್ಯ, ಶೈಲಿ ವಿಸ್ಮಯಕಾರಿಯಾದದ್ದು. ಶ್ರೀಗಳವರ ಅಧ್ಯಯನ ಆಳ, ಜನೋಪಯೋಗವಾಗಲೆಂಬ ಹೃದಯದ ಕಳಕಳಿ ಗಮನೀಯ. ಆಧ್ಯಾತ್ಮ ಪ್ರಕಾಶ ಪತ್ರಿಕೆಯಲ್ಲಿ ಅವರು ಬರೆಯುತ್ತಿದ್ದ ಲೇಖನಗಳೂ ಗಂಭೀರವಾದವು, ಮತ್ತೆ ಮತ್ತೆ ಓದಬೇಕಾದವು- ಆ ಲೇಖನಗಳನ್ನು ಸಂಗ್ರಹಿಸಿ, ಪ್ರಕಟಿಸಿದರೆ ಜಿಜ್ಞಾಸುಗಳಿಗೆ ಮಹೋಪಕಾರವಾಗುತ್ತದೆ" -ಶ್ರೀ ಎಸ್. ರಂಗನಾಥ ಶರ್ಮ (ಶ್ರೀಗಳವರ ಆತ್ಮಚರಿತ್ರೆಯ 2006 ಮುನ್ನುಡಿಯಲ್ಲಿ). ಪಂಡಿತರಾಗಿದ್ದ ಶ್ರೀ ಲಕ್ಷ್ಮೀ ನರಸಿಂಹಮೂರ್ತಿಯವರು ಸಂಗ್ರಹಿಸಿ ಪ್ರಕಟಿಸಿದ 15, 18 ಗ್ರಂಥಗಳು ಈ ಮೊದಲೇ ಪ್ರಕಟವಾಗಿವೆ. ಅನಂತರದಲ್ಲೂ ಕೆಲವು ಸಂಪುಟಗಳು ಬಂದಿವೆ. "ವೇದಾಂತ ಸಂದೇಶಗಳು" ಎಂಬ ಈ ಕೃತಿ ಶ್ರೇಣಿಯಲ್ಲಿ ಇದುವರೆಗೆ ಮೂರು ಸಂಪುಟಗಳು ಪ್ರಕಟವಾಗಿವೆ. ಇದು ನಾಲ್ಕನೆಯ ಸಂಪುಟ. ಇನ್ನೂ ಕೆಲವು ಸಂಪುಟಗಳು ಹೊರಬರಲಿವೆ.